ಸದಸ್ಯರು ಈ ಬೇಡಿಕೆಗಳ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡತಕ್ಕಂಥದ್ದು ಒಂದೇ ಇವತ್ತು ನಮಗೆ ಇರತಕ್ಕಂಥ ಪರಿಹಾರ. ಅದಕ್ಕೆ ಮಿಗಿಲಾದದು ಏನೂ ಇಲ್ಲ.

ವಿತ್ತೀಯ ಕಾರ್ಯಕಲಾಪಗಳು

೧೯೯೦-೯೧ನೇ ಸಾಲಿನ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ
(ಬೇಡಿಕೆಗಳ ಸಂಖ್ಯೆ ೨೯, ೫೭, ೫೮, ೪, ೨೪, ೧, ೨, ೩, ೨೭, ೨೮, ೩೯, ೪೦, ೪೧, ೪೨ ಮತ್ತು ೪೩)

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಇಷ್ಟೊಂದು ಬೇಡಿಕೆಗಳನ್ನು ಮಂಡಿಸಿರುವ ಬಗ್ಗೆ ತಾವೂ ಸಹ ಒಂದು ರೀತಿಯ ಅಸಹಾಯಕತೆಯ ಮಾತನಾಡಿದ್ದನ್ನು ಮೆಚ್ಚುತ್ತೇನೆ. ಯಾವಾಗಲೂ ಕೂಡ ಇಷ್ಟೊಂದು ಬೇಡಿಕೆಗಳು ಸುದೀರ್ಘವಾಗಿ ಈ ಸದನದಲ್ಲಿ ನಡೆದಿರಲಿಲ್ಲ. ಆದರೂ ಸಹ ಅನೇಕ ಕಾರಣಗಳಿಂದ ಇದನ್ನು ಮಾಡಬೇಕಾಗುತ್ತದೆಂದು ತಾವು ಸದನಕ್ಕೆ ಒಂದು ವಚನ ನೀಡಿದ್ದೀರಿ ಇವತ್ತು ಈ ಬೇಡಿಕೆಗಳ ಬಗ್ಗೆ ಚರ್ಚೆಯನ್ನು ಪ್ರಾರಂಭಿಸುತ್ತಾ ಅತಿ ಮುಖ್ಯವಾದ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಅಸ್ತಿತ್ವ ನಿಜವಾಗಲೂ ಪ್ರಜಾಪ್ರಭುತ್ವದಲ್ಲಿ, ಪಂಚಾಯತ್‌ರಾಜ್ ಇತಿಹಾಸದಲ್ಲಿ ಒಂದು ಕ್ರಾಂತಿಕಾರಕವಾದ ಬೆಳವಣಿಗೆ ಎಂದು ನಾನಾದರೂ ತಮ್ಮ ಮೂಲಕ ತಿಳಿಸುತ್ತಿದ್ದೇನೆ. ಇವತ್ತು ಯಾವ ಒಂದು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಗ್ರಾಮ ಸ್ವರಾಜ್ಯ, ಗ್ರಾಮ ಚಿಂತನೆ, ಗ್ರಾಮ ಪ್ರಭುತ್ವ, ಅಧಿಕಾರ ವಿಕೇಂದ್ರೀಕರಣ ಎಂಬ ವಿಚಾರಗಳನ್ನು ನಾವು ಮಾತನಾಡುತ್ತಿದ್ದೇವೆ ಇದನ್ನು ಕೃತಿಯಲ್ಲಿ ಇಳಿಸತಕ್ಕದ್ದು ದೇಶದ ಹಿರಿಯ ನಾಯಕರಾದ, ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಂತಹ ರಾಷ್ಟ್ರಪಿತ ಗಾಂಧೀಜಿಯವರ ಕನಸು, ಜಯಪ್ರಕಾಶ್ ನಾರಾಯಣರ ಕನಸು, ಈ ಒಂದು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಸೃಷ್ಟಿಯಿಂದ ನನಸಾಗತಕ್ಕ ಒಂದು ಕ್ರಾಂತಿಕಾರಕವಾದ ಬೆಳವಣಿಗೆ ಎಂದು ನಾನು ಕರೆಯುತ್ತಿದ್ದೇನೆ. ಇದನ್ನು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ದಿವಂಗತ ನಜೀರ್ ಸಾಬ್ ಅವರು ಯಾವುದೇ ಪಕ್ಷದಲ್ಲಿ ಇರಲಿ, ಅವರು ಹಿಂದಿನ ಸರ್ಕಾರದಲ್ಲಿ ಗ್ರಾಮೀಣ ಅಭಿವೃದ್ಧಿ ಸಚಿವರಾಗಿ ಈ ಒಂದು ಕಲ್ಪನೆಯನ್ನು ಅಳವಡಿಸಿಕೊಂಡು ಗ್ರಾಮ ಸ್ವರಾಜ್ಯ ಅನ್ನುವ ಒಂದು ತತ್ವದ ಆಧಾರದ ಮೇಲೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ರಚನೆಗೆ ಸಾಕಷ್ಟು ಶ್ರಮವಹಿಸಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಶಿಲ್ಪಿಯಾಗಿ ಮೆರೆದರು. ಇವತ್ತು ಅವರು ನಮ್ಮ ಮುಂದಿಲ್ಲ. ಆದರೂ ಸಹ ಇವತ್ತು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಬಗ್ಗೆ ಅಪಾರವಾದ ಅಪಸ್ವರ ಬರುತ್ತಿದೆ. ಈ ಅಪಸ್ವರಕ್ಕೆ ಕಾರಣ ಇಲ್ಲವೆಂದು ನಾನಾದರೂ ಅಂದುಕೊಂಡಿಲ್ಲ. ಮಾನ್ಯ ನಜೀರ್‌ಸಾಬರು ಇದೆಲ್ಲವನ್ನು ಚಿಂತನೆ ಮಾಡಿ ಸ್ವಲ್ಪ ಬದಲಾವಣೆ ಮಾಡಿ ಇನ್ನೂ ಹೊಸ ರೂಪ ಕೊಡಬಹುದಿತ್ತು ಎಂದು ನನಗನ್ನಿಸುತ್ತದೆ. ಈಗಲೂ ಸಹ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಅಸ್ತಿತ್ವಕ್ಕೆ ಯಾವುದೇ ಭಂಗ ಬಾರದ ರೀತಿಯಲ್ಲಿ ಶಾಸಕರಿಗೂ, ಮಂಡಲ ಪಂಚಾಯಿತಿಯ ಸದಸ್ಯರಿಗೂ ಮಧ್ಯೆ ಯಾವುದೇ ಒಂದು ಅಧಿಕಾರದಲ್ಲಿ ದೊಡ್ಡ ಗೊಂದಲವಾಗದ ರೀತಿಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಬಹುದು. ಏಕೆಂದರೆ. ಈ ದೇಶದಲ್ಲಿ ಸಂವಿಧಾನವನ್ನೇ ಅನೇಕ ಬಾರಿ ತಿದ್ದುಪಡಿ ಮಾಡಿರತಕ್ಕದ್ದು ಗೊತ್ತಿದೆ. ಆದರೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಸಂಬಂಧಪಟ್ಟ ಕೆಲವು ವಿಚಾರಗಳ ಬಗ್ಗೆ ತಿದ್ದುಪಡಿ ಮಾಡುವುದರಲ್ಲಿ ಏನು ಆಕಾಶ ಕಳಚಿಬೀಳುವುದಿಲ್ಲ.

(ಉಪಾಧ್ಯಕ್ಷರು—ಅಧ್ಯಕ್ಷರ ಸ್ಥಾನವನ್ನಲಂಕರಿಸಿದರು)

ಆದರೆ ತಿದ್ದುಪಡಿ ಮಾಡುವ ಒಂದು ಕಲ್ಪನೆ ತಮ್ಮಲ್ಲಿ ಏನು ಇದೆ, ಅದು ಸಮಗ್ರವಾಗಿ ಜಿಲ್ಲಾ ಪರಿಷತ್ತು ಹಾಗೂ ಮಂಡಲ್ ಪಂಚಾಯಿತಿಗಳನ್ನು ಮುಚ್ಚಿ ಹಾಕತಕ್ಕ ವ್ಯವಸ್ಥೆಯಾಗಬಾರದು. ಇವತ್ತು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡುತ್ತಿದ್ದೇನೆ, ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಿದ್ದೇವೆ. ಗ್ರಾಮ ಸ್ವರಾಜ್ಯದ ಬಗ್ಗೆ ತಾವು ಚಿಂತನೆ ಮಾಡುತ್ತಿದ್ದೀರಿ. ಆದರೆ ಇವತ್ತು ಎಲ್ಲಿಗೆ ಹೋಗಿದ್ದೇವೆ ? ನಿಜ, ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯಿತಿಗಳ ಮೇಲೆ ಗದಾ ಪ್ರಹಾರ ಮಾಡತಕ್ಕ ಚಿಂತನೆ ನಿಮ್ಮಲ್ಲಿ ಉದ್ಭವವಾಗುತ್ತಿದೆ. ಇದು ಸರಿಯಲ್ಲ. ಜಿಲ್ಲಾ ಪರಿಷತ್ತುಗಳಿಗೂ ಮತ್ತು ಮಂಡಲ್ ಪಂಚಾಯಿತಿಗಳಿಗೂ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅವರದೇ ಆದ ಸಾರ್ವಭೌಮತ್ವ ಇದೆ. ನಾವು ಮತ್ತೆ ಅದನ್ನು ಕಸಿದುಕೊಂಡು ಅದನ್ನು ನಿರ್ಜೀವ ವಾದಂಥ ಪ್ರಸಂಗಕ್ಕೆ ತಳ್ಳಬಾರದು. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ನಿಮಗೆ ನಂಬಿಕೆ ಇದ್ದರೆ ನಿಜ ವಾಗಿಯೂ ಅವರ ಅಸ್ತಿತ್ವವನ್ನು ಒಪ್ಪಬೇಕು. ಬದಲಾವಣೆಗಳನ್ನು ಮಾಡಲೇಬೇಕಾಗುತ್ತದೆ. ಬದಲಾವಣೆಗಳ ಬಗ್ಗೆ ಯಾರದೇ ತಕರಾರು ಇಲ್ಲ. ಬದಲಾವಣೆಗಳನ್ನು ಸಮಗ್ರವಾಗಿ ಮಾಡಿ ನನ್ನದೇನೂ ಅಭ್ಯಂತರವಿಲ್ಲ. ಆದರೆ ಅದೇ ನೋಗಿನಲ್ಲಿ ಅದರ ಕಾಲನ್ನು ತೆಗೆದು, ಕೈ ತೆಗೆದು, ಕಣ್ಣು ಕಿತ್ತು ಕೊಂಡು ಅಂಗಹೀನರನ್ನಾಗಿ ಮಾಡಬೇಡಿ. ಜಿಲ್ಲಾ ಪರಿಷತ್ತುಗಳನ್ನು ಮತ್ತು ಮಂಡಲ್ ಪಂಚಾಯಿತಿಗಳನ್ನು ಅಂಗಹೀನರನ್ನಾಗಿ ಮಾಡುವುದು ಬೇಡ. ಇದನ್ನು ನಾನು ಪ್ರಾಮಾಣಿಕತನದಿಂದ ಹೇಳುತ್ತಿದ್ದೇನೆ. ನಿಜ, ನಾನು ಶಾಸಕನಾಗಿದ್ದೇನೆ. ನನಗೂ ಆ ಸಂಕಟ, ನೋವು ಅರ್ಥವಾಗುತ್ತದೆ. ನನಗೆ ಸಂಕಟ, ನೋವು ಏನೂ ಇಲ್ಲವೆಂದಲ್ಲ. ಆದರೆ ಶಾಸಕರಾದವರಿಗೆ ತಾಲ್ಲೂಕಿನಲ್ಲಿ ಯಾವುದೇ ವಿಧವಾದ ಒಂದು ಕೆಲಸ ಮಾಡುವುದಕ್ಕೆ ಅನುಕೂಲಗಳು ಇಲ್ಲ ಎನ್ನತಕ್ಕ ಕೂಗು ಎಲ್ಲ ಕಡೆ ಎದ್ದಿದೆ, ಇಲ್ಲ ಎಂದು ಹೇಳು ವುದಿಲ್ಲ. ಆದರೆ ಇದೇ ಸಭೆಯಲ್ಲಿ ಅದರ ಬಗ್ಗೆ ಚರ್ಚೆ ನಡೆದಿದೆ. ಜಿಲ್ಲಾಪರಿಷತ್ತು ಮಂಡಲ್ ಪಂಚಾಯಿತಿಗಳ ಬಗ್ಗೆ ಚರ್ಚೆ ನಡೆದು, ಇಲ್ಲೇ ಅದಕ್ಕೆ ಒಪ್ಪಿಗೆಯನ್ನು ನೀಡಿ ಅದನ್ನು ರಾಷ್ಟ್ರಪತಿಯವರಿಗೆ ಕಳುಹಿಸಿ ಅವರ ಒಪ್ಪಿಗೆಯನ್ನು ಪಡೆದು ನಡೆಯುತ್ತಿದೆ ಅದಲ್ಲದೆ ಏನೊ ಹೊಸದಾಗಿ ರಾತ್ರೋ ರಾತ್ರಿ ಯಾರಿಗೂ ಗೊತ್ತಿಲ್ಲದ ಹಾಗೆ, ಮಾಡಿದಂತಹ ವ್ಯವಸ್ಥೆ ಏನಲ್ಲ, ನಿಜ. ಇದೊಂದು ಹೊಸ ಕ್ರಾಂತಿ ಎಂಬುದರಲ್ಲಿ ಎರಡು ಅಭಿಪ್ರಾಯವಿಲ್ಲ. ಇದು ಒಂದು ಹೊಸ ಕ್ರಾಂತಿ, ಇದನ್ನು ನಾನು ಕ್ರಾಂತಿ ಎಂದು ಕರೆಯುತ್ತೇನೆ. ಅವರು ಜನತಾ ದಳದವರು ಇರಬಹುದು, ಅಥವಾ ಯಾವುದೇ ಪಕ್ಷದವರು ಇರಬಹುದು. ನನ್ನ ದೃಷ್ಟಿಯಲ್ಲೂ ಸಹ ಪಂಚಾಯಿತಿ ವ್ಯವಸ್ಥೆ, ಗ್ರಾಮದ ವ್ಯವಸ್ಥೆ, ಗ್ರಾಮೀಣ ಜನರಿಗೆ ಪ್ರಜಾಪ್ರಭುತ್ವದ ಅಧಿಕಾರವನ್ನು ಕೊಡತಕ್ಕ ಒಂದು ಹೊಸ ನವಚೇತನ ಎಂಬುದರಲ್ಲಿ ಎರಡು ಅಭಿಪ್ರಾಯವಿಲ್ಲ. ಈ ಹೊಸ ನವಚೇತನವನ್ನು ಅಲುಗಾಡಿಸಬೇಡಿ. ಜಿಲ್ಲಾ ಪರಿಷತ್ತು ಹಾಗೂ ಮಂಡಲ ಪಂಚಾಯಿತಿಗಳ ಅಸ್ತಿತ್ವವನ್ನು ತೆಗೆಯಬೇಡಿ. ಅದರ ಅಸ್ತಿತ್ವವನ್ನು ತೆಗೆಯತಕ್ಕ ಚಿಂತನೆಯನ್ನು ತಾವು ಮಾಡುವುದಾದರೆ ಅದು ಬೇರೆ ರೂಪ ತಾಳುತ್ತದೆ. ಈಗಾಗಲೇ ಅದು ಬೀದಿ ಹೋರಾಟಕ್ಕೆ ಬರಬೇಕಾಗುತ್ತದೆ ಎನ್ನತಕ್ಕ ಮಾತುಗಳನ್ನು ತಾವು ಕೇಳಿದ್ದೀರಿ. ಕ್ರಾಂತಿ ಯಾಗುತ್ತದೆ ಎನ್ನತಕ್ಕ ಮಾತುಗಳನ್ನು ಕೇಳಿದ್ದೀರಿ. ಪರಿಸ್ಥಿತಿ ಹೀಗಿರುವಾಗ ವಿಕೇಂದ್ರೀಕರಣದ ವ್ಯವಸ್ಥೆಯನ್ನು ತೆಗೆದು ಹಾಕಿ ಒಂದು ಸರ್ವಾಧಿಕಾರಿ ಪ್ರಭುತ್ವಕ್ಕೆ ಮತ್ತೆ ನಾವು ತಿರುಗಿ ಹೋಗು ವುದಾದರೆ ಅದು ಬಹಳ ಅಪಾಯವಾಗುತ್ತದೆ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಒಂದೊಂದು ಸಾರಿ ಹಿಂದೆ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಂತಹ ಸನ್ಮಾನ್ಯ ಬಸವಲಿಂಗಪ್ಪನವರ ಆ ಒಂದು ಕೂಗು ಅವರ ಧಾಟಿ, ಗದೆಯನ್ನು ಎತ್ತಿದ್ದನ್ನು ನೋಡಿದಾಗ ಏನಪ್ಪ ನಾವು ಎಲ್ಲಿಗೆ ಹೋಗುತ್ತಿದ್ದೇವೆ. ಯಾವ ಪರಿಸ್ಥಿತಿಗೆ ಹೋಗುತ್ತಿದ್ದೇವೆ ಎಂಬುದಾಗಿ ಅನ್ನಿಸಿದ್ದೂ ಉಂಟು. ಜಿಲ್ಲಾ ಪರಿಷತ್ತುಗಳು ನಮ್ಮ ಮಾತನ್ನೇ ಕೇಳಬೇಕು...... ಮಂಡಲ್ ಪಂಚಾಯಿತಿಯವರು ನಮ್ಮ ಮಾತನ್ನೇ ಕೇಳಬೇಕು.

ಶ್ರೀ ಎನ್. ಚಿಕ್ಕೇಗೌಡ.—ಶಾಸಕರು ಸರ್ವಾಧಿಕಾರಿಗಳು ಎಂದು ಹೇಳುತ್ತಿದ್ದೀರಾ ? ಅಧಿಕಾರ ವಿಕೇಂದ್ರೀಕರಣವನ್ನು ನಾವು ಯಾರೂ ವಿರೋಧಿಸಿಲ್ಲ. ನಮ್ಮ ಪಕ್ಷದವರೇ ಆಗಲಿ ಸರ್ಕಾರ ವಿರೋಧಿಸಿಲ್ಲ. ಆದರೆ ಅದರಲ್ಲಿರತಕ್ಕ ನ್ಯೂನತೆಗಳನ್ನು ಸರಿಪಡಿಸಿ, ಅದು ದುರುಪಯೋಗವಾಗದ ರೀತಿಯಲ್ಲಿ ಅಧಿಕಾರ ವಿಕೇಂದ್ರೀಕರಣ ಇನ್ನೂ ಹೆಚ್ಚಾಗಿ ಆಗಬೇಕೆಂಬುದೇ ನಮ್ಮ ಪಕ್ಷದ ಸಿದ್ಧಾಂತ.

ಶ್ರೀ ಜಿ. ಎಸ್. ಶಿವನಂಜಪ್ಪ.—ಶ್ರೀಮಾನ್ ಬಸವಲಿಂಗಪ್ಪನವರ ಮೇಲೆ ಏನು ಹೇಳಿದ್ದೀರಿ...

ಶ್ರೀ ವಾಟಾಳ್ ನಾಗರಾಜ್.—ಅವರ ಮೇಲೆ ನಾನೂ ಏನೂ ಹೇಳಿಲ್ಲ. ಬಸವಲಿಂಗಪ್ಪನವರು ನನಗೆ ಹೇಳುತ್ತಾರೆ. ನಾನು ಅವರಿಗೆ ಹೇಳುತ್ತೇನೆ. ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಬಸವಲಿಂಗಪ್ಪನವರು ಹೇಳುವುದರಲ್ಲಿ ಅರ್ಥ ಉಂಟು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಾಗ ಅವರು ಮಾತನಾಡಲಿ.

ಉಪಾಧ್ಯಕ್ಷರು.—ತಾವು ಈಲ್ಡ್ ಆಗದಿದ್ದರೆ ಬೇರೆಯವರು ಮಾತನಾಡಬಾರದು.

ಶ್ರೀ ಕರಿಯಣ್ಣ.—ವೈಯಕ್ತಿಕವಾಗಿ ಮಾತನಾಡಬಾರದು.

ಶ್ರೀ ವಾಟಾಳ್ ನಾಗರಾಜ್.—ವೈಯುಕ್ತಿಕ ಏನು ಬಂತು ಇಲ್ಲಿ ?

ಶ್ರೀ ಕರಿಯಣ್ಣ.—ನಿಮಗೆ ಅಧ್ಯಕ್ಷರು ಏನು ಅವಕಾಶ ಕೊಟ್ಟಿದ್ದಾರೆ ಅಷ್ಟಕ್ಕೆ ಮಿತಿಗೊಳಿಸಿ. ಯಾವ ಬಗ್ಗೆ ಮಾತನಾಡಬೇಕೋ ಆ ಬಗ್ಗೆ ಮಾತನಾಡಬೇಕು.

ಶ್ರೀ ಜಿ. ಶಿವನಂಜಪ್ಪ.—ವಾಟಾಳ್ ನಾಗರಾಜ್ ಅವರು ಯಾರಾದರೂ ಮಾತನಾಡುತ್ತಿದ್ದರೆ ಪುಸುಕ್ ಎಂದು ಎದ್ದು ನಿಂತುಕೊಂಡು ಮಾತನಾಡುತ್ತಾರೆ. ಅವರು ಬಸವಲಿಂಗಪ್ಪನವರ ಬಗ್ಗೆ ಹೇಳುತ್ತಿದ್ದರು. ಅವರ ಧಾಟಿ ಬಗ್ಗೆ ಹೇಳುತ್ತಾ ಗದಾಪ್ರಹಾರ ಮಾಡುತ್ತಿದ್ದಾರೆ ಎಂದು ಹೇಳಿದರು. ಅವರು ಜಿಲ್ಲಾ ಪರಿಷತ್ತುಗಳ ಮೇಲೆ ಗದಾಪ್ರಹಾರ ಮಾಡುವುದಕ್ಕೆ ಹೋಗಿರಲಿಲ್ಲ. ಅಲ್ಲಿ ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ, ಕಾನೂನು ರೀತಿಯಲ್ಲಿ ಸರಿಯಾಗಿ ನಡೆದುಕೊಳ್ಳಿ ಎಂದು ಹೇಳಿದ್ದು ತಪ್ಪಾ ? ಹಾಗಾದರೆ ಸ್ವೇಚ್ಛಾವೃತ್ತಿಯಿಂದ ಮಾಡಿ ಎಂದು ತಾವು ಹೇಳುತ್ತೀರಾ ?

ಶ್ರೀ ಕೆ. ಹೆಚ್. ಹನುಮೇಗೌಡ.—ನಾನು ಮಾನ್ಯ ಸದಸ್ಯರನ್ನು ಕೇಳುತ್ತೇನೆ, ಯಾವ ಘನ ಉದ್ದೇಶ ಇಟ್ಟುಕೊಂಡು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳನ್ನು ತಂದರೋ ಆ ಉದ್ದೇಶ ಸಫಲವಾಯಿತಾ ? ಇವತ್ತು ಹಳ್ಳಿಯವರಿಗೆ ಏನು ಕಷ್ಟ ಆಗುತ್ತಿದೆ ತಮಗೆ ಗೊತ್ತಿದೆಯೇ? ಅದು ತಂದು ಆಗಬಾರದ ಅನಾಹುತ ಆಗಿ ಪಾಪ ಇಲ್ಲಿ ಕುಳಿತು ಅಧಿಕಾರ ಮಾಡುತ್ತಿದ್ದವರು ೨೪ ಜನ ಹೋಗಿ ಅಲ್ಲಿ ಕುಳಿತಿದ್ದಾರೆ ಗೊತ್ತಾ? ಆದ್ದರಿಂದ ಇದನ್ನೆಲ್ಲಾ ಯೋಚನೆಮಾಡಿ ಏನು ಸಾಧಕಬಾಧಕಗಳು ಇದೆಯೋ ಅದನ್ನು ಹೇಳಿ.

ಶ್ರೀ ಬಿ. ಸ್ವಾಮಿ ರಾವ್.—ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದವರು ವಾಕ್ ಔಟ್ ಮಾಡಿದ್ದಾರೋ ಏನೋ ಗೊತ್ತಿಲ್ಲ. ಒಬ್ಬರೂ ಸಭೆಯಲಿಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ಅವರು ವಾಕ್ ಔಟ್ ಮಾಡಿಲ್ಲ. ಅವರದೇನೋ ಸಭೆ ಇದೆ. ಅದಕ್ಕೆ ಹೋಗಿದ್ದಾರೆ, ಈಗ ಬರುತ್ತಾರೆ. ತಾವು ಆ ಚಿಂತನೆ ಮಾಡುವುದು ಬೇಡ.

ಶ್ರೀ ಎಂ. ವಿ. ವೆಂಕಟಪ್ಪ.—ಮಂತ್ರಿಗಳು ಇಲ್ಲದೇ ಇರುವಾಗ ವಿರೋಧಪಕ್ಷದವರು ಅಷ್ಟೊಂದು ಗಲಾಟೆ ಮಾಡುತ್ತಾರೆ. ಈಗ ವಿರೋಧಪಕ್ಷದ ನಾಯಕರೂ ಇಲ್ಲ, ಉಪ ನಾಯಕರೂ ಇಲ್ಲಾ, ಯಾರೂ ಇಲ್ಲ.

ಉಪಾಧ್ಯಕ್ಷರು.—ಶ್ರೀಯುತ ನಾಗರಾಜ್ ಅವರೆ ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್.—ಎಲ್ಲ ವಿರೋಧಪಕ್ಷದ ಪರವಾಗಿ ನಾನಿದ್ದೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಈ ಕಡೆ ಮಂತ್ರಿಗಳಿಲ್ಲದೇ ಇದ್ದರೆ ವಿರೋಧ ಪಕ್ಷದ ನಾಯಕರು ಪ್ರಶ್ನೆ ಮಾಡುತ್ತಾರಲ್ಲ ಇವತ್ತು ಹೋಮ್ ಡಿಪಾರ್ಟ್‌ಮೆಂಟಿನಂಥ ಪ್ರಮುಖವಾದ ವಿಚಾರಗಳ ಬಗ್ಗೆ ಚರ್ಚೆ ನಡೆಯುವಾಗ ಅವರ ಕಡೆಯವರು ಒಬ್ಬರೂ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರೂ ಇಲ್ಲ. ಇದನ್ನು ನಾವು ಪ್ರಶ್ನೆ ಮಾಡಬಾರದಾ ?

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಸಭಾಧ್ಯಕ್ಷಿಣಿಯವರೆ, ಈಗ ಚರ್ಚೆ ಆಗುತ್ತಿದೆ. ಮಂತ್ರಿಗಳು ಉತ್ತರ ಕೊಡುತ್ತಿಲ್ಲ. ಇವರಿಲ್ಲದಿದ್ದರೆ ತೊಂದರೆ ಏನೂ ಇಲ್ಲ. ಈ ಕಡೆ ಸದಸ್ಯರು. ಆ ಕಡೆ ಸದಸ್ಯರು ಮಾತನಾಡುವುದರೊಳಗೆ ಇವರು ಬರುತ್ತಾರೆ. ವಾಟಾಳ್ ನಾಗರಾಜ್ ಅವರು ಒಂದು ಘಂಟೆ ಆ ಕಡೆ ಸದಸ್ಯರು ಒಂದು ಘಂಟೆ ಮಾತನಾಡುವುದರೊಳಗೆ ಇವರು ಬರುತ್ತಾರೆ. ಆ ಕಡೆ ಸದಸ್ಯರು ಮಾತನಾಡುವಾಗ ವಿರೋಧ ಪಕ್ಷದ ನಾಯಕರು ಇರಬೇಕೆಂದೇನೂ ಇಲ್ಲ.

ಉಪಾಧ್ಯಕ್ಷರು.—ಇವತ್ತಿನ ದಿವಸ ಇಲ್ಲಿ ನ್ಯಾಷನಲ್ ಫ್ರಂಟ್ ಲೀಡರ್ ಶ್ರೀ ವಾಟಾಳ್ ನಾಗರಾಜ್ ಅವರು.

ಶ್ರೀ ರುಕ್ಮಯ್ಯ ಪೂಜಾರಿ.—ಮಧ್ಯದಲ್ಲಿ ಮಾತನಾಡುವುದಕ್ಕೆ ಮಾನ್ಯ ಸದಸ್ಯರಿಗೆ ಅವಕಾಶ ಕೊಡಬಾರದು ಎಂದು ನನ್ನ ವಿನಂತಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ವಾಟಾಳ್ ಅವರೇ.........

ಉಪಾಧ್ಯಕ್ಷರು.—ತಾವು ಈಲ್ಡ್ ಆಗಬೇಡಿ, ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್.—ನಾನು ಖಂಡಿತ ಈಲ್ಡ್ ಆಗುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ವಾಟಾಳ್ ಅವರೇ ಒಂದು ನಿಮಿಷ.

ಉಪಾಧ್ಯಕ್ಷರು.—ನೀವಿಬ್ಬರೂ ಹಳೇ ಸ್ನೇಹಿತರು.

ಶ್ರೀ ವಾಟಾಳ್ ನಾಗರಾಜ್. ಒಂದೊಂದು ಸಾರಿ ಅವರು ನನಗೆ ಸಮ್ಮೋಹನಾಸ್ತ್ರವನ್ನು ಬೀರುತ್ತಾರೆ. ಆಗ ನನಗೆ ಒಂದೊಂದುಸಾರಿ ಏನೋ ಒಂದು ತರಹ ಆಗುತ್ತದೆ. ಅವರು ಮಾಡುವುದು ಸರಿಯಿಲ್ಲ ನಾನು ಕುಳಿತುಕೊಳ್ಳಬೇಕೇ ಬೇಡವೇ ಎಂಬ ಸಮಸ್ಯೆ ಬರುತ್ತದೆ. ಒಂದು ಕಡೆ ಸ್ನೇಹ. ಮತ್ತೊಂದು ಕಡೆ ಕಾಂಗ್ರೆಸ್ ಪಕ್ಷ. ನಾನು ಗೊಂದಲಕ್ಕೆ ಸಿಕ್ಕಿ ಬಹಳ ಕಷ್ಟಪಡುತ್ತಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇ ಗೌಡ.—ಒಂದು ನಿಮಿಷ........

ಉಪಾಧ್ಯಕ್ಷರು.—ಶಿವರಾಮೇಗೌಡರೇ, ಅವರು ಈಲ್ಡ್ ಆಗಲಿಲ್ಲ. ತಾವು ಕುಳಿತುಕೊಳ್ಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಈಲ್ಡ್ ಆಗಿದ್ದಾರೆ. ಅಧ್ಯಕ್ಷರೆ, ಈ ಸದನದಲ್ಲಿ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ಇದೇ ವಾಟಾಳ್ ನಾಗರಾಜ್ ಅವರು ನನ್ನ ಪಕ್ಕದಲ್ಲಿದ್ದಾಗ ಆ ಕಡೆ ಮಂತ್ರಿಗಳು ಇಲ್ಲದೇ ಇದ್ದಾಗ ಆಕ್ಷೇಪಣೆ ಎತ್ತಿದ್ದಾರೆ. ಅದೇ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರು ಇಲ್ಲದೇ ಇರುವುದರ ಬಗ್ಗೆ ಹೇಳಿರುವುದನ್ನು ನೋಡಿದ್ದೇವೆ. ಇದು ಬಹಳ ಗಹನವಾದ ವಿಚಾರ. ಗ್ರಾಮೀಣಾಭಿವೃದ್ಧಿ ವಿಚಾರ ಚರ್ಚೆ ನಡೆಯುತ್ತಿದೆ. ಸಮಗ್ರವಾಗಿ ತಿದ್ದುಪಡಿ ಮಾಡಬೇಕು ಎಂದು ಚರ್ಚೆ ನಡೆಯುತ್ತಿದೆ. ಕೃಷಿ ಅರಣ್ಯ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಬಗ್ಗೆ ಚರ್ಚೆ ನಡೆಯುವಾಗ ಮಾನ್ಯ ವಿರೋಧಪಕ್ಷದ ಮುಖಂಡರು ಒಬ್ಬರೂ ಇಲ್ಲದಿರುವುದು ನಿಜಕ್ಕೂ ಶೋಚನೀಯ. ಇದಕ್ಕೆ ತಾವು ಏನಾದರೂ ಮಾಡಿ ಬಿಗಿ ಮಾಡಬೇಕು.

ಉಪಾಧ್ಯಕ್ಷರು.—ಅವರು ಒಂದು ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ, ಬರುತ್ತಾರೆ ಎಂದು ಹೇಳಿದ್ದಾರೆ. ಶ್ರೀಯುತ ವೆಂಕಟೇಶ್ ಅವರೇ ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಇಂಟರ್‌ಪಿನ್ ಮಾಡುವುದಿಲ್ಲ. ನೀವೇ ಒಂದು ಮಾತು ಹೇಳಿದ್ದೀರಿ. ಪ್ರಾರಂಭ ಚೆನ್ನಾಗಿ ಮಾಡಿದ್ದೀರಿ, ಈಗ ನನ್ನ ಹೆಸರು ಎತ್ತಿದ ತಕ್ಷಣ ಇಷ್ಟೆಲ್ಲಾ ನನ್ನ ಪಕ್ಷ ವಿರೋಧ ಮಾಡುತ್ತದೆ ಆದರೆ.........

ಶ್ರೀ ವಾಟಾಳ್ ನಾಗರಾಜ್.—ಬಸವಲಿಂಗಪ್ಪನವರಿಗೆ ಇಷ್ಟೊಂದು ಬೆಂಬಲ ಇದೆ ಎಂದು ನನಗೆ ಗೊತ್ತಿರಲಿಲ್ಲ ಅದು ಎಂತಹ ರೀತಿಯ ಬೆಂಬಲ? ಏನು ಕುರುಡು ಬೆಂಬಲವೋ? ಯಾವ ಬೆಂಬಲ ಎಂದು ನನಗೆ ಗೊತ್ತಿರಲಿಲ್ಲ. ಅವರು ಬೆಂಬಲ ಪಡೆದಿದ್ದರೆ ನಾನು ಅಭಿನಂದಿಸುತ್ತೇನೆ. ನನಗಿನ್ನೂ ಬಹಳ ಅನುಮಾನ ಇದೆ.

ಶ್ರೀ ಎಂ. ವಿ. ವೆಂಕಟಪ್ಪ.—ನಮ್ಮ ಕಡೆ ಎಲ್ಲಾ ಮಂತ್ರಿಗಳಿಗೂ ಬೆಂಬಲ ಕೊಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಅದೇನೋ ಮಂತ್ರಿಗಳು ಎಂದು ಬೆಂಬಲ ಕೊಡುತ್ತಾ ಇದ್ದಾರಂತೆ ನಾನು ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅಧಿಕಾರ ವಿಕೇಂದ್ರೀಕರಣ ಎನ್ನುವುದು ಮೂಲಭೂತ ಪ್ರಜಾತಂತ್ರದಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆಗೆ ಒಂದು ಅಡಿಗಲ್ಲು. ಅದಕ್ಕೆ ನಿಜವಾಗಿಯೂ ಒಂದು ಹೊಸ, ನವಚೇತನ ಬಂದಿದೆ. ನಾನು ಮಾತನಾಡುವಾಗ ಮಾನ್ಯ ಬಸವಲಿಂಗಪ್ಪನವರು ಇನ್ನೂ ಸ್ವಲ್ಪ ಮುಂದೆ ಹೋಗಿ, ವಾಟಾಳ್ ನಾಗರಾಜ್ ಅವರೇ ಮುಂದೆ ಹೋಗಿ ಎಂದು ಒಂದು ಕಿವಿಮಾತು ಹೇಳಿದರು. ಹೋ ನನ್ನ ಹೆಸರು ನೀವು ಎತ್ತಿಬಿಟ್ರೆ ಇಲ್ಲಿ ನಮ್ಮವರೆಲ್ಲಾ ಮೇಲೆ ಬಿದ್ದುಬಿಡ್ತಾರೆ ಎಂದು ಇರಬಹುದು. ಇರಲಿ. ಅವರೆಲ್ಲಾ ಮೇಲೆ ಬಿದ್ದುಬಿಡುತ್ತಾರೆ, ಇಲ್ಲಿ ಹೆಸರು ಎತ್ತಬಾರದು ಎಂದರೆ ನಮ್ಮ ಹಕ್ಕಿಗೆ ಚ್ಯುತಿಯಾಗುತ್ತದೆ. ಅದರ ಬಗ್ಗೆ ನನಗೆ ಇಲ್ಲಿ ಭಯ ಭೀತಿ ಇಲ್ಲ. ಬಸವಲಿಂಗಪ್ಪನವರ ಬಗ್ಗೆ ನನಗೆ ಗೌರವ ಇದೆ. ನಾನೂ ಅವರೂ ಸ್ನೇಹಿತರು. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಅವರು ಅವರ ಇಲಾಖೆಯಲ್ಲಿ ಅಂದರೆ ಅರಣ್ಯ ಇಲಾಖೆಯಲ್ಲಿ ಒಂಟಿ ಸಲಗ ಇದ್ದಹಾಗೆ, ಅದರ ಬಗ್ಗೆ ನಾನು ಆಮೇಲೆ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ. ಗಧಾ ಪ್ರಹಾರ ನಡೆದಿರುವುದು ನಿಜ. ಇಲ್ಲಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಬಸವಲಿಂಗಪ್ಪನವರು ಈ ಇಲಾಖೆಯಲ್ಲಿ ಇದ್ದಾಗ, ಜಿಲ್ಲಾ ಪರಿಷತ್ತುಗಳಿಗೆ ಸಾರ್ವಭೌಮತ್ವ ಇರುವಾಗ, ಜಿಲಾಪರಿಷತ್ತಿನ ಅಧ್ಯಕ್ಷರ ಮೇಲೆ ನೀವು ಈ ರೀತಿ ಹೋಗುತ್ತಿದ್ದೀರಿ, ನಿಮ್ಮ ಈ ರೀತಿಯ ಆಡಳಿತ ಸರಿಯಲ್ಲ ಎಂದು ಅನೇಕ ವಿಧದಲ್ಲಿ ಇಡೀ ರಾಜ್ಯದಲ್ಲಿ ಟೀಕೆ ಟಿಪ್ಪಣಿಗಳನ್ನು ಮಾಡಿರುವುದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಎಲ್ಲಿ ಏನು ಅಕ್ರಮವಾಗಿ, ಅನ್ಯಾಯವಾಗಿ ನಡೆಯುತ್ತದೆ ಅದನ್ನು ತಿದ್ದುವುದಕ್ಕೆ. ವ್ಯವಸ್ಥೆ ಮಾಡುವುದಕ್ಕೆ ಜಿಲ್ಲಾಪರಿಷತ್ತಿನಲ್ಲಿ ಚುನಾಯಿತ ಸದಸ್ಯರಿದ್ದಾರೆ. ಜಿಲ್ಲಾ ಪರಿಷತ್ತು ಸದಸ್ಯರು ಇಲ್ಲದೇ ಇರತಕ್ಕಂಥ, ರುಂಡ, ಮುಂಡ ಇಲ್ಲದೇ ಇರತಕ್ಕ ಯಾವುದೋ ಒಂದು ವಸ್ತುವಲ್ಲ. ಅದಕ್ಕೆ ಒಂದು ವ್ಯವಸ್ಥಿತವಾದ ಒಂದು ಸಂಘಟನೆ, ಒಂದು ಮನೆ ಇದೆ. ಅದು ಪಕ್ಷ ರಹಿತವಾದ ಸಮಾಜ ಏನಲ್ಲ. ಎಲ್ಲಾ ಪಕ್ಷದವರು ಚುನಾಯಿತರಾಗಿ ಗೆದ್ದು ಬಂದು ರಚನೆ ಆಗಿರುವುದು ಈ ಜಿಲ್ಲಾಪರಿಷತ್ತು. ಈ ಜಿಲ್ಲಾಪರಿಷತ್ತಿನಲ್ಲಿ ಅನ್ಯಾಯ ನಡೆದಾಗ, ಅಕ್ರಮ ನಡೆದಾಗ, ಭ್ರಷ್ಟಾಚಾರ ನಡೆದಾಗ ಯಾವುದೇ ಸದಸ್ಯರಿಗೆ ಕೇಳುವುದಕ್ಕೆ ಸಮಗ್ರವಾದ ಅಧಿಕಾರ ಇದೆ. ಇದರ ಬಗ್ಗೆ ನಾವು ಚರ್ಚೆ ಮಾಡುವುದು ಬೇಡ. ಜಿಲ್ಲಾ ಪರಿಷತ್ತಿನಲ್ಲಿ ಯಾವ ಒಂದು ಉದ್ದೇಶ ಇದೆ ಆ ಉದ್ದೇಶಕ್ಕೆ ಭಂಗ ತಂದು, ಈ ನೀತಿಗೆ ಅಪಚಾರ ಮಾಡತಕ್ಕ ಒಂದು ವಿಚಾರಕ್ಕೆ ಸರ್ಕಾರ ಬರಬಾರದು ಎನ್ನುವ ಮಾತನ್ನು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ಈಗ ಇರತಕ್ಕ ಪರಿಸ್ಥಿತಿಯಲ್ಲಿ ಶಾಸಕರು ಒಂದು ರೀತಿ ದೊಡ್ಡ ಸೊನ್ನೆ. ಇದನ್ನು ನಾನೂ ಒಪ್ಪುತ್ತೇನೆ. ಆದರ ಬಗ್ಗೆ ನನ್ನ ತಕರಾರು ಇಲ್ಲ. ಈ ಬಗ್ಗೆ ನಾನು ಎಲ್ಲರ ಜೊತೆ ಇದ್ದೇನೆ, ಅಧ್ಯಕ್ಷರೇ, ನಾನು ಗ್ರಾಮಾಂತರ ಪ್ರದೇಶದಿಂದ ಚುನಾವಣೆಯಲ್ಲಿ ಗೆದ್ದು ಬಂದಿರತಕ್ಕ ಮನುಷ್ಯ. ನನಗೆ ಇದು ಅರ್ಥವಾಗುತ್ತದೆ. ಶಾಸಕರ ಇತಿಮಿತಿ ಏನು, ಇವತ್ತು ಶಾಸಕರ ಸ್ಥಿತಿ ಏನು ಎನ್ನುವುದು ನನಗೆ ಅರ್ಥವಾಗಿದೆ. ಇವತ್ತು ಒಂದು ಸಣ್ಣ ದೀಪ ಹಾಕಿಸಬೇಕಾದರೆ, ಮಂಡಲ ಪಂಚಾಯಿತಿಯ ಅನುಮತಿ ಇಲ್ಲದೆ ಭಾಗ್ಯಜ್ಯೋತಿ ದೀಪ ವಾಗಿರಲಿ ಅಥವಾ ಬೇರೆ ಯಾವುದೇ ಸಾಮಾನ್ಯ ಕೆಲಸವನ್ನು ಮಾಡಿಸಬೇಕಾದರೂ ಶಾಸಕರಿಗೆ ಅಧಿಕಾರ ಇಲ್ಲ, ಇದು ನಿಜ. ಹಾಗೆಯೇ ಈ ಸಭೆ ಕೂಡಾ ಪರಮ ಪವಿತ್ರವಾದ ಪ್ರಜಾಪ್ರಭುತ್ವದ ಒಂದು ಅತ್ಯಂತ ಮೇಲ್ಮನೆ. ಈ ಮನೆಗೆ ಬರತಕ್ಕ ಸದಸ್ಯರು ೨ ಲಕ್ಷ ಜನ ಮತದಾರರನ್ನು ಪ್ರತಿನಿಧಿಸ ತಕ್ಕವರು. ಅಂತಹವರು ಇರತಕ್ಕ ಈ ಸಭೆ ಸಾರ್ವಭೌಮ ಸಭೆ. ಈ ಸಭೆಯ ಸದಸ್ಯರಿಗೂ ಸರಿಯಾದ ವ್ಯವಸ್ಥೆ ಇರಬೇಕು. ಆ ಬಗ್ಗೆ ನನ್ನ ಎರಡನೇ ಅಭಿಪ್ರಾಯ ಇಲ್ಲ. ಯಾವ ಪಕ್ಷ ಅಥವಾ ಪಂಗಡದ ಬಗ್ಗೆ ನಾನು ಮಾತನಾಡುತ್ತಿಲ್ಲ. ಆ ಒಂದು ವಿಚಾರದಲ್ಲಿ ಈ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತಿಗಳ ಅಸ್ತಿತ್ವಕ್ಕೆ ಯಾವುದೇ ವಿಧವಾದ ಅಪಾಯ ಒದಗದ ರೀತಿಯಲ್ಲಿ ಶಾಸಕರೂ ಸಹ ಇದರಲ್ಲಿ ಭಾಗವಹಿಸತಕ್ಕಂಥಾದ್ದರ ಬಗ್ಗೆ ಒಂದು ಸಮಗ್ರವಾದ ಒಂದು ತಿದ್ದುಪಡಿಯನ್ನು ತರುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಇಡೀ, ಸಮಗ್ರವಾಗಿ ಜಿಲ್ಲಾಪರಿಷತ್‌ಗಳೇ ಬೇಡ, ಮಂಡಲ ಪಂಚಾಯತಿಗಳೇ ಬೇಡ ಅವುಗಳನ್ನು ತೆಗೆದುಹಾಕಿ, ಹಳೆಯ ರೀತಿಯಲ್ಲಿ ತಾಲ್ಲೂಕು ಬೋರ್ಡ್‌ಗಳು ಏನು ಇದ್ದವು ಆ ರೀತಿಯ ವ್ಯವಸ್ಥೆಗೆ ಹೋಗೋಣ ಶಾಸಕರುಗಳಿಗೆ ಎಲ್ಲವನ್ನು ಕೊಡುವಂತಹ ಈಗಿರುವ ವ್ಯವಸ್ಥೆಯನ್ನು ಮುಚ್ಚಿಹಾಕಿ ಮತ್ತೊಂದು ಅಧ್ಯಾಯವನ್ನು ಪ್ರಾರಂಭ ಮಾಡತಕ್ಕಂಥಾದ್ದು ಏನಾದರೂ ನಿಮ್ಮ ಪಕ್ಷದಲ್ಲಿ ಅಥವಾ ನಿಮ್ಮ ಸರ್ಕಾರದಲ್ಲಿದ್ದರೆ ಅದನ್ನು ಬಿಟ್ಟು ಈಗ ಅಸ್ತಿತ್ವದಲ್ಲಿರತಕ್ಕ ಒಂದು ಪ್ರಾಮಾಣಿಕವಾದ ಪ್ರಜಾಪ್ರಭುತ್ವ ವ್ಯವಸ್ಥೆಯ ಉಳಿವಿಗೆ ತಾವು ಬೆಂಬಲ ಕೊಡಬೇಕೆಂದು ನಾನು ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತೇನೆ. ಮಂಡಲ ಪಂಚಾಯತಿಯಿಂದ ಹಿಡಿದು ಜಿಲ್ಲಾಪರಿಷತ್‌ನವರೆಗೆ ಕೆಲವು ಗೊಂದಲಗಳಿವೆ. ಇವತ್ತು ಜಿಲ್ಲಾ ಪರಿಷತ್ ಸದಸ್ಯರುಗಳು ಮಂಡಲ ಪಂಚಾಯತಿಯಲ್ಲಿ ಕೆಲಸ ಮಾಡುವುದು ಕಷ್ಟವಿದೆ. ಮಂಡಲ ಪಂಚಾಯತಿ ಮತ್ತು ಜಿಲ್ಲಾಪರಿಷತ್‌ನಲ್ಲಿ ಮಧ್ಯೆ ಇರತಕ್ಕ ಜಿಲ್ಲಾಪರಿಷತ್ ಸದಸ್ಯರು ತ್ರಿಶಂಕು ಸ್ವರ್ಗ ದಲ್ಲಿದ್ದಾರೆ. ಅವರು ಮಂಡಲ ಪಂಚಾಯತಿಯಲ್ಲೂ ಕೆಲಸ ಮಾಡುವುದಕ್ಕಾಗುವುದಿಲ್ಲ, ಜಿಲ್ಲಾ ಪರಿಷತ್‌ನಲ್ಲೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಇಂತಹ ಪರಿಸ್ಥಿತಿ ಇದೆ. ಈ ಒಂದು ಪರಿಸ್ಥಿತಿ ನನ್ನ ಅನುಭವಕ್ಕೂ ಬಂದಿದೆ. ನಾನು ಜಿಲ್ಲಾಪರಿಷತ್ ಸದಸ್ಯನೂ ಉಂಟು. ಮತ್ತು ಮಂಡಲ ಪಂಚಾಯತಿಯಲ್ಲಿ ನೋಡಿರತಕ್ಕದ್ದೂ ಉಂಟು. ಶಾಸಕರುಗಳಿಗೆ ತಾಲ್ಲೂಕು ಸಮಿತಿ ಇದೆ. ತಾಲ್ಲೂಕು ಸಮಿತಿಯಲ್ಲಿ ಶಾಸಕರು ಅಧ್ಯಕ್ಷತೆ ವಹಿಸುತ್ತಾರೆ. ಅದೊಂದು ಕಾರ್ಚಿ ಇರುತ್ತದೆ, ಅದರಲ್ಲಿ ಕುಳಿತುಕೊಂಡು ತಿಂಗಳಿಗೊಂದು ಸಾರಿ ತಾಲ್ಲೂಕು ಮಟ್ಟದಲ್ಲಿ ಸರ್ಕಾರದ ಕೆಲಸಕಾರ್ಯಗಳು ಏನೇನು ನಡೆದಿದೆ ಎಂದು ಪರಿಶೀಲನೆ ಮಾಡುವುದು. ಮಂಡಲ ಪಂಚಾಯತಿ ಅಧ್ಯಕ್ಷರುಗಳು ಅಧಿಕಾರಿಗಳ ಜೊತೆಯಲ್ಲಿ ಕುಳಿತುಕೊಂಡು ಮೀಟಿಂಗ್ ಮಾಡುವುದನ್ನು ಬಿಟ್ಟರೆ ಮತ್ತೆ ಯಾವ ಅಧಿಕಾರವೂ ಇಲ್ಲ. ತಮಗೆ ಹೇಳುವುದಾದರೆ, ವೃದ್ಧಾಪ್ಯವೇತನ ೫೦ ರೂಪಾಯಿ ಏನಿದೆ ಅದನ್ನು ಕೊಡಿಸುವ ಶಕ್ತಿ ಸಹ ಶಾಸಕರುಗಳಿಗೆ ಇಲ್ಲ. ಅಂತಹ ಒಂದು ಪರಿಸ್ಥಿತಿಯಲ್ಲಿ ನಾವು ಇದ್ದೇವೆ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆಗಬೇಕು. ಹಿಂದೆ ತಾಲ್ಲೂಕು ಬೋರ್ಡ್‌ಗಳು ಇದ್ದಾಗ ಯಾವರೀತಿ ಕೆಲಸಕಾರ್ಯಗಳು ಆಗುತ್ತಿದ್ದವು. ಈಗ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಬಂದಮೇಲೆ ಯಾವರೀತಿ ಕೆಲಸಕಾರ್ಯಗಳು ಆಗುತ್ತಿವೆ ಎಂಬುದನ್ನು ತಾವು ಸ್ವಲ್ಪ ಪ್ರಸ್ತಾಪಮಾಡಿ.

ಶ್ರೀಮತಿ ದಮಯಂತಿ ಬೋರೇಗೌಡ.—ಮಂಡಲ ಪಂಚಯಿತಿ ಮತ್ತು ಜಿಲ್ಲಾಪರಿಷತ್‌ಗಳನ್ನು ತೆಗೆಯಬೇಕೆಂದು ನಾವು ಯಾರು ಹೇಳುತ್ತಾ ಇಲ್ಲ. ಇರತಕ್ಕ ನ್ಯೂನತೆಗಳನ್ನು ಸರಿಪಡಿಸಬೇಕು. ಅವುಗಳ ಕಾರ್ಯ ವೈಖರಿಯನ್ನು ಸರಿಪಡಿಸಬೇಕು ಅಷ್ಟೆ.

ಶ್ರೀ ವಾಟಾಳ್ ನಾಗರಾಜ್.—ನಾನು ಹೇಳುವದು ಅದನ್ನೆ. ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ಹೆಸರಿಗೆ ಮಾತ್ರ ಇರುತ್ತದೆ. ಏಕೆಂದರೆ ಅರಣ್ಯ ಇಲಾಖೆಯನ್ನು ಕಿತ್ತುಕೊಳ್ಳುವುದು ಲೋಕೋಪಯೋಗಿ ಇಲಾಖೆಯನ್ನು ಕಿತ್ತುಕೊಳ್ಳುವುದು ವಿದ್ಯಾ ಇಲಾಖೆಯನ್ನು ಕಿತ್ತುಕೊಳ್ಳುವುದು ಹೀಗೆ ಮಾಡಿದರೆ ಅಲ್ಲಿ ಉಳಿಯುವುದು ಏನು ? ಕಸ ಹೊಡೆಯುವ ಕೆಲಸ ಇರುತ್ತದೆ. ಅಧಿಕಾರ ವಿಕೇಂದ್ರೀಕರಣ ಅಂದರೆ ಜಿಲ್ಲಾಪರಿಷತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮತ್ತು ಸದಸ್ಯರು ಮಂಡಲ ಪಂಚಾಯತಿ ಸದಸ್ಯರು ಪ್ರಧಾನರು ಉಪಪ್ರಧಾನರು ಏನಿದ್ದಾರೆ ಇವರುಗಳ ಕೈಗೆ ಕಸ ಪೊರಕೆಯನ್ನು ಕೊಡುವುದು ಉಳಿದಿದೆ. ಇನ್ನೇನು ಉಳಿದಿದೆಲ್ಲಿಅ?

ಒಬ್ಬ ಮಾನ್ಯ ಸದಸ್ಯರು.—ಜಿಲ್ಲಾ ಪರಿಷತ್ ಕಾಯಿದೆಯನ್ನು ಅಮೆಂಡ್‌ಮೆಂಟ್ ಮಾಡುವಾಗ ಕಾಂಗ್ರೆಸ್ ಪಕ್ಷದವರು ಸಪೋರ್ಟ್ ಮಾಡಿದ್ದಾರೆ ಮಾನ್ಯ ಬಸವಲಿಂಗಪ್ಪನವರು ನಿನ್ನೆ ಬಹಳ ಚೆನ್ನಾಗಿ ಹೇಳಿದ್ದಾರೆ ಸಂವಿಧಾನದ ಪ್ರಕಾರ ಫೆಡರಲ್ ಸಿಸ್ಟಂ ಯಾವರೀತಿ ಇದೆ ಅದನ್ನು ಹೊಸದು ಮಾಡಿದ್ದೇವೆಂದು ಹೇಳಿದರು ಅದನ್ನು ತಾವು ತಿಳಿದುಕೊಳ್ಳಬೇಕು.

ಶ್ರೀವಾಟಾಳ್‌ನಾಗರಾಜ್.—ಮಾನ್ಯಬಸವಲಿಂಗಪ್ಪನವರು ಹೇಳಿದ್ದನ್ನು ನಾನು ಕೇಳಿದ್ದೇನೆ ಜಿಲ್ಲಾ ಪರಿಷತ್ ಸದಸ್ಯರು ಇಲ್ಲಿ ಬಂದು ಮಾತನಾಡುವುದಕ್ಕೆ ಆಗುವುದಿಲ್ಲ ಎನ್ನುವುದು ನಿಜ ಶಾಸಕರು ಹೋಗಿ ಲೋಕಸಭೆಯಲ್ಲಿ ಮಾತನಾಡುವುದಕ್ಕೆ ಆಗುತ್ತದೆಯೇ ? ನಾವು ಲೋಕಸಭೆಗೆ ಹೋಗಿ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ ಅದು ಸಾಧ್ಯವಿಲ್ಲ. ಅಧಿಕಾರ ವಿಕೇಂದ್ರೀಕರಣ ಅಂದರೆ ಅವರವರಿಗೆ ಎಷ್ಟೆಷ್ಟು ಪಾಲು ಇದೆಯೋ ಯಾವಯಾವ ರೀತಿ ವ್ಯವಸ್ಥೆ ಇದೆಯೋ ಅದೇ ವ್ಯವಸ್ಥೆ ಇದೆ ಅವರು ಇಲ್ಲಿ ಬಂದು ಉತ್ತರ ಕೊಡುವುದಕ್ಕೆ ಸಾಧ್ಯವೇ ? ಕೇಂದ್ರಸರ್ಕಾರದ ಪರವಾಗಿ ನಾವು ಇಲ್ಲಿ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ ಅದರ ಪ್ರಶ್ನೆ ಬೇರೆ ಎಲ್ಲವನ್ನೂ ಅಂಗವಿಹೀನ ಮಾಡಿ ಹೆಳವನನ್ನಾಗಿ ಮಾಡಬೇಡಿ. ಹೆಳವನ ಪರಿಸ್ಥಿತಿಯನ್ನು ಜಿಲ್ಲಾ ಪರಿಷತ್‌ನಲ್ಲಿ ಮಾಡಬೇಡಿ.

ಶ್ರೀಮತಿ ಚಂದ್ರಪ್ರಭ ಅರಸ್.—ಅಂಗವಿಹೀನ ಮಾಡಬೇಡಿಯೆಂದು ಸದಸ್ಯರು ಹೇಳುತ್ತಿದ್ದಾರೆ. ಅಂಗವಿಹೀನ ಯಾರಿಗೆ ಆಗುತ್ತಿದೆ ಅಂದರೆ ಶ್ರೀಸಾಮಾನ್ಯನಿಗೆ ಅಂಗವಿಹೀನ ಆಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್.—ಶ್ರೀಸಾಮಾನ್ಯನಿಗೆ ಆಗಿರತಕ್ಕ ತೊಂದರೆಯನ್ನು ಸರಿಪಡಿಸುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಅದರ ಬಗ್ಗೆ ಏನೊಂದು ಚಿಂತನೆ ನಡೆಯುತ್ತಿದೆ. ಹೊಸ ಚಿಂತನೆಯ ಮೂಲಕ ಇರತಕ್ಕ ತೊಂದರೆಯನ್ನು ಸರಿಪಡಿಸುವುದಾದರೆ ನನ್ನದೇನೂ ತಕರಾರು ಇಲ್ಲ ಸಮಗ್ರವಾದ ಚಿಂತನೆ ನಡೆಯಲಿ. ಜಿಲ್ಲಾ ಪರಿಷತ್ ವ್ಯವಸ್ಥೆ ಯಾವುದು ಇದೆ ಅದನ್ನು ಒಂದು ತಪಸ್ಸು ಎಂದು ಹೇಳಬಹುದು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳ ನೇಮಕವನ್ನು ನಾವು ಒಂದು

೧೧-೩೦ ಎ. ಎಂ.

ತಪಸ್ಸು ಎಂದು ಹೇಳಬಹುದು ಇವತ್ತು ವ್ಯವಸ್ಥೆ ಏನಿದೆ ಇವಕ್ಕಿಂತ ಹೊಸ ಅವಿಚ್ಛಿನ್ನವಾದ ಆದರ್ಶವಾದ ವಿಕೇಂದ್ರೀಕರಣ ತಮ್ಮ ತಲೆಯಲ್ಲಿ ಇದ್ದರೆ ಅದರ ಬಗ್ಗೆ ಚರ್ಚೆ ಮಾಡೋಣ. ಆದರೆ ತರಾತುರಿಯಿಂದ ಬದಲಾವಣೆ ಮಾಡಿ, ಅದಕ್ಕಿರುವ ಅಧಿಕಾರವನ್ನು ಕೀಳತಕ್ಕ ಕೆಲಸಕ್ಕೆ ಹೋಗಬಾರದು ಎಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ಇನ್ನು ಗ್ರಾಮೀಣಾಭಿವೃದ್ಧಿ ಬಗ್ಗೆ ತಮಗೆ ಹೇಳುವುದಾದರೆ, ಯಾವುದೇ ಸರ್ಕಾರ ಈ ಗ್ರಾಮೀಣಾಭಿವೃದ್ಧಿ ಬಗ್ಗೆ ಸಮಗ್ರವಾದಂಥ ಒಂದು ವಿಚಾರ ಧಾರೆಯನ್ನು ಇಟ್ಟುಕೊಂಡಿಲ್ಲ. ಇವತ್ತು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ಆದರೆ ಯಾರಿಗೆ ಎಂದರೆ ಪಟ್ಟಣದ ಪ್ರಜೆಗಳಿಗೆ, ಪಟ್ಟಣದ ನಾಗರೀಕರಿಗೆ ಏಕೆಂದರೆ, ಪ್ರತಿ ದಿನ ಎದ್ದರೆ ಸೂರ್ಯ ಹುಟ್ಟುವುದು ಪಟ್ಟಣದವರಿಗೆ ಬೆಳಕು ಕಾಣುವುದು ಪಟ್ಟಣದವರಿಗೆ, ನೀರು ಸಿಗುವುದು ಪಟ್ಟಣದವರಿಗೆ,

ಎಲ್ಲ ವ್ಯವಸ್ಥೆಗಳೂ ಇರುವುದು ಪಟ್ಟಣದವರಿಗೆ ಆದರೆ ಈ ಗ್ರಾಮೀಣ ಜನತೆಗೆ ಸೂರ್ಯನ ಉದಯ ಕಾಣುವುದಿಲ್ಲ. ಅವರಿಗೆ ಕುಡಿಯುವುದಕ್ಕೆ ನೀರಿಲ್ಲ, ರಸ್ತೆ ಇಲ್ಲ, ಸ್ಮಶಾನ ಇಲ್ಲ. ಒಳಚರಂಡಿ ವ್ಯವಸ್ಥೆ ಇಲ್ಲ, ಶೌಚಾಲಯಗಳಿಲ್ಲ. ಮತ್ತೇನು ? ಯಾರಿಗೆ ಸ್ವಾತಂತ್ರ್ಯ ಬಂದಿದೆ ? ಇವರಿಗಂತೂ ಖಂಡಿತ ಇಲ್ಲ. ಗ್ರಾಮೀಣ ಜನತೆಯ ಕಲ್ಯಾಣಕ್ಕಾಗಿ ಒಂದು ಹೊಸ ಕ್ರಾಂತಿಕಾರಕವಾದಂಥ ಕಾರ್ಯಕ್ರಮವನ್ನು ತಾವು ಕೈಗೊಳ್ಳಬೇಕು. ಗ್ರಾಮೀಣ ಜನತೆಯ ಕಲ್ಯಾಣಕ್ಕಾಗಿ ಗ್ರಾಮೀಣ ಅಭಿವೃದ್ಧಿಗಾಗಿ ಒಂದು ಹೊಸ ಚಿಂತನೆ, ಒಂದು ಕ್ರಾಂತ್ರಿಕಾರಕವಾದಂಥ ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕೆಂದು ಬಹಳ ಪ್ರಾಮಾಣಿಕವಾದಂಥ ಮಾತನ್ನು ನಾನು ಹೇಳುತ್ತಿದ್ದೇನೆ. ಶೌಚಾಲಯದ ಬಗ್ಗೆ ಮೊನ್ನೆ ತಾನೆ ತಾವು ಹೇಳಿದ್ದೀರಿ. ಹೆಣ್ಣುಮಕ್ಕಳ ಬಗ್ಗೆ ತಾವು ನೋಡಬೇಕು. ಅವರು ಶೌಚಾಲಯಕ್ಕೆ ಹೋಗಬೇಕಾದರೆ ಹಗಲು ಹೊತ್ತು ಅವರಿಗೆ ಸ್ವಾತಂತ್ರ್ಯ ಇಲ್ಲ. ರಾತ್ರಿಯನ್ನೇ ಅವರು ಕಾಯಬೇಕು. ಅದೂ ಸೂರ್ಯ ಮುಳುಗುವ ವೇಳೆಯನ್ನು ಅವರು ಕಾಯಬೇಕು. ಬೇಲಿ ಪಕ್ಕದಲ್ಲಿ ಕುಳಿತುಕೊಳ್ಳಬೇಕು, ಪಕ್ಕದಲ್ಲಿ ಬೆಳಕು ಬಂದರೆ ಎದ್ದು ನಿಲ್ಲಬೇಕು. ಇಂತಹ ದಾರುಣ ಪರಿಸ್ಥಿತಿ ಕರ್ನಾಟಕದ ಲಕ್ಷಾಂತರ ಜನ ಹೆಣ್ಣುಮಕ್ಕಳ ಪಾಲಿಗೆ ಬಂದಿದೆ. ಇದು ಒಂದು ಶಾಪ. ಇದು ನಮಗೆ ವರವಾಗಿಲ್ಲ. ಶಾಪವಾಗಿದೆ. ಈ ಶಾಪದಿಂದ ವಿಮೋಚನೆ ಮಾಡಬೇಕಾದರೆ, ಗ್ರಾಮೀಣ ಮಹಿಳೆಯರ ಸಮಸ್ಯೆಯತ್ತ ಗಮನಹರಿಸಿ, ಅವರ ಕಲ್ಯಾಣದ ಬಗ್ಗೆ ಸಮಗ್ರವಾದ ಚಿಂತನೆ ಮಾಡಬೇಕು. ತಾವು ಮೊನ್ನೆ ಮಂಡಲ ಪಂಚಾಯಿತಿಗೆ ಒದೊಂದು ಸಾರ್ವಜನಿಕ ಶೌಚಾಲಯ ಕೊಡುತ್ತೇವೆ ಎಂದು ಹೇಳಿದಿರಿ ಒಂದು ಮಂಡಲ ಪಂಚಾಯಿತಿಗೆ ೧೨ ಹಳ್ಳಿಗಳು ಒಂದು ಹಳ್ಳಿಗೆ ೫ ಕೇರಿಗಳು ಒಟ್ಟು ೬೦ ಕೇರಿಗಳು ಇರುತ್ತವೆ. ಅವರೆಲ್ಲರೂ ಒಂದೇ ಕಡೆ ಹೋಗಬೇಕು ಎಂದು ಹೇಳಿದರೆ ಇದು ಸಾಧ್ಯವೇ? ನಾವು ಬೆಂಗಳೂರಿನಲ್ಲಿ ನಮ್ಮ ಮನೆಯಲ್ಲಿ ಶೌಚಾಲಯಕ್ಕೆ ಹೋದರೆ ಮೂರು ಬಕೇಟು ನೀರು ಬೇಕು......

ಶ್ರೀ ಗುರುದೇವ್.—ಶ್ರೀ ವಾಟಾಳ್ ನಾಗರಾಜ್‌ರವರೇ, ಇದರ ಉದ್ದೇಶ ಇಷ್ಟೆ. ಏನು ಮಂಡಲದಲ್ಲಿ ಮೀಟಿಂಗ್ ನಡೆಯುತ್ತದೆ, ಅಲ್ಲಿ ಆರಿಸಿಬಂದಿರುವ ಸದಸ್ಯರು ಕೂಡ ಬೀದಿಗೆ ಹೋಗುತ್ತಿದ್ದಾರೆ. ಆದ್ದರಿಂದ ಮಂಡಲದಲ್ಲಿ ಎಲ್ಲಿ ಮೀಟಿಂಗ್ ನಡೆಯುತ್ತದೆ ಅಲ್ಲಿ ಒಂದಾದರೂ ಶೌಚಾಲಯವನ್ನು ಕಟ್ಟಿಸಬೇಕು ಎನ್ನುವುದು ಇದರ ಉದ್ದೇಶ.

ಶ್ರೀ ವಾಟಾಳ್ ನಾಗರಾಜ್.—ಆ ಉದ್ದೇಶವನ್ನು ನಾನು ಒಪ್ಪುತ್ತೇನೆ. ಇಂತಹ ಪರಿಸ್ಥಿತಿ ಇದೆ. ಮಾನ್ಯ ಸಚಿವರಿಗೆ ಇದರ ಅನುಭವ ಇರುತ್ತದೆ. ನಾವು ಸಿಟಿಯಲ್ಲಿ ಶೌಚಾಲಯಕ್ಕೆ ಹೋದರೆ, ಸ್ನಾನ ಮಾಡುವುದಕ್ಕೆ ಹೋದರೆ ಎಷ್ಟು ನೀರು ಹಾಕಿಕೊಳ್ಳುತ್ತೇವೆ ಈ ವ್ಯವಸ್ಥೆಯನ್ನು ಸ್ವಲ್ಪ ನೋಡಬೇಕು. ಹಳ್ಳಿಯ ಜನರಿಗೆ ಎರಡು ಚೊಂಬು ನೀರು ಎಂದು ಮೊನ್ನೆ ಹೇಳಿದಿರಿ. ಆ ಎರಡು ಚೊಂಬು, ನೀರನ್ನು ತೆಗೆದುಕೊಂಡು ಹೋಗುವುದನ್ನು ನೋಡಿದರೆ, ನಾವು ನರಕದಲ್ಲೊ ಎಲ್ಲೋ ಇದ್ದೇವೆ ಎಂದೆನಿಸುತ್ತದೆ. ಇವತ್ತು ಹಳ್ಳಿಯ ಜನ ಪ್ರಪಾತದಲ್ಲಿದ್ದಾರೆ, ಪಾತಾಳದಲ್ಲಿ ಇದ್ದಾರೆ. ಅವರನ್ನು ಮೇಲಕ್ಕೆ ಎತ್ತತಕ್ಕಂಥ ಯಾವುದೇ ಚಿಂತನೆ ಇದುವರೆಗೆ ನಡೆದಿಲ್ಲ ಎಂಬ ಮಾತನ್ನು ತಾವು ಒಪ್ಪಬೇಕಾಗುತ್ತದೆ. ಏಕೆಂದರೆ. ಇವತ್ತು ಎಷ್ಟೇ ಹಣ ಖರ್ಚಾಗಲಿ, ಗ್ರಾಮೀಣ ಅಭಿವೃದ್ಧಿ ಕಡೆ ಆದರಲೂ ಕೂಡ ಶೌಚಾಲಯಗಳು, ಒಳಚರಂಡಿ ವ್ಯವಸ್ಥೆ, ನೀರಿನ ವ್ಯವಸ್ಥೆ ಈ ಮೂರು ಯಶಸ್ವಿಯಾಗಲಿಲ್ಲವೆಂದರೆ ನಿಮ್ಮ ಗ್ರಾಮೀಣ ಅಭಿವೃದ್ಧಿ ಆಗುವುದಿಲ್ಲ. ಮಾನ್ಯ ಮಿತ್ರರು ಹೇಳಿದ ಪ್ರಕಾರ ಕನಿಷ್ಟ ಶಾಲೆಗಳ ಪಕ್ಕದಲ್ಲಾದಲ್ಲರೂ ಕೂಡ ಶೌಚಾಲಯದ ವ್ಯವಸ್ಥೆ ಇಲ್ಲ. ಆದ್ದರಿಂದ ಇವತ್ತು ಈ ಒಂದು ಪ್ರಮುಖವಾದಂಥ ಪ್ರಯತ್ನದ ಬಗ್ಗೆ ತಾವು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಗ್ರಾಮೀಣ ಅಭಿವೃದ್ಧಿ ಸಾಧ್ಯವಿಲ್ಲವೆಂಬ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಸ್ಮಶಾನಗಳು, ಇದು ಕೂಡ ನಿಜವಾದ ಚಿಂತನೆಯಾಗಿದೆ. ಅನೇಕ ಹಳ್ಳಿಗಳಲ್ಲಿ ಸ್ಮಶಾನಗಳ ಕೊರತೆ ಇದೆ. ನಮಗೆ ನೀವು ಅನ್ನ ಕೊಡಲಿಲ್ಲ, ನೀರು ಕೊಡಲಿ, ಮನೆ ಕೊಡಲಿ, ಬಟ್ಟೆ ಕೊಡಲಿ. ಕೊನೆಗೆ ಸತ್ತ ಹೆಣವನ್ನು ಹೂಳುವುದಕ್ಕೆ ಜಾಗವೂ ಇಲ್ಲ ಎನ್ನತಕ್ಕಂಥ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ನನ್ನ ತಾಲ್ಲೂಕಿನ ಒಂದು ಉದಾಹರಣೆ ಹೇಳುತ್ತೇನೆ. ಒಂದು ಹಳ್ಳಿಯಲ್ಲಿ ಸ್ಮಶಾನ ಜಾಗ ಕೊಡದೇ, ಎರಡು ದಿನ ಹೆಣವನ್ನು ಇಟ್ಟುಕೊಂಡಿದ್ದ ವಿಷಯ ಪತ್ರಿಕೆಯಲ್ಲೂ ಬಂದಿದೆ. ಇದನ್ನು ತಾವೂ ನೋಡಿದ್ದೀರಿ, ನಾನೂ ನೋಡಿದ್ದೇನೆ. ಇದು ಎಲ್ಲಾ ಕಡೆಯೂ ನಡೆದಿದೆ. ಇವು ಸಣ್ಣ ಸಣ್ಣ ವಿಚಾರಗಳಲ್ಲ. ಇದು ಗುರುತರವಾಗಿ ಜನಗಳನ್ನು ಸ್ಪಂದಿಸತಕ್ಕದ್ದು ಈ ಗ್ರಾಮೀಣ ಬೆಳೆವಣಿಗೆ ವಿಚಾರವನ್ನು ತಾವು ಅತ್ಯಂತ ಪ್ರಾಮಾಣಿಕವಾಗಿ ಚಿಂತನೆ ಮಾಡಿ, ವ್ಯವಸ್ಥಿತವಾಗಿ ಮಾಡಬೇಕು. ಇವತ್ತು ಗ್ರಾಮಸ್ವರಾಜ್ಯ ಹೋಗಿ ಪಟ್ಟಣ ಸ್ವರಾಜ್ಯವಾಗಿದೆ. ಗ್ರಾಮಸ್ವರಾಜ್ಯ ಬೇಕೆಂಬ ಚಿಂತನೆ ನಿಮ್ಮಲ್ಲಿದ್ದರೆ, ಜನತೆಗೆ ಸ್ವಾತಂತ್ರ್ಯದ ಲಭ್ಯವಾಗಬೇಕೆಂಬ ಆಶಾಭಾವನೆ ಇದ್ದರೆ, ದಯಮಾಡಿ, ಇವರಿಗೆ ಹೊಸ

ಬೆಳಕನ್ನು ತಾವು ಚೆಲ್ಲಬೇಕು. ಇದು ಗ್ರಾಮ ಸ್ವರಾಜ್ಯ. ತಾವು ಈ ಬೆಳಕನ್ನು ಚೆಲ್ಲಲಿಲ್ಲ ಎಂದರೆ ಈ ಗ್ರಾಮೀಣ ಜನತೆಗೆ ಪಾಪ ಮಾಡುವಷ್ಟು ಅತ್ಯಂತ ಕಠೋರ ದೃಷ್ಟಿಯಲ್ಲಿ ಹೋಗುತ್ತಿದ್ದೀರೆಂದು ಹೇಳಬೇಕಾಗುತ್ತದೆ. ಆದ್ದರಿಂದ ದಯಮಾಡಿ ಗ್ರಾಮಗಳಲ್ಲಿ ಹಾಳಿ ಇರತಕ್ಕ ಪರಿಸ್ಥಿತಿಯನ್ನು ಬದಲಾವಣೆ ಮಾಡಿ, ನರಕದೃಶ್ಯವಾಗಿರುವ ಗ್ರಾಮಗಳನ್ನು ಒಂದು ಹೊಸ ಚಿಂತನೆಗೆ ಹೊಸ ರೂಪಕ್ಕೆ ತರುವುದಕ್ಕೆ ತಾವು. ತಮ್ಮ ಕಾಲನ್ನು, ತಮ್ಮ ನಡಿಗೆಯನ್ನು ಮುಂದಿಟ್ಟು ಬರ ಬೇಕಾಗಿದೆ. ಇನ್ನು ಉಚಿತ ನಿವೇಶನಗಳು. ಇವತ್ತು ಎಷ್ಟೋ ಜನ ನಿವೇಶನಗಳು ಇಲ್ಲದೆ, ಹಗಲು ರಾತ್ರಿ ಕಾಯುತ್ತಿದ್ದಾರೆ. ಸಮಗ್ರವಾಗಿ ಲಕ್ಷಾಂತರ ಹಳ್ಳಿಯ ಜನರು ಇವತ್ತು ನಿವೇಶನ ಇಲ್ಲದೆ ಅತ್ಯಂತ ಶೋಚನೀಯ ಪರಿಸ್ಥಿತಿಯಲ್ಲಿದ್ದಾರೆ. ಇದರ ಬಗ್ಗೆ ನಮ್ಮಲ್ಲಿ ಒಂದು ಚಿಂತನೆ ಆಗಬೇಕು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾಗಿದೆ, ಊಟ ವಸತಿ, ಕಡ್ಡಾಯ ಶಿಕ್ಷಣ ಮತ್ತು ಮನೆ, ಇವುಗಳ ಬಗ್ಗೆ ಒಂದು ಹೊಸ ವಿಚಾರಧಾರೆ ಬೆಳೆಸುವುದರ ಕಡೆ ಸರ್ಕಾರ ಚಿಂತನೆ ಮಾಡಬೇಕು. ತಮಗೆ ಹೇಳುವುದಾದರೆ, ಅತ್ಯಂತ ಹಿಂದುಳಿದಿರುವುದು ನನ್ನ ತಾಲ್ಲೂಕು, ತಾವು ನಮ್ಮ ಭಾಗಕ್ಕೆ ಬಂದು ನೋಡಬೇಕು. ಇಡೀ ಕರ್ನಾಟಕದಲ್ಲಿ ಇವತ್ತು ೨೦ ಸಾವಿರಕ್ಕೂ ಮೇಲ್ಪಟ್ಟು ಸಂಸಾರಗಳು, ತೆಂಗಿನ ಗರಿಯಿಂದ ಕೊಳಚೆ ಪ್ರದೇಶದಲ್ಲಿ ಮನೆಗಳನ್ನು ಕಟ್ಟಿರತಕ್ಕ ಜನ ಇದ್ದಾರೆ. ಹಿಂದುಳಿದ ಕೋಮಿನವರು, ಯಾವ ದುರಾದೃಷ್ಟವೋ ಈ ರೀತಿಯಾಗಿ ಹಿಂದುಳಿದಿದ್ದಾರೆ. ಅವರಿಗೂ ನಮ್ಮ ಹಾಗೆಯೇ ರಕ್ತ, ಚರ್ಮ, ಹಾಗೂ ಕಣ್ಣುಗಳಿವೆ. ಅವರು ಇವತ್ತು ನರಕದಲ್ಲಿ ಬದುಕಿದ್ದಾರೆ. ಈ ಬಗ್ಗೆ ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ. ಮೊಲ್ಲುಕ್ಕರೆ ಶೆಟ್ಟಿ ಜನಾಂಗ ಎನ್ನತಕ್ಕ ಒಂದು ಕೋಮು ಶತಮಾನಗಳಿಂದ ಹೆಂಚನ್ನು ಕಂಡಿಲ್ಲ. ಸೂರ್ಯನ ಹೊದಿಕೆ ಇದೆ, ಹೆಂಚನ್ನು ನೋಡಿಲ್ಲ. ಅವರು ಮನೆಗಳಿಗೆ ಬರೀ ಗರಿ ಹಾಕಿಕೊಂಡಿದ್ದಾರೆ. ಆಮೇಲೆ ನಾಯಕ ಜನಾಂಗ ಇದೆ. ಇಂತಹ ಸಣ್ಣ ಸಣ್ಣ ಸುಮಾರು ೨೦–೨೨ ಸಾವಿರ ಗುಡಿಸಲ ಜನಾಂಗ ನರಕದಲ್ಲಿ. ಸತದೃಷ್ಟರಾಗಿ ವಾಸ ಮಾಡು ತ್ತಿದ್ದಾರೆ. ಇವರು ಅಡಿಗೆ ಮಾಡುವಾಗ ಏನಾದರೂ ಬೆಂಕಿ ತಗಲಿದರೆ, ಇಡೀ ಊರಿಗೆ ಊರೇ ಭಸ್ಮ ವಾಗುತ್ತದೆ. ಮೈಸೂರಿನ ಅಗ್ನಿಶಾಮಕದಳದವರಿಗೆ ಕರೆ ಕೊಟ್ಟು, ಅವರು ಬಂದು ನೀರು ತುಂಬಿ, ಆ ಬೆಂಕಿಯನ್ನು ಆರಿಸುವ ಹೊತ್ತಿಗೆ, ಎಲ್ಲವೂ ಭಸ್ಮವಾಗಿರುತ್ತದೆ. ಆದ್ದರಿಂದ ಇವತ್ತು ಸರ್ಕಾರ ಎಚ್ಚರ ವಹಿಸಬೇಕಾದ ಪರಿಸ್ಥಿತಿ ಇದೆ. ನನ್ನ ತಾಲ್ಲೂಕಿನಲ್ಲಿ ಇಷ್ಟೊಂದು ಶೋಚನೀಯವಾದ ಪರಿಸ್ಥಿತಿ ಬಂದಿದೆ. ಆದ್ದರಿಂದ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಿ. ಹಳ್ಳಿಗಾಡಿನಲ್ಲಿರತಕ್ಕ ಇಂತಹ ಜನರ ಕಲ್ಯಾಣಕ್ಕಾಗಿ ಒಂದು ತೀರ್ಮಾನಕ್ಕೆ ಬನ್ನಿ. ನಮ್ಮ ರಾಜ್ಯದಲ್ಲಿ ಗುಡಿಯಲ್ಲಿರತಕ್ಕ. ಗುಡಿಸಲುಗಳಲ್ಲಿರತಕ್ಕ ಜನಾಂಗವನ್ನು ಹೊಸ ರೂಪಕ್ಕೆ ತರುತ್ತೇವೆ. ಒಂದು ಕ್ರಾಂತಿಯನ್ನು ಮಾಡುತ್ತೇವೆ, ಪ್ರತಿಯೊಬ್ಬರಿಗೂ ಹೆಂಚು ಮತ್ತು ಮರವನ್ನಾದರೂ ಕೊಡುತ್ತೇವೆ ಎನ್ನುವ ಹೊಸ ನಿರ್ಧಾರಕ್ಕೆ ಬರಬೇಕು. ಇವತ್ತು ಒಂದು ಗುಡಿಸಲಿಗೆ ಕನಿಷ್ಠ ೩೦೦೦ ಅಥವಾ ೩೫೦೦ ರೂಪಾಯಿಗಳು ಖರ್ಚಾಗ ಬಹುದು. ಇದನ್ನು ಮಾಡಿ ಇವತ್ತು ಒಂದು ಹೊಸ ಕ್ರಾಂತಿಯನ್ನು ತೆಗೆದುಕೊಂಡು ಬನ್ನಿ. ಕೇಂದ್ರ ಸರಕಾರದ ಸಹಕಾರ, ಕೇಂದ್ರ ಸರಕಾರದವರ ಹಣದಿಂದ ಇವತ್ತು ಕೊಳವೆ ಬಾವಿಗಳು ಬಂದಿವೆ. ಯಾವುದೇ ಪಕ್ಷದವರು ಇರಲಿ ಅವರನ್ನು ನೆನೆದುಕೊಳ್ಳಬೇಕು. ಇದು ಹೊಸ ವಿಚಾರ. ಕೊಳವೆ ಬಾವಿ ಇಲ್ಲದಿದ್ದರೆ ಬಹಳ ಜನ ಕೆಡುತ್ತಿದ್ದರು. ಇವತ್ತು ನಜೀರ್‌ಸಾಬರನ್ನು ನೀರು ಸಾಬರು ಎಂದು ಕರೆಯುತ್ತಾರೆ. ಅವರು ದಿವಂಗತರಾಗಿದ್ದಾರೆ. ಅವರ ಬಗ್ಗೆ ನಾಲ್ಕು ಒಳ್ಳೆಯ ಮಾತುಗಳನ್ನಾಡ ಬೇಕಾದುದು ನನ್ನ ಕರ್ತವ್ಯ. ನನ್ನ ಒಂದು ತಾಲ್ಲೂಕಿನಲ್ಲೇ ೯೦೦ ಕೊಳವೆ ಬಾವಿಗಳಲ್ಲಿ ೪೫೦–೫೦೦ ಕೊಳವೆ ಬಾವಿಗಳು ಕೆಟ್ಟು ವರ್ಷಗಳಾದರೂ ರಿಪೇರಿಯಾಗಿಲ್ಲ. ಈ ಮಾತನ್ನು ಗುಂಡ್ಲುಪೇಟೆಯ ಹಿರಿಯ ಸದಸ್ಯರಾದ ಶ್ರೀಮತಿ ನಾಗರತ್ನಮ್ಮನವರೂ ಈ ಸಭೆಯಲ್ಲಿ ಹೇಳಿದರು. ಗುಂಡ್ಲುಪೇಟೆ ತಾಲ್ಲೂಕಿನಲ್ಲೂ ಎಷ್ಟು ಕೊಳವೆ ಬಾವಿಗಳು ಕೆಟ್ಟಿವೆ ಎಂಬ ಮಾತನ್ನು ಅವರು ಹೇಳಿದರು. ಈ ಪ್ರಶ್ನೆ ಇಡೀ ರಾಜ್ಯದ ಪ್ರತಿ ತಾಲ್ಲೂಕಿನಲ್ಲೂ ಇದೆ. ಯಾವ ಉದ್ದೇಶಕ್ಕಾಗಿ ಕೊಳವೆ ಬಾವಿಗಳನ್ನು ಹಾಕಿದ್ದೇವೋ ಆ ಉದ್ದೇಶ ಸಫಲವಾಗದೇ, ಕೊಳವೆ ಬಾವಿಗಳು ಅಂಗವಿಹೀನವಾಗಿ ಕೆಟ್ಟು ರಿಪೇರಿಗೆ ಬಂದು ವರ್ಷ ಗಟ್ಟಲೆ ಆದರೂ ರಿಪೇರಿಯಾಗಿಲ್ಲ. ಮಂಡಲ ಪಂಚಾಯಿತಿಯಲ್ಲಿ ಕೇಳಿದರೆ ಹಣ ಇಲ್ಲ ಎನ್ನುತ್ತಾರೆ. ಅಲ್ಲಿ ಹಣ ಇಲ್ಲ ಎಂದರೆ ಖರ್ಚು ಮಾಡುವವರು ಯಾರು ? ಈ ರೀತಿ ಒಬ್ಬರನ್ನೊಬ್ಬರು ದೂಷಣೆ ಮಾಡಿಕೊಂಡು ಕೊಳವೆ ಬಾವಿಗಳು ರಿಪೇರಿ ಇಲ್ಲದೆ ಇಡೀ ರಾಜ್ಯದಲ್ಲಿ ಸ್ಥಗಿತವಾಗಿವೆ. ಈ ಬಗ್ಗೆ ಒಂದು ಹೊಸ ಚಿಂತನೆ ಆಗಬೇಕು. ಯುದ್ಧದ ರೀತಿಯಲ್ಲಿ ಮುನ್ನುಗ್ಗಬೇಕಾಗಿದೆ. ಇಲ್ಲದಿದ್ದರೆ ಇದು ಅತ್ಯಂತ ಶೋಚನೀಯವಾಗಿರತಕ್ಕಂಥ ವಿಚಾರವಾಗುತ್ತದೆ.

ಶ್ರೀ ಎ. ಕೃಷ್ಣಪ್ಪ.—ನಾಗರಾಜ್‌ರವರೇ.........

ಉಪಾಧ್ಯಕ್ಷಣಿಯವರು.—ನಾಗರಾಜ್‌ರವರೇ, ಇದರ ಬಗ್ಗೆ ೫೦ ಜನ ಮಾತನಾಡಬೇಕೆಂದು ಹೆಸರುಗಳನ್ನು ಕೊಟ್ಟಿದ್ದಾರೆ. ತಾವು ಆದಷ್ಟು ಬೇಗ ಮುಗಿಸಿ. ನಾಲ್ಕು ಐದು ಜನ ಮಂತ್ರಿಗಳಿಗೆ ಸಂಬಂಧಿಸಿದ ಬೇಡಿಕೆಗಳು ಇರುವುದರಿಂದ ತಾವು ಬೇಗಬೇಗ ಬೇರೆ ಬೇರೆ ವಿಷಯಕ್ಕೆ ಬಂದರೆ ನಾವು ಮುಗಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎ. ಕೃಷ್ಣಪ್ಪ.—ನಿಮ್ಮ ತಾಲ್ಲೂಕಿನಲ್ಲಿ ೪೫೦ ಕೊಳವೆ ಬಾವಿಗಳು ಕೆಟ್ಟಿವೆ ಎಂದು ಹೇಳಿದಿರಿ. ನಮ್ಮ ತಾಲ್ಲೂಕಿನಲ್ಲಿ ಕೆಟ್ಟಿಲ್ಲ. ಅಲ್ಲಿ ಮಂಡಲ ಪಂಚಾಯಿತಿ ಚೇರ್ಮೆನ್ನರು, ವೈಸ್ ಚೇರ್ಮೆನ್ನರು ೨೫-೩೦ ಸಾವಿರ ರೂಪಾಯಿ ಟಿ.ಎ.-ಡಿ.ಎ. ತೆಗೆದುಕೊಳ್ಳುತ್ತಾರಲ್ಲ ಅವರು ಇದರ ಕಡೆ ಎಂದೂ ಕಣ್ಣುಬಿಟ್ಟು ನೋಡಲಿಲ್ಲವೇ ?

ಶ್ರೀ ರಮಾನಾಥ ರೈ.—ಜಿಲ್ಲಾ ಪರಿಷತ್ ಅಧ್ಯಕ್ಷರು, ಉಪಾಧ್ಯಕ್ಷರು ಮಂಡಲ ಪಂಚಾಯಿತಿ ಚೇರ್ಮೆನ್ನರು, ವೈಸ್‌ಚೇರ್ಮೆನವರು ಇದಕ್ಕೆ ಜವಾಬ್ದಾರಿ. ಶಾಸಕರು ಹಾಗೂ ಸರಕಾರದವರು ಇದಕ್ಕೆ ಜವಾಬ್ದಾರರಲ್ಲ ಇದರ ಬಗ್ಗೆ ಸರಕಾರಕ್ಕೆ ಹೇಳುವುದೇನಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಕೃಷ್ಣಪ್ಪನವರೇ ಗೊತ್ತಾಯಿತು, ಕುಳಿತುಕೊಳ್ಳಿ.

ಶ್ರೀ ಎ. ಕೃಷ್ಣಪ್ಪ.—೨೫ ಸಾವಿರ ರೂಪಾಯಿ ಟಿ. ಎ. ಡಿ. ಎ. ತೆಗೆದುಕೊಳ್ಳುವುದಕ್ಕೆ ಆಗುತ್ತದೆ. ಬೋರ್‌ವೆಲ್ ರಿಪೇರಿ ಮಾಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಎಂ. ಪಿ. ವೆಂಕಟೇಶ್.—ಅವರುಗಳು, ವಾಟಾಳ್ ನಾಗರಾಜ್‌ರವರನ್ನು ಗ್ರಾಮೀಣ ಾಭಿವೃದ್ಧಿ ಸಚಿವರು ಎಂದು ತಿಳಿದುಕೊಂಡಿದ್ದಾರೆ. ಅವರು ಸಚಿವರಲ್ಲ, ಶಾಸಕರು. ಅವರೇನು ಮಾಡುತ್ತಾರೆ ?

ಶ್ರೀ ಡಿ. ಎ. ಚಿನ್ನಪ್ಪ.—ಅವರು ಕೆಲಸ ಮಾಡುತ್ತಿಲ್ಲ ಎಂದು ಹೇಳುವುದಕ್ಕೆ ಇದೊಂದು ಉದಾಹರಣೆ. ಇದು ಅವರ ಕರ್ತವ್ಯ.

ಶ್ರೀ ವಾಟಾಳ್ ನಾಗರಾಜ್.—ತಮ್ಮ ಗಮನಕ್ಕೆ ಒಂದು ವಿಚಾರ ತರುತ್ತಿದ್ದೇನೆ. ಮೂಗು ನಮಗೆ ಸೇರಿರತಕ್ಕದ್ದು. ಗ್ರಾಮೀಣ ಭಾಷೆಯಲ್ಲಿ ಹೇಳಬೇಕಾದರೆ ಗೊಣ್ಣೆ ಸುರಿಯುತ್ತದೆ ಎಂದು ಮೂಗನ್ನು ಕತ್ತರಿಸಿಕೊಳ್ಳುವುದನ್ನು ನಾನು ಎಲ್ಲೂ ನೋಡಿಲ್ಲ. ಮೂಗನ್ನು ಕರವಸ್ತ್ರದಲ್ಲಿ ಒರೆಸಿ ಕೊಳ್ಳಬೇಕು. ಅಥವಾ ಸೇರಿದ್ದರೆ ತೊಳೆಯಬೇಕು. ಮೂಗನ್ನು ಕೊಯ್ದು ಹಾಕುತ್ತೇನೆಂದು ಹೇಳಬಾರದು.

ಶ್ರೀ ಎಸ್. ಬಂಗಾರಪ್ಪ.—ಅವರು ಹೇಳುತ್ತಿರುವುದು ನಿಜ. ಸ್ವಲ್ಪ ಏನಾದರೂ ಸುರಿದರೆ ಒರೆಸಿಕೊಳ್ಳಬಹುದು. ಆ ಮೇಲೆ ಸ್ವಲ್ಪ ಮೆಡಿಸಿನ್ ಕೊಟ್ಟರೆ ನಿಲ್ಲಿಸುವಹಾಗೆ ಇದ್ದರೆ ಪರವಾಗಿಲ್ಲ. ಬರೀ ಸುರಿಯುವುದೇ ಕೆಲಸ ಮಾಡಿಕೊಂಡರೆ ನಿಮ್ಮ ಕರ್ಚೀಫ್ ಸಾಕಾಗುವುದಿಲ್ಲ, ಟವಲ್ ಸಾಕಾಗುವುದಿಲ್ಲ. ಆಗ ಏನು ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್.—ಸ್ವಲ್ಪ ರಮ್ ತೆಗೆದುಕೊಂಡರೆ ಹೊರಟು ಹೋಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ರಮ್ ಅಥವಾ ಬೇರೆ ಏನೋ ಸಿದ್ಧೌಷಧ ಮಾಡಬೇಕೆಂದು ಅವರು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಇಲ್ಲ ಅವರು ಮೂಗು ಕುಯ್ದು ಹಾಕಿ ಎಂದು ಹೇಳುತ್ತಿದ್ದಾರೆ.

ಶ್ರೀಮತಿ ಮೋಟಮ್ಮ.—ಪಾನನಿರೋಧದ ಬಗ್ಗೆ ತಾವು ಸಾಕಷ್ಟು ಮಾತನಾಡುತ್ತೀರಿ. ಆದರೆ ಈಗ ರಮ್ ಬಗ್ಗೆ ಮಾತನಾಡುತ್ತಿದ್ದೀರಲ್ಲ. ಅದರ ಅನುಭವ ನಿಮಗೆ ಇದೆಯೋ ?

ಶ್ರೀ ವಾಟಾಳ್ ನಾಗರಾಜ್.—ನಾನು ಕುಡಿಯುವುದಿಲ್ಲ. ಆದರೆ ಕುಡಿಯುತಕ್ಕಂಥ ಸ್ನೇಹಿತರು ಇದ್ದಾರೆ. ಆದುದರಿಂದ ಈ ಮಾತನ್ನು ಹೇಳಬೇಕಾಗಿದೆ. ಬಂಗಾರಪ್ಪನವರೇ ನಿಮಗೂ ಗೊತ್ತು. ಬಹಳ ಜನ ಕುಡಿಯುತಕ್ಕಂಥ ಸ್ನೇಹಿತರು ನನಗೆ ಇದ್ದಾರೆ. ನಾನು ಮಾತ್ರ ಯಾವತ್ತೂ ಕುಡಿದಿಲ್ಲ.

ಶ್ರೀಮತಿ ಮೋಟಮ್ಮ.—ರಂ ತೆಗೆದುಕೊಂಡರೆ ನೆಗಡಿ ನಿಲ್ಲುತ್ತದೆ ಎಂದು ಹೇಗೆ ಹೇಳುತ್ತೀರಿ.

ಶ್ರೀ ವಾಟಾಳ್ ನಾಗರಾಜ್.—ನನಗೆ ಕುಡಿಯುವ ಸ್ನೇಹಿತರು ಬಹಳ ಜನರಿದ್ದಾರೆ. ನಾನು ಕುಡಿಯುವವರ ಮಧ್ಯೆ ಇರುತ್ತೇನೆ. ತಾವು ನನ್ನನ್ನು ನಂಬಬೇಕು. ನಾನು ಎಂದಿಗೂ ಕುಡಿಯುವವನು ಅಲ್ಲ, ನೀವು ನಂಬದೆಹೋದರೆ ಬಹಳ ಕಷ್ಟವಾಗುತ್ತದೆ. ನಮ್ಮ ಮನೆಯವರು ಕುಡಿಯುವುದಿಲ್ಲವೆಂದು ತಿಳಿದುಕೊಂಡಿದ್ದಾರೆ.

ಉಪಾಧ್ಯಕ್ಷಣಿಯವರು.—ಅವರು ತಿಳಿದುಕೊಂಡಿದ್ದಾರೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್.—ಇವತ್ತು ಐ. ಎ. ಎಸ್. ಐ. ಪಿ. ಎಸ್. ಅಧಿಕಾರಿಗಳು ಇವರು ಸ್ವರ್ಗಲೋಕದಿಂದ ಇಳಿದಿರುವವರು. ಇವರು ಸ್ವರ್ಗಲೋಕದಲ್ಲಿ ಇದ್ದಾರೆ. ಕೆಳಗಡೆ ಬರುವಹಾಗೆ ಇಲ್ಲ. ಅವರಿಗಾಗಿ ಒಂದು ಸ್ವರ್ಗ ನಿರ್ಮಾಣವಾಗಿದೆ. ಈ ಐ.ಪಿ.ಎಸ್. ಐ.ಎ.ಎಸ್. ಅಧಿಕಾರಿಗಳು ಅಂದರೆ ಅವರಿಗೆ ಸ್ವರ್ಗದಲ್ಲಿ ಮನೆಗಳು ವ್ಯವಸ್ಥೆಗಳು. ಇಂದ್ರನ ಐರಾವತ, ಹವಾ ನಿಯಂತ್ರಣ ವ್ಯವಸ್ಥೆ ಮೆತ್ತನೆಯ ಆಸನ, ಈ ರೀತಿ ಇನ್ನೂ ಅನೇಕ ಸೌಲಭ್ಯಗಳು ಇವರಿಗೆ ಇದೆ. ಬಹುಶಃ ದ್ವಾಪರಯುಗದಲ್ಲಿ ಆ ಇಂದ್ರನಿಗೂ ಕೂಡ ಇಂತಹ ಸವಲತ್ತುಗಳು ಇರಲಿಲ್ಲವೆಂದು ಕಾಣುತ್ತದೆ. ಈ ಪರಿಸ್ಥಿಯಲ್ಲಿ ಇವತ್ತು ನಮ್ಮ ಐ. ಎ. ಎಸ್. ಐ. ಪಿ. ಎಸ್. ಅಧಿಕಾರಿಗಳು ಇದ್ದಾರೆ. ಮತ್ತು ಅವರ ರೇಂಕಾರಗಳು, ಹಾಗೂ ಅವರ ಮಾತುಗಳನ್ನು ವರ್ಣಿಸಲು ಅಸಾಧ್ಯ. ಶಾಸಕರಾಗಲಿ, ಸಾರ್ವಜನಿಕರಾಗಲಿ, ಸಾಮಾನ್ಯ ಜನಗಳಾಗಲಿ ಅವರನ್ನು ಮಾತನಾಡಿಸಲು ಹೋದರೆ ಅವರೇ ಬೇರೆ ನಾವೇ ಬೇರೆ ಎಂದು ನಮಗೆ ಅರ್ಥವಾಗುತ್ತದೆ. ನಮಗೆ ಒಂದು ರೀತಿ ಯಮಧರ್ಮರಾಯನ ಸ್ವರೂಪವಾಗುತ್ತದೆ. ಜ್ಞಾಪಕಕ್ಕೆ ಬರುತ್ತದೆ, ಈ ದೇಶದಲ್ಲಿ ಐ.ಎ.ಎಸ್. ಐ.ಪಿ.ಎಸ್. ಅಧಿಕಾರಿಗಳು ಇರಬೇಕೋ ಬೇಡವೋ ಎಂದು ನಾವು ಯೋಚನೆ ಮಾಡಬೇಕಾಗಿದೆ. ಒಂದು ಸಾರಿ ಅವರು ಅಧಿಕಾರಕ್ಕೆಬಂದರೆ ನಿವೃತ್ತರಾಗುವವರೆಗೂ ಅವರನ್ನು ಯಾರೂ ಏನೂ ಮಾತನಾಡಿಸುವ ಹಾಗೆ ಇಲ್ಲ. ಕೆಲವು ಅಧಿಕಾರಿಗಳ ಪರಿಸ್ಥಿತಿ ನೋಡಿದಾಗ ಅವರಿಗೆ ಕೊಡತಕ್ಕ ಸವಲತ್ತುಗಳನ್ನು ಮತ್ತು ಸಾಮಾನ್ಯ ಜನರ ಸ್ಥಿತಿಗಳನ್ನು ನೋಡಿದರೆ ಅಂತರ ಅಪಾರವಾಗಿದೆ. ಪ್ರಜಾಪ್ರಭುತ್ವಕ್ಕೆ ಅವರು ಹೊಂದಿಕೊಂಡಿಲ್ಲ. ನಾನು ಈ ಸಭೆಯಲ್ಲಿ ಕುಳಿತುಕೊಂಡು ನೋಡಿದ್ದೇನೆ. ನಮ್ಮ ಮಂತ್ರಿಗಳು ಅವರ ಹತ್ತಿರ ಹೋಗಿ ನಿಂತುಕೊಂಡರೆ ಅವರು ಎದ್ದು ನಿಂತು ಮಾತನಾಡತಕ್ಕ ಸೌಜನ್ಯವಿಲ್ಲ, ಅಭಿಮಾನ ಇಲ್ಲ. ಅಷ್ಟೊಂದು ಸೊಕ್ಕು ಈ ಅಧಿಕಾರಿಗಳಿಗೆ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಲ್ಲಿ ಎದ್ದು ನಿಂತರೆ ಏನಾಗುತ್ತದೆ ಅಂದರೆ ತೊಂದರೆಯಾಗುತ್ತದೆ. ಅವರು ಎದ್ದು ನಿಲ್ಲಲು ಪ್ರಯತ್ನ ಪಡುತ್ತಾರೆ. ನಾವೇ ಎದ್ದು ನಿಲ್ಲ ಬೇಡಿ, ಕುಳಿತುಕೊಳ್ಳಿ ಎಂದು ಹೇಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಅವರು ಮಲಗಿರಲಿ, ನೀವು ನಿಂತಿರಿ. ನಮ್ಮ ಸರ್ಕಾರ ಹೇಗೆ ನಡೆಯುತ್ತಿದೆ ಅಂದರೆ ಮಲಗಿದ್ದಾರೆ ಮಂತ್ರಿಗಳು ನಿಂತಿದ್ದಾರೆ. ಅಧಿಕಾರಿಗಳನ್ನು ಕೈಮುಗಿದು ಕೇಳತಕ್ಕಂಥ ಮಂತ್ರಿಗಳನ್ನು ನಾನು ನೋಡಿದ್ದೇನೆ. ಹಾಗೂ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳತಕ್ಕ ಮಂತ್ರಿಗಳನ್ನೂ ನಾನು ನೋಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಇವತ್ತು ನಾವು ಸರ್ಕಾರ ನಡೆಸುತ್ತಿರ ಬೇಕಾದರೆ ನಾವು ನಿಂತಿರುತ್ತೇವೆ. ಅಧಿಕಾರಿಗಳು ಮಲಗಿರುತ್ತಾರೆಂದು ಆಯಿತು. ನೀವು ಏನಾದರೂ ಅಧಿಕಾರಕ್ಕೆ ಬಂದರೆ ತಿರುವು ಮುರುವು ಆಗುತ್ತದೆ. ಆಗ ನೀವು ಮಲಗಿರುತ್ತೀರಿ, ಅವರು ಎದ್ದಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಒಂದು ಸಾರಿ ನನಗೆ ಅಧಿಕಾರ ಕೊಟ್ಟು ನೋಡಿದರೆ ನಾನು ಮಲಗಿರುತ್ತೇನೆಯೋ ನಿಂತಿರುತ್ತೇನೆಯೋ ಎಂದು ಗೊತ್ತಾಗುತ್ತದೆ. ನನಗೆ ಅಧಿಕಾರ ಬರುವುದಕ್ಕೆ ಇವರು ಅವಕಾಶ ಕೊಡುತ್ತಿಲ್ಲ. ನಾನು ನಿಂತೇ ಇರುತ್ತೇನೆ. ನಾನು ಯಾವಾಗಲೂ ಮಲಗೇ ಇರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾವು ನಿಂತಿರುವುದರಿಂದ ಅವರು ಮಲಗಿರುತ್ತಾರೆ. ನಿಮಗೆ ಅಧಿಕಾರ ಬಂದರೆ ನೀವು ಮಲಗಿ ಬಿಟ್ಟಿರುವುದರಿಂದ ಆಗ ಅಧಿಕಾರಿಗಳು ನಿಂತಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ನಮಗೆ ನಿದ್ದೆ ಬರುವುದೇ ಇಲ್ಲ. ಆದ್ದರಿಂದ ನಾವು ಮಲಗುವ ಪ್ರಶ್ನೆ ಇಲ್ಲವೇ ಲ್ಲ. ನಿದ್ದೆ ಬಂದರೆ ತಾನೆ ಮಲಗುವುದು. ನಮಗೆ ನಿದ್ದೆ ಬರುವುದೇ ಕಷ್ಟ. ಬಂದ

ವೇಳೆ ನಿದ್ದೆ ಬಂದರೆ ಒಂದು ಗಂಟೆ ಅಥವಾ ಅರ್ಧ ಗಂಟೆ ಮಾತ್ರ ನಿದ್ದೆ ಬರುತ್ತದೆ. ನಮಗೆ ಪ್ರತಿನಿತ್ಯ ಆ ಸೌಲಭ್ಯಗಳು ಇಲ್ಲ ಇಲ್ಲ. ನಾವು ಇಲ್ಲಿಂದ ೯ ಗಂಟೆಗೆ ಹೋಗಬೇಕು, ಏನೋ ಸ್ವಲ್ಪ ತಿನ್ನಬೇಕು, ಆಮೇಲೆ ಮಲಗಬೇಕು, ಮತ್ತೆ ಬೆಳಿಗ್ಗೆ ಎದ್ದು ಇಲ್ಲಿಗೆ ಬರಬೇಕು. ನಮ್ಮದು ಒಂದು ರೀತಿ ಚಕ್ರ ಇದ್ದಂತೆ. ನಾವು ಮಲಗುವ ಪ್ರಶ್ನೆ ಇಲ್ಲ. ತಾವು ತಿಳಿದುಕೊಂಡ ಹಾಗ ನಾವು ಮಲಗುವುದಿಲ್ಲ, ನಾವು ಮುಂದೆ ಅಧಿಕಾರಕ್ಕೆ ಬರುವ ಪ್ರಶ್ನೆ ಇಲ್ಲ. ಒಂದು ವೇಳೆ ಅಧಿಕಾರ ಸಿಕ್ಕಿದರೆ ನಾವು ಮಲಗುವುದೇ ಇಲ್ಲ.

ಡಾ|| ಎಸ್.ಬಿ. ನಂಜಪ್ಪ.—ನಿಮಗೆ ಅಧಿಕಾರದ ಕಾತುರದಿಂದ ನಿದ್ದೆ ಬರುವುದಿಲ್ಲ.

ಶ್ರೀಮತಿ ದಮಯಂತಿ ಬೋರೇಗೌಡ.—ಮಾನ್ಯ ಅಧ್ಯಕ್ಷಿಣಿಯವರೇ, ನಿದ್ದೆ ಮಾಡುವವರನ್ನು ಎಬ್ಬಿಸಬಹುದು, ಆದರೆ ಕಳ್ಳ ನಿದ್ದೆ ಮಾಡುವವರನ್ನು ಎಬ್ಬಿಸುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷಿಣಿಯವರೆ, ನಾನು ಶ್ರೀಮತಿ ದಮಯಂತಿ ಬೋರೇಗೌಡರ ಬಗ್ಗೆ ಅಪಾರವಾದ ಗೌರವ ಇಟ್ಟುಕೊಂಡಿರುವವನು ಅವರು ಕಳ್ಳ ನಿದ್ದೆ ಎಂದಾದರೂ ಹೇಳಲಿ, ಸುಳ್ಳು ನಿದ್ದೆ ಎಂದಾದರೂ ಹೇಳಲಿ, ಅವರು ಏನೇ ಹೇಳಿದರೂ ನಾನು ತಪ್ಪು ತಿಳಿದುಕೊಳ್ಳುವುದಿಲ್ಲ ಮತ್ತು ಆ ಬಗ್ಗೆ ನನಗೆ ಚಿಂತೆ ಸಹ ಇಲ್ಲ. ನಾನು ಯಾವ ಒಬ್ಬ ಅಧಿಕಾರಿಯನ್ನು ಸಹ ಇಲ್ಲಿ ದೂಷಣೆ ಮಾಡಬೇಕೆಂದು ಇಲ್ಲ. ಸಮಗ್ರವಾಗಿ ಈ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಏನಿದ್ದಾರೆ ಇವರು ಸ್ವರ್ಗಲೋಕದಿಂದ ಇಳಿದು ಬಂದವರು. ಇವರಿಗೆ ಎರಡು ಕೊಂಬುಗಳು ಇರುತ್ತವೆ, ಇವರಿಗೆ ಎಲ್ಲಾ ವ್ಯವಸ್ಥೆ ಇರುತ್ತದೆ. ಇದು ಹೋಗಬೇಕು. ನಾನು ೧೯೬೭ನೇ ಇಸವಿಯಲ್ಲಿ ಈ ಮನೆಯ ಸದಸ್ಯನಾಗಿದ್ದೆ. ಆಗ ೧೯೬೮ರಲ್ಲಿ ಮಾನ್ಯ ವೀರೇಂದ್ರಪಾಟೀಲರೇ ಮುಖ್ಯಮಂತ್ರಿಗಳಾಗಿದ್ದರು. ಅವರು ಆಗ ಒಂದು ಸುತ್ತೋಲೆಯನ್ನು ಹೊರಡಿಸಿದ್ದರು. ಯಾರೇ ಒಬ್ಬ ಶಾಸಕರು, ಅಧಿಕಾರಿಗಳನ್ನು ಅಂದರೆ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಇರಲಿ ಅಥವಾ ಉನ್ನತ ಅಧಿಕಾರಿಗಳು ಯಾರೇ ಇರಲಿ ಅವರನ್ನು ನೋಡುವುದಕ್ಕೆ ಹೋದಾಗ ಅವರು ವ್ಯವಸ್ಥಿತವಾಗಿ ಶಾಸಕರನ್ನು ಕರೆದು ಅವರಿಗೆ ಗೌರವ ಕೊಟ್ಟು ನಿಧಾನವಾಗಿ ಮಾತನಾಡಿ ಕಳುಹಿಸಿಕೊಡತಕ್ಕಂಥ ಪ್ರವೃತ್ತಿ ಇಲ್ಲವೇ ಇಲ್ಲ. ಆ ಕಾಲದಲ್ಲಿ ಹೊರಡಿಸಿದ ಸುತ್ತೋಲೆ ಎಲ್ಲಿ ಹೋಗಿದೆಯೋ ನನಗೆ ಗೊತ್ತಿಲ್ಲ ಆ ಪ್ರವೃತ್ತಿ ಈಗ ಅಧಿಕಾರಿಗಳಲ್ಲಿ, ಇಲ್ಲವೇ ಇಲ್ಲ. ನಮ್ಮಲ್ಲಿ ಒಳ್ಳೆಯ ಅಧಿಕಾರಿಗಳು ಇಲ್ಲವೆಂದು ನಾನು ಹೇಳುವುದಿಲ್ಲ, ಇದ್ದಾರೆ. ಅಧಿಕಾರಿಗಳಲ್ಲಿ ಶೇಕಡ ೩೦–೩೫ ಭಾಗ ಒಳ್ಳೆಯವರು ಇದ್ದಾರೆ. ಇಲ್ಲವೆಂದು ನಾನು ಹೇಳುವುದಿಲ್ಲ. ಸರಾಸಗಟಾಗಿ ಎಲ್ಲರನ್ನೂ ಸರಿ ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಳ್ಳೆಯ ಅಧಿಕಾರಿಗಳು ಇದ್ದಾರೆ. ನಾನು ಇಲ್ಲಿ ಕೆಲವು ಅಧಿಕಾರಿಗಳ ಹೆಸರುಗಳನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಿಜವಾಗಿಯೂ ಅವರು ನಡೆದುಕೊಳ್ಳತಕ್ಕಂಥ ರೀತಿ ನೀತಿ ಸರಿ ಇಲ್ಲ. ಅದು ಸರಿಯಾದ ನೀತಿ ಅಲ್ಲ. ನನಗನ್ನಿಸುತ್ತದೆ, ಈ ಸಭೆಯ ಶಾಸಕರಿಗೆ ಯಾವ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳಿಗಿಂತಲೂ ಉನ್ನತವಾದ ಸ್ಥಾನವನ್ನು, ಗೌರವವನ್ನು ಜನರು ಕೊಟ್ಟಿದ್ದಾರೆ. ಇಂತಹ ಶಾಸಕರು ಅವರ ಹತ್ತಿರ ಸಾರ್ವಜನಿಕರ ಕೆಲಸಕ್ಕೆ ಸಾರ್ವಜನಿಕರ ಹಿತದೃಷ್ಟಿಯಿಂದ ಹೋಗುತ್ತಾರೆ. ಅದನ್ನು ಕಂಡು ಅಧಿಕಾರಿಗಳು ಇವರನ್ನು ಜೊತೆ ಗೌರವದಿಂದ ಗಂಭೀರವಾಗಿ ನಡೆದುಕೊಳ್ಳಬೇಕಾದುದು ಅವರ ಕರ್ತವ್ಯ. ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ತಮ್ಮಲ್ಲಿ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ರಾಜ್ಯ ಸರ್ಕಾರದ ಎಲ್ಲಾ ಅಧಿಕಾರಿಗಳಿಗೂ ಒಂದು ಸುತ್ತೋಲೆಯನ್ನು ಕಳುಹಿಸಿ, ಶಾಸಕರಾಗಲಿ ಯಾರೇ ಒಬ್ಬ ಸಾರ್ವಜನಿಕ ವ್ಯಕ್ತಿಯಾಗಲಿ ಅಧಿಕಾರಿಗಳ ಬಳಿ ಬಂದಾಗ ಅವರನ್ನು ಅತ್ಯಂತ ವಿನಯದಿಂದ ಸ್ವಾಗತ ಮಾಡಿ ಅವರ ಕೆಲಸಕಾರ್ಯಗಳನ್ನು ಕಾನೂನು ಪರವಾಗಿ ಆಗಲಿ ಅಥವಾ ನ್ಯಾಯವಾಗಿ ಆಗುವುದಾದರೆ ಮಾಡಿಕೊಡಲಿ. ಒಂದು ವೇಳೆ ನ್ಯಾಯವಾಗಿ ಇಲ್ಲವೆಂದರೆ, ನಾವು ಹೋಗಿ ನ್ಯಾಯ ಇಲ್ಲದ್ದನ್ನು ಮಾಡಬೇಕೆಂದು ಹೇಳತಕ್ಕಂಥ ಪ್ರಶ್ನೆ ಇಲ್ಲ. ಅದು ಹೋಗಬೇಕು.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ನಾನು ಒಂದು ಮಾತು ಹೇಳುವುದೇನೆಂದರೆ, ಹಿಂದೆ ಯಾವ ಒಂದು ಸುತ್ತೋಲೆಯನ್ನು ಹೊರಡಿಸಿದ್ದೀರೋ ಆ ಸುತ್ತೋಲೆ ವಿತ್‌ಡ್ರಾ ಆಗದಿದ್ದರೆ ಅದು ಯಾವತ್ತೂ ಜಾರಿಯಲ್ಲಿರುತ್ತದೆ. ನನಗೆ ತಿಳಿದ ಮಟ್ಟಿಗೆ ಆ ಸುತ್ತೋಲೆಯನ್ನು ಇದುವರೆಗೆ ವಾಪಸ್ ಪಡೆದಿಲ್ಲ. ೧೯೬೭ರಲ್ಲಿ ಹೊರಡಿಸಿದಂಥ ಸುತ್ತೋಲೆಯನ್ನು ವಾಪಸ್ ಪಡೆಯದಿದ್ದರೆ ಅದು ಈಗಲೂ ಜಾರಿಯಲ್ಲಿ ಇರುತ್ತದೆ ಎಂದು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಬರೀ ಸುತ್ತೋಲೆ ಹೊರಡಿಸುವುದಲ್ಲ. ಯಾರೂ ಆ ಸುತ್ತೋಲೆ ಮೀರುತ್ತಾರೋ ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಬೈರೇಗೌಡರು ತಪ್ಪು ತಿಳಿದುಕೊಂಡಿದ್ದಾರೆ. ಶಾಸಕರ ಬಗ್ಗೆ ಅಧಿಕಾರಿಗಳು ಯಾವ ರೀತಿ ನಡೆದುಕೊಳ್ಳಬೇಕು ಎಂದು ಶ್ರೀ ದೇವರಾಜ ಅರಸುರವರ ಕಾಲದಲ್ಲಿ ನಾನು ಮಂತ್ರಿಯಾಗಿದ್ದವನು. ಆಗಲೂ ಸಹ ಈ ಸುತ್ತೋಲೆ ಇತ್ತು. ಆದರೆ ಹಿಂದಿನ ಜನತಾದಳ ಸರ್ಕಾರದಲ್ಲಿ ಸುತ್ತೋಲೆ ಇತ್ತೋ ಇಲ್ಲವೋ ಗೊತ್ತಿಲ್ಲ. ಈಗ ಹೊಸ ಸರ್ಕಾರ ಬಂದಿದೆ. ಆದ್ದರಿಂದ ಒಂದು ಸುತ್ತೋಲೆ ಹೊರಡಿಸಲಿ.

ಶ್ರೀ ಸಿ. ಬೈರೇಗೌಡ. ಆ ಸುತ್ತೋಲೆಯನ್ನು ಹಿಂದಿನ ಸರ್ಕಾರ ಕೂಡ ವಾಪಸ್ ಪಡೆದಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—ನಾನು ರಾಜಕೀಯ ಮಾಡುವುದಕ್ಕೆ ಹೊರಟಿಲ್ಲ. ಹೊಸ ಸರ್ಕಾರ ಬಂದಿದೆ. ಹಿಂದೆ ಇದ್ದಂತಹ ಸರ್ಕಾರ ಏನು ಮಾಡಿತ್ತೋ ನನಗೆ ಗೊತ್ತಿಲ್ಲ. ನಮ್ಮ ಸರ್ಕಾರ ಒಂದು ಹೊಸ ಸುತ್ತೋಲೆಯನ್ನು ಹೊರಡಿಸಲಿ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರ ಮಾತಿನಲ್ಲಿ ಸತ್ಯ ಇದೆ. ನಾನು ಅದನ್ನು ಸಂಪೂರ್ಣವಾಗಿ ದೃಢೀಕರಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಈ ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಹೆಲಿಕ್ಯಾಪ್ಟರನ್ನು ನಾವು ಮಾರಾಟ ಮಾಡುತ್ತೇವೆಂದು ಹೇಳಿದರು. ಆ ಹೆಲಿಕ್ಯಾಪ್ಟರ್ ಏನಾಗಿದೆ, ಎಲ್ಲಿ ಇದೆ, ಎಲ್ಲಿ ನಿಂತಿದೆ, ಯಾವ ಶೆಡ್‌ನಲ್ಲಿ ಇದೆ. ಅದರ ಪರಿಸ್ಥಿತಿ ಏನು ಅಧಿಕಾರಕ್ಕೆ ಬಂದ ಹೆಲಿಕ್ಯಾಪ್ಟರ್ ಇರುವುದು ಪಾಪದ ಕೆಲಸ ನಮ್ಮ ಸರ್ಕಾರ ಈ ಹೆಲಿಕ್ಯಾಪ್ಟರನ್ನು ಇಟ್ಟುಕೊಳ್ಳುವುದಿಲ್ಲ ಕೂಡಲೇ ಅದನ್ನು ಎಲ್ಲಿಗೋ ಕಳುಹಿಸುತ್ತೇವೆ ಎಂದು ಹೇಳಿದರು. ಅದು ಎಲ್ಲಿದೆ ? ಅದರ ಪರಿಸ್ಥಿತಿ ಏನು ಅದು ಜೀವಂತವಾಗಿದೆಯೋ? ಅದು ಆರೋಗ್ಯವಾಗಿದೆಯೋ? ಅದರ ವ್ಯವಸ್ಥೆ ಏನು? ಅದು ಒಂದು ಬಿಳಿ ಆನೆ ಎಂದು ತಾವು ಹೇಳಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು, ಇನ್ನು ಮುಂದೆ ನಾವು ಆ ಹೆಲಿಕ್ಯಾಪ್ಟರನ್ನು ಉಪಯೋಗಿಸುವುದಿಲ್ಲ, ಅದನ್ನು ಹೊರಗಡೆ ಹಾಕುತ್ತೇವೆ, ಆದರಿಂದ ನಮಗೆ ಬಹಳ ಅಪಾಯ ಒದಗಿದೆ, ಅದು ಒಂದು ಅನಿಷ್ಟದ ಸಂಕೇತ ಎನ್ನುವವರೆಗೂ ಮಾತನಾಡಿದರು. ಈ ಹೆಲಿಕ್ಯಾಪ್ಟರನ್ನು ಏನು ಮಾಡುವುದು ? ಅದು ನಿಮಿತ್ತ ಮಾತ್ರ ಇರುತ್ತದೆಯೋ? ಅದರ ಪರಿಸ್ಥಿತಿ ಏನಾಗಿದೆ ? ಅದನ್ನು ಮಾರುತ್ತೀರೋ ? ಇಟ್ಟುಕೊಳ್ಳುತ್ತೀರೋ ಇಟ್ಟುಕೊಳ್ಳುವುದಾದರೆ ಧೈರ್ಯವಾಗಿ ಇಟ್ಟುಕೊಂಡು ಓಡಾಡಿ, ಮಾರುತ್ತೇವೆಂದರೆ ಮಾರಿ. ಇದಕ್ಕೆ ಒಂದು ಗತಿ ಕಾಣಿಸತಕ್ಕ ವ್ಯವಸ್ಥೆ ಏನಾದರೂ ಮಾಡಿದ್ದೀರಾ? ನಿಮ್ಮ ಸರ್ಕಾರ ಬಂದ ಮೇಲೆ ಈ ಹೆಲಿಕ್ಯಾಪ್ಟರ್‌ನಲ್ಲಿ ಯಾರು ಯಾರು ಎಲ್ಲೆಲ್ಲಿಗೆ ಓಡಾಡಿದ್ದೀರಿ ?

ಶ್ರೀ ಎಸ್. ಬಂಗಾರಪ್ಪ.—ನೀವು ಅದರಲ್ಲಿ ಓಡಾಡಬೇಕೆಂದು ಇದ್ದೀರಾ?

ಶ್ರೀ ವಾಟಾಳ್ ನಾಗರಾಜ್.—ಆಕಾಶ ನೋಡುವುದಕ್ಕೆ ನೂಕು–ನುಗ್ಗಲು ಇಲ್ಲ. ನಾವು ಆಕಾಶ ನೋಡುತ್ತಿರುತ್ತೇವೆ. ನೀವು ಮೇಲೆ ಹೋಗುತ್ತಿರುತ್ತೀರಿ, ಅದಕ್ಕೆ ನಮಗೆ ಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ಇನ್ನು ಚುನಾವಣೆಗಳ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದ ಹಿತದಲ್ಲಿರತಕ್ಕಂಥ, ನಮ್ಮ ಸರ್ಕಾರದ ಅಧೀನದಲ್ಲಿರತಕ್ಕಂಥ ಚುನಾವಣೆಗಳ ಅಧಿಕಾರವನ್ನು ಕೇಂದ್ರದ ಚುನಾವಣಾ ಆಯೋಗಕ್ಕೆ ಕೊಡಬೇಕು. ಈ ರಾಜ್ಯದಲ್ಲಿ ಇತ್ತೀಚೆಗೆ ನಡೆದ ಚುನಾವಣೆಗಳನ್ನು ನೋಡಿದರೆ ತಿಳಿಯುತ್ತದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಏನು ಸ್ವೇಚ್ಛಾಚಾರ ನಡೆಯಿತು. ಚುನಾವಣೆಗಳನ್ನು ಇಚ್ಛೆ ಬಂದ ಹಾಗೆ, ನಮಗೆ ಅನುಕೂಲ ಬಂದ ಹಾಗೆ ಯಾವ ಗಳಿಗೆಯಲ್ಲಿ ಬೇಕಾದರೂ ನಡೆಸಬಹುದು. ಇದು ಸರಿಯಲ್ಲ, ಚುನಾವಣೆಯು ಪ್ರಜಾಪ್ರಭುತ್ವದಲ್ಲಿ ಒಂದು ಬುಡ ಇದ್ದ ಹಾಗೆ. ಇವತ್ತು ನಾವು ಅದನ್ನೇ ಅಲುಗಾಡಿಸುತ್ತಿದ್ದೇವೆ. ಇವತ್ತು ತಮಗೆ ಗೊತ್ತಿದ್ದ ಹಾಗೆ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಎಷ್ಟು ನಾಚಿಕೆಗೇಡಿನ ರೀತಿಯಲ್ಲಿ ನಡೆಯಿತು? ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ಮಾಡುವುದಕ್ಕಾಗಿ ದಿನಾಂಕವನ್ನು ಗೊತ್ತುಪಡಿಸಿದ್ದೂ ಆಗಿತ್ತು, ಆಮೇಲೆ ಅದನ್ನು ಏಕಾಏಕಿ ರದ್ದು ಮಾಡಿದ್ದೂ ಆಯಿತು. ಆಮೇಲೆ ಚುನಾವಣೆಯ ದಿನಾಂಕವನ್ನು ಪುನಃ ಗೊತ್ತು ಮಾಡಿ ಚುನಾವಣೆಗಳನ್ನು ಕೊನೆಗೂ ನಡೆಸಲಾಯಿತು. ಇದು ಏನಾಗುತ್ತದೆಂದರೆ, ಚುನಾವಣೆಯ ತತ್ವಕ್ಕೆ ಇರತಕ್ಕಂಥ ಸ್ವಾತಂತ್ರ್ಯವನ್ನು ಗಾಳಿಗೆ ತೂರಿ ಸ್ವೇಚ್ಛಾಚಾರದಿಂದ, ಸರ್ವಾಧಿಕಾರದ ರೀತಿಯಲ್ಲಿ ಇವತ್ತು ಚುನಾವಣೆಗಳು ನಡೆಯುತ್ತಿವೆ. ಚುನಾವಣೆ ಬಗ್ಗೆ ಜನರಲ್ಲಿ ಒಂದು ನಂಬಿಕೆ ಬರಬೇಕು. ಚುನಾವಣೆ ಬಗ್ಗೆ ಒಂದು ಆಳವಾದ ಅಭಿಮಾನ ಜನರಲ್ಲಿ ಬರಬೇಕು. ಚುನಾವಣೆಯಲ್ಲಿ ಭಾಗವಹಿಸಬೇಕು ಎನ್ನುವ ಮನೋಭಾವ ಜನರಲ್ಲಿ ಬರಬೇಕು. ಈ ಎಲ್ಲಾ ಮನೋಭಾವನೆಗಳು ಜನರಲ್ಲಿ ಬರಬೇಕಾದರೆ ಚುನಾವಣೆಯನ್ನು ಮುಕ್ತವಾಗಿ ನಡೆಸಬೇಕು. ಕೇಂದ್ರದ ಚುನಾವಣಾ ಆಯೋಗ ಏನಿದೆ, ಅದಕ್ಕೆ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಮೇಲಿನ

ಅಧಿಕಾರವನ್ನೂ ವಹಿಸಿಕೊಡಬೇಕು. ಆಗ ಇದರ ಸಾಧಕಬಾಧಗಳು ಪರಿಹಾರವಾಗಿ ಒಂದು ಸ್ವಾತಂತ್ರ್ಯ ಉಂಟಾಗಿ ಮುಕ್ತ ಚುನಾವಣೆ ನಡೆಯುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ತಮ್ಮ ಮೂಲಕ ತಿಳಿಸುತ್ತೇನೆ. ಆಮೇಲೆ ಅದು ಪ್ರಕೃತವೋ, ಅಪ್ರಕೃತವೋ ಒಂದು ಲೋಕಾಯುಕ್ತ ನಮ್ಮ ರಾಜ್ಯದಲ್ಲಿ ಇದೆ. ಅದರ ವ್ಯವಸ್ಥೆ ಬಗ್ಗೆ ನನ್ನ ಟೀಕೆ ಇಲ್ಲ. ಅದರ ಬಗ್ಗೆ ನನ್ನದು ಯಾವ ತಕರಾರೂ ಇಲ್ಲ. ಇದೊಂದು ದೊಡ್ಡ ಬಿಳಿ ಆನೆಯಾಗಿ ನಮ್ಮ ರಾಜ್ಯದಲ್ಲಿ ಇದೆ. ಇದಕ್ಕಾಗಿ ಅಪಾರವಾದ ಹಣ ನಮ್ಮ ರಾಜ್ಯದ ಬೊಕ್ಕಸದಿಂದ ಖರ್ಚಾಗುತ್ತಿದೆ. ಇದು ಇರಬೇಕೇ ಅಥವಾ ಬದಲಾಗಬೇಕೇ ಎಂದು ನಿರ್ಧಾರ ಮಾಡಬೇಕಾದ್ದು ಸರ್ಕಾರಕ್ಕೆ ಸೇರಿದ ವಿಚಾರ. ಇದರ ಬಗ್ಗೆ ಸರ್ಕಾರ ಯಾವ ನಿರ್ಧಾರಕ್ಕೆ ಬೇಕಾದರೂ ಬರಲಿ. ಎಂದು ತಮ್ಮ ಮೂಲಕ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ಈ ಲೋಕಾಯುಕ್ತದಲ್ಲಿರತಕ್ಕಂಥ ವ್ಯವಸ್ಥೆ, ಪೀಠೋಪಕರಣ, ಅದರ ಕಾರ್ಯಾಲಯ ಮತ್ತು ಅದರ ವ್ಯಾಪ್ತಿಯನ್ನು ನಾನು ಪ್ರಶ್ನೆ ಮಾಡುತ್ತಿಲ್ಲ; ಅವರ ತೀರ್ಪನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ ಲೋಕಾಯುಕ್ತದ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ಲೋಕಾಯುಕ್ತದಲ್ಲಿ ಯಾರಿದ್ದಾರೆ, ಅವರ ಬಗ್ಗೆ ವೈಯಕ್ತಿಕವಾಗಿ ನನಗೇನೂ ಭಿನ್ನಾಭಿಪ್ರಾಯ ಇಲ್ಲ.

೧೧-೨೦ ಎ.ಎಂ.

ವೈಯಕ್ತಿಕವಾಗಿ ನನಗೆ ಅವರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ನನಗೆ ಪ್ರಾಮಾಣಿಕವಾಗಿ ಅವರ ಮೇಲೆ ಗೌರವ ಇದೆ. ರಾಜ್ಯದಲ್ಲಿ ಲೋಕಾಯುಕ್ತ ಇರಬೇಕು ಎಂದು ಒಂದು ತೀರ್ಮಾನ ಆಯಿತು. ಆ ಬಗ್ಗೆ ನಿರ್ಧಾರವೂ ಆಯಿತು, ನಾನು ಇಲ್ಲಿ ಆ ನಿರ್ಧಾರದ ವಿರುದ್ಧವಾಗಿ ಮಾತನಾಡುತ್ತಾ ಇಲ್ಲ. ನನ್ನ ಪ್ರಶ್ನೆ ಏನೆಂದರೆ, ಈ ಒಂದು ವ್ಯವಸ್ಥೆ ಇರಬೇಕೆ ಅಥವಾ ಬೇಡವೆ ಎಂಬುದು. ನಮ್ಮಲ್ಲಿ ಒಂದು ಕಡೆ ಶ್ರೇಷ್ಠ ನ್ಯಾಯಾಲಯ ಇದೆ. ಆಡಳಿತಕ್ಕೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಆಡಳಿತ ನ್ಯಾಯಮಂಡಳಿ ಇದೆ. ಇಷ್ಟೆಲ್ಲಾ ಇರುವಾಗ ಈ ಲೋಕಾಯುಕ್ತ ಇರಬೇಕೆ ಎಂಬುದು ಇನ್ನೊಂದು ಪ್ರಶ್ನೆ. ಈ ಒಂದು ವ್ಯವಸ್ಥೆಗಾಗಿ ಸರಕಾರದವರು ಮಾಡುತ್ತಿರುವ ಖರ್ಚು, ಪೀಠೋಪಕರಣಗಳಿಗಾಗಿ ಮತ್ತಿತರ ವೆಚ್ಚಗಳಿಗಾಗಿ ಸರಕಾರದ ಬೊಕ್ಕಸದಿಂದ ಮಾಡುತ್ತಿರುವ ಖರ್ಚು ಇತ್ಯಾದಿಗಳ ಬಗ್ಗೆ ಸಮಗ್ರವಾಗಿ ತಾವುಗಳು ತಮ್ಮ ಉತ್ತರದಲ್ಲಿ ವಿವರಗಳನ್ನು ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಈ ಬಗ್ಗೆ ಸರಕಾರ ತನ್ನದೇ ಆದ ರೀತಿಯಲ್ಲಿ ನಿರ್ಧಾರವನ್ನು ಕೈಗೊಳ್ಳಲಿ, ಬೇಡ ಎಂದು ನಾನು ಹೇಳುವುದಿಲ್ಲ. ಮತ್ತು ಇದರ ಬಗ್ಗೆ ನಾನು ಯಾವುದೇ ರೀತಿಯ ಆರೋಪಣೆಗಳನ್ನೂ ಮಾಡುತ್ತಾ ಇಲ್ಲ.

ಇನ್ನು ಪೋಲೀಸ್ ಆಡಳಿತದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಪೋಲೀಸ್ ಆಡಳಿತವು ಒಂದೇ ರೀತಿಯಲ್ಲಿ ಹಿಂದಿನಿಂದಲೂ ನಡೆದುಕೊಂಡು ಬರುತ್ತಾ ಇದೆ. ಇದೊಂದು ರೀತಿಯಲ್ಲಿ ಶೋಚನೀಯವಾದಂಥ ಪರಿಸ್ಥಿತಿಯಲ್ಲಿ ನಡೆದುಕೊಂಡು ಬರುತ್ತಿದೆ. ನಮ್ಮ ಪೋಲೀಸ್ ಕಚೇರಿಗಳು, ಯಾವುದೋ ಕಾಲದ. ಸಾಮ್ರಾಜ್ಯಶಾಹಿಗಳ ಕಾಲದ, ಬ್ರಿಟಿಷರ ಕಾಲದ, ಇಂಗ್ಲೀಷರ ಕಾಲದ ವಾತಾವರಣವನ್ನು ಮುಂದುವರಿಸಿಕೊಂಡು ಬಂದಿವೆ. ಇವು ಯಾವುದೇ ತರಹದ ಬದಲಾವಣೆಯಾಗದೆ ಮುಂದುವರಿದುಕೊಂಡು ಬಂದಿವೆ. ಇದಕ್ಕಾಗಿ ನಮ್ಮ ರಾಜ್ಯಮಟ್ಟದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ಒಂದು ಹೊಸ ತೆರನಾದ ಚಿಂತನೆ ಆಗಬೇಕು. ಅದರಂತೆಯೇ ಪೋಲೀಸ್ ಕಾಯಿದೆಯೂ ಸಮಗ್ರವಾಗಿ ಬದಲಾವಣೆಯಾಗಬೇಕು. ಅದರಲ್ಲಿ ೧೦೭ನೇ ನಂಬರ್‌ನ ಕಾಯಿದೆಯನ್ನು ಯಾರ್ಯಾರಿಗೆ ಬೇಕಾದರೂ ಅನ್ವಯಿಸಬಹುದು. ಈ ನಂಬರ್, ಪೋಲೀಸ್ ಕಾಯಿದೆಯಲ್ಲಿ ಬಹಳ ಕೆಟ್ಟ ನಂಬರ್ ಆಗಿದೆ. ಅದು ಸಮಾಜ ದ್ರೋಹಿಗಳಿಗೆ, ರೌಡಿಗಳಿಗೆ, ಚಾಕು-ಚೂರಿ ಸಂಸ್ಕೃತಿಯವರಿಗೆ, ಇನ್ನೂ ಮುಂತಾದ ದ್ರೋಹಿಗಳಿಗೆ ಅವರ ಮೇಲಿನ ಕ್ರಮಕ್ಕಾಗಿ ಹಾಕತಕ್ಕಂಥ ಒಂದು ನಂಬರ್. ಅವಕ್ಕಾಗಿಯೇ ಈ ನಂಬರ್‌ನ್ನು ಇಟ್ಟುಕೊಂಡಿದ್ದಾರೆ. ರಾಜಕಾರಣಿಗಳ ಮೇಲೂ ಈ ನಂಬರ್ ಹಾಕಿ ಕೇಸ್ ಮಾಡುತ್ತಾರೆ. ನನ್ನ ಮೇಲೂ ಈ ನಂಬರ್ ಪ್ರಕಾರ ಅನೇಕ ಕೇಸ್‌ಗಳನ್ನು ಹಾಕಿದ್ದರು. ೧೫ ವರ್ಷಗಳ ಹಿಂದೆ ಕನ್ನಡದ ಪರವಾಗಿ ಚಳುವಳಿ ಮಾಡಬಾರದು, ಅದು ಸಾಮಾಜಿಕ ಶಾಂತಿಗೆ ಭಂಗ ತರುತ್ತದೆ. ಮುಂತಾಗಿ ಕಾರಣ ತೋರಿಸಿ ನನ್ನ ಮೇಲೆ ಮೊಕದ್ದಮೆಗಳನ್ನು ಹಾಕಿದ್ದರು. ಆದರೆ ಅದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ತಳ್ಳಿ ಹಾಕಿದ್ದರಿಂದ ನನಗೆ ಆ ಮೂಲಕ ಅವಕಾಶ ಸಿಕ್ಕಿತ್ತು. ಪೋಲೀಸ್ ಕಾಯಿದೆಗಳು ಈಗಿನ ಸ್ಥಿತಿಗತಿಗಳಿಗೆ ಅನುಗುಣವಾಗಿ ಹೇಗೆ ಬದಲಾವಣೆಯಾಗಬೇಕು ಎಂಬ ಬಗ್ಗೆ ಒಂದು ನಿರ್ಧಾರ ಮಾಡಬೇಕು. ಆ ರೀತಿಯ ಒಂದು ಬದಲಾವಣೆಯನ್ನು ಮಾಡುವಲ್ಲಿ ಸೂಕ್ತ ಚಿಂತನೆಯಾಗಬೇಕು. ಅದನ್ನು

ಮಾಡಬೇಕಾದುದು ನಮ್ಮ ಕರ್ತವ್ಯ ಕೂಡ ಆಗಿದೆ. ಹೀಗೆ ಒಂದು ಆಮೂಲಾಗ್ರ ಬದಲಾವಣೆಯನ್ನು ತರದಿದ್ದರೆ ಏನೊಂದು ಸಾಮಾಜಿಕ ನ್ಯಾಯ ಜನರಿಗೆ ದೊರಕಬೇಕಾಗಿದೆ ಅದು ದೊರಕಲಾರದು ಎಂದು ನಾನು ಪ್ರಾಮಾಣಿಕವಾಗಿ ಹೇಳಬಯಸುತ್ತೇನೆ. ಇವೊತ್ತು ರಾಜ್ಯದ ಎಲ್ಲಾ ಕಡೆಗಳಲ್ಲಿ ದರೋಡೆ, ಸುಲಿಗೆ, ಮತ್ತಿತರ ದುಷ್ಕೃತ್ಯಗಳು ಅವ್ಯಾಹತವಾಗಿ ನಡೆದುಕೊಂಡು ಬರುತ್ತಿದೆ. ಇತ್ತೀಚೆಗೆ ಎಂದೂ ಇಲ್ಲದಷ್ಟು ಪ್ರಮಾಣದಲ್ಲಿ ಹೆಚ್ಚುತ್ತಿದೆ. ಈ ಬಗ್ಗೆ ೧೦ ವರ್ಷಗಳ ಒಂದು ಚಿತ್ರವನ್ನು ನಾವು ಅವಲೋಕಿಸಿದಾಗ ಈ ಒಂದು ಕಾನೂನು ಸುವ್ಯವಸ್ಥೆ ಎಷ್ಟು ಕೆಟ್ಟಿದೆ ಎನ್ನುವುದು ತಿಳಿಯುತ್ತದೆ. ಇದನ್ನು ನೆನೆಸಿಕೊಂಡರೆ ಭಯವಾಗುತ್ತದೆ. ದುಷ್ಕರ್ಮಿಗಳು ಭಯ-ಭೀತಿ ಇಲ್ಲದೆ ಧಾರಾಳವಾಗಿ ಸಮಗ್ರವಾಗಿ ದರೋಡೆ, ಸುಲಿಗೆ, ಕೊಲೆ ಇತ್ಯಾದಿಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ, ಬೆಂಗಳೂರು ನಗರ ಮತ್ತು ಸುತ್ತ ಮುತ್ತ ಎಷ್ಟು ಇಂಥ ಪ್ರಕರಣಗಳು ನಡೆಯುತ್ತಿವೆ ಎನ್ನುವುದನ್ನು ದಿನವೂ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಯಾರ ಮನೆಗೆ ಬೇಕಾದರೂ ಹಗಲಲ್ಲೇ ನುಗ್ಗುತ್ತಾರೆ, ಸುಲಿಗೆ ಮಾಡುತ್ತಾರೆ, ಯಾವ ಮಹಿಳೆಯರ ತಾಳಿಯನ್ನು ಬೇಕಾದರೂ ಹಗಲಲ್ಲೇ ಕಿತ್ತುಕೊಂಡು ಹೋಗುತ್ತಾರೆ. ತಮಗೆ ಅನ್ನಿಸಿದ್ದನ್ನು ಮಾಡುವಂಥ ಒಂದು ಪರಿಸ್ಥಿತಿ, ವಾತಾವರಣ ನಿರ್ಮಾಣವಾಗಿದೆ. ಇದರ ಪರಿಣಾಮವಾಗಿ ನಾಗರೀಕರಿಗೆ ಒಂದು ಭಯಭೀತಿ ಮೂಡುವಂತಾಗಿದೆ. ಇವನ್ನೆಲ್ಲಾ ದೂರ ಮಾಡಿ, ಸಾರ್ವಜನಿಕರಲ್ಲಿ ಇರತಕ್ಕಂಥ ಭಯದ ವಾತಾವರಣವನ್ನು ಹೋಗಲಾಡಿಸುವಂಥ ಒಂದು ಪೋಲೀಸ್ ಆಡಳಿತ ನಮಗೆ ಇವೊತ್ತು ಬೇಕು ನಾಗರೀಕರು, ಜನತೆ, ಯಾವುದೇ ವಿಧವಾದಂಥ ಭಯದ ವಾತಾವರಣದ ಅಡಿಯಲ್ಲಿ ಬಾಳುವಂತಾಗದೆ ಶಾಂತಿಯಿಂದ, ನೆಮ್ಮದಿಯಿಂದ ಬಾಳುವಂತಹ ಒಂದು ವಾತಾವರಣವನ್ನು ನಿರ್ಮಾಣ ಮಾಡುವಂಥ ಪೋಲೀಸ್ ಆಡಳಿತ ಇವೊತ್ತು ನಮಗೆ ಬೇಕಾಗಿದೆ. ತಮಗೆ ಈ ಸಂದರ್ಭದಲ್ಲಿ ಒಂದು ನಿದರ್ಶನವನ್ನು ಕೊಡಬಯಸುತ್ತೇನೆ. ಈ ಸಭೆಯಲ್ಲಿ ಇದೇ ಅಧಿವೇಶನದಲ್ಲಿ ಸಾಕಷ್ಟು ಚರ್ಚೆಯಾದ ಒಂದು ವಿಚಾರ ಅಂದರೆ ಕಾಡುಗಳ, ಮರಗಳ ಕಳ್ಳ, ದಂತಗಳ್ಳ, ವೀರಪ್ಪನ್ ವಿಚಾರ. ಇಷ್ಟಾದರೂ ಪರಿಣಾಮ ಏನಾಯಿತು? ಇವೊತ್ತಿಗೂ ಅವನನ್ನು ಸರಕಾರದವರಿಂದ ಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲ. ಈ ದುಷ್ಕರ್ಮಿಯ ವಿಚಾರದಲ್ಲಿ ಸುದ್ದಿಯು ರಾಜ್ಯ ಮತ್ತು ರಾಷ್ಟ್ರದ ಎಲ್ಲರ ಗಮನ ಸೆಳೆಯಿತು. ಇದೇ ಸಭೆಯಲ್ಲಿ ಅವನನ್ನು ಹಿಡಿಯುವ ಬಗ್ಗೆ ಸಮಗ್ರ ಚಿಂತನೆ ನಡೆಯಿತು. ಅದಕ್ಕಾಗಿ ವಿಶೇಷ ಅಧಿಕಾರಿಯನ್ನು ನೇಮಿಸಲಾಯಿತು. ಆದರೆ ಇವೊತ್ತಿಗೂ ಆತನನ್ನು ಹಿಡಿಯುವುದಕ್ಕೆ ಆಗಲಿಲ್ಲ, ಅವನನ್ನು ಹಿಡಿದು ಶಿಕ್ಷಿಸುವಂಥ ಒಂದು ಕ್ರಮವನ್ನು ಸರಕಾರದ ಕೈಯಿಂದ ತೆಗೆದುಕೊಳ್ಳುವುದಕ್ಕೆ ಇಂದಿಗೂ ಆಗಲಿಲ್ಲ. ಇದಕ್ಕೆ ನಾವು ಏನು ಹೇಳಬೇಕು? ಇದೊಂದೇ ವಿಚಾರದಲ್ಲಿ ಈ ಸರಕಾರ ರಾಜೀನಾಮೆಯನ್ನು ಕೊಡತಕ್ಕಂಥ ಪರಿಸ್ಥಿತಿಯನ್ನು ನಾವು ಕಾಣಬಹುದು. ಒಬ್ಬ ಕಳ್ಳ, ಖದೀಮ, ದರೋಡೆಕೋರ, ಕೊಲೆಗಾರ, ಗಂಧ, ದಂತಗಳ ಕಳ್ಳ ಸಾಗಾಣಿಕೆಗಾರ ಇಂದಿಗೂ ಸರಕಾರದ ಕಣ್ಣಿನಿಂದ ತಪ್ಪಿಸಿಕೊಂಡಿದ್ದಾರೆ. ಒಬ್ಬ ದುಷ್ಕರ್ಮಿ ಇಡೀ ನಮ್ಮ ನಾಡನ್ನು, ಸಮಾಜವನ್ನು ಎದುರಿಸಿ ಕಣ್ತಪ್ಪಿಸಿಕೊಂಡು ತಿರುಗಾಡುತ್ತಿರಬೇಕಾದರೆ ಅವನನ್ನು ಈ ನಮ್ಮ ಸರಕಾರ, ಪೋಲೀಸ್ ಆಡಳಿತವು ಹಿಡಿಯುವಲ್ಲಿ ಸಫಲರಾಗಿಲ್ಲ ಅಂದರೆ ಈ ವ್ಯವಸ್ಥೆಗೆ ನಾವು ಏನು ಅನ್ನಬೇಕು? ಇಲ್ಲಿ ನಾನು ಯಾವ ಅಧಿಕಾರಿಯನ್ನು ಉದ್ದೇಶಿಸಿ ಮಾತನಾಡುತ್ತಾ ಇಲ್ಲ, ಒಟ್ಟು ಆಡಳಿತದ ಬಗ್ಗೆ ಮಾತನಾಡುತ್ತಿದ್ದೇನೆ. ಇಲಾಖೆಯಲ್ಲಿರುವ ಒಳ್ಳೆಯ ಅಧಿಕಾರಿಗಳ ಬಗ್ಗೆ ನಾನು ಗೌರವವನ್ನು ಹೊಂದಿದ್ದೇನೆ. ಇಲಾಖೆಯ ಅಧಿಕಾರಿಗಳು ಉತ್ತಮ ಕರ್ತವ್ಯ ನಿರ್ವಹಣೆಯ ಮೂಲಕ ಜನತೆಗೆ ತಮ್ಮ ಕಾರ್ಯನಿಷ್ಠೆಯನ್ನು ತೋರಿಸಬೇಕು. ಜನತೆಗೆ ಈ ಇಲಾಖೆಯ ಮೂಲಕ ಸಮಗ್ರ ರಕ್ಷಣೆ ನೀಡುವಂತಾಗಬೇಕು. ಆದರೆ ಇವೊತ್ತು ನಮ್ಮಲ್ಲಿ ಇದು ನಡೆದಿಲ್ಲ. ಈ ಮಾತನ್ನು ಇಂದು ಅತ್ಯಂತ ಕಳಕಳಿಯಿಂದ ಹೇಳುತ್ತಾ ಇದ್ದೇನೆ. ನಮ್ಮ ರಾಜ್ಯದ ಪೋಲೀಸ್ ವ್ಯವಸ್ಥೆಯು ರಾಜ್ಯದ ಜನಸಂಖ್ಯೆಗೆ ಅನುಗುಣವಾಗಿ ಇಲ್ಲ. ಸಿಬ್ಬಂದಿಯು ಕಡಿಮೆ ಇದೆ. ಪೋಲೀಸ್ ಸಿಬ್ಬಂದಿಯನ್ನು ಇನ್ನೂ ಜಾಸ್ತಿ ಮಾಡಬೇಕು. ಪೋಲೀಸ್ ಕಾನ್‌ಸ್ಟೇಬಲ್‌ಗಳು ಏನಿದ್ದಾರೆ ಅವರಿಗೆ ಸಮಗ್ರವಾಗಿ ಭತ್ಯೆ, ಸಂಬಳ, ಉಡುಪು ಇತ್ಯಾದಿಗಳನ್ನು ಸೂಕ್ತ ರೀತಿಯಲ್ಲಿ ಕೊಡಬೇಕು. ಪೋಲೀಸರಿಗೆ ಕೊಟ್ಟಿರತಕ್ಕಂಥ ಟೋಪಿ ಕೂಡ ಬದಲಾವಣೆಯಾಗಬೇಕು. ಜೋರಾಗಿ ಗಾಳಿ ಬಂದರೆ ಈ ಟೋಪಿ ಹಾರಿಹೋಗುತ್ತದೆ ಎಂದು ಅನೇಕರು ದೂರುತ್ತಿದ್ದಾರೆ. ಪೋಲೀಸರು ಅಂದರೆ ಜನರಲ್ಲಿ ಶಿಸ್ತು, ಗೌರವಗಳು ಮೂಡುವಂಥ ಒಂದು ಪರಿಸ್ಥಿತಿ ನಿರ್ಮಾಣ ಆಗಬೇಕು. ಇವೊತ್ತು 'ಪೋಲೀಸ್' ಎಂಬ ಪದವನ್ನು ತೆಗೆದು 'ಆರಕ್ಷಕ' ಎಂಬ ಪದವನ್ನು ಹಾಕಿಕೊಂಡಿದ್ದಾರೆ. ನಾನು ಮೊದಲಿನಿಂದಲೂ ಕನ್ನಡದ ಬಗ್ಗೆ ಅಪಾರ ಅಭಿಮಾನ ಮತ್ತು ಗೌರವವನ್ನು ಹೊಂದಿ, ಆಚರಿಸಿಕೊಂಡು ಬಂದಿರತಕ್ಕಂಥವನು. ಆದರೂ ಕೂಡ ಆರಕ್ಷಕ ಎಂಬ ಕಠಿಣ ಪದದ ಬದಲಾಗಿ ಪೋಲೀಸ್ ಎಂಬ ಪದವನ್ನು ಸರಳವಾಗಿ ಕನ್ನಡಕ್ಕೆ ತೆಗೆದುಕೊಂಡು ಅದನ್ನು ಬಳಸಲು ನನ್ನ ಅಭ್ಯಂತರವೇನಿಲ್ಲ. ನಮ್ಮ ಆರಕ್ಷಕ

ಎಂಬ ಪದಕ್ಕೆ ಇಪ್ಪೊತ್ತು ಯಾರೂ ಕೂಡ ಹೆದರುವುದಿಲ್ಲ. ಆ ಪದದಿಂದ ಒಂದು ಗ್ರಹಿಕೆಯೂ ಬರುವುದಿಲ್ಲ. ಯಾರೋ, ಆರಕ್ಷಕರೋ, ರಾಕ್ಷಸರೋ ಎಂಬ ಹಾಗೆ ಆಗುತ್ತದೆ. ಆದುದರಿಂದ 'ಪೋಲೀಸ್' ಎಂಬ ಪದವನ್ನು ಇಂಗ್ಲೀಷ್ ಪದ ಎಂದು ತಿಳಿದುಕೊಳ್ಳದೆ. ಇದನ್ನು ಕನ್ನಡ ನಿಘಂಟಿನ ಶಬ್ದಕೋಶದಲ್ಲಿ ಸೇರಿಸಬೇಕು. ಕನ್ನಡಕ್ಕೆ ಅನೇಕ ಬೇರೆ ಬೇರೆ ಭಾಷೆಗಳಿಂದ ಶಬ್ದಗಳು ಬಂದು ಸೇರಿಕೊಂಡಿವೆ. ಹಾಗೆಯೇ ಕನ್ನಡವೂ ಕೂಡ ಬೇರೆ ಬೇರೆ ಭಾಷಾಕೋಶದಲ್ಲಿ ಸೇರಿಕೊಂಡಿರಬಹುದು. ಇದು ಭಾಷಾ ವಿಜ್ಞಾನಕ್ಕೆ ಸಂಬಂಧಪಟ್ಟ ವಿಚಾರ. ಆದರೆ ಪೋಲೀಸ್ ಎಂಬ ಶಬ್ದವನ್ನು ತೆಗೆದು ಬಿಟ್ಟು ಆರಕ್ಷಕ ಎಂದು ಹೇಳಿದ ಕೂಡಲೇ. ಅದು ಕನ್ನಡದಲ್ಲಿ ಒಂದು ಕ್ರಾಂತಿಯಾಯಿತು ಎಂದು ನಾನು ಭಾವಿಸುವುದಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ.—ಹಿಂದೆ ಆಣೆ, ಪಾವಾಣೆ, ಪೈ, ಇದ್ದುದು ಹೋಗಿ ಈಗ ನಯಾಪೈಸೆ ಇತ್ಯಾದಿಯಾಗಿ ಬಂದು ರೂಢಿಯಾಗಿಲ್ಲವೆ ? ಹಾಗೆಯೇ ಇದೂ ಆಗುತ್ತದೆ.

ಶ್ರೀ ಪಾಟಾಳ್ ನಾಗರಾಜ್.—ಪೋಲೀಸ್ ಇಲಾಖೆಯ ಕನ್ನಡ ಶಬ್ದಗಳು ಬಹಳ ಕಠಿಣವಾಗಿವೆ. ಆರಕ್ಷಕ, ನಿರೀಕ್ಷಕ, ಅಧಿನಿರೀಕ್ಷಕ, ವೃತ್ತ ನಿರೀಕ್ಷಕ ಎಂದೆಲ್ಲಾ ಮಾಡಿಕೊಂಡು ಬಿಟ್ಟಿದ್ದಾರೆ. ಇವುಗಳನ್ನು ಉಚ್ಚರಿಸಬೇಕಾದರೆ ಪದ್ಯ ಬಾಯಿಪಾಠ ಮಾಡಿಕೊಂಡತೆ ಕಷ್ಟಪಟ್ಟು ಉಚ್ಚರಿಸಬೇಕಾಗುತ್ತದೆ. ಇಂಥ ಶಬ್ದಗಳು ಜನತೆಯ ಆಡುಭಾಷೆಯೊಂದಿಗೆ ಮಿಳಿತವಾಗಿ, ಸುಲಭವಾಗಿ ಬಳಸಲು ಯೋಗ್ಯವಾಗಿರಬೇಕು. ಈ ಬಗ್ಗೆ ಚಿಂತನೆ ಮಾಡಬೇಕೆಂದು ನಾನು ಅರಿಕೆ ಮಾಡುತ್ತೇನೆ.

ಉಪಾಧ್ಯಕ್ಷರು.—ತಾವು ಗ್ರಾಮಾಭಿವೃದ್ಧಿಯ ಬಗ್ಗೆ ತಮ್ಮ ಭಾಷಣ ಶುರು ಮಾಡಿದ್ದೀರಿ, ಈಗ ಜೈಲ್‌ಗೆ ಬರಬೇಕು ....

ಶ್ರೀ ಪಾಟಾಳ್ ನಾಗರಾಜ್.—ಈಗ ನಾನು ಜೈಲ್‌ಗೆ ಬರುವ ಹಾಗಿಲ್ಲ, ಆದರೆ ಹಿಂದೆ ಎಷ್ಟೋ ಸಾರಿ ಜೈಲ್‌ಗೆ ಹೋದ ಅನುಭವ ಮಾತ್ರ ಇದೆ. ಈ ರಾಜ್ಯದಲ್ಲಿ ನನ್ನನ್ನು ಸುಮಾರು ಒಂದು ಸಾವಿರ ಸಾರಿ ಲಾಕಪ್‌ನಲ್ಲಿ ಇಟ್ಟಿರಬಹುದು. ಸುಮಾರು ಹತ್ತಾರು ಬಾರಿ ಕಾರಾಗೃಹದಲ್ಲಿ ಅಂದರೆ ಸೆಂಟ್ರಲ್ ಜೈಲಿನಲ್ಲಿ ಇಟ್ಟಿರಬಹುದು. ೧೯೬೨ನೇ ಇಸವಿಯಲ್ಲಿ ನಿಜಲಿಂಗಪ್ಪನವರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು. ಆಗ ನಾನು ಶಾಸಕನೂ ಆಗಿರಲಿಲ್ಲ, ನಗರಸಭೆಯ ಸದಸ್ಯನೂ ಆಗಿರಲಿಲ್ಲ. ಈ ರಾಜ್ಯದ ಭಾಷೆ ಕನ್ನಡವಾಗಬೇಕು, ರಾಜ್ಯದ ಚಿತ್ರಮಂದಿರಗಳಲ್ಲಿ ಕನ್ನಡ ಚಲನ ಚಿತ್ರ ಪ್ರದರ್ಶನವಾಗಬೇಕು, ಈ ರಾಜ್ಯದ ಹೆಸರು ಕರ್ನಾಟಕ ಆಗಬೇಕು ಎಂದು ಮೆರವಣಿಗೆ ಮಾಡಿದಾಗ ಪೋಲೀಸರು ಬೂಡ್ಸ್‌ನಲ್ಲಿ ಹೊಡೆದರು. ಏಳನೇ ಸೆಪ್ಟೆಂಬರ್ ೧೯೬೨ರಲ್ಲಿ ನನಗೆ ಪೋಲೀಸರು ಈ ರೀತಿ ಮಾಡಿದರು. ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪೋಲೀಸ್‌ನವರು ಎಲ್ಲಿಯವರೆಗೆ ಹೋಗಿದ್ದಾರೆಂದರೆ ಅವರು ಯಾರನ್ನೂ ಬಿಡುವುದಿಲ್ಲ. ಅವರೇ ಬೇರೆ. ನಾವೇ ಬೇರೆ. ತಾವು ನೋಡಬಹುದು, ಪೋಲೀಸ್ ವಾಹನದಲ್ಲಿ, ಪೋಲೀಸ್ ವ್ಯಾನ್‌ನಲ್ಲಿ ಅವರು ಇರುತ್ತಾರೆ. ಅವರೇ ಬೇರೆ. ಅವರು ಆ ವಾಹನದಿಂದ ಕೆಳಗಡೆ ಇಳಿದರು ಎಂದರೆ ಯಾರು ಸಿಕ್ಕುತ್ತಾರೋ ಅವರಿಗೆಹೊಡೆಯುತಾರೆ. ಕೊನೆಗೆ ಅವರ ಹೆಂಡತಿ ಮಕ್ಕಳು ಸಿಕ್ಕಿದರೂ ಕೂಡಾ ಹೊಡೆದು ಬಿಡುತ್ತಾರೆ. ಅದರಲ್ಲಿ ಏನೂ ಅನುಮಾನ ಪಡಬೇಕಾಗಿಲ್ಲ.

ಉಪಾಧ್ಯಕ್ಷರು.—ಅವರೇನೂ ಭೇದಭಾವ ಮಾಡುವುದಿಲ್ಲ.

ಶ್ರೀ ಪಾಟಾಳ್ ನಾಗರಾಜ್.—ಅದಕ್ಕಾಗಿಯೇ ಅವರನ್ನು ವ್ಯಾನ್‌ಸಲ್ಲಿ ಇಟ್ಟಿರುವುದು. ಹೊರಗಡೆ ಅವರನ್ನು ಏತಕ್ಕೆ ಬಿಡುವುದಿಲ್ಲ ಎಂದರೆ, ಹೊರಗಡೆ ಬಿಟ್ಟರೆ ಸಿಕ್ಕಾಪಟ್ಟೆ ಹೋಗುತ್ತಾರೆ ಎಂದು ವ್ಯಾನ್‌ನಲ್ಲಿ ಕೂಡಿಹಾಕುತ್ತಾರೆ. ಮೈಸೂರು ಮೃಗಾಲಯದಲ್ಲಿ ಇರುವ ಹಾಗೆ ಅವರನ್ನು ಇಟ್ಟಿದ್ದಾರೆ. ಅದಕ್ಕಾಗಿಯೇ ವ್ಯಾನ್‌ನೊಳಗೆ ಅವರನ್ನು ಇಟ್ಟಿರುವುದು. ಇದು ಸ್ಪಷ್ಟ. ಅದನ್ನು ನಾನು ನನ್ನ ಜೀವನದಲ್ಲಿ ಬಹಳ ಸಾರಿ ಅನುಭವಿಸಿದ್ದೇನೆ. ಇನ್ನು ನನ್ನ ಮೇಲೆ ಅನೇಕ ಮೊಕದ್ದಮೆಗಳು ನ್ಯಾಯಾಲಯಗಳಲ್ಲಿ ಇವೆ. ಅವಕ್ಕೆ ಹೋಗುತ್ತಿದ್ದೇನೆ. ಬರುತ್ತಿದ್ದೇನೆ. ನಡೆಸುತ್ತಿದ್ದೇನೆ. ಅದು ಬೇರೆ ವಿಚಾರ. ಅದರ ಬಗ್ಗೆ ಚಿಂತೆ ಇಲ್ಲ, ಒಟ್ಟಿನಲ್ಲಿ ಪೋಲೀಸ್ ವ್ಯವಸ್ಥೆ ಬದಲಾಗಬೇಕು. ಪೋಲೀಸ್ ಠಾಣೆಗಳು ಬದಲಾಗಬೇಕು. ಜನಸಾಮಾನ್ಯರು ಪೋಲೀಸ್ ಠಾಣೆಯೊಳಗೆ ಬಂದಾಗ ಪೋಲೀಸಿನವರು ಬಳಸುವ ಭಾಷೆ ಇದೆಯಲ್ಲಾ, ಆ ಪೋಲೀಸ್ ಭಾಷೆ ಅದು ಒಂದು ಗುಪ್ತವಾದಂಥ ಶಬ್ದಕೋಶ. ಅದನ್ನು ನಾನು ಇಲ್ಲಿ ಹೇಳುವ ಹಾಗೆ ಇಲ್ಲ. ಆ ಭಾಷೆಯನ್ನು ಕೇಳಿ ಅನುಭವಿಸಿರುವವರಿಗೇ ಗೊತ್ತು. ಅವರ ಬಾಯಲ್ಲಿ ಭಗವಂತ ಏನು ಸೃಷ್ಟಿ ಮಾಡಿದ್ದಾನೊ, ಆ ಸರಸ್ವತಿ ಅವರ ನಾಲಗೆಯ ಮೇಲೆ ಯಾವ

ಭಾಷೆಯನ್ನು ತಿದ್ದಿದ್ದಾರೋ ದೇವರಿಗೇ ಗೊತ್ತು. ಆ ಭಾಷೆ ಅವರಿಗಾಗಿಯೇ ಸೃಷ್ಟಿಯಾಗಿದೆ. ಈ ಹೊಸ ಭಾಷೆ ಇವತ್ತು ನಮ್ಮ ಕನ್ನಡ ಸಾಹಿತ್ಯದ ಭಾಷೆ. ನಿಜವಾಗಲೂ ಈ ಸಭೆಯಲ್ಲಿ ನಾವು ಏನಾದರೂ ಹೇಳಿದರೆ ತಾವು ಸಂಸದೀಯ ಭಾಷೆಯನ್ನು ಬಳಸಿ ಎಂದು ಹೇಳುತ್ತೀರಿ. ನಾವು ಪೋಲೀಸ್ ಠಾಣೆಗೆ ಹೋದರೆ ಅವರು ಬಳಸುವ ಭಾಷೆ ಹೇಳುವುದಕ್ಕೂ ಬೇಡ, ನೀವು ಕೇಳುವುದಕ್ಕೂ ಬೇಡ, ನಾವು ಅನುಭವಿಸಿದ್ದೇವೆ.

ಉಪಾಧ್ಯಕ್ಷರು.—ನಿಮಗೆ ಗೊತ್ತಿದೆ.

ಶ್ರೀ ಬಿ. ಎಂ. ಇದಿನಬ್ಬ.—ಆ ಭಾಷೆಯ ಪುಸ್ತಕವಾಗಿದ್ದರೆ ಒಳ್ಳೆಯದಿತ್ತು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಇದಿನಬ್ಬನವರು ಕನ್ನಡ ಸಾಹಿತ್ಯದ ಬಗ್ಗೆ ಅಪಾರವಾದ ಅಭಿಮಾನ ಇರತಕ್ಕವರು, ಕನ್ನಡದ ಕವಿಗಳು ಅಪಾರವಾಗಿ ಕನ್ನಡದ ಸೇವೆಯನ್ನು ಮಾಡಿರತಕ್ಕಂಥವರು. ಪೋಲೀಸ್ ಭಾಷೆ ಏನು ಎಂದು ಅವರಿಗೆ ಗೊತ್ತಿದೆ. ಆ ಭಾಷೆ ಪೋಲೀಸರಿಗಾಗಿಯೇ ಇರತಕ್ಕ ಒಂದು ಭಾಷೆಯಾಗಿದೆ. ತಮಗೆ ಒಂದು ನಿದರ್ಶನವನ್ನು ತಮಗೆ ಕೊಡುತ್ತೇನೆ. ಒಂದು ಸಾರಿ ನನ್ನನ್ನು ಅಲಸೂರು ಗೇಟ್‌ಪೋಲೀಸ್ ಠಾಣೆಯ ಲಾಕಪ್‌ನಲ್ಲಿ ಇಟ್ಟರು. ಸುಮಾರು ೧೫ ವರ್ಷಗಳ ಹಿಂದೆ ಎಂದು ಕಾಣುತ್ತದೆ. ಪೋಲೀಸ್ ಕಮೀಷನರ್ ಬಂದರು, ಬಹಳ ಚೆನ್ನಾಗಿ ಮಾತನಾಡಿದರು, ಕಾಫಿಯನ್ನು ತರಿಸಿದರು, ನಾನು ಕುಳಿತುಕೊಂಡೆ. ನಮ್ಮ ಮೆರವಣಿಗೆಯಲ್ಲಿ ಏನೋ ಒಂದು ದುರಂತವಾಯಿತು. ಯಾರಿಗೋ ಹೊಡೆದರು ಏನೋ ಆಯಿತು. ಅಷ್ಟು ವಿಶ್ವಾಸದಿಂದ ಮಾತನಾಡುತ್ತಿದ್ದ ಕಮೀಷನರರು ಕೂಡಲೆ ವ್ಯಾಘ್ರನಾಗಿಬಿಟ್ಟ. ಈ ವಾಟಾಳ್ ನಾಗರಾಜನನ್ನು ಒದ್ದು ಹಾಕಿ ಒಳಗಡೆ ಎಂದು ಬಿಟ್ಟರು. ಕಾಫಿ ಕೊಡಿ ಎಂದು ಹೇಳಿದವರು, ಕುಳಿತುಕೊಳ್ಳಿ ಎಂದು ಹೇಳಿದವರು. ಲಾಕಪ್‌ನಲ್ಲಿ ಹಾಕಿರಿ ಎಂದು ಹೇಳಿದರು. ನಂತರ ನನ್ನನ್ನು ಲಾಕಪ್‌ನಲ್ಲಿ ಇಟ್ಟರು. ನಾನು ಲಾಕಪ್‌ನಲ್ಲಿ ಹೋದರೆ ಅಲ್ಲಿ ಮತ್ತೊಬ್ಬ ಮಹನೀಯ ಇದ್ದಾನೆ. ನಾನು ಹೋಗಿ ಕುಳಿತೆ, ಅವರು ನೀವು ಯಾರು ಸ್ವಾಮಿ ಎಂದು ಕೇಳಿದರು. ಅವನು ತಮಿಳು, ಕನ್ನಡ ಅರ್ಧಂಬರ್ಧ ಮಾತನಾಡುತ್ತಿದ್ದ ಕೊಯಮುತ್ತೂರಿನವನು. ನಾನು ತಾವು ಯಾರು ಎಂದೆ? ನಾವು ಕೋಟಾ ನೋಟಿನವರು ಸ್ವಾಮಿ ಎಂದ ನೀವು ಯಾರು ಎಂದು ನನ್ನನ್ನು ಕೇಳಿದ ನಾನು ಅದೇ ಸ್ವಾಮಿ ಎಂದೆ. ಇನ್ನೇನು ಮಾಡೋಣ, ಒಟ್ಟಿಗೆ ಸೇರಿದಮೇಲೆ ನಾವು ಇದಕ್ಕಾಗಿ ಬಂದಿರುವವರು ಸ್ವಾಮಿ ಎಂದು ಹೇಳಿದೆ. ಅದಕ್ಕೆ ಅವರು ಸರಿ ಸ್ವಾಮಿ, ಹೊರಗಡೆ ಹೋದ ಮೇಲೆ ನಾವೆಲ್ಲಾ ಸೇರಿ ಇದರ ಬಗ್ಗೆ ಒಂದು ಚಿಂತನೆಯನ್ನು ಮಾಡೋಣ ಎಂದರು ಪರಿಸ್ಥಿತಿ ಅಲ್ಲಿಯವರೆಗೆ ಬಂತು. ತಮಗೆ ಒಂದು ನಿದರ್ಶನವನ್ನು ಹೇಳಿದೆ ಅಷ್ಟೆ. ಇದು ಸಾಧ್ಯ. ಆಗ ಬೆಂಗಳೂರು ನಗರದ ಕಮಿಷನರ್ ಆಗಿದ್ದವರು ಚಾಂಡಿ ಅವರು.

ಉಪಾಧ್ಯಕ್ಷರು.—ಇಬ್ಬರು ಹೊರಗಡೆ ಬಂದಮೇಲೆ ಏನಾಯಿತು ?

ಶ್ರೀ ವಾಟಾಳ್ ನಾಗರಾಜ್.—ಹೊರಗಡೆ ಇಬ್ಬರೂ ಬರಲಿಲ್ಲ. ಅವನನ್ನು ಎಲ್ಲಿ ಬಿಡುತ್ತಾರೆ ? ಇದು ಒಂದು ನಿದರ್ಶನ. ಈ ರೀತಿ ಅನೇಕ ಕಡೆ ನನ್ನನ್ನು ಇಟ್ಟಿದ್ದಾರೆ. ನಾನು ಪೋಲೀಸರ ಕೈಯಲ್ಲಿ ಅನೇಕ ವಿಧದಲ್ಲಿ ತೊಂದರೆಯನ್ನು ಪಟ್ಟಿದ್ದೇನೆ. ಅದರ ಬಗ್ಗೆ ನಾನು ಚಿಂತನೆಪಡುವುದಕ್ಕೆ ಹೋಗುವುದಿಲ್ಲ. ನಾನು ಹೋರಾಟ ಮಾಡಿದ್ದೇನೆ. ಅದಕ್ಕೆ ಅವರು ಏನು ಕೊಟ್ಟರೂ ಅದರ ಪ್ರತಿಫಲವನ್ನು ಅನುಭವಿಸುವುದಕ್ಕೆ ನಾನು ಸಿದ್ಧನಿದ್ದೇನೆ. ಅದರ ಬಗ್ಗೆ ನಾನು ಚಿಂತನೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವೊತ್ತು ದೇಶ ಬದಲಾವಣೆ ಆಗಿದೆ, ಸಮಾಜ ಬದಲಾವಣೆ ಆಗಿದೆ, ಜನ ಬದಲಾವಣೆ ಆಗಿದ್ದಾರೆ, ನಾಗರೀಕತೆ ಬೆಳೆಯುತ್ತಿದೆ. ಆದರೆ ಪೋಲೀಸರಲ್ಲಿ ಆ ನಾಗರೀಕತೆ ಬೆಳೆಯುಲಿಲ್ಲ ಅಂದರೆ ತಪ್ಪಾಗುತ್ತದೆ. ಆದುದರಿಂದ ಪೋಲೀಸರ ನಾಗರೀಕತೆ ಬೆಳವಣಿಗೆ ಆಗುವುದಕ್ಕೆ ಒಂದು ಸಮಗ್ರವಾದ ಚಿಂತನೆ ಆಗಬೇಕು. ಮಾನ್ಯ ಮೊಯಿಲಿಯವರೆ, ತಾವು ಸಂಸದೀಯ ಸಚಿವರು ಆಗಿದ್ದೀರಿ. ದಯಮಾಡಿ ಈ ಬಗ್ಗೆ ಹೊಸ ಬೆಳಕನ್ನು ತಮ್ಮ ಸರ್ಕಾರಕ್ಕೆ, ಮಂತ್ರಿಮಂಡಲಕ್ಕೆ ಚೆಲ್ಲಿ, ಒಂದು ಹೊಸ ರೂಪವನ್ನು ಬದಲಾವಣೆಯನ್ನು ತರಬೇಕು, ತರದೇ ಇದ್ದರೆ ಈ ರಾಜ್ಯದಲ್ಲಿ ಬಹಳ ಅಪಚಾರವನ್ನು ಮಾಡಿದ ಹಾಗೆ ಆಗುತ್ತದೆ. ತಾವು ಜೈಲಿಗೆ ಹೋಗಿಲ್ಲ. ನಾನು ಹೋಗಿದ್ದೇನೆ.

ಉಪಾಧ್ಯಕ್ಷರು.—ಸಧ್ಯ ನಾನು ಹೋಗಿಲ್ಲ....

ಶ್ರೀ ವಾಟಾಳ್ ನಾಗರಾಜ್.—ತಾವು ಜೈಲಿನ ಸಂದರ್ಶನಕ್ಕಾದರೂ ಹೋಗಬೇಕು. ಧರ್ಮರಾಯ ಎಂದೂ ನರಕಕ್ಕೆ ಹೋದವನಲ್ಲ. ಆದರೆ ಯಾರದೊ ಮಾತನ್ನು ಕೇಳಿ, ಏನೋ ಹೇಳಿದ್ದಕ್ಕೆ

ಧರ್ಮರಾಯ ನರಕದಲ್ಲಿ ನರಕವನ್ನು ಅನುಭವಿಸುವುದಕ್ಕೆ ಆಗದಿದ್ದರೂ ಸಹ, ಧರ್ಮರಾಯನನ್ನು ನರಕದ ದೃಷ್ಯವನ್ನು ನೋಡುವುದಕ್ಕೆ ಕರೆದುಕೊಂಡು ಹೋಗಿದ್ದರಂತೆ. ಆದ್ದರಿಂದ ತಾವು ಧರ್ಮ ರಾಯನ ತರಹ ಇದ್ದೀರಿ, ಧರ್ಮ ಮಾತೆ ತಾವು.

ಉಪಾಧ್ಯಕ್ಷರು.—ಹಾಗೇ ನಾನು ದೃಷ್ಯ ನೋಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ದಯವಿಟ್ಟು ಒಂದು ಸಾರಿ ಸಂದರ್ಶನ ಮಾಡಿ. ನಾವೂ ನಿಮ್ಮ ಜೊತೆಯಲ್ಲಿ ಬರುತ್ತೇವೆ. ಅಲ್ಲಿನ ಪರಿಸ್ಥಿತಿಯನ್ನು ತಾವು ನೋಡಿ. ಮಾನ್ಯ ಸಿಂಧ್ಯರವರೂ ಜೈಲಿನಲ್ಲಿದ್ದರು. ಇನ್ನೂ ಅನೇಕ ಜನ ಈ ಕಡೆ ಕುಳಿತಿದ್ದವರೆಲ್ಲ ಜೈಲಿನಲ್ಲಿದ್ದವರು.

ಉಪಾಧ್ಯಕ್ಷರು.—ಜೈಲಿಗೆ ಹೋದವರು ಬಹಳ ಜನ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಆದ್ದರಿಂದ ಜೈಲು ಸುಧಾರಣೆ ಆಗಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ,—ಮತ್ತೆ ಜೈಲಿಗೆ ಹೋಗಬೇಕಾ.

ಉಪಾಧ್ಯಕ್ಷರು.—ಜೈಲು ಸುಧಾರಣೆ ಮಾಡಿ ಹೋಗಬೇಕು.

ಶ್ರೀ ವಾಟಾಳ್ ನಾಗರಾಜ್.—ಜೈಲು ಸುಧಾರಣೆ ಆಗಬೇಕು. ಸುಧಾರಣೆ ಅಂದರೆ ಬರೀ ರಾಜ ಕಾರಣಿಗಳಿಗೆ ಎಂದು ಅಲ್ಲ. ಊಟದ ವ್ಯವಸ್ಥೆ, ಎಲ್ಲ ವ್ಯವಸ್ಥೆ ಇರಬೇಕು. ಅಲ್ಲಿರತಕ್ಕ ಖೈದಿಗಳು ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ರೀತಿಯಲ್ಲಿ ಖೈದಿಗಳಾಗಿ ಬಂದಿರುತ್ತಾರೋ ಆ ಪರಿಸ್ಥಿತಿ ಬೇರೆ. ಅವರ ಊಟ, ವ್ಯವಹಾರ, ನೀತಿ ಪ್ರತಿಯೊಂದೂ ಸಹ ಬದಲಾವಣೆ ಆಗಲಿ. ಜೈಲು ಸುಧಾರಣೆ ಆಗಬೇಕಾದುದು ಅತ್ಯಂತ ಅವಶ್ಯಕತೆ ಇದೆ

ಶ್ರೀ ಸಿ.ಪಿ. ಮೂಡಲಗಿರಿಯಪ್ಪ.—ಜೈಲು ಸುಧಾರಣೆ ಆದರೆ ಎಲ್ಲ ಅನುಕೂಲಗಳು ಅಲ್ಲಿ ಸಿಗುತ್ತದೆ ಎಂದು ಜೈಲಿಗೆ ಹೋದವರು ವಾಪಸ್ ಬರುವುದಿಲ್ಲ ; ಅಲ್ಲಿಯೇ ಇರುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಜೈಲು ಸುಧಾರಣೆ ಆಗಲೇಬೇಕು. ಅವರ ಬಗ್ಗೆ ಚಿಂತನೆ ಆಗಬೇಕು ಏಕೆಂದರೆ, ನಾವೆಲ್ಲಾ ಜೈಲಿನಲ್ಲಿ ಇದ್ದವರು ಅಲ್ಲಿನ ಪರಿಸ್ಥಿತಿಯನ್ನು ನೋಡಿದ್ದೇವೆ. ತಮಗೆ ಅಲ್ಲಿನ ವಿವರಣೆ ಕೊಡುವುದಕ್ಕೆ ಆ ಪದಗಳನ್ನು ಹೇಳುವುದಕ್ಕೆ ನನ್ನ ಮನಸ್ಸಿನಲ್ಲಿ ತವಕವಾಗಿ, ನಾಚಿಕೆ ಆಗಿದೆ. ಅದನ್ನು ಹೇಳುವುದು ಬೇಡ- ಅದರೂ ಬದಲಾವಣೆ ಆಗಬೇಕಾದ್ದು ಕರ್ತವ್ಯ. ಅನೇಕರು ಜೈಲಿನಲ್ಲಿ ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಾ ಇರತಕ್ಕವರು ಸರ್ಕಾರದ ಕಾನೂನಿನಲ್ಲಿ ಇಷ್ಟು ದಿವಸ, ಇಷ್ಟು ವರ್ಷ ಕಳೆದ ಮೇಲೆ ಅವರನ್ನು ಆಯಾ ಕಾಲದಲ್ಲಿ ಬಿಡುಗಡೆ ಮಾಡಬೇಕು ಎಂದು ಇದೆ. ಇವೊತ್ತು ಅದನ್ನು ಪರಿಶೀಲನೆ ಮಾಡುತ್ತಿಲ್ಲ, ಸಮಿತಿಗಳು ಸೇರಿಲ್ಲ. ಎಷ್ಟೋ ಜನಗಳು ಬಿಡುಗಡೆ ಆಗುತ್ತಿಲ್ಲ, ಅವರುಗಳಿಗೆ ಮುಕ್ತಿಯೇ ಇಲ್ಲ ಎನ್ನುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಇದರ ಬದಲಾವಣೆ ಸಹ ಸಮಗ್ರವಾಗಿ ಆಗಬೇಕು. ಆ ಮೇಲೆ ಈ ಪೋಲೀಸ್ ಕಾನ್‌ಸ್ಟೇಬಲ್‌ಗಳು, ಪೇದೆಗಳು ಇದ್ದಾರಲ್ಲ ಅವರ ಕೆಲಸಕ್ಕೆ ಒಂದು ಕಾಲದಮಿತಿ ಇರಬೇಕು. ೨೪ ಗಂಟೆ ಕಾಲವೂ ಅವರು ಪೋಲೀಸ್ ಠಾಣೆಯಲ್ಲಾಗಲಿ ಒಂದು ಚಳುವಳಿ ಬಂದರೆ ಆಗಲಿ, ಯಾರಾದರೂ ದೊಡ್ಡ ವ್ಯಕ್ತಿಗಳು ಬಂದರೆ, ಅವರನ್ನು ನೋಡಬೇಕಾದರೆ ಕಾಯಬೇಕಾಗಿದೆ. ಇದು ಸಹ ಬದಲಾವಣೆ ಆಗಬೇಕಾಗಿದೆ. ಅವರಿಗೆ ಸಹ ಬೇರೆ ನೌಕರರಿಗೆ ಇರತಕ್ಕ ಸವಲತ್ತುಗಳು, ಸೌಲಭ್ಯಗಳು ದೊರಕಿ ಅವರ ಪರಿಸ್ಥಿತಿ ಸುಧಾರಣೆ ಆಗಬೇಕು. ಅವರಿಗೆ ಎಂಟು ಗಂಟೆ ಕೆಲಸ ಅಥವಾ ಒಂಭತ್ತು ಗಂಟೆ ಕೆಲಸ ಇರಬೇಕು. ಅದಕ್ಕಿಂತ ಹೆಚ್ಚಿಗೆ ಕೆಲಸ ಮಾಡಬೇಕಾದರೆ ಹೆಚ್ಚಿನ ಭತ್ಯ, ಹೆಚ್ಚಿನ ವೇತನ ಕೊಡತಕ್ಕ ರೀತಿಯಲ್ಲ ಆಗಬೇಕು, ಮತ್ತೆ ಅಗ್ನಿಶಾಮಕ ದಳದವರ ವಿಚಾರ ಹೇಳುವುದಾದರೆ ಅವರ ಸೇವೆ ಅಪಾರವಾದುದು. ಅವರು ಸೇವೆಗಾಗಿಯೇ ಹುಟ್ಟಿರತಕ್ಕ ಜನ ಅವರ ಪರಿಸ್ಥಿತಿಯನ್ನು ನಾವು ನೋಡಿಲ್ಲ, ಅವರಿಗೆ ಸಂಬಳ ಸಾರಿಗೆ ವ್ಯವಸ್ಥೆ ಸರಿಯಿಲ್ಲ. ಅನೇಕ ಜನ ಅಗ್ನಿಶಾಮಕ ದಳದ ಪೇದೆಗಳು ಅವರ ಅಧಿಕಾರಿಗಳ ಮನೆಯಲ್ಲಿ ಜೀತದ ಆಳುಗಳಾಗಿದ್ದಾರೆ ಜೀತದಾಳುಗಳಾಗಿ ಕೆಲಸ ಮಾಡುತ್ತಿದ್ದಾರೆ, ಇವೆಲ್ಲಾ ಪರಿಸ್ಥಿತಿ ತಪ್ಪಬೇಕು. ಅವರಿಗೆ ಹೊಸ ವಿಚಾರ ಧಾರೆ ಬರುವುದಕ್ಕೆ ಸರ್ಕಾರ ಸಮಗ್ರವಾಗಿ ಒಂದು ಚಿಂತನೆ ಮಾಡಬೇಕು. ವಾರ್ತಾ ಇಲಾಖೆಯ ಬಗ್ಗೆ ಹೇಳುವುದಾದರೆ, ಪ್ರತಿ ಜಿಲ್ಲೆಗೂ ಒಂದೊಂದು ಜಿಲ್ಲಾ ವಾರ್ತಾ ಭವನ ಬೇಕು, ತಾವು ಸಹ ವಾರ್ತಾ ಇಲಾಖೆಯಲ್ಲಿ ಇದ್ದವರು. ಈಗ ಮಾನ್ಯ ಘೋರ್ಪಡೆಯವರು ಅದನ್ನು ವಹಿಸಿಕೊಂಡಿದ್ದಾರೆ. ವಾರ್ತಾ ಇಲಾಖೆ ಬಹಳ ಜವಾಬ್ದಾರಿಯುತವಾದ ಇಲಾಖೆ, ಇದು ಬೇರೆ ಇಲಾಖೆಗಳಿಗಿಂತ ಉತ್ತಮವಾದ ಇಲಾಖೆ. ಈ ಇಲಾಖೆ ಇರತಕ್ಕ ಸ್ಥಳ ಯಾವುದು ಅಂದರೆ ಅದು ಇನ್ನೇನು ಮುರಿದು ಬೀಳುವಂತಹ ಅರಳೀ ಮರ.

ಅದು ಮುರಿದುಬಿದ್ದು ನಿರ್ದೇಶಕರ ತಲೆ ಮೇಲೆ ಬಿದ್ದು, ಉಪನಿರ್ದೇಶಕರು ಹತರಾಗಿ ಆಗ ರಾಜ್ಯದ ವಾರ್ತಾ ಇಲಾಖೆಯ ಕಾರ್ಯಾಲಯವನ್ನು ಕಟ್ಟಿಸುತ್ತೀರೇನೋ ಆ ಸ್ಥಳ ಏನು ಇದೆ, ಅದು ಸರ್ಕಾರದ್ದು. ಅಲ್ಲಿ ನೀವು ೫-೬ ಮಹಡಿ ಕಟ್ಟಿಸಿ. ಒಂದು ಸುಂದರವಾದ, ವ್ಯವಸ್ಥಿತವಾದ ಕಟ್ಟಡ ಕಟ್ಟಿಸಿ. ವಾರ್ತಾ ಇಲಾಖೆ ಅಂದರೆ ಅದಕ್ಕೆ ಒಂದು ಪ್ರಾಮುಖ್ಯತೆ ಇದೆ. ಆ ಪ್ರಾಮುಖ್ಯತೆಯನ್ನು ನೀವು ತರಬೇಕು. ಅಧಿಕಾರಿಗಳಲ್ಲಿ ಬಹಳ ತಾರತಮ್ಯ ಇದೆ. ಬಹಳ ಪ್ರಮುಖರಾದ ಅನೇಕ ಅಧಿಕಾರಿಗಳನ್ನು ತುಳಿದಿದ್ದೀರಿ ಅಧಿಕಾರಿಗಳನ್ನು ಹೊರಗೆ ಹಾಕಿದ್ದೀರಿ, ಅವರ ಸೇವೆಯನ್ನು ಸರಿಯಾಗಿ ಉಪಯೋಗಿಸಿಕೊಂಡಿಲ್ಲ, ಇದನು ನಾನು ನೋಡಿದ್ದೇನೆ. ಅದ್ದರಿಂದ ವಾರ್ತಾ ಇಲಾಖೆಗೆ ಸಮಗ್ರವಾದಂಥ ಕಾಯಕಲ್ಪವನ್ನು ಕೊಡಲೇಬೇಕು. ನನ್ನ ಪ್ರಕಾರ ಪ್ರತಿ ತಾಲ್ಲೂಕಿಗೆ ಒಂದು ವಾರ್ತಾಭವನವನ್ನು ನೀವು ಕಟ್ಟಿಸಿದರೂ ನಾನು ಸಂತೋಷ ಪಡುತ್ತೇನೆ. ಸರ್ಕಾರಕ್ಕೆ ಜನತೆಗೆ ವಾರ್ತೆಯನ್ನು ತಲುಪಿಸುವುದಕ್ಕೆ ಇದು ಒಂದು ಸೇತುವೆ. ಇದು ಈಗ ಸಮಗ್ರವಾಗಿ ನಡೆಯುತ್ತಾ ಇಲ್ಲ, ಇದು ಸುಮ್ಮನೆ ಏನೋ ಕೆಲವು ಮಂತ್ರಿಗಳ ಹೇಳಿಕೆ, ಅಧಿಕಾರಿಗಳ ಹೇಳಿಕೆಯನ್ನು ಮುದ್ರಿಸಿ ಪತ್ರಿಕಾಲಯಕ್ಕೆ, ಶಾಸಕರಿಗೋ, ಯಾರಿಗೋ ತಲುಪಿಸತಕ್ಕಂಥ ಒಂದು ಮುರುಕು ಪೋಸ್ಟ್ ಆಫೀಸ್ ಇದ್ದಹಾಗೆ ಇದೆ: ಅದು ಆಗಬಾರದು, ವಾರ್ತಾ ಇಲಾಖೆಗೆ ವಿಶೇಷವಾದ ಸ್ಥಾನ, ಗೌರವಕೊಡತಕ್ಕಂಥಾದ್ದು ನಿಮ್ಮ ದೃಷ್ಟಿಯಲ್ಲಿರಬೇಕು. ಆದ್ದರಿಂದ ಸಮಗ್ರ ಚಿಂತನೆಯಾಗಿ, ವಾರ್ತಾ ಇಲಾಖೆ ಬದಲಾವಣೆಯಾಗಬೇಕು ಮತ್ತೆ ವಾರ್ತಾ ಇಲಾಖೆಗೆ ಕೊಡತಕ್ಕಂಥ ಹಣ ಎಷ್ಟು ಎಂದು ನಾನು ತಿಳಿದಿದ್ದೇನೆ. ಸುಮಾರು ಐದು ಐದೂಕಾಲು ಕೋಟಿ ಇರಬೇಕು, ನನ್ನ ಪ್ರಕಾರ ೨೫ ಕೋಟಿ ಕೊಡಿ. ಇವತ್ತು ಈ ಇಲಾಖೆ ಜೀವಂತವಾಗಿ ಉಳಿಯಬೇಕು. ಪ್ರತಿ ಜಿಲ್ಲೆಗೂ ಒಂದೊಂದು...

ಶ್ರೀ ಶ್ರೀರಂಗದೇವರಾಮುಲು.—ಮಾನ್ಯ ಅಧ್ಯಕ್ಷರೆ, ಅವರಿಗೆ ಸ್ವಲ್ಪ ಬೇಗ ಮುಗಿಸಲಿಕ್ಕೆ ಹೇಳಿ. ಮಾತನಾಡುವವರು ಇನ್ನೂ ಬಹಳ ಮಂದಿ ಇದ್ದಾರೆ, ದಯಮಾಡಿ ಅವರು ಬೇಗ ಮುಗಿಸಿದರೆ ಬಹಳ ಜನರಿಗೆ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಇವತ್ತು ವಾರ್ತಾಭವನ ಆಗಬೇಕು, ವ್ಯಕ್ತಿಚಿತ್ರಗಳು ಬರಬೇಕು. ಕರ್ನಾಟಕ ಏಕೀಕರಣಕ್ಕೆ ದುಡಿದಂಥ ರಾಷ್ಟ್ರನಾಯಕ ಶ್ರೀ ಎಸ್. ನಿಜಲಿಂಗಪ್ಪನವರ ವ್ಯಕ್ತಿ ಚಿತ್ರ ಒಂದು ವರ್ಷವಾಯಿತು. ಇನ್ನೂ ಬಿಡುಗಡೆಯಾಗಲಿಲ್ಲ. ಈ ಪ್ರಕಾರ ಅನೇಕ ಕವಿಗಳು ಸ್ವಾತಂತ್ರ್ಯ ಹೋರಾಟಗಾರರು, ದಾರ್ಶನಿಕರು ಇವರೆಲ್ಲರ ವ್ಯಕ್ತಿ ಚಿತ್ರಗಳನ್ನು ತೆಗೆದು ಬೇಗ ಬೇಗ ಬಿಡುಗಡೆ ಮಾಡತಕ್ಕಂಥ ಒಂದು ವ್ಯವಸ್ಥೆಯಾಗಲಿ. ಸಣ್ಣ ಪತ್ರಿಕೆಗಳ ಬಗ್ಗೆ ತಮಗೆ ಓದಾರ್ಯವಿರಲಿ. ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಸಣ್ಣ ಪತ್ರಿಕೆಗಳ ಬೆಳವಣಿಗೆಗೆ ಒಂದು ಹೊಸ ಆಯಾಮವನ್ನು ಕೊಟ್ಟರು. ಇವತ್ತು ಅವರನ್ನು ನೆನೆಸಿಕೊಳ್ಳಬೇಕು. ವಿಶ್ವೇಶ್ವರಯ್ಯನವರು ಹಾಕಿದಂಥ ಆ ಅಡಿಪಾಯದಲ್ಲಿ ನಾವೆಲ್ಲಾ ಇದ್ದೇವೆ. ಸರ್ ಎಂ. ವಿಶ್ವೇಶ್ವರಯ್ಯನವರು ನಮ್ಮ ರಾಜ್ಯದ ಒಬ್ಬ ತಾಂತ್ರಿಕ, ಒಳ್ಳೆಯ ಶ್ರೇಷ್ಠ ವ್ಯಕ್ತಿ, ಅವರು ಸಣ್ಣ ಪತ್ರಿಕೆಗಳಿಗೆ ಬೆಂಬಲ ಕೊಡಬೇಕು ಎಂದು ಆ ಕಾಲದಲ್ಲಿ ಹೇಳುತ್ತಾ ಇದ್ದರು. ಶ್ರೀ ಎಂ.ಬಿ. ಸಿಂಗ್‌ರವರು ಪ್ರಜಾವಾಣಿ ಪತ್ರಿಕೆಯ ಮಾಜಿ ಸಂಪಾದಕರು ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಯಾಗಿತ್ತು. ಆ ಸಮಿತಿಯ ವರದಿ ಸರ್ಕಾರಕ್ಕೆ ಬಂದಿದೆ. ಆ ವರದಿಯನ್ನು ಬಿಡುಗಡೆ ಮಾಡಿ, ಕಾರ್ಯರೂಪಕ್ಕೆ ತೆಗೆದುಕೊಂಡು ಬನ್ನಿ. ಮತ್ತು ತಾವು ಕನಿಷ್ಟ ವರ್ಷದಲ್ಲಿ ೬ ಸಂದರ್ಭಗಳಲ್ಲಾದರೂ, ೬ ಹಬ್ಬಗಳಲ್ಲಾದರೂ ಸಣ್ಣ ಪತ್ರಿಕೆಗಳಿಗೆ ಜಾಹೀರಾತನ್ನು ನೀಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿ. ಇವತ್ತು ಸಣ್ಣ ಪತ್ರಿಕೆಗಳನ್ನು ನಡೆಸತಕ್ಕಂಥಾದ್ದೇ ಒಂದು ದೊಡ್ಡ ಮಹಾಪಾಪವಾಗಿದೆ. ಸಣ್ಣ ಪತ್ರಿಕೆಯಲ್ಲಿ ಅನೇಕ ವಿಚಾರಗಳು ಬರುತ್ತವೆ. ತಮಗೆ ಹೇಳುವುದಾದರೆ, ಇವತ್ತು ಮೈಸೂರು ನಗರದಲ್ಲಿ ತಾವು ಪತ್ರಿಕೆಗಳನ್ನು ನೋಡಬೇಕು. ಸಣ್ಣ ಪತ್ರಿಕೆಗಳಾದರೂ ದೊಡ್ಡ ಪ್ರಮಾಣವ ಪತ್ರಿಕೆಗಳನ್ನು ದಾಟಿ ಮುಂದೆ ಹೋಗತಕ್ಕಂಥ ವಿಚಾರ ಇದೆ. ಈ ರೀತಿ ಮಂಗಳೂರಿನಲ್ಲಿದೆ, ಕೋಲಾರದಲ್ಲಿದೆ, ಬೆಳಗಾವಿಯಲ್ಲಿದೆ, ಶಿವಮೊಗ್ಗದಲ್ಲಿದೆ, ಎಲ್ಲಾ ಕಡೆ ಇದೆ. ಆದ್ದರಿಂದ ಸಣ್ಣ ಪತ್ರಿಕೆಗಳ ಬಗ್ಗೆ...

ಶ್ರೀ ಬಿ.ಎಂ. ಇದಿನಬ್ಬ.—ಅತ್ಯುತ್ತಮವಾದ ಒಳ್ಳೊಳ್ಳೆಯ ಸಣ್ಣ ಪತ್ರಿಕೆಗಳು ಈಗ ನಿಂತು ಹೋಯಿತು.

ಶ್ರೀ ವಾಟಾಳ್ ನಾಗರಾಜ್.—ಆದುದರಿಂದ ಈ ಸಣ್ಣ ಪತ್ರಿಕೆಗಳಿಗೆ ಜಾಹೀರಾತನ್ನು ಕೊಡುವ ನೀತಿ ಏನಿದೆ ಅದು ಉದಾರ ನೀತಿಯಾಗಲಿ. ದೊಡ್ಡ ಪತ್ರಿಕೆಗಳಿಗೆ ನೀವು ಜಾಹೀರಾತನ್ನು ಕೊಡದೇ

ಇದ್ದರೂ ಅವು ನಡೆಯುತ್ತವೆ. ದೊಡ್ಡ ಪತ್ರಿಕೆಗೆ ಕೊಡತಕ್ಕಂಥ ಎರಡು ಪುಟ ಜಾಹೀರಾತಿನಲ್ಲಿ ಇರತಕ್ಕಂಥ ಸಣ್ಣ ಪತ್ರಿಕೆಗಳಿಗೆಲ್ಲ ನೀವು ಜಾಹೀರಾತು ಕೊಡಬಹುದು. ಈ ಪತ್ರಿಕೆಯನ್ನು ನಡೆಸತಕ್ಕಂಥ ವ್ಯಕ್ತಿ ಏನು ಇರುತ್ತಾನೆ ಆ ಬಗ್ಗೆ ಚಿಂತನೆ ಮಾಡಬೇಕು. ಪತ್ರಕರ್ತರ ಬಗ್ಗೆ ನಿಮಗೆ ಅಪಾರವಾದಂಥ ಚಿಂತನೆ ಇರಬೇಕು. ಪತ್ರಿಕೆಗಳ ಮೂಲಕ ತಮ್ಮ ಸೇವೆಯನ್ನು ಮಾಡಿ ನಿವೃತ್ತರಾಗಿರುವವರನ್ನು ಅಂದರೆ ವರ್ಷಕ್ಕೆ ಒಬ್ಬಿಬ್ಬರನ್ನು ಕರೆದು ಮಾಸಾಶನ, ಗೌರವಧನ ಕೊಡಬೇಡಿ, ಸಮಗ್ರವಾಗಿ ಕರೆಯಿರಿ. ಎಷ್ಟು ಜನ ಇದ್ದಾರೆಂದು ತಿಳಿದು ಸಮಗ್ರವಾಗಿ ಕರೆಯಿರಿ. ಅವರಿಗೆ ಕನಿಷ್ಟ ೫೦೦ ರೂಪಾಯಿಯನ್ನಾದರೂ ಮಾಸಾಶನ ಕೊಡಬೇಕು. ದುರ್ದೈವದಿಂದ ಅವರು ನಿಧನರಾದರೆ ಅವರ ಪತ್ನಿಯರಿಗೆ ಕನಿಷ್ಟ ೩೦೦ ರೂಪಾಯಿಯಾದರೂ ಸಿಗತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನು ಮಕ್ಕಳ ಚಿತ್ರಗಳ ಬಗ್ಗೆ ಒಂದು ಹೊಸ ಚಿಂತನೆ ಆಗಬೇಕು. ಮಕ್ಕಳ ಚಿತ್ರಗಳು ಹೆಚ್ಚಾಗಿ ಬರಬೇಕಾಗುತ್ತದೆ. ಮಕ್ಕಳ ಚಿತ್ರಗಳ ಬಗ್ಗೆ ಹೊಸ ಚಿಂತನೆ ನಡೆದು, ಮಕ್ಕಳ ಚಿತ್ರಗಳನ್ನು ತೆಗೆಯತಕ್ಕ ನಿರ್ಮಾಪಕರುಗಳಿಗೆ, ನಿರ್ದೇಶಕರುಗಳಿಗೆ ಹೆಚ್ಚಿನ ರೀತಿಯಲ್ಲಿ ಬೆಂಬಲವನ್ನು ಸಹಕಾರವನ್ನು ಕೊಡಬೇಕಾದುದು ಸರ್ಕಾರದ ಕರ್ತವ್ಯ. ಆ ದಿಸೆಯಲ್ಲಿ ತಾವು ಹೊಸ ಚಿಂಶನೆಯನ್ನು ಮಾಡಬೇಕು. ಕನ್ನಡ ಚಿತ್ರಗಳ ಕಡ್ಡಾಯ ಪ್ರದರ್ಶನ. ಇವತ್ತು ಕನ್ನಡ ಚಿತ್ರಗಳ ಕಡ್ಡಾಯ ಪ್ರದರ್ಶನ ಬರೀ ಬಾಯಿಮಾತಿನಲ್ಲಿ ಇದೆ. ಈ ಸಭೆಯಲ್ಲಿ ನಮ್ಮ ಸಂಸದೀಯ ಸಚಿವರು, ಹಿಂದೆ ಮಾತನಾಡುವಾಗ ಆಶಾದಾಯಕವಾದಂಥ, ಸಂತೋಷವಾದಂಥ ಒಂದು ಮಾತನ್ನು ಹೇಳಿದ್ದರು. ಕಡ್ಡಾಯ ಚಿತ್ರಗಳ ಪ್ರದರ್ಶನ ಬಗ್ಗೆ ಕಾನೂನು ಮಾಡುವುದಕ್ಕೂ ನಾವು ಸಿದ್ಧರಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದ್ದರು. ಅದನ್ನು ಕೇಳಿ ನನಗೆ ಒಂದು ಹಂಡೆ ಹಾಲು ಕುಡಿದಂತಾಯಿತು. ಸಂತೋಷ, ಕನ್ನಡ ಚಿತ್ರಗಳ ಕಡ್ಡಾಯ ಪ್ರದರ್ಶನ ನಮ್ಮ ರಾಜ್ಯದಲ್ಲಿ ಆಗಬೇಕಾಗಿದೆ. ನಮ್ಮ ರಾಜ್ಯದಲ್ಲಿ ಕನ್ನಡ ಚಿತ್ರಗಳಿಗೆ ಸಿಗದಿದ್ದರೆ ಬೇರೆ ರಾಜ್ಯಗಳಲ್ಲಿ ಕನ್ನಡ ಚಿತ್ರಗಳಿಗೆ ಎಲ್ಲಿ ಮನ್ನಣೆ ಸಿಗುತ್ತದೆ. ನಮ್ಮ ರಾಜ್ಯದಲ್ಲಿ ಕನ್ನಡ ಚಿತ್ರಗಳ ಕಡ್ಡಾಯ ಪ್ರದರ್ಶನಕ್ಕೆ ಕಾನೂನು ತರಬೇಕು. ಹೊರರಾಜ್ಯದಿಂದ ಬರತಕ್ಕ ಚಿತ್ರಗಳಿಗೆ ಯಾವುದೇ ವಿಧವಾದಂಥ ಸಹಕಾರವಾಗಲೀ, ಮನರಂಜನೆ ತೆರಿಗೆಯ ರಿಯಾಯಿತಿಯಾಗಲೀ ಯಾವುದನ್ನೂ ಕೊಡಬೇಕಾಗಿಲ್ಲ. ಅದಕ್ಕೆ ಸೌಲಭ್ಯಗಳನ್ನು ಸಮಗ್ರವಾಗಿ ನಿಲ್ಲಿಸಬೇಕು. ಇವತ್ತು ಕನ್ನಡ ಚಿತ್ರಗಳು ಯಾವ ಮಟ್ಟದಲ್ಲಿ ಬರುತ್ತವೆ ಎನ್ನುವುದರ ಬಗ್ಗೆ ಕೂಡ ಚಿಂತನೆ ಮಾಡಬೇಕಾಗಿದೆ. ಕನ್ನಡ ಚಿತ್ರಗಳ ಬಗ್ಗೆ ಅಪಾರವಾಗಿ ಹೋರಾಟ ನಡೆಸಿರತಕ್ಕ ಮನುಷ್ಯ ನಾನು. ಈ ಸಭೆಯ ನಾಯಕರಾಗಿರತಕ್ಕ ಸನ್ಮಾನ್ಯ ವೀರೇಂದ್ರ ಪಾಟೀಲರು ಸುಮಾರು ೨೦ ವರ್ಷಗಳ ಹಿಂದೆ ನಂದಿಬೆಟ್ಟದಲ್ಲಿ ಕನ್ನಡ ಚಿತ್ರರಂಗದ ಬಗ್ಗೆ ಭಾರೀ ದೊಡ್ಡ ವಿಚಾರ ಸಂಕಿರಣವನ್ನು ಉದ್ಘಾಟನೆ ಮಾಡಿದ್ದರು. ಅವೊತ್ತು ಅವರು ಕನ್ನಡ ಚಿತ್ರಗಳ ಬಗ್ಗೆ ಹೊಸ ಘೋಷಣೆ ಮಾಡಿದ್ದರು. ಕನ್ನಡ ಚಿತ್ರರಂಗದ ಬೆಳವಣಿಗೆಗೆ ವಿಶಾಲವಾದ ತಳಹದಿಯನ್ನು ಕೊಡುತ್ತೇವೆನ್ನುವ ಮಾತನ್ನು ಹೇಳಿದ್ದರು, ಇವತ್ತು ಅವರಿಗೆ ಅದನ್ನು ಜ್ಞಾಪಿಸುತ್ತಾ ಇದ್ದೇನೆ. ಪ್ರಜಾವಾಣಿ ಪತ್ರಿಕೆಯ ಮಾಲೀಕ ವರ್ಗದ ಕೆ. ವೆಂಕಟಸ್ವಾಮಿಯವರು ಅಂದಿನ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಇವತ್ತು ಅವರನ್ನೆಲ್ಲಾ ನಾವು ಜ್ಞಾಪಿಸಿಕೊಳ್ಳಬೇಕು. ಅವರು ಮಾಡಿದಂಥ ಹೊಸ ಕ್ರಾಂತಿಯನ್ನು ನೆನಸಿಕೊಳ್ಳಬೇಕು. ನಾನು ಇವತ್ತು ಹೇಳುತ್ತೇನೆ. ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶಿಸುವ ಬಗ್ಗೆ ಕಾನೂನಾಗಬೇಕು. ನಿಜವಾಗಿಯೂ ಕನ್ನಡದ ನೆಲದಲ್ಲಿ ಇಡೀ ಪ್ರಪಂಚವೇ, ವಿಶ್ವವೇ ನೋಡಿ ಹೊಗಳತಕ್ಕ ಚಿತ್ರಗಳು ಬಂದಿದ್ದನ್ನು ನಾವು ನೋಡಿದ್ದೇವೆ. ಕಣಗಾಲ್ ಪುಟ್ಟಣ್ಣನವರು ಒಂದು ಉನ್ನತವಾದಂಥ ಚಿತ್ರಗಳನ್ನು ತೆಗೆದರು. ಅವರು ಇವತ್ತು ನಮ್ಮ ಮುಂದೆ ಇಲ್ಲ. ನಮ್ಮ ಚಿತ್ರ ಬ್ರಹ್ಮರುಗಳು ಅನೇಕ ಜನ, ಬಿ. ವಿಠಲಾಚಾರ್ಯ, ಹುಣಸೂರು ಕೃಷ್ಣಮೂರ್ತಿ, ಕು ರಾ. ಸೀತಾರಾಮಶಾಸ್ತ್ರಿ, ಕಣಗಾಲ್ ಪ್ರಭಾಕರ ಶಾಸ್ತ್ರಿ. ಸೋರಟ್ ಅಶ್ವಥ್, ಸಿ.ವಿ. ಶಿವಶಂಕರ್, ಗೀತಪ್ರಿಯ, ಈ ರೀತಿ ಹೇಳುವುದಕ್ಕೆ ಹೋದರೆ ಸಾಲು ಸಾಲುಗಳಲ್ಲಿ ಹೇಳಬಲ್ಲೆ. ಇವತ್ತು ನಮ್ಮ ಚಿತ್ರಗಳಲ್ಲಿ ಬರತಕ್ಕ ಸಂಭಾಷಣೆಯನ್ನು ಈ ಸಭೆಯಲ್ಲಿ ಹೇಳುವುದಕ್ಕಾಗುವುದಿಲ್ಲ. ಕೇಳಿದರೆ ತಾವು ನಾಚುತ್ತೀರಿ ನಮ್ಮ ಹಿರಿಯ ಅಕ್ಕ ತಂಗಿಯರಿದ್ದಾರೆ. ಅವರ ಸಂಭಾಷಣೆಯನ್ನು ಸಭೆಯ ಮೂಲಕ ಹೇಳುವುದಕ್ಕೆ ನನಗೂ ನಾಚಿಕೆಯಾಗುತ್ತದೆ. ಅಂಥ ಕೆಟ್ಟ ಸಂಭಾಷಣೆಯನ್ನು ಬರೆಯುತಕ್ಕ, ನೀತಿಗೆಟ್ಟ ಚಿತ್ರಗಳು ಇವತ್ತು ನಮ್ಮಲ್ಲಿ ಪ್ರದರ್ಶನವಾಗುತ್ತಿವೆ. ಕೆಟ್ಟ ಕನ್ನಡ ಚಿತ್ರಗಳ ಬಗ್ಗೆ ನಾವು ಕಡಿವಾಣ ಹಾಕಲೇಬೇಕು. ಹಣ ಸಂಪಾದನೆ ಮಾಡುವುದು ಒಂದೇ ಅಲ್ಲ. ಉತ್ತಮ ಚಿತ್ರಗಳನ್ನು ಕೊಡುವಂತಾಗಬೇಕು. ಶರಪಂಜರ, ಬೆಳ್ಳಿಮೋಡ, ಮಯೂರ, ಬಂಗಾರದ ಮನುಷ್ಯ, ಒಂದೇ ಎರಡೇ ಕನ್ನಡ ಚಿತ್ರರಂಗದಲ್ಲಿ ಸಂಪದ್ಭರಿತವಾದ ನಾಡಿನಲ್ಲಿ ಕಳಪೆಯ ಚಿತ್ರಗಳನ್ನು ತಯಾರು ಮಾಡತಕ್ಕ ಪರಿಸ್ಥಿತಿಗೆ ಬರುತ್ತಿದೆ. ಇದಕ್ಕೆ ತಾವು ಕಡಿವಾಣ ಹಾಕಲೇಬೇಕು. ನಾನು ಬೇಗ ಮುಗಿಸುತ್ತೇನೆ. ಕನ್ನಡದ ಪ್ರಶ್ನೆ ಬಂದಾಗ ಬೆಲ್ಲು ಹೊಡೆಯಬಾರದು.

೧೧-೩೦ ಪಿ.ಎಂ.

ಅಧ್ಯಕ್ಷರೆ, ಕಡ್ಡಾಯ ಚಿತ್ರಗಳ ಪ್ರದರ್ಶನಕ್ಕೆ ಮತ್ತೊಂದು ಸಲಹೆ ಕೊಡುತ್ತೇನೆ. ಸರ್ಕಾರ ಧೈರ್ಯ ಮಾಡುವುದಾದರೆ ಇಡೀ ಚಿತ್ರಮಂದಿರಗಳನ್ನು ರಾಷ್ಟ್ರೀಕರಣ ಮಾಡಬೇಕು. ಇದನ್ನು ಮಾಡತಕ್ಕಂಥ ಶಕ್ತಿ ಸರ್ಕಾರಕ್ಕೆ ಇದ್ದರೆ ದಯಮಾಡಿ ಅವರು ಚಿತ್ರಮಂದಿರಗಳನ್ನು ರಾಷ್ಟ್ರೀಕರಣ ಮಾಡಲಿ, ರಾಷ್ಟ್ರೀಕರಣ ಮಾಡುವುದರಿಂದ ಒಂದು ಹೊಸ ಕ್ರಾಂತಿಯ ಕಡೆ ನುಗ್ಗಿದಂತಾಗುತ್ತದೆ. ಚಿತ್ರಮಂದಿರಗಳ ಕೆಲಸದವರಿಗೂ ಅನುಕೂಲವಾಗುತ್ತದೆ. ಕಪ್ಪುಹಣ ಕೆಲವೇ ಜನ ವ್ಯಕ್ತಿಗಳಲ್ಲಿ ಸೇರತಕ್ಕದ್ದು ತಪ್ಪುತ್ತದೆ. ಕನ್ನಡ ಚಿತ್ರಗಳು ಕಡ್ಡಾಯವಾಗಿ ಪ್ರದರ್ಶನವಾಗುವುದಕ್ಕೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ನಮ್ಮ ಆಡಳಿತ ಭಾಷೆ ಕನ್ನಡದ ಬಗ್ಗೆ ಸರ್ಕಾರ ಸಮಗ್ರ ಪರಿಣಾಮಕಾರಿಯಾದಂಥ ಕ್ರಮ ಕೈಗೊಳ್ಳಬೇಕು. ಇವೊತ್ತು ನನಗೆ ಅನಿಸುತ್ತದೆ. ಸರ್ಕಾರ ಕನ್ನಡ ಆಡಳಿತ ಭಾಷೆಯ ಬಗ್ಗೆ ಪರಿಣಾಮಕಾರಿಯಾದಂಥ ಪ್ರಯತ್ನವನ್ನು ಮಾಡುತ್ತಿಲ್ಲ, ಅದನ್ನು ನಾವು ನೋಡುತ್ತಿದ್ದೇವೆ. ಇವೊತ್ತು ಕನ್ನಡ ಮಾತನಾಡಿ ಎಂದು ಕೇಳುವುದೇ ಒಂದು ಅಪರಾಧ ಎನ್ನುವ ಮಟ್ಟಕ್ಕೆ ಜನರು ಬಂದಿದ್ದಾರೆ. ಇದು ಅಪರಾಧ ಎಂದು ಎಲ್ಲಿ ಬಂದಿರುವುದು ಅಂದರೆ, ತಮಿಳುನಾಡಿನಲ್ಲಿ ಅಲ್ಲ, ಆಂಧ್ರದಲ್ಲಿ ಅಲ್ಲ, ಕೇರಳದಲ್ಲಿ ಅಲ್ಲ, ಕರ್ನಾಟಕದ ಭೂಮಿಯಲ್ಲಿ ಇದು ಸರಿಯಲ್ಲ. ಈ ನಾಡಿನ ಭಾಷೆ, ಕನ್ನಡ ಆಡಳಿತ ಭಾಷೆ ಆಗಲೇಬೇಕು. ಸರ್ಕಾರದ ಆಡಳಿತ ಭಾಷೆ ಕನ್ನಡ, ಆಗುವುದಕ್ಕೆ ಏನು ಕ್ರಮ ಕೈಗೊಂಡಿದ್ದಾರೆ ಅಂದರೆ ಏನೂ ಇಲ್ಲ, ನನಗೆ ತಿಳಿದ ಮಟ್ಟಿಗೆ, ಕನ್ನಡ ಆಡಳಿತ ಭಾಷೆಯಾಗಿ ಹೆಸರಿಗೆ ಮಾತ್ರ ಇದೆ, ಸರ್ಕಾರದ ಕೆಲಸಕಾರ್ಯಗಳೆಲ್ಲ ಸಂಪೂರ್ಣವಾಗಿ ಇಂಗ್ಲಿಷ್‌ನಲ್ಲಿ ನಡೆಯುತ್ತದೆ. ಆದರ ಮುಂದೆ ದಾಟಿಲ್ಲ. ಇದಕ್ಕೆ ಒಂದು ಪ್ರಾಮಾಣಿಕವಾದಂಥ ತಪಸ್ಸು ಬೇಕು. ರಾಜ್ಯ ಭಾಷೆ ಕನ್ನಡವನ್ನು ಮಾಡುವ ಬಗ್ಗೆ ಒಂದು ತಪಸ್ಸು ಬೇಕು ಒಂದು ನಿರ್ಧಾರ ಆಗಬೇಕು, ಈ ತಪಸ್ಸಿನ ನಿರ್ಧಾರ ಆಗಬೇಕಾದರೆ ಪರಿಣಾಮಕಾರಿಯಾದಂಥ ಕೆಲಸ ಆಗಬೇಕು. ಇದಕ್ಕಾಗಿ ಒಂದು ಯೋಜನೆಯನ್ನು ತಾವು ಈ ಕೂಡಲೇ ಸಿದ್ಧತೆ ಮಾಡಬೇಕು. ಈಗಾಗಲೇ ಇದು ಆಗಬೇಕಾಗಿತ್ತು, ಇನ್ನೂ ಆಗಿಲ್ಲ, ಸುಮ್ಮನೆ ಹೆಸರಿಗೆ ಮಾತ್ರ ಕನ್ನಡ ಇದೆ, ಎಲ್ಲಾ ಕಾರ್ಯಾಲಯದಲ್ಲಿ ಕನ್ನಡದಲ್ಲಿ ಓದಿ, ಎಲ್ಲಾ ಕನ್ನಡದಲ್ಲಿ ಬರೆಯಿರಿ, ಕನ್ನಡದಲ್ಲಿಯೇ ಮುದ್ರಿಸಿ ಎಂದು ಚೀಟಿಗಳನ್ನು ಅಂಟಿಸಿದ್ದಾರೆಯೇ ಹೊರತು ಕೆಲಸಕಾರ್ಯಗಳು ಕನ್ನಡದಲ್ಲಿ ಆಗುತ್ತಾ ಇಲ್ಲ, ನಮ್ಮ ರಾಜ್ಯದಲ್ಲಿ ಕನ್ನಡ ಬಾರದೇ ಇರತಕ್ಕಂಥ ಐ ಎ ಎಸ್. ಐ ಪಿ ಎಸ್, ಅಧಿಕಾರಿಗಳು ಸುಮಾರು ಶೇಕಡಾ ೬೦-೭೫ ರಷ್ಟು ಇದ್ದಾರೆ. ಇವರಿಂದ ಕನ್ನಡದ ನಿರೀಕ್ಷಣೆಯನ್ನು ನಾವಾದರೂ ಪಡೆಯತಕ್ಕ ಸಂದರ್ಭವಿಲ್ಲ. ಅವರ ಹೃದಯದಲ್ಲಿ ಮೊದಲು ಕನ್ನಡದ ಆಡಳಿತವನ್ನು ತರಬೇಕೆಂಬ ಚಿಂತನೆ ಬೇಕು. ಇವೊತ್ತು ಆ ಚಿಂತನೆ ಇಲ್ಲ. ಸರ್ಕಾರದಲ್ಲೂ ಕೂಡ, ಮಂತ್ರಿಗಳಲ್ಲಿಯೂ ಕೂಡ ಆ ಒಂದು ಚಿಂತನೆ ಬೇಕು. ಮಾನ್ಯ ಅಧ್ಯಕ್ಷರೆ, ತಾವು ಅನೇಕ ಬಾರಿ ನೋಡಿದ್ದೀರಿ. ಈ ಸಭೆಯಲ್ಲಿ, ಮಂಡಲ್ ಪಂಚಾಯತಿಯಿಂದ ಹಿಡಿದು, ಶಾಸನ ಸಭೆಯ ವರೆಗೂ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ತರತಕ್ಕಂಥ ಒಂದು ವ್ಯವಸ್ಥೆ ನಮ್ಮಲ್ಲಿ ಇವೊತ್ತು ಆಗಬೇಕಾಗಿದೆ. ಆ ವ್ಯವಸ್ಥೆಯಿಂದ ನಾವು ಬಹಳ ದೂರ ಹೋಗುತ್ತಿದ್ದೇವೆ. ಆದ್ದರಿಂದ ಮಂತ್ರಿಗಳ ಆತ್ಮಶೋಧನೆ ಆಗಬೇಕು. ಸರ್ಕಾರವೂ ಆತ್ಮ

(ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಶೋಧನೆ ಮಾಡಿಕೊಳ್ಳಬೇಕು. ಆತ್ಮಶೋಧನೆಯನ್ನು ಮಾಡಿಕೊಂಡು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ತರುವ ಬಗ್ಗೆ ಒಂದು ಹೊಸ ಚಿಂತನೆ ಬೇಕಾಗಿದೆ. ಆ ಚಿಂತನೆ ಇಲ್ಲದೇ ಇರುವುದರಿಂದ ಕನ್ನಡಕ್ಕೆ ಅಪಾಯ ಬಂದೊದಗಿದೆ ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅಧ್ಯಕ್ಷರೆ, ಇವೊತ್ತು ನಮ್ಮ ಕರ್ನಾಟಕದ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಇವೊತ್ತು ಭಾಷೆಯನ್ನು ಉಳಿಸುವ ಬಗ್ಗೆ ಸರ್ಕಾರ ಗಡಿ ನಾಡನ್ನು ರಕ್ಷಣೆ ಮಾಡಬೇಕು. ಗಡಿನಾಡಿನ ಕನ್ನಡಿಗರ ರಕ್ಷಣೆ ಮಾಡಬೇಕು. ಭಾಷೆಯ ಬೆಳವಣಿಗೆಗೆ ವಿವಿಧ ಸಮಿತಿಗಳನ್ನು ನೇಮಕ ಮಾಡಬೇಕು. ಆ ಸಮಿತಿಗಳಿಂದ ಸಲಹೆಗಳನ್ನು ಪಡೆಯಬೇಕು. ಅಧಿಕಾರಿಗಳು ಕೂಡ ಕನ್ನಡದಲ್ಲಿ ಬರೆಯುವುದನ್ನು ಕಲಿಯಬೇಕು. ಇವೊತ್ತು ಈ ರಾಜ್ಯದ ಮುಖ್ಯಕಾರ್ಯದರ್ಶಿಗಳಿಗೆ ಕನ್ನಡವೇ ಬರುವುದಿಲ್ಲ. ನಾನು ವೈಯಕ್ತಿಕವಾಗಿ ಅವರ ಬಗ್ಗೆ ಟೀಕೆ ಮಾಡುತ್ತಿಲ್ಲ. ಅವರಿಗೆ ಕನ್ನಡವೇ ಬರುವುದಿಲ್ಲ. ಅವರಿಂದ ನಾವು ಏನು ನಿರೀಕ್ಷಣೆ ಮಾಡಬಹುದು. ಈ ರೀತಿ ಪುಂಖಾನುಪುಂಖವಾಗಿ ಕನ್ನಡ ಬಾರದೇ ಇರತಕ್ಕಂಥ ಅಧಿಕಾರಿಗಳು ಇರುವುದರಿಂದ ಈ ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಗೆ ಒಂದು ಸಮರ್ಥನೆ ಸಿಕ್ಕುವುದಿಲ್ಲ ಎಂದು ನಾನು ಸ್ಪಷ್ಟವಾಗಿ ತಮ್ಮ ಮೂಲಕ ತಿಳಿಸುತ್ತಿದ್ದೇನೆ. ಇನ್ನು ಮಾನ್ಯ ಮುಖ್ಯ ಮಂತ್ರಿಯವರು ಜಲ ನೆಲದ ಬಗ್ಗೆ ನನ್ನ ಅಧಿಕಾರದಲ್ಲಿ ಎಂದೂ ಚಿಂತೆ ಬರುವುದಿಲ್ಲ ಎಂದು ಹೇಳಿದ್ದಾರೆ. ನೆಲ, ಜಲ.

ನಾಡ ನುಡಿ. ಈ ನಾಡ ನುಡಿಯನ್ನು ಅವರು ಸೇರಿಸಿಕೊಳ್ಳಬೇಕು. ನಾಡ ನುಡಿಯ ಬೆಳವಣಿಗೆಯ ಬಗ್ಗೆ ಅವರು ಒಂದು ಹೊಸ ಹೆಜ್ಜೆಯನ್ನು ಇಟ್ಟು, ಈ ರಾಜ್ಯದಲ್ಲಿ ಹೊಸ ಚೈತನ್ಯವನ್ನು ಕೊಟ್ಟು ಕನ್ನಡ ಆಡಳಿತ ಭಾಷೆಯಾಗಿ ಬೆಳೆಯುವುದಕ್ಕೆ ಪರಿಣಾಮಕಾರಿಯಾದ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಮಾನ್ಯ ಸಭಾ ನಾಯಕರು ಇಲ್ಲಿಗೆ ದಯಮಾಡಿಸಿದ್ದಾರೆ. ಆದರೆ ಅವರು ನನ್ನ ಮಾತನ್ನು ಕೇಳುತ್ತಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವರ ಗಮನ ಬೇರೆ ಕಡೆ ಇದ್ದ ಹಾಗೆ ಕಾಣುತ್ತದೆ.

ಅಧ್ಯಕ್ಷರು.—ಕೇಳುವವರೆಲ್ಲ ನಿಮ್ಮ ಮುಖವನ್ನೇ ನೋಡಬೇಕೆಂದು ಅಪೇಕ್ಷೆ ಪಡತಕ್ಕಂಥಾದ್ದು ಸರಿಯಲ್ಲ. ಅವರ ಕಿವಿಯನ್ನು ನಿಮ್ಮ ಕಡೆ ಕೊಟ್ಟಿರುತ್ತಾರೆ. ನಾನು ಒಬ್ಬನೇ ನಿಮ್ಮ ಕಡೆ ನೋಡುತ್ತಾ ಇರತಕ್ಕಂಥಾದ್ದು.

ಶ್ರೀ ವಾಟಾಳ್ ನಾಗರಾಜ್.—ಕೃಷ್ಣ ಪರಮಾತ್ಮನ ದೃಷ್ಟಿ ನಮ್ಮ ಕಡೆ ಇದ್ದಾರೆ ಸಾಕು. ಅವರಲ್ಲಿ ಅನುಮಾನ ಏನೂ ಇಲ್ಲ. ಇನ್ನು ಯಾರದ್ದೂ ನಮಗೆ ಬೇಕಾಗಿಲ್ಲ.

ಶ್ರೀ ಎಂ. ಮಹದೇವ್.—ಅಧ್ಯಕ್ಷರು ವಿಧಿ ಇಲ್ಲದೆ ನಿಮ್ಮನ್ನು ನೋಡಲೇಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್.—ವಾಟಾಳ್ ನಾಗರಾಜ್ ಕನ್ನಡವೆಂದು ಹೇಳುತ್ತಾರೆ ಅವರಿಗೆ ಬೇರೆ ಕೆಲಸವಿಲ್ಲವೆಂದು ಹೇಳತಕ್ಕಂತಹ ಸದಸ್ಯರೂ ಇದ್ದಾರೆ, ಜನರೂ ಇದ್ದಾರೆ, ಬೇರೆಯವರೂ ಕೂಡ ಇದ್ದಾರೆ. ನಾನಂತೂ ನನ್ನ ಹೃದಯ ಬಿಚ್ಚಿ ಹೇಳುತ್ತಿದ್ದೇನೆ. ಕನ್ನಡ ಆಡಳಿತ ಭಾಷೆಯಾಗಿ ನಡೆಯಲೇಬೇಕು ಕನ್ನಡ ಆಡಳಿತ ಭಾಷೆ ಆಗಲೇಬೇಕೆಂದು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರಲ್ಲಿ ನಾನು ವಿನಂತಿ ಮಾಡುತ್ತೇನೆ. ಈ ಸಭೆಯ ಬಹುತೇಕ ಕಾರ್ಯಕಲಾಪಗಳನ್ನು ತಾವು ಕನ್ನಡದಲ್ಲಿಯೇ ನಡೆಸಬೇಕು. ಆ ರೀತಿ ನಡೆದರೆ ಕನ್ನಡಕ್ಕೆ ಹೊಸ ಶಕ್ತಿ ಬರುತ್ತದೆ ಜನ ಸಾಮಾನ್ಯರಲ್ಲೂ ಕೂಡ ಚೈತನ್ಯ ಬರುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ.—ಕನ್ನಡದ ನೆಲವನ್ನು ಹೊರನಾಡಿನವರಿಗೆ ಮಾರುವಾಗ ತಮ್ಮ ಅನಿಸಿಕೆ ಹೇಳಲಿಲ್ಲ. ಕಳೆದ ಸರಕಾರ ಆಡಳಿತ ನಡೆಸುತ್ತಿರತಕ್ಕಂತಹ ಸಂದರ್ಭದಲ್ಲಿ ಡೆಲ್ಲಿಯವರಿಗೆ ಹಾಗೂ ಇತರ ಬೇರೆ ಬೇರೆ ರಾಜ್ಯದಲ್ಲಿರತಕ್ಕಂತಹವರಿಗೆ ಕನ್ನಡದ ನೆಲವನ್ನು ಕೊಡತಕ್ಕಂತಹ ಸಂದರ್ಭದಲ್ಲಿ ತಮ್ಮ ಪ್ರತಿಭಟನೆ ಏನೂ ಕಾಣಿಸಲಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ತಾವು ನನ್ನನ್ನು ಅರ್ಥ ಮಾಡಿಕೊಂಡಿದ್ದೀರಿ, ಅಷ್ಟು ಸಾಕು, ಕನ್ನಡದ ಪ್ರಶ್ನೆ ಬಂದಾಗ ನಾನು ಯಾರ ಜೊತೆಯಲ್ಲೂ ಕೂಡ ರಾಜಿ ಮಾಡಿಕೊಳ್ಳುವುದಿಲ್ಲ. ಆ ಪಕ್ಷ ಈ ಪಕ್ಷವೆಂದು ಕೂಡ ಇಲ್ಲ.

ಶ್ರೀ ಎಂ. ರಾಮಪ್ಪ.—ನಮ್ಮ ಕರ್ನಾಟಕದಲ್ಲಿ ಕನ್ನಡವಲ್ಲಿ ಬರೀ ಭಾಷಣವೊಂದೇ ಮುಖ್ಯ ಅಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಸ್ಟೀಲ್ ಫ್ಯಾಕ್ಟರಿ ಮುಂತಾದವು ಬರಬೇಕಾಗಿದೆ. ಆಂಧ್ರ, ತಮಿಳುನಾಡಿನಲ್ಲಿ ಬಹಳ ಮಂದಿ ತ್ಯಾಗ ಮಾಡಿ ಸಂಪಾದನೆ ಮಾಡಿದ್ದಾರೆ ಇಲ್ಲಿ ಬರೀ ಕನ್ನಡ ಭಾಷೆ ಎಂದು ಮಾತನಾಡಿದರೆ ಏನೂ ಆಗುವುದಿಲ್ಲ. ಅಲ್ಲಿ ಏನು ಮಾಡುತ್ತಾರೆ ಹೇಗೆ ಮಾಡುತ್ತಾರೆಂಬುದು ಮುಖ್ಯ. ಭಾಷೆ ಒಂದೇ ಮುಖ್ಯ ಅಲ್ಲ. ನಾವು ಕೆಲಸದ ಬಗ್ಗೆ ಕೂಡ ಚಿಂತನೆ ಮಾಡಬೇಕಾಗುತ್ತದೆ. ಬರೀ ಭಾಷೆಯಿಂದ ಜೀವನ ಮಾಡುವುದಕ್ಕಾಗುವುದಿಲ್ಲ, ಆ ಭಾಷೆಯಿಂದ ವ್ಯಾಪಾರ ಮಾಡುವುದಕ್ಕೆ ಅವಕಾಶವಾಗಬಹುದು. ಹೊಲದಲ್ಲಿ ಕೆಲಸ ಮಾಡಬೇಕಾದರೆ ಕನ್ನಡವೆಂದರೆ ಆಗುವುದಿಲ್ಲ, ಎಲ್ಲರೂ ಕೆಲಸ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ನಾನೇನೂ ಅಂಗಡಿ ಇಟ್ಟುಕೊಂಡು ವ್ಯಾಪರ ಮಾಡುವವರಿಗೆ ಇದೆಲ್ಲಾ ಗೊತ್ತಿರಬೇಕು. ನಾನು ಇಷ್ಟಿಗೇ ನಿಲ್ಲಿಸಿಲ್ಲ, ಇನ್ನೂ ಮುಂದೆ ಹೋಗುತ್ತಿದ್ದೇನೆ. ತಾವು ಸಾವಧಾನವಾಗಿ ಕೇಳಬೇಕು. ಮಾನ್ಯ ರಾಮಪ್ಪನವರು ಸಾವಧಾನವಾಗಿ ಕೇಳಿದರೆ ಬಹುಶಃ ಹೊಂದಿಕೊಳ್ಳುತ್ತಾರೆಂದು ನನಗನ್ನಿಸುತ್ತದೆ

ಶ್ರೀ ಎಂ. ರಾಮಪ್ಪ.—ಬಹಳ ವಿಚಾರಗಳು ಇವೆ. ತೆಲುಗುಗಂಗಾ ಬಗ್ಗೆ ಏನು ಮಾಡಿದ್ದೀರಿ. ಪ್ರಚಾರಕ್ಕೋಸ್ಕರವೇ ಒಂದು ಭಾಷೆ ಆಗುವುದಿಲ್ಲ. ನಾವು ನಮ್ಮ ಕಾರ್ಯಕ್ರಮಗಳ ಬಗ್ಗೆ ಏನು ಮಾಡುತ್ತಿದ್ದೇವೆ ಮತ್ತು ನಾವು ಅದರಲ್ಲಿ ಹೇಗೆ ಭಾಗಿಯಾಗುತ್ತಿದ್ದೇವೆಂಬುದು ಮುಖ್ಯ. ಪ್ರಚಾರಕ್ಕೋಸ್ಕರ ಭಾಷೆ ಎಂದು ಹೇಳಿದಾಗ ನನಗೆ ನಾಚಿಕೆಯಾಗುತ್ತದೆ.

ಶ್ರೀ ಪಾಟೀಲ್ ನಾಗರಾಜ್.—ಇಂತಹ ನಾಚಿಕೆ ಪಡುವವರಿಗೆ ಜನ ಉತ್ತರ ಕೊಡುತ್ತಾರೆ. ಅವರ ಬಗ್ಗೆ ನಾನು ಚಿಂತೆಪಡಬೇಕಾಗಿಲ್ಲ. ನನಗೆ ನಾಚಿಕೆ ಏನೂ ಬೇಕಾಗಿಲ್ಲ. ನಿಮ್ಮಿಂದ ನಾಚಿಕೆಯನ್ನು ನಾನು ಕಲಿಯಬೇಕಾಗಿಲ್ಲ. ನನ್ನ ಇಡೀ ಜೀವನದಲ್ಲಿ ಯಾವುದೇ ಪಕ್ಷ, ಪಂಗಡ ಸೇರದೆ ನಾನು ಚರಂಡಿ ಪಕ್ಕದಲ್ಲಿದ್ದರೂ ನಾನು ಹೆಳವನಾದರೂ, ಕೈಯಲ್ಲಿ ಭಿಕ್ಷಾ-ಪಾತ್ರೆ ಹಿಡಿದರೂ ಕೂಡ ನನ್ನ ಕೊನೆಯ ಉಸಿರು ಕನ್ನಡ ಅದನ್ನು ಯಾರೂ ಬದಲಾವಣೆ ಮಾಡುವುದಕ್ಕಾಗುವುದಿಲ್ಲ, ನಮಗೆ ಅರ್ಥವಾಗಿದೆ. ಇದು ನಿಮ್ಮೊಬ್ಬರಿಗೆ ಅರ್ಥವಾದರೆ ಸಾಕು. ನಾನು ಯಾರಿಂದಲೂ ಅರ್ಹತಾಪತ್ರ ಪಡೆಯಬೇಕಾಗಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಈ ಕನ್ನಡ ನಾಡಿನ ಸರ್ವರಿಗೂ, ಭಾಷಾವಾರು ರಾಜ್ಯವಾದ ಮೇಲೆ, ಕರ್ನಾಟಕವಾದ ಮೇಲೆ ಕನ್ನಡ ಅಗ್ರಮಾನ್ಯದಲ್ಲಿರಬೇಕಾದುದು ಸಹಜ ಎಂದು ಹೇಳುತ್ತೇನೆ.

ಶ್ರೀ ಎಂ. ರಾಮಪ್ಪ.—ಇದು ಎಲ್ಲರಿಗೂ ಸಂಬಂಧ ಇದೆ. ಎಲ್ಲರ ಬಗ್ಗೆ ಕೂಡ ಚಿಂತನೆ ಇರಬೇಕಾಗುತ್ತದೆ. ಒಂದು ಭಾಷೆ ಒಬ್ಬರಿಗೇ ಆಗುವುದಿಲ್ಲ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ.—ತಮಗೆ ಕನ್ನಡದ ಬಗ್ಗೆ ಕಾಳಜಿ ಇದೆ. ವಿಧಾನಸಭೆಯಲ್ಲಿರ ತಕ್ಕಂತಹ ಹೆಚ್ಚಿನ ಸದಸ್ಯರು ಕನ್ನಡನಾಡಿನಿಂದ ಬಂದವರು, ಕನ್ನಡದ ಮತದಾರರಿಂದ ಬಂದವರು. ತಮ್ಮಿಂದ ಕನ್ನಡವನ್ನು ಕಲಿಯಬೇಕಾಗಿಲ್ಲ.

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ಕನ್ನಡ ಕಲಿಯಿರಿ ಎಂದೂ ಯಾರೂ ಹೇಳಲಿಲ್ಲ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ.—ಇಲ್ಲಿ ರಾಮಪ್ಪ, ಪ್ರತಾಪ ಚಂದ್ರ ಶೆಟ್ಟಿ, ಲಕ್ಕಪ್ಪ ಮುಂತಾದವರು ಕನ್ನಡದಲ್ಲೇ ಮಾತನಾಡಬೇಕು ಎಂದು ವಾದ ಮಾಡುವುದಲ್ಲ. ನಿಮ್ಮ ವಾದ ಏನಿದೆ ಅದು ಮಂತ್ರಿ-ಮಂಡಲದ ಸದಸ್ಯರಿಗೆ, ವಿರೋಧ ಪಕ್ಷದ ಸದಸ್ಯರಿಗೆ ಕೂಡ ಅನ್ವಯವಾಗುತ್ತದೆ. ಯಾರ್ಯಾರು ಎಷ್ಟು ಎಷ್ಟು ಮಾತನಾಡಿದ್ದಾರೆ ಎಂದು ದಾಖಲೆ ತೆಗೆದುನೋಡಿ. ರಾಮಪ್ಪನವರು, ನಾನು ಲಕ್ಕಪ್ಪನವರು ಇಂಗ್ಲೀಷಿನಲ್ಲಿ, ತಮಿಳಿನಲ್ಲಿ ಮಾತನಾಡಿದ್ದಾರೆ, ನಾನು ಕನ್ನಡದಲ್ಲಿ ಎಷ್ಟು ಸಾರಿ ಮಾತನಾಡಿದ್ದೇನೆ ಎನ್ನುವುದನ್ನು ನೋಡಿ. ತಪ್ಪಾದ ವಿತ್ತಂಡವಾದ ಆಗಬಾರದು.

ಶ್ರೀ ಪಾಟೀಲ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ನಾನೊಬ್ಬನೇ ಕನ್ನಡ ಕಲಿತು ಮಾತನಾಡುತ್ತೇನೆಂದು ಎಂದೂ ಹೇಳಿದವನಲ್ಲ, ಕಡತ ತೆಗೆಸಿ ನೋಡಿ. ನಾನು ಅವರ ಬಗ್ಗೆ ಪ್ರಾಜ್ಯಕ್ಕೆ ಹೋಗುತ್ತಿಲ್ಲ. ನಾನು ನನ್ನ ಪ್ರಶ್ನೆಯನ್ನು ತಮ್ಮಲ್ಲಿ ಹೇಳಿಕೊಳ್ಳುತ್ತಿದ್ದೇನೆ. ಮಿಕ್ಕವರ ಪ್ರಶ್ನೆಯ ಬಗ್ಗೆ ನಾನು ಮಾತನಾಡುತ್ತಿಲ್ಲ. ಮಿಕ್ಕವರ ಗೋಜಿಗೂ ನಾನು ಹೋಗುತ್ತಿಲ್ಲ. ಇವರು ಕೋಪ ತಾಪದಲ್ಲಿ ಎದ್ದು ಮಾತನಾಡುತ್ತಿದ್ದಾರೆ ಅದಕ್ಕೆ ಯಾವುದೊ ಕಾರಣಗಳು ಇರಬಹುದು ಅವರ ಬಗ್ಗೆ ನಾನು ಚಿಂತನೆ ಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ವಿರೋಧ ಪಕ್ಷದ ಸದಸ್ಯರು ಇಂಗ್ಲೀಷಿನಲ್ಲಿ ಮಾತನಾಡಿದರೂ ತಪ್ಪೇ, ವಿರೋಧ ಪಕ್ಷದವರು ಕನ್ನಡದ ವಿರುದ್ಧವಾಗಿ ನಿಂತಾಗ ಅದೂ ತಪ್ಪೇ, ಅದಕ್ಕೆ ನನ್ನ ಬೆಂಬಲವಿಲ್ಲ.

ಶ್ರೀ ಎಂ. ರಾಮಪ್ಪ.—ನನ್ನ ಮನಸ್ಸಿನಲ್ಲಿದ್ದುದನ್ನು ನಾನು ವ್ಯಕ್ತಪಡಿಸಬೇಕಾದಾಗ ಭಾಷೆಯ ಪ್ರಶ್ನೆ ಬರುವುದಿಲ್ಲ. ನಾವು ಎಲ್ಲಾ ಭಾಷೆಯನ್ನೂ ಗೌರವಿಸಬೇಕಾಗುತ್ತದೆ. ಮೊನ್ನೆ ಹೈಕೋರ್ಟಿನಲ್ಲಿ ಸುಬ್ಬಯ್ಯ ಎಂದು ಹೇಳುವುದಕ್ಕೆ ಬದಲಾಗಿ ಸಬ್ಬಯ್ಯ ಎಂದು ಹೇಳಿದರು. ಇಂತಹ ತಪ್ಪುಗಳು ಆಗುತ್ತವೆ. ಒಂದೊಂದು ಭಾಷೆಯಲ್ಲಿ ಒಂದೊಂದು ರೀತಿ ಇರುತ್ತದೆ. ನಾವು ಎಲ್ಲಾ ಭಾಷೆಗಳ ಬಗ್ಗೆ ಕೂಡ ಗೌರವವನ್ನು ಉಳಿಸಿಕೊಂಡು ಹೋಗಬೇಕಾಗುತ್ತದೆ. ನಾವು ಎಷ್ಟರಮಟ್ಟಿಗೆ ಇವನ್ನು ಉಳಿಸಿಕೊಂಡು ಹೋಗುತ್ತೇವೆಂಬುದು ಮುಖ್ಯವೇ ಹೊರತು ಪ್ರಚಾರಕ್ಕೆಂದು ಈ ಭಾಷೆಯನ್ನು ಉಪಯೋಗಿಸಿ ಎಂದು ಹೇಳಿದರೆ ಅದು ತಪ್ಪು ಎಂಬುದು ನನ್ನ ಅಭಿಪ್ರಾಯ.

ಅಧ್ಯಕ್ಷರು.—ನಾನು ಕಳೆದ ಎಂಟು ತಿಂಗಳಿನಿಂದ ಈ ಸಭೆಯ ಅಧ್ಯಕ್ಷನಾಗಿದ್ದೇನೆ. ಶ್ರೀಮಾನ್ ಪ್ರತಾಪ ಚಂದ್ರ ಶೆಟ್ಟಿಯವರಾಗಲಿ, ಶ್ರೀಮಾನ್ ರಾಮಪ್ಪನವರಾಗಲೀ ಅವರು ಎಡವಿಬಿದ್ದರೂ ಇಂಗ್ಲೀಷಿನಲ್ಲಿ ಮಾತನಾಡಿಲ್ಲ, ಅವರು ಕನ್ನಡದಲ್ಲೇ ಮಾತನಾಡಿದ್ದಾರೆ. ಆದ್ದರಿಂದ ನೀವು ಎದ್ದು ಇದಕ್ಕೆ ಪರ್ಸನಲ್ ಎಕ್ಸ್‌ಪ್ಲೆನೇಷನ್ ಏಕೆ ಕೊಡಬೇಕೊ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೆ, ಇದು ಪರ್ಸನಲ್ ಎಕ್ಸ್‌ಪ್ಲನೇಷನ್ ಅಲ್ಲ. ನಾನು ಆಂಧ್ರದವನು. ಬಳ್ಳಾರಿಯಲ್ಲಿರುವವನು. ಹೆಚ್ಚು ಕಡಿಮೆ ತೆಲುಗು ಮಾತನಾಡುತ್ತೇನೆ. ಅಲ್ಪ-

ಸಂಖ್ಯಾತರು ಬಹಳ ಮಂದಿ ಇದ್ದಾರೆ, ಅವರಿಗೂ ಕೂಡ ಗೌರವ ಸಿಗಬೇಕಾಗುತ್ತದೆ. ಅದನ್ನು ಕೇಳುವ ಹಕ್ಕು ನನಗೆ ಇದೆ. ಅದು ಇಲ್ಲ ಎಂದು ಹೇಳುವುದಕ್ಕೆ ಯಾರಿಗೂ ಹಕ್ಕು ಇಲ್ಲ ಎಂದು ನಾನು ತಮ್ಮ ಮೂಲಕ ಅವರೆಲ್ಲರಿಗೂ ತಿಳಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ನಾನು ಯಾರ ಹಕ್ಕನ್ನೂ ಕಸಿದುಕೊಳ್ಳುವುದಕ್ಕೆ ಬಂದಿಲ್ಲ. ನನ್ನ ಭಾಷಣವನ್ನು ತಾವು ಗಮನಿಸಿದ್ದೀರಿ, ಆಲಿಸಿದ್ದೀರಿ. ನಾನು ಅತ್ತ ಇತ್ತ ದಾರಿ ತಪ್ಪಿ ಹೋಗಿಲ್ಲ ತಾವು ನೋಡುತ್ತಿದ್ದೀರಿ. ಇವತ್ತು ಹೊಸದಾಗಿ ನಾನು ಪ್ರಚಾರಕ್ಕಾಗಿ ಕನ್ನಡದ ಬಗ್ಗೆ ಮಾತನಾಡಿದವನಲ್ಲ. ನಾನು ಇವತ್ತು ಇಲ್ಲಿ ಮಾತನಾಡಿ ಪ್ರಚಾರಗಿಟ್ಟಿಸಬೇಕಾಗಿಲ್ಲ. ಬೇಕಾದಷ್ಟು ಪ್ರಚಾರವಾಗಿದೆ, ನನ್ನನ್ನು ೩ನೇ ಬಾರಿ ಜನರು ಆರಿಸಿ ಕಳುಹಿಸುತ್ತಿದ್ದಾರೆ. ಅದರ ಬಗ್ಗೆ ನಾನು ಚಿಂತನೆ ಪಡಬೇಕಾಗಿಲ್ಲ. ಇದು ಎಲ್ಲಾ ಭಾಷೆಗಳ ಬಗ್ಗೆ ಮಾತನಾಡತಕ್ಕಂಥ ಸಭೆಯಲ್ಲ. ನಾನು ತಮಗೆ ಹೇಳುತ್ತೇನೆ, ಅದು ತಮ್ಮ ತೀರ್ಪಿಗೆ ಬಿಟ್ಟಿದ್ದು. ನಾನು ತಿಳಿದುಕೊಂಡಿರುವುದೇನೆಂದರೆ, ಈ ಸಭೆಯಲ್ಲಿ ನಾವೆಲ್ಲ ಕರ್ನಾಟಕದವರು, ಕನ್ನಡಿಗರು, ಮಾತನಾಡತಕ್ಕಂಥ ಭಾಷೆ ಕನ್ನಡ ಎಂದು ತಿಳಿದುಕೊಂಡಿದ್ದೇನೆ. ಅದನ್ನು ಬಿಟ್ಟು ಬೇರೆ ಏನ್ನತಕ್ಕಂಥಾದ್ದು ನನ್ನ ತಲೆಯಲ್ಲಿ ಬಂದಿಲ್ಲ. ಇವತ್ತು ಸಮಗ್ರವಾಗಿ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಬಳ್ಳಾರಿ ಕರ್ನಾಟಕಕ್ಕೆ ಸೇರುವಾಗ ಅನೇಕ ಜನ ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಹೋರಾಟ ನಡೆಸಿದರು. ಅದರಲ್ಲಿ ಮೊದಲನೇ ಅಗ್ರಗಣ್ಯರು ಶ್ರೀ ಕೆಂಗಲ್ ಹನುಮಂತಯ್ಯನವರು. ಬಳ್ಳಾರಿಯನ್ನು ಹಳೇ ಮೈಸೂರು ಪ್ರಾಂತ್ಯಕ್ಕೆ ಸೇರಿಸುವಾಗ ಹನುಮಂತಯ್ಯನವರ ಪಾತ್ರ ಅಪಾರವಾದದ್ದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಇವತ್ತಿನ ಬೇಡಿಕೆಗಳ ಬಗ್ಗೆ ಬಹಳಷ್ಟು ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ. ಆದ್ದರಿಂದ, ಮಾತನಾಡತಕ್ಕ ಮಾನ್ಯ ಸದಸ್ಯರು ಸೀಮಿತಮಾಡಿಕೊಂಡರೆ ಬಹುಶಃ ಹೆಚ್ಚಿನ ಸದಸ್ಯರಿಗೆ ಈ ಕಾರ್ಯಕಲಾಪದಲ್ಲಿ ಭಾಗವಹಿಸಲು ಅನುಕೂಲವಾಗುತ್ತದೆ. ದಯಮಾಡಿ ಮಾನ್ಯ ವಾಟಾಳ್ ನಾಗರಾಜ್‌ರವರು ತಪ್ಪು ತಿಳಿದುಕೊಳ್ಳದೆ ತಮ್ಮ ಭಾಷಣವನ್ನು ಸೀಮಿತಗೊಳಿಸಿಕೊಳ್ಳಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ತಾವು ಹೇಳುವುದು ಸರಿ. ಇವತ್ತು ೫-೬ ಸಚಿವರ ಖಾತೆಗಳ ಬೇಡಿಕೆಗಳನ್ನು ಸದನದ ಮುಂದಿಟ್ಟಿದ್ದಾರೆ. ಚರ್ಚೆ ಸಮಗ್ರವಾಗಿ ಆಗಬೇಕು. ಸರ್ಕಾರ ಇದನ್ನು ಚಿಂತನೆ ಮಾಡಬೇಕಾಗಿತ್ತು. ಆದರೆ ಏತಕ್ಕೆ ಚಿಂತನೆ ಮಾಡಲಿಲ್ಲವೋ ಗೊತ್ತಿಲ್ಲ. ಎಷ್ಟು ಪ್ರಮಾಣದಲ್ಲಿ ಕನ್ನಡ ಭಾಷೆಗೆ ಮಾನ್ಯತೆಯನ್ನು ಕೊಡಬೇಕೋ ಅಷ್ಟು ಕೊಟ್ಟಿಲ್ಲ. ಕನ್ನಡ ಭಾಷೆಗೆ ಈ ಸದನದಲ್ಲಿ ಎಷ್ಟು ಮಾನ್ಯತೆ ಸಿಕ್ಕಬೇಕೋ ಅದು ಸಿಕ್ಕುತ್ತಿಲ್ಲ. ಸರ್ಕಾರದಲ್ಲೂ ಸಿಕ್ಕುತ್ತಿಲ್ಲ, ಇಲ್ಲೂ ಸಿಕ್ಕುತ್ತಿಲ್ಲ. ಆದ್ದರಿಂದ ನಾನು ತಮ್ಮ ಮೂಲಕ ಹೇಳುತ್ತಿದ್ದೇನೆ. ಕನ್ನಡ ಭಾಷೆಯ ಮಾನ್ಯತೆಯ ಬಗ್ಗೆ ಸರ್ಕಾರ ಒಂದು ಚಿಂತನೆಯನ್ನು ಮಾಡಲೇಬೇಕು ಮತ್ತು ಪರಿಣಾಮಕಾರಿಯಾದ ಯೋಜನೆಯನ್ನು ಹಾಕಿಕೊಳ್ಳಲೇಬೇಕು.

ಮಾನ್ಯ ಸಭಾಧ್ಯಕ್ಷರೆ, ವಿಜಯನಗರ ಉಕ್ಕು ಕಾರ್ಖಾನೆ ಆಗಬೇಕು. ಈ ಉಕ್ಕಿನ ಕಾರ್ಖಾನೆಯ ಬಗ್ಗೆ ೧೯ ವರ್ಷಗಳು ಕಳೆದರೂ ಇಲ್ಲಿಯವರೆಗೂ ಒಂದು ಹೊಸ ಚಿಂತನೆ ಆಗಿಲ್ಲ. ಆದರೂ ವಿಜಯನಗರ ಉಕ್ಕು ಕಾರ್ಖಾನೆ ಈ ವರ್ಷ ಬರುತ್ತದೆ, ಮುಂದಿನ ಯೋಜನೆಯಲ್ಲೂ ಬರುತ್ತದೆ, ಅದರ ಮುಂದಿನ ಯೋಜನೆಯಲ್ಲಿ ಬರುತ್ತದೆಂದು ಹೇಳುತ್ತಲೇ ಇದ್ದಾರೆ. ಆದರೆ ಈ ಉಕ್ಕು ಕಾರ್ಖಾನೆ ಈ ವರ್ಷದಲ್ಲೇ ಆಗಲೇಬೇಕೆಂದು ಹೇಳುವಂಥವರು ಇದುವರೆಗೆ ಯಾರೂ ಕೂಡ ಬರಲೇ ಇಲ್ಲ. ಈ ಬಗ್ಗೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು. ನಂತರ ರೈಲುಗಳು, ತಮ್ಮ ಕ್ಷೇತ್ರದ ಮೂಲಕ ಹಾದು ಹೋಗುವ ಬೆಂಗಳೂರಿನಿಂದ ಮೈಸೂರಿಗೆ, ಮತ್ತು ಮೈಸೂರಿನಿಂದ ಚಾಮರಾಜನಗರ, ಚಾಮರಾಜನಗರದಿಂದ ಮೆಟ್ಟುಪಾಳ್ಯಕ್ಕೆ ಬ್ರಾಡ್‌ಗೇಜನ್ನು ಮಾಡಬೇಕಾದರೆ ಅದಕ್ಕೆ ತಗುಲತಕ್ಕ ಹಣ ಏನಿದೆ ಇದನ್ನು ೧೨ ವರ್ಷಗಳು ಕಳೆದರೂ ಅವರು ಇನ್ನೂ ಕೊಟ್ಟಿಲ್ಲ. ಈ ರೀತಿ ಕೇಂದ್ರದಿಂದ ಒಂದಲ್ಲ ಅನೇಕ ರೀತಿಯಲ್ಲಿ ನಮಗೆ ಅನ್ಯಾಯಗಳು ಆಗಿವೆ. ಆದ್ದರಿಂದ ಈಗ ಆಗಿರತಕ್ಕ ಅನ್ಯಾಯಗಳನ್ನು ಸರಿಪಡಿಸುವ ಸಲುವಾಗಿ ಕೇಂದ್ರದ ಜೊತೆ ಹೋರಾಟ ಮಾಡಲು ಸರ್ವಪಕ್ಷಗಳ ನಿಯೋಗವನ್ನು ನಮ್ಮ ಸರ್ಕಾರದವರು ತೆಗೆದುಕೊಂಡು ಹೋಗಬೇಕು. ಇದಕ್ಕೆ ನಾವು ನಮ್ಮ ಎಲ್ಲ ರೀತಿಯ ಬೆಂಬಲವನ್ನೂ ಕೂಡ ಕೊಡಲು ಸಿದ್ಧರಿದ್ದೇವೆ ಎಂಬ ಮಾತನ್ನು ತಮ್ಮ ಮೂಲಕ ಹೇಳಬಯಸುತ್ತೇನೆ.

ಇನ್ನು ಕೊನೆಯದಾಗಿ ಹೇಳುವುದಾದರೆ, ಈ ಸಭೆಯಲ್ಲಿ ಕನ್ನಡ ಭಾಷೆ ಬೆಳಗಬೇಕು, ಮತ್ತು ಉಳಿಯಬೇಕು. ಈ ಸದನಕ್ಕೆ ಚುನಾಯಿತರಾಗಿ ಬಂದಿರತಕ್ಕ ಎಲ್ಲ ಮಾನ್ಯ ಸದಸ್ಯರೂ ಕರ್ನಾಟಕ

ದವರು. ಇದನ್ನು ಯಾರೂ ಮರೆಯಬಾರದು. ಈ ಸದನದಲ್ಲಿ ಕನ್ನಡ ಭಾಷೆಗೆ ಅಗ್ರಮಾನ್ಯತೆ ಇರಬೇಕು, ಸಾರ್ವಭೌಮತ್ವ ಇರಬೇಕು. ಕನ್ನಡ ಭಾಷೆ ಮೊದಲ ಭಾಷೆಯಾಗಿರಬೇಕು. ಆದ್ದರಿಂದ ಕನ್ನಡವನ್ನು ಮಾತನಾಡುವುದನ್ನು ಬಿಟ್ಟು ಬೇರೆ ಬೇರೆ ಎಲ್ಲ ಭಾಷೆಯಲ್ಲಿ ಮಾತನಾಡತಕ್ಕದ್ದು ಸರಿಯಲ್ಲ ವೆಂದು ಹೇಳಿ, ನಾನು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ತಮಗೆ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ೧೯೯೦-೯೧ನೇ ಸಾಲಿನ ೫-೬ ಖಾತೆಗಳ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ, ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ.

ಬಹಳ ಪ್ರಮುಖವಾದ ವಿಚಾರ ಎಂದರೆ, ವ್ಯವಸಾಯ ಕ್ಷೇತ್ರ. ನಮ್ಮ ರಾಜ್ಯದಲ್ಲಿ ಮಾತ್ರವಲ್ಲ ಇಡೀ ರಾಷ್ಟ್ರದಲ್ಲಿ ಶೇಕಡ ೭೫ ಭಾಗ ಜನರು ಈ ವ್ಯವಸಾಯ ಕಸಬನ್ನು ಅವಲಂಬಿಸಿದ್ದಾರೆ. ಆದರೂ ಈ ವ್ಯವಸಾಯ ಕ್ಷೇತ್ರಗಳಲ್ಲಿರತಕ್ಕ ಜನರ ಬಗ್ಗೆ ಯಾವುದೇ ಹೆಚ್ಚಿನ ಚಿಂತೆಯನ್ನೂ ಸರ್ಕಾರ ಮಾಡು ವುದಕ್ಕೆ ಹೋಗಿಲ್ಲ. ಇವತ್ತಿನ ದಿವಸ ವ್ಯವಸಾಯಗಾರರು ಅತ್ಯಂತ ಶೋಷಣೆಗೆ ಒಳಗಾಗಿದ್ದಾರೆ. ಬಹಳಷ್ಟು ಅನ್ಯಾಯಕ್ಕೆ ಸಿಕ್ಕಿದ್ದಾರೆ, ಎಲ್ಲರಿಗಿಂತ ಹೆಚ್ಚಿನ ಕಷ್ಟನಷ್ಟಗಳನ್ನು ಅವರು ಅನುಭವಿಸು ತ್ತಿದ್ದಾರೆ. ಅವರಿಗೆ ಸಿಕ್ಕಬೇಕಾದ ಸೌಲಭ್ಯಗಳು ಏನಿವೆ ಅವು ನಮ್ಮ ರಾಜ್ಯಸರ್ಕಾರ ಸೇವೆಯಲ್ಲಿರತಕ್ಕ ೪ನೇ ದರ್ಜೆಯ ನೌಕರನಿಗಿಂತಲೂ ಅತ್ಯಂತ ನಿಕೃಷ್ಟವಾಗಿದೆ ಎಂಬುದನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಿನ್ನೆಯ ದಿವಸ ಮಾನ್ಯ ಹಣಕಾಸಿನ ಮಂತ್ರಿಗಳು ಉತ್ತರ ಕೊಡುವಾಗ ಈ ರಾಜ್ಯದಲ್ಲಿರತಕ್ಕ ೪-೫ ಲಕ್ಷ ಸರ್ಕಾರಿ ನೌಕರರಿಗೆ ಕೊಡುತ್ತಿರತಕ್ಕಂಥ ಸೌಲಭ್ಯಗಳು, ಸಂಬಳಸಾರಿಗೆಗಳು ಎಷ್ಟರಮಟ್ಟಿಗೆ ಇವೆ ಎಂಬುದನ್ನು ಹೇಳಿದ ಸಂದರ್ಭದಲ್ಲಿ ನನಗೆ ಬಹಳ ವ್ಯಸನವಾಯಿತು. ಹಿಂದೆ ನಾನೂ ಕೂಡ ಮಂತ್ರಿಯಾಗಿದ್ದೆ. ಅವತ್ತಿಗೂ ಇವತ್ತಿಗೂ ಬಹಳಷ್ಟು ವ್ಯತ್ಯಾಸವಾಗಿದೆ. ರೈತನ ಜೀವನ ಸರ್ಕಾರಿ ಸೇವೆಯಲ್ಲಿ ಇರುವ ೪ನೇ ದರ್ಜೆಯ ನೌಕರನ ಜೀವನಕ್ಕಿಂತ ನಿಕೃಷ್ಟವಾಗಿದೆ. ನೂರಕ್ಕೆ ೭೫ ರಷ್ಟು ಜನರು, ವ್ಯವಸಾಯವನ್ನೇ ಅವಲಂಬಿಸಿ ದ್ದಾರೆ. ವ್ಯವಸಾಯಗಾರರಿಗೆ ಸರ್ಕಾರ ಅನ್ಯಾಯ ಮಾಡುವುದಿರಲಿ, ಪ್ರಕೃತಿಯೂ ಕೂಡ ಅನ್ಯಾಯ ಮಾಡುತ್ತಿದೆ. ಇವತ್ತು ಮಳೆ ಕೇವಲ ಬೆಂಗಳೂರಿನ ಸುತ್ತಮುತ್ತ ಬರುತ್ತಿದೆಯೋ ಹೊರತು ಹಳ್ಳಿಗಳ ಕಡೆ ಮಳೆ ಇಲ್ಲವೇ ಇಲ್ಲ. ನಾನು ಕೆಲವರಿಗೆ ತಮಾಷೆಗೆ ಹೇಳಿದೆ. ಮಳೆರಾಯನಿಗೂ ಮತ್ತು ಇತರೆ ದೇವರುಗಳಿಗೂ ಎಲೆಕ್ಷನ್ ಬಂದಿರಬೇಕೆಂದು ಭಾವಿಸಿದ್ದೇನೆಂದು ತಮಾಷೆಗೆ ಹೇಳಿದೆ. ಇವತ್ತು ಈ ರಾಜ್ಯದಲ್ಲಿ, ಈ ರಾಷ್ಟ್ರದಲ್ಲಿ ಸರಾಸರಿ ಒಬ್ಬನಿಗೆ ಎರಡು ಎಕರೆ ಅಥವಾ ಎರಡು ಎಕರೆಗಿಂತ ಸ್ವಲ್ಪ ಜಾಸ್ತಿ ಭೂಮಿ ಇರತಕ್ಕಂಥವರು ಬಹಳಷ್ಟು ಜನರು ಇದ್ದಾರೆ. ನಮ್ಮ ರಾಜ್ಯದಲ್ಲಿ ಮಾನ್ಯ ದಿವಂಗತ ದೇವರಾಜ ಅರಸ್‌ರವರು ಭೂಸುಧಾರಣೆ ಕಾಯಿದೆಯನ್ನು ಜಾರಿಗೆ ತಂದು ಲ್ಯಾಂಡ್ ಸೀಲಿಂಗ್ ಮಾಡಿ ಖುಷ್ಕಿ ಜಮೀನಿಗೆ ೧೦-೧೨ ಎಕರೆವರೆಗೆ ಇರತಕ್ಕಂಥ ಮಿತಿ ಹಾಕಿರತಕ್ಕಂಥಾದ್ದು, ಕಡಿವಾಣವನ್ನು ಹಾಕಿರತಕ್ಕಂಥಾದ್ದು ಇದ್ದರೂ ಸಹ ಇವತ್ತು ಅಷ್ಟು ಜಮೀನಿನಲ್ಲಿ ಆದಾಯ ಬರತಕ್ಕಂಥವರನ್ನು ಒಬ್ಬ ಸರ್ಕಾರಿ ನಾಲ್ಕನೆ ದರ್ಜೆಯ ನೌಕರನಿಗೆ ಹೋಲಿಸಿದರೆ ಅದಕ್ಕಿಂತಲೂ ಕಡಿಮೆ ಆದಾಯ ಬರ ತಕ್ಕಂಥಾದ್ದು ಈ ವ್ಯವಸಾಯ ಕ್ಷೇತ್ರ. ಇವತ್ತು ನಮ್ಮ ರಾಜ್ಯದಲ್ಲಿ ಎಷ್ಟು ಭಾಗ ಮಳೆ ಆಶ್ರಯ ಪಡೆಯ ತಕ್ಕಂಥದ್ದು. ಎಷ್ಟು ಪರ್ಸೆಂಟ್ ಜಮೀನಿಗೆ ಖಾತರಿಯಾದಂಥ ನೀರಾವರಿ ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕು. ಇವತ್ತು ಕೇವಲ ೧೮-೨೦ ಪರ್ಸೆಂಟ್ ನೀರಾವರಿ ಇರತಕ್ಕಂಥ ಭೂಮಿ ಇದೆ, ಮಿಕ್ಕಿದ್ದೆಲ್ಲ ಒಣಭೂಮಿ. ಮಳೆ ಆಶ್ರಯ ಇನ್ನಿತರ ಆಶ್ರಯದಿಂದ ಬೆಳೆಯನ್ನು ತೆಗೆಯ ತಕ್ಕಂಥ ಭೂಮಿ. ಇವತ್ತು ಮಳೆಯಾಶ್ರಯದಿಂದ ಬೆಳೆ ತೆಗೆಯುವುದು ಬಹಳ ಕಷ್ಟ. ಒಂದು ವರ್ಷ ಮಾರ್ಚ್, ಏಪ್ರಿಲ್ ತಿಂಗಳಿನಲ್ಲಿ ಮಳೆ ಪ್ರಾರಂಭವಾದರೆ ಅಂದರೆ ಯುಗಾದಿ ಹಬ್ಬದ ನಂತರ ಮಳೆ ಪ್ರಾರಂಭವಾದರೆ ಮಳೆ ಬಂದು ಬೆಳೆ ಕೈಗೆ ಬರುತ್ತದೆಂದು ನಿರೀಕ್ಷೆ ಮಾಡಿ ಇನ್ನೊಂದು ವರ್ಷದ ಯುಗಾದಿಯನ್ನು ರೈತ ನೋಡುತ್ತಾನೆ. ಅದು ಮುಂಗಾರು, ಹಿಂಗಾರು ಬೆಳೆ. ಆದ್ದರಿಂದ ರೈತನು ಬೆಳೆದಂಥ ಬೆಳೆಗೆ ಬರತಕ್ಕಂಥ ಆದಾಯ ಏನು ಮತ್ತು ಖಾತರಿಯಾಗಿ ನೀರಾವರಿಯಾಗತಕ್ಕ ಜಮೀನು ಎಷ್ಟು ಎನ್ನುವುದೆಲ್ಲವನ್ನು ವಿಶ್ಲೇಷಣೆ ಮಾಡಿ ನೋಡಿದರೆ ಈ ರಾಷ್ಟ್ರದಲ್ಲಿ ಮತ್ತು ಈ ರಾಜ್ಯದಲ್ಲಿ ವ್ಯವಸಾಯ ಮಾಡತಕ್ಕಂಥದರು ದೇವರಿಂದ ಶಾಪ ಪಡೆದಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಇವತ್ತು ರೈತನ ಬೆಳೆಗಳಿಗೆ ಒಂದು ಬೆಲೆಯನ್ನು ನಿಗದಿ ಮಾಡತಕ್ಕಂಥದ್ದು ಅಗ್ರಿಕಲ್ಚರ್ ಪ್ರೈಸ್

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕಮಿಷನ್. ಈ ರಾಜ್ಯದಲ್ಲಿ ಕಬ್ಬಿನ ಬೆಲೆ ಹತ್ತಿ ಬೆಲೆ ನಿಗದಿ ಮಾಡತಕ್ಕಂಥವರು ಸಹಿತ ಅವರೇ, ರಾಗಿ, ಭತ್ತ ಜೋಳ ಇವುಗಳ ಬೆಲೆಯನ್ನು ನಿಗದಿ ಮಾಡತಕ್ಕಂಥವರು ಅವರೇ. ಇವುಗಳನ್ನು ಹೋಲಿಸಿ ನೋಡಿ ಈಗಿನ ಕಾಸ್ಟ್ ಆಫ್ ಕಲ್ಟಿವೇಷನ್‌ಗೆ ತಕ್ಕಂತೆ ಬೆಲೆಗಳನ್ನು ನಿಗದಿಪಡಿಸಿ ಕೊಡಬೇಕು. ಇವತ್ತಿನ ದಿವಸ ವ್ಯವಸಾಯಗಾರರು ಉಪಯೋಗಿಸತಕ್ಕಂಥ ಮಾರಮುಟ್ಟು. ವ್ಯವಸಾಯದ ಉಪಕರಣಗಳಾಗಲಿ, ರಾಸಾಯನಿಕ ಗೊಬ್ಬರಗಳಾಗಲಿ, ಕೀಟನಾಶಕಗಳಾಗಲಿ ಎಲ್ಲದರ ಬೆಲೆಯೂ ಗಗನಕ್ಕೇರಿರುತ್ತದೆ. ಇವತ್ತು ದಿನಗೂಲಿ ಮಾಡತಕ್ಕಂಥವರು, ರೈತರ ಜಮೀನಿನಲ್ಲಿ ಕೆಲಸಮಾಡತಕ್ಕಂಥ ಕೂಲಿಗಾರರು ದೊಡ್ಡ ದೊಡ್ಡ ಪಟ್ಟಣಗಳಿಗೆ ವಲಸೆ ಹೋಗಿದ್ದಾರೆ. ಇದಕ್ಕೆ ಕಾರಣವೇನೆಂದರೆ, ಹಳ್ಳಿಗಳಲ್ಲಿ ಅವರಿಗೆ ಕುಡಿಯುವುದಕ್ಕೆ ಸರಿಯಾಗಿ ನೀರು ಸಿಗುವುದಿಲ್ಲ ಸ್ಯಾನಿಟೇಷನ್ ಇಲ್ಲ. ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದರೆ ಆರೋಗ್ಯ ಇಲಾಖೆಯ ಸೇವೆ ದೊರಕುವುದಿಲ್ಲ. ಬೆಂಗಳೂರಿಗೆ ಬಂದರೆ, ಎಲ್ಲ ಸೌಕರ್ಯಗಳು ಸಿಗುತ್ತದೆ. ಬೆಂಗಳೂರಿನಲ್ಲಿರುವಂಥ ಜನರಿಗೆ ಮಲಗಿದ ಜಾಗದಲ್ಲೇ ನಲ್ಲಿ ನೀರು ಬಿಡುತ್ತಾರೆ. ಶವರ್‌ಬಾತ್, ಉದ್ಯಾನವನಗಳು ಇವೆ. ಬೆಂಗಳೂರಿನಲ್ಲಿ ಸಾಯಂಕಾಲವಾದರೆ ಒಬ್ಬ ಕೆಳದರ್ಜೆ ನೌಕರ ತನ್ನ ಸಂಸಾರವನ್ನು ಕರೆದುಕೊಂಡು ವಿಹಾರಾರ್ಥವಾಗಿ ಕಬ್ಬನ್‌ಪಾರ್ಕ್, ಲಾಲ್‌ಬಾಗ್‌ನಲ್ಲಿ ಓಡಾಡತಕ್ಕಂಥ ಭಾಗ್ಯವನ್ನು ಪಡೆದಿರುತ್ತಾನೆ, ಅದರಂತೆ ಹಳ್ಳಿಗಳಲ್ಲಿಯೂ ಬೇಕೆಂದು ಹೇಳುವುದಿಲ್ಲ. ಹಳ್ಳಿಗಳ ಪರಿಸ್ಥಿತಿ ಏನಿದೆ ಎನ್ನುವುದನ್ನು ನೋಡಬೇಕು. ಅಲ್ಲಿ ರಸ್ತೆಗಳಿಲ್ಲ, ನೀರಿಲ್ಲ, ಆರೋಗ್ಯದಿಂದ ಸೌಲಭ್ಯಗಳಿಲ್ಲ. ಅಧ್ಯಕ್ಷರೇ, ತಮ್ಮ ತಂದೆತಾಯಿಯರು ಮತ್ತು ತಾವು ವ್ಯವಸಾಯದಲ್ಲಿ ತೊಡಗಿರುವವರು. ಮನೆಯಲ್ಲಿ ಬೆಳಿಗ್ಗೆ ಎದ್ದರೆ ಸಣ್ಣ ಮಕ್ಕಳನ್ನು ಹೊರಗಡೆ ಕಳುಹಿಸಿ ರಸ್ತೆಯಲ್ಲಿ ಮತ್ತು ಹೊಲದಲ್ಲಿ ಹುಲ್ಲನ್ನು ತೆಗೆಯತಕ್ಕಂಥದ್ದು, ಸಗಣಿ ಕೂಡಿ ಹಾಕತಕ್ಕಂಥದ್ದು. ತೋಟದಲ್ಲಿ ನೀರನ್ನು ಕಟ್ಟತಕ್ಕಂಥದ್ದು, ಮತ್ತು ಅಲ್ಲಿ ಬರತಕ್ಕ ಕಾಯಿಲೆಗಳು ಇವುಗಳೆಲ್ಲದರ ದೃಷ್ಯ ನೋಡಿದರೆ ಅವರಿಗೆ ನಿಜವಾಗಿಯೂ ಇದು ಒಂದು ಶಾಪವೆಂದೇ ಹೇಳಬೇಕಾಗಿದೆ. ಈ ವ್ಯವಸಾಯ ಎನ್ನತಕ್ಕಂಥದ್ದನ್ನು ನಾನು ಬಿಡಿಸಿ ಹೇಳುತ್ತೇನೆ. ವ್ಯವಸಾಯ ಅಂದರೆ ಯಾವಾಗಲೂ ವ್ಯವಹಾರ ಮಾಡುತ್ತಾ ಸಾಯಿ ನಿನ್ನ ಜಮೀನಿನಲ್ಲಿ ಎಂದು ಅರ್ಥ. ಇದು ದೇವರ ಶಾಪವೆಂದೇ ತಿಳಿದುಕೊಳ್ಳಬೇಕಾಗಿದೆ. ಯಾರೇ ಸಣ್ಣ ಕಾರ್ಮಿಕನಾಗಲಿ, ಸರ್ಕಾರಿ ನೌಕರನಾಗಲಿ, ಪೋಲೀಸ್ ನೌಕರನಾಗಲಿ ಮತ್ತೊಂದು ಕ್ಷೇತ್ರದಲ್ಲಿರತಕ್ಕಂಥ ನೌಕರರು ಎಲ್ಲರೂ ಸಂಘಟಿತರಾಗಿದ್ದಾರೆ. ಒಂದು ಫ್ಯಾಕ್ಟರಿಯಲ್ಲಿ ಏಳು ಜನ ಕೆಲಸ ಮಾಡುತ್ತಿದ್ದರೆ ಅವರು ಒಂದು ಯೂನಿಯನ್ ಮಾಡಿಕೊಂಡು, ಕೆಂಪು ಬಾವುಟ ಹಿಡಿದುಕೊಂಡು ಬೇಡಿಕೆಗಳನ್ನು ಇಟ್ಟುಕೊಂಡು ವಿಧಾನಸೌಧಕ್ಕೆ ಬರುತ್ತಾರೆ. ಅದಕ್ಕೆ ಪೋಲೀಸ್ ಕಮಿಷನರ್ ಸೆಕ್ಷನ್ ೧೪೪ ಜಾರಿಗೆ ತಂದಿದ್ದರೂ ಸಹ ಅವರಲ್ಲಿ ಕೆಲವರನ್ನು ನಿಯೋಗದಲ್ಲಿ ಕಳುಹಿಸಿ ಮುಖ್ಯಮಂತ್ರಿಗಳನ್ನೋ, ಸಂಬಂಧಪಟ್ಟ ಮಂತ್ರಿಗಳನ್ನೋ ನೋಡುತ್ತಾರೆ. ಬಹುಶಃ ಇವತ್ತು ರೈತರ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ಎದುರು ಪಕ್ಷದಲ್ಲಿರುವವರು ಬಿಜೆಪಿ.ಯವರು, ರೈತ ಸಂಘದವರು ಎಲ್ಲರೂ ಹೇಳುತ್ತಾರೆ. ರೈತರಿಗೆ ಅದು ಮಾಡಿ, ಇದು ಮಾಡಿ, ಅವರು ಸಾಲವನ್ನು ಮನ್ನಾ ಮಾಡಿ ಎಂದು ಹೇಳುತ್ತಾರೆ, ಇವತ್ತು ಏನಾಗಿದೆ? ಸಾಲ ಮನ್ನಾದ ಬಗ್ಗೆ ಅವರು ಹೇಳಿದ ಮಾತನ್ನು ನಾನು ದೃಢೀಕರಿಸುತ್ತೇನೆಂದು ತಿಳಿದುಕೊಳ್ಳಬಾರದು. ಇವತ್ತು ರೈತರ ಪರಿಸ್ಥಿತಿ ಏನಾಗಿದೆ ಎಂಬುದನ್ನು ನೋಡಿ. ತಾವು ಅಮೇರಿಕಾ ಮುಂತಾದ ಪಾಶ್ಚಿಮಾತ್ಯ ದೇಶಗಳಿಗೆ ಹೋಗಿದ್ದೀರಿ, ನಾನು ಕೂಡ ಹೋಗಿದ್ದೇನೆ. ಅಮೇರಿಕಾ ದೇಶದಲ್ಲಿ ಒಬ್ಬೊಬ್ಬರು ೪೦೦ ಎಕರೆವರೆಗೆ ಜಮೀನನ್ನು ಇಟ್ಟುಕೊಂಡಿರುತ್ತಾರೆ. ನಮ್ಮ ದೇಶದಲ್ಲಿ ಅಂಥವರು ಸಿಗುವುದು ಅಪರೂಪ. ಎರಡು ಎಕರೆ ಸರಿಯಾಗಿ ಜಮೀನು ಇರುವುದಿಲ್ಲ, ಆದಾಯ ಇರುವುದಿಲ್ಲ. ಎರಡು ಎಕರೆಯಿಂದ ಬರತಕ್ಕ ಆದಾಯದಲ್ಲಿ ಅವನು ಮಗನಿಗೆ ಸ್ಲೇಟು, ಪುಸ್ತಕ ತೆಗೆದುಕೊಡುವುದಕ್ಕಾಗುವುದಿಲ್ಲ. ಇವತ್ತಿನ ದಿವಸ ಯಾವುದೇ ಕಾರ್ಖಾನೆ ಇರಲಿ. ಅದು ಯಾವುದಾದರೂ ಒಂದು ವಸ್ತುವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದರೆ ರೇಟ್ ಫಿಕ್ಸ್ ಮಾಡುತ್ತದೆ. ಒಂದು ಸೂಜಿಯನ್ನು ತೆಗೆದುಕೊಂಡರೆ ಅದರ ಬೆಲೆ ೩ ಪೈಸೆ ಇರುತ್ತದೆ. ೩ ಪೈಸೆ ಇಲ್ಲದೆ ಸೂಜಿಯನ್ನು ಮಾರಾಟ ಮಾಡುವುದಿಲ್ಲ. ರೈತ ಕಷ್ಟಪಟ್ಟು ಬೆಳೆದ ಬೆಳೆಗೆ ಯಾವ ಬೆಲೆ ಸಿಗುತ್ತಿದೆ ಎಂಬುದನ್ನು ನೀವೆ ನೋಡಬಹುದು. ರೈತ ಎಷ್ಟೋ ಬೆಳೆಗಳನ್ನು ಮಳೆ ಆಶ್ರಯ ಪಡೆದು ಬಹಳ ಕಷ್ಟಪಟ್ಟು ಬೆಳೆದಿರುತ್ತಾನೆ. ತನಗೆ ಬೇಕಾದಾಗ ನೀರು ಪಡೆದು ವ್ಯವಸಾಯ ಮಾಡಬೇಕಾದರೆ ಬೋರ್‌ವೆಲ್ ಹಾಕುವುದಕ್ಕೆ ೩೦-೪೦ ಸಾವಿರ ರೂಪಾಯಿ ಬೇಕಾಗುತ್ತದೆ. ಬೋರ್‌ವೆಲ್ ಹಾಕಿದರೂ ಕರೆಂಟ್ ಸಿಗುವುದಿಲ್ಲ. ಅದಕ್ಕೆ ಪ್ರೈಯಾರಿಟಿ ರೈತ ಮಾಡಿದ ಸಾಲಕ್ಕೆ ಬಡ್ಡಿ ಕಟ್ಟಿಕೊಂಡು ಬರುತ್ತಿದ್ದರೂ ಪಂಪ್‌ಸೆಟ್‌ಗಳನ್ನು ಎನರ್ಜೈಸ್ ಮಾಡುವುದಿಲ್ಲ. ಹೀಗಾದರೆ ಎರಡು ಎಕರೆ ಭೂಮಿಯಲ್ಲಿ ಎಷ್ಟು ಪ್ರಮಾಣದಲ್ಲಿ ಬೆಳೆಯನ್ನು ಬೆಳೆಯಬಹುದೆಂಬುದನ್ನು ಆಲೋಚನೆ ಮಾಡಿ. ಅವನು ಹೇಗೋ ಕಷ್ಟಪಟ್ಟು ಬೆಳೆದ ಧಾನ್ಯಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದಕ್ಕೆ ಹೋದರೆ ಅಲ್ಲಿ ದಳ್ಳಾಳಿಗಳು, ವರ್ತಕರಿಂದ ಶೋಷಣೆ. ರೈತ ತಾನು ಬೆಳೆದ ಬೆಳೆ

ಗಳನ್ನು ಬೆಂಗಳೂರಿಗೆ ತಂದರೆ ಅವಕ್ಕೂ ತೊಂದರೆ. ಆದರೆ ಅದೇ ಕೈಗಾರಿಕೆಯಿಂದ ಉತ್ಪನ್ನವಾಗತಕ್ಕ ಸೂಜಿಯಿಂದ ಹಿಡಿದು ಮೋಟಾರ್ ಕಾರ್, ಏರೋಪ್ಲೇನ್‌ವರೆಗೆ ಎಲ್ಲ ವಸ್ತುಗಳಿಗೂ ಬೆಲೆ ನಿಗದಿ ಮಾಡಿರುತ್ತಾರೆ. ನಾವು ಅಗ್ರಿಕಲ್ಚರಲ್ ಪ್ರೈಸ್ ಕಮೀಷನ್ ಅನ್ನು ನೋಡಿದ್ದೇವೆ. ಅವರೆಲ್ಲ ಬರೀ ಥಿಯರಿ ಪ್ರಕಾರ ಮಾಡುವವರು. ಕಾಸ್ಟ್ ಆಫ್ ಕಲ್ಟಿವೇಷನ್ ಒಂದು ಬೆಳೆಯ ಭತ್ತಕ್ಕೆ ಎರಡು ಸಾವಿರ ರೂಪಾಯಿ ಅಂದರೆ, ಇಲ್ಲ ೫೦೦ ರೂಪಾಯಿ ಎಂದು ಅವರು ಬರೆಯುವುದು. ಅವರು ನಿಗದಿ ಮಾಡತಕ್ಕ ಬೆಲೆ ಮಾರುಕಟ್ಟೆಯ ಬೆಲೆಗಿಂತ ಕಡಿಮೆ ಇರುತ್ತದೆ. ತಿಪಟೂರು ಮತ್ತು ಅರಸೀಕೆರೆ ಕಡೆಯ ಶಾಸಕರು ಕೊಬ್ಬರಿ ಬೆಲೆ ಬಿದ್ದು ಹೋಗಿದೆ, ತೆಂಗಿನಕಾಯಿ ಬೆಲೆ ಬಿದ್ದು ಹೋಗಿದೆ ಎಂದು ಹೇಳುತ್ತಿದ್ದರು. ನಾನು ಮೊನ್ನೆ ಮಂಡ್ಯಕ್ಕೆ ಹೋಗಿದ್ದೆ. ಕನ್ನಂಬಾಡಿ ಕಟ್ಟೆಯ ಆಶ್ರಯದಲ್ಲಿ ಇರತಕ್ಕ ಭೂಮಿಗೆ ೨೦ ದಿವಸ ನೀರು ದೊರೆಯದೆ ಕಬ್ಬೆಲ್ಲ ಒಣಗಿ ಹೋಗಿದೆ. ಒಂದು ಹಂತದಲ್ಲಿ ಕಬ್ಬು ಒಣಗಿದರೆ ಷುಗರ್‌ಕೇನ್ ಈಲ್ಡ್ ಕಡಿಮೆಯಾಗುತ್ತದೆ. ಯಾವಾಗ ಅದು ಕಡಿಮೆಯಾಯಿತೋ ಆಗ ರೈತ ಮುಂದೆ ಬರುವ ಹಾಗೆ ಇಲ್ಲ. ಹೀಗಿದ್ದರೂ ರೈತರ ಹತ್ತಿರ ಲೆವಿ ವಸೂಲ್ಮಾಡುವುದನ್ನು ಬಿಡುವುದಿಲ್ಲ. ರೈತನ ಬೆಳೆಗೆ ಬೆಲೆ ನಿಗದಿ ಮಾಡಿ ಅವನಿಗೆ ಖಾತ್ರಿಯಾಗಿ ಹಣ ಕೊಡುವುದಿಲ್ಲ. ಹಣ್ಣು ತರಕಾರಿಗಳನ್ನು ಬೆಂಗಳೂರಿಗೆ ತೆಗೆದುಕೊಂಡು ಬಂದರೆ ಶೋಷಣೆ ಮಾಡುತ್ತಾರೆ. ಬೆಂಗಳೂರಿಗೆ ದಳ್ಳಾಳಿಗಳು ಕೋಟ್ಯಾಧೀಶರಾಗಿದ್ದಾರೆ. ದ್ರಾಕ್ಷಿ ಬೆಳೆ ಬೆಳೆಯಲಿ, ಯಾವುದೇ ಬೆಳೆ ಬೆಳೆಯಲಿ, ಇದಕ್ಕೆ ಬೆಲೆ ನಿಗದಿ ಮಾಡಿ ಎಂದರೆ ಅಗ್ರಿಕಲ್ಚರಲ್ ಪ್ರೈಸ್ ಕಮೀಷನ್‌ನವರು ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತುಕೊಂಡು ಬೆಲೆಯನ್ನು ಗೊತ್ತು ಮಾಡುತ್ತಾರೆ. ಅಗ್ರಿಕಲ್ಚರಲ್ ಕಾಲೇಜಿನಲ್ಲಿ ಓದುವ ಒಬ್ಬ ಹುಡುಗ ಬಂದು ನನ್ನ ರೂಮಿನಲ್ಲಿ ಇದ್ದ. ಅವನು ರಾಗಿ ಬೆಳೆ ಮರಆಗುತ್ತದೆಯೋ ಎಂದು ಕೇಳಿದ. ಹೀಗೆ ಅಗ್ರಿಕಲ್ಚರಲ್ ಪ್ರೈಸ್ ಕಮೀಷನ್‌ನಲ್ಲಿರತಕ್ಕವರು ಕೆಸರು ಗದ್ದೆ ನೋಡಿರುವುದಿಲ್ಲ, ಹೊಲ ಅಂದರೆ ಏನೇದು ಗೊತ್ತಿರುವುದಿಲ್ಲ. ಅಂಥವರು ಅಕ್ಕಿ, ಭತ್ತ, ರಾಗಿ ಇವುಗಳಿಗೆ ಬೆಲೆಯನ್ನು ನಿಗದಿ ಮಾಡುತ್ತಾರೆ. ಅಂದಾಗ ಎಷ್ಟರಮಟ್ಟಿಗೆ ಬೆಲೆಯನ್ನು ನಿಗದಿ ಮಾಡಿಯಾರು ಎಂಬುದನ್ನು ನೀವು ಯೋಚಿಸಬಹುದು. ನಾನು ಅಂಕಿ ಅಂಶಗಳನ್ನು ಇಟ್ಟುಕೊಂಡು ಮಾತನಾಡುವುದಕ್ಕೆ ಹೋಗುವುದಿಲ್ಲ, ನಾನು ರೈತನ ಮಗ, ರೈತ ಜೀವನವೇ ನನ್ನ ಮೂಲ ಜೀವನ ಮತ್ತು ನನ್ನ ಕೊನೆಯವರೆಗಿನ ಜೀವನ. ನನಗೂ ಒಂದೊಂದು ಸಾರಿ ಅನ್ನಿಸುತ್ತದೆ. ಈ ವ್ಯವಸಾಯ ಮಾಡಿಕೊಂಡು ಏಕೆ, ನಾನು ಒಂದು ಫ್ಯಾಕ್ಟರಿ ಹಾಕಿಬಿಡೋಣ ಅಥವಾ ನಿನ್ನೆ ಹೇಳುತ್ತಿದ್ದರಲ್ಲ ಹಾಗೆ ನಾನು ರೆಕ್ಟಿಫೈಡ್ ಸ್ಪಿರಿಟ್ ಮಾಡೋಣ, ಇಲ್ಲವೇ ನಾನು ಒಬ್ಬ ಡೈರೆಕ್ಟರ್ ಆಗಿ.........

ಅಧ್ಯಕ್ಷರು.—ರೆಕ್ಟಿಫೈಡ್ ಸ್ಪಿರಿಟ್ ಇದೆಯಲ್ಲ ಅವಕ್ಕೆ ಪ್ರಯತ್ನ ಮಾಡಿ !

ಶ್ರೀ ಎನ್. ಚಿಕ್ಕೇಗೌಡ.—ನನಗೆ ಬೇಕಾಗಿಲ್ಲ, ಅಂಥಾದ್ದು ನಾನು ಯಾವುದೂ ಮಾಡಿಲ್ಲ, ಮಾಡಿದ್ದರೆ ಸದನದಲ್ಲಿ ಯಾರಾದರೂ ಘಂಟಾಘೋಷವಾಗಿ ಪ್ರಶ್ನೆ ಮಾಡಬಹುದು.

೧೨.೦೦ ಪಿ. ಎಂ.

ನಾನು ಉದಾಹರಣೆ ಹೇಳಿದ್ದು ಅಷ್ಟೆ. ಸರ್ಕಾರಿ ಕನಿಷ್ಠ ನೌಕರನಿಗೆ ಇರತಕ್ಕ ಸೌಲಭ್ಯ, ಅವನಿಗೆ ಬರತಕ್ಕ ಸಂಬಳದಲ್ಲಿ ಇರತಕ್ಕ ತೃಪ್ತಿ, ಅವನು ಸಾಯಂಕಾಲ ಗಾಳಿ ವಿಹಾರಕ್ಕೆ ಮನರಂಜನೆಗೆ ಹೋಗತಕ್ಕದ್ದು ಏನಿದೆ ಅದು ಹಳ್ಳಿಯಲ್ಲಿರುವವರಿಗೆ ಇಲ್ಲ. ಹಳ್ಳಿಯಲ್ಲಿ ೧೦೦ ಎಕರೆ ೨೦೦ ಎಕರೆ ಎಂದು ಒಂದು ಸ್ಟ್ಯಾಂಡರ್ಡ್ ಸೀಲಿಂಗ್ ಇದೆ. ಅದು ನಿಮಗೆ ಗೊತ್ತಿದೆ. ಉದಾಹರಣೆಗೆ ನಿಮ್ಮ ಮಂಡ್ಯ ಜಿಲ್ಲೆಯನ್ನೇ ತೆಗೆದುಕೊಳ್ಳೋಣ. ಏಕೆಂದರೆ. ತಾವು ಅದನ್ನು ಪ್ರತಿನಿಧಿಸುವವರು. ಅಲ್ಲಿ ಭತ್ತ ಹಾಕುತ್ತಾರೆ. ಕಬ್ಬು ಹಾಕುತ್ತಾರೆ ಕಬ್ಬು ಕಮರ್ಷಿಯಲ್ ಕ್ರಾಪ್. ಇವತ್ತು ಎಷ್ಟು ಜನ ರೈತರ ಮನೆಯಲ್ಲಿ ೫೦ ರೂಪಾಯಿ ಬೆಲೆಬಾಳುವ ಚೊಕ್ಕಟವಾದ ಸೀರೆ ಕಟ್ಟಿಕೊಂಡಿರುವ ಹೆಣ್ಣುಮಕ್ಕಳನ್ನು ನೋಡಿದ್ದೀರಿ? ನಾವು ಯಾರಾದರೂ ಅಲ್ಲಿಗೆ ಹೋದರೆ ಹೆಣ್ಣುಮಕ್ಕಳು ಸೀರೆ ಹರಿದುಹೋಗಿರುವುದರಿಂದ ಮುಚ್ಚಿಕೊಂಡು ಓಡಾಡುತ್ತಾರೆ. ಇವತ್ತು ರೈತರು ಒಂದು ಲೂನಾ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಕಿತ್ತು ಹೋಗಿರುವ ನಿಕ್ಕರ್ ಹಾಕಿಕೊಂಡಿರುತ್ತಾರೆ. ಹೆಣ್ಣುಮಕ್ಕಳ ಬಟ್ಟೆ ಹರಿದುಹೋಗಿರುತ್ತದೆ. ಅವರು ಗರ್ಭಿಣಿಯಾಗಿರಲಿ, ಬಾಣಂತಿಯಾಗಿರಲಿ ಹೊಲಕ್ಕೆ ಊಟ ತೆಗೆದುಕೊಂಡು ಹೋಗಬೇಕು. ಇಲ್ಲಾದರೆ ಮೆಡಿಕಲ್ ಲೀವ್ ಮೆಟರ್ನಿಟಿ ಲೀವ್ ವಿಹಾರಾರ್ಥವಾಗಿ ಹೋಗುವುದಕ್ಕೆ ಎಲ್.ಟಿ.ಸಿ. ಮುಂತಾದ ಸೌಲಭ್ಯಗಳು ಇವೆ ಎಂದು ನಿನ್ನೆ ಮಂತ್ರಿಗಳು ಹೇಳಿದ್ದನ್ನು ಕೇಳಿ ನನಗೆ ದಿಗ್ಭ್ರಮೆಯಾಯಿತು. ಹಿಂದೆ ನಾನೂ ಕೂಡ ಮಂತ್ರಿಯಾಗಿದ್ದೆ. ಇವತ್ತು ರಾಜ್ಯದ ಒಟ್ಟು ಆದಾಯದಲ್ಲಿ ೧೦೦ಕ್ಕೆ ೭೫ ರೂಪಾಯಿ ಸರ್ಕಾರಿ ನೌಕರರಿಗೆ ಖರ್ಚಾಗುತ್ತದೆ ಎಂದು ನಾನು ಘಂಟಾಘೋಷವಾಗಿ ಹೇಳುತ್ತಿದ್ದೇನೆ.

ಮಾನ್ಯ ಮಂತ್ರಿಗಳು ಹೇಳುವಾಗ ಪರ್ಸಂಟೇಜ್ ಸರಿಯಾಗಿ ಹೇಳಲಿಲ್ಲ. ನಾನು ಸರ್ಕಾರಿ ನೌಕರರಿಗೆ ಕೊಡಬೇಡಿ ಎಂದು ಹೇಳುವುದಿಲ್ಲ. ಆದರೆ ದೇಶಕ್ಕೆ ಅವರಿಂದ ಏನಾಗಿದೆ ? ಎಷ್ಟು ಲಾಭವಾಗಿದೆ ? ಯಾರಿಗೆ ಲಾಭವಾಗಿದೆ ಎಂದು ನೋಡಬೇಕು. ಇವತ್ತು ಸರ್ಕಾರಿ ನೌಕರರನ್ನು ಅಲ್ಲಗಳೆಯುವುದಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ನಾನು ನೋಡಿದ್ದೇನೆ. ನಾನು ಮಂತ್ರಿಯಾಗಿದ್ದಾಗ ಕಾಂಟ್ರಾಕ್ಚುಯಲ್ ಸಿಸ್ಟಂ ಆಫ್ ಸಿವಿಲ್ ಸರ್ವೀಸ್ ಎಂದು ಒಂದು ಸಿಸ್ಟಂ ಇಂಟ್ರೊಡ್ಯೂಸ್ ಮಾಡಿದ್ದೆ. ಆ ರೀತಿ ಮಾಡಿದರೆ ದಕ್ಷತೆ ಹೆಚ್ಚಾಗುತ್ತದೆ. ೨೫ ವರ್ಷಗಳು ನಾವಿರುತ್ತೇವೆ ಎಂಬುದನ್ನು ಅವರು ಮರೆಯುತ್ತಾರೆ. ಪಾಶ್ಚಿಮಾತ್ಯ ದೇಶಗಳಲ್ಲಿ ಈ ವ್ಯವಸ್ಥೆ ಇದೆ. ಅಲ್ಲಿ ನಾನು ನೋಡಿಕೊಂಡು ಬಂದಿದ್ದೇನೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಕಾಂಟ್ರಾಕ್ಚುಯಲ್ ಸ್ಟಂ ಆಫ್ ಸಿವಿಲ್ ಸರ್ವೆಂಟ್ಸ್ ಎಂದು ಮಾಡುವ ಬಗ್ಗೆ ಯೋಚನೆ ಮಾಡಿ. ಮೊದಲು ್ರಯೋಗಿಕವಾಗಿ ಮಾಡಿ ನೋಡಿ. ನಾನು ಮಂತ್ರಿಯಾಗಿದ್ದಾಗ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಮತ್ತು ್ರೆಕ್ಟರ್ ಆಫ್ ಅನಿಮಲ್ ಹಸ್ಬೆಂಡರಿ ಇವರಿಬ್ಬರನ್ನು ರೂಲ್ಸ್ ಅಮೆಂಡ್ ಮಾಡಿ ಕಾಂಟ್ರಾಕ್ಚುಯಲ್ ಸಿಸ್ಟಂನಲ್ಲಿ ಅಪಾಯಿಂಟ್ ಮಾಡಿದ್ದೆ. ನಾನು ಪ್ರಯೋಗ ಮಾಡಿದಾಗ ಅದರಿಂದ ದಕ್ಷತೆ ಹೆಚ್ಚಾಯಿತು. ಏನೇ ಆದರೂ ೨೦–೨೫ ವರ್ಷ ನಾವು ಅಧಿಕಾರದಲ್ಲಿ ಇರುತ್ತೇವೆ ಎಂಬ ಮನೋಭಾವ ಅವರಲ್ಲಿ ಹೋಗುತ್ತದೆ. ನಾವಾಗಲೀ, ಮುಖ್ಯಮಂತ್ರಿಗಳಾಗಲೀ ಸದನದ ಬಹುಮತವಿರುವವರೆಗೆ ಇರುತ್ತೇವೆ. ಇಲ್ಲದೇ ಹೋದರೆ ಹೋಗುತ್ತೇವೆ. ಇಲ್ಲಿ ಬಹುಮತ ಹೋದರೆ ರಾಷ್ಟ್ರಾಧ್ಯಕ್ಷರ ಆಡಳಿತ ಬರುತ್ತದೆ. ಆಗ ನಾವು ಶಾಸಕರಾಗಿಯೂ ಇರುವುದಿಲ್ಲ. ಮಂತ್ರಿಗಳಾಗಿಯೂ ಇರುವುದಿಲ್ಲ, ಜನರು ಐದು ವರ್ಷಗಳವರೆಗೆ ಇರಿ ಎಂದು ಓಟು ಕೊಟ್ಟು ಕಳುಹಿಸಿದರೂ ಒಂದೇ ದಿವಸಕ್ಕೆ ಹೋಗಬಹುದು ಒಂದೇ ವರ್ಷಕ್ಕೆ ಹೋಗಬಹುದು. ಇದು ಇರುವ ವ್ಯವಸ್ಥೆ. ಈಗತಾನೆ ಶಾಸಕರಾದ ವಾಟಾಳ್ ನಾಗರಾಜ್ ಅವರು ಹೇಳುತ್ತಿದ್ದರು. ಐ.ಎ.ಎಸ್. ಅಧಿಕಾರಿಗಳು ಮತ್ತು ಐ.ಪಿ.ಎಸ್. ಅಧಿಕಾರಿಗಳು ಸೂಪರ್ ಹ್ಯೂಮನ್ ಬೀಯಿಂಗ್ಸ್ ಎಂದು. ಆಕಾಶದಿಂದ ಧರೆಗೆ ಇಳಿದ ಜನರು ಎಂದು ತಿಳಿದುಕೊಂಡಿರುವ ಅವರ ಮನೋಭಾವ ಹೋಗಬೇಕು. ನಾವು ಸಹ ಪಬ್ಲಿಕ್ ಸರ್ವೆಂಟ್ಸ್, Government Servents are also public servants and they have got certain obligations, functions, duties, responsibtlies and also service conditions under CCA......ಇದು ಇರತಕ್ಕ ವಾಸ್ತವ ಅಂಶ, ಇದನ್ನು ಹೇಳಿದರೆ ಏನಪ್ಪ ಸರ್ಕಾರಿ ನೌಕರರ ಬಗ್ಗೆ ಹೇಳಿದರು ಅನ್ನುತ್ತಾರೆ. ವಾಟಾಳ್ ನಾಗರಾಜ್ ಅವರು ಹೇಳುತ್ತಿದ್ದರು. ವಿರೋಧ ಪಕ್ಷದವರೂ ಇದ್ದಾರೆ. ಶಾಸಕರೂ ಅಷ್ಟೆ, ದಯವಿಟ್ಟು ಯಾರೂ ತಪ್ಪು ತಿಳಿದುಕೊಳ್ಳಬೇಡಿ. ನಾವೇನು ಕೆಲಸ ಮಾಡುತ್ತೇವೆ ಅಂದರೆ ಅಧಿಕಾರಿಗಳ ವರ್ಗಾವಣೆ ಬಗ್ಗೆ ಮಾಡುವುದಕ್ಕೆ ಹೋಗುತ್ತೇವೆ. ಇವತ್ತು ಎಷ್ಟು ಅಭಿವೃದ್ಧಿ ಕಾರ್ಯಗಳು ಆಗಿವೆ, ಕೊಳವೆಬಾವಿಗಳ ಎಷ್ಟಾಗಿವೆ ಎಂಬುದರ ಬಗ್ಗೆಯೂ ನೋಡಬೇಕು. ಅಭಿವೃದ್ಧಿ ಕಾರ್ಯ ಮಾಡುವುದಕ್ಕೆ ದುಡ್ಡೇ ಇಲ್ಲವಲ್ಲ, ಯಾರೋ ಹೇಳಿದರುಏನೆಂದರೆ. ಒಂದು ಪ್ರಾಣಿಯನ್ನು ಹೊಡೆದು ನಾಯಿಗೆ ಹಾಕಿದರು ನಾಯಿಯನ್ನು ಹೊಡೆದು ಹದ್ದಿಗೆ ಹಾಕಿದರು, ಹದ್ದನ್ನು ಹೊಡೆದು ರಣಹದ್ದಿಗೆ ಹಾಕಿದರು ಎಂದು ಸರ್ಕಾರಿ ನೌಕರರಿಗೆ ೨೦೦೦ ಡಿ.ಎ. ಹೊತ್ತಿಗೆ ೩೦೦೦ ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಮಾನ್ಯ ಹಣಕಾಸಿನ ಮಂತ್ರಿಗಳು ಹೇಳಿದರು. ಏತಕ್ಕೆ ಸ್ವಾಮಿ, ಇಷ್ಟೊಂದು ಹಣ ? ಎಲ್ಲಿ ನೋಡಿದರೂ ನೌಕರರಿದ್ದಾರೆ ಒಂದೊಂದು ಇಲಾಖೆಯಲ್ಲಿ ೧೧ ರಿಂದ ೧೨ ಸಾವಿರ ಜನ ನೌಕರರಿದ್ದಾರೆ. ಆರೋಗ್ಯ ಇಲಾಖೆಯಲ್ಲಿ ೪೦ ಸಾವಿರ ಜನ ಇದ್ದಾರೆ. ಅವರಿಗೆ ಏನು ಕೆಲಸ ಇವೆ ? ಹಳ್ಳಿಯಲ್ಲಿ ಎಷ್ಟು ಜನ ರೈತರನ್ನು ನೋಡಿ ಅವರ ಆರೋಗ್ಯ ವಿಚಾರಿಸುತ್ತಾರೆ ? ಇದರ ಬಗ್ಗೆ ಮೌಲ್ಯಮಾಪನ, ಚಿಂತನೆ ಮಾಡುವವರಿಲ್ಲ. ಎಷ್ಟು ಜನ ಸುಳ್ಳು ಡೈರಿಗಳನ್ನು ಬರೆಯುತ್ತಾರೆ ? ಎಷ್ಟು ಜನ ಟ್ರಾವೆಲ್ ಕನ್‌ಸೇಷನ್ ತೆಗೆದುಕೊಂಡು ಟ್ರಾವಲ್ ಮಾಡದೆ ಇಲ್ಲೇ ಟ್ರಾವೆಲ್ ಏಜೆನ್ಸಿಯಿಂದ ಟಿಕೆಟ್ ತೆಗೆದುಕೊಂಡು ಕೊಟ್ಟಿದ್ದಾರೆ ? ಅವರು ಟ್ರಾವೆಲ್ ಏಜೆನ್ಸಿಗೆ ಮಾರಿಕೊಳ್ಳುತ್ತಾರೆ, ಈ ರೀತಿ ಸರ್ಕಾರಿ ನೌಕರರಿಗೆ ಎಷ್ಟು ಸವಲತ್ತು ಕೊಟ್ಟಿದೀರಿ ? ಅವರಿಗೆ ಸವಲತ್ತು ಕೊಡಬೇಡಿ ಎಂದು ಹೇಳುವುದಿಲ್ಲ. ಆದರೆ ರೈತರಿಗೆ ಏನು ಮಾಡಿದ್ದೀರಿ ಅಂದರೆ ರೈತರಿಗೆ ಕೊಡತಕ್ಕ ಸಬ್ಸಿಡಿಯನ್ನು ನಿಲ್ಲಿಸಿದ್ದೀರಿ, ಸಣ್ಣ ಮತ್ತು ಮಾರ್ಜಿನಲ್ ಫಾರ್ಮರ್ಸ್‌ಗೆ ಮತ್ತು ಎಸ್.ಸಿ.ಎಸ್.ಟಿ.ಯವರಿಗೆ ಬಿಟ್ಟರೆ ಕ್ರಿಮಿನಾಶಕ ಔಷಧಿಗಳನ್ನು ಸಿಂಪಡಿಸತಕ್ಕ ಯಂತ್ರಗಳಿಗೆ ಸಬ್ಸಿಡಿಯನ್ನು ಕೊಡುವುದನ್ನೇ ನಿಲ್ಲಿಸಿಬಿಟ್ಟಿದ್ದೀರಿ. ಇನ್‌ಸೆಂಟೀವ್ಸ್ ಏನು ಇದೆ. ಒಬ್ಬ ರೈತ ಸಾಲ ಪಡೆದುಕೊಂಡರೆ, ಆ ರೈತನಿಗೆ ನೀವು ೨ ವರ್ಷವಾದರೂ. ೩ ವರ್ಷವಾದರೂ ಅವರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವುದಿಲ್ಲ ರೈತರಿಗೆ ಅನುಕೂಲವನ್ನು ಒದಗಿಸಿಕೊಡುವುದಿಲ್ಲ. ಕೆರೆಯಲ್ಲಿ ನೀರು ಇಲ್ಲ, ಮಳೆರಾಯ ಎರಡು ತಿಂಗಳಿಂದ ಎಲ್ಲೋ ಪತ್ತೆ ಇಲ್ಲದೆ ಹೋಗಿಬಿಟ್ಟಿದ್ದಾನೆ. ಏನು ಬೆಳೆಯುವುದು ? ಈಗ ರಾಗಿ ಬಿತ್ತನೆ ಆಗಬೇಕಾಗಿತ್ತು ಇನ್ನೂ ಹೊಲ ಉತ್ತಿಲ್ಲ. ಇದು ಇವತ್ತಿ

ಪರಿಸ್ಥಿತಿ. ಈಗ ನಮ್ಮ ವ್ಯವಸಾಯ ಇಲಾಖೆಯ ಬಗ್ಗೆ ಮಾತನಾಡುತ್ತೇನೆ. ಶ್ರೀಮಾನ್ ಘೋರ್ಪಡೆಯವರಿಗೆ ಗೊತ್ತಿದೆ. ಅಗ್ರಿಕಲ್ಚರಲ್ ಅಸಿಸ್ಟೆಂಟ್ಸ್ ಇದ್ದರು, ಈಗ ಅವರು ಮಂಡಲ್ ಪಂಚಾಯಿತ್ತಿಯ ಸೆಕ್ರೆಟರಿಯಾಗಿದ್ದಾರೆ. ಸೆಕ್ರೆಟರಿಯವರು ಕೆಲಸ ಜಾಸ್ತಿ ಇರುತ್ತದೆ. ಅಲ್ಲಿ ಜೇನುತುಪ್ಪ ಇದೆ. ವ್ಯವಸಾಯಗಾರರ ಮನೆಗೆ ಹೋದರೆ ಏನು ಸಿಕ್ಕುತ್ತದೆ ಜೇನುತುಪ್ಪ ? ಅದಕ್ಕೆ ಈಗ ಅವರು ಬ್ಯಾಗುಗಳನ್ನು ಹಿಡಿದುಕೊಂಡು ಯಾವಾಗಲೂ ಬೆಂಗಳೂರಿನಲ್ಲೇ ಇದ್ದಾರೆ. ಎಷ್ಟು ಜನ ಸರ್ಕಾರಿ ಅಧಿಕಾರಿಗಳು ಹೆಡ್‌ಕ್ವಾರ್ಟರ್ಸ್‌ನಲ್ಲಿದ್ದಾರೆಂದು ತಾವು ವರದಿ ತರಿಸಿ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಹೇಳಿ, ಏತಕ್ಕೋಸ್ಕರ ಅವರಿಗೆ ಸಿಟಿ ಕಾಂಪನ್‌ಸೇಟರಿ ಅಲೋಯನ್ಸ್ ಕೊಡುತ್ತಿರುವುದು ? ಅದೇ ಗ್ರಾಮಾಂತರ ಪ್ರದೇಶದಲ್ಲಿರುವವರಿಗೆ ಮನೆಗಳನ್ನು ಕಟ್ಟಿಕೊಟ್ಟಿದ್ದೇವೆ. ಆ ಮನೆಗಳಲ್ಲಿ ಇವತ್ತು ಕತ್ತೆಗಳು ಸೇರಿಕೊಂಡುಬಿಟ್ಟಿವೆ, ಯಾರೂ ಇಲ್ಲ. ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲೂ ಅಷ್ಟೆ. ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲೂ ಅಷ್ಟೆ. ಯಾವುದೇ ಅಭಿವೃದ್ಧಿ ಇಲಾಖೆ ತೆಗೆದುಕೊಂಡರೂ ಕೇಂದ್ರ ಸ್ಥಳದಲ್ಲಿ ಇವರು ಇಲ್ಲವೇ ಇಲ್ಲ. ಕೆಲವರು ತಾಲ್ಲೂಕು ತಹಶೀಲ್ದಾರ್‌ರವರು, ತಾಲ್ಲೂಕು ಮ್ಯಾಜಿಸ್ಟ್ರೇಟ್ ಅವರು ೨೪ ಗಂಟೆಯೂ ಸ್ಥಳದಲ್ಲೇ ಇರಬೇಕು. ಏಕೆಂದರೆ ಮ್ಯಾಜಿಸ್ಟ್ರೀಯಲ್ ಆರ್ಡರ್‌ನ್ನು ಪ್ರೊಕ್ಲೈಮ್ ಮಾಡಬೇಕು. ಅದರಂತೆ ಎಷ್ಟು ಜನ ಇದ್ದಾರೆ ? ಬೆಂಗಳೂರಿನಿಂದ ಮೈಸೂರಿಗೆ ಪ್ರತಿದಿನ ಹೋಗಿ ಬಂದು ಮಾಡುತ್ತಾರೆ. ಬೆಂಗಳೂರಿನಿಂದ ಚಿಂತಾಮಣಿಗೆ ಹೋಗಿ ಬಂದು ಮಾಡುತ್ತಾರೆ. ಬೆಂಗಳೂರಿನಿಂದ ಕೋಲಾರಕ್ಕೆ ಹೋಗಿ ಬಂದು ಮಾಡುತ್ತಾರೆ. ಇವರು ಶಿಸ್ತನ್ನು ಕಾಪಾಡುವುದಿಲ್ಲವೆ ? ಇದನ್ನು ಕೇಳಿದರೆ ಏನು ಮಾಡುವುದಕ್ಕಾಗುತ್ತದೆ ಸ್ವಾಮಿ. ಎಲ್ಲ ಹಾಗೆ ಆಗಿಬಿಟ್ಟಿದ್ದಾರೆಂದು ಹೇಳುತ್ತಾರೆ. ಇದು ಇರತಕ್ಕ ಪರಿಸ್ಥಿತಿ. ಇನ್ನು ಸರ್ಕಾರಿ ನೌಕರರ ಬಗ್ಗೆ ಹೆಚ್ಚು ಹೇಳುವುದಿಲ್ಲ. ಇನ್ನು ವ್ಯವಸಾಯ ಇಲಾಖೆಯನ್ನು ತೆಗೆದುಕೊಳ್ಳುವುದಾದರೆ, ವ್ಯವಸಾಯಕ್ಕೆ ಇನ್ಶೂರೆನ್ಸ್ ಇದೆ. ಎಷ್ಟು ಸ್ವಾಮಿ ಇನ್ಶೂರೆನ್ಸ್ ? ಎಲ್ಲಿ ಜಾರಿಗೆ ಕೊಟ್ಟಿದ್ದಾರೆ ? ನಾಮಾಕವಸ್ತೆ ಇನ್ಶೂರೆನ್ಸ್. ಇವತ್ತು ಬೇರೆಯವರಿಗೆ ಮೆಡಿಕಲ್ ಇನ್ಶೂರೆನ್ಸ್ ಇದೆ ಒಂದು ಬೆರಳು ಕತ್ತರಿಸಿ ಹೋದರೆ ಅದಕ್ಕೆ ಇನ್ಶೂರೆನ್ಸ್, ಮೂಗು ಹೋದರೆ ಅದಕ್ಕೆ ಇನ್ಶೂರೆನ್ಸ್ ಫ್ರಾಕ್ಚರ್ ಆದರೆ ಇನ್ಶೂರೆನ್ಸ್, ಹೊಟ್ಟೆ ನೋವಾದರೆ ಮೆಡಿಕಲ್ ರೀಇಂಬರ್ಸ್‌ಮೆಂಟ್ ಏಕೆ ಸ್ವಾಮಿ? ರೈತರಿಗೆ ನೀವು ಏನನ್ನೂ ಕೊಡುವುದಕ್ಕೆ ಇಷ್ಟ ಇಲ್ಲದಿದ್ದರೆ ಹೇಳಿ. ಹಳ್ಳಿಯಲ್ಲಿ ಎಲ್ಲವನ್ನೂ ಬಿಟ್ಟುಬಿಟ್ಟು ಪಟ್ಟಣಕ್ಕೆ ಬೆಂಗಳೂರಿಗೆ ವಲಸೆ ಬಂದುಬಿಡೋಣ. ಇವತ್ತು ವ್ಯವಸಾಯದಲ್ಲಿರತಕ್ಕಂತಹವರಿಗೆ ಏನಾದರೂ ಒಂದಿಷ್ಟು ಕೊಡಿ ಅಂದರೆ ಅದಕ್ಕೆ ಅಡ್ಡಬರುವುದು They are all rich farmers ; they are well of; they have got tractors, they have got pumpsets, one or two farmers has got motor cars also ಇದು ನಮಗೆ ಹೇಳತಕ್ಕಂತಹದ್ದು. ಹೊಲ ನೋಡದವರು. ಜಮೀನನ್ನು ನೋಡದವರು, ಹಳ್ಳಿಗೆ ಹೋಗದೇ ಇರತಕ್ಕಂತಹವರು ಈ ವಿಚಾರವನ್ನು ಚಿಂತನೆ ಮಾಡಿ ತೀರ್ಮಾನವನ್ನು ತೆಗೆದುಕೊಳ್ಳತಕ್ಕಂತಹವರು. ನಾನೂ ಮಂತ್ರಿಯಾಗಿದ್ದೆ ದಯವಿಟ್ಟು ಯಾವ ಮಂತ್ರಿಗಳೂ ತಪ್ಪು ತಿಳಿದುಕೊಳ್ಳಬಾರದು. ನಾನು ಮಂತ್ರಿಯಾಗಿದ್ದಾಗ ಒಂದು ಸಾರಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಹೇಳಿದ್ದೆ ಈ ಸಂದರ್ಭದಲ್ಲಿ ಅದನ್ನು ಹೇಳಲೇಬೇಕು. ನಾನು ಮಂತ್ರಿಯಾಗಿದ್ದಾಗ ದೆಹಲಿಗೆ ಹೋಗಿದ್ದಾಗ ಶ್ರೀಮತಿ ಇಂದಿರಾಗಾಂಧಿಯವರಿಗೆ ಹೇಳಿದ್ದೆ. ಅದೇನೆಂದರೆ ಇವತ್ತು ಈ ದೇಶದಲ್ಲಿ ರಾಜಮಹಾರಾಜರನ್ನು ತೆಗೆದಿದ್ದೀರಿ, ಜಹಗೀರಿಯನ್ನು ತೆಗೆದಿದ್ದೀರಿ, ಹೆಚ್ಚು ಜಮೀನು ಇರುವವರಿಂದ ಆ ಜಮೀನನ್ನು ತೆಗೆದಿದ್ದೀರಿ, ಎಲ್ಲ ಸುಧಾರಣೆಗಳನ್ನೂ ಮಾಡಿದ್ದೀರಿ. ಈ ಐ. ಎ. ಎಸ್. ಅಥವಾ ಸರ್ಕಾರಿ ನೌಕರುಗಳಿಗೆ ರಾಜ್ಯಾಂಗದ ರೈಟ್ಸ್ –ಪ್ರಿವಿಲೇಜಸ್ ಏನಿದೆ ಅದನ್ನು ಇವತ್ತಿನ ದಿವಸಕ್ಕೆ ಸ್ಪಂದಿಸುವಂತೆ ಏಕೆ ಬದಲಾವಣೆ ಮಾಡಕೂಡದು ಎಂದು ಕೇಳಿದೆ. ಆಗ ಅವರು Mr. Gowdaji –you don,t know –all the people around us are paraphernalia of officers– I cannot do anything. ಎಂದು ಹೇಳಿದರು. ಇದನ್ನು ನಾನು ಸತ್ಯದಿಂದ ಹೇಳುತ್ತಿದ್ದೇನೆ. ಇವತ್ತು ಶ್ರೀಮತಿ ಇಂದಿರಾಗಾಂಧಿಯವರು ನಮ್ಮ ಮುಂದೆ ಇಲ್ಲ. ಇದು ಇರತಕ್ಕ ನೈಜ ಪರಿಸ್ಥಿತಿ. ಯಾರೆ ಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ, ಪ್ರಧಾನ ಮಂತ್ರಿಗಳಾಗಲಿ. ಇದು ಇರತಕ್ಕ ಪರಿಸ್ಥಿತಿ. ಅವರಿಗೆ ಏನು ಬೇಕೋ ಅದನ್ನು ಬರೆದುಕೊಂಡು ಬಿಡುತ್ತಾರೆ. ರೈತರಿಗೆ ಏನಾದರೂ ಕೊಡಿ ಅಂದರೆ ಇದನ್ನು ಮಂಜೂರು ಮಾಡುವುದಕ್ಕಾಗುವುದಿಲ್ಲ. ಇದು ಪಾಲಿಸಿ ಡಿಸಿಷನ್ ಎಂದು ಹೇಳುವುದು ಕೇಂದ್ರ ಸರ್ಕಾರವನ್ನು ತೋರಿಸಿಬಿಡುವುದು ಇಲ್ಲವೇ ಕರ್ನಾಟಕ ಸರ್ಕಾರವನ್ನು ತೋರಿಸಿಬಿಡುವುದು ಈ ರೀತಿಯಾಗಿ ಸೌಲಭ್ಯಗಳನ್ನು ಕೊಡುವುದಿಲ್ಲ. ಇವತ್ತು ಮಗು ಹುಟ್ಟಿದರೆ ಹೇಗೆ ಫೀಡಿಂಗ್ ಬಾಟ್ಲ್ ಕೊಡಬೇಕೊ ಹಾಗೆಯೇ ಬೆಳೆಗೂ ಸಹಿತ ನರ್ಸರಿಯಿಂದಲೇ ಸೀಡ್ ಟ್ರೀಟ್‌ಮೆಂಟ್ ಮಾಡಬೇಕು. ಬೆಳೆಗಳಿಗೆ ಔಷಧಿಯನ್ನು ಹೊಡೆಯಬೇಕು; ತರಕಾರಿ ಬೆಳೆಗೆ

ಹೊಡೆಯಬೇಕು, ಹಣ್ಣುಗಳಿಗೆ ಹೊಡೆಯಬೇಕು, ರಾಗಿಗೆ, ಭತ್ತಕ್ಕೆ ಹೊಡೆಯಬೇಕು, ೧೯೬೦-೭೦ರ ಹಿಂದೆ ಯಾವ ಔಷಧಿಯನ್ನೂ ಹೊಡೆಯುತ್ತಿರಲಿಲ್ಲ. ಇವತ್ತು ಔಷಧಿಗಳ ಬೆಲೆ ಎಷ್ಟಾಗಿದೆ ? ಇವತ್ತು ಅಡಲ್ಟ್ರೇಷನ್ ಎಷ್ಟು ಇದೇ ? ಬಂಗಾರಪ್ಪನವರು ಈಗ ಮಂತ್ರಿಗಳಾಗಿದ್ದಾರೆ. ನಾನೂ ಕೂಡಾ ಹಿಂದೆ ಮಂತ್ರಿ ಆಗಿದ್ದೆ. ಅವರಿಗೂ ಈಗ ಅಧಿಕಾರಿಗಳು ಫೀಡಿಂಗ್ ಮೆಟೀರಿಯಲ್ ಎಂದು ನೋಡುತ್ತಾರೆ. ನಾವು ಇಷ್ಟು ಸ್ಯಾಂಪಲ್ಸ್ ತಂದು ಹಿಡಿದಿದ್ದೇವೆ. ಪೆಸ್ಟಿಸೈಡ್ಸ್, ಇಂಪೆಸ್ಟಿಸೈಡ್ಸ್‌ಗೆ ಆಕ್ಟ್ ಪ್ರಕಾರ ಮುನ್ನೂರೋ ನಾನ್ನೂರೋ ಕೇಸ್ ಹಾಕಿದ್ದೇವೆಂದು ಹೇಳಿದ್ದಾರೆ. ಇವತ್ತು ಗೊಬ್ಬರ ಇದೆ. ರಸಗೊಬ್ಬರ ಇದೆ. ಇವತ್ತು ಇವುಗಳ ಬೆಲೆ ಎಲ್ಲಿಗೆ ಹೋಗಿದೆ ? ಎಷ್ಟು ಸಬ್ಸಿಡಿ ಕೊಡುತ್ತಿದ್ದೀರಿ ? ಎರಡೋ, ಮೂರೋ ಸಾವಿರ ಕೋಟಿ ಕೊಟ್ಟಿದ್ದೇವೆಂದು ಅಲ್ಲಿ ಹೇಳುತ್ತಾರೆ. ಅಲ್ಲಿ ಕೊಟ್ಟಿದ್ದು ಏಕೆ ಹೇಳುತ್ತೀರಿ ? ಇಲ್ಲಿ ಕೊಡುವುದನ್ನು ಹೇಳಿ. ರೈತ ಅನ್ನ ಬೆಳೆಯಬೇಕೆಂದು ಹೇಳಿ ಇಲ್ಲವೇ, ಬೆಳೆಯಬೇಡಿ ಎಂದಾದರೂ ಹೇಳಿ ನಾವೆಲ್ಲಾ ಇಲ್ಲಿ ಬೆಂಗಳೂರಿಗೆ ಬಂದು ಫ್ಯಾಕ್ಟರಿಗಳಲ್ಲಿ ತಯಾರು ಆಗುತ್ತದಲ್ಲಾ ಸೂಜಿಗಳು ಅವುಗಳನ್ನು ನುಂಗೋಣ, ನಾವು ಸೂಜಿ ನುಂಗಿದರೆ ಒಂದು ರೀತಿ ಎಲ್ಲಾ ಸರಿ ಹೋಗುತ್ತದೆ. ಈ ರೀತಿ ಮಾಡಿ. ಇಲ್ಲವೇ ಬೆಳೆಯುವುದು ಬೇಡ ಎಂದು ಹೇಳಲಿ. ರೈತರಿಗೆ ಆಕರ್ಷಣೀಯವಾದ ಬೆಲೆ ಸಿಗದೇ ಇದ್ದರೆ ಅವರು ಏನು ಮಾಡುತ್ತಾರೆ ? ಇವತ್ತು ಡ್ರೈಲ್ಯಾಂಡ್‌ನಲ್ಲಿ ಹಳೇ ಮೈಸೂರು ಭಾಗದಲ್ಲಿ ರಾಗಿ ಬೆಳೆಯುವುದನ್ನೇ ಬಿಟ್ಟಿದ್ದಾರೆ. A day will come where we have to see ragi in exhibitions. ಭೂಮಿಯಲ್ಲಿ ಬೆಳೆಯುವುದಿಲ್ಲ, ಭೂಮಿಯಲ್ಲಿ ಭತ್ತ ಬೆಳೆಯುವುದಿಲ್ಲ. ಏಕೆಂದರೆ it is not economical, ನೀವೇ ಎಕನಾಮಿಕ್ಸ್ ಹೇಳಿಕೊಟ್ಟು ಅದನ್ನು ನಾವು ಮಾಡಿದುದ್ದು ಬರದೇ ಇದ್ದರೆ ಏನು ಮಾಡುವುದು. ಹಾಗಿದ್ದರೆ ಬೆಳೆಯುವುದನ್ನು ಬಿಡೋಣ. ಬೆಂಗಳೂರು, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ಇರುವ ಡ್ರೈಲ್ಯಾಂಡ್‌ನಲ್ಲಿ ಇವತ್ತು ಶೇಕಡಾ ೪೦ರಿಂದ ೫೦ ಭಾಗದಲ್ಲಿ ಯೂಕಲಿಪ್ಟಸ್ ಬೆಳೆದಿದ್ದಾರೆ. ಏಕೆ ಗೊತ್ತೇ ? ಇವತ್ತು ಅದನ್ನು ಬಿಟ್ಟು ಬೇರೆ ಬೆಳೆದರೆ ಎಕನಾಮಿಕ್ ರಿಟರ್ನ್ಸ್ ಬರುವುದಿಲ್ಲ. ಅದಕ್ಕೋಸ್ಕರ ಹಾಕಿದ್ದಾರೆ. ಇವತ್ತು ಪರಿಸರವಾದಿಗಳು, ಬುದ್ಧಿವಂತರು ಬೆಂಗಳೂರಿನಿಂದ ಹೊರಗೆ ಭೂಮಿಯನ್ನು ನೋಡದೆ ಇರುವವರು it should not be grown, it is going to make imbalance of economy. ಎಂದು ಹೇಳುತ್ತಾರೆ. ನೀವು ಎಲ್ಲಿ ಸ್ವಾಮಿ. ೮ ರೂಪಾಯಿಯಂತೆ ಮಾಡೋನು ನಾನು ಇದು ನಮ್ಮ ಪರಿಸ್ಥಿತಿ. ಇವತ್ತು ಎಷ್ಟು ಎಕರೆಯಲ್ಲಿ ಯೂಕಲಿಪ್ಟಸ್ ಬೆಳೆಯುತ್ತಾರೆ ? ನಾನೂ ಕೂಡಾ ಖುಷ್ಕಿ ಭೂಮಿಯಲ್ಲಿ ೨೫-೩೦ ಎಕರೆಯಲ್ಲಿ ಯೂಕಲಿಪ್ಟಸ್ ಹಾಕಿ ತೋಟದಲ್ಲಿ ಇನ್‌ಟೆನ್‌ಸೀವ್ ಕಲ್ಟಿವೇಷನ್ ಮಾಡಿ ಹಿಂದಾಫ್‌ರಾಗಿ ಅಥವಾ ಹೆಚ್ ಆರ್-೯೧೧ ಹಾಕಿ ಎಕರೆಗೆ ೨೫ ಕ್ವಿಂಟಾಲ್ ತೆಗೆದುಕೊಳ್ಳುತ್ತೇನೆ ಅದನ್ನು ನಾನು ಬೆಳೆಯಬೇಕಾಗುತ್ತದೆ. ಇವತ್ತು ಖುಷ್ಕಿ ಜಮೀನಿನಲ್ಲಿ ಮಳೆಯಾಶ್ರಯದಲ್ಲಿ ಬೆಳೆದರೆ ಎಕರೆಗೆ ೩ ಅಥವಾ ೪ ಕ್ವಿಂಟಾಲ್ ಬರುವುದಿಲ್ಲ. ಅದೂ ಮಳೆಯ ಕೃಪೆ ಇದ್ದರೆ ಇಷ್ಟು ಬರಬಹುದು ಆದ್ದರಿಂದ ನಾನೇ ಅಲ್ಲ. ನನ್ನನ್ನು ನೋಡಿದ ಮೇಲೆ ರೈತರು ಕೂಡ ಚಿಕ್ಕೇಗೌಡರೇ ಬಿಟ್ಟಮೇಲೆ ನಮ್ಮದು ಏನು ಎಂದು ಹೇಳಿ ಅವರೂ ಯೂಕಲಿಪ್ಟಸ್ ಹಾಕಿದ್ದಾರೆ. ಇವತ್ತು ತೋಟದ ಬೆಳೆ ಇಡೋಣವೆಂದರೆ ನರ್ಸರಿಯಲ್ಲೇ ಅವಕ್ಕೆ ಸ್ಪ್ರೇ ಮಾಡುವುದಕ್ಕೆ ಶುರು ಮಾಡಬೇಕು. ಇದಕ್ಕೆ ಜನರು ಸಿಗುವುದಿಲ್ಲ. ದ್ರಾಕ್ಷಿ ಬೆಳೆಗಂತೂ ಬೆಳಿಗ್ಗೆ ಎದ್ದು ದೇವರ ಫೋಟೋ ನೋಡುವ ಬದಲು ಕಿಟಕಿ ಕಡೆ ನೋಡಬೇಕು. ಏಕೆಂದರೆ ಬೆಳಿಗ್ಗೆ ಮಂಜು ಕಂಡರೆ ತಕ್ಷಣಾ ದ್ರಾಕ್ಷಿ ಬೆಳೆಗೆ ಔಷಧಿ ಸಿಂಪಡಿಸಬೇಕು. ಇಷ್ಟೆಲ್ಲಾ ಕಷ್ಟಪಟ್ಟು ನಾವು ಬೆಳೆದ ದ್ರಾಕ್ಷಿಗೆ ಬೆಲೆ ಸಿಗುವುದಿಲ್ಲ. ಅದನ್ನು ಮಂಡಿಗೆ ತೆಗೆದುಕೊಂಡು ಹೋದಮೇಲೆ ನಮಗೆ ಹಣ ಸಿಗುವ ಬದಲು ಮಂಡಿಯಲ್ಲಿ ನಾವೇ ಸಾಲ ಮಾಡಬೇಕಾಗಿದೆ. ಇವತ್ತು ದ್ರಾಕ್ಷಿ ಬಂದಾಗ ಅದನ್ನು ಕಾಪಾಡಲು ಸರಿಯಾದ ಫೆಸಲಿಟಿ ಇಲ್ಲ. ಇದರಲ್ಲಿ ದ್ರಾಕ್ಷಾರಸ ವಗೈರ್ ಬೈ ಪ್ರಾಡಕ್ಟ್ಸ್ ಮಾಡಿ ಎಂದರೆ ಯಾರೂ ಮಾಡುವುದಿಲ್ಲ. ಸರ್ಕಾರದವರು ಆದ್ಯಾರೋ ಒಬ್ಬರನ್ನು ಮಾಡಿದರು. ಅವರು ಯಾರೋ ಒಬ್ಬ ಮಹಾನುಭಾವರು ದುಡ್ಡು ಹೊಡೆದು ಟ್ಯಾಂಕ್‌ನಲ್ಲಿ ಎಲ್ಲಾ ದ್ರಾಕ್ಷಾರಸ ಎಂದು ನೀರು ತುಂಬಿ ನಮಗೆ ಮೋಸ ಮಾಡಿದರು ಇವತ್ತು ಹಣ್ಣು ತರಕಾರಿಗಳನ್ನು ಕಾಪಾಡಲು ಶೈತ್ಯಾಗಾರದ ವ್ಯವಸ್ಥೆ ಬೇಕಾಗುತ್ತದೆ. ಅದೇನೋ ಫಾರ್ಮರ್ಸ್ ಫೋರಂನಲ್ಲಿ ಕೊಟ್ಟಿದ್ದು ನಾಮಕಾವಸ್ತೆಗೆ ನಮ್ಮಲ್ಲಿ ಒಂದು ಇದೆ. ಉತ್ತರಪ್ರದೇಶದಲ್ಲಿ ಇಂತಹ ೭೦೦ ಇವೆ. ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯವರು, ನಬಾರ್ಡ್‌ನವರು ಮೂರುವರೆ ಕೋಟಿ ರೂಪಾಯಿಗಳನ್ನು ಹಾರ್ಟಿಕಲ್ಚರ್ ಸೊಸೈಟಿಗೆ ಕೊಟ್ಟಿದ್ದಾರೆ. ಅದನ್ನು ಉಪಯೋಗಮಾಡಿಕೊಂಡು ಶೈತ್ಯಾಗಾರ ಮತ್ತು ಪ್ರೊಸೆಸಿಂಗ್ ಯೂನಿಟ್ಸ್ ಮಾಡಬೇಕು ಇವತ್ತು ಬೆಳೆಗಳ ಬೆಲೆ ಬಿದ್ದು ಹೋದಾಗ ನಮ್ಮಿಂದಕೊಂಡು ಬೆಲೆ ಬಂದಾಗ ಹೊರಗೆ ತಂದು ಮಾರುತ್ತಾರೆ. ಇವತ್ತು ನಮ್ಮ ಆಲೂಗೆಡ್ಡೆ ಕಾಪಾಡಲು ಶೈತ್ಯಾಗಾರದ ವ್ಯವಸ್ಥೆ ಇಲ್ಲ. ಇವತ್ತು ರೈತರು ಚಪ್ಪರ ಹಾಕಿ ಅದರ ಕೆಳಗೆ ಆಲೂಗೆಡ್ಡೆ ಇಟ್ಟು ನಾಲ್ಕು ತಿಂಗಳು ಅಲ್ಲೇ ಕಾಯ್ದುಕೊಂಡು ಮಲಗುತ್ತಾರೆ. ಅವರಿಗೆ ಹೆಂಡಿರ ಮಕ್ಕಳ ಬಗ್ಗೆ

ಗಮನ ಇಲ್ಲ. ಗಾಪಿ ಹತ್ತಿರ ಈ ರೀತಿ ಪರಿಸ್ಥಿತಿ ಇರುವಾಗ ತಾವು ಈ ಬಗ್ಗೆ ಚಿಂತನೆ ಮಾಡಿ. ಇವತ್ತಿನ ದಿವಸ ನೀವು ಇಂಡಸ್ಟ್ರೀ ಮಾಡುತ್ತೀರಿ. ನಾನ್ ಅಗ್ರಿಕಲ್ಚರಲ್ ಇಂಡ್ರಸ್ಟ್ರೀಸ್ ಮಾಡುವವರಿಗೆ ನೀವುನೆಲ ಕೊಡುತ್ತೀರಿ ನೀರು ಕೊಡುತ್ತೀರಿ, ವಿದ್ಯುಚ್ಛಕ್ತಿ ಕೊಡುತ್ತೀರಿ, ಸಾಲ ಕೊಡುತ್ತೀರಿ, ಅವರಲ್ಲಿ ಫ್ಯಾಕ್ಟರಿ ಇರುವುದಿಲ್ಲ. ಬರೀ ಒಂದು ರೆಸಿಪ್ಟ್ ಅಥವಾ ವೋಚರ್ ತಂದರೆ ಅವರಿಗೆ ಹಣದ ಸಹಾಯ ಮಾಡುತ್ತೀರಿ. ಅವರು ದುಡ್ಡನ್ನೂ ಸಹಾ ಹೊಂದಿಸುವಹಾಗೆ ಇಲ್ಲ. ಬ್ಯಾಂಕ್‌ನವರು ಅವರಿಗೆ ಹಣಕೊಡುತ್ತಾರೆ. ರೈತರಿಗೆ ಹಣಕೊಡಿ ಅಂದರೆ, ಅವರಿಗೆ ಸಬ್ಸಿಡಿ ರೂಪದಲ್ಲಿ ಕೊಡಿಯೆಂದರೆ, ಕೊಟ್ಟರೆ ಅವರುವಾಪಸ್ಸುಕೊಡುವುದಿಲ್ಲವೆಂದು ಹೇಳುತ್ತಿದ್ದರು. ನಾನು ಪಶುಸಂಗೋಪನಾ ಖಾತೆಯ ಮಂತ್ರಿಯಾಗಿದ್ದಾಗ ಹೈನುಗಾರಿಕೆ ಇಲಾಖೆಯಲ್ಲಿ ಹಸುಗಳನ್ನು ಕೊಂಡುಕೊಳ್ಳುವುದಕ್ಕೆ ಮತ್ತು ಹೆಚ್ಚು ಹಾಲು ಉತ್ಪಾದನೆ ಮಾಡಲಿಕ್ಕೆ ಸಾಲ ಕೊಡಿರಿ ಅಂದರೆ ಹಸು ಸತ್ತು ಹೋಗಿ ಬಿಟ್ಟರೆ ಏನು ಮಾಡುವುದು ಎಂದು ಹೇಳುತ್ತಿದ್ದರು. ಅದಕ್ಕೆ ನಾನು, ನೀವೇ ಸತ್ತುಹೋಗಿ ಬಿಟ್ಟರೆ ಏನು ಮಾಡುತ್ತೀರಿ ಎಂದು ಹೇಳಿದ್ದೆ. ಬ್ಯಾಂಕಿನವರು ರೈತರ ಮೇಲೆ ಅನುಮಾನಪಡುತ್ತಾರೆ. ನೀವು ರೈತರಿಗೆ ಸಾಲ ಕೊಡುವುದಕ್ಕೆ ಮುಂಚೆ ಈ ರೀತಿ ಹೇಳಿದರೆ ನೀವು ನಿಜವಾಗಿಯೂ ರೈತರಿಗೆ ಸಹಾಯ ಮಾಡುತ್ತೀರಾ ಎಂದು ನಾನು ಅವರನ್ನು ತರಾಟೆಗೆ ತೆಗೆದುಕೊಂಡಿದ್ದೆ. ಈ ದೇಶದಲ್ಲಿ ಅನ್ನ ಉತ್ಪಾದನೆ ಮಾಡತಕ್ಕ, ಹಾಲು ಉತ್ಪಾದನೆ ಮಾಡತಕ್ಕ ರೈತನಿಗೆ ನೀವು ಸಹಾಯ ಮಾಡುತ್ತೀರಾ ? ಎಂದು ಅವರನ್ನು ನಾನು ಕೇಳಿದ್ದೆ. ಬೆಂಗಳೂರಿನಲ್ಲಿ ಹಾಲು ಉತ್ಪಾದನೆ ಜಾಸ್ತಿಯಾಗಿರುವುದಕ್ಕೆ ದಿವಂಗತರುಗಳಾದ ಲಾಲ್‌ಬಹದೂರ್ ಶಾಸ್ತ್ರಿ, ಎಂ. ವಿ. ಕೃಷ್ಣಪ್ಪ ಮತ್ತು ರಫೀಕ್ ಅಹ್ಮದ್ ಅವರನ್ನು ನೆನಸಿಕೊಳ್ಳಬೇಕಾಗಿದೆ. ಪಶುಸಂಗೋಪನಾ ಸಚಿವರಾಗಿದ್ದ ಕೃಷ್ಣಪ್ಪನವರು ಹೆಚ್ಚು ಹಾಲು ಕೊಡುವಂತಹ ತಳಿಗಳನ್ನು ಬೆಂಗಳೂರಿಗೆ ತಂದು ಹಾಲಿನ ಉತ್ಪಾದನೆ ಜಾಸ್ತಿಯಾಗಲಿಕ್ಕೆ ಕಾರಣರಾಗಿದ್ದಾರೆ. ಆ ಕಾಲದಲ್ಲಿ ನಾನು ಈ ಸದನದಲ್ಲಿ ಅಧಿಕಾರಿಗಳ ಗ್ಯಾಲರಿಯಲ್ಲಿ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿ ಕುಳಿತುಕೊಂಡಿದ್ದೆ. ಲಾಲ್ ಬಹದ್ದೂರ್ ಶಾಸ್ತ್ರಿಯವರು ಬೆಂಗಳೂರು ಡೈರಿಯನ್ನು ಉದ್ಘಾಟನೆ ಮಾಡಿದರು. ಆಗ ಎಂ. ವಿ. ಕೃಷ್ಣಪ್ಪನವರು ಪಶುಸಂಗೋಪನಾ ಮತ್ತು ಕಂದಾಯ ಇಲಾಖೆಯ ಮಂತ್ರಿಯಾಗಿದ್ದರು. ಆ ಕಡೆಯಲ್ಲಿರತಕ್ಕ ಶಾಸಕರುಗಳ ಹೆಸರನ್ನು ನಾನು ಹೇಳುವುದಿಲ್ಲ. ಈಗ ಕೆಲವರು ಮಾಜಿ ಶಾಸಕರಾಗಿದ್ದಾರೆ. ಬೆಂಗಳೂರಿನಲ್ಲಿ ಕಾವೇರಿ ನೀರನ್ನು ಹರಿಸಿದರೂ ಅದು ಇವತ್ತು ಸರಿಯಾಗಿ ಸಿಗುವುದಿಲ್ಲ. ಹಾಲು ಮಾತ್ರ ಗ್ಯಾರಂಟಿಯಾಗಿ ಸಿಗುತ್ತದೆ. ಇದು ಸತ್ಯವಾದ ಮಾತು. ಇವತ್ತು ಬೆಂಗಳೂರಿನಲ್ಲಿ ಹಾಲಿನ ಹೊಳೆ ಹರಿಯುತ್ತಿದೆ. ನಾನು ಪಶುಸಂಗೋಪನಾ ಮಂತ್ರಿಯಾಗಿದ್ದಾಗ ದಿವಂಗತ ದೇವರಾಜಅರಸ್ ರವರು ವಿಶ್ವಬ್ಯಾಂಕಿನ ೪೮ ಕೋಟಿ ರೂಪಾಯಿಗಳ ಯೋಜನೆಯನ್ನು ತಂದರು. ದಿವಂಗತ ಲಾಲ್‌ಬಹದ್ದೂರ್‌ಶಾಸ್ತ್ರಿಯವರ ಮತ್ತು ಕೃಷ್ಣಪ್ಪನವರ ಕೈಯಿಂದ ಈ ಯೋಜನೆ ಏನು ಪ್ರಾರಂಭವಾಯಿತೋ ಅಂದಿನಿಂದ ಇಂದಿನವರೆಗೆ ಹಾಲಿನ ಹೊಳೆಯನ್ನು ರೈತರು ಹರಿಸುತ್ತಿದ್ದಾರೆ. ಹಾಲು ಉತ್ಪಾದನೆ ಹೆಚ್ಚಾಗಿ ವಾರಕ್ಕೆ ಒಂದು ದಿವಸ ಹಾಲನ್ನು ಕರೆಯುವುದನ್ನು ನಿಲ್ಲಿಸುತ್ತಿದ್ದಾರೆ. ಹಸುವಿನ ಕೆಚ್ಚಲಿಗೆ ತೊಂದರೆಯಾಗದ ರೀತಿಯಲ್ಲಿ ಹಾಲನ್ನು ಒಂದುದಿನ ಕರೆಯುವುದಿಲ್ಲ. ತಾಯಿ, ಗೋಮಾತೆ, ಅದಕ್ಕೆ ಪೂಜಾಸ್ಥಾನವಿದೆ. ಹಾಲು ಉತ್ಪಾದನೆ ಮಾಡುವವರಿಗೆ ಸರಿಯಾದ ಉತ್ತೇಜನ ಸಿಗುತ್ತಿಲ್ಲ. ಸರಿಯಾದ ಫೀಡ್ ಇಲ್ಲ. ಕೆ ಎಂ ಎಫ್ ಬೇರೆ ಇದೆ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಬೆಂಗಳೂರಿನಲ್ಲಿ ಅನೇಕ ಕಡೆ ಬೆಳಿಗ್ಗೆ ಎದ್ದ ತಕ್ಷಣ ನೀರು ಸಿಗುವುದಿಲ್ಲ. ಹಾಲು ಯಥೇಚ್ಛವಾಗಿ ಸಿಗುತ್ತದೆ. ಪತ್ರಿಕಾಕರ್ತರಿಗೆ ಬೆಳಿಗ್ಗೆ ಎದ್ದ ತಕ್ಷಣ ಅವರತಲೆ ಓಡುವುದಕ್ಕೆ, ಅವರು ಚಿಂತನೆ ಮಾಡುವುದಕ್ಕೆ, ಅವರ ಬ್ರೈನ್ ಕೆಲಸ ಮಾಡುವುದಕ್ಕೆ ಸ್ವಲ್ಪ ಟಾನಿಕ್ ಬೇಳಬೇಕು. ಕಾಫಿ ಇಲ್ಲದಿದ್ದರೆ ಅವರ ತಲೆ ಓಡುವುದಿಲ್ಲ. ಇವತ್ತಿನ ದಿವಸ ಹಾಲು ಹೆಚ್ಚು ಉತ್ಪಾದನೆಯಾಗುತ್ತಿದೆ. ಲಕ್ಷಲೀಟರುಗಟ್ಟಲೆ ಹಾಲು ಉತ್ಪಾದನೆಯಾಗುತ್ತಿದೆ ಮದರ್ ಡೈರಿಯವರು ಇನ್ನು ೧೦ ವರ್ಷ ಹೋದರೆ ನಾವೇನು ಹೇಳುತ್ತೇವೆ. We have pump milk in pipes to Bangalore. ಈಗ ಟ್ಯಾಂಕರ್‌ನಲ್ಲಿ ಹೊಡೆಯುತ್ತಿದ್ದೇವೆ. ಆಮೇಲೆ ಪಂಪ್ ಮಾಡುತ್ತೇವೆ. ರೈತರಿಗೆ ಉತ್ತೇಜನ ಕೊಟ್ಟರೆ ಏನು ಬೇಕಾದರೂ ಮಾಡುತ್ತಾರೆ. ರೈತ ದೇಶದ ಬೆನ್ನುಮೂಳೆ ಅನ್ನದಾತ, ಗೋಮಾತೆ ತಾಯಿ ಅದನ್ನು ಅರ್ಥಮಾಡಿಕೊಂಡು ಹೆಚ್ಚು ಉತ್ತೇಜನ ಕೊಡಬೇಕು. ನಾವು ಸಹ ಇಲ್ಲಿ ರೆಕ್ಟಿಫೈಡ್ ಸ್ಪಿರಿಟ್ ಬಗ್ಗೆ ಮಾತನಾಡುತ್ತೇವೆ. ಯಾರ್ಯಾರಿಗೆ ರೆಕ್ಟಿಫೈಡ್ ಸ್ಪಿರಿಟ್ ಕೊಟ್ಟಿದ್ದಾರೆ ಅವರ ಪಟ್ಟಿಯನ್ನು ತೆಗೆದುಕೊಂಡು ಬನ್ನಿಯೆಂದು ಹೇಳುತ್ತೇವೆ. ಯಾವ್ಯಾವ ಫ್ಯಾಕ್ಟರಿಯವರು ಎಷ್ಟೆಷ್ಟು ತಿಂದಿದ್ದಾರೆಂದು ಹೇಳುತ್ತೇವೆ. ರೈತರಿಗೆ ಸಂಬಂಧಪಟ್ಟಹಾಗೆ ಯಾರೂ ಮಾತನಾಡುವುದಿಲ್ಲ. ಮಾನ್ಯ ಬಸವಲಿಂಗಪ್ಪನವರ ಇಲಾಖೆಯ ಬಗ್ಗೆ ಯಾರೂ ಮಾತನಾಡುವುದಿಲ್ಲ. ಕುರಿತಳಿ ಅಭಿವೃದ್ಧಿಯ ಬಗ್ಗೆ ಯಾರೂ ಹೇಳುವುದಿಲ್ಲ. ಇಲ್ಲಿ ನಾವು ಸಸ್ಯಹಾರಿಗಳಿದ್ದೇವೆ, ಮಾಂಸಾಹಾರಿಗಳಿದ್ದೇವೆ. ಕುರಿ ತಳಿ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿರತಕ್ಕ ಬಂಡೂರು ಕುರಿ ಅದು ಜಗತ್‌ಪ್ರಸಿದ್ಧವಾದ ತಳಿ,

It is a world famous breed for mutton purposes. I am talking not only as a farmer, but also as a technical man, you must know it; ನಾನು ಪ್ರಪಂಚವನ್ನು ಸುತ್ತಿ ಬಂದಿದ್ದೇನೆ. ಬಂಡೂರು ತಳಿಯನ್ನು ಅಭಿವೃದ್ಧಿ ಮಾಡಿ ಅಂದರೆ ನಮ್ಮ ಅಧಿಕಾರಿಗಳು ಮಾಡುವುದಿಲ್ಲ. ಆದರಲ್ಲಿ ಫ್ಯಾಟ್ ಪರ್ಸೆಂಟೇಜ್ ಕಡಿಮೆ ಮಾಡಬೇಕು. ಅದರ ಮಾಂಸ ಬೆಣ್ಣೆಯಷ್ಟು ಮೃದು ಮಾನ್ಯ ಚಿಣ್ಣಪ್ಪನವರಿಗೆ ನಾನು ಹೇಳುತ್ತಿರುವುದನ್ನು ಕೇಳಿ ಬಾಯಲ್ಲಿ ರಸ ಬರುತ್ತಿದೆಯಂತೆ. ಜೊತೆಗೆ ಹೊಟ್ಟೆಯ ಹಸಿವು ಸಹ ಆಗುತ್ತಿದೆಯಂತೆ, ಬಹಳ ಸಂತೋಷ. ಅದನ್ನು ನೆನಸಿಕೊಂಡರೆ ಬಾಯಲ್ಲಿ ನೀರು ಬರುತ್ತದೆ. ಮಾನ್ಯ ಮಹದೇವ್‌ರವರಿಗೆ ಇದನ್ನು ಕೇಳಿ ಹೊಟ್ಟೆ ಉರಿಯುತ್ತಿದೆಯಂತೆ ನಾನೇನು ಮಾಡಲಿ ? It is a fact I am telling you. ಒಂದು ದಿವಸ ನಾನು ಕ್ಯಾಲಿಫೋರ್ನಿಯದಿಂದ ಟೋಕಿಯೋಗೆ ಹೋಗುತ್ತಿದೆ. ನನ್ನ ಪಕ್ಕದಲ್ಲಿ ಒಬ್ಬ ಜಪಾನಿಯನು ಕುಳಿತಿದ್ದ. ನೀನ್ಯಾಕಪ್ಪ ಅಮೇರಿಕಾಕ್ಕೆ ಬಂದಿದ್ದೆ ಎಂದು ನಾನು ಅವನನ್ನ ಕೇಳಿದೆ. ಮಟನ್ ಖರೀದಿಸುವುದಕ್ಕೆ ಎಂದು ಆತ ಹೇಳಿದ, ಇವತ್ತು ಎಷ್ಟು ಜನರಿಗೆ ಗೊತ್ತಿದೆ ? ಪ್ರತಿನಿತ್ಯ ನಾವು ಎರಡು ಪ್ಲೇನ್ ಲೋಡ್ ತರಕಾರಿಗಳನ್ನು ಕಳಿಸುತ್ತಿದ್ದೇವೆ. ಇಲ್ಲಿಯ ಹವಾಗುಣ ಹಷ್ಟು ಚೆನ್ನಾಗಿದೆ. ನಮ್ಮ ಬೆಂಗಳೂರಿನ ವಾತಾವರಣ, ಸುತ್ತಮುತ್ತಲಿನ ನಾಲ್ಕು ಜಿಲ್ಲೆಗಳಲ್ಲಿ ಇರತಕ್ಕಂಥ ಹವಾಗುಣ, ಒಳ್ಳೆಯ ಭೂಮಿ ಇಡೀ ಪ್ರಪಂಚದಲ್ಲೇ ಇಲ್ಲ. ಇಲ್ಲಿ ೩೬೫ ದಿವಸವೂ ಯಾವ ಬೆಳೆಯನ್ನಾದರೂ ಬೆಳೆಯಬಹುದು. ತಮಗೆ ಗೊತ್ತಿದೆ. ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ವಿಂಟರ್ ಸೀಸನ್ ಬಂದರೆ ಎಲ್ಲ ಒಳಗಿಟ್ಟುಕೊಂಡು ಸಾಕಬೇಕು, ಒಳಗಿಟ್ಟುಕೊಂಡು ತಿನ್ನಬೇಕು. ಆದರೆ ಇಲ್ಲಿ ಹಾಗಲ್ಲ, ಇಲ್ಲಿ ಬೆಳೆಯುವ ತರಕಾರಿ, ಹಣ್ಣು, ಮಾಂಸವನ್ನು ಜಪಾನ್, ಈಜಿಪ್ಟ್ ಮುಂತಾದ ದೇಶಗಳಿಗೆ, ಕಳಿಸಬಹುದು. Stright from the field, we can send fresh vegetables; We need not keep it in cold storage because it dose have taste. ವರ್ಷಾನುಗಟ್ಟಲೆ ಇಟ್ಟು ತಿಂದರೆ ಏನು ರುಚಿ ಇರುತ್ತದೆ ? ಅದಕ್ಕಾಗಿ ಅಲ್ಲಿ ಕೂಡ ಇವತ್ತು ಫ್ರೆಶ್ ತರಕಾರಿಗಳನ್ನು, ಹಣ್ಣುಗಳನ್ನು ತಿನ್ನುತ್ತಾರೆ, ಆದ್ದರಿಂದ ಇಷ್ಟು ಒಳ್ಳೆಯ ಹವಾಮಾನ. ವಾತಾವರಣದ ಅನುಕೂಲತೆ ಇರುವಾಗ ಇಲ್ಲಿ ಏನೂ ಬೆಳೆಯದೆ ಬೇರೆ ದೇಶಕ್ಕೆ ಹೋಲಿಸಿಕೊಂಡು ರೈತರಿಗೆ ಸರಿಯಾದ ಸಹಾಯ, ಉತ್ತೇಜನ ಕೊಡದೆ ಯಾವುದೋ ವಿಷಯ ಮಾತನಾಡುತ್ತೇವೆ. ಈ ಸದನದಲ್ಲಿ ಅಷ್ಟೇ ಅಲ್ಲ, ಎಲ್ಲ ಕಡೆಯಲ್ಲೂ ಇದೇ ತರಹ ಮಾತನಾಡುತ್ತೇವೆ. ಆದ್ದರಿಂದ ಇಂತಹ ಹವಾಗುಣ ಇರತಕ್ಕಂಥ ನಮ್ಮ ರಾಜ್ಯದಲ್ಲಿ ಎಷ್ಟು ಹೆಕ್ಟೇರ್ ಪ್ರದೇಶ ಇದೆ. ಎಂಬ ಅಂಕಿ ಅಂಶಗಳನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಸುಮ್ಮನೆ ಪುಸ್ತಕ ಕೊಟ್ಟಿದ್ದಾರೆ. ೧೯೮೯–೯೦, ೧೯೯೦–೯೧ರ ವಾರ್ಷಿಕ ವರದಿಗಳನ್ನು ಕೊಟ್ಟಿದ್ದಾರೆ. ಹಾಲು ಉತ್ಪಾದನೆ ೮೦ ಲಕ್ಷಟನ್ ಇದೆ, ಬೆಂಗಳೂರಿನಲ್ಲಿ ಹಾರ್ಟಿಕಲ್ಚರ್ ವಿಭಾಗ ಇದೆ. ಹಣ್ಣು ಬೆಳೆಗಾರರ ಸಂಗ್ರಹಣೆ ಮತ್ತು ಮಾರಾಟ ವಿಭಾಗಗಳಿವೆ. ಇದನ್ನು ನಾವು ಅನೇಕ ಕಡೆ ನೋಡಿದ್ದೇವೆ. ಬೆಂಗಳೂರಿನ ಸುತ್ತ ಮುತ್ತ ಅನೇಕ ಬಡಾವಣೆಗಳಲ್ಲಿ ನೂರಾರು ಮಾರಾಟ ಮಳಿಗೆಗಳನ್ನು ಇಟ್ಟು ಮಾರುತ್ತಿದ್ದಾರೆ, ಯಾರು ಬಡವರು, ರೈತರು ಇದ್ದಾರೆ ಅವರಿಂದ ಇವರು ನೇರವಾಗಿ ಕೊಂಡುಕೊಳ್ಳುತ್ತಾರೆ. ದೊಡ್ಡಬಳ್ಳಾಪುರ, ಹೊಸಕೋಟೆಗಳಲ್ಲಿ ಪ್ರೊಕ್ಯೂರ್‌ಮೆಂಟ್ ಸೆಂಟರ್ ಇದೆ. ಅಲ್ಲಿಂದ ನೇರವಾಗಿ ತಂದು ಗ್ರಾಹಕರಿಗೆ ಮಾರುತ್ತಾರೆ. ಇದರಲ್ಲಿ ಒಳ್ಳೆಯ ಲಾಭ ಇದೆ. ಇಂಥಾದ್ದನ್ನು ಮಾಡುವುದಕ್ಕೆ ಹೆಚ್ಚು ಉತ್ತೇಜನ ಮಾಡುವುದಿಲ್ಲ. ಇಲ್ಲಿ ಸಾರ್ವಜನಿಕರಿಗೆ ಸಹ ಕಡಿಮೆ ಬೆಲೆಯಲ್ಲಿ ಹಣ್ಣು, ತರಕಾರಿಗಳು ಸಿಗುತ್ತವೆ. ಈ ರೀತಿ ಮಾರಾಟಮಳಿಗೆಗಳನ್ನು ಮೈಸೂರಿನಲ್ಲಿ ಮಾಡಿದ್ದಾರೆ. ಇವು ರೈಲ್ವೆ ಸ್ಟೇಷನ್‌ಗಳಲ್ಲೂ ಇರುವುದನ್ನು ನೋಡಿದ್ದೇವೆ. ಇವುಗಳಿಗೆ ಉತ್ತೇಜನ ಕೊಡುವುದಕ್ಕೆ ಮತ್ತು ಕೋಲ್ಡ್ ಸ್ಟೋರೇಜ್ ಮಾಡುವುದಕ್ಕೆ ಎಲ್ಲಾ ವ್ಯವಸ್ಥೆ ಮಾಡಬೇಕು. ನಾನು ಮಂತ್ರಿಯಾಗಿದ್ದಾಗ ಬಿನ್ನಿಮಿಲ್ ಟ್ಯಾಂಕ್ ಹಿಂದುಗಡೆ ಏಳು ಎಕರೆ ಜಾಗವನ್ನು ಹೋಲ್‌ಸೇಲ್ ವೆಜಿಟೆಬಲ್ ಮಾರ್ಕೆಂಟ್‌ಗೆ ಎಂದು ಇಟ್ಟೆ, ಆ ಜಾಗವನ್ನು ಉಪಯೋಗಿಸಿಕೊಂಡೇ ಇಲ್ಲ, ಖಾಲಿ ಬಿಟ್ಟಿದ್ದಾರೆ. ಇತ್ತೀಚೆಗೆ ಮೈಸೂರಿನಿಂದ ಬರುವಾಗ ನಾನು ನೋಡಿಕೊಂಡು ಬಂದೆ. ಹಾಫ್‌ಕಾಮ್ಸ್ ಸೊಸೈಟಿಗಾದರೂ ಕೊಟ್ಟರೆ ಎಷ್ಟೋ ಅನುಕೂಲವಾಗುತ್ತದೆ. ನಾನು ಮಂತ್ರಿಯಾಗಿದ್ದಾಗ ಕಾರ್ಪೋರೇಷನ್‌ನವರಿಗೆ ದಮ್ಮಯ್ಯಗುಡ್ಡೆ ಇಟ್ಟು ತೆಗೆದುಕೊಂಡಿದ್ದ ಜಾಗ ಅದು. ಇವತ್ತು ಬಿಲ್ಡಿಂಗ್‌ಗಳನ್ನು ಕಟ್ಟಿ ಹಾಗೆಯೇ ಬಿಟ್ಟಿದ್ದಾರೆ. ಇದನ್ನು ಈ ಸೊಸೈಟಿಗೆ ಕೊಡಿ. ಹೋಲ್‌ಸೇಲ್ ಮಾರ್ಕೆಟ್ ಮಾಡಿ ಅಲ್ಲಿಂದ ರಿಟೇಲ್‌ಗೆ ಕೊಡಿ. ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ, ಸರ್ಜಾಪುರಗಳಲ್ಲಿ ಪ್ರೊಕ್ಯೂರ್‌ಮೆಂಟ್ ಸೆಂಟರ್‌ಗಳನ್ನು ಮಾಡಿದ್ದಾರೆ. ಅದು ಬಿಟ್ಟು ದಲ್ಲಾಳಿಗಳ ಹತ್ತಿರ ಹೋದರೆ, ಅವನು ದುಡ್ಡು ಕೊಟ್ಟರೆ ಉಂಟು, ಇಲ್ಲದಿದ್ದರೆ ಇಲ್ಲ. ಅದಕ್ಕೆ ರೆಗ್ಯೂಲೇಟೆಡ್ ಮಾರ್ಕೆಟ್ ಆಕ್ಟ್ ಪ್ರಕಾರ ೨ ಪರ್ಸೆಂಟ್ ಇದೆ. ಆದರೆ ೧೦ ಪರ್ಸೆಂಟ್ ತೆಗೆದು

ಕೊಳ್ಳುತ್ತಾರೆ. ಆಮೇಲೆ ಆದುಡ್ಡನ್ನು ವಾಪಸ್‌ಕೊಟ್ಟರೆ ಕೊಟ್ಟರು, ಇಲ್ಲದೇ ಹೋದರೆ ಇಲ್ಲ. ಇನ್ನು ಅಗ್ರಿಕಲ್ಚರ್ ಪ್ರಾಡೆಕ್ಟ್ಸ್ ಅದಕ್ಕೆ ರೆಗ್ಯುಲೇಟೆಡ್ ಮಾರ್ಕೆಟ್ ಆಕ್ಟ್‌ಪ್ರಕಾರ ೨ ಪರ್ಸೆಂಟ್ ಇದೆ. ಆದರೆ ಅವರು ೧೦ ಪರ್ಸೆಂಟ್ ತೆಗೆದುಕೊಳ್ಳುತ್ತಾರೆ, ಆಮೇಲೆ ಆ ದುಡ್ಡನ್ನು ವಾಪಸ್ ಕೊಟ್ಟರೆ ಕೊಟ್ಟರು, ಇಲ್ಲದೇ ಹೋದರೆ ಇಲ್ಲ. ಇನ್ನು ಅಗ್ರಿಕಲ್ಚರ್ ಪ್ರಾಜೆಕ್ಟ್ಸ್......

ಶ್ರೀ ಆರ್. ವಿ. ದೇವರಾಜ್.—ದಳ್ಳಾಳಿಗಳು ೧೦ ಪರ್ಸೆಂಟ್ ಕಮಿಷನ್ ತೆಗೆದುಕೊಂಡು ಮುಂದೆ ದುಡ್ಡು ಕೊಡುವುದಿಲ್ಲವೆಂದು ಹೇಳಿದಿರಿ, ಅವರು ಯಾವ ದಳ್ಳಾಳಿಗಳು, ಇಂತಹ ಕಡೆ ಇದ್ದಾರೆ ಎಂದು ಹೇಳಿ.

ಶ್ರೀ ಎಂ. ಬಿ. ಬಿ. ಚಿಕ್ಕೇಗೌಡ.—ಆಮೇಲೆ ತೆಂಗಿನಕಾಯಿ ಬಗ್ಗೆ ಮಾನ್ಯ ಶಿವರಾಮೇಗೌಡರೂ ಬೊಬ್ಬೆ ಹಾಕುತ್ತಾರೆ ನಮ್ಮ ಮಂಜುನಾಥ್‌ರವರೂ ಬೊಬ್ಬೆ ಹಾಕುತ್ತಾರೆ. ನಾನು ಕೂಡ ತೆಂಗಿನ ಕಾಯಿ ಬೆಳೆಯುತ್ತೇನೆ. ೧೬ ಎಕರೆಯಲ್ಲಿ ನೀರು ಹಾಯಿಸಿ ಹೈಬ್ರೀಡ್ ತೆಂಗಿನಕಾಯಿಗಳನ್ನು ಬೆಳೆಯುತ್ತೇನೆ, ಒಂದು ಗಿಡಕ್ಕೆ ೨೫೦ ಕಾಯಿಗಳನ್ನು ಬೆಳೆಯುತ್ತೇನೆ. ಇವತ್ತು ತೆಂಗಿನಕಾಯಿಗಳನ್ನು ಮಾರ್ಕೆಟ್‌ಗೆ ತಂದರೆ ಅದಕ್ಕೆ ಬೆಲೆ ಇಲ್ಲ, ಕೊಬರಿ ಮಾಡಿದರೆ ಅದಕ್ಕೂ ಬೆಲೆ ಇಲ್ಲ, ಬೆಲೆ ಕುಸಿದು ಹೋಗಿದೆ. ಕಾಫಿ ಬೆಳೆಗಾರರು ಮತ್ತಿತರರಿಗೆ ನೀವು ಪ್ರೋತ್ಸಾಹ ಕೊಡುತ್ತೀರಿ. ಏಕೆಂದರೆ, ಅವರು ದೊಡ್ಡ ದೊಡ್ಡ ಶ್ರೀಮಂತರು. ಸಂಘಟನೆ ಆಗಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಕಾಫಿ ಬೆಳೆಗಾರರಿಗೂ ಈಗ ಸಾಲ ಕೊಡುವುದನ್ನು ನಿಲ್ಲಿಸಿದ್ದಾರೆ.

ಶ್ರೀ ಎನ್. ಚಿಕ್ಕೇಗೌಡ.—ಅದೂ ಕೂಡ ಅಗ್ರಿಕಲ್ಚರಲ್ ಪ್ರಾಡಕ್ಟ್. ಸರ್ವರಿಗೂ ಒಂದೇ ಮದ್ದು, ಸರ್ವರೋಗ ಮದ್ದು, ಸರ್ವ ರೋಗಗಳಿಗೂ ಒಂದೇಮದ್ದು. ಹಾಪ್‌ಕಾಮ್ಸ್ ಸೊಸೈಟಿಯಲ್ಲಿ ಸದಸ್ಯತ್ವವನ್ನು ರಿಸ್ಟ್ರಿಕ್ಟ್ ಮಾಡಿದ್ದಾರೆ. ನಾವು ಎಷ್ಟು ಬೆಳೆ ಬೆಳೆದು ಪದಾರ್ಥಗಳನ್ನು ಕೊಟ್ಟರೂ ಹೊರಗಡೆಯವರೂ ಬರುತ್ತಾರೆಂದು ಸದಸ್ಯತ್ವ ಕೊಡುತ್ತಿಲ್ಲ. ಇದನ್ನು ನಾವೂ ನೋಡುತ್ತಿದ್ದೇವೆ. ನಾನೂ ಕೂಡ ತೆಂಗಿನಕಾಯಿ ಅಲ್ಲಿಗೇ ಹಾಕುತ್ತೇನೆ. ಆಮೇಲೆ ನಾವು ಬೆಳೆದಂಥ ತರಕಾರಿಯನ್ನೂ ಅಲ್ಲಿಗೇ ಹಾಕುತ್ತೇವೆ ಅಲ್ಲಿ ೨ ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಹಾಕುತ್ತಾರೆ. ಅಲ್ಲಿಯ ಟರ್ನ್‌ಓವರ್ ಹಣ ರೈತರದೇ. ಆದರೂ ಸೇಲ್ಸ್ ಟ್ಯಾಕ್ಸ್ ಹಾಕುತ್ತಾರೆ. ಇದರಿಂದ ಸುಮಾರು ೧೦ ಲಕ್ಷ ರೂಪಾಯಿ ಲಾಭ ಬರುತ್ತದೆ. ಇನ್ನು ಪೆರಿಷಬಲ್ ಆರ್ಟಿಕಲ್ಸ್‌ಗಳಾದ ಹಣ್ಣು, ಹೂ, ತರಕಾರಿಗಳಿವೆ. ಹಾಲೂ ಸಹಿತ ಸೂಕ್ಷ್ಮವಾದ ಪದಾರ್ಥವಾಗಿದೆ. ಇವುಗಳಿಗೆ ಸೇಲ್ಸ್‌ಟ್ಯಾಕ್ಸ್ ರಿಯಾಯಿತಿ ಕೊಡಿ. ರೆಗ್ಯುಲೇಟೆಡ್ ಮಾರ್ಕೆಟ್ ಮಾತೃಸಂಸ್ಥೆ ಆರ್.ಎಂ.ಸಿ. ಸೆಸ್ ಹಾಕುವುದು ಮತ್ತೆ ಜಾಗ ಕೊಡಿ ಎಂದರೆ ಜಗಳ ಮಾಡುವುದು. ೭ ಎಕರೆ ಜಾಗ ಇಟ್ಟುಕೊಂಡು ಹಾಗೆಯೇ ಕುಳಿತಿದ್ದಾರೆ. ಇವತ್ತು ಅಲ್ಲಿ ಬೇರೆ ಪ್ರಾಣಿಗಳು ವಾಸ ಮಾಡುತ್ತಿವೆ. ಮತ್ತೆ ಬೆಂಗಳೂರು ಮಹಾನಗರದಲ್ಲಿ ಯಾವುದಾದರೂ ಹೊಸ ಬಡಾವಣೆಯಾದರೆ ಅಲ್ಲಿ ಒಂದು ಸೊಸೈಟಿಗೆ ಜಾಗ ಇಲ್ಲ. ಏಕೆಂದರೆ, ಇಲ್ಲಿ ಒಂದು ಎಕ್ಸ್‌ಪ್ಲಾಯ್‌ಟೇಷನ್ ಇಲ್ಲ. ಯಾವ ಬೆಲೆಗೆ ತೆಗೆದುಕೊಳ್ಳುತ್ತಾರೆ, ಸ್ವಲ್ಪ ಹ್ಯಾಂಡ್ಲಿಂಗ್ ಚಾರ್ಜ್ ತೆಗೆದು ಮಿಕ್ಕಿದ್ದು ಅದೇ ಬೆಲೆಗೆ ಕೊಡುತ್ತಾರೆ. ಪಟ್ಟಭದ್ರ ಹಿತಾಸಕ್ತಿಗಳು ಎನ್‌ಕರೇಜ್ ಮಾಡುತ್ತಾರೆ. ಸೊಸೈಟಿಯಲ್ಲಿ ಇರತಕ್ಕ ನಿಷ್ಠಾವಂತ ಅಧಿಕಾರಿಯನ್ನು ತೆಗೆಸುತ್ತಾರೆ. ಈಗ ಎಕ್ಸೈಸ್‌ನಲ್ಲಿ ಏನಾದರೂ ಮಾಡಿದರೆ ದೊಡ್ಡವರು ಮತ್ತು ಡಿಸ್ಟಿಲರೀಸ್ ಅಲ್ಲಿರುವ ನಿಷ್ಠಾವಂತ ಕಮೀಷನರನ್ನು ತೆಗೆಸುತ್ತಾರೆ. ಅದೇರೀತಿ, ಇಲ್ಲೂ ಮಾಡುವುದಕ್ಕೆ ಹೊರಟರು. ಇದನ್ನು ಅರಿತ ಮಾನ್ಯ ಬಂಗಾರಪ್ಪನವರು ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ಹಾಪ್‌ಕಾಮ್ಸ್ ಸೊಸೈಟಿಯವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಉತ್ತೇಜನ ಕೊಡಬೇಕು. ಇವತ್ತು ಮೂರೂವರೆ ಕೋಟಿ ರೂಪಾಯಿಗಳನ್ನು ನಾಫೆಡ್‌ನವರು ಕೊಡುತ್ತಾರೆ. ಇದು ಒಳ್ಳೆಯ ಕೆಲಸ, ಇದನ್ನು ಸ್ವಾಗತಿಸಬೇಕು. ಅದೇ ರೀತಿ ಹಾಲು ಇದೆ. ನಾನು ಪ್ಯಾರಿಸ್‌ಗೆ ಹೋದಾಗ ಎರಡು ಸಾಕೆಟ್ ಮಿಷನ್ ತಂದು, ಸಾಕೆಟ್‌ನಲ್ಲಿ ಕೊಡುವುದಕ್ಕೆ ಶುರು ಮಾಡಿದೆ. ಆಮೇಲೆ ಬಲ್ಕ್ ವೆಂಡಿಂಗ್ ಮಿಷನ್ ಕೂಡ ಮಾಡಿದೆ. ಸಾಕೆಟ್‌ನಲ್ಲಿ ಕೊಡತಕ್ಕ ಸಾರಾಯಿ, ಕೆಮಿಕಲ್ ರೀ ಆಕ್ಷನ್ ಆಗಿಕೆಟ್ಟು ಹೋಗುತ್ತದೆಂದು ಹೇಳಿದರು. ಹಾಲು ಕೆಮಿಕಲ್ ರೀಆಕ್ಷನ್ ಆಗುವುದಿಲ್ಲ. ಒಳ್ಳೆಯ ಪೇಪರ್ ಇದೆ. ಇದರಿಂದ ಬಡ ಜನರಿಗೆ ಅನುಕೂಲವಾಗುತ್ತದೆ. ಸಾಕೆಟ್‌ನಿಂದ ಎಕ್ಸ್ಟ್ರಾ ಟ್ರಾನ್ಸ್‌ಪೋರ್ಟೇಷನ್ ಇವರಿಗೆ ಬೀಳುವುದು ತಪ್ಪುತ್ತದೆ. ಅತಿ ಕನಿಷ್ಟ ದರದಲ್ಲಿ ರೈತರಿಗೆ ಹಾಲು ಮುಂತಾದ ಆಹಾರ ವಸ್ತುಗಳನ್ನು ಕೊಡಬಹುದು. ಅದೇ ರೀತಿ ರೈತರು ಬೆಳೆದ ಬೆಳೆಯನ್ನು ಗ್ರಾಹಕರಿಗೆ ಸರಿಯಾದ ಬೆಲೆಯಲ್ಲಿ ಕೊಡಬಹುದು. ಹೆಚ್ಚು ಹಣ ಮತ್ತು ಹೆಚ್ಚು ಶೋಷಣೆ

ಮಾಡುವುದು ತಪ್ಪಬೇಕು. ಇನ್ನು ವ್ಯವಸಾಯದ ಬಗ್ಗೆ ಹೇಳುವುದಾದರೆ, ವ್ಯವಸಾಯ ಅಂದರೆ ನೀನು ಸಾಯು ಎಂದು ಹೇಳಬೇಕಾಗುತ್ತದೆ. ಇದಕ್ಕೆ ಎಷ್ಟು ಉತ್ತೇಜನ ಕೊಡಬೇಕೋ ಅಷ್ಟು ಹಣವನ್ನೂ ಒದಗಿಸಬೇಕು. ಈ ದಿಸೆಯಲ್ಲಿ ಹಣ ಒದಗಿಸದೇ ಆಹಾರ ಉತ್ಪಾದನೆ ಮಾಡಿ, ಅನ್ನ ಕೊಡಿ ಎಂದು ಹೇಳುವುದು ಸರಿಯಲ್ಲ. ರೈತ ನಮ್ಮ ದೇಶದ ಬೆನ್ನುಮೂಳೆ ಎಂದು ಬರೀ ಮಾತಿನಲ್ಲಿ ಹೇಳುತ್ತೇವೆ. ಈ ಬೆನ್ನುಮೂಳೆ ಮೇಲೆ ಸುತ್ತಿಗೆ ತೆಗೆದುಕೊಂಡು ಹೊಡೆದು, ಹೊಡೆದು, ಬೆನ್ನು ಮೂಳೆ ಮುರಿದು ಗೂನು ಬೆನ್ನು ಆಗಿದೆ.

೧೨-೩೦ ಪಿ.ಎಂ.

ಅವನು ಯಾವ ಬೆಳೆ ಬೆಳೆಯಲಿ ಅದರ ಮೇಲೆ ಇಲ್ಲದ ತಕರಾರು. ಅದಕ್ಕೆ ನೀರು ಕೊಡುವುದಿಲ್ಲ, ನೀರಿದ್ದರೆ ವಿತರಣೆ ಸರಿಯಾಗಿ ಆಗುವುದಿಲ್ಲ. ಅವನಿಗೆ ಬೇಕಾದ ಗೊಬ್ಬರ ಹಾಗೂ ಇತರ ಸಾಮಗ್ರಿ ಗಳನ್ನು ಹಳ್ಳಿಗಳಲ್ಲಿ ಒದಗಿಸುವುದಿಲ್ಲ. ಮುಟ್ಟುಗಳನ್ನು, ವ್ಯವಸಾಯೋಪಕರಣಗಳನ್ನು ಕೊಡು ವುದಿಲ್ಲ. ಎಲ್ಲೋ ಹೋಗಿ ತರಬೇಕು. ಬೆಳೆ ಬೆಳೆಯಬೇಕು, ಬೆಳೆದ ಮೇಲೆ ಲೆವಿ ಹಾಕುತ್ತೀರಿ. ಸಿಮೆಂಟ್‌ಗೆ ಲೆವಿ ಹಾಕಿ ಎಂದರೆ ನಾಮಕಾವಸ್ತೆ ಹಾಕುತ್ತೀರಿ. ಐರನ್ ಅಂಡ್ ಸ್ಟೀಲ್‌ಗೆ ಸರಿಯಾಗಿ ಕಂಟ್ರೋಲ್ ರೇಟ್ ಫಿಕ್ಸ್ ಮಾಡದೇ ಓಪನ್ ಮಾರ್ಕೆಟ್‌ಗೆ ಬಿಡುತ್ತೀರಿ. ಲೆವಿ ಹಾಕಿ ಎಂದರೆ ನಾಮಕಾವಸ್ತೆ ಲೆವಿ ಹಾಕುತ್ತೀರಿ. ಏಕೆಂದರೆ, ಅವರು ಸಂಘಟನೆ ಆಗಿದ್ದಾರೆ. ಬಾವುಟ ಹಿಡಿದು ಕೊಂಡು ಬರುವುದಿಲ್ಲ, ಒಂದರೂ ಪೋಲೀಸ್‌ನವರು ಅವರನ್ನು ಹಿಡಿದುಕೊಂಡು ಹೋಗುವುದಿಲ್ಲ. ದೇವರ ಶಾಪ, ರೈತರ ಸಂಘಟನೆಯಾಗಿಲ್ಲ. ರೈತರು ಸಂಘಟನೆಯಾದರೆ ಈ ದೇಶದಲ್ಲಿ ಅಲ್ಲೋಲ ಕಲ್ಲೋಲವಾಗುತ್ತದೆ. ದೈವವಶಾತ್ ಅದು ಆಗಿಲ್ಲ ಒಂದು ವರ್ಷ ಅವರು ಯಾವ ಆಹಾರ ಪದಾರ್ಥವನ್ನೂ ಬೆಳೆಯುವುದಿಲ್ಲ, ಕಮರ್ಷಿಯಲ್ ಕ್ರಾಪ್ಸ್ ಬೆಳೆಯುತ್ತೇವೆ. ಗದ್ದೆಯಲ್ಲಿ ಯೂಕಲಿಪ್ಟಸ್ ಬೆಳೆಯುತ್ತೇವೆ. ಬೆಳೆದು ಹರಿಹರ ಪಾಲಿ ಫೈಬರ್ಸ್‌ಗೆ ಹಾಕುತ್ತೇವೆ, ಅದನ್ನೇ ಪೀಸಸ್ ಮಾಡಿಕೊಂಡು ಪುಡಿ ಮಾಡಿಕೊಂಡು ತಿನ್ನಿರಿ ಎಂದರೆ ಹೇಗಿರುತ್ತದೆ. ಅದನ್ನು ನೀವು ತಿನ್ನಿ ನೋಡೋಣ. ಪರಿಸರವಾದಿಗಳು ಎಲ್ಲ ಸೇರಿ ತಿನ್ನಬೇಕು. ಅದನ್ನೇ ಊಟ ಮಾಡಬೇಕಾದ ತಿನ್ನ ಬೇಕಾದ ಪರಿಸ್ಥಿತಿ ಬರುತ್ತದೆ. ನೀವು ಇವನ್ನು ಅರ್ಥ ಮಾಡಿಕೊಂಡು ರೈತರಿಗೆ ಬೇಕಾದ ಸವಲತ್ತು ಗಳನ್ನು ಏನು ಒದಗಿಸಬೇಕು. ಅದನ್ನು ಒದಗಿಸದೇಹೋದರೆ ಖಂಡಿತಾ ಈ ದೇಶದಲ್ಲಿ ನಾವು ಕ್ರಾಂತಿ ಮಾಡಬೇಕಾಗುತ್ತದೆ. ಕ್ರಾಂತಿ ಎಂದರೆ ರಕ್ತ ಕ್ರಾಂತಿ ಅಲ್ಲ ಬಹಳ ಶಾಂತಿಯುತವಾದಂಥ ಕ್ರಾಂತಿ ಆದೀತು ಎಂದು ನಿಮ್ಮ ಮೂಲಕ ಎಚ್ಚರಿಕೆ ಕೊಡಬೇಕಾಗಿದೆ. ನಾನು ಎಚ್ಚರಿಕೆ ಕೊಟ್ಟರೆ ನೀವು ತಪ್ಪು ತಿಳಿದುಕೊಳ್ಳಬೇಡಿ. ನಾನು ರೈತನ ಮಗನಾಗಿ ಹೇಳುತ್ತೇನೆ. ನನಗೆ ಯಾವ ಬೇರೆ ಕಸುಬೂ ಇಲ್ಲ: ಅಲ್ಲಿರುವ ತಕ್ಕಡಿ ಅಣೆಗೂ ಇಲ್ಲ. ಈ ರೀತಿ ರೈತರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಈ ಸದನದಲ್ಲಿ ಒತ್ತಾಯ ಮಾಡಿ ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.— ಸದ್ಯ ನಾವು ಬೆಪ್ಪು ತಕ್ಕಡಿ ಆಗಿದ್ದೇವೆ.

ಶ್ರೀ ಎನ್. ಚಿಕ್ಕೇಗೌಡ.— ಇವತ್ತು ನಮ್ಮ ರಾಷ್ಟ್ರದಲ್ಲಿ. ರಾಜ್ಯದಲ್ಲಿ ಸಾಕಷ್ಟು ಆಹಾರ ಪದಾರ್ಥ ಗಳನ್ನು ಬೆಳೆಯುತ್ತಿದ್ದೇವೆ. ಸ್ವಾತಂತ್ರ್ಯ ಬಂದಮೇಲೆ ಕೆಲವು ವರ್ಷ ನಾವು ಅಮೇರಿಕಾದಿಂದ ಬರತಕ್ಕಂಥ ಹಡಗುಗಳನ್ನು ಕಾಯುತ್ತಿದ್ದೆವು. ಮುಸುಕಿನ ಜೋಳ ಹಡಗಿನಿಂದ ಬಂದು ಇಳಿದಮೇಲೆ ಅದನ್ನು ಹಂಚಿಕೊಂಡು ತಿನ್ನುತ್ತಿದ್ದೆವು. ೮೦ ಸಾವಿರ ಟನ್ ಬರುತ್ತಿದೆ ಎಂದು ಹೇಳುತ್ತಿದ್ದೆವು. ಭಿಕ್ಷದ ಪಾತ್ರೆ ಹಿಡಿದುಕೊಂಡಿದ್ದೆವು. ಆಮೇಲೆ ನಮ್ಮ ದೇಶದಲ್ಲಿ ಹೊಸ ಹೊಸ ತಳಿಗಳು, ಶಕ್ತಿವಾನ್ ತಳಿಗಳು ಬಂದುದರಿಂದ ರಾಜ್ಯದಲ್ಲಿ ರಾಷ್ಟ್ರದಲ್ಲಿ ಹೆಚ್ಚು ಬೆಳೆಯನ್ನು ಬೆಳೆಯುತ್ತಿದ್ದೇವೆ. ಇಲ್ಲದೇ ಹೋಗಿದ್ದರೆ ಏನಾಗುತ್ತಿತ್ತೊ ಗೊತ್ತಿಲ್ಲ. ಏನು ಪರಿಶೋಧಕರು. ರೀಸರ್ಚ್ ಸೈಂಟಿಸ್ಟ್ಸ್ ಇದ್ದಾರೆ ಅವರಿಗೆ ಧನ್ಯವಾದಗಳನ್ನು ಹೇಳಬೇಕು. ಎರಡೂ ಕೈಮುಗಿದು ಹೇಳುತ್ತೇನೆ. ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಅವರು ಕಂಡುಹಿಡಿದ ತಳಿಗಳಿಂದ, ಎಕರೆಗೆ ಎರಡು ಕ್ವಿಂಟಲ್ ಬೆಳೆಯು ತ್ತಿದ್ದ ಕಡೆ ಇವತ್ತು ೧೦-೨೦ ಕ್ವಿಂಟಲ್ ಬೆಳೆಯುತ್ತಿದ್ದೇವೆ. ಇದಕ್ಕೆ ಮೊದಲು ನಮ್ಮಕಡೆ ಹಡಗಿನಲ್ಲಿ ಬರುತ್ತಿದ್ದ ಜೋಳ ಮುಸುಕಿನ ಜೋಳ ತಿನ್ನುತ್ತಿದ್ದೆವು. ಅಮೇರಿಕದಿಂದ ಬಂದ ಮುಸುಕಿನ ಜೋಳ ತಿಂದು ಕಜ್ಜಿ ಬಂದು ಬಿಟ್ಟಿತ್ತು. ಇದಕ್ಕೆ ಅಮೇರಿಕನ್ ಕಜ್ಜಿ ಎಂದು ಹೆಸರು ಇಟ್ಟರು. ಹಳ್ಳಿ ಯಲ್ಲಿರುವ ಅನೇಕರಿಗೆ ಇದು ಗೊತ್ತಿರಬಹುದು. ಇವತ್ತು ಭಿಕ್ಷಾಪಾತ್ರೆ ತೆಗೆದುಕೊಂಡು ಹೋಗುವುದು ತಪ್ಪಿತು. ಇದರಿಂದ ಎಷ್ಟೋದು ಫಾರಿನ್ ಎಕ್ಸ್‌ಚೇಂಜ್ ಉಳಿಯಿತು. ಇದೇನು ಸಾಮಾನ್ಯವಾದ ವಿಚಾರವೇ ? ತರಕಾರಿ, ಹಣ್ಣು ಆಹಾರ ಪದಾರ್ಥಗಳಲ್ಲಿ ಶಕ್ತಿವಾನ್ ತಳಿಗಳು. ಅಧಿಕ ಇಳುವರಿ

ಕೊಡುವ ತಳಿಗಳು ಬಂದುದ್ದರಿಂದ ನಾವು ಆಹಾರದಲ್ಲಿ ಸ್ವಾವಲಂಬಿಗಳಾಗಿದ್ದೇವೆ. ಇಲ್ಲದೇ ಹೋಗಿದ್ದರೆ ನಾವು ದಿನಾ ಯಾವ ಬಂದರಿಗೆ ಯಾವ ಹಡಗು ಬಂದಿಳಿಯಿತು, ಯಾವ ಹಡಗಿನಲ್ಲಿ ಏನು ಬಂದಿದೆ ಎಂದು ಕಾಯ್ದು, ಬಂದಿದನ್ನು ತಿಂದುಕೊಂಡು ಕಜ್ಜಿ ಬರಿಸಿಕೊಂಡು ಇರಬೇಕಾಗುತ್ತಿತ್ತು. ಪಾಶ್ಚಿಮಾತ್ಯ ದೇಶಗಳಲ್ಲಿ ಯೂರೋಪ್ ದೇಶಗಳಲ್ಲಿ ಹಂದಿಗಳಿಗೆ ಕೋಳಿಗಳಿಗೆ ಹಾಕತಕ್ಕದ್ದು ಜೋಳ ಮುಸುಕಿನ ಜೋಳವನ್ನು ನಾವು ತಂದು ತಿನ್ನುವುದು ಆಗುತಿತ್ತು. ಹಿಂದೆ ಕಷ್ಟಕಾಲದಲ್ಲಿ ಅದನ್ನು ತಿಂದೆವು. ಅದನ್ನು ನಾವು ಅವಹೇಳನ ಮಾಡುವುದಿಲ್ಲ. ನಮ್ಮಲ್ಲಿರತಕ್ಕಂಥ ಅಮೂಲ್ಯ ವಸ್ತುಗಳನ್ನು ತೆಗೆದುಕೊಂಡು ಹೋಗಿ ಅವರು ಕೊಡುವ ಜೋಳ ಮುಸುಕಿನ ಜೋಳ ತಂದು ತಿನ್ನುವ ಕೆಲಸ ಮಾಡುತ್ತಿದ್ದೆವು. ಅಲ್ಲಿ ಇದನ್ನು ಅವರು ಹಂದಿಗಳಿಗೆ, ಪ್ರಾಣಿಗಳಿಗೆ ಹಾಕುತ್ತಿದ್ದರು. ನಾವು ಇವತ್ತು ಇಲ್ಲಿ ಹಸುವಿಗೆ ಹಾಕೋಣ ಎಂದರೆ ೨೨ ಕೆ.ಜಿ. ಯ ಒಂದು ಮೂಟೆ ಬೂಸಾಕ್ಕೆ ೬೦ ರೂಪಾಯಿ, ೭೦ ಕೆ.ಜಿ ಹಿಂಡಿ ಮೂಟೆಗೆ ೨೫೦ ರೂಪಾಯಿ. ಒಂದು ಕೆ. ಜಿ. ಎಣ್ಣೆ ೩೦ ರೂಪಾಯಿ ಆರ್ಟಿಫಿಷಿಯಲ್ ಸ್ಕೇರ್ಸಿಟಿ ಯಾವಾಗ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಬಿಡುತ್ತೇವೆ ಆಗ ಇದರ ಬೆಲೆಗಳು ಏರುತ್ತವೆ. ಆದರೆ ಹಾಲಿನ ಬೆಲೆ ೪ ರೂಪಾಯಿ ನಾಲ್ಕುವರೆ ರೂಪಾಯಿ ಕೊಡಿ ಎಂದರೆ ಇಷ್ಟೇ ಕೊಡುವುದು ಎನ್ನುತ್ತಾರೆ. ಹಾಲಿನ ಉತ್ಪಾದನೆ ಮಾಡುವುದಕ್ಕೆ ಹಸುವಿಗೆ ಹಿಂಡಿ ಬೂಸಾ ಇದನ್ನೆಲ್ಲಾ ಹಾಕುವುದು ಬೇಡವೇ ? ಹಸುವಿಗೆ ಮೋಸಮಾಡಿ ಹಾಲನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ ? ಅದು ಕಾಮಧೇನು ಗೋಮಾತೆ ಅದಕ್ಕೆ ಹೊಟ್ಟೆ ತುಂಬಾ ಹಾಕಿದರೆ ಕೆಚ್ಚಲ ತುಂಬಾ ಹಾಲು ಕೊಡುತ್ತದೆ. ಕಾರ್ಖಾನೆಯಲ್ಲಿ ಕಾರ್ಮಿಕರಿಗೆ ಎಷ್ಟು ದುಡ್ಡು ಕೊಟ್ಟರೂ ಸ್ಟ್ರೈಕ್, ಲಾಕೌಟ್ ವಾಕ್‌ಔಟ್ ಎಲ್ಲಾ ಆಗುತ್ತದೆ. ಆದರೆ ಹಸುವಿನಲ್ಲಿ ಸ್ಟ್ರೈಕ್ ಇಲ್ಲ ಲಾಕೌಟ್ ಇಲ್ಲ, ಸ್ಟೇ ಆಫ್ ವರ್ಕ್ ಇಲ್ಲ. ಆದಕ್ಕೆ ಹೊಟ್ಟೆಗೆ ಸರಿಯಾಗಿ ಹಾಕಿದರೆ ೨೪ ಘಂಟೆ ಕೆಚ್ಚಲಲ್ಲಿ ಹಾಲನ್ನು ಉತ್ಪಾದನೆ ಮಾಡಿ ಧಾರಾಕಾರವಾಗಿ ಕೊಡುತ್ತದೆ.

ಹಸು ನಮಗೆ ಹಾಲು ಉತ್ಪಾದನೆ ಮಾಡಿ ಕೊಡುತ್ತದೆ. ಆ ಹಾಲನ್ನು ನಾವು ಮಕ್ಕಳಿಗೆ ಕೊಡುತ್ತೇವೆ. ವಯಸ್ಸಾದವರಿಗೂ ಕೊಡುತ್ತೇವೆ. ಆದೇ ಹಸುವಿಗೆ ಸರಿಯಾದ ಬೆಲೆಯಲ್ಲಿ ಮೇವು ಕೊಡಿ, ಹಾಲು ಕೊಡುತ್ತೇವೆ. ಅಂದರೆ ಕೊಡುವುದಿಲ್ಲ ಹಸುವಿಗೆ ಮೇವು ಹಾಕದಿದ್ದರೆ ಹಾಲು ಕೊಡುವುದಿಲ್ಲ. ನಾವು ಮೇವು ಸರಿಯಾಗಿ ಕೊಟ್ಟರೆ ಒಂದು ಹಸು ೨೦–೨೫–೩೦ ಲೀಟರ್‌ವರೆಗೆ ಹಾಲು ಕೊಡುತ್ತದೆ. ನಾವು ಪಾರ್ಸಿ ಮತ್ತು ಮಿಶ್ರತಳಿಗಳಿಂದ ಕ್ರಾಸ್ ಬ್ರೀಡ್ ಮಾಡಿ ಹಾಲು ಉತ್ಪಾದನೆ ಮಾಡುತ್ತೇವೆ. ಹಸುವಿನ ಕೆಚ್ಚಲು ನೋಡಿದರೆ ನಮಗೆ ಬಹಳ ಸಂತೋಷವಾಗುತ್ತದೆ. Because every cow or cattle looks like a mini Factory of Milk production. ನಾವು ಹಸುವಿಗೆ ಅಗತ್ಯವಾದ ಸೌಕರ್ಯ ಮಾಡಬೇಕು ಅನೇಕ ಜನ ಫ್ಯಾಕ್ಟರಿಗಳನ್ನು ಕಳ್ಳರು ನಡೆಸುತ್ತಾರೆ ಅಂದರೆ ಅಲ್ಲಿ ಮೆಷನರಿ ಇರುವುದಿಲ್ಲ, ಫ್ಯಾಕ್ಟರಿ ಇರುವುದಿಲ್ಲ. ಅವರು ಕಲ್ಕತ್ತ ಅಥವಾ ಬಾಂಬೆಯಿಂದ ಯಾವುದೋ ಒಂದು ಇನ್‌ವಾಯ್ಸ್ ತರುತ್ತಾರೆ. ಬ್ಯಾಂಕ್‌ಗಳವರು ಕೋಟ್ಯಾಂತರ ರೂಪಾಯಿಗಳ ಫೈನಾನ್ಸ್ ಮಾಡುತ್ತಾರೆ. ಆ ಫ್ಯಾಕ್ಟರಿಗೆ ನೀರು, ವಿದ್ಯುತ್ ಸೌಲಭ್ಯ ಮತ್ತು ಬ್ಯಾಂಕ್‌ನಲ್ಲಿ ಸಬ್‌ಸಿಡಿ ಕೊಡುತ್ತೇವೆ. ಆದರೂ ಅವರು ರಾತ್ರೋ ರಾತ್ರಿ ಆ ಫ್ಯಾಕ್ಟರಿ ಮುಚ್ಚಿ ಹೊರಟುಹೋಗುತ್ತಾರೆ. ಇವರು ಹಗಲು ಕಳ್ಳರು. ನಾನು ಹಿಂದೆ ಮಂತ್ರಿಯಾಗಿದ್ದಾಗ ಹೊರಗಡೆ ನಮ್ಮ ಉತ್ಪನ್ನಗಳನ್ನು ಕಳುಹಿಸಿ ಕೊಡಬಾರದು ಎಂದು ಮಾಡಿದ್ದೆ. ಆದರೆ ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ಕೇಂದ್ರ ಸರ್ಕಾರ ಮಾಡಬೇಕೆಂದು ನಮ್ಮ ಅಧಿಕಾರಿಗಳು ಆಗ ಹೇಳಿದರು. ನಮ್ಮ ರಾಜ್ಯದಲ್ಲಿ ನಾವು ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಕಾನೂನು ಸೆಕ್ರೆಟರಿ ಮತ್ತು ಚೀಫ್ ಸೆಕ್ರೇಟರಿ ಹೇಳಿದರು. They said that it has to be ordered by the Government of India ನಾನು ಆಗ ಸುಮ್ಮನೆ ಆದೆ. ನಾನು ಏನು ಮಾಡಲಿ, ಬೊಬ್ಬೆ ಹಾಕಲೇನು ? ಆದ್ದರಿಂದ ಇವರಿಗೆ ಏನಾದರೂ ಸವಲತ್ತು ಕೊಡಿ ಎಂದು ಹೇಳಿದರೆ ನೀವು ಕೊಡುವುದಿಲ್ಲ. ಮಾನ್ಯ ಸಚಿವರು ಇವರಿಗೆ ಏನಾದರೂ ಒಂದು ಗತಿ ತೋರಿಸಿ, ಇವತ್ತು ಬೂಸ ೨೨ ಕೆ. ಜಿ. ಗೆ ೬೦ ರೂಪಾಯಿಗಳು ಇದೆ. ಆಮೇಲೆ ಹಿಂಡಿ ೭೦ ಕೆ.ಜಿ.ಗೆ ೨೫೦ ರೂಪಾಯಿ ಇದೆ. ಈ ರೀತಿಯಾದರೆ ರೈತರು ಏನು ತೆಗೆದುಕೊಂಡು ಹೋಗಿ ಹಸುಗಳನ್ನು ಸಾಕುವುದು. ರೈತರು ತಮ್ಮ ಮಕ್ಕಳನ್ನು ಆ ರೀತಿ ನೋಡಿಕೊಳ್ಳುವುದಿಲ್ಲ. ಹಸುಗಳನ್ನು ಪ್ರತಿದಿನ ಚೆನ್ನಾಗಿ ತೊಳೆದು ಹಸುಗಳ ಮೈ ಮೇಲೆ ನೊಣ ಕುಳಿತುಕೊಳ್ಳುವುದಕ್ಕೆ ಬಿಡುವುದಿಲ್ಲ. ರೈತನ ಹೆಂಡತಿ ಮತ್ತು ಮಕ್ಕಳಿಗೆ ಸ್ನಾನ ಇಲ್ಲ, ಆದರೆ ಹಸುಗಳಿಗೆ ಸ್ನಾನ ಮಾಡಿಸುತ್ತಾರೆ ಹಸುಗಳನ್ನು ಶುದ್ಧವಾಗಿಟ್ಟು ಅಕ್ಕರೆಯಿಂದ ಸಾಕುತ್ತಿದ್ದಾರೆ. ಹಸುವನ್ನು ತಾಯಿಯ

ಸಮಾನ ಎಂದು ಸಾಕುತ್ತಿದ್ದಾರೆ. ಇದನ್ನು ನಾನು ಇನ್ನು ಯಾವ ರೀತಿ ವಿಶ್ಲೇಷಣೆ ಮಾಡಲಿ. ಮಾನ್ಯ ಮಂತ್ರಿಗಳು ಒಳ್ಳೆಯ ಕೆಲಸ ಮಾಡುವವರಿದ್ದಾರೆ. ಅವರಿಗೆ ಏನಾದರೂ ಒಂದು ಕೆಲಸ ಮಾಡ ಬೇಕೆಂದು ತಲೆಗೆ ಬಂದರೆ ಆ ಕೆಲಸ ಮಾಡಿಯೇ ಮಾಡುತ್ತಾರೆ, ಅವರು ಬಿಡುವುದಿಲ್ಲ. ಈಗ ಕೆ. ಎಂ. ಎಫ್. ಎಂದು ಮಾಡಿಕೊಂಡಿದ್ದಾರೆ. ಈ ಮಿಲ್ಕ್ ಸೊಸೈಟಿಗಳವರು ಒಂದು ಯೂನಿಯನ್ನು ಮಾಡಿ ಕೊಂಡಿದ್ದಾರೆ. ಹಿಂದೆ ಕೆ. ಎಂ. ಎಫ್. ನಲ್ಲಿ ಒಬ್ಬರು ಎಂ.ಡಿ. ಇದ್ದರು. ಅವರಿಗೆ ಏರ್ ಕಂಡೀಷನ್ ಕಾರು ಇತ್ತು. ನಾನು ಹಿಂದೆ ಪಶು ಸಂಗೋಪನಾ ಮಂತ್ರಿಯಾಗಿದ್ದಾಗ ರಿಚ್‌ಮಂಡ್ ರೋಡಿನಲ್ಲಿ ಒಂದು ಬಿಲ್ಡಿಂಗ್ ಕೇಳಿದರು. ಆಗ ನಾನು ಪ್ಲೀಸ್ ಗೆಟ್ ಔಟ್. ಪ್ಯಾಲೇಸ್ ಆರ್ಚರ್ಡ್‌ನಲ್ಲಿ ಸ್ಟೇ ಮಾಡಿ ಎಂದು ಹೇಳಿದೆ. ಅಧಿಕಾರಿಗಳ ಆಫೀಸುಗಳನ್ನು ಪರಲೋಕದಲ್ಲಿದ್ದಾರೆ. ಹವಾನಿಯಂತ್ರಿತ ಕೊಠಡಿ, ಹವಾನಿಯಂತ್ರಿತ ಕಾರು, ವೆಲ್ ಫರ್ನಿಷಡ್ ಹೌಸ್ ನೋಡಿ ಅವರು ಟೀಕ್ ವುಡ್ ಏನು ಸ್ವಾಮಿ ಇದೆಲ್ಲಾ ಯಾರ ಹಣ, ಬಡ ಬೋರೇಗೌಡನ ಹಣ, ಬಡ ರೈತನ ಹಣ. ಈ ರೈತರು ಉತ್ಪಾದನೆ ಮಾಡಿದಂತಹ ಹಾಲಿಗೆ ಹೆಚ್ಚು ಬೆಲೆ ಕೊಡಿ ಎಂದು ಹೇಳಿದರೆ ನೀವು ಕೊಡುವುದಿಲ್ಲ. ಸರ್ಕಾರದವರು ಚಿಂತನೆ ಮಾಡಿ ಸರ್ಕಾರದವರು ಈ ಬಗ್ಗೆ ಒಂದು ದೃಢವಾದ ನಿಲುವು ತೆಗೆದುಕೊಳ್ಳ ಬೇಕು, ಈಗಾಗಲೇ ತೆಗೆದುಕೊಂಡಿದ್ದಾರೆ ಹಿಂದೆ ಇದ್ದ ಎಂ.ಡಿ. ಯನ್ನು ತೆಗೆದರು. ಅದಕ್ಕೆ ಗಲಾಟೆ ಯಾಯಿತು. ಯೂನಿಯನ್ನುನವರು ನಿಮಗೆ ತೆಗೆಯಲು ಅಧಿಕಾರ ಇಲ್ಲ, ಹೇಗೆ ತೆಗೆದಿರಿ ಎಂದರು ಈಗ ಜಿಲ್ಲಾ ಪರಿಷತ್ತಿನವರು ಪ್ಯಾರಲಲ್ ಗೌರ್ನಮೆಂಟ್ ನಡೆಸುತ್ತಿದ್ದಾರೆ. ವಿಧಾನ ಸೌಧದಲ್ಲಿ ಸೆಕ್ರೇಟರಿಯೇಟ್ ಇದ್ದರೆ ಜಿಲ್ಲಾ ಪರಿಷತ್ತಿನವರು ಒಂದು ಪ್ಯಾರಲಲ್ ಗೌರ್ನಮೆಂಟ್ ನಡೆಸುತ್ತಿದ್ದಾರೆ. confrontation with the State Government, ಅಲ್ಲಿನ ಸೇವೆಗೆ ಯಾರನ್ನಾದರೂ ಅಧಿಕಾರಿಗಳನ್ನು ಹಾಕಿದರೆ ಅವರು ಹೋಗಿ ಎಂದು ಕಳಿಸುತ್ತಾರೆ. ಮಂಡಲ ಪಂಚಾಯಿತಿ ಅಧ್ಯಕ್ಷರು ನಾಗರಾಜ್‌ರವರು ಹೇಳಿದರು ಎಂದು ಹೇಳುತ್ತಾರೆ. ಜವಹರ್‌ರೋಜ್‌ಗಾರ್ ಯೋಜನೆಯಡಿಯಲ್ಲಿ ಶ್ರೀಮಾನ್ ರಾಜೀವ್‌ಗಾಂಧಿಯವರು ಅವರಿಗೆ ನೇರವಾಗಿ ಪತ್ರ ಬರೆದು ಹಣವನ್ನು ಕೊಟ್ಟರು ಅದು ಅವರಿಗೆ ತಲೆಗೆ ಏರಿತು ಸುಮಾರು ೮ ರಿಂದ ೧೦ ಲಕ್ಷ ರೂಪಾಯಿ ಬಂದರೆ ಮಣ್ಣು ಹಾಕಲಿಲ್ಲ ಕಲ್ಲೂ ಕಟ್ಟಲಿಲ್ಲ ಕೆರೆ ಕಟ್ಟಲಿಲ್ಲ ಏನೂ ಕೆಲಸ ಮಾಡದೆ ಕೊಟ್ಟ ಹಣವನ್ನೆಲ್ಲಾ ಅವರು ನುಂಗಿಹಾಕಿದರು. ನಾನು ಆಗ ಎಂ.ಎಲ್.ಎ, ಆಗಿರಲಿಲ್ಲ. ನಾನು ಒಂದು ಸಾರಿ ಈ ಬಗ್ಗೆ ಕೇಳಿದೆ. ನಮ್ಮ ಮಂಡಲ ಪಂಚಾಯಿತಿ ಅಧ್ಯಕ್ಷರೊಬ್ಬರು ಹೇಳಿದರು. ಹೋಗ್ರಿ ನೀವು ನಿಮ್ಮ ಮುಖ್ಯಮಂತ್ರಿಗಳಿಗೆ ಮತ್ತು ನಿಮ್ಮ ಪ್ರಧಾನ ಮಂತ್ರಿಗಳಿಗೆ ಒಂದು ಚೆಕ್‌ಗೆ ಸಹಿ ಹಾಕುವ ಅಧಿಕಾರ ಇಲ್ಲ. ನನಗೆ ಒಂದು ಲಕ್ಷ ರೂಪಾಯಿ ಚೆಕ್‌ಗೆ ಸಹಿ ಮಾಡುವ ಅಧಿಕಾರ ಇದೆ ಎಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಮಂಡಲ ಪಂಚಾಯಿತಿಗಳವರು ಹಣ ನುಂಗಿ ಹಾಕಿದರು ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ಅವರು ಮಾತನಾಡುವುದಕ್ಕೆ ಒಂದು ಬೆಲೆ ಬೇಡವೇ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಇದು ಸತ್ಯವಲ್ಲ. ಬಂದ ಹಣ ಎಲ್ಲಾ ನುಂಗಿ ಹಾಕಿದರು ಎಂದರೆ ಸರಿ ಅಲ್ಲ ಖಂಡಿತವಾಗಿ ಸರಿಯಲ್ಲ. ಮಂಡಲ ಪಂಚಾಯಿತಿಗಳ ಬಗ್ಗೆ ಸರಾಸಗಟಾಗಿ ಈ ರೀತಿ ಹೇಳು ವುದು ಸರಿಯಲ್ಲ. ಇದು ಅಕ್ಷಮ್ಯ ಅಪರಾಧ.........

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಮಂಡಲ ಪಂಚಾಯಿತಿಗಳವರು ಹಣವನ್ನು ನುಂಗಿದರು ಎನ್ನು ವುದು ಸತ್ಯಕ್ಕೆ ದೂರವಾದುದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಮಂಡಲ ಪಂಚಾಯಿತಿಯವರು ಜವಾಹರ್ ರೋಜ್ ಗಾರ್ ಯೋಜನೆಯ ಹಣವನ್ನು ನುಂಗಿದರು ಎಂದು ಹೇಳುವುದು ಸರಿಯಾದ ನೀತಿಯಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ನೀವು ಪ್ರಜಾಪ್ರಭುತ್ವದ ವಿರೋಧಿಗಳಾಗುತ್ತಿದ್ದೀರಿ. ಶಾಸಕ ರಾದ ಮೇಲೆ ಎಲ್ಲಾ ನಿಮ್ಮದೇ ನಡೆಯಬೇಕು, ಜಿಲ್ಲಾಪರಿಷತ್ತುಗಳು ಬೇಡ ಎಂದರೆ ಹೇಗೆ?

ಶ್ರೀ ಎನ್. ಚಿಕ್ಕೇಗೌಡ.—ನಾನು ೧೯೬೨ನೇ ಇಸವಿಯಿಂದ ೧೯೭೧ನೇ ಇಸವಿಯವರೆಗೆ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿದ್ದೆ, ಆಮೇಲೆ ಶಾಸಕನಾದೆ, ಮಂತ್ರಿಯಾದೆ, ಪುನಃ ಈಗ ಶಾಸಕನಾಗಿದ್ದೇನೆ. ನನ್ನ ಅನುಭವ ಮತ್ತು ಅನಿಸಿಕೆಗಳ ಪ್ರಕಾರ, ನನ್ನ ಸ್ವಂತ ಪ್ರಾಕ್ಟಿಕಲ್ ಅನುಭವದಿಂದ ಹೇಳುತ್ತಿದ್ದೇನೆ. ಆಗ ತಾಲ್ಲೂಕು ಬೋರ್ಡ್ ಅಧ್ಯಕ್ಷರುಗಳಿದ್ದರು, ರಾಜಕೀಯವೇ ಇರಲಿಲ್ಲ; ಬರೀ ಅಭಿವೃದ್ಧಿ ಕಾರ್ಯ ಮಾಡುವುದು ನಮ್ಮ ಕೆಲಸವಾಗಿತ್ತು. ಯಾರಾದರೂ ಅಧಿಕಾರಿಗಳು ಟ್ರಾನ್ಸ್‌ಫರ್ ಆಗಿ ಬಂದರೆ ನಾವು ಬೇಡ ಎಂದು ಹೇಳುವುದಕ್ಕಾಗುತ್ತಿರಲಿಲ್ಲ. ದಯವಿಟ್ಟು ಇದನ್ನು ನೆನೆಸಿಕೊಳ್ಳಿ. ತಾಲ್ಲೂಕು ಬೋರ್ಡ್‌ನಲ್ಲಿ ಕೆಲಸ ಮಾಡಿ ಬಂದ ಅನೇಕ ಶಾಸಕರು ಇಲ್ಲಿದ್ದಾರೆ. ಆಗ ಅಲ್ಲಿ ರಾಜಕೀಯ ಇರಲಿಲ್ಲ. ಪಕ್ಷ ಬೇಧ ಇರಲಿಲ್ಲ. ಮೋರಿ ಮಾಡಿಸುವುದು, ಸ್ಕೂಲ್ ಮಾಡಿಸುವುದು, ಬಾವಿ ತೋಡಿಸುವುದು ಮುಂತಾದ ಕೆಲಸಗಳನ್ನು ಆಗ ಬಹಳ ಚೆನ್ನಾಗಿ ಮಾಡುತ್ತಿದ್ದೆವು. ಈಗ ಹಳ್ಳಿಗಳ ಕಡೆ ಒಬ್ಬ ಬಡವ ಮನೆ ಕಟ್ಟುತ್ತಿದ್ದಾನೆಂದರೆ, ಅದಕ್ಕೆ ಒಂದು ಸ್ಟೇ ಬರುತ್ತದೆ. ಬಡವರುಗಳಿಗಾಗಿ ಈ ಏಳು ವರ್ಷಗಳಲ್ಲಿ ಒಂದು ಸೈಟ್ ಕೂಡಾ ಕೊಟ್ಟಿಲ್ಲ, ೨೦ ಅಂಶದ ಕಾರ್ಯಕ್ರಮದಲ್ಲಿ ಏನೂ ಕೆಲಸ ಆಗಿಲ್ಲ. ಸ್ಟ್ಯಾಂಡಿಂಗ್ ಕಮಿಟಿಯವರು ತೀರ್ಮಾನ ಮಾಡಿದ ಮೇಲೆ. ಅದರ ಮೇಲೆ ಅಪೀಲ್ ಹೋಗುವ ಹಾಗೆಯೇ ಇಲ್ಲ. ಗೌರ್ನಮೆಂಟಿಗೆ ಅಪೀಲ್ ಮಾಡುವ ಹಾಗಿಲ್ಲ. ಬೇಕಾದರೆ ಹೈಕೋರ್ಟ್‌ಗೆ ಹೋಗಬೇಕಾಗುತ್ತದೆ. ಮಾನ್ಯ ವಾಟಾಳ್ ನಾಗರಾಜ್‌ರವರು ನಮ್ಮ ಊರಿನಲ್ಲೇ ಓದಿದವರು.

ಶ್ರೀ ಡಿ.ಬಿ. ಚಂದ್ರೇಗೌಡ.—ಹಾಗಾದರೆ ನಿಮ್ಮಿಬ್ಬರ ಅಭಿಪ್ರಾಯದಲ್ಲಿ ಇಷ್ಟೊಂದು ವಿರೋಧ ಏಕಾಯಿತು ? ಇವರು ಓದಿರುವುದು ಸರಿಯೋ ? ನೀವು ಓದಿರುವುದು ಸರಿಯೋ ಗೊತ್ತಾಗುತ್ತಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಚಂದ್ರೇಗೌಡರೂ ಸಹಾ ನನಗೆ ಬಹಳ ದಿವಸಗಳಿಂದಲ್ಲೂ ಸ್ನೇಹಿತರಾಗಿರತಕ್ಕಂಥವರು. ಆ ಕಡೆ ಇರುವ ಅನೇಕ ಜನ ಸ್ನೇಹಿತರು ನಮ್ಮ ಜೊತೆಯಲ್ಲೇ ಇದ್ದವರು.

ಶ್ರೀ ಡಿ.ಬಿ. ಚಂದ್ರೇಗೌಡ.—ನಮ್ಮ ಸ್ನೇಹವನ್ನು, ವಿಕೇಂದ್ರೀಕರಣ ವ್ಯವಸ್ಥೆಯನು ಹಾಳು ಮಾಡುವುದರಲ್ಲಿ ಅದನ್ನು ಕೆಡಿಸಿಕೊಳ್ಳಬೇಡಿ.

ಶ್ರೀ ಎನ್. ಚಿಕ್ಕೇಗೌಡ.—ಎಲ್ಲಾದರೂ ಮಾವ ಅನ್ನು ಆಲೆ ಮನೆ ಹತ್ತಿರ ಮಾತ್ರ ಮಾವ ಎನ್ನಬೇಡ ಅಂದ ಹಾಗೆ ಆಯಿತು. ಏಕೆಂದರೆ, ಬಂದವರೆಲ್ಲ ಹಾಲು ಕುಡಿದು ಎಲ್ಲಿ ಬೆಲ್ಲ ತಿಂದು ಬಿಡುತ್ತಾರೋ ಎಂದು. ಚಲನಚಿತ್ರ, ಜೈಲಿನ ಅನುಭವಗಳು ಎಲ್ಲವನ್ನೂ ಹೇಳಿ, ಜಿಲ್ಲಾಪರಿಷತ್ತಿನ ವಿಚಾರಕ್ಕೆ ಬರುತ್ತೇನೆ. ನನಗೂ ಸ್ವಲ್ಪ ಹೆಚ್ಚು ಕಾಲಾವಕಾಶ ಕೊಡಬೇಕು, ಮಾನ್ಯ ವಾಟಾಳ್ ನಾಗಾರಾಜ್‌ರವರು ೧ ಗಂಟೆ ೫೦ ನಿಮಿಷ ಕಾಲ ಮಾತನಾಡಿದರು...

ಶ್ರೀ ವಾಟಾಳ್ ನಾಗರಾಜ್.—ನಾನು ೧ ಗಂಟೆ ೫೦ ನಿಮಿಷ ಮಾತನಾಡಿದ್ದೇನೆ.

ಶ್ರೀ ಎನ್. ಚಿಕ್ಕೇಗೌಡ.—ನಾನು ಹಳ್ಳಿಯ ರೈತರ ಪರವಾಗಿ, ರೈತನಾಗಿ, ಶಾಸಕನಾಗಿ ಮಾತನಾಡುತ್ತಿದ್ದೇನೆ. ನನಗೆ ಅವಕಾಶವನ್ನು ಮಾಡಿಕೊಡಿ. ತಾವುಗಳು ಸ್ವಲ್ಪ ಸಾವಕಾಶವಾಗಿ ಕೇಳಬೇಕು. ಜಿಲ್ಲಾಪರಿಷತ್. ಮಂಡಲ್‌ಪಂಚಾಯತ್...

ಶ್ರೀ ಡಿ.ಬಿ. ಚಂದ್ರೇಗೌಡ,—ಮಾನ್ಯ ಚಿಕ್ಕೇಗೌಡರು, ವಾಟಾಳ್ ನಾಗರಾಜ್‌ರವರು ೧ ಗಂಟೆ ೬೦ ನಿಮಿಷ ಮಾತನಾಡಿದರು ಎಂದು ಹೇಳಿದರು, ಒಂದು ಗಂಟೆ ಸರಿಯೋ, ೬೦ ನಿಮಿಷ ಸರಿಯೋ ? ದಯವಿಟ್ಟು ಹೇಳುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ವಾಟಾಳ್ ನಾಗರಾಜ್‌ರವರೆ ೧ ಗಂಟೆ ೨೦ ನಿಮಿಷ ಅಂದರು, ವ್ಯವಸಾಯದ ವಿಚಾರದಲ್ಲಿ ರೈತರಿಗೆ ಬೇಕಾದಂಥ ಬೀಜಗಳ ಪೂರೈಕೆ, ಅದು ಹತ್ತಿ, ರಾಗಿ, ಬತ್ತ, ಇನ್ನಿತರ ಯಾವುದೇ ಬೀಜಗಳ ಪೂರೈಕೆ ಇರಲಿ, ಅದರಲ್ಲಿ ಇವತ್ತಿನ ದಿವಸ ಎಷ್ಟು ಮೋಸ ಆಗುತ್ತಿದೆ ಎನ್ನುವುದು ತಮಗೆಲ್ಲರಿಗೂ ಗೊತ್ತಿದೆ. ನಮ್ಮಲ್ಲಿ ಬೀಜ ಉತ್ಪಾದನೆ ಮಾಡತಕ್ಕಂಥ ಫಾರ್ಮ್ಸ್ ಇವೆ, ಪೂರೈಕೆ ಮಾಡತಕ್ಕಂಥ ಏಜನ್ಸಿಗಳು ಇವೆ. ಆದರೂ ಕೂಡ ಸೂಕ್ತ ರೀತಿಯಲ್ಲಿ ಸರಿಯಾದ ಕಾಲದಲ್ಲಿ ಬೀಜಗಳ ಪೂರೈಕೆ ಆಗುತ್ತಾ ಇಲ್ಲ ಹತ್ತಿ ಬೀಜದ ವಿಚಾರದಲ್ಲಿ ಹೋದ ವರ್ಷ ರೈತರಿಗೆ ಎಷ್ಟು ಮೋಸ ಮಾಡಿದರು. ನಾನು ಮಂತ್ರಿಯಾಗಿದ್ದಾಗ ಮಾನ್ಯ ದೇವರಾಜ್ ಅರಸ್‌ರವರ ಕಾಲದಲ್ಲಿ ಹೈಬ್ರಿಡ್ ವರಲಕ್ಷ್ಮಿ ಹತ್ತಿ ಉತ್ಪಾದನೆ ಮಾಡಿದರು. ಆದರೆ ಅದರ ಬೆಲೆ ಬಿದ್ದು

ಹೋಯಿತು. ಅದಕ್ಕೆ ೧೫೦–೦೦ ರೂಪಾಯಿ ಬೆಲೆ ಕೊಟ್ಟರು. ಆದರಿಂದ ೩ ಕೋಟಿ ರೂಪಾಯಿಗಳು ಹೋಯಿತು. ಆಗ ಬಹಳ ಜನರು ಬಹಳಷ್ಟು ಟೀಕೆ ಮಾಡಿದರು. ಈ ಮೂರು ಕೋಟಿ ರೂಪಾಯಿಗಳು ಹೇಗೆ ಹೋಯಿತು ಎಂದು ತಮಗೆ ಗೊತ್ತೆ ? ಈ ಐದು ಕ್ವಿಂಟಾಲ್ ಹತ್ತಿ ಬೆಳೆಯುವುದಕ್ಕೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಬೇಕು. ಒಂದು ದಿನಕ್ಕೆ ಅದರಲ್ಲಿ ಕೆಲಸ ಮಾಡಲು ೫೦–೬೦ ಜನ ಕೂಲಿಗಾರರನ್ನು ತೊಡಗಿಸಬೇಕು, ಆಗ ಬೆಲೆ ಬಿದ್ದು ಹೋಯಿತು ಎಂದು ೧೫೦–೦೦ ರೂಪಾಯಿಗಳನ್ನು ಕೊಟ್ಟರು. ಭಾರಿ ಅಲ್ಲೋಲಕಲ್ಲೋಲ ಆಯಿತು. ಹೀಗೆ ಮೂರು ಕೋಟಿ ರೂಪಾಯಿಗಳನ್ನು ಕೊಟ್ಟರು. ೭೦ ರೂಪಾಯಿ ಜಾಸ್ತಿ ಮಾಡಿದರೆ ಸರಕಾರಿ ನೌಕರರಿಗೆ ೩–೪–೫ ಕೋಟಿ ರೂಪಾಯಿಗಳು ಆಗುತ್ತದೆ. ಆದರೆ ರೈತರು ಕೂಲಿಗಾರರು ಎಷ್ಟು ಜನರು ಹೊಲದಲ್ಲಿ ರಾತ್ರಿ ಹಗಲು ಕೆಲಸ ಮಾಡಿದ್ದಾರೋ ಅವರಿಗೆ ಮೂರು ಕೋಟಿ ರೂಪಾಯಿ ಕೊಟ್ಟರೆ ಅಲ್ಲೋಲಕಲ್ಲೋಲವಾಯಿತು. ಪಬ್ಲಿಕ್ ಅಕೌಂಟ್ಸ್ ಕಮಿಟಿಯೂ ಬಂತು. ಅದು ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲ, ಆಗ ನಾನು ವಿರೋಧ ಪಕ್ಷದಲ್ಲಿದೆ. ನಾನು ಈ ವಿಚಾರದಲ್ಲಿ ಹೇಳುವುದಿಷ್ಟೆ, ನಿಷ್ಠಾವಂತರಾಗಿ ರೈತರಿಗೆ ಏನು ಕೊಡಬೇಕೋ ಅದನ್ನು ಕೊಡುವಲ್ಲಿ ನಾವು ಹಿಂಜರಿಯ ಬಾರದು. ಅದನ್ನು ತಾವುಗಳು ಕೊಡುತ್ತೀರಾ ? ರೈತರಿಗೆ ರಕ್ಷಣೆಯನ್ನು ಒದಗಿಸುತ್ತೀರಾ ? ಅವರಿಗೆ ಸಬ್ಸಿಡಿಯನ್ನು ಕೊಡುತ್ತೀರಾ ? ಬೆಳೆ ನಷ್ಟವಾದಲ್ಲಿ ಸಕಾಲಿಕ ನೆರವನ್ನು ಕೊಡುತ್ತೀರಾ ? ಅದು ಎಷ್ಟೇ ಆಗಲಿ, ಮೂರಲ್ಲ, ನೂರು ಕೋಟಿ ಆದರೂ ಕೊಡಬೇಕು ? ಕೊಡದೆ ಇನ್ನೇನು ಮಾಡುತ್ತೀರಿ? ಸಕಾಲದಲ್ಲಿ ಬೀಜ ಸಿಗುವುದಿಲ್ಲ, ಸಿಕ್ಕ ಬೀಜಗಳು ಸರಿಯಾಗಿ ಮೊಳಕೆ ಬರುವುದಿಲ್ಲ, ಹೋದಸಲ ಕಡಲೆಕಾಯಿ ಬೀಜ ಒದಗಿಸಿದ್ದರು. ಆದು ಮೊಳೆಯಲೇ ಇಲ್ಲ. ಹೀಗಾಗಿ ಒಂದು ಸೀಸನ್ ಹೋಯಿತು ? ಇದರಿಂದ ಯಾರಿಗೆ ನಷ್ಟ ? ಅನುಕೂಲಕ್ಕೆ ತಕ್ಕ ಮಾಡಿಕೊಳ್ಳಲಿಕ್ಕೆ ಇದೇನು ಫ್ಯಾಕ್ಟರಿಯೇ ? ಇವೊತ್ತು ಕ್ರಿಮಿಕೀಟನಾಶಕಗಳನ್ನು ಎಲ್ಲಾ ಬೆಳೆಗಳಿಗೂ, ತರಕಾರಿ, ಹಣ್ಣು ಹಂಪಲುಗಳ ಬೆಳೆಗಳಿಗೂ ಹೊಡೆಯಬೇಕು. ಇದು ಅರ್ಧ ಕೆ.ಜಿ. ಯ ಒಂದು ಪ್ಯಾಕೇಟ್‌ಗೆ ೭೦–೮೦ ರೂಪಾಯಿಗಳಷ್ಟು ಬೆಲೆ. ಅದರಲ್ಲಿ ಸುದ್ದೆ ಮಣ್ಣನ್ನೋ, ಮೈದಾ ಹಿಟ್ಟನ್ನೊ ಇನ್ಯಾವುದನ್ನೋ ಬೆರೆಸಿ ಅದರಲ್ಲಿಯೂ ಆಗತಕ್ಕ ಮೋಸಕ್ಕೆ ರೈತರೇ ಬಲಿಯಾಗಬೇಕು. ಅಂಥ ಪ್ರಕರಣಗಳನ್ನು ಬೆಳಕಿಗೆ ತಂದು ಕೇಸ್ ಹಾಕೋಣವೆಂದರೆ ಸರಿಯಾದ ಸಾಕ್ಷಿ, ಪುರಾವೆಗಳು ಸಿಗುವುದಿಲ್ಲ. ನಾನು ಸಚಿವನಾಗಿದ್ದಾಗ ಈ ಬಗ್ಗೆ ರಾಯಚೂರಿನಲ್ಲಿ ಒಬ್ಬರ ಮೇಲೆ ಕೇಸ್ ಹಾಕಿದ್ದೆ. ಆದರೆ ನಮ್ಮ ಆಫೀಸರ್ಸ್ ಹೋಗಲಿಲ್ಲವೆಂದು ಪ್ರೈಮಾಫೆಸಿ ನೋಡದೆ ಡಿಸ್‌ಮಿಸ್ ಮಾಡಿದರು. ಏಕೆಂದರೆ, ಹಣದ ಪ್ರಭಾವ. ಲಾಯರುಗಳು ಹೋಗಿ ಈ ರೀತಿ ಹೇಳಿದರು. My client is so honest you must release him. He is not an accused, this is the voice. Do you know it mr. Nagaraj ಈ ರೀತಿ ಹೇಳುತ್ತಾರೆ. ಹೀಗಾಗಿ ರೈತರಿಗೆ ಯಾವುತ್ತೂ ಒಂದು ಸೂಕ್ತ ರಕ್ಷಣೆ ಸಿಗುತ್ತಿಲ್ಲ. ಇನ್ನು ಪಂಪ್‌ಸೆಟ್, ಬೋರ್‌ವೆಲ್ ಮೋಟಾರ್‌ಗಳ ವಿಚಾರದಲ್ಲಿ ಹೇಳುವುದೇ ಬೇಡ, ವಿದ್ಯುಚ್ಛಕ್ತಿಯ ಅವ್ಯವಸ್ಥೆಯಿಂದಾಗಿ ಅದು ಸುಟ್ಟು ಹೋಗುತ್ತದೆ. ನಾನು ನನ್ನ ಅನುಭವದಿಂದ ಈ ಮಾತನ್ನು ಹೇಳುತ್ತಿದ್ದೇನೆ. ನನ್ನ ಹತ್ತಿರವೂ ೨ ಪಂಪ್‌ಸೆಟ್‌ಗಳು ಇವೆ. ಅವುಗಳನ್ನು ಮೂರು ತಿಂಗಳಿಗೊಮ್ಮೆ ಮೂರು ಸಾವಿರ ರೂಪಾಯಿಗಳನ್ನು ರಿವೈಂಡ್‌ಗಾಗಿ ಕೊಡಬೇಕಾಗುತ್ತದೆ. ಇದಕ್ಕೆ ಒಂದು ರಕ್ಷಣೆ ಕೊಡಬೇಡವೆ ? ಬೇರೆ ದೇಶಗಳಲ್ಲಿ ದಾರಿಯಲ್ಲಿ ಕಾರು, ಮತ್ತಿತರ ವಾಹನಗಳಲ್ಲಿ ಪ್ರಯಾಣ ಮಾಡುವಾಗ ರಸ್ತೆಯ ಅಥವಾ ಇನ್ನಿತರ ಅವ್ಯವಸ್ಥೆಯಿಂದಾಗಿ ಅಪಘಾತವಾದರೆ ಪರಿಹಾರವನ್ನು ಕೊಡುತ್ತಾರೆ, ಆದರೆ ನಮ್ಮಲ್ಲಿ ? ಯಾವ ರಸ್ತೆಯ ಹೊಂಡದಲ್ಲಿ ಬಿದ್ದಿರುತ್ತಾರೋ ಅದರಲ್ಲಿಯೇ ಆ ಹೆಣ ಮುಚ್ಚಿ ಬಿಡುತ್ತಾರೆ. ಇದು ನಮ್ಮ ದೇಶದಲ್ಲಿರುವ ರಸ್ತೆಗಳ ಪರಿಸ್ಥಿತಿ ತಮಗೆ. ಇದನ್ನು ಇಷ್ಟು ಸವಿಸ್ತಾರವಾಗಿ ಹೇಳಿದರೆ ತಮಗೆ ಅರ್ಥವಾಗುತ್ತದೆ ಇವತ್ತು ನಮ್ಮ ರಾಜ್ಯದಲ್ಲಿ ಎರಡು ಕೃಷಿ ವಿಶ್ವವಿದ್ಯಾನಿಲಯಗಳು ಇವೆ ಒಂದು ಹೆಬ್ಬಾಳದಲ್ಲಿದೆ, ಇನ್ನೊಂದು ಧಾರವಾಡದಲ್ಲಿದೆ. ಅವರಲ್ಲಿರತಕ್ಕ ಸಂಖ್ಯಾ ಬಲವನ್ನು ನೋಡಿ ಖರ್ಚಾಗತಕ್ಕ ಹಣ ಎಷ್ಟು ಎಂದು ಅಂಕಿ ಸಂಖ್ಯೆಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಪಾಟೀಲ್ ನಾಗರಾಜ್‌ನವರಿಗಿಂತ ಹೆಚ್ಚಾಗಿ ನಾನು ಮೂರು ಗಂಟೆ ಎಕ್ಸಾಮಿನೇಷನ್‌ಗೆ ಪ್ರಿಪೇರ್ ಆದಂತೆ ಆದೆ ಆದರೆ ಎಲ್ಲವನ್ನೂ ಹೇಳುವುದಕ್ಕೆ ಇಷ್ಟವಿಲ್ಲ. ಅಂಕಿ ಅಂಶಗಳನ್ನು ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಇಲ್ಲಿ ಸಾವಿರಾರು ಜನ ಇದ್ದಾರೆ, ತಳಿ ಅಭಿವೃದ್ಧಿ ಮಾಡುತ್ತಾರೆ. ಹೊಸ ತಳಿಯನ್ನು ಕಂಡು ಹಿಡಿಯುತ್ತಾರೆ. ಕೆಲವರು ಏನು ಮಾಡುತ್ತಾರೆಂದರೆ. ಇಂಡಾಫ್ ೮ ಅನ್ನು ಇನ್ನೊಂದಕ್ಕೆ ಕ್ರಾಸ್ ಮಾಡುವುದು, ಎಂ.ಆರ್. ೯೦ ಅನ್ನು ಎಂ.ಆರ್. ೧೦೦ ಅಥವಾ ಎಂ.ಆರ್. ೧ ಮಾಡುತ್ತಾನೆ. ಏಕೆಂದರೆ ಹೊಸದು ಪರಿಶೋಧನೆ ಮಾಡಿ ನೋಬಲ್ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಾನೆ. You cannot try trial and error method on the farmers and animals.

ಯಾರಿಗೂ ಒಬ್ಬನಿಗೆ ಇಂಜೆಕ್‌ಕ್ಷನ್ ಕೊಟ್ಟು ಬಿಟ್ಟು ಅವನಿಗೆ ಅಲರ್ಜಿಯಾದ ತಕ್ಷಣವೇ ಇನ್ನೊಂದು ಇಂಜೆಕ್ಷನ್ ಕೊಡುವುದು. ಭೂಮಿಯೂ ಮಾತನಾಡುವುದಿಲ್ಲ, ಮೂಗು ಪ್ರಾಣಿಯು ಗೋಮಾತೆಯೂ ಮಾತನಾಡುವುದಿಲ್ಲ. ನೀವು ಏನಾದರೂ ಪ್ರಯೋಗ ಮಾಡಿ, ಎಲ್ಲಾದರೂ ಇರಲ್ಲಿ ಅಂತ ಹೇಳಿಕೊಂಡು ಬೀಜಾನೇ ಸರಿಯಿಲ್ಲ. ಆದ್ದರಿಂದ, ಬಹಳಮಟ್ಟಿಗೆ ಫೀಡ್ ಟ್ರಯಲ್ಸ್ ಮಾಡಿ ೧ ವರ್ಷ ಅಲ್ಲ ೧೦ ವರ್ಷವಾಗಲಿ, ಸತತವಾಗಿ ಪ್ರಯೋಗ ಮಾಡಿ ಬಿಡುಗಡೆ ಮಾಡಬೇಕು. ವರಲಕ್ಷ್ಮಿ ಹತ್ತಿ ಇವತ್ತು ಸರಿಯಿಲ್ಲ, ಏಕೆಂದರೆ, varalaxmi is a long staple cotton. ಕಮರ್ಷಿಯಲ್ ಆಗಿ successful ಅದು ಆಗಲಿಲ್ಲ, ಬಿದ್ದುಹೋಯಿತು. ಈಗ ಹೊಸ ಕಾಟನ್ ತಳಿಯನ್ನು ಕಂಡುಹಿಡಿದಿದ್ದಾರೆ. ಅವುಗಳ ವಿಚಾರ ನಾನು ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನಾನು ವ್ಯವಸಾಯದ ಬಗ್ಗೆ ಇಷ್ಟೊಂದು ದೀರ್ಘವಾಗಿ ಹೇಳಿದ್ದೇನೆ. ಮಾನ್ಯ ಮಂತ್ರಿಗಳು, ನಮ್ಮ ಸರ್ಕಾರ ಈ ಬಗ್ಗೆ ಒಳ್ಳೆಯ ವಿಚಾರಗಳನ್ನು ಹೇಳಿದೆ. ಈ ದೇಶದಲ್ಲಿ ಇಂಜಿನಿಯರ್‌ಗಳು, ಮೆಡಿಕಲ್ ಸ್ಟೂಡೆಂಟ್‌ಗಳು ಕಡಿಮೆಯಾದರೂ ಪರವಾಗಿಲ್ಲ. ರೈತರ ಮಕ್ಕಳಿಗೆ ತರಬೇತಿ ಕೊಡುವುದಕ್ಕೆ ಉತ್ತೇಜನ ಕೊಡಬೇಕು. ಅದಕ್ಕೋಸ್ಕರ ನಾಲ್ಕು ಕಾಲೇಜುಗಳನ್ನು ಶಿವಮೊಗ್ಗ, ಬಿಜಾಪುರ, ಮಂಡ್ಯ, ಮೂಡಿಗೆರೆಯಲ್ಲಿ ಹಾರ್ಟಿಕಲ್ಚರಲ್ ಕಾಲೇಜುನ್ನು ಮಾಡಿದ್ದಾರೆ. ಬಹಳ ಸಂತೋಷ, ಅದನ್ನು ನಾನು ಸ್ವಾಗತಿಸುತ್ತೇನೆ. ನಮ್ಮ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ, ರೈತರ ಮಕ್ಕಳು ಕಲಿಯಬೇಕು, ವಿದ್ಯಾವಂತರಾಗಬೇಕು. ಈ ಹೊಸ ಪರಿಶೋಧನೆ ಬಗ್ಗೆ ಅವರಿಗೆ ತಿಳುವಳಿಕೆಬೇಕು. ಅವರು ಅವರ ಬಾಳಿನಲ್ಲಿ ಅದನ್ನು ಅಳವಡಿಸಿಕೊಳ್ಳಬೇಕು. ಬರೀ ಸರ್ಕಾರಿ ನೌಕರಿಗೆ ಹೋಗುವವರಿಗೆ ನಾನು ಮಾಡಿ ಎಂದು ಹೇಳುವವನು ಅಲ್ಲ. ನಮ್ಮ ಸರ್ಕಾರ ಇದ್ದಾಗ ನಾವು ಶೇಕಡ ೧೫ ರಷ್ಟು ರೈತರ ಮಕ್ಕಳಿಗೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸೀಟುಗಳನ್ನು ರಿಜರ್ವ್ ಮಾಡಿದೆ. The officers tell us, Sir, this cannot stand in the court of law. It will be quashed. Don't bring this amendment for new rules. ಎಂದು ಹೇಳಿದರು. ಆಗ ನಾನು ಹೇಳಿದೆ. ಹಾಕಿರಿ, ನಮ್ಮ ಎದುರಿಗೆ ಇರುವ ಕೆಂಪುಕೋಟೆಯಲ್ಲಿ ೧೦೦೧ನೇ ಕೇಸು ಇದೆ. ಇದು ೧೦೦೨ನೇ ಕೇಸು ಎಂದು ಹೇಳಿದೆ. ಆ ಮೇಲೆ ನಾನು ಕ್ಯಾಬಿನೆಟ್ಟಿನಲ್ಲಿಟ್ಟು ರೂಲ್ಸ್ ಅಮೆಂಡ್ ಮಾಡಿ ಶೇಕಡ ೧೫ರಷ್ಟು ಮಾಡಿದೆವು. ಕೆಲವು ಹುಡುಗರು ಹೋದರು. ನಮ್ಮ ಪಟ್ಟಣವಾಸಿಗಳು ಮತ್ತು White collared people. ಹೋದರು. ಎತ್ತುಗಳನ್ನು ನೇಗಿಲಿಗೆ ಬೀಡಪ್ಪ ಅಂದರೆ ಅವನು ಎತ್ತುಗಳನ್ನು ರಿವರ್ಸ್‌ಗೆ ಇಟ್ಟು ಬಿಟ್ಟ. ನೇಗಿಲನ್ನು ಮುಂದಕ್ಕೆ ಇಟ್ಟುಬಿಟ್ಟ. ರಾಗಿಯನ್ನು ಸಾಸಿಗೆ ಇಟ್ಟರೆ ಇದು ಏನಯ್ಯ ಅಂದರೆ ನನಗೆ ಗೊತ್ತೆ ಇಲ್ಲ ಅಂದ. ನಮ್ಮ ಚೆನ್ನಪಟ್ಟಣದ ಸ್ನೇಹಿತರೊಬ್ಬರು ಬಂದರು ಅವನು ಹನುಮಾನ್ ದೊಡ್ಡಿಯವರು ಅವರು ಕಾಲೇಜಿನಲ್ಲಿ ಡುಮುಕಿ ಹೊಡೆದು ಹೊಡೆದು ಕಡೆಗೆ ಬಂದು ಬಿಟ್ಟರು. ಅವರು ಕೇಳಿದರೂ, ಚಿಕ್ಕೇಗೌಡ ಜಾಡ್ ಹೋತಾ ಹೈ. ರಾಗಿ ಬೆಳೆದು ಮರ ಆಗುತ್ತದಾ ಅಂದರು, ನಾನು ಜಾಲಿ ಮರವಾಗುತ್ತದೆ ಎಂದು ಹೇಳಿದೆ, ಏಕೆಂದರೆ, ಚುಚ್ಚಬೇಕಲ್ಲ. ಈ ರೀತಿ ಪರ್ಸೆಂಟೇಜ್ ಜಾಸ್ತಿ ಮಾಡಬೇಕು. ರೈತರ ಮಕ್ಕಳಿಗೆ ಎಕ್ಸ್‌ಕ್ಲೂಸೀವಾಗಿ percentage ಜಾಸ್ತಿ ಮಾಡಬೇಕು, ಅವರಿಗೆ ಪ್ರಾಕ್ಟಿಕಲ್ ಟೆಸ್ಟ್ ಮಾಡಿ, ಏನಯ್ಯ ಗೂಳಿ ಅಂದರೆ ಏನು ಎಂದರೆ, ಅದಕ್ಕೆ ತೊಕೆನೂ ಇಲ್ಲ, ಕೊಂಬೂ ಇಲ್ಲ ಅನ್ನುತ್ತಾರೆ. ಈ ರೀತಿ ಹೇಳಿದ್ದನ್ನು ನಾನು ಕೇಳಿದ್ದೇನೆ. ಪ್ರಾಕ್ಟಿಕಲ್ ಟೆಸ್ಟ್ ೧೦೦ ಮಾರ್ಕ್ಸ್ ಇರುತ್ತದೆ. ಕಬ್ಬು ಕತ್ತರಿಸು ಅಂದರೆ ತನ್ನ ಕೈಯನ್ನೇ ಕತ್ತರಿಸಿಕೊಂಡು ಬಿಟ್ಟ. ತೂರಯ್ಯ ಎಂದು ಒಂದು ಮರ ಕೊಟ್ಟರೆ, ಏನು ತೂರುವುದು, ತನ್ನ ಮೈ ಮೇಲೆ ರಾಗಿಯನ್ನು ಉಯ್ದುಕೊಂಡು ಬಿಟ್ಟ. ಇದನ್ನೆಲ್ಲಾ ಟೆಸ್ಟ್ ಮಾಡಿದ್ದೇವೆ. ಏನಾದರೂ ಟೆಸ್ಟ್ ಇರಬೇಕು. ಇಲ್ಲದಿದ್ದರೆ ನಮ್ಮ ಕೇಸು ಹೈಕೋರ್ಟಿನಲ್ಲಿ ಹೋಗಿ ಬಿಡುತ್ತದೆ. ಶೇಕಡ ೧೫ ಮಾಡಿರುವುದು ಕ್ವಾಶ್ ಆಗುತ್ತದೆ. ಇವರು ಮೊದಲೇ ಹೇಳಿರುತ್ತಾರೆ. ಇದು ಮಾಡಿದ್ದು ಸರಿಯಲ್ಲ, ನಾನು ಹೈಕೋರ್ಟಿಗೆ ಹೋಗುತ್ತೇನೆ ಅಲ್ಲಿ ಕ್ವಾಶ್ ಆಗುತ್ತದೆ. ಎಂದು ಹೇಳಿರುತ್ತಾರೆ. ಕ್ವಾಶ್ ಆಗುವುದು. ಈ ಟೆಸ್ಟ್‌ನಲ್ಲಿ ರೈತರ ಮಕ್ಕಳು ಸಿಕ್ಕುತ್ತಾರೋ ಇಲ್ಲವೋ. ಆದ್ದರಿಂದ ಇನ್ನು ಹೆಚ್ಚಿಗೆ ಮಾಡಬೇಕು. percentage of seats reserved for rural people, specially, for farmers and persons who want to go back to their farms they must get atleast 15% seats in these colleges. ನಾನು ಶೇಕಡ ೫೦ ರಷ್ಟು ಎಂದು ಹೇಳುತ್ತೇನೆ, ತಪ್ಪಾಗಲಾರದು, ಕೆಲವರು ೨೫ ಎಂದು ಹೇಳುತ್ತಾರೆ. ನಮ್ಮ ಸರ್ಕಾರ ಮಾಡಬೇಕು, ದಿಟ್ಟ ನಿಲುವು ತೆಗೆದುಕೊಳ್ಳಬೇಕು. ಹಾರ್ಟಿಕಲ್ಚರಲ್ ಕಾಲೇಜುಗಳಲ್ಲಿ ಹಾರ್ಟಿಕಲ್ಚರಲ್‌ಗೆ ಸಂಬಂಧಪಟ್ಟದ್ದು, ದ್ರಾಕ್ಷಿ, ಹಣ್ಣು ತರಕಾರಿ ಬೆಳೆಯುವಂತೆ ಮಾಡಬೇಕು. ಇವತ್ತು ಬೆಂಗಳೂರು ಸುತ್ತಲು ಎಷ್ಟು ಬೆಳೆಯುತ್ತಾ, ಲಕ್ಷಗಟ್ಟಲೆ ಟನ್‌ಗಳಷ್ಟು ತರಕಾರಿ ಹಣ್ಣುಗಳನ್ನು ಬೆಳೆಯುತ್ತಾರೆ.

ಒಂದು ಟೊಮೊಟೊ ಹಣ್ಣು ಇಷ್ಟು ದಪ್ಪ, ಎರಡು ಕೈಯಲ್ಲಿ ಮುಟ್ಟಬೇಕು. ಮೊದಲು ಟೊಮಾಟೊ ಹಣ್ಣು ಅಂದರೆ ನಮ್ಮ ಹಳ್ಳಿ ಕಡೆ ಅದನ್ನು ಗೂದೆ ಹಣ್ಣು ಅನ್ನುತ್ತಿದ್ದರು. ಹಿಂದೆ ತಿಪ್ಪೆಗುಂಡಿಯಲ್ಲಿ ಚಿಕ್ಕ ಟೊಮಾಟೊ ಹಣ್ಣುಗಳನ್ನು ಬೆಳೆಯುತ್ತಿದ್ದರು. ಹಿಂದೆ ಇದನ್ನು ಯಾರು ಅಷ್ಟಾಗಿ ಉಪಯೋಗಿಸುತ್ತಿರಲಿಲ್ಲ. ಇವತ್ತು ಎಲ್ಲ ಹಳ್ಳಿಗಳಲ್ಲೂ ಟಮೊಟೊ ಇಲ್ಲದಿದ್ದರೆ ಊಟವೇ ಇಲ್ಲ. ಅದು ಇರಲೇಬೇಕು. ಇಲ್ಲದಿದ್ದರೆ ಆಗುವುದಿಲ್ಲ. ಆದ್ದರಿಂದ ಮಕ್ಕಳಿಗೆ ಹೆಚ್ಚು ಹಣ್ಣು ಕೊಡಬೇಕು. ಆಮೇಲೆ ಕೃಷಿ ಇಲಾಖೆಯ ಅಸಿಸ್ಟೆಂಟ್ಸ್‌ದು ಎರಡು ಕೆಲಸ ಇದೆ. ಒಂದು ಕೃಷಿ ಅಸಿಸ್ಟೆಂಟ್ಸ್‌ದು, ಇನ್ನೊಂದು ಮಂಡಲ ಪಂಚಾಯಿತಿ ಸೆಕ್ರೆಟರೀಸ್ದು. ಅವರು ಮಂಡಲ ಪಂಚಾಯ್ತಿ ಕೆಲಸ ಮಾಡುತ್ತಾರೆಯೇ ಹೊರತು ಅಗ್ರಿಕಲ್ಚರ್ ಅಸಿಸ್ಟೆಂಟ್ ಕೆಲಸ ಮಾಡುವುದಿಲ್ಲ. ಏಕೆಂದರೆ ಅದರಲ್ಲಿ ಅವರಿಗೆ ಹಣ ಸಿಗುತ್ತದೆ. ಅವರ ಜಮೀನು ಇವರಿಗೆ ಬರೆದು ಬಿಡುವುದು, ಇವರ ಜಮೀನನ್ನು ಅವರಿಗೆ ಬರೆದು ಬಿಡುವುದು. ಕಾಣದೇನೆ ಜಮೀನು ವರ್ಗಾವಣೆ ಮಾಡೋದು, ಬೇಕೆಂದವರಿಗೆ ಹಸಿರು ಕಾರ್ಡ್ ಕೊಡುವುದು. ಇಂಥಾ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಅವರನ್ನು ಮಂಡಲ ಪಂಚಾಯ್ತಿ ಕೆಲಸದಿಂದ ತೆಗೆದು ಕೃಷಿ ಇಲಾಖೆಯ ಕೆಲಸ ಮಾಡಿಸಬೇಕು. ವ್ಯವಸಾಯ ಇಲಾಖೆಯಲ್ಲಿ ೧೧ ಸಾವಿರ ಚಿಲ್ಲರೆ ಜನ ಇದ್ದಾರೆ. ಅವರನ್ನು ಆ ಕೆಲಸಕ್ಕೆ ಹಚ್ಚಿ, ಈ ಕಿತಾಪತಿ ಕೆಲಸಕ್ಕೆ ಹಚ್ಚಬೇಡಿ. ಆಮೇಲೆ ವ್ಯಾಪಕ ಬೆಳೆ ಯೋಜನೆ. ಇಡೀ ವ್ಯವಸಾಯ ವೃತ್ತಿಯಲ್ಲಿರುವವರಿಗೆ ಕ್ರಾಪ್ ಇನ್‌ಷ್ಯೂರೆನ್ಸ್ ಸ್ಕೀಮನ್ನು ಜಾರಿಗೆ ತರಲೇಬೇಕು. ಬರೀ ಪೇಪರ್ ಮೇಲೆ ಇಟ್ಟುಕೊಂಡು ಮಾಡಿದರೆ ಆಗುವುದಿಲ್ಲ. ಇವತ್ತು ಬೇರೆ ಜನರಿಗೆ, ನೌಕರರಿಗೆ ಒಬ್ಬ ಸಿನಿಮಾ ನಟನಿಗೆ ಏನಾದರೂ ಒಂದು ಉಗುರು ಕಿತ್ತು ಹೋದರೆ ಅವನಿಗೆ ಲಕ್ಷಗಟ್ಟಲೆ ಕಾಂಪೆನ್‌ಸೇಷನ್ ಕೊಡುತ್ತಾರೆ. ರೈತರಿಗೆ ಮಾತ್ರ ಕಾಂಪೆನ್‌ಸೇಷನ್ ಇಲ್ಲ. ಬೆಳೆ ನಾಶವಾದರೂ ಇಲ್ಲ, ಒಂದು ರೋಗ ಬಂದರೂ ಇಲ್ಲ, ಮಳೆ ಇಲ್ಲವೇ ಹೋದರೂ ಇಲ್ಲ. ಈ ರೀತಿ ದಯವಿಟ್ಟು ಮಾಡಬೇಡಿ. ಕೇಂದ್ರ ಸರ್ಕಾರದಲ್ಲಾಗಲೀ ದಯವಿಟ್ಟು ಇದನ್ನು ಕಡ್ಡಾಯವಾಗಿ ತರಬೇಕು. ಇದು ನನ್ನ ಮುಖ್ಯ ವೃತ್ತಿ. ಇದರ ಬಗ್ಗೆ ಹೇಳದಿದ್ದರೆ ನಾನು ಕರ್ತವ್ಯಲೋಪ ಮಾಡಿದಂತಾಗುತ್ತದೆ. ಅವರಿಗೆ ಅಗ್ರಿಕಲ್ಚರ್ ಇಂಪ್ಲಿಮೆಂಟ್ಸ್ ಸಿಗುವುದಿಲ್ಲ. ಪೆಸ್ಟಿಸೈಡ್ಸ್ ಸಿಗುವುದಿಲ್ಲ, ಸೀಡ್ಸ್ ಸಿಗುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಬರೀ ಹೇಳುತ್ತೇನೆ, ಹೇಳುತ್ತೇನೆ ಎನ್ನುತ್ತಿದ್ದಾರೆ. ಏನು ಸೋಮವಾರದವರೆಗೂ ಹೇಳುತ್ತಲೇ ಇರುತ್ತಾರೋ?

ಶ್ರೀ ಬಿ.ಎಂ. ಇದಿನಬ್ಬ.—ವ್ಯವಸಾಯದ ಬಗ್ಗೆ ಬಹಳ ಒಳ್ಳೆ ರೀತಿಯಲ್ಲಿ ಹೇಳುತ್ತಿದ್ದಾರೆ. ನಮಗೆ ಬಹಳ ಸಂತೋಷವಾಗುತ್ತಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಚೆನ್ನಾಗಿ ಮಾತನಾಡುತ್ತಿದ್ದಾರೆ, ಚೆನ್ನಾಗಿ ಹೇಳುತ್ತಿದ್ದಾರೆ. ಸೋಮವಾರದವರೆವಿಗೂ ಅವರೇ ಹೇಳುತ್ತಾರೋ ಬೇರೆಯವರಿಗೆ ಅವಕಾಶ ಇಲ್ಲದೆ. ಒಳಗಡೆ ಬೇಗ ಮುಗಿಸಿ ಎನ್ನುತ್ತಾರೆ, ಹೊರಗಡೆ ಅದನ್ನು ಹೇಳುವುದಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—ಈಗ ಹೆಲ್ತ್ ಕಾರ್ಡ್ ಕೊಡುವ ಹಾಗೆ ಇಂಟೆನ್ಸೀವ್ ಡ್ರೈವ್ ಮಾಡಿ ಪ್ರತಿಯೊಂದು ರೈತನ ಮಣ್ಣು ಪರೀಕ್ಷೆ ಮಾಡಿ, ಅವನಿಗೆ ಒಂದು ಕಾರ್ಡ್ ಕೊಟ್ಟು ಬಿಡಿ. ಎಷ್ಟು ರಸಗೊಬ್ಬರ ಕೊಡಬೇಕು ಏನು ಕೊರತೆ ಇದೆ ಎನ್ನುವುದು ಗೊತ್ತಾಗುತ್ತದೆ. ಆದ್ದರಿಂದ ಒಂದು ಕಾರ್ಡ್ ಕೊಡಿರಿ. ಇದರಿಂದ ದೇಶದ ದುಡ್ಡು ಉಳಿಯುತ್ತದೆ, ಕೇಂದ್ರಕ್ಕೂ ಕೋಟಿಗಟ್ಟಲೆ ಹಣ ಉಳಿಯುತ್ತದೆ. ಮಣ್ಣಿನ ಪರೀಕ್ಷೆ ಮಾಡಿ ಅವರಿಗೆ ಒಂದು ಕಾರ್ಡ್ ಕೊಡಿ. ರೈತರಿಗೆ ಪಟ್ಟಾ ಕೊಡುವ ರೀತಿಯಲ್ಲಿ ಕಾರ್ಡ್ ಕೊಡಿ. ಎಷ್ಟು ಗೊಬ್ಬರದ ಅವಶ್ಯಕತೆ ಇದೆ, ಎಷ್ಟು ಪೆಸ್ಟಿಸೈಡ್ಸ್ ಅವರಿಗೆ ಬೇಕು, ಹಿಂಗಾರು, ಮುಂಗಾರಿನಲ್ಲಿ ಯಾವ್ಯಾವ ಬೆಳೆ ಬೆಳೆಯುತ್ತಾನೆ ಎಂದು ಕಾರ್ಡ್ ಕೊಡಿ. ನಾನು ಮಂತ್ರಿಯಾಗಿದ್ದಾಗ ಈ ತರಹ ಗೊಬ್ಬರದ ಕಾರ್ಡ್ ಕೊಟ್ಟಿದ್ದೆ. ಗೊಬ್ಬರದ ಸ್ಕೇರ್ಸಿಟಿ ಬಂದು ಎಲ್ಲ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿದರು. ಆಗ ಈ ಕಾರ್ಡ್ ಇಂಟರ್‌ಡ್ಯೂಸ್ ಮಾಡಿದೆ. ಅದು ಹೊರಟು ಹೋಯಿತು. ಈ ರೀತಿ ದಿಟ್ಟ ನಿಲುವನ್ನು ತೆಗೆದುಕೊಂಡು ಶ್ರೀಮಾನ್ ದೇವರಾಜ ಅರಸರ ಕಾಲದಲ್ಲಿ ಮಾಡಿದ್ದು. ಹಿಂದೂಸ್ಥಾನದಲ್ಲಿ ಯಾರೂ ಮಾಡಿರಲಿಲ್ಲ. ಇದನ್ನೆಲ್ಲ ಹೇಳಿದರೆ ಕಾಲ ವ್ಯಯ ಎಂದು ತಿಳಿಯಬಾರದು. ಆಮೇಲೆ ರೈತರ ಹೆಣ್ಣು ಮಕ್ಕಳಿಗೆ ತರಬೇತಿ ಕೊಡಬೇಕು. ಬರೀ ಬೆಂಗಳೂರಿನಲ್ಲಿರುವ ಹೆಣ್ಣು ಮಕ್ಕಳಿಗೆ ಟ್ರೈನಿಂಗ್ ಕೊಟ್ಟರೆ ಸಾಲದು. ನಮ್ಮ ಯೂನಿವರ್ಸಿಟಿಯಲ್ಲಿ ರೈತರಿಗೆ ಫೀಲ್ಡ್ ಡೇ ಮಾಡುತ್ತಾರೆ. ಹೆಣ್ಣುಮಕ್ಕಳಿಗೂ ಮಾಡುತ್ತಾರೆ. ಅದು ಸಾಲದು.

೧-೦೦ ಪಿ.ಎಂ.

ಹಳ್ಳಿಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ನಾವು ಒಂದು ಕಾರ್ಯಕ್ರಮವನ್ನು ಏರ್ಪಡಿಸಿದ್ದೆವು, ನಮ್ಮ ಬಂಗಾರಪ್ಪನವರೂ ಬಂದಿದ್ದರು. ಹಳ್ಳಿಗಳಿಂದ ಒಂದು ಸಾವಿರ ಜನ ಹೆಣ್ಣುಮಕ್ಕಳು ಬಂದಿದ್ದರು. ಅಲ್ಲಿ ಅಷ್ಟೊಂದು ಜನ ಬಂದಿದ್ದುದರಿಂದ ಹೌಸ್‌ಫುಲ್ ಆಗಿ ಕೆಲವರಿಗೆ ಜಾಗ ಸಿಗಲಿಲ್ಲ. ಅವರು ಬಹಳ ವಿಚಾರಗಳನ್ನು ತಿಳಿದುಕೊಳ್ಳುವುದಕ್ಕೆ ಈ ಮಾಡ್ರನ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಏನಿದೆ ಅದನ್ನು ತಿಳಿದುಕೊಳ್ಳುವುದಕ್ಕೆ ಬಹಳ ಕಾತುರರಾಗಿದ್ದಾರೆ. ಹೆಣ್ಣುಮಕ್ಕಳನ್ನು ಸುಮ್ಮನೆ ಮನೆಯಲ್ಲಿ ಕೂರಿಸಿಬಿಟ್ಟು ಸಗಣಿ ಹೊರ್ರಿ, ಗಂಡನಿಗೆ ಊಟ ತೆಗೆದುಕೊಂಡು ಹೋಗಿರಿ, ಹುಲ್ಲು ಹೊರಿರಿ, ತೋಟಕ್ಕೆ ಹೋಗಿ ನೀರನ್ನು ಕಟ್ಟಿ, ನಮಗೆ ಬಹಳ ಕೆಲಸ ಎಂದು ಹೇಳಿದರೆ ಆಗುವುದಿಲ್ಲ. ಅವರಿಗೂ ಇನ್ನೂ ಹೆಚ್ಚಾಗಿ ಕೆಲಸವನ್ನು ಒದಗಿಸಬೇಕು. ಇವತ್ತು ಎಸ್.ಸಿ. ಮತ್ತು ಎಸ್.ಟಿ.ಯವರಿಗೆ ಕೊಡ ತಕ್ಕಂಥ ಸೌಲಭ್ಯ ಏನು ಇದೆ. ಅವರಿಗೆ ಎತ್ತು ಗಾಡಿಗಳನ್ನು ಕೊಡುವುದು, ನೇಗಿಲು ಸ್ಪ್ರೇ ಕೊಡುವುದು ಈ ರೀತಿ ನನ್ನ ಕ್ಷೇತ್ರದಲ್ಲಿ ೬೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಹಂಚಿದ್ದೇನೆ. ಇದು ಸರಿಯಾಗಿ ವಿತರಣೆ ಆಗುವ ಹಾಗೆ ಮಾಡಬೇಕು. ಏಕೆಂದರೆ ಅಲ್ಲಿಯೂ ಕೂಡಾ ರಾಜಕೀಯವನ್ನು ಮಾಡಿಬಿಡುತ್ತಾರೆ. ನಾನೊಂದು ಊರಿಗೆ ಹೋಗಿದ್ದೆ. ನನ್ನ ಕ್ಷೇತ್ರದಲ್ಲಿ ತತ್ತೂರು ಎಂದು ಇದೆ. ಆ ಊರು ಬಹಳ ಚಿಕ್ಕದು. ೩೭ ಕುಟುಂಬಗಳು ಮಾತ್ರ ಇವೆ. ಅಲ್ಲಿ ೨೮ ಜನ ಗ್ರಾಜುಯೇಟ್ಸ್ ಇದ್ದಾರೆ. ಇದನ್ನು ನೋಡಿ ನನಗೆ ಬಹಳ ಹೆಮ್ಮೆಯಾಯಿತು. ೨೮ ಜನ ನಮ್ಮ ಹರಿಜನ-ಗಿರಿಜನರ ಮಕ್ಕಳು ಗ್ರಾಜುಯೇಟ್ಸ್ ಇದ್ದಾರೆ, ಅವರಿಗೆ ಕೆಲಸ ಮಾತ್ರ ಇಲ್ಲ. ಅವರಿಗೆ ಏನಾದರೂ ವ್ಯವಸಾಯದ ಉಪ ಕಸುಬುಗಳನ್ನು ಮಾಡುವುದಕ್ಕೆ ಸೌಲಭ್ಯವನ್ನು ಒದಗಿಸಬೇಕು. ಸಲಕರಣೆಗಳು ಮತ್ತು ಉಪಕರಣಗಳನ್ನು ಸಬ್ಸಿಡಿ ರೂಪದಲ್ಲಿ ಕೊಡುವಂತಾಗಬೇಕು. ಈಗಾಗಲೇ ಸಬ್ಸಿಡಿಯನ್ನು ಕೊಡುತ್ತಿದ್ದಾರೆ. ೪೦ ಪರ್‌ಸೆಂಟ್, ೬೦ ಪರ್‌ಸೆಂಟ್ ರೀತಿಯಲ್ಲಿ ಕೊಡುತ್ತಿದ್ದೀರಿ. ಇದನ್ನು ಇನ್ನೂ ಹೆಚ್ಚಾಗಿ ಮಾಡಬೇಕು ಎಂದು ಹೇಳುತ್ತೇನೆ. ಮತ್ತೆ ಇಲ್ಲಿ ಕರ್ನಾಟಕ ಆಗ್ರೋ ಕಾರ್ನ್ ಪ್ರಾಡಕ್ಟ್ಸ್, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್, ಆಗ್ರೋ ಸೀಡ್ಸ್ ಕಾರ್ಪೊರೇಷನ್, ಆಗ್ರೋ ಫ್ರೂಟ್ಸ್ ಇವೆಲ್ಲವನ್ನೂ ನೋಡಿದ್ದೇನೆ. ಅವುಗಳು ಹೆಗ್ಗಣಗಳ ರೀತಿಯಲ್ಲಿ ಇವೆ. ಅವುಗಳು ಬಂಡಿಕೂಟ್ಸ್‌ಗಳಾಗಿವೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಒಂದು ರಿಗ್ ಕೂಡ ಸರಿಯಾಗಿಲ್ಲ. ಎಲ್ಲಾ ಸ್ಕ್ರಾಪ್ ಆಗಿವೆ. ಅದು ಉಪಯೋಗಕ್ಕೆ ಬಾರದೆ ಹಾಗೆಯೇ ಎಲ್ಲ ಐಡಲ್ ಆಗಿ ಬಿದ್ದಿದೆ. ರೈತರಿಗೆ ಈ ರೀತಿಯಾಗಿ ಮೋಸ ನಡೆದಿದೆ. ಆದ್ದರಿಂದ ಪ್ರೈವೇಟ್‌ನವರಿಗೆ ಏತಕ್ಕೆ ಕೊಡಕೂಡದು ಎಂದು ಕೇಳುತ್ತೇನೆ. ಇವತ್ತು ಒಳ್ಳೆಯ ಫಾಸ್ಟ್ ರಿಗ್‌ಗಳು ಬಂದಿವೆ. ಅವನ್ನೆಲ್ಲಾ ಮಾರಾಟ ಮಾಡುತ್ತಾರೆ. ಅದನ್ನು ಕೆಲವರು ತೆಗೆದುಕೊಂಡು ಕಬ್ಬಿಣ, ಸಿಮೆಂಟ್‌ನ್ನು ತಿನ್ನುವವರು ಇದ್ದಾರೆ. ಎಲ್ಲರ ಹೊಟ್ಟೆಗೆ ಆಹಾರ ಹೋದರೆ ಕೆಲವರು ಕಬ್ಬಿಣವನ್ನೇ ತಿಂದು ಬಿಡುತ್ತಾರೆ. ಕೆಲವರು ಸಿಮೆಂಟ್‌ನ್ನು ನುಂಗಿಬಿಡುತ್ತಾರೆ, ಬುಲ್ಡೋಜರ್‌ಗಳನ್ನೇ ಕೆಲವರು ನುಂಗಿಬಿಟ್ಟಿದ್ದಾರೆ. ಈ ರೀತಿಯಾಗಿವೆ. ಮಂತ್ರಿಗಳು ಇದರಲ್ಲಿ ಎಷ್ಟು ಲಯಬಿಲಿಟೀಸ್ ಇದೆ, ಎಷ್ಟು ಅಸೆಟ್ಸ್ ಇದೆ, ಎಷ್ಟು ವರ್ಕಿಂಗ್ ಕಂಡೀಷನ್ಸ್ ಆಗಿವೆ, ಇವನ್ನೆಲ್ಲ ನೋಡಬೇಕು. ಸುಮ್ಮನೆ ನಾಮಕಾವಾಸ್ತೆಗೆ ಅಧಿಕಾರಿಗಳು ಸಂಬಳವನ್ನು ಪಡೆದುಕೊಳ್ಳುತ್ತಾರೆ. ನಮ್ಮ ಧಾರವಾಡದ ಭಾಷೆ ಯಲ್ಲಿ ಪಗಾರ ಎಂದು ಹೇಳುತ್ತಾರೆ. ಈ ರೀತಿ ಆಗುವುದಕ್ಕೆ ತಾವು ಬಿಡಕೂಡದು. ಆಗ್ರೋ ಕಾರ್ನ್ ಪ್ರಾಡೆಕ್ಟ್ಸ್‌ನಲ್ಲಿ ಫ್ರೂಟ್ಸ್ ಪ್ರೊಸೆಸಿಂಗ್ ಏನು ಇದೆ, ಅಲ್ಲಿ ಒಂದು ದಿನಕ್ಕೆ ಸರಾಸರಿ ಎರಡೂವರೆ-ಮೂರು ಟನ್ ಮಾತ್ರ ಕ್ರಷಿಂಗ್ ಮಾಡುತ್ತಾರೆ. ಅದೇ ಕಿಸಾನ್ ಪ್ರಾಡಕ್ಟ್ಸ್ ಪ್ರೈವೇಟ್‌ನವರದು. ಅವರು ಸೀಸನ್‌ನಲ್ಲಿ ೨೦೦-೩೦೦ ಟನ್ ಮ್ಯಾಂಗೋ ಕ್ರಷ್ ಮಾಡಿ ಕಾನ್‌ಸೆಂಟ್ರೇಟ್ ಮಾಡಿ ಎಕ್ಸ್‌ಪೋರ್ಟ್ ಮಾಡುತ್ತಾರೆ. ಟೊಮೊಟೊವನ್ನು ಕ್ರಷ್ ಮಾಡಿ ಕಾನ್ ಸೆಂಟ್ರೇಟ್ ಮಾಡಿ ಪರದೇಶಕ್ಕೆ ಕಳುಹಿಸುತ್ತಾರೆ. ಆ ಶಕ್ತಿ ನಮ್ಮಲ್ಲಿ ಇಲ್ಲವೇ? ಇವತ್ತು ಪಬ್ಲಿಕ್ ಅಂಡರ್ ಟೇಕಿಂಗ್ಸ್ ಬರೀ ಹೆಸರಿಗೆ ನಾಮಕಾವಾಸ್ತೆಗೆ ಸಂಬಳವನ್ನು ತೆಗೆದುಕೊಳ್ಳುತ್ತಿವೆ. ನಷ್ಟ ಎಷ್ಟಾಗಿದೆ ಎಂದರೆ, ಕಳೆದ ವರ್ಷ ಸುಮಾರು ೫೮-೬೦ ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ಹೇಳುತ್ತಾರೆ, ಅದನ್ನು ಸರಿಯಾಗಿ ಲೆಕ್ಕ ಹಾಕಿ ನೋಡಿದರೆ ಗೊತ್ತಾಗುತ್ತದೆ. ಇದನ್ನು "ಲೆಕ್ಕಲೋ ವುಂದಿ ತಿತ್ತಲೋ ಲೇದು ಬುಕ್ಲೋ ವುಂದಿ ತಿತ್ತಲೋ ಲೇದು" ಎಂದು ಹೇಳುತ್ತಾರೆ, ಅಂದರೆ ಲೆಕ್ಕ ಪುಸ್ತಕದಲ್ಲಿ ಮಾತ್ರ ಇದೆ. ಆದರೆ ಚೀಲದಲ್ಲಿ ನೋಡಿದರೆ ಏನೂ ಇಲ್ಲ ಎಂದು ಹೇಳುವ ಹಾಗೆ ಆಗಿದೆ. ಆದುದರಿಂದ ಇವುಗಳ ಬಗ್ಗೆಯೂ ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ಕೇಳಿ ಕೊಳ್ಳುತ್ತೇನೆ. ಇನ್ನು ಪಶು ಸಂಗೋಪನೆಯ ಬಗ್ಗೆ ಹೇಳುವುದಾದರೆ, ಅದು ನನಗೆ ಬಹಳ ಪ್ರಿಯವಾದಂಥದ್ದು, ಏಕೆಂದರೆ ನಾನು ಹಸುಗಳನ್ನು ಸಾಕಿದ್ದೇನೆ. ಅವುಗಳ ಬಗ್ಗೆ ನಾವೇ ಹೇಳ ಬೇಕು. ಅವು ಏನು ಬರೆದುಕೊಡುತ್ತವೆಯೇ? ಅವುಗಳ ಪರವಾಗಿ ಬಾಷೆ ಅರ್ಜಿಯನ್ನು

ಕೊಡಬೇಕು. ಪಶುಸಂಗೋಪನಾ ಇಲಾಖೆಯಲ್ಲಿ ಕೆಲಸ ಸ್ವಲ್ಪ ಸ್ಥಗಿತವಾಗಿದೆ. ಡೈರಿ ಯೂನಿಯನ್ಸ್ ಆದಮೇಲೆ ನಮ್ಮದೇನು ಕೆಲಸ ಇಲ್ಲ ಎಂದು ತಿಳಿದುಕೊಂಡು ಬಿಟ್ಟಿದ್ದಾರೆ. ಹೆಲ್ತ್ ಇನ್‌ಸೆಮಿನೇಷನ್ ಮತ್ತು ಅವುಗಳ ಮ್ಯಾನೇಜ್‌ಮೆಂಟ್ ಬಹಳ ಕೆಟ್ಟಿದೆ. ಏಕೆಂದರೆ ಅವರೆಲ್ಲರೂ ಯೂನಿಯನ್‌ನಲ್ಲಿ ಸೇರಿಕೊಂಡು ಅಲ್ಲಿ ರಾಜಕೀಯವನ್ನು ಮಾಡುತ್ತಿದ್ದಾರೆ. ಇವತ್ತು ಕ್ರಾಸ್ ಬ್ರೀಡಿಂಗ್‌ಗೆ ಒಂದು ಡೋಸ್ ಫ್ರೋಜನ್ ಸಮನ್‌ಗೆ ೨೭೦ ಡಾಲರ್ ಆಗುತ್ತದೆ ಎಂದು ಹೇಳುತ್ತಾರೆ. ನಾನು ಕೆನಡಾಗೆ ಹೋಗಿದ್ದೆ, ಅಲ್ಲಿ ಒಬ್ಬ ೫೦ ವರ್ಷದ ಹಿಂದೆ ಇದ್ದಂಥ ಒಂದು ಬುಲ್, ಸತ್ತು ಹೋಗಿರುವ ಬುಲ್‌ನ್ನು ಇಟ್ಟಿದ್ದ. ಒಂದು ಡೋಸ್‌ಗೆ ಎಷ್ಟು ಬೆಲೆ ಎಂದು ಕೇಳಿದೆ. ಅದಕ್ಕೆ ೨೭೦ ಡಾಲರ್ ಎಂದು ಹೇಳಿದ. ೨೭೦x೧೮ ರೂಪಾಯಿಯಂತೆ ಲೆಕ್ಕ ಹಾಕಿ ಅಂಥ ಶ್ರೇಷ್ಠವಾದ ತಳಿಗಳ ವೀರ್ಯವನ್ನು ಘನೀಕರಿಸಿದರೆ ಎಷ್ಟು ಅನುಕೂಲವಾಗುತ್ತದೆ ಎಂಬುದನ್ನು ತಿಳಿದುಕೊಂಡಂತಾಗುತ್ತದೆ. ಒಬ್ಬ ಮನುಷ್ಯನ ಕಣ್ಣು ಮತ್ತು ಕಿಡ್ನಿಗಳನ್ನು ಹೇಗೆ ಪ್ರಿಸರ್ವ್ ಮಾಡುತ್ತಾರೋ ಅದೇ ರೀತಿ ಇವುಗಳನ್ನು ಕೂಡಾ ಪ್ರಿಸರ್ವ್ ಮಾಡಬೇಕು. ಈ ರೀತಿ ಹೆಚ್ಚು ಹೆಚ್ಚಾಗಿ ಮಾಡಬೇಕು, ಮತ್ತು ಕೊಟ್ಟಮೇಲೆ ಅದು ಫೇಲ್ಯೂರ್ ಆಗದ ಹಾಗೆ ಮಾಡಬೇಕು. ಮತ್ತೆ ಕ್ರಾಸ್ ಬ್ರೀಡಿಂಗ್ ಪ್ರೋಗ್ರಾಂನ್ನು ಹೆಚ್ಚಾಗಿ ತೆಗೆದುಕೊಳ್ಳಬೇಕು. ನಮ್ಮ ರಾಜ್ಯದಲ್ಲಿ ಹಳೆಯ ಮೈಸೂರಿನಲ್ಲಿ ಹಳ್ಳಿಕಾರ್ ಮತ್ತು ಅಮೃತಮಹಲ್ ಎಂಬ ಎರಡು ತಳಿಗಳಿವೆ. ಹಳ್ಳಿಕಾರ್ ತಳಿ ವೇಗವಾಗಿ ಹೋಗತಕ್ಕದ್ದು. ಅಮೃತ ಮಹಲ್ ಭಾರವನ್ನು ಎಳೆಯತಕ್ಕದ್ದು. ಮೊದಲನೇ ವರ್ಲ್ಡ್ ವಾರ್‌ನಲ್ಲಿ ಅಮೃತ ಮಹಲ್ ಎತ್ತುಗಳು ಫಿರಂಗಿ ಗಾಡಿಗಳನ್ನು ಪ್ಯಾರಿಸ್‌ವರೆಗೂ ಎಳೆದುಕೊಂಡು ಹೋದವಂತೆ. ಇದು ಚರಿತ್ರೆಯಲ್ಲಿದೆ. ಹಳ್ಳಿಕಾರ್ ತಳಿ ಬಹಳ ವೇಗವಾಗಿ ನಡೆಯುತ್ತದೆ. ಅದರ ಕಣ್ಣುಗಳು ನೋಡಿ, ಬಹಳ ಫೆರೋಷಿಯಾಗಿ ನಾಗರಹಾವಿನ ಕಣ್ಣು ಇದ್ದ ಹಾಗೆ ಇರುತ್ತವೆ. ಇವೆರಡೂ ತಳಿಗಳು ಅಭಿವೃದ್ಧಿ ಆಗಬೇಕು. ಹಾಲಿನ ಉತ್ಪಾದನೆಗೆ ಮಿಶ್ರ ತಳಿಗಳ ಅಭಿವೃದ್ಧಿ ಆಗಬೇಕು. ನಮ್ಮ ಬೀದರ್ ಕಡೆ ದಿವಾನಿ ಕ್ಯಾಟಲ್ ಇದೆ, ಅದೂ ಅಭಿವೃದ್ಧಿ ಆಗಬೇಕು. ಬಾಂಬೆ–ಕರ್ನಾಟಕದಲ್ಲಿ ಈ ತಳಿಗಳು ನಶಿಸಿ ಹೋಗಕೂಡದು. ಅಮೇರಿಕಾದಲ್ಲಿ ನಮ್ಮ ಗೂಳಿ ತಳಿಗಳನ್ನು ತೆಗೆದುಕೊಂಡು ಹೋಗಿ ಅಲ್ಲಿ ಕ್ರಾಸ್ ಬ್ರೀಡಿಂಗ್ ಮಾಡಿ ಮಟನ್ ಬ್ರೆಡ್ ಮಾಡಿದ್ದಾರೆ. ನಾನು ಇದನ್ನೆಲ್ಲಾ ಆಳವಾಗಿ ಅಧ್ಯಯನ ಮಾಡಿದ್ದೇನೆ. ಇದನ್ನೆಲ್ಲಾ ಹೇಳುವುದಕ್ಕೆ ನನಗೆ ಒಂದೂವರೆ ಗಂಟೆ ಸಾಲುವುದಿಲ್ಲ. ಹೇಳಬೇಕು ಎಂದರೆ ಇನ್ನೂ ಹೇಳುತ್ತೇನೆ. ನಾನು ವಿಷಯವನ್ನು ತಿಳಿದುಕೊಂಡು ಹೇಳುತ್ತೇನೆ. Apart from Veterinary graduate, I am also a practical agriculturist. ಈ ರೀತಿ ಇರತಕ್ಕದ್ದು, ಇವೆಲ್ಲಾ ಬಹಳ ಸಾಮಾನ್ಯ ವಿಚಾರವಲ್ಲ. ನಮ್ಮ ಸರ್ಕಾರಕ್ಕೆ ಡೇನಿಷ್ ಗವರ್ನಮೆಂಟ್‌ನವರು ಹೆಬ್ಬಾಳಕ್ಕೆ ಎರಡು ಕೋಟಿ ರೂಪಾಯಿಯ ವೀರ್ಯವನ್ನು ಘನೀಕೃತ ಮಾಡತಕ್ಕ ಯಂತ್ರವನ್ನು ಪುಕ್ಕಟೆಯಾಗಿ ಕೊಟ್ಟರು. ಇಂಡಿಯನ್ ವೆಟೆರಿನರಿ ರೀಸರ್ಚ್ ಇನ್‌ಸ್ಟಿಟ್ಯೂಟ್ ಏನಿದೆ ಅದು ಫುಟ್ ಅಂಡ್ ಮೌತ್ ಡಿಸೀಸ್‌ಗೆ ಬೇಕಾದಂತಹ ಲಸಿಕೆ ಕೊಡುತ್ತದೆ. ನಮ್ಮ ಸೀರಮ್ ಇನ್‌ಸ್ಟಿಟ್ಯೂಟ್‌ಗೆ ಇಡೀ ರಾಜ್ಯದಲ್ಲಿ ಬರತಕ್ಕ ರಿಂಡರ್ ಪೆಸ್ಟ್, ಆನ್‌ಥ್ರಾಕ್ ಇತ್ಯಾದಿ ರೋಗಗಳಿಗೆ ಬೇಕಾದಂತಹ ಲಸಿಕೆಯನ್ನು ಪುಕ್ಕಟೆಯಾಗಿ ಕೊಡುತ್ತದೆ. ದಯಮಾಡಿ ಅದನ್ನು ಮುಂದುವರಿಸಿ. ಅದಕ್ಕೆ ಇನ್ನೂ ದುಡ್ಡು ಹಾಕಬಹುದು. ಏಕೆಂದರೆ ಅಧಿಕಾರಿಗಳು Sir, we should not subsidise. We must fix rates ಎಂದು ಹೇಳಬಹುದು. ಹಾಲು ಕರೆಯುವ ಹಸುಗಳಿಗೆ ಫುಟ್ ಅಂಡ್ ಮೌತ್ ಕಾಯಿಲೆ ಬಂದರೆ ಅವು ಚೇತರಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಅದಕ್ಕೆ ಒಂದು ಡೋಸ್‌ಗೆ ಆರು ರೂಪಾಯಿ, ಎಂಟು ರೂಪಾಯಿ ರೇಟ್ ಇಟ್ಟಿದ್ದಾರೆ. ನಿಮಗೆ ಏನು ಕಡಿಮೆ ಗೋಮಾತೆಗೆ ಕೊಟ್ಟರೆ ನಿಮಗೆ ಪುಣ್ಯ ಬರುತ್ತದೆ. ಪಾಪ ಬರುವುದಿಲ್ಲ, ಪುಣ್ಯ ಬರುತ್ತದೆ. ಏಕೆಂದರೆ ಹಸು ಹಾಲು ಕೊಡುತ್ತವೆ. ಅದು ಅಮೃತ, ಅದು ಎಲ್ಲರಿಗೂ ಬೇಕಾದ್ದು. ಏನೋ ಹೆಂಡ, ಸಾರಾಯಿ, ರಾಯಲ್ ಸರ್ವಿಸ್ ಇದೆಲ್ಲಾ ಬೇಕಾಗಿಲ್ಲ, ಅದರಿಂದ ಆರೋಗ್ಯ ಕೆಟ್ಟು ಹೋಗುತ್ತದೆ. ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಅವರಿಗೆ ಇದರ ಅನುಭವ ಇಲ್ಲಿ ಬಹಳ ಒಳ್ಳೆಯದು. ಅದಕ್ಕೆ ಅವರು ಇಷ್ಟು ಆರೋಗ್ಯವಾಗಿ ಇರುವುದು...

ಶ್ರೀ ವಾಟಾಳ್ ನಾಗರಾಜ್.—ನಿಮ್ಮಲ್ಲಿ ಬಹಳ ಜನಕ್ಕೆ ಅನುಭವ ಇದೆಯಲ್ಲಾ....

ಶ್ರೀ ಎಸ್. ಚಿಕ್ಕೇಗೌಡ.—ಇದ್ದರೆ ಇರಲಿ. ಅದೂ ಒಂದೂ ಚಟ ಎಂದು ನೀವು ಮೊದಲು ಹೇಳಿದಿರಲ್ಲ, ಅದೇ ನೀವು ಸುಮ್ಮನೆ ಇರಿ. ಆ ರೀತಿ ಇವತ್ತು ನಾವು ಮಾಡಬೇಕು. ಆಮೇಲೆ ಪಶುಪಾಲನೆ ನಮ್ಮಲ್ಲಿ ಅಮೃತ್ ಮಹಲ್ ಕಾವಲು ಇದೆ. ಅಜ್ಜಂಪುರದಲ್ಲಿ ಎಲ್ಲಾ ಹಾಳು ಮಾಡಿ, ಅದನ್ನು ಒತ್ತುವರಿ ಮಾಡಿ ಎಲ್ಲಾ ಬಲಿಷ್ಟರು ಹಿಡಿದುಕೊಂಡಿದ್ದಾರೆ. ಹಸುಗಳಿಗೆ, ದನಗಳಿಗೆ ಮೇಯುವುದಕ್ಕೆ ಜಾಗ ಇಲ್ಲವೇ ಇಲ್ಲ. ಅಲ್ಲಿ ನೂರಾರು

ತಳಿಗಳು ಇವೆ. ಅದರ ಅಂಕಿ ಸಂಖ್ಯೆಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಬಸವಲಿಂಗಪ್ಪನವರಿಗೆ ಗೊತ್ತಿದೆ. ಅವುಗಳನ್ನು ಹಾಕಿ. ನಮ್ಮ ಹಳ್ಳಿಕಾರ್ ತಳಿ. It is the famous breed in the world. ತಾವು ಆ ಜಾಗಕ್ಕೆ ವಿಸಿಟ್ ಮಾಡಿ, ಅಲ್ಲಿ ಒತ್ತುವರಿ ಆಗಿರುವ ವರನ್ನು ನೀವು ಹೊರಗಡೆ ಹಾಕಿ. ಏಕೆಂದರೆ, ಅಕ್ರಮವಾದ ಜಮೀನನ್ನು ಸಕ್ರಮ ಮಾಡಿದರೆ ಎಲ್ಲಾ ಹಿಡಿದುಕೊಂಡು ಬಿಡುತ್ತಾರೆ, ೯೪ರ ಸೆಕ್ಷನ್ ಅಮೆಂಡ್ ಮಾಡಿದರೆ ಅದರ ಕೆಳಗೆ ನುಗ್ಗಿ ಬಿಡುತ್ತಾರೆ, ಚಾಪೆ ಕೆಳಗೆ ನುಗ್ಗುತ್ತಾರೆ. ಬಲಿಷ್ಠರೇ ಅದನ್ನು ತೆಗೆದುಕೊಳ್ಳುವುದು. ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಿ, ಏಕೆಂದರೆ, ನಾನು ಮಂತ್ರಿಯಾಗಿ ಇದನ್ನೆಲ್ಲಾ ನೋಡಿದ್ದೇನೆ. ಅಲ್ಲಿ ಆಕ್ಷನ್‌ನಲ್ಲಿ ಎಂತಹ ಬೆಲೆ ಸಿಗುತ್ತದೆ. ಈಗ ಹೆಸರಘಟ್ಟದಲ್ಲಿ ಫಾರಂ ಇದೆ, ಡೆನಿಷ್ ಫಾರಂ ಇದೆ, ಇದನ್ನೆಲ್ಲಾ ಅವರು ಪುಕ್ಕಟ್ಟೆಯಾಗಿ ಕೊಟ್ಟಿದ್ದು. ನಮಗೆ ಅವರು ಎರಡು ಪ್ಲೈನ್ ಲೋಡ್ ಹಸು ಗಳನ್ನು ಪುಕ್ಕಟೆಯಾಗಿ ಕೊಟ್ಟರು. ಟಿ.ಬಿ. ಅಟ್ಯಾಕ್ ಆಗಿ ಹೋಯಿತು ನಾವು ಅವುಗಳನ್ನು ಸಾಯಿಸಿ ದ್ದೇವೆ ಅವರು ಹೇಳಿದರು, ಅದನ್ನು ಸಾಯಿಸಲೇ ಬೇಕಾಯಿತು. ಇಲ್ಲದಿದ್ದರೆ ರೋಗಸ್ಪ್ರೆಡ್ ಆಗುತ್ತಿತ್ತು, ಡೆನಿಷ್‌ನಿಂದ ಪ್ಲೈನ್‌ನಲ್ಲಿ ಬಂದ ಹಸುಗಳನ್ನು ಬೆಂಗಳೂರು ಏರ್‌ಪೋರ್ಟ್‌ನಲ್ಲಿ ಇಳಿಸಲಾಯಿತು. It is the first of its kind in the history of this country. ಆದ್ದರಿಂದ ಇವುಗಳನ್ನು ನಾವು ಹೇಗೆ ಪೋಷಣೆ ಮಾಡಬೇಕು ? ಫೀಡಿಂಗ್, ಬ್ರೀಡಿಂಗ್ ಅಂಡ್ ಮ್ಯಾನೇಜ್ ಮೆಂಟ್ ಇದು ಬಹಳ ಮುಖ್ಯವಾದುದು. ಕೆ.ಎಂ.ಎಫ್ ಯೂನಿಯನ್‌ಗಳು ಇವೆಯೆಲ್ಲ ಅಲ್ಲಿ ರಾಜಕೀಯ ಮಾಡುವುದಕ್ಕೆ ದಯವಿಟ್ಟು ಬಿಡಬೇಡಿ. ಹಸುಗಳ ಜೊತೆ ರಾಜಕೀಯ ಬೇಡ. ನಾವು ಬೇಕಾದರೆ ವಾಟಾಳ್ ನಾಗರಾಜ್‌ರು, ಚಂದ್ರೇಗೌಡರು ಎಲ್ಲಾ ಕೂಡಿ ರಾಜಕೀಯ ಮಾಡೋಣ, ನಾವು ಇಲ್ಲಿ ಮಾತನಾಡೋಣ ಹೊರಗಡೆ ಹೋಗೋಣ. ಆದರೆ ದಯವಿಟ್ಟು ವ್ಯವಸಾಯ, ಪಶುಸಂಗೋಪನೆ ಮತ್ತು ಹಾಲಿನ ಅಭಿವೃದ್ಧಿ ಮಾಡುವುದರಲ್ಲಿ ರಾಜಕೀಯ ಬೇಡ. ಅದಕ್ಕೆ ಸಾಕಷ್ಟು ಅನುಕೂಲ ಮಾಡಿ, ದೇವರು ನಿಮಗೆ ಒಳ್ಳೆಯದು ಮಾಡುತ್ತಾನೆ. ಏಕೆಂದರೆ, ಹಸು ತಾಯಿ ಸಮಾನ. ಅದು ಎಂದಿಗೂ ಮೋಸ ಮಾಡುವುದಿಲ್ಲ. ನಾನು ಆಗಲೆ ಹೇಳಿದೆ, ಅದರಲ್ಲಿ ಸ್ಟ್ರೈಕ್ ಇಲ್ಲ, ಲಾಕೌಟ್ ಇಲ್ಲ, ಲೇಬರ್ ಟ್ರಿಬ್ಯೂನಲ್‌ನಲ್ಲಿ ಡಿಸ್ಪೂಟ್ ಇಲ್ಲ, ಎಂಥಾದ್ದೂ ಇಲ್ಲ, ಮತ್ತು ಒಂದು ದಿನವಾದರೂ ಹಾಲಿಡೇ ಇಲ್ಲ. ನಮಗೆ ಹಾಲಿಡೆ ಇದೆ. ನಮ್ಮ ಮಂತ್ರಿಗಳು ನಿನ್ನೆ ೧೧೦ ದಿನ ಹಾಲಿಡೆ ಇದೆ ಎಂದು ಹೇಳಿದರು ಎಷ್ಟೊಂದು ಹಾಲಿಡೇಗಳು ಇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಅದಕ್ಕೆ ತಾವು ಹೇಳಿದ್ದನ್ನು ಒಪ್ಪುತ್ತೇವೆ. ರೈತರ ಸಾಲ ವನ್ನು ಸಂಪೂರ್ಣ ಮನ್ನಾ ಮಾಡುವುದಕ್ಕೆ ಅನುಮತಿ ಕೊಡಿ ಎಂದು ಹೇಳಿ. ೧೦ ಸಾವಿರ ರೂಪಾಯಿ ಗಳ ಪೂರ್ಣ ಸಾಲ ಮನ್ನಾ ಮಾಡಿ ಎಂದು ಹೇಳಿದೆ. ಕೇಂದ್ರ ಸರ್ಕಾರ ಎಷ್ಟು ಕೊಡುತ್ತಾರೊ ಅಷ್ಟು ತೆಗೆದುಕೊಳ್ಳಿ, ಹೆಚ್ಚಿನದು ರಾಜ್ಯ ಸರ್ಕಾರ ಹಾಕಿ ಸಾಲ ಮನ್ನಾ ಮಾಡಿದರೆ ಸ್ವಲ್ಪ ಮಟ್ಟಿಗಾದರೂ ರೈತರಿಗೆ ಅನುಕೂಲವಾಗುತ್ತದೆ.

ಶ್ರೀ ಆರ್. ದಯಾನಂದರಾವ್.—ಸಾಲ ಸಾಲ ಎಂದು ಹೇಳುತ್ತೀರಲ್ಲ, ಅದರಲ್ಲಿರುವ ನೀತಿ ನೋಡಿದರೆ ಒಬ್ಬರಿಗೂ ಸಾಲ ಮನ್ನಾ ಸಿಗುವುದಿಲ್ಲ, ಇಡೀ ರಾಜ್ಯದಲ್ಲಿ ಒಂದು ೧೦ ಜನರಿಗೂ ಸಾಲ ಮನ್ನಾ ಮಾಡುವುದಕ್ಕೆ ಆಗುವುದಿಲ್ಲ. ಆ ನೀತಿಯನ್ನು ದಯವಿಟ್ಟು ತಾವು ಓದಿ. ಬರೀ ಇದೇ ಹೇಳಿಕೊಂಡು ಗೆದ್ದು ಬರುತ್ತಾ ಇದ್ದೀರಿ.

ಶ್ರೀ ಎನ್. ಚಿಕ್ಕೇಗೌಡ.—ಪಶುಪಾಲನೆಯಲ್ಲಿ ಮತ್ತೊಂದು ವಿಚಾರವಿದೆ. ಇದು ರೋಗ ರುಜಿನಗಳನ್ನು ತಡೆಗಟ್ಟುವುದು. ಇಂಟರ್‌ಸ್ಟೇಟ್ ಬಾರ್ಡರ್ಸ್‌ನಲ್ಲಿ ಬಹಳ ಸ್ಟ್ರಿಕ್ಟಾಗಿ ತಡೆ ಮಾಡಬೇಕು ಎಲ್ಲಿ ಚೆಕ್‌ಪೋಸ್ಟ್ ಇದೆ, ಅಲ್ಲಿ ತಡೆ ಮಾಡಬೇಕು, ನಮ್ಮ ರಾಜ್ಯದಲ್ಲಿ ಸಾಧ್ಯವಾದ ಮಟ್ಟಿಗೆ ರೆಂಡರ್ ಪೆಸ್ಟ್ ಮುಂತಾದ ಡಿಸೀಸ್‌ಗೆ ಲಸಿಕೆ ಕೊಡಬೇಕು. ಪ್ರಿವೆನ್‌ಷನ್ ಈಸ್ ಬೆಟರ್ ದ್ಯಾನ್ ಕ್ಯೂರ್ ಎಂದ ಹಾಗೆ ಇದನ್ನು ಹೆಚ್ಚಿಗೆ ಮಾಡಬೇಕು. ಮತ್ತೆ ಹಾಲು ಉತ್ಪಾದಕರ ಸಹಕಾರ ಸಂಘ ಗಳಿವೆ, ಯೂನಿಯನ್‌ಗಳಿವೆ, ಮತ್ತು ಕೆ.ಎಂ.ಎಫ್. ಇದೆ. ಇದರಲ್ಲಿ ಹೆಚ್ಚಿಗೆ ಇರತಕ್ಕಂಥ ಸಿಬ್ಬಂದಿಯನ್ನು ತಕ್ಷಣ ತೆಗೆಯಬೇಕು. ಅವರಿಗೆ ನೋಟೀಸ್ ಕೊಡಬೇಕು. ನಮ್ಮ ಹಳ್ಳಿ ಕಡೆ ಹೇಳುವ ಹಾಗೆ ಅವರಿಗೆ ಎಲೆ ಅಡಿಕೆ ಕೊಟ್ಟು ಅರಿಸಿನ ಕುಂಕುಮ ಕೊಟ್ಟು ಮನೆಗೆ ಕಳಿಸಬೇಕು, ಹಾಗೆ ಮಾಡಬೇಕು. ಇಲ್ಲದೇ ಹೋದರೆ ಇದು ಸುಮ್ಮನೆ ವೈಟ್ ಎಲಿಫೆಂಟ್ ಆಗುತ್ತದೆ. ಅವರಿಗೆ ಸುಮ್ಮನೆ ದುಡ್ಡು ಖರ್ಚಾಗುತ್ತದೆ. ಇದರ ಖರ್ಚು ಕಡಿಮೆಯಾದರೆ ಹಾಲು ಉತ್ಪಾದಕರಿಗೆ ಲಾಭ ಜಾಸ್ತಿಯಾಗಿ, ಗ್ರಾಹಕರಿಗೆ ಬೆಲೆ ಕಡಿಮೆಯಾಗು ತ್ತದೆ. ಆದ್ದರಿಂದ ಇದನ್ನು ಎಕಾನಮೈಸ್ ಮಾಡಬೇಕು. ಇದರಲ್ಲಿರುವ ಮುಖ್ಯಸ್ಥರು ದೊಡ್ಡ ದೊಡ್ಡ ಭವ್ಯ ಬಂಗಲೆಯಲ್ಲಿ ಕುಳಿತುಕೊಂಡಿರುತ್ತಾರೆ, ಅವರಿಗೆ ಒಂದು ಕಾರು, ಇವರಿಗೆ ಒಂದು

ಕಾರು ಇದೆ, ಅದೂ ಏರ್‌ಕಂಡೀಷನ್ ಕಾರು. ಏನು ದರ್ಬಾರು ಸ್ವಾಮಿ ಇವರದು. ಏರ್‌ಕಂಡೀಷನ್ ಕಾರು ಕೆ.ಎಂ.ಎಫ್. ನ ಎಂ.ಡಿ. ಗೆ, ಛೇರ್ಮನ್‌ಗೆ ಇದೆ. ಚೀಫ್ ಮಿನಿಸ್ಟರಿಗೆ ಅಂತಹ ಏರ್‌ಕಂಡೀಷನ್ ಕಾರ್ ಇಲ್ಲ. ಇವರಿಗೆ ಬಡಕಲು ಅಂಬಾಸಿಡರ್ ಕಾರು ಇದೆ, ಇದರಲ್ಲಿ ಹೋಗುತ್ತಾರೆ. ಹಿಂದೆ ಇಂಪೋರ್ಟೆಡ್ ಕಾರುಗಳಿದ್ದುವು ಸದ್ಯ ಅವು ಹೋದುವು. ಆದರಲ್ಲಿ ಡಿ.ಜಿ.ಪಿ. ಕಮಿಷನರ್ ಬರುತ್ತಿದ್ದರು. ಅದನ್ನು ನೋಡಿದರೆ ನನಗೆ ಮೈಯೆಲ್ಲಾ ಬೆಂಕಿ ಹತ್ತಿದ ಆಗುತ್ತಿತ್ತು. ಜನತಾ ಪ್ರತಿನಿಧಿಗಳು, ನಮ್ಮ ಮುಖ್ಯಮಂತ್ರಿಗಳಿಗೆ ಇಲ್ಲ ಅಂತಹ ಕಾರುಗಳು ಅವರಿಗೆ ಇವೆ. ನಾವೇನು ಅವರ ಹಾಗೆ ೨೫ ವರ್ಷ ಇರುವುದಿಲ್ಲ. ಇವತ್ತು ಬಹುಮತ ಬಿದ್ದು ಹೋದರೆ ನಮ್ಮ ಪಕ್ಷ ಹೋಗುತ್ತದೆ, ಇನ್ನೊಂದು ಆಡಳಿತಕ್ಕೆ ಪಕ್ಷ ಬರುತ್ತದೆ. ಏನಾದರೂ ಬಹುಮತ ಕಡಿಮೆಯಾದರೆ, ಪಕ್ಷದಲ್ಲಿ ಸಂಖ್ಯಾಬಲ ಕಡಿಮೆಯಾದರೆ ರಾಷ್ಟ್ರಾಧ್ಯಕ್ಷರು ಡಿಸ್‌ಮಿಸ್ ಮಾಡುತ್ತಾರೆ, ಡಿಸ್‌ಮಿಸ್ ಮಾಡಿ ಮನೆಗೆ ಕಳಿಸುತ್ತಾರೆ. ೫ ವರ್ಷಕ್ಕೆ ಜನ ನಮಗೆ ಓಟ್ ಕೊಟ್ಟಿದ್ದಾರೆ, ೫ ವರ್ಷ ಇರಲಿ ಎಂದು ಮತ ಕೊಟ್ಟಿದ್ದಾರೆ. ಆದರೆ ಬಹುಮತ ಹೋದರೆ ಒಂದು ವರ್ಷಕ್ಕೆ, ೨ ವರ್ಷಕ್ಕೆ ನಮಗೆ ಡಿಸ್ಮಿಸ್ ಆಗುತ್ತದೆ. ಆದರೆ ಈ ಅಧಿಕಾರಿಗಳಿಗೆ ಸಿಸಿಎ ರೂಲ್ಸ್‌ನಲ್ಲಿ ಸಸ್ಪೆಂಡ್ ಮಾಡಬೇಕು ಎಂದು ಇದೆ, ಸಸ್ಪೆನ್‌ಷನ್ ಈಸ್ ನಾಟ್ ಎ ಪನಿಷ್‌ಮೆಂಟ್. ಸಸ್ಪೆಂಡ್ ಆದಾಗಲೂ ಅರ್ಧ ಸಂಬಳ ಕೊಡುತ್ತೇವೆ. ಆದರೆ ಸಸ್ಪೆನ್‌ಷನ್ ಏನಾದರೂ ರಿವೋಕಾಗಿ ಬಿಟ್ಟು ಅದು ರುಜುವಾತು ಆಗದೇ ಹೋದರೆ ಅದನ್ನು ರೀಎಂಬರ್ಸ್ ಮಾಡಬೇಕು. ಅದಕ್ಕೆ ಕರ್ನಾಟಕ ಅಡ್ಮಿನಿಸ್ಟ್ರೇಟೀವ್ ಟ್ರಿಬ್ಯುನಲ್ ಇದೆ. ನಮಗೆ ಎಲ್ಲಿದೆ ಟ್ರಿಬ್ಯುನಲ್.

ಶ್ರೀ ಆರ್. ದಯಾನಂದರಾವ್.—ಏರ್ ಕಂಡೀಷನ್ ಕಾರು ಇವತ್ತೂ ಇದೆ.

ಶ್ರೀ ಎಸ್. ಚಿಕ್ಕೇಗೌಡ.—ಮಂತ್ರಿಗಳು ಜವಾಬ್ದಾರಿ ಸ್ಥಾನದಲ್ಲಿದ್ದಾರೆ. ನಾನೇನು ಮಾಡಿದರೂ ಹೇಳುತ್ತಾ ಇದ್ದರು. ಜಿಲ್ಲಾ ಪರಿಷತ್ತಿನ ಅಧ್ಯಕ್ಷರು, ಮಂಡಲ ಪಂಚಾಯಿತಿಯವರು ನಿದ್ದೆ ಹೋಗುತ್ತಾ ಇರಲಿಲ್ಲ, ಏಕೆಂದರೆ ದಿನಾ ಯೋಚನೆ ಆಗಿಬಿಟ್ಟಿತು. ಆದ್ದರಿಂದ ನಾನು ಅದನ್ನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್.—ನೌಕರಶಾಹಿ ಪ್ರಜಾಪ್ರಭುತ್ವಕ್ಕೆ ಕೊನೆ ಯಾವಾಗ ? ಇದಕ್ಕೆ ಸಲಹೆ ಸೂಚನೆ ಕೊಡಿ. ತಾವು ಪಕ್ಷಾತೀತವಾಗಿ ಸಲಹೆ ಮಾಡುತ್ತೀರಿ, ಹಿರಿಯರು, ಅನುಭವಸ್ಥರಿದ್ದೀರಿ. ನೌಕರಶಾಹಿ ಪ್ರಜಾಪ್ರಭುತ್ವ ಎಂದು ಹೇಳಿದ್ದೀರಲ್ಲ, ಇದಕ್ಕೆ ಕೊನೆ ಹೇಳಿ.

ಶ್ರೀ ಎಸ್. ಚಿಕ್ಕೇಗೌಡ.—ನಾನು ಈಲ್ಡ್ ಆಗುವುದಿಲ್ಲ. ಕಾಲ ವೇಗವಾಗಿ ಹೋಗುತ್ತಿದೆ.

ಶ್ರೀ ಪಾಟಾಳ್ ನಾಗರಾಜ್.—ಅವರು ಈಗಾಗಲೇ ೧ ಗಂಟೆ ೯೫ ನಿಮಿಷ ಮಾತನಾಡಿದ್ದಾರೆ.

ಶ್ರೀ ಎಸ್. ಚಿಕ್ಕೇಗೌಡ.—ನನಗೆ ಏನೋ ಒಂದು ರೀತಿ ಕನ್‌ಫ್ಯೂಷನ್ ಆಗಿಬಿಟ್ಟಿದೆ ಎಂದು ತಿಳಿದುಕೊಳ್ಳಬೇಡಿ. ನಾವು ಹಳಗಿದ ವ್ಯವಸಾಯಗಾರರ ಕುಟುಂಬ ಸದಸ್ಯರು. ನಮ್ಮ ಕನ್ನಮಂಗಲದ ಹತ್ತಿರ ಒಂದು ಎಲೈಟ್ ಕೋಕನಟ್ ಫಾರಂಗೆ ೨೦೦ ಎಕರೆಯನ್ನು ನಾನು ಮಂತ್ರಿಯಾಗಿದ್ದಾಗ ಕೊಟ್ಟೆ. ಅದು ನನ್ನ ಕ್ಷೇತ್ರ.

ಶ್ರೀ ಡಿ. ಬಿ. ಚಂದ್ರೇಗೌಡ.—ಒಂದೇ ಒಂದು ನಿಮಿಷ. ನೀವು ಇಯರ್ ಫೋನ್‌ನ್ನು ಹಿಡಿದುಕೊಂಡು ನಿಂತು ಬಿಟ್ಟಿದ್ದೀರಿ. ನಮಗೆ ಸಾಕಾಗಿದೆ, ನಾವು ಮಾತನಾಡುವುದಿಲ್ಲ. ಆದರೆ ನೀವು ಮಾತನಾಡುವುದು ನಿಮಗೆ ಕೇಳುವುದಿಲ್ಲವಲ್ಲ.

ಶ್ರೀ ಆರ್. ದಯಾನಂದ ರಾವ್.—ನೀವು ಮಧ್ಯೆ ಮಧ್ಯೆ ಗಲಾಟೆ ಮಾಡುತ್ತೀರಿ, ಅದನ್ನು ಕೇಳಿಸಿಕೊಳ್ಳಲಿಕ್ಕೆ ಅವರು ಇಟ್ಟುಕೊಂಡಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಅವರು ಮಾತನಾಡಿದ್ದೇ ಅವರಿಗೆ ಕೇಳುವುದಿಲ್ಲವೇನು. ನನ್ನ ಪ್ರಶ್ನೆ ಏನೆಂದರೆ, ಲಂಚ್ ಅವರ್ ಇಲ್ಲ ಎಂದು ಹೇಳಿದ್ದೀರಿ. ಎಷ್ಟು ಸಮಯ ಎಂದು ಗೊತ್ತಾದರೆ, ಅಷ್ಟರೊಳಗೆ ನಾವು ಲಂಚ್ ಆದರೂ ಮಾಡಿಕೊಂಡು ಬರಬಹುದಲ್ಲ.

ಶ್ರೀ ಎಸ್. ಚಿಕ್ಕೇಗೌಡ.—ನಾನು ಮುಗಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.—ನಾನು ಮುಗಿಸಿ ಅಂತ ಹೇಳಲಿಲ್ಲ. ನಾವು ವಾಪಸ್ಸು ಬರುವವರಿಗೆ ನೀವು ಸಭೆಯಲ್ಲಿದ್ದರೆ ಸಾಕು.

ಶ್ರೀ ವಾಟಾಳ್ ನಾಗರಾಜ್.—ಉಪವಾಸ ಮಾಡಿಕೊಂಡು ಸಭೆಯಲ್ಲಿ ಕುಳಿತುಕೊಳ್ಳುವುದರಲ್ಲಿ ನನಗೆ ನಂಬಿಕೆ ಇಲ್ಲ. ತಾವಾದರೂ ವ್ಯವಸ್ಥೆ ಮಾಡಿಲ್ಲ.

ಶ್ರೀ ಆರ್.ಎನ್. ನಾಯಕ್.—ಪ್ರಾಮುಖ್ಯವಾದ ಬೇಡಿಕೆ ವಿಚಾರ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಸ್ವಾಮಿ, ನೀವು ಹುಟ್ಟುತ್ತಾ ನಾಯಕರು ಸಾಯುತ್ತಾ ನಾಯಕರು ನಾವೆಲ್ಲೋ ಆಕಸ್ಮಾತ್ ಆಗಿ ಒಂದು ಸಲ ನಾಯಕರಾಗಿರುತ್ತೇವೆ. ನಮಗೆ ಹೊಟ್ಟೆ ಇದೆ, ನಿಮಗಿಲ್ಲ, ನಾನೇನು ಮಾಡಲಿ.

ಶ್ರೀ ಎನ್. ಚಿಕ್ಕೇಗೌಡ.—ನನ್ನ ಕ್ಷೇತ್ರದಲ್ಲಿ ಹಾರ್ಟಿಕಲ್ಚರ್ ಫಾರಂ ಇದೆ. ಸಾಕಷ್ಟು ಜಮೀನು ಕೊಟ್ಟಿದ್ದೇವೆ. ಅಲ್ಲಿ ಗೌರ್ವಮೆಂಟ್ ಆಫ್ ಇಂಡಿಯಾದವರು ಎಸ್.ಸಿ. ಮತ್ತು ಎಸ್.ಟಿ. ಸಂಸ್ಥೆಗೆ ಬೀಜಗಳನ್ನು ಉತ್ಪಾದನೆ ಮಾಡಿ, ಹೊರದೇಶಕ್ಕೆ ಕಳುಹಿಸತಕ್ಕ ವ್ಯವಸ್ಥೆ ಮಾಡಿದ್ದಾರೆ. ಅದು ಇವತ್ತಿಗೂ ಜಾರಿಗೆ ಬಂದಿಲ್ಲ. ಅದಕ್ಕೆ ರಾಮಕೃಷ್ಣ ಹೆಗಡೆಯವರೇ ಅಸ್ತಿಭಾರ ಶಿಲೆ ಹಾಕಿದ್ದರು. ಸುಮಾರು ೧೫೦ ಎಕರೆ ಜಮೀನು ಇದೆ. ಆ ಜಮೀನನ್ನು ಹಾರ್ಟಿಕಲ್ಚರ್ ಸೊಸೈಟಿಗಾದರೂ ಕೊಡಿ, ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿಗಾದರೂ ಕೊಡಿ. ಬೀಜ ಉತ್ಪಾದನೆ ಮಾಡಿ. ನರಕಾರಿ ಬೀಜ, ಒಳ್ಳೆಯ ತೆಂಗಿನ ಕಾಯಿ ಹಣ್ಣು ಕೊಡತಕ್ಕ ಬೀಜಗಳು, ಫಲ ಬಿಡತಕ್ಕ ಮಾವಿನ ಗಿಡಗಳನ್ನು ಮತ್ತು ಇತರ ಹಣ್ಣುಗಳನ್ನು ಬಿಡತಕ್ಕ ಗಿಡಗಳನ್ನು ಬೆಳೆದು ರೈತರಿಗೆ ಕೊಡಿ. ನಿಮ್ಮ ಕೆ.ಆರ್.ಎಸ್. ಫಾರಂ ಮತ್ತು ಲಾಲ್‌ಬಾಗ್ ನೋಡಿದ್ದೇವೆ. ಅಲ್ಲಿ ರೈತರಿಗೆ ಈ ರೀತಿ ಮಾಡಿ ಕೊಡುವುದಕ್ಕಾಗುವುದಿಲ್ಲ. ಜಮೀನು ಸುಮ್ಮನೆ ಇಟ್ಟುಕೊಂಡಿದ್ದಾರೆ. ಅದನ್ನು ಮಾಡಿ ಎಂದು ಹೇಳುತ್ತೇನೆ,

ಶ್ರೀ ಬಿ.ಹೆಚ್. ಬನ್ನಿಕೋಡ್.—ಎಲ್ಲಾ ವಿಚಾರ ಹೇಳಿದ್ದೀರಿ. ಕೊನೆಯಲ್ಲಿ ಸೌತೇಕಾಯಿ. ಹೀರೆಕಾಯಿ ಬಗ್ಗೆ ಹೇಳಿ.

ಶ್ರೀ ಎನ್. ಚಿಕ್ಕೇಗೌಡ.—ಸೌತೇಕಾಯಿ ಬಗ್ಗೆ ಹೇಳಿದ್ದೇನೆ. ನಂಜನಗೂಡಿನಲ್ಲಿ ರಸಬಾಳೆ ವಿಲಕ್ಕಿ ಬಾಳೆ ಬೆಳೆಯುತ್ತಾರೆ. ಈಗ ರಸಬಾಳೆ ನಶಿಸಿ ಹೋಗುತ್ತಿದೆ. ಇದೆಲ್ಲಾ ಉಳಿಯಬೇಕು. ದೇವನಹಳ್ಳಿ ಕಡೆ ಪುಟ್ಟು ಬಾಳೆ ಬೆಳೆಯುತ್ತಾರೆ, ಅದನ್ನು ತಿಂದು ನೋಡಿ, ಎಷ್ಟು ರುಚಿಯಾಗಿರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ನೀವು ಇಲ್ಲಿಗೆ ತರಿಸಿಬಿಡಿ.

ಶ್ರೀ ಎನ್. ಚಿಕ್ಕೇಗೌಡ.—ತರಿಸೋಣ. ಇನ್ನು ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟಂತೆ, ಕುಡಿಯುವ ನೀರು ಮತ್ತು ಗ್ರಾಮ ನೈರ್ಮಲ್ಯದ ಬಗ್ಗೆ ಮಾತನಾಡುತ್ತೇನೆ. ಸ್ವಾಮಿ, ಇವತ್ತು ಹಳ್ಳಿಗಳನ್ನು ಪಟ್ಟಣಗಳಿಗೆ ಹೋಲಿಸಿ ನೋಡಿ. ಬೆಂಗಳೂರಾಗಲೀ, ಯಾವುದೇ ಟೌನಾಗಲೀ ಹೋಲಿಸಿ ನೋಡಿ. ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ನಾನು ಇದರಲ್ಲಿ ರಾಜಕೀಯ ಮಾಡುತ್ತಿಲ್ಲ. ಬೋರ್‌ವೆಲ್‌ಗಳನ್ನು ಹಾಕಿದ್ದೀರಿ, ಆ ಬೋರ್‌ವೆಲ್‌ಗಳಲ್ಲಿ ನೀರು ಇವತ್ತು ಕೆಳಗೆ ಹೋಗಿದೆ. Water is going down and down because of more exploitation; ಕುಡಿಯುವ ನೀರು ಇಲ್ಲ, ಪಂಪ್ ಒತ್ತಿದರೆ ಟುಸ್ ಅಂತ ಗಾಳಿ ಬರುತ್ತದೆ. ಹಳ್ಳಿಯ ಹೆಣ್ಣು ಮಕ್ಕಳು ಬೆಳಿಗ್ಗೆ ಎದ್ದು ಮನೆಯವರಿಗೆಲ್ಲಾ ಅಡಿಗೆ ಮಾಡಿ, ಮಕ್ಕಳನ್ನು ಸ್ಕೂಲಿಗೆ ಕಳುಹಿಸಿ, ೧೦ ಗಂಟೆಗೆ ಕೂಲಿಗೆ ಹೋಗಬೇಕು. ನೀರು ತರುವುದಕ್ಕೆ ಹೋಗಿ ಬೋರ್‌ವೆಲ್‌ಗಳ ಹಿಡಿಯನ್ನು ಒತ್ತಿದರೆ, ಕೊಳಕು ಮಂಡಲಾನೂ ಇಲ್ಲ, ಉರಿ ಮಂಡಲಾನೂ ಇಲ್ಲ, ಬೋರ್‌ವೆಲ್‌ಗಳು ಕೆಟ್ಟು ಹೋಗಿವೆ. ಇವುಗಳನ್ನು ರಿಪೇರಿ ಮಾಡುವುದರಲ್ಲಿ ದ್ವಂದ ನೀತಿ ಇದೆ. ನಾನು ಶಾಸಕನಾಗಿ ಬೆಂಗಳೂರು ಜಿಲ್ಲಾ ಪರಿಷತ್ ಸದಸ್ಯನಾಗಿದ್ದೇನೆ. ಈ ಬಗ್ಗೆ ಜಿಲ್ಲಾ ಪರಿಷತ್ ಸಭೆಯಲ್ಲಿ ಕೇಳಿದರೆ, ನಾವೆಲ್ಲಾ ಮಂಡಲ ಪಂಚಾಯಿತಿಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಮಂಡಲ ಪಂಚಾಯ್ತಿಯವರು ಹತ್ತಿರ ಹೋಗಿ ಕೇಳಿದರೆ ನಮ್ಮ ಹತ್ತಿರ ವ್ಯಾನ್ ಇಲ್ಲ, ನಮ್ಮ ಹತ್ತಿರ ಪೈಪ್ ಇಲ್ಲ, ಅದನ್ನು ಸರಿ ಮಾಡುವವರು ಇಲ್ಲ ಎಂದು ಹೇಳುತ್ತಾರೆ, ಈ ನೀತಿ ಏಕೆ ? ನಿಮಗೆ ಇದು ಅರ್ಥವಾಗುವುದಿಲ್ಲವೆ ? ಪಟ್ಟಣಗಳಲ್ಲಿ, ಅದರಲ್ಲಿಯೂ ಬೆಂಗಳೂರು ನಗರದಲ್ಲಿ ೧೦ ನಿಮಿಷ ಕರೆಂಟ್ ನಿಂತು ಹೋದರೆ, ಅಲ್ಲೋಲ ಕಲ್ಲೋಲವಾಗುತ್ತದೆ. ನಮ್ಮ ಪತ್ರಿಕೆಯವರು "Bangalore was in darkness for half-an-hour", but we are in darkness for 24 hours. ವಿದ್ಯುತ್ ಅಭಾವ ಇದೆ, ನಾನು ಒಪ್ಪಿಕೊಳ್ಳುತ್ತೇನೆ. ನಮಗೆ ಕರೆಂಟ್ ಹೇಗೆ ಕೊಡುತ್ತಾರೆಂದರೆ, ಬೆಳಿಗ್ಗೆ ಸ್ವಲ್ಪ ಹೊತ್ತು, ಮಧ್ಯಾಹ್ನ ಸ್ವಲ್ಪ ಹೊತ್ತು' ಸಾಯಂಕಾಲ ಸ್ವಲ್ಪ ಹೊತ್ತು ಕೊಡುತ್ತಾರೆ. ಸಾಯಂಕಾಲ ೬-೭ ಗಂಟೆಗೆ ಗಂಡಸರು, ಹೆಣ್ಣು ಮಕ್ಕಳು ಹೊಲಕ್ಕೆ ಹೋಗಿದ್ದವರು ಬಂದು ದನಕರು

ಗಳನ್ನು ಒಳಗೆ ಬಿಟ್ಟು ಇನ್ನೇನು ಅಡಿಗೆ ಮಾಡಬೇಕು ಎನ್ನುವುದರಲ್ಲಿ ಮತ್ತೆ ಲೈಟ್ ಆಫ್, ಪವರ್ ಕಟ್ ಆಗುತ್ತದೆ. ಆಮೇಲೆ ರಾತ್ರಿ ಹತ್ತು ಗಂಟೆಯ ಮೇಲೆ ಕರೆಂಟ್ ಬರುತ್ತದೆ. ಅಲ್ಲಿಯವರೆಗೆ ಕತ್ತಲೆ ಸೀಮೆಎಣ್ಣೆ ಇರುವುದಿಲ್ಲ, ಅದರ ಅಭಾವ ಬೇರೆ, ಅಷ್ಟು ಹೊತ್ತಿಗೆ ಹಳ್ಳಿಯ ಜನ ಅಡುಗೆ ಮಾಡಿಬಿಟ್ಟು ತಿಂದುಬಿಟ್ಟು ಮಲಗಿಕೊಂಡುಬಿಡುತ್ತಾರೆ. ನಮ್ಮ ಹಳ್ಳಿಗಳಲ್ಲಿ ರೂಮುಗಳು ಇಲ್ಲ.

ಶ್ರೀ ವಾಟಾಳ್ ನಾಗರಾಜ್. — ಅಷ್ಟರೊಳಗೆ ಗಂಡಹೆಂಡರಿಗೆ ಜಗಳ.

ಶ್ರೀ ಎನ್. ಚಿಕ್ಕೇಗೌಡ.—ಅಧ್ಯಕ್ಷರೆ. ನಮ್ಮಲ್ಲಿ ಇಂಡಿವಿಜುಯಲ್ ಆಗಿ ಯಾರಿಗೂ ಬೆಡ್ ರೂಮುಗಳು ಇರುವುದಿಲ್ಲ. ಒಂದೇ ಹಾಲ್ ಇರುತ್ತದೆ. ಅದರಲ್ಲಿ ಹೆಣ್ಣುಮಕ್ಕಳು, ಪತಿಪತ್ನಿ ಯರೆಲ್ಲಾ ಮಲಗಿಕೊಂಡುಬಿಡುತ್ತಾರೆ. ಹತ್ತುಗಂಟೆ ಆದಮೇಲೆ ಕರೆಂಟ್ ಬರುತ್ತದೆ. ಏಕೆಂದರೆ ಸರಿಯಾಗಿ ಮಲಗಿಕೊಂಡಿದ್ದಾರೋ ಇಲ್ಲವೋ ಎಂದು ನೋಡಲಿಕ್ಕೆ ಹಳ್ಳಿಗಳಲ್ಲಿ ರಾತ್ರಿ ಅಡುಗೆ ಮಾಡಲಿಕ್ಕೆ ಊಟಕ್ಕೆ ಬೆಳಕು ಇಲ್ಲ, ಇಲ್ಲಿ ಬೆಂಗಳೂರಿನಲ್ಲಿ ಊಟ ಮಾಡುವುದು ಇರಲಿ, ತಿನ್ನು, ಕುಣಿ ಪಂಚತಾರಾ ಹೋಟಲುಗಳು, ಇಲ್ಲಿ ವಿಧಾನಸೌಧ ಇದೆ, ವಿಧಾನಸೌಧ ನೋಡಬೇಕು. ಆದರೆ ಹಳ್ಳಿ ಯಲ್ಲಿ ನೋಡಿದರೆ ಕರೆಂಟ್‌ಗಾಗಿ ಬೊಬ್ಬೆ ಹೊಡೆಯುತ್ತಾರೆ, ಮೋಟಾರ್ ಸುಟ್ಟು ಹೋದವು ಎಂದು ಹೇಳುತ್ತಾರೆ. ಅಡುಗೆ ಮಾಡಲಿಕ್ಕೆ ಸೀಮೆಎಣ್ಣೆ ಸಿಕ್ಕುವುದಿಲ್ಲ, ಅಲ್ಲಿ ಸ್ವಿಚ್‌ಹಾಕಿ ಕಾಲುವೆ ಹತ್ತಿರ ನೀರು ಕಟ್ಟಲಿಕ್ಕೆ ಹೋಗುವಷ್ಟರಲ್ಲಿ ಕರೆಂಟ್ ಕಟ್ ಆಗಿರುತ್ತದೆ. ಇದು ಏನಾಗಿದೆ ಎಂದರೆ ಕಣ್ಣಾ ಮುಚ್ಚಿ, ಕಾಡೆಗೂಡೆ ಉದ್ದಿನಮೂಟೆ, ಉರುಳೇ ಹೋಯಿತು ಅಂದಹಾಗೆ ಆಗಿದೆ. ಇಲ್ಲಿ ಇವರಿಗೆ ಮಲಗಿರುವ ಜಾಗದಲ್ಲಿ ಟ್ಯಾಪ್ ವಾಟರ್, ಟಬ್ ಬಾತ್, ಶವರ್ ಜಲಕ್ರೀಡೆ......

ಶ್ರೀ ವಾಟಾಳ್ ನಾಗರಾಜ್.—ಕೊನೆಗೆ ನೀರು ಸಿಕ್ಕದಿದ್ದರೂ ಧಾರಾಳವಾಗಿ ಬೀರು ಸಿಕ್ಕುತ್ತದೆ.

ಶ್ರೀ ಎನ್, ಚಿಕ್ಕೇಗೌಡ.— ಈಗ ನಾನು ೬-೭ ತಿಂಗಳುಗಳಿಂದ ಶಾಸಕನಾಗಿದ್ದೇನೆ. ನಾನು ಒಂದು ದಿವಸವೂ ಇಲ್ಲಿ ಉಳಿಯುವುದಿಲ್ಲ. ನನ್ನ ಪರ್ಸನಲ್ ಎಕ್ಸ್‌ಪ್ಲನೇಷನ್ ಹೇಳುತ್ತಿದ್ದೇನೆ. ನಾನು ಸಾಯಂಕಾಲ ಆದರೆ ಊರಿಗೆ ಹೋಗಬೇಕು. ಏಕೆಂದರೆ, ಬೆಳಿಗ್ಗೆ ಎಲ್ಲ ನೋಡಬೇಕು. ಪಂಪ್‌ಸೆಟ್ಟು ಗಳು ನೋಡಬೇಕು, ಟ್ರಾಕ್ಟರುಗಳನ್ನು ನೋಡಬೇಕು, ತೋಟಕ್ಕೆ ನೀರು ಕಟ್ಟುವುದು, ಹೊಲ ಉಳುವುದು ಎಲ್ಲ ನೋಡಬೇಕು. ಆದುದರಿಂದ ಎಷ್ಟು ಹೊತ್ತಾದರೂ ಸಾಯಂಕಾಲ ಊರಿಗೆ ಹೋಗಬೇಕು. ನಾನು ಹೋಗುವ ಹೊತ್ತಿಗೆ ಅಲ್ಲಿ ಲೈಟ್ ಇಲ್ಲ. ನಮ್ಮ ಹೆಂಗಸರನ್ನು ಕೇಳಿದರೆ ಹೋಗ್ರಿ ನಿಮ್ಮ ಸರ್ಕಾರದಲ್ಲಿ ಆಗಲೇ ಕರೆಂಟ್ ಹೋಯಿತು ಎಂದು ಹೇಳುತ್ತಾರೆ. ಅಲ್ಲಿ ಕರೆಂಟ್ ಇಲ್ಲದೇ ಇರುವುದರಿಂದ ನಾವು ಅಲ್ಲಿ ಬೇರೆ ಹಿಂಬೈಸಿಕೊಳ್ಳಬೇಕು. ಪವರ್ ಷೆಡ್ಡಿಂಗ್ ಎಂದರೆ ಏನು ? ಫ್ಯಾಕ್ಟರಿಗಳವರು ಕದ್ದು ಮೀಟರ್ ಹಾಕಿಕೊಂಡು ಓಡಿಸಿಕೊಳ್ಳುತ್ತಾರೆ. ಅಲ್ಲಿ ಸಾವಿರಾರು ರೂಪಾಯಿ ಲಾಭ ಮಾಡಿಕೊಳ್ಳುತ್ತಾರೆ. ಅಸಿಸ್ಟೆಂಟ್ ಇಂಜಿನಿಯರ್, ಜೂನಿಯರ್ ಇಂಜಿನಿಯರ್ ದುಡ್ಡು ಮಾಡಿಕೊಳ್ಳುತ್ತಾರೆ. ನಮಗೆ ಅಲ್ಲಿ ಮೋಟಾರುಗಳೆಲ್ಲಾ ಸುಟ್ಟು ಹೋಗುತ್ತಿವೆ. ಒಂದೊಂದು ಮೋಟಾರು ೩ ಸಾವಿರ, ೪ ಸಾವಿರ ರೂಪಾಯಿಗಳಾಗುತ್ತದೆ.

ಶ್ರೀ ಬಿ.ಎಂ. ಇದಿನಬ್ಬ.—ಎಲ್ಲಾ ಕಷ್ಟ ರೈತರಿಗೆ.

ಶ್ರೀ ಬಿ.ಹೆಚ್. ಬನ್ನಿಕೋಡ್.—ನಿಮ್ಮ ಸರ್ಕಾರದ ಆಡಳಿತವನ್ನು ನೋಡಿ, ನಿಮ್ಮ ಮನೆಯ ಹೆಣ್ಣುಮಕ್ಕಳು ಈ ರೀತಿ ಹೇಳಲಿಕ್ಕೆ ಹತ್ತಿದ್ದಾರೆ ಅಂದ ಹಾಗೆ ಆಯಿತು.

ಶ್ರೀ ಎನ್. ಚಿಕ್ಕೇಗೌಡ.—ನಾನು ಟೀಕೆ ಮಾಡುತ್ತಿಲ್ಲ. ರೈತನ ಪರಿಸ್ಥಿತಿಯನ್ನು ಹೇಳುತ್ತಿ ದ್ದೇನೆ. ಒಂದು ಮೆಗಾವಾಟ್ ಕರೆಂಟೂ ಉತ್ಪತ್ತಿ ಇಲ್ಲ. ಇವತ್ತು ಇವರು ಒಂದು ಅಣೆಕಟ್ಟು ಕಟ್ಟಿಲ್ಲಿಲ್ಲ. ಇವತ್ತು ಎಲ್ಲಿ ನೋಡಿದರೂ ರಿಪೇರಿ.

ಶ್ರೀ ಎಂ,ಪಿ. ವೆಂಕಟೇಶ್.—ಈಗ ಗ್ರಾನೈಟ್‌ಗೆ ಬೇರೆ ಕರೆಂಟ್ ಕೊಟ್ಟುಬಿಟ್ಟಿದ್ದಾರೆ.

ಶ್ರೀ ಎನ್. ಚಿಕ್ಕೇಗೌಡ.—ಈಗ ವೆಂಕಟೇಶ್ ಅವರು ಹೊಸದಾಗಿ ಬಂದಿದ್ದಾರೆ. ಅವರ ತಂದೆ ವೀರಣ್ಣನವರು ನನಗೆ ಬಹಳ ಸ್ನೇಹಿತರು, ಇವರು ಹೊಸದಾಗಿ ಬಂದಿದ್ದಾರೆ, ಜಾಸ್ತಿ ಮಾತನಾಡು ತ್ತಾರೆ ಮಾತನಾಡಲಿ, ಸಂತೋಷ.

ಶ್ರೀ ಬಿ.ಎಂ. ಇದಿನಬ್ಬ.—ಅಧ್ಯಕ್ಷರೆ, ರೈತರ ಬಗ್ಗೆ ಇರತಕ್ಕಂಥ ಬವಣೆಗಳನ್ನು ಒಳ್ಳೆಯ ರೀತಿ ಯಲ್ಲಿ ವಿವರಿಸುತ್ತಿದ್ದಾರೆ, ಹಿಂದಿನವರು ಈ ರೀತಿ ಮಾಡಿಟ್ಟಿದ್ದಾರೆ, ಇದನ್ನು ಮುಂದೆ ಸರಿಪಡಿಸ ಬೇಕೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಎನ್. ಚಿಕ್ಕೇಗೌಡ.—ನಾನು ಏತಕ್ಕೆ ಹೇಳಿದೆ ಅಂದರೆ, ಗ್ರಾಮೀಣಾಭಿವೃದ್ಧಿಯಲ್ಲಿ ಈ ಪಂಪುಸೆಟ್ಟುಗಳು, ಬೋರ್‌ವೆಲ್‌ಗಳು......

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಈ ರಾಜ್ಯದಲ್ಲಿ ಶ್ರೀಮಾನ್‌ದೇವರಾಜ ಅರಸರ ಕಾಲ ದಲ್ಲಿ ಮಾನ್ಯ ಚಿಕ್ಕೇಗೌಡರೂ ಮಂತ್ರಿಯಾಗಿದ್ದರು. ಮಾನ್ಯ ಖಾರ್ಗೆಯವರ ಕುರ್ಚಿ ಇರುವುದು ಇಲ್ಲಿ, ಅವರು ಚಿಕ್ಕೇಗೌಡರ ಹಿಂದೆ ಕುಳಿತುಕೊಂಡು ನಮ್ಮ ಚಿಕ್ಕೇಗೌಡರಿಗೆ ಒಂದು ರೀತಿಯಲ್ಲಿ ಹಳ್ಳಿಗಳ ಕಡೆ ನಾಟಕ ಶುರುವಾದರೆ ಹಿಮ್ಮೇಳ ಕುಳಿತುಕೊಂಡ ಹಾಗೆ ಕುಳಿತಿದ್ದಾರೆ. ಇದು ಸರಿಯಲ್ಲ, ಅವರು ಅವರ ಸ್ಥಳಕ್ಕೆ ಬಂದು ಕುಳಿತುಕೊಂಡು ಚಿಕ್ಕೇಗೌಡರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎನ್. ಚಿಕ್ಕೇಗೌಡ.—ಇವತ್ತು ಹಳ್ಳಿಗಳಲ್ಲಿರುವ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೇಳಿದೆ. ಇನ್ನು ಗ್ರಾಮ ನೈರ್ಮಲ್ಯದ ಬಗ್ಗೆ ಹೇಳುತ್ತೇನೆ. ಗ್ರಾಮೀಣ ಪ್ರದೇಶದಲ್ಲಿ ಅಲ್ಲಲ್ಲಿ ಕೊಳಚೆ ಸೊಳ್ಳೆಗಳು ನಾತ ಇದ್ದು ವಾತಾವರಣ ಕಲುಷಿತ ಗೊಂಡಿರುತ್ತದೆ. ಅಲ್ಲಿ ರಸ್ತೆ ಇಲ್ಲ, ಚರಂಡಿ ವ್ಯವಸ್ಥೆ ಇಲ್ಲ. ಇದಕ್ಕೆಂದು ಜಿಲ್ಲಾ ಪರಿಷತ್ತಿಗೆ ಹಣವನ್ನು ಕೊಟ್ಟರೆ ಅವರು ಬೇರೆ ಬಾಬಿಗೆ ಅದನ್ನು ಹಾಕುತ್ತಾರೆ. ಸೋಷಿಯಲ್ ಫಾರೆಸ್ಟ್ರಿಗೆಂದು ಕೋಟಿ ಗಟ್ಟಲೆ ಹಣವನ್ನು ಕೊಟ್ಟರೆ ಒಂದು ಗಿಡವನ್ನೂ ಕೂಡ ನೆಟ್ಟಿಲ್ಲ. ಇದಕ್ಕೆಂದು ಜಿಲ್ಲಾ ಪರಿಷತ್‌ನಲ್ಲಿ ಸ್ಪೆಷಲ್ ಕಮಿಟಿಯನ್ನು ಮಾಡಿದೆವು. ಎಲ್ಲಾ ಹಣವನ್ನು ನುಂಗಿ ಹಾಕಿದ್ದಾರೆ. ಗಿಡಗಳನ್ನು ನುಂಗುತ್ತಾರೆ. ಆನೆಗಳನ್ನು ನುಗುವಂತಹ ಜನರು ನಮ್ಮಲ್ಲಿದ್ದಾರೆ. ಒಬ್ಬ ವೀರಪ್ಪನ್ ಅಲ್ಲ ಬೇಕಾದಷ್ಟು ಜನ ವೀರಪ್ಪನ್‌ಗಳು ನಮ್ಮಲ್ಲಿ ಇದ್ದಾರೆ. ಇದರ ಜೊತೆ ಅಧಿಕಾರಿಗಳೂ ಕೂಡ ಶಾಮೀಲಾಗಿದ್ದಾರೆ. ಸುಮ್ಮನೆ ಅವರನ್ನು, ಒಬ್ಬರನ್ನು ಹಿಡಿದರೆ ಏನು ಪ್ರಯೋಜನ. ಅವನನ್ನೂ ಹಿಡಿಯಿರಿ ಬೇಡವೆನ್ನುವುದಿಲ್ಲ. ಅವನು ನಮ್ಮ ಕಣ್ಣಿಗೆ ಬಿದಿದ್ದಾನೆ. ಆದರೆ ಮರಿ ವೀರಪ್ಪನ್‌ಗಳು ಬೇಕಾದಷ್ಟು ಜನ ಇದ್ದಾರೆ.

ಶ್ರೀ ಗೋಪಿನಾಥ ಆರ್. ಸಾಂಡ್ರಾ.—ಮರಿ ವೀರಪ್ಪನ್‌ಗಳು ನಮ್ಮಲ್ಲಿ ಕೂಡ ಇದ್ದಾರೆ ನಿಮ್ಮಲ್ಲಿ ಮಾತ್ರ ಇದ್ದಾರೆಂದು ಅಲ್ಲ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮಲ್ಲಿ ಅಂದರೆ ಎಲ್ಲಿ ?

ಶ್ರೀ ಗೋಪಿನಾಥ ಆರ್. ಸಾಂಡ್ರಾ.—ಫಾರೆಸ್ಟ್ ಏರಿಯಾನಲ್ಲಿ ಇದ್ದಾರೆ, ಹುಬ್ಬಳ್ಳಿ, ಕಾಸವಾರ, ಕುಮಟಾ, ಹಳಿಯಾಳ, ದಾಂಡೇಲಿ ಮುಂತಾದ ಕಡೆಗಳಲ್ಲಿ ಅಂದರೆ ಫಾರೆಸ್ಟ್ ಏರಿಯಾ ಎಲ್ಲೆಲ್ಲಿ ಇದೆ ಅಲ್ಲಲ್ಲಿ ಇದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಎನ್. ಚಿಕ್ಕೇಗೌಡ.—ಗ್ರಾಮಾಂತರ ಪ್ರದೇಶದ ಜನರಿಗೆ ಕುಡಿಯುವ ನೀರನ್ನು ಒದಗಿಸಿ ಕೊಡಲು ಟ್ಯಾಂಕ್ ಅನ್ನು ಕಟ್ಟಿಸಿ ಕೊಡಬೇಕು. ಕಿರು ನೀರಾವರಿ ಯೋಜನೆಯಡಿಯಲ್ಲಿ ಟ್ಯಾಂಕನ್ನು ಕಟ್ಟಿ ಅವರಿಗೆ ನೀರನ್ನು ಕೊಡಬೇಕು. ಇದಕ್ಕೆ ಸಾವಿರ ಜನರು ಇರಬೇಕು, ಇದು ಸೆಂಟ್ರಲ್ ಸ್ಕೀಂ, ಎಂದು ಹೇಳುತ್ತಾರೆ. ಆದರೆ ಬೆಂಗಳೂರಿನಲ್ಲಿ ಮಾತ್ರ ಎಲ್ಲಿದ್ದರೂ ಸಹ ಯಾವ ಗಲ್ಲಿಯಲ್ಲಿ ಸಾಹುಕಾರ ಬದ್ದರೂ ಕೂಡ ಅಲ್ಲಿ ಒಂದು ನಲ್ಲಿ ಹಾಕುತ್ತೀರಿ ಅದೇ ಹಳ್ಳಿಯಲ್ಲಿ ಕಿರು ನೀರಾವರಿ ಯೋಜನೆಯಡಿ ಯಲ್ಲಿ ನೀರನ್ನು ಕೊಡಿ ಎಂದು ಹೇಳಿದರೆ ಮೀನಾಮೇಷ ಎಣಿಸುತ್ತಿದ್ದೀರಿ. ಅದಕ್ಕೆ ಸಾವಿರ ಜನ ಇರಬೇಕು ಇದು ಸೆಂಟ್ರಲ್ ಗವರ್ನಮೆಂಟ್ ಸ್ಕೀಮ್ ಎಂದು ಹೇಳುತ್ತಿದ್ದೀರಿ. ಸ್ಟೇಟ್ ಸೆಕ್ಟಾರ್ ಸ್ಕೀಂ ಒಂದೂ ಜಾರಿಯಾಗುವುದಿಲ್ಲ. ಒಂದು ಮಂಡಲ ಪಂಚಾಯತಿಗೆ ಒಂದು ಬೋರ್‌ವೆಲ್ ಎಂದು ಹೇಳಿ ಹಾಕಿದರೂ ಕೂಡ ಅಲ್ಲಿ ಪಂಪನ್ ಮೋಟಾರ್ ಸುಟ್ಟು ಹೋಗಿ ಅದೂಕೂಡ ಜಾರಿಯಲ್ಲಿ ಇಲ್ಲದಂತಾಗಿದೆ. ಕೈಪಂಪ್ ಹಾಕಿದ್ದರೂ ಅದೂ ಕೂಡ ಕೆಟ್ಟು ಹೋಗುವುದಲ್ಲದೆ ಅಲ್ಲಿರುವ ಬಾವಿಗಳೂ ಬತ್ತಿ ಹೋಗಿದೆ, ಇಂತಹ ಪರಿಸ್ಥಿತಿ ಇರುವಾಗ ಅಲ್ಲಿನ ಜನರಿಗೆ ನೀರು ಎಲ್ಲಿಂದ ಬರಬೇಕು ಹೇಗೆ ಜೀವನ ಮಾಡಬೇಕೆಂಬುದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಇನ್ನು ಹಳ್ಳಿಗಳಲ್ಲಿ ಇರತಕ್ಕಂತಹವರಿಗೆ ಅನುಕೂಲವಾಗಲೆಂದು ಹರಿಜನ ವಾಡಿಯಲ್ಲಿ ಬೋರ್‌ವೆಲ್ ಅನ್ನು ಹಾಕಲಿಕ್ಕೆ ಹೋದರೂ ಕೂಡ ಅಲ್ಲಿರತಕ್ಕಂತಹ ಉತ್ತಮರು ತಮ್ಮ ಕಡೆಗೆ ಹಾಕಿಸಿಕೊಳ್ಳುತ್ತಾರೆ. ಹರಿಜನರು ಅಲ್ಲಿಗೆ ನೀರನ್ನು ಹಿಡಿದುಕೊಳ್ಳಲು ಹೋದರೆ ಅವರಿಗೆ ಅವಕಾಶ ಕೊಡವುದಿಲ್ಲ. ಇಂತಹ ಪರಿಸ್ಥಿತಿ ಅಲ್ಲಿ ಇದೆ, ಇನ್ನು ಕೆಲವು ಕಡೆಗಳಲ್ಲಿ ಬೋರ್‌ವೆಲ್ ಹಾಕಿದರೂ ಕೂಡ ರಿಗ್ ಅನ್ನು ತೆಗೆದುಕೊಂಡು ಹೋಗುತ್ತಾರೆ. ಅಲ್ಲೂ ಕೂಡ ರಾಜಕೀಯ ಮಾಡುತ್ತಾರೆ. ಆದ್ದರಿಂದ ಕಿರುನೀರಾವರಿ ಯೋಜನೆಯಡಿಯಲ್ಲಿ ಹಳ್ಳಿಯ ಜನರಿಗೆ ನೀರಿನ ಸೌಕರ್ಯವನ್ನು ಮಾಡಿಕೊಡಲೇ ಬೇಕು. ಇನ್ನು ಗ್ರಾಮ ನೈರ್ಮಲ್ಯ, ಚರಂಡಿ ವ್ಯವಸ್ಥೆ, ಹಾಗೂ ಶೌಚಾಲಯದ ವ್ಯವಸ್ಥೆ ಬಗ್ಗೆ ಮಾನ್ಯ ಘೋರ್ಪಡೆಯವರು

ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೂ ಕೂಡ ಹೇಳಿದರು. ಬಿ. ಟಿ. ಎಸ್. ನಿಲ್ದಾಣಗಳಲ್ಲಿ ಶೌಚಾಲಯ ಚೆನ್ನಾಗಿ ಇಲ್ಲ. ಅದನ್ನಾದರೂ ಚೆನ್ನಾಗಿ ಇಡಿಸಿ. ಹೆಣ್ಣು ಮಕ್ಕಳಿಗೆ ರಕ್ಷಣೆ ಕೊಡಿ. ಗ್ರಾಮಾಂತರ ಪ್ರದೇಶಗಳ ಬಸ್‌ನಿಲ್ದಾಣಗಳಲ್ಲಿ ಹಾಗೂ ನಗರದ ಬಸ್ ನಿಲ್ದಾಣಗಳಲ್ಲಿ ಎಲ್ಲಿ ಹೋದರೂ ಕೂಡ ಜನ ಓಡಾಡುತ್ತಾ ಇರುತ್ತಾರೆ, ಆದ್ದರಿಂದ ಹೆಣ್ಣು ಮಕ್ಕಳಿಗೆ ಶೌಚಾಲಯಗಳ ವ್ಯವಸ್ಥೆ ಮಾಡಿಕೊಡಿ. ಈ ಸಮಸ್ಯೆಯನ್ನು ಇಲ್ಲಿರುವ ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕು. ಇನ್ನು ಕುಡಿಯುವ ನೀರಿಗೆಂದು ವ್ಯಾನ್ ಕಳಿಸಿ ಎಂದು ಹೇಳಿದರೆ ಮಾನ್ಯ ಮಂತ್ರಿಗಳು ಜೀಪ್ ಕಳಿಸುತ್ತಾರೆ. ಮಂಡಲ ಪಂಚಾಯಿತಿಗೆ ಬೋರ್‌ವೆಲ್ ಪಂಪ್ ಸೆಟ್ ಅನ್ನು ರಿಪೇರಿ ಮಾಡಲು ಕೊಡಬೇಡಿ. ಒಬ್ಬ ಜವಾಬ್ದಾರಿಯುತವಾದಂತಹ ಅಸಿಸ್ಟೆಂಟ್ ಇಂಜಿನಿಯರ್‌ಗೆ ಇದರ ಸಂಪೂರ್ಣ ಜವಾಬ್ದಾರಿಯನ್ನು ಕೊಡಬೇಕು.

೧-೩೦ ಪಿ. ಎಂ.

ಇನ್ನು ಸೈಟುಗಳನ್ನು ಕೊಡುವ ವಿಚಾರ. ಇಂದಿರಾ ಆವಾಜ್‌ನಲ್ಲಿ ಮನೆಯನ್ನು ಕೊಡುವುದು, ಭಾಗ್ಯಜ್ಯೋತಿ ಸ್ಕೀಮ್‌ನಲ್ಲಿ ಬಡವರ ಮನೆಗಳಿಗೆ ಲೈಟುಗಳನ್ನು ಹಾಕುವುದು, ಐ. ಆರ್. ಡಿ. ಪಿ. ಯಲ್ಲಿ ಲೋನ್ ಕೊಡುವುದು, ಇನ್ನೂ ಮುಂತಾದ ಯೋಜನೆಗಳನ್ನು ಜನರಿಗೆ ಮುಟ್ಟಿಸುವುದರಲ್ಲಿ ಬಹಳ ರಾಜಕೀಯ ನಡೆಯುತ್ತಿದೆ. ಮಂಡಲಪಂಚಾಯಿತಿಯ ವಿಚಾರದಲ್ಲಿ ನಾನು ವಾಸ್ತವ ಅಂಶವನ್ನು ಹೇಳುತ್ತಿದ್ದೇನೆ. ಮಂಡಲ ಪಂಚಾಯಿತಿಯವರು ಗ್ರಾಮ ಸಭೆಯನ್ನೇ ಮಾಡದೆ ಮನೆಯಲ್ಲೇ ಕುಳಿತುಕೊಂಡು ಎಲ್ಲ ರೆಕಾರ್ಡ್‌ಗಳನ್ನೂ ಬರೆದು ಕಳುಹಿಸಿಕೊಡುತ್ತಾರೆ. ಗ್ರಾಮ ಸಭೆಯನ್ನೇ ಮಾಡದೆ ಇಂದಿರಾ ಆವಾಜ್, ಭಾಗ್ಯಜ್ಯೋತಿ ಯೋಜನೆಗಳ ಅಡಿಯಲ್ಲಿ ಏನೇನು ಸೌಲಭ್ಯಗಳನ್ನು ಸರ್ಕಾರದವರು ಕೊಡುತ್ತಾರೋ ಅದರ ಬಗ್ಗೆ ಮನೆಯಲ್ಲೇ ಕುಳಿತುಕೊಂಡು ರೆಕಾರ್ಡ್ ಬಿಲ್ಡಪ್ ಮಾಡಿ ಬಿ. ಡಿ. ಒ. ಗೆ ಕಳುಹಿಸಿಕೊಡುತ್ತಾರೆ. ಅಲ್ಲಿ ಅವರು ಇದನ್ನು ಇಂಪ್ಲಿಮೆಂಟ್ ಮಾಡಬಹುದೆಂದು ಬರೆಯುತ್ತಾರೆ. ಇಂಥಾದ್ದು ಬಹಳ ನಡೆಯುತ್ತಿದೆ. ಗ್ರಾಮಸಭೆ ಎಲ್ಲೂ ಕೂಡ ನಡೆಯುತ್ತಿಲ್ಲ. ಗ್ರಾಮಸಭೆ ನಡೆಯಬೇಕು, ರಾಮರಾಜ್ಯವಾಗಬೇಕೆಂದು ದಿವಂಗತ ಜಯಪ್ರಕಾಶನಾರಾಯಣ್ ಆದಿಯಾಗಿ, ಶ್ರೀಮತಿ ಇಂದಿರಾಗಾಂಧಿಯವರೂ, ರಾಜೀವ್ ಗಾಂಧಿಯವರೂ, ಇವತ್ತಿನ ನಿಮ್ಮ ಕೇಂದ್ರ ಸರ್ಕಾರದವರೂ ಎಲ್ಲರೂ ಹೇಳಿದ್ದಾರೆ, ಈ ಕಾನೂನಿಗೆ ಒಂದು ತಿದ್ದುಪಡಿಯನ್ನು ತಂದಿದ್ದರು. ಹಿಂದೆ ಮಾನ್ಯ ರಾಜೀವ್ ಗಾಂಧಿಯವರು ಈ ಮಸೂದೆಯನ್ನು ಲೋಕಸಭೆಯಲ್ಲಿಟ್ಟು ಪಾಸ್ ಆದ ನಂತರ ರಾಜ್ಯಸಭೆಯಲ್ಲಿ ಮಂಡಿಸಿದಾಗ ಅದನ್ನು ಕೆಡಿಸಿದರು. ಅಧಿಕಾರ ವಿಕೇಂದ್ರೀಕರಣ ಆಗಬೇಕೆಂದು ಹೇಳುವವರು ನೀವು ಏತಕ್ಕೆ ಆವತ್ತು ಅಲ್ಲಿ ಅದನ್ನು ಪಾಸ್ ಮಾಡಲಿಲ್ಲ ? ನಮ್ಮ ಮಾನ್ಯ ರಾಜೀವ್ ಗಾಂಧಿಯವರು ಗ್ರಾಮೀಣ ರಾಜ್ಯ, ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ರಾಜ್ಯಾಂಗಕ್ಕೆ ಏನು ತಿದ್ದುಪಡಿಯನ್ನು ತಂದಿದ್ದರು ಅದರಲ್ಲಿ ಏನು ತಪ್ಪಿತ್ತು ? ಅಧಿಕಾರ ವಿಕೇಂದ್ರೀಕರಣ ಆಗಬೇಕೆಂಬುದರಲ್ಲಿ ನಮ್ಮ ಅಭ್ಯಂತರವಿಲ್ಲ. ಹಿಂದೆ ದಿ. ನಜೀರ್‌ಸಾಬ್‌ರವರು ಈ ಮಸೂದೆಯನ್ನು ತರಬೇಕು ಅಂದಾಗ ನಾನೂ ಕೂಡ ಆಗ ಸೆಲೆಕ್ಟ್ ಕಮಿಟಿಯಲ್ಲಿದ್ದೆ. ಆಗ ನಾನು ಇಡೀ ರಾಷ್ಟ್ರವನ್ನು ತಿರುಗಿದ್ದೇನೆ. ಪಶ್ಚಿಮ ಬಂಗಾಳದಿಂದ ಹಿಡಿದು ಮಹರಾಷ್ಟ್ರ, ರಾಜಾಸ್ಥಾನ, ಆಂಧ್ರ, ಗುಜರಾತ್ ಇತ್ಯಾದಿ ಎಲ್ಲ ರಾಜ್ಯಗಳಲ್ಲೂ ಸುತ್ತಿದ್ದೇವೆ. ಮಾನ್ಯ ನಜೀರ್ ಸಾಬ್‌ರವರು ಬಹಳ ಒಳ್ಳೆಯವರು. ಅವರು ಸಮಾಜವಾದಿಗಳು. ಅವರ ಬಗ್ಗೆ ನಾವು ಅನ್ಯಥಾ ಮಾತನಾಡಬಾರದು. ಇವತ್ತು ಅವರು ಸ್ವರ್ಗದಲ್ಲಿ ಇರಬಹುದು. ಅವರು ತಂದಂಥ ವಿಧೇಯಕ ಏನಿದೆ ಬಹಳ ಒಳ್ಳೆಯದು. ಆದರೆ ಇದು ಕಾರ್ಯರೂಪಕ್ಕೆ ಬರುವಾಗ ಲೋಪದೋಷಗಳಾಗಿದೆ. ಇವತ್ತು ಅವರು ಸ್ವರ್ಗದಲ್ಲಿ ಕುಳಿತುಕೊಂಡು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ಯಾವರೀತಿ ಕೆಲಸ ಮಾಡುತ್ತಿವೆ ಎಂದು ನೋಡುತ್ತಿದ್ದಾರೆ. ಸ್ವಾಮಿ, ಗ್ರಾಮಸಭೆಯನ್ನು ಮಾಡದೆಯೇ ಫೈಲುಗಳನ್ನು ಕಳಿಸುವುದು. ಜಿಲ್ಲಾ ಪರಿಷತ್ತಿನವರು ಯಾರಿಗಾದರೂ ಒಬ್ಬರಿಗೆ ಸೈಟು ಕೊಟ್ಟರೆ ಅದಕ್ಕೆ ಸ್ಟೇ, ಮನೆಕಟ್ಟುವುದಕ್ಕೆ ಹೋದರೆ ಅದಕ್ಕೆ ಸ್ಟೇ, ಯಾರಾದರೂ ಒಬ್ಬ ಆಹಾರವನ್ನು ಸರಿಯಾಗಿ ವಿತರಣೆ ಮಾಡಲಿಲ್ಲ ಎಂದು ಪೋಲೀಸರು ಹಿಡಿದು ಕೇಸು ಹಾಕಿದ್ದಾರೆ. ಅವನಿಗೆ ಹುತ್ತೆ ಕೊಡಬೇಡಿ ಎಂದರೂ ಮುಂದುವರಿಸುವುದು ಇತ್ಯಾದಿ ಮಾಡುತ್ತಾರೆ. ಈ ವಿಚಾರವನ್ನು ನಾವು ಸ್ಟ್ಯಾಂಡಿಗ್ ಕಮಿಟಿಯಲ್ಲಿ ಕೇಳಿದರೆ ಏನು ಹೇಳುತ್ತಾರೆ ಗೊತ್ತೆ ? ನಾನು ಈ ಮಾತನ್ನು ಹೇಳುವುದಕ್ಕೆ ಕಾರಣ ಎಂದರೆ, ನಾನು ಎಂ. ಎಲ್. ಎ. ಆದ ಕೂಡಲೇ ಜಿಲ್ಲಾ ಪರಿಷತ್ತಿನ ಮೊದಲನೇ ಸ್ಟ್ಯಾಂಡಿಂಗ್ ಕಮಿಟಿ ಮೀಟಿಂಗಿಗೆ ಹೋದೆ. ಕೆಲವಕ್ಕೆ ಸ್ಟೇ ಕೊಟ್ಟರು. ಮಾನ್ಯ ಬಸವಲಿಂಗಪ್ಪನವರಿಗೂ ಗೊತ್ತಿದೆ. ನನ್ನ ಊರಿನ ಪಕ್ಕದಲ್ಲಿ ೩೦ ಸೈಟುಗಳನ್ನು ಕೊಡಿಸಿದೆ. ಇದಕ್ಕೆ ಸಂಬಂಧಪಟ್ಟ ಫೈಲು ಹಿಂದಿನ ಸರ್ಕಾರದಲ್ಲಿ ೫ ವರ್ಷಗಳಿಂದ ಇತ್ತು. ಇದು ಮಾನ್ಯ ಸಿಂಧ್ಯರವರಿಗೂ ಗೊತ್ತಿದೆ. ಆ ಫೈಲನ್ನು ಇಟ್ಟುಕೊಂಡು ಸೈಟುಗಳನ್ನು ವಿತರಣೆ ಮಾಡಲಿಕ್ಕೆ ಬಿಡಲಿಲ್ಲ. ನಾನು ಮಂಡಲ ಪಂಚಾಯಿತಿಯಲ್ಲಿ ಸೈಟುಗಳನ್ನು

ಕೊಡಿಸಿ ಮೂರನೇ ದಿವಸವೇ ಹಕ್ಕುಪತ್ರಗಳನ್ನೂ ಕೊಡಿಸಿದೆ ಆದಕ್ಕೂ ಸ್ಟೆ ಕೊಟ್ಟರು. ನ್ಯಾಯುವಾಗಿ ಹಕ್ಕು ಪತ್ರಗಳನ್ನು ಕೊಟ್ಟಮೇಲೆ ಆದಕ್ಕೆ ಸ್ಟೇ ಕೊಡುವುದಕ್ಕೆ ಬರುವುದಿಲ್ಲ, ನಮ್ಮ ಮಾನ್ಯ ಆಹಾರಮಂತ್ರಿಗಳು ಬಂದಾಗ ಈ ವಿಚಾರವನ್ನು ನಾನು ಎತ್ತಿದೆ. ನನ್ನ ಪಕ್ಕದ ಊರಿನಲ್ಲಿ ಒಂದು ಜಮೀನು ಇದೆ. ಅದು ಅಕ್ವಿಸಿಷನ್ ಆಗಿ, ಸೈಟುಗಳನ್ನು ಮಾಡಿ ೭ ವರ್ಷವಾಗಿದೆ. ಅವುಗಳನ್ನೆಲ್ಲಾ ಹಂಚಿದ್ದಾಗಿದೆ. ನನ್ನ ಪಕ್ಕದ ಊರಿನಲ್ಲಿ ಹರಿಜನರಿಗೆ ಕೊಟ್ಟು ಸೈಟುಗಳ ಬಗ್ಗೆ ಸ್ಟೇ ತಂದಿದ್ದಾರೆ. ಈಗ ಹೈಕೋರ್ಟಿಗೆ ಹೋಗಬೇಕಂತ, ಹೋಗೋಣ. ಕಾನೂನಿನಲ್ಲಿದೆ, ಗವರ್ನಮೆಂಟಿಗೆ ಅಪೀಲ್ ಇಲ್ಲ. ಇವೆಲ್ಲ ಈ ಆಕ್ಟ್‌ನಲ್ಲಿರತಕ್ಕಂಥ ಕೆಲವು ನ್ಯೂನ್ಯತೆಗಳು. ಈ ವಿಚಾರವನ್ನು ನಾನು ಅಲ್ಲಿ ಮಾತನಾಡಿದಾಗ ಅವರು ನನಗೆ ನೀವು ಶಾಸಕರಾಗಿ ಮಾತನಾಡಬೇಡಿ, ಹಾಗೆ ಮಾತನಾಡಿದರೆ ಅದು ಸಬ್‌ಜುಡಿಸ್ ಆಗುತ್ತದೆ ಎಂದರು. ಅದಕ್ಕೆ ನಾನು ಅದು ಸಬ್‌ಜುಡಿಸ್ ಆಗುವುದಿಲ್ಲ, ಅದು ಸಬ್‌ಜೂಸ್ ಆಗುತ್ತದೆ ಎಂದು ಹೇಳಿದೆ. ಸ್ವಾಮಿ, ಇವತ್ತು ಕುಲ್‌ದೀಪ್‌ಸಿಂಗ್ ಆಯೋಗದ ಮೇಲೆ ನಮ್ಮ ರಾಜ್ಯದ ಮಾಜಿ ಮುಖ್ಯ ಮಂತ್ರಿಗಳು, ಮಾಜಿ ಶಾಸಕರು ಟೀಕೆಯನ್ನು ಮಾಡುತ್ತಿಲ್ಲವೆ? ನಾನು ೧೯೬೦ನೇ ಇಸವಿಯಲ್ಲಿ ತಾಲ್ಲೂಕು ಬೋರ್ಡ್ ಸದಸ್ಯನಾಗಿದ್ದೆ. ನಾನು ಮೊದಲು ಶಾಸಕನಾಗಿ ಅನಂತರ ಮಂತ್ರಿಯಾಗಿದ್ದೆ. ನೀವು ಮಾತನಾಡಿದರೆ ಅದು ಸಬ್‌ಜುಡಿಸ್ ಆಗುತ್ತದೆ ಎಂದು ನನಗೇ ಹೇಳುತ್ತಾರೆ. ನಮಗೆ ಅಲ್ಲಿ ಏನು ಪವರ್ಸ್ ಇದೆ ಎಂಬುದು ನನಗೆ ಗೊತ್ತಿರಲಿಲ್ಲ. ನಾನು ಮಾನ್ಯ ಸಚಿವರಾದ ಬಸವಲಿಂಗಪ್ಪನವರಿಗೆ ಅಪೀಲು ಕೊಟ್ಟೆ. ನಾನು ಆ ಕಮಿಟಿಯಲ್ಲಿದ್ದೆ. ಮಾನ್ಯ ನಜೀರ್‌ಸಾಬ್‌ರವರು ಯಾವ ಉದ್ದೇಶದಿಂದ ಈ ಮಸೂದೆಯನ್ನು ತಂದರೋ ಅದರ ಉದ್ದೇಶ ಸಫಲವಾಗಲಿಲ್ಲ. ಗ್ರಾಮರಾಜ್ಯವಾಗಬೇಕು, ರಾಮರಾಜ್ಯ ಆಗಬೇಕು, ಅಧಿಕಾರ ವಿಕೇಂದ್ರೀಕರಣ ಆಗಬೇಕೆಂದು ಮಾನ್ಯ ನಜೀರ್‌ಸಾಬ್‌ರವರು ಏನು ಕನಸನ್ನು ಕಂಡರೋ ಅದು ಸಫಲವಾಗಲಿಲ್ಲ. ಅವರು ಸ್ವರ್ಗದಲ್ಲಿ ಕುಳಿತುಕೊಂಡು ಇದನ್ನು ನೋಡಿ ಅಳುತ್ತಿದ್ದಾರೆ. ಇಲ್ಲಿ ನೀವು ಮಾಡಿರತಕ್ಕ ಅನ್ಯಾಯಗಳು, ನೀವು ಮಾಡಿರತಕ್ಕ ರಾಜಕೀಯ ಬಹಳ ಇದೆ. ಆಹಾರವನ್ನು ವಿತರಣೆ ಮಾಡುವುದಕ್ಕೆ ಕೊಟ್ಟರೆ ಅದನ್ನು ಮಾರಿಕೊಳ್ಳುತ್ತಿದ್ದಾರೆ....... ಈ ಜಿಲ್ಲಾಪರಿಷತ್‌ನ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಎರಡು ಮಾತಿಲ್ಲ. ಈಗ ಟು ಟೈರ್ ಸಿಸ್ಟಮ್ ಏನು ಇದೆ ಅದನ್ನು ತ್ರಿಟೈರ್ ಸಿಸ್ಟಮ್ ಮಾಡಬೇಕೆಂದು ಹೇಳುತ್ತೇನೆ. ತಾಲ್ಲೂಕು ಲೆವೆಲ್‌ನಲ್ಲಿ ತಾಲ್ಲೂಕು ಬೋರ್ಡ್ ತರಹ ಅಧಿಕಾರವಿರಬೇಕು. ಅದಕ್ಕೆ ಅಧಿಕಾರವನ್ನು ಕೊಡಬೇಕು, ಹಣವನ್ನು ಕೊಡಬೇಕು. ಏಕೆಂದರೆ ಗ್ರಾಮಗಳಿಗೆ ಹತ್ತಿರವಿರುವುದು ಮಂಡಲ್ ಪಂಚಾಯತ್‌ಗಳು, ತಾಲ್ಲೂಕ್ ಪಂಚಾಯತ್ ಸಂಸ್ಥೆಗಳೇ ಹೊರತು ಜಿಲ್ಲಾಪರಿಷತ್ ಅಲ್ಲ. ಸ್ವಾಮಿ, ಜಿಲ್ಲಾ ಪರಿಷತ್ತಿನಲ್ಲಿ ಮೀಟಿಂಗ್ ನಡೆಯುವ ದಿವಸ ನೋಡಬೇಕು. ಎಷ್ಟು ಕಾರುಗಳು ಎಷ್ಟು ಜೀಪ್‌ಗಳು ಇರುತ್ತವೆ. ಅಧ್ಯಕ್ಷರ, ಉಪಾಧ್ಯಕ್ಷರ ಪ್ರವಾಸ ಭತ್ಯ, ಅವರಿಗೆ ಕೊಟ್ಟಿರತಕ್ಕ ಹವಾ ನಿಯಂತ್ರಿತ ಕೊಠಡಿಗಳನ್ನು ನೋಡಬೇಕು. ಪ್ರವಾಸ ಭತ್ಯದಲ್ಲಿ ಒಬ್ಬರಿಗೊಬ್ಬರಿಗೆ ಸ್ಪೋರ್ಟ್ಸ್ ಕಾಂಪಿಟೇಷನ್ ಇದ್ದಹಾಗೆ ಕಾಂಪಿಟಿಷನ್. ಇದು ಲಕ್ಷಗಟ್ಟಲೆ, ಕೋಟಿಗಟ್ಟಲೆ ಆಗುತ್ತದೆ. ಅವರ ಇನ್‌ಡೈರೆಕ್ಟ್ ಬೆನಿಫಿಟ್ಸನ್ನು ಲೆಕ್ಕ ಹಾಕಿದರೆ ಒಂದು ಒಂದೂವರೆ ಕೋಟಿ ಆಗುತ್ತದೆ. ಈ ರೀತಿ ಬೆನಿಫಿಟ್ಸ್ ಮಾಡಿಕೊಂಡು ಬರೀ ರಾಜಕೀಯ ಮಾಡುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿದೆ. ಪ್ರತಿಯೊಂದು ಜಿಲ್ಲೆಯಲ್ಲಿ ಸೋಷಿಯಲ್ ಫಾರೆಸ್ಟ್ರಿಯಲ್ಲಿ ಕೋಟಿಗಟ್ಟಲೆ ಹಣವನ್ನು ಹೊಡೆದುಬಿಟ್ಟಿದ್ದಾರೆ. ಅವರು ಅಧಿಕಾರಿಗಳನ್ನು ಮಾತನಾಡಿಸುವಂತಿಲ್ಲ. ನಾನು ಒಬ್ಬ ಅಧಿಕಾರಿಯನ್ನು ಕೇಳಿದೆ, ದೇವನಹಳ್ಳಿ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ೮೦೦ ಕಾರ್ಡ್‌ಗಳನ್ನು ಕೊಟ್ಟಿರುವಲ್ಲಿ ೧೦೦ ಕಾರ್ಡ್‌ಗಳನ್ನು ಸೊಸೈಟಿಗೆ ಇಟ್ಟುಕೊಂಡು ೭೦೦ ಕಾರ್ಡ್‌ಗಳನ್ನು ಪ್ರೈವೇಟ್‌ನವರಿಗೆ ಕೊಟ್ಟುಬಿಟ್ಟಿದ್ದಾರೆ. ಇದನ್ನು ಕೇಳಿದ್ದಕ್ಕೆ, "I say, sit down, shut up" these were the words used by the Upa-Adhyaksha in the presence of the Minister Sri Azeez Sait, Who came there to review the 20 point programme. ಮಾನ್ಯ ಅಜೀಜ್‌ಸೇಟ್‌ರವರು ಆಹಾರ ವಿತರಣೆ ಸರಿಯಿಲ್ಲವೆಂದು ಹೇಳಿದರೆ ಅದಕ್ಕೆ ಒಬ್ಬರು ವಿಧಾನ ಪರಿಷತ್ ಸದಸ್ಯರು you have no right to question the propriety on policy matters ಎಂದು ಹೇಳುತ್ತಾರೆ. ನಾನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್ ವಿಚಾರ ಹೇಳುತ್ತಿದ್ದೇನೆ. ಅಲ್ಲಿ ನಿಮಗೆ ಅಧಿಕಾರವಿಲ್ಲ, ಪಾಲಿಸಿ ಮ್ಯಾಟರ್ಸ್ ಮಾತನಾಡಬೇಡಿ ಕುಳಿತುಕೊಳ್ಳಿ, ಮಂತ್ರಿಗಳೆ ಎಂದು ಒಬ್ಬ ಹೇಳಿದ. ಅದಕ್ಕೆ ನನಗೆ ಕೋಪ ಬಂತು. ಏನು ನೀನು ಮಾತನಾಡುತ್ತಿರುವುದು, ಅವರಿಗೆ ಪವರ್ಸ್ ಇಲ್ಲವೇ, ಅವರಿಗೆ ವಿತ್‌ಡ್ರಾ ಮಾಡಿಕೊಳ್ಳುವುದಕ್ಕೆ ಪವರ್ಸ್ ಇಲ್ಲವೇ, ನೀನು ಈ ರೀತಿ ಮಾತನಾಡುವುದು ಸರಿಯಲ್ಲ. ದಯುವಿಟ್ಟು ಕ್ಷಮೆ ಕೋರು ಎಂದು ಹೇಳಿದೆ. ಅನಂತರ ಅವನು ಕ್ಷಮೆ ಕೋರಿದ. ಆದರೆ

ಮಂತ್ರಿಗಳು ಬಂದಾಗ ಈ ರೀತಿ ಮಾತನಾಡಬಹುದೆ. ಒಬ್ಬ ಅಧಿಕಾರಿ ೮೦೦ ಕಾರ್ಡ್‌ಗಳು ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗೆ ಇದ್ದರೆ ಅದರಲ್ಲಿ ೧೦೦ ಕಾರ್ಡ್‌ಗಳನ್ನು ಉಳಿಸಿಕೊಂಡು ೭೦೦ ಕಾರ್ಡ್‌ಗಳನ್ನು ಇಂಡಿವಿಜುಯಲ್ಸ್‌ಗೆ ಕೊಟ್ಟುಬಿಟ್ಟರೆ ಅವರಿಗೆ ಗೈಡ್‌ಲೈನ್ಸ್ ಇಲ್ಲವೇ? They have not given to co-operative society or any organisation like womens organisations etc. ಸಂಘ ಮಾಡಿಕೊಂಡಿರುವವರಿಗೆ ಕೊಡುವುದನ್ನು ಬಿಟ್ಟು ಎಲ್ಲ ಇಂಡಿವಿಜುವಲ್‌ಗೆ ಕೊಟ್ಟಿದ್ದಾರೆ. ಪಕ್ಷ ಬೆಳೆಸುವುದಕ್ಕೆ ಕೊಟ್ಟಿದ್ದಾರೆ. ಕ್ರಿಮಿನಲ್ ಪ್ರೊಸೀಡಿಂಗ್ಸ್ ಇರುವವರಿಗೆ ಆಹಾರ ವಿತರಣೆ ಮಾಡುವುದನ್ನು ಮುಂದುವರಿಸಿದ್ದಾರೆ ಸೋಷಿಯಲ್ ಫಾರೆಸ್ಟ್ ಹಣ ಅಪವ್ಯಯವಾಗಿದೆ. ರಸ್ತೆಗಳು ಹಣವ್ಯಯ, ಜವಾಹರ್ ರೋಜ್‌ಗಾರ್ ಯೋಜನೆಯ ಲಕ್ಷಾಂತರ ರೂಪಾಯಿ ವ್ಯಯ ಇವುಗಳಿಗೆ ಕಡಿವಾಣ ಹಾಕಬೇಕಾದರೆ ಸ್ವಲ್ಪ ತಿದ್ದುಪಡಿಯನ್ನು ತರಬೇಡವೇ? ಅಧ್ಯಕ್ಷರೆ, ನಾನು ಬೇಗ ಮುಗಿಸುತ್ತೇನೆ. ನಾನು ಇದರ ಬಗ್ಗೆ ಹೇಳದಿದ್ದರೆ ಕರ್ತವ್ಯ ಲೋಪವಾಗುತ್ತದೆ. ಮೇಲಿರತಕ್ಕಂಥ ದಿವಂಗತ ನಜೀರ್‌ಸಾಬ್‌ರವರಿಗೆ ನಾನು ಶಾಂತಿಯನ್ನು ಕೋರುವುದಕ್ಕಾಗುವುದಿಲ್ಲ. ಜಿಲ್ಲಾಪರಿಷತ್ ಅಧ್ಯಕ್ಷರಿಗೆ ಚೀಫ್ ಎಕ್ಸಿಕ್ಯುಟೀವ್ ಪವರ್ಸ್ ಇದೆಯೇ? ಆದರೆ ಅವರು ಆಫೀಸರ್ಸ್‌ಗೆ ಹೇಳಬಹುದು. ಆದರೆ Officers have independent powers to take their own decisions. ಚೀಫ್ ಎಕ್ಸಿಕ್ಯುಟೀವ್ ಆಫೀಸರ್‌ನ್ನು ನಾಮಕಾವಸ್ಥೆ ನೇಮಿಸುವುದಕ್ಕಿಂತ ಅವನನ್ನು ತೆಗೆದುಬಿಡಿ, ಹೆಡ್ ಗುಮಾಸ್ತರನ್ನು ಹಾಕಿ. ವಾಟಾಳ್ ನಾಗರಾಜ್‌ರವರು ಹೇಳಿದಹಾಗೆ ಹೆಡ್ ಗುಮಾಸ್ತರನ್ನು ಹಾಕಿ, ಪಿ. ಸಿ. ಸ್ಟೇಟಸ್ ಏಕೆ ಬೇಕು. ಅವನಿಗೆ ಏನೂ ಕೆಲಸವಿಲ್ಲ. ಎಲ್ಲ ಅಧ್ಯಕ್ಷರ ಕಡೆ ಇದೆ. ಇದು ಕೈಮರ, ಸ್ಟ್ಯಾಂಡ್ ಪೋಸ್ಟ್, ಇದ್ದಹಾಗೆ, ಎಲ್ಲ ಅಧ್ಯಕ್ಷರ ಕಡೆ ಕೈ ತೋರಿಸುತ್ತಾರೆ. ಸರ್ಕಾರದಿಂದ ಟ್ರಾನ್ಸ್‌ಫರ್‌ಗಳನ್ನು ಮಾಡಿದರೆ ಅವರನ್ನು ತೆಗೆದುಕೊಳ್ಳುವುದಿಲ್ಲವೆಂದು ಮನೆಗೆ ಕಳಿಸಿದ್ದಾರೆ. ನಮ್ಮ ಆರೋಗ್ಯ ಮಂತ್ರಿಗಳು ಉತ್ತರ ಕನ್ನಡ ಜಿಲ್ಲೆಗೆ ಡಾಕ್ಟರುಗಳನ್ನು ತೆಗೆದುಕೊಂಡಿಲ್ಲ, ಅನೇಕ ಕಡೆ ತೆಗೆದುಕೊಂಡಿಲ್ಲ. ಇಂಜಿನಿಯರ್‌ಗಳನ್ನು ತೆಗೆದುಕೊಂಡಿಲ್ಲ. ಟೀಚರುಗಳನ್ನು ತಗೆದುಕೊಂಡಿಲ್ಲ. ಶಿಕ್ಷಣದ ಬಗ್ಗೆ ಭಾರಿ ರಾಜಕೀಯ. ಇದನ್ನೆಲ್ಲ ಮಾಡಿಕೊಂಡಿರುವ ಮಂಡಲ್ ಪಂಚಾಯತ್ ಮತ್ತು ಜಿಲ್ಲಾಪರಿಷತ್‌ಗಳ ಬಗ್ಗೆ ತಮ್ಮ ಅನುಭವದಲ್ಲಿ ಕೆಲವು ತಿದ್ದುಪಡಿಗಳನ್ನು ತರಬೇಕೆಂದು ಹೇಳುತ್ತೇನೆ. ಮತ್ತೆ ಕೆಲವು ಅಧಿಕಾರಗಳನ್ನು ತಾಲ್ಲೂಕು ಮಟ್ಟಕ್ಕೆ ಕೊಡೋಣ. ಅಲ್ಲಿಯೂ ನಮ್ಮವರು ಇರುತ್ತಾರೆ. ಶಾಸಕರು ಇರುತ್ತಾರೆ, ಜಿಲ್ಲಾ ಪರಿಷತ್ತಿನ ಅಧ್ಯಕ್ಷರು, ಸದಸ್ಯರು ಇರುತ್ತಾರೆ, ಮಂಡಲ ಪಂಚಾಯಿತ್ತಿಯ ಪ್ರಧಾನರು ಇರುತ್ತಾರೆ. ಇದೆಲ್ಲ ಮಾಡೋಣ ಅಂದರೆ ಆತಲೇ ನೀವು ಈ ತರಹ ಹೊರಟುಬಿಟ್ಟಿದ್ದೀರಿ. ಮಗು ಹುಟ್ಟುವುದಕ್ಕೂ ಮುಂಚೆ ಕುಲಾವಿ ಹೊಲಿಸಿಬಿಟ್ಟಿದ್ದೀರಿ, ಪಾಪ. ನಜೀರ್‌ಸಾಬ್ ಅವರು ಬರುವುದಿಲ್ಲವೆಂದರೆ ಕರೆಸೋಣ. ಅವರನ್ನು ಕೇಳೋಣ. ಸಾಕಪ್ಪ ಇವರ ಸಹವಾಸ, ಸಾಕಪ್ಪ ಇವರು ಮಾಡಿದ ಅನ್ಯಾಯಗಳು ಎಂದು ಹೇಳುತ್ತಾರೆ. ವೆಸ್ಟ್ ಬೆಂಗಾಲ್‌ನಲ್ಲಿ ರಾಜಕೀಯ ದ್ವೇಶದಿಂದ ೧೫–೨೦ ಸಾವಿರ ಜನರ ಕೊಲೆ ಆಯಿತು. ನಮ್ಮ ತಾಲ್ಲೂಕಿನ ಮಂಡಲ ಪಂಚಾಯಿತ್ತಿಯ ಪ್ರಧಾನರು ಮತ್ತು ಉಪಪ್ರಧಾನರು ಒಂದು ಓಟಿನಲ್ಲಿ ಗೆದ್ದು ಬಂದರು ಎಂದು ಇಬ್ಬರನ್ನು ಕೊಲೆ ಮಾಡಿದರು. ಮತ್ತೆ ಚುನಾವಣೆ ನಡೆಯಿತು, ಆ ಉಪಪ್ರಧಾನರ ಪತ್ನಿ ಮತ್ತು ಪ್ರಧಾನರ ತಮ್ಮನನ್ನು ಆರಿಸಿದರು. ನಮ್ಮಲ್ಲಿ ಕೊಲೆಗಳು ಆಗುವುದಿಲ್ಲವೆಂದು ಹೇಳುವುದಿಲ್ಲ. ಜಯ ಪ್ರಕಾಶ್ ನಾರಾಯಣರ ಕನಸನ್ನು ನಾನು ಮಾಡಬೇಕೆಂದೂ. ರಾಮರಾಜ್ಯ ಮಾಡಬೇಕೆಂದೂ ಹೊರಟಿರುವಾಗ ಇರತಕ್ಕ ನ್ಯೂನತೆಗಳನ್ನು ಸರಿಪಡಿಸಬೇಕು, ಇವನ್ನು ಹೀಗೇ ಬಿಟ್ಟುಕೊಂಡು ಹೋದರೆ ಏನು ಅರ್ಥ ಇದೆ ? ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗ ಇವತ್ತು administration powers ಏಕೆ ನಮ್ಮ ಚೀಫ್ ಮಿನಿಸ್ಟರ್ ಪ್ರತಿದಿನ ವಿಲೇಜ್ ಅಕೌಂಟೆಂಟ್‌ಗೆ ಆರ್ಡರ್ ಮಾಡುತ್ತಾರೇನು ರೆವ್ಯೂ ಮಾಡುತ್ತಾರೇನು ? They are confronting with the government. They are running a parallel government ; they are not running a development department. I too was a President of the Taluk Development Board. I know what was happening. It is nothing but purely politics and encouraging his henchmen in official and non-official sector. This is what is happening and I request the government through the Chair that immediately certain amendments have to be brought and it must be rectified. We cannot allow the money the power to be misused under the shelter of this decentralisation. This is what I am telling and my friends

from MES must also understand. ಈ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳನ್ನು ಕೇಂದ್ರದ ವಿ.ಪಿ. ಸಿಂಗರ ಸರ್ಕಾರದವರು ತಂದಿದ್ದಾರೆ. ಅದರಿಂದ ಎಷ್ಟು ಪ್ರಯೋಜನವಾಗಿದೆ ಎಂದು ನೀವೇ ನೋಡಬಹುದು; ಇವತ್ತಿನ ದಿವಸ ಸಿಂಪಲ್ ಮೆಜಾರಿಟಿ ಇದ್ದರೆ ಸಾಕು ಮುಖ್ಯ ಮಂತ್ರಿಗಳನ್ನು ತೆಗೆಯಬಹುದು. ಪ್ರಧಾನ ಮಂತ್ರಿಗಳನ್ನು ತೆಗೆಯಬಹುದು. ಅದೇ ರೀತಿ ಜಿಲ್ಲಾ ಪರಿಷತ್ತ್ ಲೆವಲ್‌ನಲ್ಲಾದರೂ ಸಿಂಪಲ್ ಮೆಜಾರಿಟಿಯನ್ನು ಮಾಡೋಣ. ಇಲ್ಲದಿದ್ದರೆ ಇವತ್ತಿನ ದಿವಸ ನಾಲ್ಕಾರು ಜಿಲ್ಲಾ ಪರಿಷತ್ತುಗಳು ಬಹುಮತ ಕಳೆದುಕೊಂಡು ಸುಮ್ಮನೆ ಕುಳಿತಿವೆ, ಯಾವ ಕೆಲಸವೂ ಆಗುತ್ತಿಲ್ಲ. ಸುಮ್ಮನೆ ರಾಜಕೀಯ ಮಾಡುತ್ತಿದ್ದಾರೆ. ತುಮಕೂರು ಮತ್ತು ಕೋಲಾರದಲ್ಲಿ ಸಬ್‌ಕಮಿಟಿಗಳು ಇಲ್ಲ. ನಾವು ಇಲ್ಲಿ ಎಷ್ಟು ಜನ ಇದ್ದೇವೆ, ನಾವೇನು ಅವರ ಹಾಗೆ ಗದ್ದಲ ಮಾಡುತ್ತೇವೆಯೆ? ನಿಯಮಗಳಿಗೆ ಅನುಗುಣವಾಗಿ ನಡೆದುಕೊಳ್ಳುತ್ತೇವೆ, ಅಧಿನಿಯಮಗಳನ್ನು ಮಾಡುತ್ತೇವೆ. ಆದರೆ ಅವರು ಅಲ್ಲಿ ಕುಳಿತುಕೊಂಡು ನಾನೇ ಮುಖ್ಯ ಮಂತ್ರಿ, ನನಗೆ ಚೆಕ್ ಪವರ್ ಇದೆ, ಚೆಕ್‌ಗೆ ಸೈನ್ ಮಾಡಬಹುದು. Standing Committee orders are passed and they say it has got supreme powers. They say you go to the High Court ಅಂದರೆ ಹೈಕೋರ್ಟಿಗೆ ಎಷ್ಟು ಜನ ಹೋಗುವುದಕ್ಕಾಗುತ್ತದೆ? ಅದಾಲತ್‌ಗಳನ್ನೆಲ್ಲ ಏಕೆ ಮಾಡಿದ್ದಾರೆ? ಆದುದರಿಂದ ನಾನು ಸರ್ಕಾರವನ್ನು ಅತಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಆದಷ್ಟು ಜಾಗ್ರತೆ ಏನು ಅವ್ಯವಹಾರಗಳು ನಡೆಯುತ್ತಿವೆ, ಅಧಿಕಾರ ದುರುಪಯೋಗ, ಹಣದ ದುರುಪಯೋಗ ಏನು ನಡೆಯುತ್ತಿವೆ, ಇವುಗಳಿಗೆಲ್ಲ ಕಡಿವಾಣ ಹಾಕಲೇಬೇಕು. ಇವುಗಳಿಗೆ ಕಡಿವಾಣ ಹಾಕದೇಹೋದರೆ ಖಂಡಿತವಾಗಿಯೂ ಈ ರಾಜ್ಯ ಸರ್ವಾಂಗೀಣ ಅಭಿವೃದ್ಧಿ ಆಗುವುದಿಲ್ಲ. ರಾಮರಾಜ್ಯದ ಕನಸು ಬರೀ ಕನಸಾಗಿಯೇ ಉಳಿಯುತ್ತದೆ. ಅಧಿಕಾರೇತರ ಸದಸ್ಯರೇನಿದ್ದಾರೆ ಅವರಿಗೆ ಅಧಿಕಾರ ಕೊಡಿ. ನಮಗೆ ಪವರ್ಸ್ ಕೊಡಿ, ನಮ್ಮ ನಮ್ಮ ಕ್ಷೇತ್ರದಲ್ಲಿ ನಮ್ಮ ನಮ್ಮ ಇಲಾಖೆಯನ್ನು ನಾವೇ ನಡೆಸಿಕೊಳ್ಳುತ್ತೇವೆ ಎನುತ್ತಾರೆ. I am the Chief minister of the taluk or town and I hold all the portfolios ಎಂದು ಹೇಳಿದರೆ ಏನು ಮಾಡುತ್ತೀರಿ. ಹಾಗೆ ಕಾನೂನು ಮಾಡಿದರೆ ಏನು ಮಾಡುತ್ತೀರಿ. ಹಾಗೆ ಮಾಡಿ ಇಟ್ಟಿರತಕ್ಕವು ಕೆಲವು ಇವೆ. ನಾನು ಚೀಫ್ ಮಿನಿಸ್ಟರ್ ಆಗಬೇಕೆಂದು ಹೇಳಿದೆ ಎಂದು ಯಾರೂ ತಪ್ಪು ಅರ್ಥ ಮಾಡಿಕೊಂಡು ಹೇಳಬೇಡಿ, ನಾನು ತಾಲ್ಲೂಕು ಮಟ್ಟದ ವಿಚಾರ ಹೇಳಿದೆ. ನಾನು ಹೇಳುವುದು ಏನೆಂದರೆ. ಎಲ್ಲರೂ ನಮ್ಮ ಸ್ನೇಹಿತರೆ, ಸುಳ್ಳು ಹೇಳಿದರೆ ಅವರು ಸುಮ್ಮನೆ ಬಿಡುವುದಿಲ್ಲ. ನಾನು ೨೫ ವರ್ಷ ಶಾಸಕನಾಗಿ, ಮಂತ್ರಿಯಾಗಿ ಈ ರಾಜ್ಯದ ಆಗುಹೋಗುಗಳಲ್ಲಿ ಭಾಗಿಯಾಗಿ ಎಲ್ಲವನ್ನೂ ಕಂಡಿದ್ದೇನೆ. ಆಮೇಲೆ ಕೆರೆಗಳು ಮತ್ತು ರಸ್ತೆಗಳ ಬಗ್ಗೆ ಜಿಲ್ಲಾ ಪರಿಷತ್ತಿಗೆ ಇತಿಮಿತಿ ಇರಬೇಕು. ಇಲ್ಲದೇ ಹೋದರೆ ಎಲ್ಲ ಕೆರೆಗಳ ಜವಾಬ್ದಾರಿಯನ್ನು ಅವರಿಗೇ ಬಿಟ್ಟುಬಿಟ್ಟರೆ ತೂಬು ಕಿತ್ತುಕೊಂಡು ಹೋಗಿಬಿಡುತ್ತಾರೆ, ಕಟ್ಟೆಗಳನ್ನೆಲ್ಲಾ ಕಿತ್ತುಕೊಂಡು ಹೋಗಿಬಿಡುತ್ತಾರೆ. ನನ್ನ ತಾಲ್ಲೂಕಿನ ಒಂದು ಹೋಬಳಿ ಬರಪೀಡಿತ ಪ್ರದೇಶ. ಅಲ್ಲಿ ಒಂದು ದಿವಸ ಒಂದು ಗಂಟೆ ಕಾಲದಲ್ಲಿ ಏಳು ಇಂಚು ಮಳೆಯಾಯಿತು. ೫ ಕೆರೆಗಳು ಕಿತ್ತುಕೊಂಡು ಹೋಗಿದುವು. ಇವತ್ತಿನವರೆಗೂ ತೂಬು ಇಲ್ಲ, ಕಟ್ಟೆಯಿಲ್ಲ, ಹಾಗೆಯೇ ಹರಿದುಕೊಂಡು ಹೋಗುತ್ತಿದೆ. ಈ ರೀತಿ ಆದಾಗ ಸರ್ಕಾರದ ಅಭಿವೃದ್ಧಿ ಕಾರ್ಯಗಳು ಕುಸಿಯುತ್ತಿವೆ.

ಛೇರ್ಮನ್.—ತಾವು ಮುಗಿಸಬೇಕು.

ಶ್ರೀ ಎನ್. ಚಿಕ್ಕೇಗೌಡ.—ಮುಗಿಸುತ್ತೇನೆ. ದಯವಿಟ್ಟು ಎರಡು ನಿಮಿಷ ಅವಕಾಶ ಕೊಡಿ. ನಾನು ಇಲ್ಲದೇ ಇರುವುದನ್ನು ಹೇಳಿದ್ದರೆ ಕಡತದಿಂದ ತೆಗೆಯಿರಿ. ಸಿಂಪಲ್ ಮೆಜಾರಿಟಿ ಎಗ್ಸಿಕ್ಯುಟೀಸ್ ಹೆಡ್ ಏನಿದೆ ಇದನ್ನು ತೆಗೆಯಿರಿ. ಹಿಂದೆ ಡಿಸ್ಟ್ರಿಕ್ಟ್ ಬೋರ್ಡ್ ಇತ್ತು. ಆಗ ಎಚ್.ಜಿ.ವಿ. ರೆಡ್ಡಿ ಅವರ ತಂದೆ ಗುರುವಾರೆಡ್ಡಿ ಅವರಿದ್ದರು. ಆಗ ನಾನು ಚಿಕ್ಕ ಹುಡುಗ. ನಮ್ಮ ಅಪ್ಪ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ಆಗಿದ್ದರು. ಆ ಕಾಲದಲ್ಲಿ ಅವರು ಕೆರೆಕಟ್ಟೆಗಳು, ರಸ್ತೆಗಳನ್ನು ಮಾಡಿಸುತ್ತಿದ್ದರು. ಆಗ ಈ ಆಹಾರ ವಿತರಣೆ ಸಬ್-ಜ್ಯುಡೀಸ್ ಆರ್ಡರ್ಸ್ ಸಮಸ್ಯೆ, ಯಾವ ಸಮಸ್ಯೆಯೂ ಇರಲಿಲ್ಲ. ನಾನೂ ಕೂಡ ಆಮೇಲೆ ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟ್ ಆಗಿದ್ದೆ. ಆಗ ನಾವೇನೂ ಟ್ರಾನ್ಸ್‌ಫರ್ಸ್ ಇರಲಿಲ್ಲ. ಕುಡಿಯುವ ನೀರಿಗೆ ಬಾವಿ ತೆಗೆಸುವುದು, ರಸ್ತೆ ಮಾಡಿಸುವುದು ಮಾಡುತ್ತಿದ್ದೆವು. ಅದೇರೀತಿ ಈಗಲೂ ಇವರಿಗಿರಬೇಕು. ಇಲ್ಲದೇಹೋದರೆ ಕಡಿವಾಣ ಇಲ್ಲದ ಕುದುರೆಯೋಪಾದಿಯಲ್ಲಿ ಆಗಿ ರಾಜ್ಯದ ಅಭಿವೃದ್ಧಿ ಕಾರ್ಯಗಳೆಲ್ಲಾ ಸ್ಥಗಿತವಾಗಿ ರಸ್ತೆ, ಕೆರೆಕಟ್ಟೆಗಳು ಹಾಳುಬಿದ್ದು ಹೋಗುತ್ತವೆ. ನೆಹರೂ ರೋಜ್‌ಗಾರ್ ಯೋಜನೆಯಲ್ಲಿ ೧೦ ಲಕ್ಷ ರೂಪಾಯಿಗಳನ್ನು ನೇರವಾಗಿ ರಾಜೀವ್ ಗಾಂಧಿಯವರು ಕೊಟ್ಟುಬಿಟ್ಟರು,

ಪ್ರೈಮ್ ಮಿನಿಸ್ಟರ್ ನೇರವಾಗಿ ನಮಗೆ ಕೊಟ್ಟಿದ್ದಾರೆ, ನಾವು ಏನು ಬೇಕಾದರೂ ಮಾಡಬಹುದು ಎಂದು ಮಂಡಲ ಪಂಚಾಯಿತಿ ಸೆಕ್ರೆಟರಿ, ಜೂನಿಯರ್ ಇಂಜಿನಿಯರ್, ಪ್ರಧಾನರು ಒಂದಾಗಿ ಹಗಲು ರಾತ್ರಿ ದುಡ್ಡು ಹೊಡೆದರು. ಒಂದು ಬಾಣಲಿ ಮಣ್ಣು ಹಾಕದೆ, ಒಂದು ಊರಿಗೆ ಕುಡಿಯುವ ನೀರು ಕೊಡದೆ ಹಣ ಮಜಾ ಹೊಡೆದುಬಿಟ್ಟರು. ಲಪಟಾಯಿಸಿಬಿಟ್ಟರು ಸಂಬಂಧಪಟ್ಟ ಮಂತ್ರಿಗಳು ಇಲ್ಲಿಲ್ಲ. ನಾನು ಮಂತ್ರಿಮಂಡಲದ ಸಹೋದ್ಯೋಗಿಗಳಿಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ದಯವಿಟ್ಟು ಆದಷ್ಟು ಜಾಗತ್ರೆ ಜಿಲ್ಲಾ ಪರಿಷತ್ತು ಮಂಡಲ ಪಂಚಾಯಿತಿಗಳಲ್ಲಿ ಆಗುತ್ತಿರುವ ಅಧಿಕಾರ ದುರುಪಯೋಗ, ದುರ್ವಿನಿಯೋಗವನ್ನು ಮೊಟಕು ಮಾಡುವುದಕ್ಕೆ, ಅದನ್ನು ತಪ್ಪಿಸುವುದಕ್ಕೆ ತಿದ್ದು ಪಡಿ ತಂದು ಗ್ರಾಮೀಣಾಭಿವೃದ್ಧಿಗೆ ಅನುವು ಮಾಡಿಕೊಡಬೇಕೆಂದು ಕೇಳಿಕೊಂಡು, ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ, ಈ ಬೇಡಿಕೆಗಳನ್ನು ಬೆಂಬಲಿಸುತ್ತೇನೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಧ್ಯಕ್ಷರೇ, ಒಂದು ನಿಮಿಷ. ಇವತ್ತು ಬೆಳಿಗ್ಗೆ ೯ ಘಂಟೆಗೆ ಸಭೆ ಪ್ರಾರಂಭವಾಯಿತು. ಮಾನ್ಯ ಪಾಟಾಳ್ ನಾಗರಾಜ್ ಅವರು, ಮಾನ್ಯ ಚಿಕ್ಕೇಗೌಡರು ಬಹಳ ಚೆನ್ನಾಗಿ ಗ್ರಾಮೀಣಾಭಿವೃದ್ಧಿ ಮೇಲೆ ಮಾತನಾಡಿದರು.........

ಶ್ರೀ ಪಾಟಾಳ್ ನಾಗರಾಜ್.—ಅವರು ಹೋಗಿ ಊಟ ಮಾಡಿಕೊಂಡು ಬಂದರು. ಈಗ ಹೇಳು ತ್ತಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ. ಎಲ್ಲ ವಿಷಯದ ಬಗ್ಗೆ ಅವರು ಬೆಳಕು ಚೆಲ್ಲಿದ್ದಾರೆ ಎಲ್ಲರಿಗೂ ಅಷ್ಟೆ ಅವಕಾಶ ಕೊಡಬೇಕಾಗಿದೆ. ನಮ್ಮನ್ನು ಕೈಬಿಡಬಾರದು ಎಂದು ನನ್ನ ವಿನಂತಿ,

ಛೇರ್ಮನ್.—ಶಿವರಾಮೇಗೌಡರೆ, ಇವತ್ತು ಲಂಚ್ ಬ್ರೇಕ್ ಇಲ್ಲ ಎಂದು ಬೆಳಿಗ್ಗೆಯೇ ತೀರ್ಮಾನ ವಾಗಿದೆ. ಇಲ್ಲಿ ೫೧ ಜನರ ಲಿಸ್ಟ್ ಇದೆ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶಕೊಡಬೇಕಾಗುತ್ತದೆ. ಆದ್ದರಿಂದ ಮುಂದೆ ಮಾತನಾಡುವವರೆಲ್ಲರೂ ೧೦-೧೦ ನಿಮಿಷದಲ್ಲಿ ಮುಗಿಸಬೇಕು. ಈಗ ಕೌಜಲಗಿ ಯವರು ಮಾತನಾಡಲಿ.

ಶ್ರೀ ಎಂ. ಪಿ. ವೆಂಕಟೇಶ್.—೧೦ ನಿಮಿಷ ಎಂದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ಒಂದು ವಿಚಾರ ಹೇಳಬೇಕಾಗಿದೆ. ಕೊಬ್ಬರಿ ಬೆಲೆ ನಿಗದಿ ಮಾಡುವ ಬಗ್ಗೆ ಸೋಮವಾರ ಸಭೆ ಕರೆಯುತ್ತೇನೆ ಎಂದು ಹೇಳಿದ್ದೆ. ಅದನ್ನು ತಾವು ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕು. ೧೬ನೇ ತಾರೀಖಿನ ಬದಲು ೧೭ನೇ ತಾರೀಖು ಮಂಗಳವಾರ ಮಧ್ಯಾಹ್ನದ ಮೇಲೆ ಸಭೆ ಇಟ್ಟುಕೊಂಡಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಏಕೆ? ತಾವಿರುವುದಿಲ್ಲವೇನು? ೧೭ನೇ ತಾರೀಖೇ ಇರಲಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಧ್ಯಕ್ಷರೇ, ಕುಲದೀಪ್‌ಸಿಂಗ್ ಆಯೋಗದ ವರದಿ ಮೇಲೆ ಚರ್ಚೆ ಶುರು ಆದರೆ ಎಷ್ಟು ದಿವಸ ಆಗುತ್ತದೋ ಗೊತ್ತಿಲ್ಲ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ಕುಲದೀಪ್‌ಸಿಂಗ್ ಎಂದರೆ ಎದ್ದು ನಿಂತುಕೊಂಡು ಬಿಡುತ್ತಾರಲ್ಲ, ಏತಕ್ಕೆ? ಅದರ ಬಗ್ಗೆ ಚರ್ಚೆ ಬೇಡ ಎನ್ನುತ್ತೀರಾ?

ಶ್ರೀ ಎಸ್. ಬಂಗಾರಪ್ಪ.—ಕುಲದೀಪ್‌ಸಿಂಗ್ ಆಯೋಗದ ವರದಿ ಮೇಲಿನ ಚರ್ಚೆಯಲ್ಲಿ ಎಲ್ಲರೂ ಭಾಗವಹಿಸತಕ್ಕಂಥಾದ್ದರ ಬಗ್ಗೆ ವಿಚಾರ ಮಾಡಲಿ. ಆದರೆ ಕೊಬರಿ ವಿಚಾರದಲ್ಲಿ ಎಲ್ಲರೂ ಬರುವುದಿಲ್ಲ, ಕೆಲವರು ಮಾತ್ರ ಬರಬಹುದು. ಈ ಸಭೆಯನ್ನು ಸಮ್ಮೇಳನ ಸಭಾಂಗಣದಲ್ಲಿ ಕರೆಯಲಾಗಿದೆ. ಆ ಸಭೆಯಲ್ಲಿ ಮಾನ್ಯ ಹಣಕಾಸು ಸಚಿವರು, ಸಹಕಾರಿ ಸಚಿವರು ಮತ್ತು ನಾನು ಸರ್ಕಾರದ ಪತಿಯಿಂದ ಇರುತ್ತೇವೆ. ಈ ಸಭೆಯನ್ನು ದಿನಾಂಕ ೧೭-೭-೯೧ರಂದು ಮಂಗಳವಾರ ಮಧ್ಯಾಹ್ನ ೩-೦೦ ಗಂಟೆಗೆ ಕರೆಯಲಾಗಿದೆ. ಸಂಬಂಧಪಟ್ಟವರಿಗೆ ನೋಟೀಸ್ ಬರುತ್ತದೆ. ತಾವು ದಯಮಾಡಿ ಅಲ್ಲಿಗೆ ಬರಬೇಕು.

† ಶ್ರೀ ಎಸ್. ಎಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಅಧ್ಯಕ್ಷರೆ, ನಾನು ಎಲ್ಲಾ ಇಲಾಖೆಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರ ಬಗ್ಗೆ ನಮ್ಮ ವಿರೋಧಪಕ್ಷದ ನಾಯಕರು ಹಾಗೂ ಉಪನಾಯಕರು ಎಲ್ಲ ಬೇಡಿಕೆಗಳ ಬಗ್ಗೆ ಮಾತನಾಡುವವರು ಇದ್ದಾರೆ. ನಾನು ಕೇವಲ ಒಂದು ವಿಷಯದ ಬಗ್ಗೆ ಮಾತ್ರ ತಮ್ಮ ಮುಂದೆ ಹೇಳಲಿಚ್ಛಿಸುತ್ತೇನೆ. ಇವತ್ತಿನ ದಿವಸ ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಮುಖ್ಯವಾಗಿ ಬೆಳೆಯಾಗಿ ಹತ್ತಿಯನ್ನು ಬೆಳೆಯುತ್ತೇವೆ. ಸರ್ಕಾರ ನಮಗೆ ಒದಗಿಸಿರುವ ವಾರ್ಷಿಕ ವರದಿಯಲ್ಲೂ ಕೂಡ, ಕೃಷಿ ಇಲಾಖೆಯವರು ಕೊಡಲಾಗಿರುವ ಪುಸ್ತಕದಲ್ಲೂ ಕೂಡ ಹತ್ತಿ ರಾಜ್ಯದ ಒಂದು ಪ್ರಮುಖ ವಾಣಿಜ್ಯ ಬೆಳೆ ಎಂದು ಹೇಳಿದ್ದಾರೆ. ಆ ಪ್ರಕಾರ ನಾವು ಬೆಳೆಯುತ್ತಿರುವಂತಹ ಈ ಬೆಳೆಗೆ ಯಾವ್ಯಾವ ರೀತಿ ಸವಲತ್ತುಗಳನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ರೈತರಿಗೆ ಕೊಟ್ಟಿರುವ ಬಗ್ಗೆ ಒಂದೆರಡು ಮಾತನ್ನು ಹೇಳುತ್ತಿದ್ದೇನೆ. ಇವತ್ತಿನ ದಿವಸ ರಾಷ್ಟ್ರದಲ್ಲೇ ಹೆಚ್ಚು ಹತ್ತಿಯನ್ನು ಬೆಳೆಯುವಂತಹ ಪ್ರದೇಶ ಅಂದರೆ ಕರ್ನಾಟಕ ರಾಜ್ಯ. ನಮ್ಮ ರಾಜ್ಯ ಎರಡನೆ ಸ್ಥಾನದಲ್ಲಿದೆ. ಕರ್ನಾಟಕದ ರಾಜ್ಯ ಹತ್ತಿಯನ್ನು ಬೆಳೆಯುವುದರಲ್ಲಿ ಎರಡನೇ ಸ್ಥಾನದಲ್ಲಿದ್ದರೂ ಸಹ ಈ ಬೆಳೆಯನ್ನು ಬೆಳೆಯಲು ಸರ್ಕಾರದಿಂದ ಯಾವುದೇ ರೀತಿಯ ಪ್ರೋತ್ಸಾಹ ಸಿಕ್ಕುತ್ತಿಲ್ಲವೆಂದು ಅತ್ಯಂತ ವಿಷಾದದಿಂದ ತಮ್ಮ ಮುಂದೆ ಹೇಳಬಯಸುತ್ತೇನೆ. ಮೊದಲನೆಯದಾಗಿ ಹತ್ತಿ ಬೆಳೆಗೆ ಯೋಗ್ಯವಾದ ಬೆಲೆಯನ್ನೂ ಕೂಡ ಕೊಡುತ್ತಿಲ್ಲ. ಇವತ್ತಿನ ದಿವಸ ತಾವು ನೋಡಬಹುದು. ಪ್ರತಿಯೊಂದು ಬೆಳೆಗೂ ದರವನ್ನು ನಿಗದಿ ಮಾಡಲಾಗಿದೆ. ಕಬ್ಬಿಗೆ, ರಾಗಿಗೆ, ಬತ್ತಕ್ಕೆ ಮುಂಚಿತವಾಗಿಯೇ ಬೆಲೆಯನ್ನು ನಿಗದಿ ಮಾಡುತ್ತಾರೆ. ಆದರೆ ಹತ್ತಿ ಬೆಳೆಯುವಂತಹ ರೈತನಿಗೆ ಹತ್ತಿಯನ್ನು ಬಿತ್ತುವುದಕ್ಕಿಂತ ಮೊದಲು ಸರ್ಕಾರದವರು ಮುಂದಿನ ವರ್ಷ ಯಾವ ಬೆಲೆಯನ್ನು ಕೊಡುತ್ತಾರೆಂದು ಅನೌನ್ಸ್ ಮಾಡುವುದಿಲ್ಲ. ಇದಕ್ಕೆ ಕಾರಣವೇನೆಂದರೆ, ಕೇಂದ್ರ ಸರ್ಕಾರದ ಸಿ. ಸಿ. ಐ.ನವರು ಖರೀದಿ ಮಾಡಬೇಕಾಗುತ್ತದೆ. ರಾಜ್ಯ ಸರ್ಕಾರದ ವತಿಯಿಂದ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ಹೋದ ವರ್ಷದ ಒಂದು ಉದಾಹರಣೆಯನ್ನು ಹೇಳುವುದಾದರೆ, ಬೆಳಗಾಂ ಜಿಲ್ಲೆಯಲ್ಲಿ ೧೮೦೦ ರೂಪಾಯಿಗಳಿಂದ ೨೦೦೦ ರೂಪಾಯಿಗಳವರೆಗೆ ಹತ್ತಿ ಬೆಲೆ ಇತ್ತು. ಆದರೆ ಇವತ್ತು ೩೦೦–೪೦೦ ರೂಪಾಯಿಗಳನ್ನು ಯಾರೂ ಕೊಡುವುದಕ್ಕೆ ತಯಾರಿಲ್ಲ. ಕಾರಣ, ಅದರಲ್ಲಿ ಸ್ಟೇಬಲ್ ಕಡಿಮೆ. ೨೦ ಕೌಂಟ್, ೩೦ಕೌಂಟ್ ಸ್ಟೇಬಲ್ ಕಡಿಮೆ ಇದೆ. ಆದಕಾರಣ ಇದಕ್ಕೆ ಹೊರ ದೇಶಗಳಲ್ಲಿ ಬೇಡಿಕೆ ಇಲ್ಲವೆಂದು ಹೇಳುತ್ತಾರೆ. ಇದು ನಿಜವಾಗಿಯೂ ಸಕಾರಣ ಅಲ್ಲ ಎಂದು ಹೇಳಬಹುದು. ಸಿ.ಸಿ.ಐ. ಕೇಂದ್ರ ಸರ್ಕಾರದ ಒಂದು ಸಂಸ್ಥೆ. ನಮ್ಮ ರಾಜ್ಯದಲ್ಲಿ ಅಂದರೆ ಬೆಂಗಳೂರಿನಲ್ಲಿ ಅವರ ಕಛೇರಿ ಇದೆ. ಅದರ ಮೇಲೆ ರಾಜ್ಯ ಸರ್ಕಾರದ ವತಿಯಿಂದ ಯಾವುದೇ ರೀತಿಯ ಒತ್ತಡವನ್ನು ತಂದು ಹತ್ತಿಯನ್ನು ಕೊಂಡುಕೊಳ್ಳುವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತಿಲ್ಲ. ಪ್ರತಿ ವರ್ಷ ಈ ರಾಷ್ಟ್ರಕ್ಕೆ ಬೇಕಾಗಿರುವಷ್ಟು ಹತ್ತಿಯನ್ನು ಅವರು ಪರ್ಚೇಸ್ ಮಾಡುತ್ತಿದ್ದಾರೆ. ಮೊದಲು ಆಂಧ್ರ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಹತ್ತಿಯನ್ನು ಖರೀದಿ ಮಾಡಿ ನಂತರ ನಮ್ಮ ಕರ್ನಾಟಕಕ್ಕೆ ಬರುತ್ತಾರೆ. ಕೊನೆಗೆ ನಮ್ಮ ಕರ್ನಾಟಕ ರಾಜ್ಯಕ್ಕೆ ಬಂದು ನಮಗೆ ಬೇಕಾಗಿರುವಷ್ಟು ಹತ್ತಿಯನ್ನು ನಾವು ಪರ್ಚೇಸ್ ಮಾಡಿದ್ದೇವೆ, ನಿಮ್ಮ ರಾಜ್ಯದ ಹತ್ತಿ ಬೇಕಾಗಿಲ್ಲ ಎಂದು ಹೇಳುತ್ತಾರೆ. ಹೋದ ವರ್ಷ ಇದೇ ವಿಧಾನ ಸಭೆಯಲ್ಲಿ ಆಗ ಕೃಷಿ ಮಂತ್ರಿಗಳಾಗಿದ್ದ ಶ್ರೀಮಾನ್ ರಂಗನಾಥ್‌ರವರನ್ನು ಹತ್ತಿಯ ಬಗ್ಗೆ ಕೇಳಿದಾಗ, ನಾನು ಇದರ ಬಗ್ಗೆ ಒಂದು ಮೀಟಿಂಗ್ ಕರೆದು, ಆ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳನ್ನೂ ಕರೆದು, ಆ ಭಾಗದ ಶಾಸಕರನ್ನೂ ಕರೆದು ಒಂದು ರೇಟನ್ನು ನಿಗದಿ ಮಾಡುತ್ತೇನೆಂದು ಹೇಳಿದ್ದರು. ಆದರೆ ಅವರು ಯಾವುದೇ ಒಂದು ಕ್ರಮ ತೆಗೆದು ಕೊಂಡಿಲ್ಲವೆಂದು ವಿಷಾದದಿಂದ ಹೇಳುತ್ತೇನೆ. ಇವತ್ತು ಒಂದು ಎಕರೆಯಲ್ಲಿ ಹತ್ತಿ ಬೆಳೆಯಲು ಎಷ್ಟು ಖರ್ಚು ಬರುತ್ತದೆ ಎಂಬುದನ್ನು ನೋಡಿಕೊಂಡು ಆಮೇಲೆ ಅದರ ರೇಟ್ ಫಿಕ್ಸ್ ಮಾಡಬೇಕೇ ವಿನಹ ಇವತ್ತು ಪೇಟೆಯಲ್ಲಿ ಮಾಲು ಹೆಚ್ಚು ಇದೆ ಎಂದು ಅದರ ಆಧಾರದ ಮೇಲೆ ರೇಟ್ ಫಿಕ್ಸ್ ಮಾಡಬಾರದು ಎಂದು ಹೇಳುತ್ತೇನೆ. ಇವತ್ತು ಸಿಸಿಐ ಅವರು ಖರೀದಿ ಮಾಡದೇ ಇದ್ದರೂ ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್‌ನವರು, ಸ್ಪಿನ್ನಿಂಗ್ ಮಿಲ್‌ಗಳು ಮತ್ತು ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್‌ನವರು ಎಷ್ಟು ಪರ್ಚೇಸ್ ಮಾಡುತ್ತಿದ್ದಾರೆ ?

ಶ್ರೀಮತಿ ಮೋಟಮ್ಮ.—ಅಧ್ಯಕ್ಷರೇ, ಕೋರಂ ಇಲ್ಲ.

ವೈಸ್ ಛೇರ್ಮನ್.—ಈಗ ಕೋರಂ ಇದೆ. ಅದೂ ಅಲ್ಲದೆ ಡಿಸ್ಕಷನ್‌ಗೆ ಕೋರಂ ಬೇಕಾಗಿಲ್ಲ ಎಂಬ ತೀರ್ಮಾನ ಇದೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಇವತ್ತು ನಮ್ಮ ಸರ್ಕಾರದ ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ ಇದ್ದರೂ ಯಾವುದೇ ರೀತಿಯಿಂದ ಒಳ್ಳೆಯ ಕೆಲಸ ಮಾಡುತ್ತಿಲ್ಲ ಎಂದು ವಿಷಾದದಿಂದ ತಮ್ಮ ಮುಂದೆ ಹೇಳುತ್ತಿದ್ದೇನೆ. ಇವತ್ತು ಮಹಾರಾಷ್ಟ್ರದಲ್ಲಿ ಅಲ್ಲಿನ ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದೆ. ರೈತರ ಮಾಲನ್ನು ಯೋಗ್ಯ ಬೆಲೆ ಕೊಟ್ಟು ಖರೀದಿ ಮಾಡುತ್ತಾರೆ. ಆದರೆ ನಮ್ಮಲ್ಲಿ ಏಕೆ ಆರೀತಿ ಮಾಡುತ್ತಾ ಇಲ್ಲ ಎಂದು ಹೇಳುತ್ತಿದ್ದೇನೆ, ಅದೂ ಅಲ್ಲದೆ, ನಮ್ಮ ಸರ್ಕಾರ ಕೇಂದ್ರದ ಸಿಸಿಐ ಯಲ್ಲಿ ನಮ್ಮ ಮಾಲು ಚೆನ್ನಾಗಿ ಇದೆ ನೀವು ಏಕೆ ಖರೀದಿ ಮಾಡುವುದಿಲ್ಲ ಎಂಬ ಒತ್ತಾಯವನ್ನು ಏಕೆ ತರುತ್ತಿಲ್ಲವೆಂದು ನಾನು ಕೇಳುತ್ತೇನೆ. ಹೋದ ವರ್ಷ ಮತ್ತು ಆಚೆ ವರ್ಷ ಸ್ಪಿನ್ನಿಂಗ್ ಮಿಲ್ಸ್ ಹಾನಿಯಲ್ಲಿದ್ದವು. ಸರ್ಕಾರದ ಒಂದು ಧೋರಣೆಯಿಂದ ಹೊರದೇಶಗಳಿಂದ ನೂಲಿನ ಬೇಡಿಕೆ ಬಂದಿದ್ದರಿಂದ ಇವತ್ತು ಪ್ರತಿಯೊಂದು ಸ್ಪಿನ್ನಿಂಗ್ ಮಿಲ್ ಲಾಭದಲ್ಲಿ ನಡೆಯುತ್ತಿದೆ ಎಂದು ಸಂತೋಷದಿಂದ ಹೇಳುತ್ತಿದ್ದೇನೆ. ಆದರೂ ಕೂಡಾ ಇವತ್ತಿನ ದಿವಸ ಸ್ಪಿನ್ನಿಂಗ್ ಮಿಲ್ಸ್‌ನಲ್ಲಿ ಹಣಕಾಸಿನ ತೊಂದರೆ ಇರುವುದರಿಂದ ಹತ್ತಿ ಖರೀದಿ ಮಾಡದೆ ಒಂದಷ್ಟು ಮಿಲ್‌ಗಳು ಬಂದ್ ಆಗಿವೆ. ಇವಕ್ಕೆ ಸರ್ಕಾರ ಸಹಾಯ, ಸವಲತ್ತು ಕೊಟ್ಟು ಏಕೆ ಚಾಲೂ ಮಾಡಬಾರದು ಎಂದು ಕೇಳುತ್ತೇನೆ. ಅದೂ ಅಲ್ಲದೆ, ಇವತ್ತು ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಏನಿದೆ ಇದು ಒಂದು ಒಳ್ಳೆಯ ಸಂಸ್ಥೆ. ಇದು ಎಂಪ್ಲಾಯಿಮೆಂಟ್ ಕೊಡುವ ಸಂಸ್ಥೆ, ಈ ಸಂಸ್ಥೆಗೆ ತಾವು ಸಹಾಯ ಮಾಡುವುದರ ಮೂಲಕ ಅವರೂ ಕೂಡಾ ಹತ್ತಿಯನ್ನು ಖರೀದಿ ಮಾಡುವ ಬಗ್ಗೆ ಸರ್ಕಾರ ಏಕೆ ಕಾರ್ಯಕ್ರಮ ಹಾಕಿಕೊಳ್ಳಬಾರದು ಎಂದು ನಾನು ಕೇಳುತ್ತಿದ್ದೇನೆ. ನಾವು ಹೋದ ವರ್ಷದಿಂದ ಈ ಈ ಬಗ್ಗೆ ಹೇಳುತ್ತಾ ಬಂದಿದ್ದರೂ, ಎಂಎಲ್ಎ ಗಳೆಲ್ಲಾ ಈ ಬಗ್ಗೆ ಬೆನ್ನುಹತ್ತಿದ್ದರೂ ಕೂಡಾ ಸರ್ಕಾರ ಏಕೆ ಇನ್ನೂ ಸಿಸಿಐ ಜೊತೆ ಮಾತನಾಡಿಲ್ಲವೆಂದು ಕೇಳುತ್ತೇನೆ. ಇವತ್ತು ಕೇಂದ್ರ ಹಾಗೂ ರಾಜ್ಯಗಳಲ್ಲಿ ಬೇರೆ ಬೇರೆ ಪಕ್ಷಗಳ ಆಡಳಿತ ಇರಬಹುದು. ಆದರೆ ಈ ಬಗ್ಗೆ ರಾಜ್ಯ ಸರ್ಕಾರ ತನ್ನ ಕರ್ತವ್ಯವನ್ನು ನಿಜವಾಗಿಯೂ ಮಾಡಿದೆಯೋ ಎಂಬುದನ್ನು ನೋಡಬೇಕು, ಈವತ್ತು ರಾಜ್ಯದ ಕೃಷಿ ಇಲಾಖೆ ಹತ್ತಿ ಬೆಲೆಯನ್ನು ಫಿಕ್ಸ್ ಮಾಡುವುದರಲ್ಲಿ ರೈತರಿಗೆ ಯೋಗ್ಯ ಬೆಲೆಯನ್ನು ದೊರಕಿಸಿಕೊಡುವುದರಲ್ಲಿ ಸರಿಯಾದ ರೀತಿಯಲ್ಲಿ ವ್ಯವಹರಿಸಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರ ತನ್ನ ಕಾರ್ಯದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ವಿಷಾದದಿಂದ ಹೇಳುತ್ತಿದ್ದೇನೆ ಇವತ್ತು ಮಾನ್ಯ ಕೃಷಿ ಮಂತ್ರಿಗಳು ಈ ಬಗ್ಗೆ ಗಮನ ಹರಿಸಿ ರಾಜ್ಯದಲ್ಲಿ ಈಗ ಹೇಗೆ ಕಬ್ಬಿಗೆ ಒಂದು ಬೆಲೆಯನ್ನು ಫಿಕ್ಸ್ ಮಾಡುತ್ತಾರೆ ಹಾಗೆಯೇ ಹತ್ತಿಗೂ ಒಂದು ಬೆಲೆಯನ್ನು ಫಿಕ್ಸ್ ಮಾಡಬೇಕೆಂದು ಹೇಳುತ್ತೇನೆ. ಇನ್ನು ಧಾರವಾಡ ಅಗ್ರಿಕಲ್ಚರಲ್ ಯೂನಿವರ್ಸಿಟಿ ಏನಿದೆ ಅದು ಒಂದು ಹೆಮ್ಮೆಯ ಯೂನಿವರ್ಸಿಟಿ ಇದೆ. ಈ ಯೂನಿವರ್ಸಿಟಿಗೆ ಸರ್ಕಾರ ಇನ್ನೂ ಹೆಚ್ಚಿನ ಧನಸಹಾಯ ಮಾಡಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ಯಾವುದೇ ಒಂದು ಯೂನಿವರ್ಸಿಟಿ ಬಾಲ್ಯಾವಸ್ಥೆಯಲ್ಲಿದ್ದಾಗ ಅದಕ್ಕೆ ಹಣಕಾಸಿನ ತೊಂದರೆ ಬಹಳ ಇರುತ್ತದೆ. ಏಕೆಂದರೆ, ಅದರಲ್ಲಿ ರಿಸರ್ಚ್ ಇರುತ್ತದೆ, ಟೀಚಿಂಗ್ ಇರುತ್ತದೆ. ಹೀಗೆ ಎಲ್ಲ ರೀತಿಯಿಂದಲೂ ಅನುಕೂಲ ಇರುವುದರಸಲುವಾಗಿ ಸರ್ಕಾರ ಗಮನ ಹರಿಸಿ ಹೆಚ್ಚು ಹಣದ ಸಹಾಯ ದೊರೆಯುವಂತೆ ಮಾಡಬೇಕೆಂದು ನಾನು ಕೇಳುತ್ತಿದ್ದೇನೆ. ನಿನ್ನೆ ಇದೇ ಸಭೆಯಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣ ಹೆಚ್ಚಿಗೆ ಕೊಡಬೇಕೆಂದು ಒಂದು ಪಟ್ಟಿಯನ್ನು ಓದಿದರು. ಆದರೆ ಈ ಬಗ್ಗೆ ನಾನು ಒಂದು ಮಾತನ್ನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ತಮ್ಮ ಕೃಷಿ ಇಲಾಖೆ ಮತ್ತು ಧಾರವಾಡದ ಅಗ್ರಿಕಲ್ಚ ಯೂನಿವರ್ಸಿಟಿಗೆ ಯಾವುದೇ ಒಂದು ಪೈಸೆಯನ್ನೂ ಕೊಟ್ಟಿಲ್ಲ ಎಂದು ಹೇಳಬೇಕಾಗುತ್ತದೆ.

೨.೦೦ ಪಿ.ಎಂ.

ಬೇರೆ ಬೇರೆ ಇಲಾಖೆಗಳಿಗೆ ಹಣವನ್ನು ಕೊಡುವಾಗ ನಾಲ್ಕೈದು ಕೋಟಿ ರೂಪಾಯಿಗಳನ್ನು ಅಗ್ರಿಕಲ್ಚರ್ ಸಲುವಾಗಿ ಕೊಡಬೇಕು. ಈ ಅಗ್ರಿಕಲ್ಚರ್ ಕೂಡ ಇಂಡಸ್ಟ್ರಿಯಾಗಿದೆ. ಇದಕ್ಕೆ ಹಣವನ್ನು ಕೊಟ್ಟರೆ ಏನೂ ಲಾಸ್ ಆಗುವುದಿಲ್ಲ. ಮಾನ್ಯ ಹಣಕಾಸಿನ ಸಚಿವರು ನಿನ್ನೆ ಪ್ರಕಟ ಮಾಡುವ ಕಾಲಕ್ಕೆ ಹಣವನ್ನು ಅಗ್ರಿಕಲ್ಚರ್‌ಗೆ ಕೊಡಬೇಕಾಗಿತ್ತು. ಮಾನ್ಯ ಕೃಷಿ ಸಚಿವರು. ಹಣಕಾಸಿನ ಸಚಿವರು ಮತ್ತು ಮುಖ್ಯ ಮಂತ್ರಿಗಳ ಮೇಲೆ ಹೆಚ್ಚಿನ ಒತ್ತಡ ತಂದು ಕೃಷಿ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಹಣ ಕೊಡಿಸುವುದಕ್ಕೆ ಹೆಚ್ಚಿನ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೊಂದು ವಿಷಯ, ಮೊನ್ನೆ ದಿವಸ ಅಲ್ಲಿದ್ದ ವೈಸ್‌ಚಾನ್ಸಲರ್ ಅವರನ್ನು ಸಸ್ಪೆಂಡ್ ಮಾಡಿದ್ದಾರೆ ಎನ್ನುವ ವಿಷಯವನ್ನು ಪತ್ರಿಕೆಗಳಲ್ಲಿ ಓದಿದ್ದೇನೆ. ಆದರೆ ನಿಜವಾಗಿಯೂ ಅವರು ಹೊಸ ಯೂನಿವರ್ಸಿಟಿ ಕಟ್ಟುವ ಕಾಲಕ್ಕೆ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆಂದು ನಾನು ಹೇಳುತ್ತಿದ್ದೇನೆ. ಕೆಲವು

ಅಪಾಯಿಂಟ್‌ಮೆಂಟ್ ಮಾಡುವ ಕಾಲಕ್ಕೆ ಇರೆಗ್ಯುಲಾರಿಟಿ ಆಗಿರಬಹುದು. ಒಳ್ಳೆಯ ಕೆಲಸ ಮಾಡುವ ಕಾಲಕ್ಕೆ ರಿಟೈರ್ಡ್ ಪರ್ಸನ್ಸ್ ಅಪಾಯಿಂಟ್ ಮಾಡಿದ್ದಾರೆಂದು ಗೊತ್ತಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಹಣದ ಅವ್ಯವಹಾರದ ಬಗ್ಗೆ ಸಹ ಆಪಾದನೆ ಇದೆ.

ಶ್ರೀ ಎಸ್. ಹೆಚ್. ಕೌಜಲಗಿ.—ನನಗೆ ತಿಳಿದ ಪ್ರಕಾರ ಅದು ಯಾವುದೂ ಆಗಿಲ್ಲ. ತಮ್ಮಲ್ಲಿರುವ ಮಾಹಿತಿ ಪ್ರಕಾರ ತಮ್ಮ ಮನಸ್ಸಿಗೆ ಯಾವುದು ಖಾತರಿ ಅನಿಸುತ್ತದೆ ಅದರ ಬಗ್ಗೆ ತಾವು ವಿಚಾರ ಮಾಡಿ. ಅಲ್ಲಿ ನಿಜವಾಗಿಯೂ ಅವ್ಯವಹಾರ ನಡೆದಿದ್ದರೆ ತಾವು ಯಾವುದೇ ತೀರ್ಮಾನ ತೆಗೆದುಕೊಳ್ಳುವುದರ ಬಗ್ಗೆ ನಮ್ಮದೇನು ತಕರಾರು ಇಲ್ಲ. ಪತ್ರಿಕೆಗಳಲ್ಲಿ ರಿಟೈರ್ಡ್ ಪರ್ಸನ್ಸ್ ಅಪಾಯಿಂಟ್‌ಮೆಂಟ್ ಮಾಡಿದ್ದಾರೆ. ಒಂದೇ ಕಮ್ಯುನಿಟಿಯವರನ್ನು ಅಪಾಯಿಂಟ್ ಮಾಡಿದ್ದಾರೆನ್ನುವ ವಿಚಾರವನ್ನು ಓದಿದ್ದೇನೆ. ನಿಜವಾಗಿಯೂ ಯಾವುದೇ ಒಳ್ಳೆಯ ಕೆಲಸ ಮಾಡುವ ಕಾಲಕ್ಕೆ ರೂಲ್ಸ್ ಬಿಟ್ಟು ಹೋಗುವ ಪ್ರಸಂಗ ಬರುತ್ತದೆ. ನಿಜವಾಗಿಯೂ ಒಳ್ಳೆಯ ಆಫೀಸರ್‌ಗಳನ್ನು ಅವರು ನೇಮಿಸಿದರು. ಫಾರಿನ್‌ನಲ್ಲಿ ಪರಿಣತಿಯನ್ನು ಹೊಂದಿದವರನ್ನು ಒಳ್ಳೆಯ ಉದ್ದೇಶದಿಂದ ನೇಮಿಸಿಕೊಂಡಿದ್ದಾರೆ. ಕರ್ನಾಟಕ ಅಗ್ರಿಕಲ್ಚರಲ್ ಯೂನಿವರ್ಸಿಟಿಗೆ ಒಳ್ಳೆಯ ಹೆಸರು ತರುವುದಕ್ಕೆ ಆ ರೀತಿ ಮಾಡಿದ್ದಾರೆಂದರೆ ತಪ್ಪಾಗಲಾರದು. ಅವರ ರಿಪೋರ್ಟ್ ಬಗ್ಗೆ ನಾನು ಎರಡು ಮಾತು ಹೇಳುವುದಿಲ್ಲ. If the Officer has committed really a mistake, than you can punish him. ಆದರೆ ಕೆಲವು ವೇಳೆ ರಿಪೋರ್ಟ್‌ನ ಒಂದೇ ಆಧಾರದ ಮೇಲೆ ಹೋಗುತ್ತಿರುತ್ತದೆ. I know what are the in and out. ಆದ ಕಾರಣ ದಯಮಾಡಿ ಯಾವುದೇ ಒಳ್ಳೆಯ, ಚಲೋ ಕೆಲಸ ಮಾಡುವ ಕಾಲಕ್ಕೆ ಯಾವುದಾದರೂ ಅನ್ಯಾಯವಾಗಿದ್ದರೂ ಸಹಿತ ಅದನ್ನು ಕ್ಷಮೆ ಮಾಡಬೇಕು. ಅವರಿಗೆ ಸಸ್ಪೆಂಡ್ ಏನಾಗಿದೆ ಅದನ್ನು ರಿವೋಕ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮೂರನೆಯದಾಗಿ, ಬೈಲಹೊಂಗಲ ರೆವಿನ್ಯೂ ಡಿವಿಜನ್, ಹೆಡ್‌ಕ್ವಾರ್ಟರ್ ಆಗಿದೆ. ಬೈಲಹೊಂಗಲದಲ್ಲಿ ಅಲ್ಲಿ ಅಗಲಿ ಉತ್ತಮವಾದ ೫೦ ಎಕರೆ ನೀರಾವರಿ ಭೂಮಿ ಇದೆ, ಮತ್ತು ಸಾಕಷ್ಟು ಸರ್ಕಾರಿ ಕ್ವಾರ್ಟರ್ಸ್‌ಗಳಿವೆ. ಸರ್ಕಾರ ಒಂದು ಪೈಸೆ ಸಹ ಖರ್ಚು ಇಲ್ಲದೆ ಅಗ್ರಿಕಲ್ಚರಲ್ ಡಿಪ್ಲೋಮೋ ಕಾಲೇಜು ಮಾಡುವಂತಹ ಅವಕಾಶ ಬೈಲಹೊಂಗಲದಲ್ಲಿದೆ. ಅಲ್ಲಿ ಎಲ್ಲ ಫೆಸಿಲಿಟೀಸ್ ಇದೆ ಬೈಲಹೊಂಗಲಕ್ಕೆ ಅಗ್ರಿಕಲ್ಚರ್ ಡಿಪ್ಲೋಮೋ ಕಾಲೇಜು ಕೊಡಬೇಕೆಂದು ಕೇಳುತ್ತಿದ್ದೇನೆ. ಅಲ್ಲಿ ಅಗದಿ ಜಮೀನು ಇದೆ, ತಾವು ನೋಡಿದ್ದೀರಿ. ತಾವು ಹಿಂದೆ ಅಲ್ಲಿಗೆ ಬಂದಾಗ ಏನಾದರೂ ಮಾಡುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಕೊಟ್ಟ ಆಶ್ವಾಸನೆಯನ್ನು ತಾವು ಎಂದೂ ಮೀರುವವರಲ್ಲ. ಆದಕಾರಣ ಆ ಆಶ್ವಾಸನೆಯನ್ನು ಪೂರೈಸಿಕೊಡಬೇಕು. ದೇವರು ಈಗ ಅವಕಾಶ ಕೊಟ್ಟಿದ್ದಾನೆ. ತಾವು ನಾಳೆ ರಿಪ್ಲೈ ಕೊಡುವ ಕಾಲಕ್ಕೆ ಬೈಲಹೊಂಗಲಕ್ಕೆ ಅಗ್ರಿಕಲ್ಚರಲ್ ಡಿಪ್ಲೊಮೊ ಕಾಲೇಜು ಮಂಜೂರು ಆಗಿದೆಯೆಂಬ ಸಂತೋಷದ ಸುದ್ದಿಯನ್ನು ತಮ್ಮ ರಿಪ್ಲೈನಲ್ಲಿ ಹೇಳುತ್ತೀರಿ ಎನ್ನುವ ಆಶಯವನ್ನು ಇಟ್ಟಿದ್ದೇನೆ.

ಇನ್ನು ಪ್ರವಾಸೋದ್ಯಮ ಇಲಾಖೆಯ ಬಗ್ಗೆ ಹೇಳುವುದಾದರೆ, ಶ್ರೀಕ್ಷೇತ್ರ ಸೊಗಲು ಏನಿದೆ ಅಲ್ಲಿಗೆ ಬಹಳ ಜನ ಯಾತ್ರಿಕರು ಮತ್ತು ಪ್ರವಾಸಿಗರು ಬರುತ್ತಿದ್ದಾರೆ. ಅಲ್ಲಿ ಪ್ರವಾಸೋದ್ಯಮ ಇಲಾಖೆಯವರು ೧೨–೧೫ ಲಕ್ಷರೂಪಾಯಿಗಳನ್ನು ಖರ್ಚು ಮಾಡಿ ಒಳ್ಳೆಯ ಕಟ್ಟಡಗಳನ್ನು ಕಟ್ಟಿದ್ದಾರೆ. ಅಲ್ಲಿಗೆ ಹೋಗಲಿಕ್ಕೆ ಸರಿಯಾದ ರಸ್ತೆಯಿಲ್ಲ. ಪ್ರೊಟೆಕ್ಷನ್ ವಾಲ್ ಸಹ ಇಲ್ಲ. ಇವತ್ತಿನ ದಿವಸ ಅದಕ್ಕೆ ಮೂರ್ನಾಲ್ಕು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ, ೧೨–೧೫ ಲಕ್ಷ ಖರ್ಚು ಮಾಡಿ ಕಟ್ಟಿಸಿರತಕ್ಕ ಕಟ್ಟಡಗಳು ಉಪಯೋಗಕ್ಕೆ ಬರಲಿಕ್ಕೆ ಆಗುತ್ತದೆ. ಈಗಾಗಲೇ ಅಲ್ಲಿ ೧೨–೧೫ ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗಿದೆ. ಇದರ ಜೊತೆಗೆ ಇನ್ನು ಮೂರ್ನಾಲ್ಕು ಲಕ್ಷ ರೂಪಾಯಿಗಳನ್ನು ಒಂದೇ ಸ್ಥಳದಲ್ಲಿ ಏತಕ್ಕೆ ಖರ್ಚು ಮಾಡಬೇಕೆಂದು ಹೇಳುತ್ತಿದ್ದಾರೆ. ಆಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಡುವ ಕಾಲಕ್ಕೆ ಎಂ.ಡಿ.ಗೆ ಮೂರು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಕೊಡುವುದಕ್ಕೆ ಪವರ್ಸ್ ಇಲ್ಲ ಎಂಬ ಉದ್ದೇಶದಿಂದ ಅಲ್ಲಿ ಪೀಸ್ ಪೀಸ್ ವರ್ಕ್ ಮಾಡಿರುತ್ತಾರೆ. ಈಗಾಗಲೇ ಮುಖ್ಯ ಇಂಜಿನಿಯರ್‌ರವರು ಒಂದು ಪತ್ರ ಬರೆದಿದ್ದಾರೆ. ಅಲ್ಲಿಗೆ ಪ್ರೊಟೆಕ್ಷನ್ ವಾಲ್ ಕಟ್ಟಿಸಿಕೊಡಬೇಕು, ಅಲ್ಲಿಗೆ ಹೋಗಲಿಕ್ಕೆ ರಸ್ತೆ ಮಾಡಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಶ್ರೀಕ್ಷೇತ್ರ ಸೊಗಲ ಉತ್ತರ ಕರ್ನಾಟಕ ಭಾಗದಲ್ಲಿ ಬಹಳ ಹೆಸರಾದ ಸ್ಥಳವಾಗಿದೆ. ಅಲ್ಲಿಗೆ ಬಹಳಷ್ಟು ಜನ ಪ್ರವಾಸಿಗರು ಮತ್ತು ಯಾತ್ರಿಕರು ಬರುತ್ತಾರೆ. ಅಲ್ಲಿ ಪ್ರವಾಸೋದ್ಯಮ ಇಲಾಖೆಯವರು ತೆಗೆದುಕೊಂಡ ಕೆಲಸವನ್ನು ಆದಷ್ಟು ಬೇಗನೇ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ನಾಡಿನಲ್ಲಿ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಸಲುವಾಗಿ ಒಳ್ಳೆಯ ಬೇಡಿಕೆ ಇದೆ. ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನವರು ಹಣ ಸಹಿತ ಒದಗಿಸಲಿಕ್ಕೆ ತಯಾರಿದ್ದಾರೆ. ಈಗಾಗಲೇ

ತಮ್ಮ ಬಜೆಟ್‌ನಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಶ್ರೀಕ್ಷೇತ್ರ ಸೊಗಲದಲ್ಲಿ ಡೆವಲಪ್‌ಮೆಂಟ್ ಆಫ್ ಹಾರ್ಟಿಕಲ್ಚರ್ ಸಲುವಾಗಿ ಕೊಟ್ಟಿದ್ದಾರೆ. ಈ ಹಣವನ್ನು ತಾವು ಯೋಗ್ಯವಾದ ಪ್ಲಾನ್ ಮಾಡಿಕೊಂಡು ಉಪಯೋಗ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಬೈಲಹೊಂಗಲದಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಸಮಾಧಿ ಹತ್ತಿರ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಒಳ್ಳೆಯ ಕೆಲಸ ಮಾಡಿಕೊಡಬೇಕು. ಈಗಾಗಲೇ ಅಲ್ಲಿ ಸ್ಟಾಪ್ ಇದೆ. ಆದರೆ ಯಾವುದೇ ರೀತಿಯಿಂದ ಅದು ಚೆನ್ನಾಗಿ ಡೆವಲಪ್‌ಮೆಂಟ್ ಆಗುತ್ತಿಲ್ಲ. ಅದೂ ಅಲ್ಲದೆ ಬೆಳಗಾವಿ ಜಿಲ್ಲೆಯಲ್ಲಿ ಹಾರ್ಟಿಕಲ್ಚರ್‌ಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತಿಲ್ಲ. ಇವತ್ತಿನ ದಿವಸ ಜನರಿಗೆ ಬೇಕಾಗುವಂಥ ತೆಂಗಿನ ಗಿಡಗಳು, ಹಾಗೂ ಮಾವಿನ ಗಿಡಗಳು ಯಾವುದೇ ರೀತಿಯಿಂದ ಹೆಚ್ಚಿಗೆ ಸಿಗುವುದಿಲ್ಲ. ಈಗ ಮಲಪ್ರಭಾ ಯೋಜನೆಯಿಂದ ಪ್ರತಿಯೊಬ್ಬರಿಗೂ ಹಣ್ಣು ಹಂಪಲು, ಗಿಡಗಳನ್ನು ಹಂಚಬೇಕೆಂದು ಮಾಡುತ್ತಿದ್ದಾರೆ. ಆದಕಾರಣ ಇದು ಹೆಚ್ಚು ಸಿಗುವಂತೆ ಮಾಡಬೇಂದು ಹೇಳುತ್ತೇನೆ. ಮೊದಲು ಏನು ಮಾಡುತ್ತಿದ್ದರು ಎಂದರೆ, ಬೆಂಗಳೂರು ಮತ್ತು ಬೇರೆ ಬೇರೆ ಕಡೆಗಳಿಂದ ತಂದು ಒಂದು ಸೊಸೈಟಿ ಆಫೀಸ್ ಎಂದು ಮಾಡಿಕೊಂಡು ಮಾರುತ್ತಿದ್ದರು. ಆದರೆ ಈಗ ಅದನ್ನು ನಿಲ್ಲಿಸಿದ್ದಾರೆ. ಇದರಿಂದ ಜನರಿಗೆ ಬಹಳ ಅನಾನುಕೂಲವಾಗುತ್ತಿದೆ. ಇದು ಹೆಚ್ಚಿಗೆ ಸಿಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಕೊನೆಯದಾಗಿ ನಮ್ಮ ಬೆಳಗಾವಿ ಜಿಲ್ಲೆಯಲ್ಲಿ ಈಗ ಬಟಾಟೆ ಬಹಳ ಬೆಳೆದಿದೆ. ಅಲ್ಲಿ ಕೋಲ್ಡ್ ಸ್ಟೋರೇಜ್ ಇರುವುದಿಲ್ಲ. ಅಲ್ಲಿ ಕೋಲ್ಡ್ ಸ್ಟೋರೇಜ್ ಕಟ್ಟಿಸುವಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು, ಇವತ್ತಿನ ದಿವಸ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಹದೇವ್ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಇವತ್ತಿನ ದಿವಸ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಎಲ್ಲ ಬೇಡಿಕೆಗಳನ್ನು ನಾನು ಪೂರ್ಣವಾಗಿ ಬೆಂಬಲಿಸುತ್ತಾ, ಇವತ್ತು ಏನು ನಮ್ಮ ರಾಜ್ಯದಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳನ್ನು ಬಲಪಡಿಸಬೇಕೆಂದು ಸರ್ಕಾರದಿಟ್ಟ ಹೆಜ್ಜೆಯನ್ನು ಇಟ್ಟಿದೆ. ಅದನ್ನು ನಾನು ಪೂರ್ಣವಾದ ಹೃದಯದಿಂದ ಸ್ವಾಗತಿಸುತ್ತೇನೆ, ಪ್ರಜಾಪ್ರಭುತ್ವದಲ್ಲಿ ಜನತೆಯ ಕೈಗೆ ಅಧಿಕಾರ ಕೊಟ್ಟು, ಜನಸಾಮಾನ್ಯರ ಸಮಸ್ಯೆಗಳನ್ನು ಅವರಾಗಿಯೇ ಅರಿತು ಬಗೆಹರಿಸಿಕೊಂಡು ಅಭಿವೃದ್ಧಿ ಪಥದಲ್ಲಿ ನಡೆಯಬೇಕು ಎನ್ನುವ ಉದ್ದೇಶ ಇದರಲ್ಲಿ ಇದೆ. ಈ ಉದ್ದೇಶವನ್ನು ಸಮರ್ಥಶಾಲಿಯಾಗಿ ಈಡೇರಿಸಬೇಕಾದದ್ದು ನಮ್ಮೆಲ್ಲರ ಕರ್ತವ್ಯ. ಆದರೆ ಸರ್ಕಾರದ ಉದ್ದೇಶವಾಗಲೀ ಅಥವಾ ನಮ್ಮ ಪಕ್ಷದ ಉದ್ದೇಶವಾಗಲೀ, ಪಂಚಾಯತ್‌ರಾಜ್ ಸಂಸ್ಥೆಯನ್ನು ಚೆನ್ನಾಗಿ ಬಲಪಡಿಸಬೇಕು ಎನ್ನುವುದೇ ಆಗಿದೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ನಮ್ಮ ಪಕ್ಷದ ರಾಷ್ಟ್ರ ನಾಯಕರಾದಂಥ ಶ್ರೀ ರಾಜೀವ ಗಾಂಧಿಯವರು ಪಂಚಾಯತ್ ರಾಜ್ಯ ಸಂಸ್ಥೆಯನ್ನು ಬಲಪಡಿಸಬೇಕೆಂದು ಏನು ಮಸೂದೆಯನ್ನು ತಂದು ಪಾರ್ಲಿಮೆಂಟ್ ಸದನದಲ್ಲಿ ಮಂಡಿಸಿದ್ದರೋ, ಅದೇರೀತಿ ನಿಯಮಗಳ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಸಹ ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸಬೇಕೆಂಬುದೇ ನಮ್ಮ ಉದ್ದೇಶ. ಏನು ಇವತ್ತು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳು ಕರ್ನಾಟಕದಲ್ಲಿ ಫಂಕ್ಷನ್ ಮಾಡುತ್ತಿವೆ. ಈ ಫಂಕ್ಷನಿಂಗ್‌ನ್ನು ಪುಷ್ಟೀಕರಿಸಬೇಕು, ತನ್ಮೂಲಕ ಆಡಳಿತ ಚೆನ್ನಾಗಿ ನಡೆಯಬೇಕು ಎಂಬ ಉದ್ದೇಶ ಸರ್ಕಾರಕ್ಕೂ ಇದೆ. ಆದರೆ ಸರ್ಕಾರಕ್ಕೆ ಈ ಪಂಚಾಯತ್ ರಾಜ್ ಸಂಸ್ಥೆಯನ್ನು. ಅದರ ಅಧಿಕಾರವನ್ನು ಮೊಟಕು ಮಾಡಬೇಕು ಎನ್ನುವ ಉದ್ದೇಶವಿದೆ ಎಂಬ ಸಂಶಯ ಕೆಲವರಲ್ಲಿ ಇರಬಹುದು. ಖಂಡಿತವಾಗಿಯೂ ಆ ಉದ್ದೇಶ ನಮ್ಮ ಸರ್ಕಾರಕ್ಕೆ ಇಲ್ಲ, ನಮ್ಮ ಪಕ್ಷಕ್ಕೂ ಇಲ್ಲ. ಆದರೆ ಇವತ್ತು ನಾವು ಏನು ಈ ಪಂಚಾಯತ್ ರಾಜ್ ಸಂಸ್ಥೆಯನ್ನು ಎರಡು ವರ್ಷಗಳಿಂದ ನಡೆಸಿಕೊಂಡು ಬಂದಿದ್ದೇವೆ, ಅದರಲ್ಲಿ ಏನು ಲೋಪದೋಷಗಳು ಕಂಡಿವೆ, ಅವುಗಳನ್ನು ಸರಿಪಡಿಸಬೇಕು ಮತ್ತು ಅದರಲ್ಲಿ ಜನಸಾಮಾನ್ಯರಿಗೆ ಏನು ತೊಂದರೆಯಾಗಿದೆ, ಅದರಲ್ಲಿ ಕೊಟ್ಟರತಕ್ಕಂಥ ಹಣ ಸದುಪಯೋಗ ಆಗಿದೆಯೇ ಎಂಬ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಕರ್ನಾಟಕದಲ್ಲಿ ೧೨೫೦ ಕೋಟಿ ರೂಪಾಯಿಗಳನ್ನು ಈ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕೊಟ್ಟಿದ್ದೇವೆ. ಪ್ಲಾನ್‌ನಲ್ಲಿ ೫೫೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, ನಾನ್ ಪ್ಲಾನ್‌ನಲ್ಲಿ ಏಳು ನೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದು ಸರಿಯಾಗಿ ಗ್ರಾಮೀಣ ಪ್ರದೇಶದಲ್ಲಿ ಸದುಪಯೋಗವಾಗಿದೆಯೇ ಮತ್ತು ಅಲ್ಲಿ ಜವ ಕೆಲಸ ಮಾಡುತ್ತಿದ್ದಾರೆಯೋ, ಅಲ್ಲಿ ಮಿಷನರಿ ಹೇಗೆ ನಡೆದುಕೊಳ್ಳುತ್ತಿದೆ ಮತ್ತು ಚುನಾಯಿತ ಪ್ರತಿನಿಧಿಗಳು

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅದರಲ್ಲಿ ಪಾಲ್ಗೊಂಡು ಹೇಗೆ ಕೆಲಸ ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ನಾವು ಲಕ್ಷ್ಯ ಕೊಡಬೇಕಾಗುತ್ತದೆ. ಶಾಸಕರುಗಳಿಗೆ ಅಲ್ಲಿ ಅವಕಾಶ ಇಲ್ಲ. ಅಥವಾ ಶಾಸಕರು ಹೇಳಿದಹಾಗೆ ನಡೆಯಬೇಕೆಂಬ ಉದ್ದೇಶ ನಮಗೆ ಇಲ್ಲ. ಆದರೆ ಜನ ಸಾಮಾನ್ಯರ ಕೆಲಸಗಳು ಚೆನ್ನಾಗಿ ನಡೆಯಬೇಕು. ಗ್ರಾಮೀಣಾಭಿವೃದ್ಧಿ ಕೆಲಸಗಳು ಆಗಬೇಕು ಮತ್ತು ಇಲ್ಲಿ ರಾಜಕೀಯ ಪ್ರವೇಶ ಮಾಡಬಾರದು, ಸಾರ್ವಜನಿಕವಾಗಿ ಒಳ್ಳೆಯದಾಗಬೇಕೆಂಬ ಉದ್ದೇಶ ಶಾಸಕರುಗಳಿಗೆ ಇದೆ. ಆದರೆ ಅಲ್ಲಿ ನಡೆಯತಕ್ಕ ಕೆಲವು ಅವ್ಯವಹಾರಗಳ ಬಗ್ಗೆ ನಾವು ಬೆಳಕು ಚೆಲ್ಲಿ, ಅದನ್ನು ಸರಿಪಡಿಸಬೇಕು. ಜಿಲ್ಲಾ ಪರಿಷತ್ತಿನ ಅಧಿಕಾರವನ್ನಾಗಲಿ ಅಥವಾ ಮಂಡಲ್ ಪಂಚಾಯ್ತಿ ಅಧಿಕಾರವನ್ನಾಗಲಿ ನಾವು ಸ್ಥಗಿತಗೊಳಿಸಬೇಕು ಮತ್ತು ಅವರಿಗೆ ಯಾವುದೇ ರೀತಿಯ ತೊಂದರೆ ಕೊಡಬೇಕೆಂಬ ಉದ್ದೇಶ ನಮ್ಮದಲ್ಲ. ಅದರಲ್ಲಿ ಇರತಕ್ಕ ಲೋಪದೋಷಗಳನ್ನು ತಿದ್ದಿ ಅದನ್ನು ಎತ್ತಿ ಹಿಡಿಯಬೇಕೆಂಬ ಉದ್ದೇಶ ನಮಗೆ ಇದೆ. ಇವುಗಳ ಪ್ರಾರಂಭದಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯ್ತಿಗಳು ಪ್ರಾರಂಭವಾದಾಗ ಮತ್ತು ಕ್ಷೇತ್ರ ವಿಂಗಡಣೆ ಆದಾಗ, ಪ್ರಜಾಪ್ರಭುತ್ವದಲ್ಲಿ ನಾವು ನಂಬಿಕೆ ಇಟ್ಟಿರತಕ್ಕ ಜನ, ಪ್ರಜಾಪ್ರಭುತ್ವದ ವಿಚಾರ ಚೆನ್ನಾಗಿ ನಡೆಯಬೇಕು ಎನ್ನತಕ್ಕಂಥ ಜನ, ಪ್ರಜಾ ಪ್ರಭುತ್ವಕ್ಕೆ ಬೆಲೆ ಕೊಡತಕ್ಕ ಜನ. ನಾವು ಇದರ ತಳಹದಿಯನ್ನೂ ಸ್ವಲ್ಪ ಸರಿಯಾಗಿ ವಿಚಾರ ಮಾಡಬೇಕಾಗುತ್ತದೆ. ಮಂಡಲ್ ಪಂಚಾಯ್ತಿ ಮತ್ತು ಜಿಲ್ಲಾ ಪರಿಷತ್ತುಗಳು ರಚನೆ ಆಗುವಂಥ ವೇಳೆಯಲ್ಲಿ, ಕ್ಷೇತ್ರ ವಿಂಗಡಣೆಯಲ್ಲಿ ರಾಜಕೀಯ ನಡೆದಿದೆ, ಇದನ್ನು ಮೊದಲು ಸರಿಪಡಿಸಬೇಕು. ಇದರಲ್ಲಿ ರಾಜಕೀಯ ಏಕೆ ಉಪಯೋಗಿಸುತ್ತಿದ್ದೇವೆಂದರೆ, ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯ್ತಿಯ ಉದ್ದೇಶ ಏನಿದೆ, ಆ ಉದ್ದೇಶ ನೆರವೇರಬೇಕಾದರೆ, ಈ ಸಂಸ್ಥೆಗಳು ಬಲಗೊಳ್ಳಬೇಕಾದರೆ, ಇಲ್ಲಿ ಕ್ಷೇತ್ರ ಪುನರ್ವಿಂಗಡಣೆಯಲ್ಲಿ, ಅಧಿಕಾರದ ಆಸೆಗೋಸ್ಕರ. ರಾಜಕೀಯ ಉದ್ದೇಶಕ್ಕೋಸ್ಕರ ಕ್ಷೇತ್ರಗಳ ಪುನರ್ವಿಂಗಡಣೆ ಆಗಿದೆ, ಇದು ಆಗಬಾರದಿತ್ತು. ಸರ್ಕಾರ ಯಾವ ಗೈಡ್‌ಲೈನ್ಸ್ ಹಾಕಿಕೊಂಡಿದೆ, ಯಾವ ನಿಯಮಗಳ ಅಡಿಯಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಆಗಬೇಕೆಂದು ಇದೆ. ಇದನ್ನು ಪಕ್ಷಾತೀತವಾಗಿ ರಾಜಕೀಯವನ್ನು ದೂರ ಇಟ್ಟು, ಕ್ಷೇತ್ರಗಳ ಪುನರ್ವಿಂಗಡಣೆ ಮಾಡಿದ್ದರೆ ಮಂಡಲ್ ಪಂಚಾಯ್ತಿಗಳು ಮತ್ತು ಜಿಲ್ಲಾ ಪರಿಷತ್ತುಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದವು ಎನ್ನುವ ಭಾವನೆ ನನ್ನದಾಗಿರುತ್ತದೆ. ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಈ ಕ್ಷೇತ್ರ ಪುನರ್ ವಿಂಗಡಣೆ ಮಾಡುವಂಥ ಕಾಲದಲ್ಲಿ ವೆಸ್ಟೆಡ್ ಇಂಟ್ರೆಸ್ಟ್ಸ್ ಯಾರಿದ್ದಾರೆ, ಅವರ ಕೈವಾಡ ಜಾಸ್ತಿಯಾಗಿದೆ. ಯಾರು ವೀಕರ್ ಸೆಕ್ಷನ್ಸ್ ಇದ್ದಾರೆ, ಯಾರು ಹರಿಜನರು ಇದ್ದಾರೆ, ಯಾರು ದುರ್ಬಲ ವರ್ಗದ ಜನ ಇದ್ದಾರೆ, ಯಾವ ಜನಾಂಗಕ್ಕೆ ಪ್ರಾತಿನಿಧ್ಯ, ಅವಕಾಶ ಇಲ್ಲವೋ ಅಂತಹ ಕಡೆ, ನಿಜವಾದಂಥ ಒಂದು ಕ್ಷೇತ್ರ ವಿಂಗಡಣೆ ಆಗಿಲ್ಲ. ಇದರ ಬಗ್ಗೆ ನಾನು ನೇರವಾಗಿ ಸರ್ಕಾರದ ಗಮನ ಸೆಳೆಯುತ್ತೇನೆ. ಕ್ಷೇತ್ರ ವಿಂಗಡಣೆ ಮಾಡತಕ್ಕ ಕಾಲದಲ್ಲಿ ಮಹಿಳೆಯರು ಜಾಸ್ತಿ ಇರುವ ಕಡೆ ಮಹಿಳೆಯರ ರಿಸರ್ವೇಷನ್ ಮಾಡಿಲ್ಲ, ಎಲ್ಲೆಲ್ಲಿ ವೀಕರ್ ಸೆಕ್ಷನ್ ಬರುತ್ತಾರೆ, ಅಂತಹ ಕಡೆ ಸರಿಯಾಗಿ ಕ್ಷೇತ್ರ ವಿಂಗಡಣೆ ಆಗಿಲ್ಲ. ಮುಖ್ಯವಾಗಿ ಎಲ್ಲಿ ಕಾನೂನಿನ ನಿಯಮಗಳ ಪ್ರಕಾರ ವಿಂಗಡಣೆ ಆಗಬೇಕಾಗಿತ್ತೋ ಅದು ಅಲ್ಲಿ ಆಗಿಲ್ಲ. ಇಂತಹ ಲೋಪದೋಷಗಳು ಅಲ್ಲಿಂದ ಪ್ರಾರಂಭವಾಗಿದೆ. ಇದು ಮಂಡಲದ ಪರಿಸ್ಥಿತಿ. ಬೇಸಿಕ್ ಆಗಿ ಈ ವಿಚಾರವನ್ನು ನಾನು ಸರಕಾರದ ಗಮನಕ್ಕೆ ಏಕೆ ತರುತ್ತಿದ್ದೇನೆಂದರೆ, ಈ ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯತಿಗಳನ್ನು ನಾವು ಪ್ರಬಲ ಮಾಡಬೇಕೆಂಬ ಉದ್ದೇಶದಿಂದ ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಮೊದಲೇ ಸ್ಪಷ್ಟಪಡಿಸಿದ್ದೇನೆ. ಮತ್ತೆ ಮಂಡಲಗಳನ್ನು ಫಾರ್ಮೇಷನ್ ಮಾಡತಕ್ಕ ವೇಳೆಯಲ್ಲಿ ಅದ ರಾಜಕೀಯದಿಂದ ಕೂಡಿದೆ. ಇವರಿಗೆ ಯಾವ ಗ್ರಾಮಗಳಿಂದ ಅನುಕೂಲವಾಗುತ್ತದೋ ಆ ಗ್ರಾಮಗಳನ್ನು ಸೇರಿಸಿಕೊಂಡಿದ್ದಾರೆ. ಯಾರು ಯಾರು ಇದ್ದಾರೆ ಇವರ ಒಂದು ರಾಜಕಾರಣಕ್ಕೆ ಯಾವುದು ಅನುಕೂಲವಾಗುತ್ತದೆ ಅಂತಹ ಗ್ರಾಮಗಳನ್ನು, ಅಂತಹ ಏರಿಯಾಗಳನ್ನು ಸೇರಿಸಿಕೊಂಡು ಮಂಡಲಗಳನ್ನು ರಚನೆ ಮಾಡಿದ್ದಾರೆ. ಇಲ್ಲಿ ಲೋಪದೋಷ ಇದೆ. ಎಲ್ಲಿ ಯೋಗ್ಯರು, ಒಳ್ಳೆಯವರು, ಬಡವರು, ಹರಿಜನರು, ದುರ್ಬಲ ವರ್ಗದವರುಗಳು ಎಲ್ಲಾ ಪ್ರಾತಿನಿಧ್ಯ ಪಡೆಯಬೇಕಾಗಿತ್ತೋ ಅದನ್ನು ಪಡೆಯುವುದಕ್ಕೆ ಅವಕಾಶವಾಗುತ್ತಿಲ್ಲ. ಅಲ್ಲಿ ರಾಜಕೀಯ ಪ್ರವೇಶ ಮಾಡಿ ವೆಸ್ಟೆಡ್ ಇಂಟರೆಸ್ಟ್ ಜನಕ್ಕೆ ಅನುಕೂಲ ಆಗುವ ಮಟ್ಟದಲ್ಲಿ ಮಂಡಲಗಳು ರಚನೆಯಾಗಿವೆ. ಇದರಲ್ಲಿ ಅನ್ಯಾಯವಾಗಿದೆ. ಪ್ರಭಾವಶಾಲಿಗಳು ಮಂಡಲಕ್ಕೆ ಆಯ್ಕೆಯಾಗಿ ಬಂದಿದ್ದಾರೆ. ಏತಕ್ಕೆಂದರೆ, ಅವರಿಗೆ ಏರಿಯಾ ಅನುಕೂಲವಾಗಿದೆ. ಮತ್ತು ಊರುಗಳು ಅನುಕೂಲವಾಗಿವೆ. ಬೇರೆಯವರು ಅವರ ಜೊತೆಯಲ್ಲಿ ಕಾಂಪಿಟ್ ಮಾಡುವುದಕ್ಕೆ ಆಗುವುದಿಲ್ಲ. ಇಂತಹ ವಿಶೇಷ ಪರಿಸ್ಥಿತಿಯಲ್ಲಿ ಮಂಡಲಗಳು ರಚನೆಯಾದವು. ಈ ರೀತಿ ರಚನೆಯಾದ ಮೇಲೆ ವೆಸ್ಟೆಡ್ ಇಂಟರೆಸ್ಟ್ ಜನ ಅಲ್ಲಿ ಜಾಸ್ತಿ ಬರುವುದಕ್ಕೆ ಅವಕಾಶವಾಯಿತು. ಮಂಡಲಗಳು ಪಟ್ಟಭದ್ರ ಹಿತಗಳ ಕೈಯಲ್ಲಿ ಸೇರುವುದಕ್ಕೆ ಅನುಕೂಲ

ವಾಯಿತು. ಮತ್ತೆ ಎರಡನೆಯ ಸ್ಟೇಜ್ ಜಿಲ್ಲಾ ಪರಿಷತ್‌ನದು. ಜಿಲ್ಲಾ ಪರಿಷತ್‌ನಲ್ಲಿ ಒಂದೊಂದು ತಾಲ್ಲೂಕಿನಲ್ಲಿ ೬-೭ ಜನಕ್ಕೆ ಆಯಾ ತಾಲ್ಲೂಕುಗಳ ಜನಸಂಖ್ಯೆಗನುಗುಣವಾಗಿ ಪ್ರಾತಿನಿಧ್ಯ ಕೊಟ್ಟಿದ್ದಾರೆ. ನನ್ನ ದೃಷ್ಟಿಯಲ್ಲಿ ೬-೭ ಜನ ಬರುವ ಅವಶ್ಯಕತೆ ಇರಲಿಲ್ಲ. ೧೦ ಸಾವಿರ ಜನಕ್ಕೆ ಒಬ್ಬ ಪ್ರತಿನಿಧಿ ಎಂದು ಹೇಳಿದ್ದಾರೆ. ದಿವಂಗತ ನಜೀರ್ ಸಾಹೇಬರೂ ನಾನೂ ಬಹಳ ಸ್ನೇಹಿತರು. ಬೇಡ, ಇದು ವ್ಯತ್ಯಾಸ ಆಗುತ್ತದೆ. ಈ ಸಂಖ್ಯೆ ಜಾಸ್ತಿ ಮಾಡಿ ಎಂದು ನಾನು ಅವರ ಹತ್ತಿರ ಹೇಳಿದ್ದೆ. ಅವರು ಈ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಇರಿ ಎಂದು ಹೇಳಿದ್ದರು. ನಾನು ಬೇಡ, ಬೇರೆ ತರಹ ಒಳ್ಳೆಯ ಸಲಹೆ ಕೊಡುತ್ತೇನೆ ಎಂದು ಹೇಳಿದೆ. ನೀವು ಏನು ಬೇಕೋ ಮಾಡಿ ಎಂದು ಹೇಳಿದೆ. ಒಂದೊಂದು ತಾಲ್ಲೂಕಿಗೆ ೬-೭ ಜನರನ್ನು ಜಿಲ್ಲೆಯ ಪ್ರತಿನಿಧಿಗಳನ್ನಾಗಿ ಮಾಡಿದ್ದಾರೆ. ೧೧-೧೨-೧೩ ಸಾವಿರಕ್ಕೆ ಒಬ್ಬರಂತೆ ಮಾಡಿದ್ದಾರೆ. ಇದು ಸರಿಯಲ್ಲ. ಮಂಡಲ್ ಪ್ರಧಾನರಿದ್ದಾರೆ, ಮಂಡಲ್ ಸದಸ್ಯರಿದ್ದಾರೆ, ಶಾಸಕರುಗಳು ಇದ್ದಾರೆ. ಇಷ್ಟೆಲ್ಲಾ ಇದ್ದು, ೧೦ ಸಾವಿರಕ್ಕೆ ಒಬ್ಬ ಜಿಲ್ಲಾ ಪರಿಷತ್ ಸದಸ್ಯರನ್ನು ಮಾಡುವ ಅವಶ್ಯಕತೆ ಏನಿತ್ತು? ಇದು ಸರಿಯಲ್ಲ. ಬೇಕಾಗಿದ್ದರೆ ೨೫ ಸಾವಿರ ಅಥವಾ ೫೦ ಸಾವಿರ ಜನಕ್ಕೆ ಒಬ್ಬರನ್ನು ಮಾಡಬಹುದಾಗಿತ್ತು. ಒಂದು ತಾಲ್ಲೂಕಿಗೆ ಇಬ್ಬರು ಸದಸ್ಯರನ್ನು ಕೊಟ್ಟಿದ್ದರೆ. ಇಡೀ ಜಿಲ್ಲೆಯಲ್ಲಿ ಒಂದು ಚೊಕ್ಕಟವಾದ ಬಾಡಿ ಆಗುವುದಕ್ಕೆ ಅನುಕೂಲವಾಗುತ್ತಿತ್ತು, ಸಹಾಯವಾಗುತ್ತಿತ್ತು. ಇದರಿಂದ ಏನಾಗಿದೆ ಎಂದರೆ, ರಾಜಕೀಯವಾಗಿ ಒಬ್ಬರಿಗೊಬ್ಬರಿಗೆ ವೈಷಮ್ಯ, ತಿಕ್ಕಾಟ, ಅಧಿಕಾರಕ್ಕೋಸ್ಕರ ಕಚ್ಚಾಟ, ಇವು ಮಂಡಲಗಳ ಮೇಲೆ, ಜಿಲ್ಲಾ ಪರಿಷತ್‌ಗಳ ಮೇಲೆ ಬೆಳೆದು ಬೇರೆ ವಿಚಾರಕ್ಕೆ ಹೋಗಿದೆ. ಇದನ್ನು ತಾವು ಸರಿಪಡಿಸಬೇಕು.

ಜಿಲ್ಲಾ ಪರಿಷತ್ತಿನ ಆಡಳಿತ ವೈಖರಿ ಬಗ್ಗೆ ಹೇಳುವುದಾದರೆ, ನಾನು ಅದನ್ನು ಟೀಕಿಸುತ್ತಿಲ್ಲ. ಅವರಿಗೆ ತಾವು ಏನೊಂದು ಅಧಿಕಾರ ಕೊಟ್ಟಿದ್ದೀರಿ, ಆ ಅಧಿಕಾರವನ್ನು ಅವರು ಸರಿಯಾಗಿ ನಿರ್ವಹಣೆ ಮಾಡದಿದ್ದರೆ, ಆ ಅಧಿಕಾರವನ್ನು ಅವರು ಸರಿಯಾಗಿ ಉಪಯೋಗಿಸಿಕೊಳ್ಳದಿದ್ದರೆ, ಅವರು ಆ ಅಧಿಕಾರವನ್ನು ಸರಿಯಾಗಿ ಸಮರ್ಥನೆ ಮಾಡಿಕೊಂಡು ಕೆಲಸ ಮಾಡುವುದಕ್ಕೆ ಆಗದಿದ್ದರೆ ಸರ್ಕಾರದವರು ಆ ಅಧಿಕಾರವನ್ನು ವಾಪಸ್ ಪಡೆಯಬೇಕಾಗುತ್ತದೆ. ಅವರಿಗೆ ತಾವು ಕೆಲಸ ರಸ್ತೆ ಕಾಮಗಾರಿಗಳನ್ನು ಕೊಟ್ಟಿದ್ದೀರಿ. ಇವತ್ತು ರಸ್ತೆಗಳ ಪರಿಸ್ಥಿತಿ ಏನಾಗಿದೆಯೆಂದರೆ, ರಸ್ತೆಗಳೆಲ್ಲಾ ಹದಗೆಟ್ಟು ಹೋಗಿವೆ. ಒಂದು ರಸ್ತೆ ರಿಪೇರಿ ಮಾಡುವುದಕ್ಕೂ ಅವರಲ್ಲಿ ಹಣ ಇಲ್ಲ, ಅಲ್ಲಿ ಒಂದು ಸ್ಥಾಯಿ ಸಮಿತಿ ಎಂದು ಮಾಡಿಕೊಂಡಿದ್ದಾರೆ. ಆ ಸ್ಥಾಯಿ ಸಮಿತಿಯಲ್ಲಿ ಸುಮಾರು ೪-೫ ಜನ ಸದಸ್ಯರು ಇರುತ್ತಾರೆ. ಆ ಸ್ಥಾಯಿ ಸಮಿತಿ ಸದಸ್ಯರಿಗೆ ಯಾವ ರಸ್ತೆಗಳು ಬೇಕೋ ಆ ರಸ್ತೆಗಳಿಗೆ ಅವರು ಅಪ್ರೂವಲ್ ಮಾಡಿಸಿಕೊಂಡು ಇಷ್ಟು ಕಡೆ ಮಾತ್ರ ನಾವು ರಸ್ತೆಗಳ ಕೆಲಸಗಳನ್ನು ಮಾಡುತ್ತೇವೆ, ಬೇರೆ ಕಡೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ ನೋಡಪ್ಪ, ಶಾಸಕರ ಕ್ಷೇತ್ರದ ವಿಸ್ತಾರ ಜಾಸ್ತಿ ಇರುತ್ತದೆ, ನಾವು ಕ್ಷೇತ್ರದಲ್ಲಿ ಪ್ರವಾಸ ಹೋದಾಗ ಜನ ನಮ್ಮನ್ನು ಕೇಳುತ್ತಾರೆ, ಏನು ಸ್ವಾಮಿ, ನಮ್ಮ ಹಳ್ಳಿಯಲ್ಲಿ ರಸ್ತೆಗಳೆಲ್ಲ ಅಸ್ತವ್ಯಸ್ಥವಾಗಿವೆ, ನೀವು ಶಾಸಕರಾಗಿದ್ದೀರಿ...

ಛೇರ್ಮನ್.—ತಾವು ಬೇಗ ಮುಗಿಸಿ.

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ, ಏನು ಇವತ್ತು ಸುಮಾರು ೭-೮ ಡಿಮ್ಯಾಂಡ್ಸ್ ಇವೆ. ಒಂದೊಂದು ಡಿಮ್ಯಾಂಡ್‌ಗೆ ೩ ನಿಮಿಷ ಕೊಟ್ಟರೂ ಸಮಯ ಸಾಕಾಗುವುದಿಲ್ಲ. ನೀವು ಈ ರೀತಿ ಟೈಮ್ ರಿಸ್ಟ್ರಿಕ್ಷನ್ ಮಾಡಿದರೆ ನಾನು ನನ್ನ ಭಾಷಣವನ್ನು ಮೊಟಕು ಮಾಡಿ ಏನೋ ಒಂದು ಚುಟುಕು ಹೇಳಿ ಮುಂದೆ ಹೋಗುತ್ತೇನೆ...

ಛೇರ್ಮನ್.—ನೀವು ಮಾತನಾಡಲು ಶುರು ಮಾಡಿ ೧೫ ನಿಮಿಷ ಆಯಿತು.

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರಕ್ಕೆ ಕಾಂಕ್ರೀಟ್ ಪ್ರೊಪೋಜಲ್ಸ್ ಕೊಡುತ್ತಿದ್ದೇನೆ. ಆಸಕ್ತಿ ಇದ್ದರೆ ಸರ್ಕಾರ ಕೇಳಲಿ, ಬೇಡ ಎಂದರೆ ಏನೋ ಒಂದು ಚುಟು ಹೇಳಿ ಮುಂದೆ ಹೋಗುತ್ತೇನೆ. ರಸ್ತೆಗಳು ಇವತ್ತು ಎಲ್ಲಾ ಕಡೆ ಕೆಟ್ಟು ಹೋಗಿವೆ. ರಸ್ತೆಗಳ ರಿಪೇರಿ ಮಾಡಿಕೊಡಿ ಎಂದು ನಾವು ಜಿಲ್ಲಾಪರಿಷತ್ತಿನ ಅಧ್ಯಕ್ಷರನ್ನು ಕೇಳಿದರೆ, ಅವರು ನಾನೇನು ಮಾಡಲಿ, ಸ್ಥಾಯಿ ಸಮಿತಿಯವರು ಯಾವ ಯಾವ ರಸ್ತೆ ರಿಪೇರಿ ಕೆಲಸ ತೆಗೆದುಕೊಳ್ಳುತ್ತಾರೋ ಅದು ಅವರಿಗೆ ಬಿಟ್ಟಿದ್ದು, ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಸ್ಥಾಯಿ ಸಮಿತಿಯವರನ್ನು ಕೇಳಿದರೆ ನಮಗೆ ಏನೂ ಅಧಿಕಾರ ಇಲ್ಲ, ಎಲ್ಲಾ ಅಧಿಕಾರ ಅಧ್ಯಕ್ಷರಿಗೆ ಬಿಟ್ಟಿದ್ದು, ಅವರು ಹೇಳಿದ ಕೆಲಸ ನಾವು ಮಾಡುವುದು ಎಂದು ಹೇಳುತ್ತಾರೆ. ಹೀಗಾಗಿ ಜಿಲ್ಲಾ ಪರಿಷತ್ತಿನವರಿಗೆ ರಸ್ತೆ ರಿಪೇರಿ ಕೆಲಸ ಮಾಡುವುದಕ್ಕೂ ಶಕ್ತಿ ಇಲ್ಲ. ಇನ್ನು ನಾನು ಈ ವರ್ಗಾವರ್ಗಿಗಳ ಬಗ್ಗೆ ಹೇಳುವ

ದಾದರೆ, ನಾವು ಕೆಲವು ವರ್ಗಾವರ್ಗಿಗಳನ್ನು ಮಾಡಲು ಜಿಲ್ಲಾ ಪರಿಷತ್ತಿನವರಿಗೆ ಅಧಿಕಾರ ಕೊಟ್ಟಿದ್ದೇವೆ. ಈ ವರ್ಗಾವರ್ಗಿಗಳಲ್ಲಿ ಏನು ಮಾಡಿದ್ದಾರೆ ಎಂದರೆ, ಇದರಲ್ಲಿ ನನಗೇನೂ ಇಂಟ್ರೆಸ್ಟ್ ಇಲ್ಲ. ಯಾರೇ ಆಗಲಿ ಒಳ್ಳೆಯ ಅಧಿಕಾರಿಗಳು ಇರಬೇಕು ಎನ್ನುವುದು ನಮ್ಮ ಉದ್ದೇಶವೇ ಹೊರತು ಬೇರೇನೂ ಇಲ್ಲ. ಈ ವರ್ಗಾವರ್ಗಿಗಳನ್ನು ಮಾಡಲು ವಿದ್ಯಾ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ಕೆಲವನ್ನು ಕೊಟ್ಟಿದ್ದೀರಿ. ವಿದ್ಯಾ ಇಲಾಖೆಯಲ್ಲಿರುವಂತಹ ಮೇಷ್ಟರುಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಮತ್ತೆ ನಾವು ಇಂತಹ ಮೇಷ್ಟರು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳಿದರೆ ಅವರನ್ನು ವರ್ಗ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲ. ಒಂದು ವೇಳೆ ವರ್ಗ ಮಾಡಿ ಕಳಿಸಿದರೂ ಜಿಲ್ಲಾ ಪರಿಷತ್ತಿನವರು ಆ ಮೇಸ್ಟರ್‌ನ್ನು ರಿಲೀವ್ ಮಾಡುವುದಿಲ್ಲ ಎಂದು ಹೇಳುತ್ತಾರೆ, ಹೀಗಾಗಿ ಮೇಸ್ಟರ್‌ಗಳು ಆಗಲಿ, ಡಾಕ್ಟರ್ಸ್ ಆಗಲಿ ಇಂಜನೀಯರ್ಸ್ ಆಗಲಿ ಇವರ್ಯಾರಿಗೂ ಭಯ ಇಲ್ಲ. ಅವರ ಮೇಲಾಧಿಕಾರಿಗಳು ಬಂದರೂ ಸಹ ಅವರಿಗೆ ಭಯ ಇರುವುದಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ಡಿ. ಡಿ. ಪಿ. ಐ. ಇದ್ದಾರೆ. ಅವರ ಒಂದು ಕಂಟ್ರೋಲ್ ಮೇಸ್ಟರ್‌ಗಳ ಮೇಲೆ ಇಲ್ಲ, ಇಂಜಿನೀಯರ್ಸ್‌ಗೆ ಇಲ್ಲ. ಜಿಲ್ಲಾ ಪರಿಷತ್ತಿನಲ್ಲಿ ಈ ಮೇಸ್ಟರ್‌ಗಳಿಗೆ ಒಂದೆರಡು ಜನ ಮೆಂಬರ್ಸ್ ಗೊತ್ತಿದ್ದರೆ ಸಾಕು. ಶಾಲೆಗಳಿಗೆ ಡಿ. ಡಿ. ಪಿ. ಐ. ಆಗಲಿ, ಯಾರೇ ಆಗಲಿ ಹೋಗಿ ಇನ್ಸ್‌ಪೆಕ್ಷನ್ ಮಾಡಿದರೆ ಏನೂ ಭಯ ಇಲ್ಲ. ಈ ರೀತಿ ಆದರೆ ಹೇಗೆ? ಒಂದು ವೇಳೆ ಹೆಚ್ಚು ಅಂದ್ರೆ ಈ ಡಿ. ಡಿ. ಪಿ. ಐ. ಏನು ಮಾಡಬಹುದು. ಇವರನ್ನು ಸಸ್‌ಪೆಂಡ್ ಮಾಡಿ ಎಂದು ಜಿಲ್ಲಾ ಪರಿಷತ್ತಿಗೆ ಬರೆಯಬಹುದು. ಜಿಲ್ಲಾ ಪರಿಷತ್ತಿನಲ್ಲಿ ಆ ಮೇಸ್ಟರ್ ೩-೪ ಜನ ಮೆಂಬರ್ಸ್‌ನ್ನು ಹಿಡಿದುಕೊಂಡಿರುತ್ತಾನೆ. ಆಗ ಆ ಮೇಸ್ಟರನ್ನು ಏನೂ ಮಾಡುವುದಕ್ಕೂ ಸಾಧ್ಯವಿಲ್ಲ. ಈ ರೀತಿ ಆದರೆ ಡಿಪಾರ್ಟ್‌ಮೆಂಟ್‌ಗೆ ಏನೂ ಹೋಲ್ಡ್ ಇರುವುದಿಲ್ಲ. ನಾವು ಇಲ್ಲಿ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ಗೆ ಹೇಳಿದರೂ ಕೂಡ, ನಾವು ಜಿಲ್ಲಾ ಪರಿಷತ್ತನ್ನು ರಿಕ್ವೆಸ್ಟ್ ಮಾಡುತ್ತೇವೆ ಎಂದು ನಮಗೆ ಹೇಳುತ್ತಾರೆ ನಾನು ಒಂದು ಉದಾಹರಣೆ ಹೇಳುತ್ತೇನೆ. ಜಿಲ್ಲಾ ಪರಿಷತ್ತಿನಲ್ಲಿ ಒಬ್ಬ ಇಂಜಿನಿಯರ್ ಅನ್ನು ನಾಲ್ಕು ಸಾರಿ ಟ್ರಾನ್ಸ್‌ಫರ್ ಮಾಡಿದ್ದಾರೆ. ನಾಲ್ಕು ಸಾರಿಯೂ ರೀ ಟೈನ್ ಮಾಡಿಸಿಕೊಂಡು ಆತ ಬಂದಿದ್ದಾನೆ. ಈ ರೀತಿ ಆದರೆ ಹೇಗೆ? ಆದ್ದರಿಂದ ನನ್ನದೊಂದು ಸಲಹೆ ಏನೆಂದರೆ, ಇಲ್ಲಿ ಅಧಿಕಾರ ದುರುಪಯೋಗವಾಗುತ್ತಿದೆ. ಆದ್ದರಿಂದ ಅವರಿಗೆ ಕೊಟ್ಟಿರುವ ಅಧಿಕಾರವನ್ನು ಸರ್ಕಾರ ವಾಪಸ್ ತೆಗೆದುಕೊಳ್ಳಿ. ಇನ್ನು ನಾನು ಫುಡ್ ಗ್ರೈನ್ಸ್ ಬಗ್ಗೆ ಹೇಳುವುದಾದರೆ ಈ ಫುಡ್ ಗ್ರೈನ್ಸ್ ಡಿಸ್ಟ್ರಿಬ್ಯೂಷನ್‌ನಿಂದ ಫೇರ್ ಪ್ರೈಜ್ ಶಾಪ್‌ಗಳಲ್ಲಿ ದುಡಿಮೆ ಇಲ್ಲದೆ ಹಣ ಸಂಪಾದನೆಯಾಗುತ್ತಿದೆ. ಸರ್ಕಾರ ಸದುದ್ದೇಶವಿಟ್ಟುಕೊಂಡು ಫೇರ್‌ಪ್ರೈಜ್ ಶಾಪ್‌ಗಳಲ್ಲಿ ಶ್ರೀಸಾಮಾನ್ಯ ಮನುಷ್ಯನಿಗೆ ಸರಿಯಾದ ಆಹಾರ ಪದಾರ್ಥಗಳ ವಿತರಣೆ ಆಗಬೇಕೆನ್ನುವ ಉದ್ದೇಶದಿಂದ ಇದನ್ನು ಮಾಡಿದೆ. ಆ ಉದ್ದೇಶ ಇವತ್ತು ಎಷ್ಟರ ಮಟ್ಟಿಗೆ ಈಡೇರಿದೆ? ಫೇರ್ ಪ್ರೈಜ್ ಷಾಪ್‌ಗಳಲ್ಲಿ ಆಹಾರ ಪದಾರ್ಥಗಳ ವಿತರಣೆಯಲ್ಲಿ ದುರುಪಯೋಗವಾಗುತ್ತಿದೆ. ಅವರು ಬಂಡವಾಳವನ್ನು ಮಾಡಿಕೊಂಡಿದ್ದಾರೆ. ಒಬ್ಬೊಬ್ಬರಿಗೆ ತಿಂಗಳಿಗೆ ಎರಡು ಸಾವಿರ, ಮೂರು ಸಾವಿರ ರೂಪಾಯಿಗಳು ಸಂಪಾದನೆಯಾದರೆ ಸಾಕು. ಇವರುಗಳ ಮೇಲೆ ಜಿಲ್ಲಾ ಪರಿಷತ್ತಿನವರು ಯಾವುದೇ ಕಂಟ್ರೋಲ್ ಮಾಡುವುದಕ್ಕೆ ಹೋಗುತ್ತಿಲ್ಲ. ಇದರಲ್ಲಿ ಜಿಲ್ಲಾ ಪರಿಷತ್ತಿನವರ ಟೂಮಚ್ ಇಂಟರ್‌ಫಿಯರೆನ್ಸ್ ಇದೆ. ಆದ್ದರಿಂದ, ಈ ವ್ಯವಸ್ಥೆಯನ್ನು ಜಿಲ್ಲಾಪರಿಷತ್ತುಗಳಿಂದ ವಾಪಸ್ ತೆಗೆದುಕೊಂಡು ಸಾಧ್ಯವಾದ ಮಟ್ಟಿಗೆ ಸಹಕಾರ ಸಂಘಗಳಿಗೇ ಕೊಡಿ. ಸಹಕಾರ ಸಂಘಗಳಿಗೆ ಕೊಡಿ ಎಂದು ಏಕೆ ಹೇಳುತ್ತೇನೆಂದರೆ. ಸಹಕಾರ ಸಂಘಗಳಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳು ಇರುತ್ತಾರೆ, ಬೇರೆ ಅಧಿಕಾರಿಗಳೂ ಇರುತ್ತಾರೆ, ಸಹಕಾರ ಸಂಘಗಳ ಆಡಳಿತದ ಮೇಲೆ ಅವರು ಬಿಗಿ ಹಿಡಿತವನ್ನು ಇಟ್ಟುಕೊಂಡಿರುತ್ತಾರೆ. ಅಧಿಕಾರಿಗಳು ಮೇಲುಸ್ತುವಾರಿಗೆ ಇದ್ದಾರೆಂದು ತಿಳಿದರೆ ಸಹಕಾರ ಸಂಘಗಳವರು ಅವ್ಯವಹಾರಗಳನ್ನು ಮಾಡುವುದಕ್ಕೆ ಭಯಪಡುತ್ತಾರೆ. ಆದುದರಿಂದ, ಆಹಾರ ಧಾನ್ಯಗಳನ್ನು ಸಹಕಾರ ಸಂಘಗಳ ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿ ವಿತರಣೆ ಮಾಡಿದರೆ ಒಳ್ಳೆಯದಾಗುತ್ತದೆ. ಹಾಗೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ಮಾನ್ಯ ಅಧ್ಯಕ್ಷರೇ, ಇನ್ನೂ ಬೇಕಾದಷ್ಟು ಹೇಳುವುದಿದೆ. ಆದರೆ ಸಮಯ ಸಾಕಾಗುತ್ತಿಲ್ಲ. ತಾವು ಬೆಲ್ ಹೊಡೆಯುತ್ತಿದ್ದರೆ ಕಷ್ಟವಾಗುತ್ತದೆ ಮತ್ತೆ. ಜಿಲ್ಲಾಪರಿಷತ್ತುಗಳಿಗೆ ಫುಲ್ ಪವರ್ ಕೊಟ್ಟಿದ್ದೀರಿ. ಜಿಲ್ಲಾಪರಿಷತ್ತಿನ ಚೀಫ್ ಎಕ್ಸಿಕ್ಯುಟೀವ್ ಅಂದರೆ ಅಧ್ಯಕ್ಷರಿಗೆ ಸ್ವಲ್ಪ ಕಡಿಮೆ ಅಧಿಕಾರವನ್ನು ಕೊಟ್ಟು, ಚೀಫ್ ಸೆಕ್ರೆಟರಿಗೆ ಸ್ವಲ್ಪ ಪವರ್ಸ್ ಕೊಡಬೇಕಾಗುತ್ತದೆ. ಅದನ್ನು ಕೊಟ್ಟರೆ ಉತ್ತಮ ಆಡಳಿತ ಬರುತ್ತದೆಂದು ನಾನು ಈ ವಿಚಾರದಲ್ಲಿ ಸಲಹೆ ಮಾಡುತ್ತೇನೆ. ಮತ್ತೆ ಪೋಲೀಸ್ ಇಲಾಖೆ ಬಗ್ಗೆ ಹೇಳುತ್ತೇನೆ. ಈ ಕರ್ನಾಟಕ ರಾಜ್ಯದಲ್ಲಿ ಸುಮಾರು ೪ಕೋಟಿ ಜನರಿದ್ದೇವೆ. ಆದರೆ ಈ ಜನಸಂಖ್ಯೆಗೆ ಅನುಗುಣವಾಗಿ ಪೋಲೀಸ್ ವ್ಯವಸ್ಥೆ ಇಲ್ಲ. ಯಾವುದೋ ಹಿಂದಿನ ಕಾಲದಲ್ಲಿ ಇದ್ದಹಾಗೆ ಇದೆ, ಇಷ್ಟು ವರ್ಷಗಳಾದರೂ ಹಿಂದಿನ ವ್ಯವಸ್ಥೆಯೆ ಇದೆ. ಇವತ್ತು ಎಷ್ಟು ಜನಸಂಖೆ

ಇದೆ ಅದಕ್ಕೆ ತಕ್ಕಂತೆ ಪೋಲೀಸ್ ವ್ಯವಸ್ಥೆ ಇರಬೇಕು. ಕೊನೆಯ ಪಕ್ಷ ೨೫ ಪರ್‌ಸೆಂಟ್ ಆದರೂ ನಮ್ಮ ನಾಗರೀಕರಿಗೆ ರಕ್ಷಣೆ ಬೇಕು. ಆದ್ದರಿಂದ ಪೋಲೀಸ್ ವ್ಯವಸ್ಥೆಯನ್ನು ಜಾಸ್ತಿ ಮಾಡಬೇಕು ಮತ್ತು ಪೋಲೀಸ್ ಸ್ಟೇಷನ್‌ಗಳನ್ನೂ ಸಹ ತಾವು ಜಾಸ್ತಿ ಮಾಡಬೇಕು. ಆಗ ಜನರಿಗೆ ಮತ್ತು ನಾಗರೀಕರಿಗೆ ರಕ್ಷಣೆ ಸಿಗುತ್ತದೆ, ಆಗ ಜನರಲ್ಲೂ ಸಹ ನಾವು ಸುರಕ್ಷತೆಯಿಂದ ಇದ್ದೇವೆ, ರಕ್ಷಣೆಯಲ್ಲಿದ್ದೇವೆ, ವ್ಯವಸ್ಥಿತವಾಗಿ ಶಾಂತಿಪಾಲನೆಯಾಗುತ್ತಿದೆ ಎಂಬ ನಂಬಿಕೆ ಬರುತ್ತದೆ. ಪೋಲೀಸರನ್ನಾಗಲೀ, ಸಬ್ ಇನ್ಸ್‌ಪೆಕ್ಟರುಗಳನ್ನಾಗಲೀ, ಹಿಂದಿನ ಕಾಲದಲ್ಲಿ ಮಾಡಿದ ರೀತಿಯಲ್ಲೇ ಅಲ್ಲಿಗೊಬ್ಬರು ಇಲ್ಲಿಗೊಬ್ಬರನ್ನು ನೇಮಕ ಮಾಡಿದರೆ ಶಾಂತಿ ಪಾಲನೆ ಮತ್ತು ರಕ್ಷಣೆ ಜನರಿಗೆ ಸಿಗುವುದಿಲ್ಲ. ಕಡಿಮೆ ಸಂಖ್ಯೆ ಪೋಲೀಸರು ಇದ್ದರೆ ನಾವು ನಿರೀಕ್ಷೆ ಮಾಡಿದ ಮಟ್ಟದಲ್ಲಿ ರಕ್ಷಣೆ ಸಿಗುವುದಿಲ್ಲವೆಂದು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತೇನೆ. ಆಮೇಲೆ, ಗ್ರಾಮಾಂತರ ಪೋಲೀಸ್‌ಠಾಣೆಗಳಲ್ಲಿರುವ ಪೋಲೀಸ್ ಆಫೀಸರ್ಸ್‌ಗಳಿಗೆ ಜನರ ನೇರ ಸಂಬಂಧ ಇರುತ್ತದೆ. ಅದ್ದರಿಂದ ಅವರು ಬಹಳ ಸಂಯಮದಿಂದ ವರ್ತಿಸಬೇಕು. ಯಾರು ಕಾನೂನು ವಿರುದ್ಧ ಹೋಗುತ್ತಾರೋ, ಯಾರು ಗೂಂಡಾಗಳು ಇರುತ್ತಾರೋ, ಯಾರು ಕಳ್ಳರಿರುತ್ತಾರೋ, ಕ್ರಿಮಿನಲ್ಸ್ ಇರುತ್ತಾರೊ ಯಾರು ಕಾನೂನು ಚೌಕಟ್ಟನ್ನು ಮೀರಿಹೋಗುತ್ತಾರೋ ಅಂಥವರುಗಳಿಗೆ ಪೋಲೀಸಿನವರು ಯಾವ ಡಿಗ್ರಿನಲ್ಲಿ ಕ್ರಮ ತೆಗೆದುಕೊಂಡರೂ ಯಾರೂ ಅದರಲ್ಲಿ ಪ್ರವೇಶ್ ಮಾಡುವುದಿಲ್ಲ. ಇಂಥವರುಗಳ ಮೇಲೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬಹುದು. ಆದರೆ, ಜನಸಾಮಾನ್ಯರು ತಮ್ಮ ಕಷ್ಟ ಸುಖಗಳನ್ನು ಪರಿಹಾರ ಮಾಡಿಕೊಳ್ಳುವ ಸಲುವಾಗಿ ಬರುತ್ತಾರೋ ಅಂಥವರುಗಳ ಹತ್ತಿರ ಪೋಲೀಸರು ಸೌಜನ್ಯದಿಂದ ವರ್ತಿಸಬೇಕು. ಪೋಲೀಸರ ಬಗ್ಗೆ ಜನಸಾಮಾನ್ಯರಲ್ಲಿ ಇರುವ ತಪ್ಪು ಭಾವನೆಯನ್ನು ಕಡಿಮೆ ಮಾಡಿಸುವುದಕ್ಕೆ ಪೋಲೀಸರು ಪ್ರಯತ್ನ ಮಾಡಬೇಕು. ಆಮೇಲೆ, ಪೋಲೀಸ್ ವಾಹನಗಳ ಬಗ್ಗೆ ಹೇಳುವುದಾದರೆ, ಪೋಲೀಸ್ ವಾಹನಗಳು ಬಹಳ ದುಸ್ಥಿತಿಯಲ್ಲಿ ಕೊಳೆತಿರುತ್ತವೆ. ಅವರುಗಳಿಗೆ ಸರಿಯಾದ

೨-೩೦ ಪಿ. ಎಂ.

ಉಪಕರಣಗಳನ್ನು ಕೊಟ್ಟಿರುವುದಿಲ್ಲ. ಅವರಿಗೆ ಕೊಟ್ಟಿರತಕ್ಕ ಉಪಕರಣಗಳು ಒಳ್ಳೆಯ ಉಪಕರಣಗಳು ಅಲ್ಲ. ಹಳೆಯ ಉಪಕರಣಗಳನ್ನೇ ಇಟ್ಟುಕೊಂಡು ಅದೇ ವ್ಯವಸ್ಥೆಯಲ್ಲಿ ಅವರು ನೂಕುತ್ತಿದ್ದಾರೆ. ಜೀಪ್‌ಗಳೇ ಆಗಲಿ, ವ್ಯಾನ್‌ಗಳೇ ಆಗಲಿ ಅಥವಾ ಇನ್ನಾವುದೇ ಉಪಕರಣಗಳೇ ಆಗಲಿ ಹಳೆಯ ವ್ಯವಸ್ಥೆಯಲ್ಲೇ ಇದೆ. ಇವತ್ತು ಮಾಡ್ರನ್ ಆಗಿ ಬೇಕಾದಷ್ಟು ಬಂದಿದೆ. ಆ ಒಂದು ಹೊಸ ವ್ಯವಸ್ಥೆಯನ್ನು ಸರಿಯಾಗಿ ಕೊಟ್ಟು ಅವರ ಹತ್ತಿರ ಕೆಲಸ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನು ಫಾರೆಸ್ಟ್ ಬಗ್ಗೆ ಹೇಳುವುದಾದರೆ, ಕಾಡನ್ನು ಬೆಳೆಸಬೇಕು ನಿಜ, ಆದರೆ ಅರಣ್ಯ ಇಲಾಖೆಯ ಸಿಬ್ಬಂದಿ ಯಾವ ಮಟ್ಟಿಗೆ ಕಾಡನ್ನು ಬೆಳೆಸುತ್ತಿದೆ ಎನ್ನುವುದನ್ನು ನಾವು ಗಮನದಲ್ಲಿಡಬೇಕು. ಅವರು ಇದಕ್ಕಾಗಿ ಎಷ್ಟು ಖರ್ಚು ಮಾಡುತ್ತಿದ್ದಾರೆ. ಆ ಖರ್ಚು ಸದುಪಯೋಗವಾಗುತ್ತಿದೆಯೇ? ವರ್ಷ ವರ್ಷ, ಎಕ್ಕಾಪಟ್ಟೆ ಮರಗಳನ್ನು ಕಡಿಯುತ್ತಿದ್ದಾರೆ. ಆದರೆ ಅದಕ್ಕೆ ರೀಪ್ಲೇಸ್ ಏನಾದರೂ ಮಾಡುತ್ತಿದ್ದಾರಾ, ಅದು ಆಗುತ್ತಿದೆಯೇ ? ನರ್ಸರಿಗಳಿಗೆ, ಫಾರೆಸ್ಟ್‌ಗಳಿಗೆ ಕೊಡತಕ್ಕ ಹಣ ಸರಿಯಾಗಿ ಹೋಗುತ್ತಿದೆಯೇ ? ಮತ್ತು ಸಿಬ್ಬಂದಿ ಸರಿಯಾಗಿ ಕೆಲಸ ಮಾಡುತ್ತಿದ್ದಾರಾ ಎಂಬ ಬಗ್ಗೆ ನಾವು ಗಮನ ಹರಿಸಬೇಕಾಗಿದೆ. ಇವತ್ತು ಗಿಡಗಳ ಸಂಖ್ಯೆ ಇಷ್ಟು ಎಂದು ತೋರಿಸಿರುತ್ತಾರೆ. ಆದರೆ ಆ ಗಿಡಗಳು ಎಷ್ಟೋ ಸಾರಿ ಹೋಗಿರುತ್ತವೆ. ಮಳೆಯಿಂದ ಹೋಗಿರಬಹುದು, ಮಳೆಯಿಲ್ಲದೆ ಹೋಗಿರಬಹುದು, ಕೆಲವು ಗಿಡಗಳು ಸತ್ತು ಹೋಗಿರಬಹುದು ಎಂದು ನೀವು ಹೇಳಬಹುದು, ಆದರೆ ಗಿಡ ನೆಡುವುದು ಮುಖ್ಯವಲ್ಲ, ಆ ಗಿಡವನ್ನು ರಕ್ಷಣೆ ಮಾಡಬೇಕು, ಅದು ಮುಖ್ಯ. ಅದನ್ನು ಸಿಬ್ಬಂದಿ ಸರಿಯಾಗಿ ಮಾಡುತ್ತಿಲ್ಲ. ಆದ್ದರಿಂದ ಸರ್ಕಾರ ಅದರ ಕಡೆ ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ನಂಜನಗೂಡು ರಸಬಾಳೆ ಬಹಳ ಮುಖ್ಯವಾದುದು. ಅದು ಕರ್ನಾಟಕದಲ್ಲೇ ಪ್ರಸಿದ್ಧಿಯಾದಂತಹ ರಸಬಾಳೆ. ಅದರಲ್ಲಿ ವಿಟಮಿನ್ ಎ.ಬಿ ಸಿ, ಎಲ್ಲ ಇದೆ ರುಚಿಯಾಗಿದೆ. ಅಂತಹ ಪ್ರಸಿದ್ಧವಾದಂತಹ ರಸಬಾಳೆಹಣ್ಣು ಇವತ್ತು ನಂಜನಗೂಡಿನಲ್ಲಿ ನಶಿಸಿ ಹೋಗುತ್ತಿದೆ. ಅದನ್ನು ರಕ್ಷಣೆ ಮಾಡಬೇಕು. ಆ ಬಾಳೆ ಹಣ್ಣನ್ನು ಬೆಳೆಸಬೇಕು. ಅದಕ್ಕೋಸ್ಕರ ನಂಜನಗೂಡಿನಲ್ಲಿ ಒಂದು ಸಂಶೋಧನಾ ಕೇಂದ್ರವನ್ನು ಸ್ಥಾಪನೆ ಮಾಡಬೇಕು. ಅದಕ್ಕೆ ಹಿಂದೆ ೮-೧೦ ಎಕರೆ ಜಮೀನು ಕೊಟ್ಟಿದ್ದಾರೆಂದು ಕಾಣಿಸುತ್ತದೆ. ಅದು ಸರ್ಕಾರದ ಮಟ್ಟದಲ್ಲಿ ಏನಾಗಿದೆ ಎಂದು ನನಗೆ ಗೊತ್ತಿಲ್ಲ. ತಾವು ೧೦-೧೫ ಎಕರೆ ಜಮೀನನ್ನು ನಂಜನಗೂಡಿನಲ್ಲಿ ರಸಬಾಳೆ ಬೆಳೆಯಲು ಕೊಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ತಾವು ದಯವಿಟ್ಟು ಸಂಬಂಧಪಟ್ಟ ಮಂತ್ರಿಯವರನ್ನು ಕರೆಸಬೇಕು. ಅವರು ಮಾಡುತ್ತಿರುವ ಭಾಷಣವನ್ನು ಕೇವಲ ಪತ್ರಿಕಾಕರ್ತ ಮಿತ್ರರು ಮಾತ್ರ ಬರೆದುಕೊಂಡು ಹೋಗಬೇಕೋ ಇವತ್ತು ಡಿಮಾಂಡ್‌ಗಳು ಇರುವ ದಿನ. ಇವತ್ತು ಫಾರೆಸ್ಟ್ ಮಿನಿಸ್ಟರ್ ಇಲ್ಲ, ಅಗ್ರಿಕಲ್ಚರಲ್ ಮಿನಿಸ್ಟರ್ ಇಲ್ಲ, ಮುಖ್ಯಮಂತ್ರಿಗಳು ಇಲ್ಲ. ಈ ರೀತಿಯಾದರೆ ಮಾತನಾಡುವುದಕ್ಕೆ ನಮಗೆ ಏನು ಉತ್ಸಾಹ ಬರುತ್ತದೆ ಹೇಳಿ, ಬೈಯಬೇಕು ಅಂದರೂ ಮನಸ್ಸು ಬರುವುದಿಲ್ಲ. ಖಾಲಿ ಕುರ್ಚಿಗೆ ಬೈಯುತ್ತೀರಾ ?

ಚೇರ್ಮನ್,—ಬೇಗ ಮುಗಿಸಿ.

ಒಬ್ಬ ಮಾನ್ಯ ಸದಸ್ಯರು.—ಶ್ರೀಮಾನ್ ಸಿಂಧ್ಯರವರು ಬೈಯುವುದನ್ನು ನಾನೇ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್.—ಒಳ್ಳೆಯ ಸಲಹೆಗಳನ್ನು ಹೇಳುತ್ತಿದ್ದಾರೆ, ಅದನ್ನು ಕೇಳುವವರು ಯಾರು ? ಅದಕ್ಕೆ ಉತ್ತರ ಕೊಡುವವರಾದರೂ ಬೇಕಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಮಹದೇವ್‌ರವರು ಈಗ ಬಹಳ ಒಳ್ಳೆಯ ಒಂದು ಸಲಹೆಯನ್ನು ಈಗ ಕೊಟ್ಟರು. ಅವರು ಇಷ್ಟು ಹೊತ್ತು ಮಾತನಾಡಿರುವುದರಲ್ಲಿ ಒಂದು ವಿಚಾರವನ್ನು ನಾವು ಎಲ್ಲರೂ ಒಪ್ಪುವಂಥಾದ್ದು. ನಂಜನಗೂಡು ರಸಬಾಳೆ ಹಣ್ಣು ಒಳ್ಳೆಯ ಬಾಳೆಹಣ್ಣು. ಅದೆಲ್ಲ ನಶಿಸಿಹೋಗುತ್ತಿದೆ, ಅದನ್ನು ಏನಾದರೂ ಅಭಿವೃದ್ಧಿ ಮಾಡಬೇಕೆಂದರೆ ನಮ್ಮ ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಇದ್ದಾರೆ, ಅದು ಬೇರೆ ವಿಚಾರ. ಸಂಬಂಧಪಟ್ಟ ಮಂತ್ರಿಗಳಿಗೆ ತಾವು ಹೇಳಿ ಕಳುಹಿಸಿ.

ಶ್ರೀ ಎಂ.ವೈ. ಘೋರ್ಪಡೆ.—ಬೈಸಿಕೊಳ್ಳುವುದಕ್ಕೆ ನಾನು ಇದ್ದೇನೆ. ಅವರು ಈಗ ಬರುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಮುಖ್ಯಮಂತ್ರಿಗಳ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳು ವಿಶೇಷವಾಗಿ ಜನರಲ್ ಅಡ್ಮಿನಿಸ್ಟ್ರೇಷನ್. ಹೋಂ ಪಬ್ಲಿಕ್ ಸರ್ವಿಸ್ ಕಮಿಷನ್ ಒಂದು ಕಡೆ. ಕೃಷಿ ಮತ್ತು ತೋಟಗಾರಿಕೆ ಇದೆ. ಹೀಗೆ ಒಟ್ಟು ೨೫ ಬೇಡಿಕೆಗಳು ಇವೆ. ಕಾಂಗ್ರೆಸ್ ಸದಸ್ಯರುಗಳಿಗೆ ಬೇಡಿಕೆಗಳ ಮೇಲೆ ಆಸಕ್ತಿ ಇಲ್ಲ ಮತ್ತೊಂದಿಲ್ಲ, ಆ ಮಾತು ಬೇರೆ. ಆದರೆ ಸಂಬಂಧಪಟ್ಟ ಮಂತ್ರಿಗಳು ಇಲ್ಲದಿದ್ದರೆ ಹೇಗೆ. ಈಗ ನನ್ನನ್ನು ಚರ್ಚೆ ಮಾಡಿ ಅಂದರೆ, ಯಾರಿಗೋಸ್ಕರ ಚರ್ಚೆ ಮಾಡುವುದು, ನನಗೋಸ್ಕರ ಚರ್ಚೆ ಮಾಡುವುದಾ ? ನಾನು ನೋಡುತ್ತಿದ್ದೇನೆ. ಮಾನ್ಯ ಮಹದೇವ್‌ರವರು ಪ್ರಾರಂಭ ಮಾಡಿದಾಗ ೫ ಜನ ಸದಸ್ಯರು ಇದ್ದರು. ಈಗ ೧೫ ಜನ ಇದ್ದಾರೆ. ನಾವು ೨೨೫ ಜನ ಸದಸ್ಯರಲ್ಲಿ, ಆಳುವ ಪಕ್ಷದಲ್ಲಿ ೧೮೫ ಜನ ಇದ್ದಾರೆ. ಜಿಲ್ಲಾ ಪರಿಷತ್ತನ್ನು ವಜಾ ಮಾಡಿ ಎಂದು ಕೇಳುವವರು ನಮ್ಮ ಸ್ಥಿತಿ ನೋಡಿದರೆ ಮುಂದೆ ನಮಗಿಂತ ದೊಡ್ಡವರು ಇದನ್ನು ವಜಾ ಮಾಡಿ ಎಂದು ಹೇಳ್ತಾರು.

ಛೇರ್ಮನ್.—ಇವತ್ತು ಊಟಕ್ಕೆ ಬಿಟ್ಟಿಲ್ಲ, ಅದಕ್ಕೆ ಊಟಕ್ಕೆ ಹೋಗಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅರಣ್ಯ ಇಲಾಖೆಯ ಅಧಿಕಾರಿಗಳು ಬಂದಿದ್ದಾರೋ ಇಲ್ಲವೊ ನಮಗೆ ಗೊತ್ತಾಗುವುದಿಲ್ಲ. ಸಿ.ಎಂ. ಏನು ಮಾಡುತ್ತಿದ್ದಾರೊ ನಮಗೆ ಗೊತ್ತಿಲ್ಲ. ಫಾರೆಸ್ಟ್ ಮಿನಿಸ್ಟರ್ ಬೆಳಿಗ್ಗೆಯಿಂದ ಬಂದಿಲ್ಲ, ಈಗ ಬರುತ್ತಿದ್ದಾರೆ.

ಶ್ರೀ ಎಂ. ಮಹದೇವ್.—ನಂಜನಗೂಡಿನ ರಸಬಾಳೆ ತಳಿಯನ್ನು ವೃದ್ಧಿ ಮಾಡಬೇಕು. ಇದಕ್ಕಾಗಿಯೇ ಒಂದು ಸಂಶೋಧನಾ ಶಾಲೆಯನ್ನು ಪ್ರಾರಂಭಿಸಬೇಕು. ಅಲ್ಲಿ ಅದಕ್ಕೆ ಬೇಕಾದಷ್ಟು ಜಮೀನನ್ನು ತೆಗೆದುಕೊಂಡು ಅಲ್ಲಿ ಈ ಬೆಳೆಯ ಅಭಿವೃದ್ಧಿಗಾಗಿ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ಬಹಳ ಮುಖ್ಯವಾದಂಥ ವಿಚಾರ ಏನೆಂದರೆ, ನಮ್ಮ ನಂಜನಗೂಡು ಪ್ರದೇಶದಲ್ಲಿ ಒಂದು ವ್ಯವಸಾಯ ಕಾಲೇಜನ್ನು ಪ್ರಾರಂಭ ಮಾಡಬೇಕು. ಏಕೆಂದರೆ ಕರ್ನಾಟಕದ ಇತರ ಯಾವ ಭಾಗಕ್ಕಿಂತಲೂ ಆರೋಗ್ಯದಾಯಕವಾದಂಥ ವಾತಾವರಣ ಅಲ್ಲಿದೆ. ಅದು ಕಪಿಲಾ ನದಿಯು ಹರಿಯುತ್ತಿರುವ ಪ್ರದೇಶವಾಗಿದೆ ಮತ್ತು ಅಲ್ಲಿ ಬೇಕಾದಷ್ಟು ಸ್ಥಳಾವಕಾಶವೂ ಇದೆ, ನೀರಿನ ಸೌಲಭ್ಯ ಸಾಕಷ್ಟು ಪ್ರಮಾಣದಲ್ಲಿ ಇದ್ದೇ ಇದೆ. ಪ್ರಸಿದ್ಧವಾದ ಶ್ರೀಕಂಠೇಶ್ವರ ಸ್ವಾಮಿಯ ದೇವಸ್ಥಾನ ಇದೆ, ಇಷ್ಟೇ

ಅಲ್ಲದೇ ಸಂಶೋಧನೆಗಾಗಿ ಬೇಕಾಗುವ ಎಲ್ಲಾ ಸೌಲಭ್ಯ ಮತ್ತು ಸೌಕರ್ಯಗಳು ಅಲ್ಲಿದೆ. ಆದುದರಿಂದ ಅಲ್ಲಿ ಒಂದು ವ್ಯವಸಾಯ ಕಾಲೇಜನ್ನು ತೆಗೆದರೆ ರಾಜ್ಯದ ಯಾವುದೇ ಭಾಗದವರು ಅಲ್ಲಿ ಬಂದು ಅಧ್ಯಯನ ಮಾಡಬಹುದು. ಸಂಶೋಧನೆಗೆ ಬೇಕಾಗುವಂಥ ३೦೦-೪೦೦ ಎಕರೆ ಜಮೀನು ಕೂಡ ಅಲ್ಲಿ ಸಿಗುತ್ತದೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನಂಜನಗೂಡಿನಲ್ಲಿ ವ್ಯವಸಾಯ ಕಾಲೇಜು ಒಂದನ್ನು ಪ್ರಾರಂಭಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಅರಣ್ಯ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ಭಾಗದ ಅರಣ್ಯ ಪ್ರದೇಶದಲ್ಲಿ ಆನೆಗಳ ಕಾಟ ಬಹಳ ಜಾಸ್ತಿಯಾಗಿದೆ. ಮಾನ್ಯ ಸಚಿವರು ಕೂಡ ಈ ವಿಚಾರದಲ್ಲಿ ಒಂಟಿಸಲಗ ಆಗಬಾರದು. ನಂಜನಗೂಡು ವಿಭಾಗದಲ್ಲಿ ಆನೆಗಳ ಕಾಟ ಇವತ್ತಿನದ್ದಲ್ಲ ಹಿಂದಿನಿಂದಲೂ ಇದೆ. ನಾನು ಎರಡು ಬಾರಿ ಶಾಸಕನಾಗಿ ಬಂದು ಆ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತಾ ಇದ್ದೇನೆ. ಆದರೂ ಆ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳುವುದರ ಮೂಲಕ ಅವುಗಳ ಕಾಟವನ್ನು ತಪ್ಪಿಸಿಲ್ಲ. ನಂಜನಗೂಡು ತಾಲ್ಲೂಕು ಪ್ರದೇಶದ ಪಕ್ಕದ ಭಾಗದಲ್ಲಿ ಅರಣ್ಯ ಪ್ರದೇಶ ಇದೆ. ಆ ಪ್ರದೇಶಗಳಲ್ಲಿ ಒಂಟಿಸಲಗಗಳು ಬರುತ್ತವೆ. ಆನೆಗಳು ಗುಂಪು ಗುಂಪಾಗಿ ಬರುತ್ತವೆ. ಹಾಗೆ ಬಂದ ಆನೆಗಳು ನಮ್ಮ ಭಾಗದ ರೈತರು ಬೆಳೆದ ಬೆಳೆಯನ್ನು ನಾಶ ಮಾಡುತ್ತಿವೆ. ಅದಕ್ಕಾಗಿ ವಿದ್ಯುತ್ ತಂತಿ ಬೇಲಿಯನ್ನು ಹಾಕಿ ಬೆಳೆಗಳ ರಕ್ಷಣೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ. ಈಗ ಕೆಲವು ಕಡೆಗಳಲ್ಲಿ ಬೇಲಿ ಹಾಕುತ್ತಾರೆ. ಅದು ಮಳೆ ಬಿದ್ದ ಕೂಡಲೇ ಮುಚ್ಚಿಕೊಂಡು ಹೋಗುತ್ತದೆ. ಹೀಗಾಗಿ ತಮ್ಮ ಬೆಳೆಗಳ ರಕ್ಷಣೆ ಮಾಡಿಕೊಳ್ಳುವುದು ರೈತರಿಗೆ ಕಷ್ಟವಾಗಿದೆ. ಹಳ್ಳಿಗಳಲ್ಲಿ ಅವರು ಕಾವಲು ಕಾಯುವುದಕ್ಕೆ ಕಷ್ಟವಾಗುತ್ತದೆ. ರಾತ್ರಿಹೊತ್ತು ಆನೆಗಳು ನುಗ್ಗಿ ಬಂದು ಬೆಳೆಗಳನ್ನು ಹಾಳು ಮಾಡುತ್ತಿವೆ. ಇದರಿಂದಾಗಿ ಕಷ್ಟಪಟ್ಟು ಬೆಳೆದ ಪಸಲು ಹಾಳಾಗಿ ಹೋಗುತ್ತಾ ಇದೆ. ಈ ರೀತಿ ನಮ್ಮ ಭಾಗದಲ್ಲಿಯೇ ಅಲ್ಲದೇ ರಾಜ್ಯದ ಇತರ ಭಾಗಗಳಲ್ಲಿಯೂ ಇದೆ. ಆದುದರಿಂದ ತಂತಿ ಬೇಲಿಯನ್ನು ಹಾಕಿಸುವ ಒಂದು ವ್ಯವಸ್ಥೆಯನ್ನು ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ. ಹೀಗೆ ಆನೆಗಳು ಬರುವ ಮಾರ್ಗಗಳಿಗೆ ತಂತಿ ಬೇಲಿ ಹಾಕಿಸಿ ಫಸಲು ರಕ್ಷಣೆ ಮಾಡಲೇಬೇಕು. ಏಕೆಂದರೆ, ಕಷ್ಟಪಟ್ಟು ಬೆಳೆದಂಥ ಫಸಲನ್ನು ರೈತರು ಈ ರೀತಿಯಲ್ಲಿ ಕಳೆದುಕೊಳ್ಳುವುದಾದಲ್ಲಿ ಅವರ ಜೀವನಕ್ಕೆ ಎಷ್ಟು ಕಷ್ಟವಾಗುತ್ತದೆ ಎಂದು ತಾವುಗಳು ಊಹಿಸಿಕೊಳ್ಳಬೇಕು. ದಯವಿಟ್ಟು ಈ ಒಂದು ಕಾರ್ಯವನ್ನು ಮಾನ್ಯ ಸಚಿವರು ಮಾಡಬೇಕೆಂದು ಅತ್ಯಂತ ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಹೇಳುವುದು ಗುಡ್ಡಕ್ಕೆ ಹಚ್ಚಡ ಹೊಲಿಸಿದ ಹಾಗೆ ಆಗುತ್ತದೆ. ಆನೆಗಳು ಬನ್ನೇರುಘಟ್ಟ ಪ್ರದೇಶದವರೆವಿಗೂ ಬರುತ್ತಿವೆ. ಅಂದಮೇಲೆ ಎಲ್ಲಾ ಕಡೆಗಳಿಗೂ ಬೇಲಿ ಕಟ್ಟಬೇಕಾಗುತ್ತದೆ. ಅದು ಸಾಧ್ಯವೆ ?

ಶ್ರೀ ಎಂ. ಮಹದೇವ್.—ನಮ್ಮ ಪ್ರದೇಶಕ್ಕಾದರೂ ಬೇಲಿ ಹಾಕಿಸಿಕೊಡಿ, ಇದರಿಂದ ನಮ್ಮ ಫಸಲನ್ನಾದರೂ ನಾವು ರಕ್ಷಿಸಿಕೊಳ್ಳುತ್ತೇವೆ. ಅದನ್ನು ನಮ್ಮ ಭಾಗದಲ್ಲಿ ಪ್ರಾಯೋಗಿಕವಾಗಿ ಮಾಡಿ, ಅದರ ಫಲಾಫಲತೆಯನ್ನು ನೋಡಿ, ನಂತರ ರಾಜ್ಯದ ಇತರ ಭಾಗಗಳಿಗೆ ವಿಸ್ತರಿಸಬಹುದು. ಸ್ವಾಮಿ, ಕುಡಿಯುವ ನೀರಿನ ಬಗ್ಗೆ ತಾವು ವಿವರವಾಗಿ ಆಲೋಚಿಸಬೇಕು. ಪಂಪ್ ಹಾಕಿಸಿದ್ದೀರಿ, ಬೋರ್‌ವೆಲ್ ಹಾಕಿಸಿದ್ದೀರಿ ಆದರೆ ಆ ಬೋರ್‌ವೆಲ್‌ಗಳನ್ನು ಸೂಪರ್‌ವೈಸ್ ಮಾಡುವುದಕ್ಕೆ ಒಂದು ಮೊಬೈಲ್ ಯೂನಿಟ್ಟನ್ನು ಮಾಡಿ ಗ್ರಾಮೀಣ ಪ್ರದೇಶಗಳಲ್ಲಿ ಯಾವ ಅಂಕುಅಡಚಣೆ ಇಲ್ಲದೆ ಡೈರೆಕ್ಟಾಗಿ ಹೋಗಿ ರಿಪೇರಿ ಮಾಡುವ ಕೆಲಸ ಮಾಡಬೇಕು. ಏಕೆಂದರೆ, ಜಿಲ್ಲಾ ಪರಿಷತ್‌ಗೆ ಹೇಳಿದರೆ ಅವರು ಮಂಡಲ ಪಂಚಾಯಿತ್ತಿಗೆ ಹೇಳಿ, ಶಾಸಕರು ಸರ್ಕಾರಕ್ಕೆ ಹೇಳುವುದರೊಳಗೆ ಆ ಬೋರ್‌ವೆಲ್‌ಗಳು ಶಾಶ್ವತವಾಗಿ ರಿಪೇರಿಯಾಗುವುದಿಲ್ಲ. ಅದಕ್ಕಾಗಿ ಒಂದು ಮೊಬೈಲ್ ಯೂನಿಟನ್ನು ಮಾಡಿ, ಅವರು ಕಂಪ್ಲೇಂಟ್ ಬಂದಕಡೆ ಹೋಗಿ ಅಟೆಂಡ್ ಮಾಡಬೇಕು, ಅದಕ್ಕೆ ತಗಲುವ ಹಣವನ್ನು ಜಿಲ್ಲಾ ಪರಿಷತ್ತುಗಳಿಗೆ ಕೊಡುತ್ತಿರುವುದನ್ನು ಬದಲಿಸಿ ನೇರವಾಗಿ ಇವರಿಗೇ ಕೊಟ್ಟರೆ ಇಂಡಿಪೆಂಡೆಂಟಾಗಿ ಸಕಾಲದಲ್ಲಿ ರಿಪೇರಿ ಮಾಡಲು ಸಹಾಯವಾಗುತ್ತದೆ. ಇನ್ನೊಂದು ವಿಷಯ ಏನೆಂದರೆ, ನಮ್ಮ ಜೀವ ನದಿಗಳು ಕೆಲವಿವೆ. ಉದಾಹರಣೆಗೆ ನಂಜನಗೂಡಿನಲ್ಲಿ ಕಪಿಲೆ ಇದೆ, ಅಲ್ಲಿ ಯಾವಾಗಲೂ ನೀರಿರುತ್ತದೆ. ಆದರ ಅಕ್ಕಪಕ್ಕದಲ್ಲಿ ಹತ್ತಾರು ಗ್ರಾಮಗಳಿವೆ. ಅವುಗಳಿಗೆ ಈ ನದಿಯಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಿ. ಇದನ್ನು ನೀವೇ ಮಾಡಿಕೊಡಬೇಕು. ಜಿಲ್ಲಾ ಪರಿಷತ್ತಿಗೆ ಬರೆದರೆ, ಇನ್ನೊಂದು ಕಡೆಗೆ ಬರೆದರೆ ಆಗುವುದಿಲ್ಲ. ಫ್ಯಾಕ್ಟರಿಗಳವರು ಬೇಕಾದಷ್ಟು ನೀರನ್ನು ಬಳಸಿಕೊಳ್ಳುತ್ತಿದ್ದಾರೆ ಮತ್ತೆ ತಮಿಳುನಾಡಿಗೆ ಹೋಗುತ್ತದೆ. ಉಪಯೋಗವಿಲ್ಲದ ಈ ನೀರು ಜನಸಾಮಾನ್ಯರಿಗೆ ದಕ್ಕಿದರೆ ಒಳ್ಳೆಯದೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಇದು ಶಾಶ್ವತ ಕೆಲಸವಾಗುತ್ತದೆ.

ನದಿಯು ಐದಾರು ಕಿ.ಮೀ. ರೇಡಿಯಸ್‌ನಲ್ಲಿ ಎನ್‌ಐಡಬ್ಲ್ಯೂ ಸ್ಕೀಮನ್ನು ತಯಾರು ಮಾಡಿಸಿ. ಇದಕ್ಕೆ ಎಷ್ಟು ಹಣ ಖರ್ಚಾದರೂ ಚಿಂತೆಯಿಲ್ಲ. ಜಿಲ್ಲಾ ಪರಿಷತ್ತಿನವರು ೨೮ ಕ್ವೈರಿ ಹಾಕುತ್ತಾರೆ, ಇದನ್ನು ಮಾಡಲು ಬರುವುದಿಲ್ಲ, ಬೇಕಾದರೆ ಬೋರ್‌ವೆಲ್ ಹಾಕಿಸೋಣ ಎನ್ನುತ್ತಾರೆ. ಮಾದರ ಹಳ್ಳಿಗೂಡೆ ಎಂಬ ಊರು ನದಿಗೆ ಮುಕ್ಕಾಲು ಕಿ.ಮೀ. ದೂರದಲ್ಲಿದೆ. ಆ ಗ್ರಾಮ ಬಹಳ ಹೈಟ್‌ನಲ್ಲಿದೆ, ಅಲ್ಲಿಗೆ ಅರ್ಬನ್ ವಾಟರ್ ಸಪ್ಲೈ ಮಾಡಿದರೆ ನೀರು ಸಿಗುತ್ತದೆ. ಹಾಗೆ ಕೌಲಂಡ ಹೋಬಳಿ ಚಿನ್ನದಹಂಡೆಹಳ್ಳಿಯಲ್ಲಿ ನೀರಿಲ್ಲ. ಅವರಿಗೂ ಹೊಳೆ ನೀರು ಕೊಟ್ಟರೆ ನಿಮ್ಮನ್ನು ಹೊಗಳಿ ತಲೆ ಮೇಲೆ ಹೊತ್ತು ಕುಣಿಯುತ್ತಾರೆ. ಈ ಎರಡು ಪ್ಲಾಂಟ್‌ಗಳನ್ನು ದಯಮಾಡಿ ಸರ್ಕಾರವೇ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ, ಇನ್ನು ಸಾಮಾನ್ಯ ಆಡಳಿತದ ಬಗ್ಗೆ ಹೇಳುವುದಾದರೆ, ಯಾವುದೇ ಸರ್ಕಾರ ಚೆನ್ನಾಗಿ ಕೆಲಸ ಮಾಡಬೇಕಾದರೆ ಮೆಷಿನರಿಗಳು ಚೆನ್ನಾಗಿ ಕೆಲಸ ಮಾಡಬೇಕು. ಈ ಮೆಷಿನರಿಗಳು ಸರಿಯಾಗಿ ಕೆಲಸ ಮಾಡಲಿಲ್ಲ ಎಂದರೆ ಸರ್ಕಾರಕ್ಕೆ ಯಾವುದೇ ಪಕ್ಷದ ಸರ್ಕಾರವಿರಲಿ ಅದಕ್ಕೆ ಒಳ್ಳೆಯ ಹೆಸರು ಬರಲಿಕ್ಕೆ ಆಗುವುದಿಲ್ಲ. ಬಹಳ ಜನ ಅಧಿಕಾರಿಗಳು ಒಳ್ಳೆಯವರು ಇದ್ದಾರೆ. ಬಹಳ ಒಳ್ಳೆಯ ಜನ, ಉತ್ತಮವಾಗಿ ಕೆಲಸ ಮಾಡತಕ್ಕಂಥವರು ಇದ್ದಾರೆ. ಸೇವಾ ಮನೋಭಾವನೆ ಇರತಕ್ಕಂಥವರು, ಕರ್ತವ್ಯವನ್ನು ಅರಿತುಕೊಂಡು ಮಾಡತಕ್ಕಂಥವರು, ಜವಾಬ್ದಾರಿಯನ್ನು ಅರಿತುಕೊಂಡು ಮಾಡತಕ್ಕಂಥ ಜನ ನಮ್ಮ ರಾಜ್ಯದಲ್ಲಿದ್ದಾರೆ, ನಮ್ಮ ಸರ್ಕಾರದಲ್ಲಿದ್ದಾರೆ. ಅವರ ಬಗ್ಗೆ ನಮ್ಮ ಅಪ್ರಿಸಿಯೇಷನ್ ಇದ್ದೇ ಇದೆ. ಒಳ್ಳೆಯ ಐ.ಎ.ಎಸ್. ಆಫೀಸರ್‌ಗಳು ಇದ್ದಾರೆ. ಬಹುಶಃ ಐಎಎಸ್ ಆಫೀಸರ್‌ಗಳಿಗೆಲ್ಲಾ ಒಂದು ಭಾವನೆ ಬರಬಹುದು. ಏನಪ್ಪ, ಬೆಳಿಗ್ಗೆ ಎದ್ದರೆ ಇವರು ಬಯ್ಯುತ್ತಲೇ ಇರುತ್ತಾರೆ ಎಂಬ ಅಭಿಪ್ರಾಯ ಬರಬಹುದು. ನಾವೇನು ಎಲ್ಲರನ್ನೂ ಬಯ್ಯುವುದಿಲ್ಲ. ಯಾರು ತಪ್ಪು ಮಾಡಿರುತ್ತಾರೆ, ಅವರ ತಪ್ಪನ್ನು ಎತ್ತಿ ತೋರಿಸಬೇಕಾಗುತ್ತದೆ. ನಾವೇನು ಬಯ್ಯಬೇಕು ಎಂಬ ಉದ್ದೇಶದಿಂದ ಬಯ್ಯುವುದಿಲ್ಲ. ನೀವು ಇಂತಹ ತಪ್ಪು ಮಾಡುತ್ತಿದ್ದೀರಿ, ನಿಮ್ಮ ವರ್ತನೆ ಇಂಥದ್ದು, ಇದನ್ನು ನೀವು ಬದಲಾಯಿಸಿಕೊಳ್ಳಿ ಎಂದು ಕೆಲವರಿಗೆ ನಾವು ಎಚ್ಚರಿಕೆಯನ್ನು ಕೊಡಬೇಕಾಗುತ್ತದೆ. ಒಳ್ಳೆಯ ಆಫೀಸರ್ಸ್ ಇದ್ದಾರೆ. ಅವರಿಗೆ ನಾವು ಅಭಿನಂದನೆಯನ್ನು ಸಲ್ಲಿಸುತ್ತೇವೆ, ಆದರೆ ಕೆಲವರು ಇದ್ದಾರಲ್ಲಾ ಅವರು ಬ್ರಿಟಿಷರ ಶಿಶುಗಳಂತೆ ವರ್ತಿಸುತ್ತಿದ್ದಾರೆ. ಆ ಸಿಸ್ಟಂ ಹೋಗಬೇಕು. ಹಿಂದೆ ಏತಕ್ಕೆ ಐಎಎಸ್ ಆಫೀಸರ್‌ಗಳನ್ನು ಇಟ್ಟಿದ್ದರು ಎಂದರೆ ನಮ್ಮ ರಾಷ್ಟ್ರದ ಜನತೆಯ ಮೇಲೆ ಬ್ರಿಟಿಷರಿಗೆ ನಂಬಿಕೆ ಇರಲಿಲ್ಲ, ಅದಕ್ಕೋಸ್ಕರ ಅವರದೇ ಆದಂಥ ಜನಗಳನ್ನು ಇಡಬೇಕಾಗಿತ್ತು. ನಮ್ಮಲ್ಲಿ ಏನು ಚಲನವಲನಗಳು ನಡೆಯುತ್ತಿವೆ ಅವನ್ನು ತಿಳಿದುಕೊಳ್ಳುವುದಕ್ಕೆ ಕೀಪೋಸ್ಟ್‌ನಲ್ಲಿ ಒಬ್ಬ ಅಧಿಕಾರಿ ಇರಲಿ ಎಂಬ ಉದ್ದೇಶದಿಂದ ಬ್ರಿಟಿಷರು ಅವರ ಜನರಲ್ಲಿ ಐಸಿಎಸ್ ಆಫೀಸರ್ ಒಬ್ಬರನ್ನು ಇಡುತ್ತಿದ್ದರು. ಈ ಭಾರತದ ಜನರನ್ನು ನಂಬಲಿಕ್ಕೆ ಆಗುವುದಿಲ್ಲ, ನಮ್ಮವರೇ ಒಬ್ಬರು ಹೆಡ್ ಇರಲಿ ಎನ್ನುವ ದೃಷ್ಟಿಯಿಂದ ಒಬ್ಬ ಒಡೆಯನನ್ನು ಇಟ್ಟಿದ್ದರು. ಅದು ಆವತ್ತಿನ ಡೆಮಾಕ್ರಟಿಕ್ ಸಿಸ್ಟಂ. ಆದರೆ ನಾವು ಕೆಲವರು...

ಛೇರ್ಮನ್.—ಇನ್ನು ಐವತ್ತೊಂದು ಜನರ ಲಿಸ್ಟ್ ಇದೆ. ಎಲ್ಲರಿಗೂ ಅವಕಾಶವನ್ನು ಕೊಡಬೇಕಾಗಿದೆ. ತಾವು ದಯಮಾಡಿ ಬೇಗ ಮುಗಿಸಿದರೆ ಒಳ್ಳೆಯದು.

ಶ್ರೀ ಎಂ. ಮಹದೇವ್,—ಮುಗಿಸುತ್ತೇನೆ, ಕೆಲವು ಐಎಎಸ್ ಆಫೀಸರ್ಸ್ ಏನು ಹೇಳುತ್ತಾರೆಂದರೆ ಮಿನಿಸ್ಟರ್ಸ್ ಮಿನಿಟ್ಸ್ ಕೊಟ್ಟರೂ ನೇರವಾಗಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಈ ಆಟಿಟ್ಯೂಡ್ ಇದೆಯಲ್ಲಾ ಇದು ಡೆಮಾಕ್ರಸಿಗೆ ಡೇಂಜರ್ ಆಗುತ್ತದೆ. ಇದು ಡೆಮಾಕ್ರಸಿಗೆ ಡಿಸ್‌-ರೆಸ್ಪೆಕ್ಟ್ ಆಗುತ್ತದೆ. ನೇರವಾಗಿ ಸೆಕ್ರೆಟರಿ ಮುಖಾಂತರ ಬರಬೇಕು ಎಂದು ಹೇಳುತ್ತಾರೆ. ನೇರವಾಗಿ ಬಂದರೆ ನಾವು ಮಾಡುತ್ತೇವೆ, ಇದನ್ನು ತಾವು ಅರ್ಥಮಾಡಿಕೊಳ್ಳಬೇಕು. ಆದರೆ ಅವರು ಯಾವ ರೀತಿ ತಪ್ಪು ಮಾಡುತ್ತಾರೆ. ಎನ್ನುವುದನ್ನು ಹೇಳುತ್ತೇನೆ. ಒಬ್ಬ ಡಿವಿಜನ್ ಕಮಿಷನರ್‌ಗೆ ಮೊನ್ನೆ ತಾನೇ ಸರ್ಕಾರದಿಗದ ಯಾವುದೇ ಕಾರಣದಿಂದ ವರ್ಗಾವಣೆ ಮಾಡಿಫಿಕೇಷನ್ ಅಥವಾ ಅದನ್ನು ಮಾಡಕೂಡದು ಎಂದು ಆದೇಶ ಹೋಗಿದ್ದರೂ ಅದನ್ನು ವಯೊಲೇಟ್ ಮಾಡಿ ಮಾಡಿದ್ದಾರೆ. ಮತ್ತೆ ಯಾವ ಒಬ್ಬನನ್ನು ಸಸ್ಪೆಷನ್‌ನಲ್ಲಿ ಇಟ್ಟಿದ್ದರೋ ಅವನಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಒಬ್ಬ ಡಿವಿಜನಲ್ ಕಮಿಷನರ್ ಐ. ಎ. ಎಸ್. ಆಫೀಸರ್ ಆಗಿರತಕ್ಕಂಥವರ ಗಮನಕ್ಕೆ ಈ ವಿಷಯವನ್ನು ತಂದರೂ ಅದನ್ನು ಅವರ ಗಮನಕ್ಕೆ ತೆಗೆದುಕೊಂಡಿಲ್ಲ. ಮಾನ್ಯ ಕಂದಾಯ ಸಚಿವರ ಗಮನಕ್ಕೆ ತಂದಾಗ ಅವರು ಅದಕ್ಕೆ ಎಕ್ಸ್‌ಪ್ಲನೇಷನ್ ಕಾಲ್‌ಫರ್ ಮಾಡಿದ್ದಾರೆ. ಗೌರ್ನಮೆಂಟ್ ಆರ್ಡರ್‌ನ್ನು ವಯೊಲೇಟ್ ಮಾಡಿ ಟ್ರಾನ್ಸ್‌ಫರ್ ಮಾಡಿರುವುದು ನಿಜ. ಸಸ್ಪೆನ್‌ಷನ್ ಮಾಡಿರುವವರಿಗೆ ಪ್ರಮೋಷನ್ ಕೊಟ್ಟಿರುವುದೂ ನಿಜ. ಮತ್ತೆ ಇದನ್ನು ಅವರ ಗಮನಕ್ಕೆ ತಂದಾಗ ಟ್ರಾನ್ಸ್‌ಫರ್ ಆರ್ಡರನ್ನು

ಕ್ಯಾನ್ಸಲ್ ಮಾಡಿದರು, ಮಂತ್ರಿಗಳ ಆದೇಶ ಹೋದ ಮೇಲೆ ಆ ಸಸ್ಪೆಂಡ್ ಆಗಿದ್ದವರಿಗೆ ಪ್ರಮೋಷನ್ ಕೊಟ್ಟಿದ್ದರಲ್ಲಾ ಆ ಪ್ರಮೋಷನ್ ಕೂಡಾ ಕ್ಯಾನ್ಸಲ್ ಆಗಿರುವುದು ನಿಜ. ಈ ರೀತಿ ತಪ್ಪು ಮಾಡಿಕೊಂಡು ಹೋಗುವಂತಹ ಅಧಿಕಾರಿಗಳ ಬಗ್ಗೆ ನಾವು ಟೀಕೆ ಟಿಪ್ಪಣಿಯನ್ನು ಮಾಡಬೇಕಾಗುತ್ತದೆ. ಮತ್ತೆ ಕೆಲವು ಐ. ಎ. ಎಸ್. ಅಧಿಕಾರಿಗಳು ಬಹಳ ಚೆನ್ನಾಗಿ ಬಿಹೇವ್ ಮಾಡುತ್ತಾರೆ. ಕೆಲವು ಆಫೀಸರ್‌ಗಳ ಕಛೇರಿಗೆ ನಾವು ಹೋದರೆ ಅವರು ನಮಗೆ ತಕ್ಷಣವೇ ಇಂಟರ್‌ವ್ಯೂವನ್ನು ಸಹಾ ಕೊಡುತ್ತಾರೆ. ಮತ್ತೆ ನಾವು ಯಾರ ಮರ್ಜಿಗೋಸ್ಕರ ಅಲ್ಲಿಗೆ ಹೋಗುವುದಿಲ್ಲ. ನಾವು ಹೋಗತಕ್ಕಂಥದ್ದು ಸಾರ್ವಜನಿಕರ ಕೆಲಸಕ್ಕೋಸ್ಕರ ನಮ್ಮ ಸ್ವಂತ ಕೆಲಸಗಳು ಏನೂ ಇರುವುದಿಲ್ಲ. ನಮಗೆ ಲೈಸೆನ್ಸ್ ಕೊಡಿ, ನನ್ನ ಮಗನಿಗೆ ಕೆಲಸ ಕೊಡಿ ಎಂದು ಕೇಳುವುದಕ್ಕೆ ನಾವೇನೂ ಹೋಗುವುದಿಲ್ಲ. ಅಂಥ ಫೇವರ್ ಮಾಡಿ ಎಂದು ನಾವು ಅಧಿಕಾರಿಯ ಹತ್ತಿರ ಕೂಡಾ ಹೋಗುವುದಿಲ್ಲ. ನಾವು ಸಾರ್ವಜನಿಕರ ಕೆಲಸಕ್ಕೋಸ್ಕರ ಹೋಗುತ್ತೇವೆ. ನಾವು ಶಾಸಕರಾಗಿದ್ದುಕೊಂಡು ಸಾರ್ವಜನಿಕರ ಕೆಲಸಕ್ಕೋಸ್ಕರ ಸಮಯ ಮತ್ತು ವೇಳೆಯನ್ನು ಮೀಸಲಾಗಿಟ್ಟುಕೊಂಡು ಅಧಿಕಾರಿಗಳನ್ನು ನೋಡಿ ಅಪ್ರೋಚ್ ಮಾಡಬೇಕಾಗುತ್ತದೆ. ಅದು ಬಿಟ್ಟರೆ ಅಲ್ಲಿ ಬೇರೆ ಏನೂ ಕೆಲಸ ಇರುವುದಿಲ್ಲ. ನಾವು ಶಾಸಕರುಗಳು ಬೆಂಗಳೂರಿಗೆ ಬರುವಾಗ ನೂರೆಂಟು ಕೆಲಸಗಳನ್ನು ಹೊತ್ತುಕೊಂಡು ಬರುತ್ತೇವೆ, ಇವರ ಹತ್ತಿರ ಕಾಲವ್ಯಯ ಮಾಡುವುದಕ್ಕಾಗುವುದಿಲ್ಲ. ವಿತ್ ಇನ್ ದಿ ಫ್ರೇಮ್ ಆಫ್ ದಿ ರೂಲ್ಸ್ ಏನು ಎಂದು ನೋಡಿ, ಅಂಥ ಕೆಲಸಗಳು ಏನಾದರೂ ಇದ್ದರೆ ನೋಡಿ ಹೇಳಬಹುದು ಅಥವಾ ಈ ರೀತಿಯ ಪರಿಸ್ಥಿತಿ ಇದೆ ಎಂದು ಹೇಳಬಹುದು. ಅಷ್ಟು ಹೇಳುವಷ್ಟು ಸೌಜನ್ಯ ಕೂಡಾ ಕೆಲವು ಅಧಿಕಾರಿಗಳಿಗೆ ಇಲ್ಲ. ಕೆಲವು ಅಧಿಕಾರಿಗಳಿಗೆ ಫೋನ್ ಮಾಡಿದರೆ ಮಾತನಾಡುವುದೇ ಇಲ್ಲ. ಫೋನನ್ನೇ ಎತ್ತುವುದಿಲ್ಲ. ಅವರು ಎಲ್ಲಿಗೋ ಹೋಗಿದ್ದಾರೆ ಎಂದು ಹೇಳುವುದು ಮತ್ತೆ ಅವರು ನಮ್ಮ ಎದುರಿನಲ್ಲಿಯೇ ಹೋಗುವುದು ಈ ರೀತಿ ಕೆಲವು ಅಧಿಕಾರಿಗಳು ವರ್ತಿಸುತ್ತಾರೆ. ಈ ರೀತಿ ವರ್ತನೆ ಮಾಡತಕ್ಕಂಥ ಐ. ಎ, ಎಸ್. ಅಧಿಕಾರಿಗಳು ಇದ್ದಾರೆ. ಕೆಲವು ಒಳ್ಳೆಯ ಅಧಿಕಾರಿಗಳೂ ಇದ್ದಾರೆ, ಇಲ್ಲ ಎಂದು ನಾವು ಹೇಳುವುದಿಲ್ಲ. ಆದರೆ ಆರೀತಿ ವರ್ತಿಸತಕ್ಕಂಥ ಅಧಿಕಾರಿಗಳ ಸರ್ವೀಸ್ ಬೇಡ. ಅಂತಹವರನ್ನು ವಾಪಸ್ ಕಳಿಸಿ. ನಮ್ಮ ಕರ್ನಾಟಕದಲ್ಲಿ ಇಂತಹವರ ಸರ್ವೀಸ್ ಬೇಡವೇ ಬೇಡ. ಇಂತಹವರನ್ನು ಕಟ್ಟಿಕೊಂಡು ಇಂತಹ ಮಿಷಿನರಿಗಳನ್ನು ಸರಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಮಿಷಿನರಿಗಳು ಸರಿ ಬರಬೇಕಾದರೆ ಯಾರು ಹೆಡ್ ಆಫ್ ದ ಡಿಪಾರ್ಟ್‌ಮೆಂಟ್ ಇದ್ದಾರೆ ಅವರು ಡೆಮೊಕ್ರಸಿಗೆ ಗೌರವ ಕೊಡಬೇಕು, ಚುನಾಯಿತ ಪ್ರತಿನಿಧಿಗಳಿಗೆ ಗೌರವ ಕೊಡಬೇಕು ಮತ್ತು ಸಾರ್ವಜನಿಕರ ಕೆಲಸಗಳು ಏನು ಇವೆ ಅದನ್ನು ತಕ್ಷಣ ಅಟೆಂಡ್ ಮಾಡಿ ಕಳಿಸಿಕೊಡಬೇಕು. ಈಗ ಏನು ಆಗುತ್ತದೆ ಎನ್ನುವುದನ್ನು ಹೇಳುತ್ತೇನೆ. ಅಧಿಕಾರಿಗಳು ಫ್ಯಾಕ್ಟ್ಸ್ ಕೇಳಿ, ಫೈಲ್ ಇಲ್ಲದಿದ್ದರೆ ತರಿಸಿಕೊಡಲಿಕ್ಕೆ ಆಗುವುದಿಲ್ಲವೇ ? ಉದಾಹರಣೆಗೆ ಒಬ್ಬ ಶಾಸಕರು ನೂರಾರು ಮೈಲಿಗಳಿಂದ ಅಂದರೆ ಗುಲ್ಬರ್ಗಾದಿಂದ ಬರುತ್ತಾರೆ, ಬಂದು ಒಬ್ಬ ಐ. ಎ. ಎಸ್. ಅಧಿಕಾರಿಯನ್ನು ನೋಡುತ್ತಾರೆ ಸ್ವಾಮಿ ಒಂದು ಕೆಲಸವಿದೆ. ಇದನ್ನು ಸ್ವಲ್ಪ ನೋಡಿ ಎಂದು ಹೇಳಿದರೆ, ನೋಡುತ್ತೇನೆ. ವಿಚಾರ ಮಾಡುತ್ತೇನೆ ಎಂದು ಹೇಳಿ ೨–೩ ದಿನಗಳಲ್ಲಿ ನೋಡಲಿಕ್ಕೆ ಆಗಲಿಲ್ಲ ಎಂದರೆ ಹೇಗೆ. ಅವರು ಎಷ್ಟು ದೂರದಿಂದ ಬರಬೇಕು. ಅವರ ಪ್ರಯಾಣದ ವೆಚ್ಚ ಎಷ್ಟು ಆಗುತ್ತದೆ ? ಅವರ ಟೈಮ್ ಎಷ್ಟುವ್ಯಯ ಆಗುತ್ತದೆ. ಅವರು ಮೂರು ದಿವಸ ಇಲ್ಲಿ ಉಳಿದುಕೊಳ್ಳುವುದಕ್ಕಾಗುತ್ತದೆಯೇ ? ಅವರು ಬಂದ ಕೂಡಲೇ ಫೋನ್ ಮಾಡಿ ಯಾರು ಸಂಬಂಧಪಟ್ಟ ಅಧಿಕಾರಿ ಅಥವಾ ಗೆಜೆಟೆಡ್ ಅಸಿಸ್ಟೆಂಟ್ ಇರುತ್ತಾರೆ ಅವರನ್ನು ಕರೆಸಬೇಕು ಅವರಿಗೆ ಬೇಕಾದಷ್ಟು ಅಸಿಸ್ಟೆಂಟ್‌ಗಳನ್ನು ಕೊಟ್ಟಿದ್ದಾರೆ ಅವರನ್ನು ಕರೆಸಿ ಏನು ಆ ಫೈಲ್ ಬಂದಿದೆ ಅದರ ಹಿಸ್ಟರಿ ಹೇಳಿಬಿಡಿ ಎಂದು ಹೇಳಿಬಿಟ್ಟರೆ ಅದನ್ನು ತಿಳಿದುಕೊಂಡು ಆದರ ವಿಚಾರ ಹೇಳಿ ಹೋಗುತ್ತಾರೆ. ಇಷ್ಟು ಹೇಳುವುದಕ್ಕೆ ಸೌಜನ್ಯ ಇಲ್ಲದೇ I will look into the matter– ಎಂದು ಒಂದೇ ಸಿಂಪಲ್ ಸೆಂಟೆನ್ಸ್‌ನಲ್ಲಿ ಹೇಳಿದರೆ ಹೇಗೆ ಆಗುತ್ತದೆ. ಎಲ್ಲಿ ಕೆಲಸ ಆಗಬೇಕು ಎನ್ನುವುದು ಶಾಸಕರಾಗಲೀ ಅಥವಾ ಯಾರಿಗೇ ಆಗಲೇ ಗೊತ್ತಾಗುತ್ತದೆಯೋ ಐದಾರು ಜನ ಇವೊತ್ತಿನ ದಿವಸ ಬೆಂಗಳೂರಿನಲ್ಲಿ ಇರುವುದಕ್ಕಾಗುತ್ತದೆಯೇ ? ಅವನ್ನು ಹೋಟೆಲ್‌ನಲ್ಲಿ ಇಷ್ಟೊಂದು ಬೆಲೆಯನ್ನು ತೆತ್ತುಕೊಂಡು ರೂಮ್ ಮಾಡಿಕೊಂಡು ಇಲ್ಲಿ ಹಣ–ಕಾಲ ವ್ಯಯ ಮಾಡಲಿಕ್ಕೆ ಆಗುತ್ತದೆಯೇ ? ಆತನ ಟೈಂ ವ್ಯಾಲ್ಯು ಮನಿ ವ್ಯಾಲ್ಯು ಅರ್ಥ ಮಾಡಿಕೊಳ್ಳಬೇಕು. ಶಾಸಕರು ಏಕೆ ಇಷ್ಟು ಜನರನ್ನು ಕರೆದುಕೊಂಡು ನಮ್ಮ ಹತ್ತಿರ ಬರುತ್ತಾರೆ ಎಂದು ತಿಳಿದು ಕೆಲಸ ಮಾಡಿಕೊಡಬೇಕು ಕೆಲವು ಆಫೀಸರ್ಸ್ ನಾವು ಹೋದ ಕೂಡಲೇ ಫೈಲು ತರಿಸಿ ಪರಿಸ್ಥಿತಿ ಹೀಗಿದೆ ಎಂದು ಹೇಳಿಬಿಡುತ್ತಾರೆ ಆಗ ನಾವು ಮರು ಮಾತನಾಡುವುದಿಲ್ಲ ಆದ್ದರಿಂದ ಬೇರೆಯವರೂ ಸಹ ಇದನ್ನು ಸ್ವಲ್ಪ ವಿಚಾರ ಮಾಡಬೇಕು.

ಛೇರ್ಮನ್.—ಮುಗಿಸುತ್ತೀರಾ...

ಶ್ರೀ ಎಂ. ಮಹದೇವ್.—ಈ ತರಹ ಡಿಸ್ಕರೇಜ್ ಮಾಡಿದರೆ ಹೇಗೆ ? ಸಮಸ್ಕಾರ ಇಷ್ಟು ಹೊತ್ತು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು...

†ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ).— ಸನ್ಮಾನ್ಯ ಸಭಾಧ್ಯಕ್ಷರೇ ಎಲ್ಲಿಂದ ಪ್ರಾರಂಭ ಮಾಡ ಬೇಕು, ಎಲ್ಲಿ ಮುಗಿಸಬೇಕು ನನಗೇ ತಿಳಿಯುತ್ತಾ ಇಲ್ಲ......

ಶ್ರೀ ಬಿ. ಬಸವಲಿಂಗಪ್ಪ.—ಇದು ಒಪ್ಪಿಕೊಂಡ ಮಾತು.

ಶ್ರೀ ಡಿ.ಬಿ. ಚಂದ್ರೇಗೌಡ.—ಒಪ್ಪಿಕೊಂಡ ಮಾತು ಈ ಸದನದಲ್ಲಿ ನಡೆಯುತ್ತಿಲ್ಲ. ಚರ್ಚೆ ಗೋಸ್ಕರ ಚರ್ಚೆ ಮಾಡಬೇಕು, ಚಪಲಕ್ಕೋಸ್ಕರ ಮಾಡಬೇಕು ಎಂದು ಇಲ್ಲಿ ನಾನು ಚರ್ಚೆಗೆ ನಿಂತಿಲ್ಲ. ಬಹಳ ಪ್ರಯತ್ನ ಪಟ್ಟ ಸ್ವಲ್ಪ ಮಟ್ಟಿಗಾದರೂ ಆಡಳಿತ ಸುಧಾರಣೆಯಲ್ಲಿ ಅಥವಾ ವ್ಯವಸ್ಥೆಯಲ್ಲಿ ನಮಗೆ ತಿಳಿದಿದ್ದನ್ನು ಹೇಳಬೇಕು ಎನ್ನುವ ಸದಿಚ್ಛೆಯಿಂದ ನಾನು ಇಲ್ಲಿ ನಿಂತಿದ್ದೇನೆ. ೧೫ ಬೇಡಿಕೆಗಳು ಇವೆ. ಈ ಬೇಡಿಕೆಗಳ ಒಳಗಡೆ ಬೇಡಿಕೆಗಳು ಇವೆ. ಇವನ್ನೆಲ್ಲಾ ಲೆಕ್ಕ ಹಾಕಿದರೆ ೪೦-೪೫ ಬೇಡಿಕೆಗಳು ಆಗುತ್ತವೆ. ನಾನು ಅವಷ್ಟಕ್ಕೂ ಹೋಗುವುದಿಲ್ಲ. ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳ ಬೇಡಿಕೆ ಯನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ ಜಿಲ್ಲಾ ಪರಿಷತ್ತಿಗೆ ಸೀಮಿತವಾದ ಒಂದೆರಡು ವಿಷಯಗಳನ್ನು ಈ ಸದನಕ್ಕೂ ಸದನದ ಮುಖಾಂತರ ಸಾರ್ವಜನಿಕರ ಗಮನಕ್ಕೂ ತರಬೇಕು ಎಂದು ಇದ್ದೇನೆ. ಈಗಾಗಲೇ ಚರ್ಚೆ ಮಾಡಿದ ಆಳುವ ಪಕ್ಷದ ಸದಸ್ಯರ ಅಭಿಪ್ರಾಯಗಳನ್ನು ಹೇಳಿದೆ. ಕೆಲವು ಬೇಸಿಕ್ ಇಶ್ಯೂಸ್‌ಅನ್ನು ಹಿಂದಿನ ಮಂತ್ರಿಗಳು ನಿನ್ನೆ ತಾನೇ ಈ ಸದನದಲ್ಲಿ ಎತ್ತಿದರು. ಅದು ಮೊದಲು ನಿರ್ಧಾರ ಆಗಬೇಕು. ಈ ಕಾನ್‌ಸೆಪ್ಟ್ ಬಗ್ಗೆ ಈ ಸರ್ಕಾರಕ್ಕೆ ನಂಬಿಕೆ ಇದೆಯೋ ಅಥವಾ ಇಲ್ಲವೋ ಎಂದು ನಾನು ಮೊದಲನೆಯ ಪ್ರಶ್ನೆಯನ್ನು ಈಗಿನ ಮಂತ್ರಿಗಳಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಡಿಸೆಂಟ್ರಲೈಸೇಷನ್ ಕಾನ್‌ಸೆಪ್ಟ್ ನಾವು ಹೇಳಿದ್ದಲ್ಲ. ನಾವು ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡಿದ್ದೇವೆ. ಅದು ಪರಿಪೂರ್ಣ ಆಗಿದೆ ಎಂತಲೂ ನಾವು ಹೇಳುವುದಿಲ್ಲ. ಇದು ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರು ಕಂಡಂತಹ ಕನಸು. ಜಯಪ್ರಕಾಶ ನಾರಾಯಣ್ ಅವರು ಕಂಡಂತಹ ಕನಸು. ಇನ್ನೂ ಅನೇಕ ಮಹಾನ್ ವ್ಯಕ್ತಿಗಳು ಕಂಡಂಥ ಕನಸು. ಇದು ಚತುಸ್ತಂಭ ರಾಷ್ಟ್ರ ನಾಲ್ಕು ವ್ಯವಸ್ಥೆಯು ಒಂದು ಆಡಳಿತ ಈ ದೇಶದಲ್ಲಿ ಬರ ಬೇಕು ಎನ್ನತಕ್ಕ ಮೂಲ ಚಿಂತನೆ, ಈ ದೇಶದ ಸ್ವಾತಂತ್ರ್ಯದ ಪಿತೃ ಗಾಂಧಿಯವರದ್ದು. ಸ್ವಾತಂತ್ರ್ಯ ನಂತರ ೪೦ ವರ್ಷಗಳ ಕಾಲ ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟಿದ್ದನ್ನು ಕರ್ನಾಟಕದಲ್ಲಿ ಪ್ರಯೋಗಾತ್ಮಕವಾಗಿ ತೆಗೆದು ಪ್ರಾಮಾಣಿಕವಾಗಿ ಅದನ್ನು ಜಾರಿಗೆ ಕೊಡತಕ್ಕ ಪ್ರಯತ್ನ ಮಾಡಿದ ಕೀರ್ತಿ ಶ್ರೀಮಾನ್ ನಜೀರ್‌ಸಾಬ್ ಅವರಿಗೆ ಸಲ್ಲುತ್ತದೆ. ಆದರೆ ಈಗ ಚರ್ಚೆ ಏನು, ವಸ್ತುಸ್ಥಿತಿಯಲ್ಲಿ ರೆವಲ್ಯೂಷನ್ ಆಫ್ ಪವರ್ ಆಗಿದೆಯೇ. ಆ ಅಧಿಕಾರ ಶಾಸನಸಭೆಗೆ ಇದೆಯೇ ಎನ್ನುವುದು ಮೂಲ ಸಮಸ್ಯೆ, ಅದಕ್ಕಾಗಿ ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ಮುಂದೆ ಬರತಕ್ಕಂಥ ಸಂಸತ್ತಿನ ಅಧಿವೇಶನದಲ್ಲಿ ಈ ವಿಚಾರದಲ್ಲಿ ರಾಜ್ಯಾಂಗ ತಿದ್ದುಪಡಿ ತರಬೇಕು ಎನ್ನತಕ್ಕಂಥ ನಿರ್ಣಯವನ್ನು ವನ್ನು ಕೇಂದ್ರದ ಮಂತ್ರಿಮಂಡಲ ಮಾಡಿದೆ, ಅದಕ್ಕೆ ಪೂರ್ವಭಾವಿಯಾಗಿ ರಾಷ್ಟ್ರದ ಪ್ರಧಾನ ಮಂತ್ರಿ ಗಳು ಮುಖ್ಯ ಮಂತ್ರಿಗಳ ಸಮ್ಮೇಳನವನ್ನು ಕರೆದು ತಮ್ಮ ಅಭಿಪ್ರಾಯವನ್ನು ಅಲ್ಲಿ ಮಂಡನೆ ಮಾಡಿ ಮುಖ್ಯ ಮಂತ್ರಿಗಳ ಸಲಹೆಯನ್ನು ಪಡೆದಿದ್ದಾರೆ. ಜೂನ್ ೧೧ನೇ ತಾರೀಖಿನ ಪತ್ರಿಕಾ ವರದಿಯಲ್ಲಿ ಹೀಗೆ ಬರೆದಿದ್ದಾರೆ. in Deccan Herald, on the heading "Chief Minist^er endorses National Frond move on Panchayatraj" it was mentioned. ಇಂತಹ ಮೂಲ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವುದಕ್ಕಾಗಿ ರಾಷ್ಟ್ರದ ಮುಖ್ಯ ಮಂತ್ರಿಗಳೆಲ್ಲ ಸಭೆ ಸೇರಿ ಒಂದು ಒಪ್ಪಂದವಾಗಿದೆ ಅಂದಮೇಲೆ ಅಂತಿಮವಾಗಿ ಸಂಸತ್ತು ಏನು ನಿರ್ಣಯ ಮಾಡು ತ್ತದೆ ಅಲ್ಲಿಯವರೆಗೆ ನಾವು ಕಾಯಬೇಕು, ಆದುದರಿಂದ ಆತುರಾತುರವಾಗಿ ಯಾವುದೇ ನಿರ್ಣಯ ಮಾಡಬಾರದು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅದರಲ್ಲಿ ಪ್ರಧಾನ ಮಂತ್ರಿಗಳು ಹೀಗೆ ಹೇಳಿದ್ದಾರೆ. ಅದನ್ನು ನಾನು ಕ್ವೋಟ್ ಮಾಡುತ್ತೇನೆ. I quote the Prime Minister. He described the proposed constitutional chanes for devolution of power as initial steps in the process of turnging independence into freedom. ಸ್ವಾತಂತ್ರ್ಯವನ್ನು ಸುರಾಜ್ಯವಾಗಿ ಪರಿವರ್ತನೆ ಮಾಡು ವುದಕ್ಕೆ ಎಲ್ಲೆಲ್ಲಿ ಶಾಸನಬದ್ಧವಾದ ಅಧಿಕಾರವನ್ನು ರಾಜ್ಯಾಂಗದ ಮೂಲಕ ಕೊಡಬೇಕೋ ಅದನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಆಲೋಚನೆ ಮಾಡಿದ್ದಾರೆ. ಆದುದರಿಂದ ಇದರ ಬಗ್ಗೆ ಹೆಚ್ಚು ಚರ್ಚೆ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿ ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅನಾವಶ್ಯಕ ಎಂದು ಕಾಣುತ್ತದೆ. ಆದರೆ ಹಿಂದಿನ ಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಅದನ್ನು ಸದನದ ಗಮನಕ್ಕೆ ತರಬೇಕು, ೭-೫-೧೯೯೦ರ ಹಿಂದೂ ಪತ್ರಿಕೆಯಲ್ಲಿ ವರದಿಯಾಗಿದೆ. ಮೇ ೬ನೇ ತಾರೀಖು ಅಂದಿನ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಬಸವಲಿಂಗಪ್ಪನವರು ಈ ಮಾತನ್ನು ಹೇಳಿದ್ದಾರೆ.

> "The Forest and Animal Husbandry Minister now, Panchayatraj Minister then, Mr. Basavalingappa has alleged that he was shifted from the portfolio of Rural Development and Panchayatraj when he was about to implement proposals to end the slavery of Scheduled Castes & Scheduled Tribes in the Mandal Panchayats. He was participating in Dr B.R. Ambedkar Birth Centenary Celebrations organised by the Karnataka Scheduled Castes and Scheduled Tribes P & T Employees Welfare Association and spoke with bitterness about the change in the portfolio."

Am I responsible for that ?

SRI B. BASAVALINGAPPA.—I am not worried.

SRI D.B. CHANDRE GOWDA.—I do not know. When you speak with bitterness about your portfolio, you should have decided whether you should stay in the cabinet or not. I would ask the Chief Minister, being in the cabinet, with reference to Panch yatraj, a responsible and senior Minister and Member of the cabinet criticises the Government, what is the inference I should draw ?

SMT. RENUKA RAJENDRAN.—What is wrong in it ?

SRI D.B. CHANDRE GOWDA.—There is nothing wrong. That is why you are sitting in the back-benches. You look to your past history, what wrong you committed.

> "Mr. Basavalingappa said, Scheduled Castes continue to be slaves in the Mandal Panchayat set up. The Pradhans had financial powers and could spend between Rs. 5 lakhs and 25 lakhs a year."

೩.೦೦ ಪಿ. ಎಂ.

> "......The rotation system he had suggested was semiler to the roster system followed in the government services. he said. The Minister said he would have implemented the various ideas he had in mind for the upliftment of the Scheduled Castes and Scheduled Tribes through the Mandal Panchayaths had he been allowed to hold his earlier portfolio for another five months."

If that is the case, does this Government oppose the very set up which he proporgated ? If that is the case how does he continue ?

ಹರಿಜನ-ಗಿರಿಜನರ ಬಗ್ಗೆ ಬಹಳ ಆಸಕ್ತಿಯಿಂದ ಮಾತನಾಡತಕ್ಕ ಕಾಂಗ್ರೆಸ್ ಪಕ್ಷ ಏನೊಂದು ವಿಚಾರವನ್ನು ಅನುಷ್ಠಾನಕ್ಕೆ ತರತಕ್ಕ ಪ್ರಯತ್ನ ಮಾಡಿರತಕ್ಕ ಮಂತ್ರಿಯನ್ನು ಬದಲಾವಣೆ ಮಾಡಿತು ಅಂದರೆ, ಇವರು ಇಲ್ಲಿ ಹೇಳತಕ್ಕ ಮಾತಿಗೂ, ಆಚರಣೆಯಲ್ಲಿ ತರುವುದಕ್ಕೂ ವಿಶ್ವಾಸ ಇಲ್ಲ ಅಂಥ ಹೇಳಿದರೆ, ಅದನ್ನು ಒಪ್ಪಬೇಕಾಗುತ್ತದೆ. This is all my concern. ನಾನು ಅದಕ್ಕಿಂತ ಹೆಚ್ಚು ದೀರ್ಘವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಪಂಚಾಯತ್ ರಾಜ್ ಬಗ್ಗೆ ಮಾತನಾಡು ವುದಕ್ಕೆ ಬಹಳಷ್ಟು ಅವಕಾಶವಿದೆ. ಇದು ಹಿಂದಿನ ಮಂತ್ರಿಗಳದ್ದು ನಿನ್ನೆ ಈ ಸಭೆಯಲ್ಲಿ ದ್ವಂದ್ವ ಪ್ರಾರಂಭವಾಯಿತು. ಒಬ್ಬ ಗೌರವಾನ್ವಿತ ಮಂತ್ರಿಗಳು ಪವರ್ಸ್ ರೆವ್ಯೂಲ್ಯೂಷನ್ ಆಗಿಲ್ಲ ಅಂದರು; ಇನ್ನೊಬ್ಬರು ಆಗಿದೆ, ಅದರಂತೆ ಕಾರ್ಯಾಚಾರಣೆ ಮಾಡುತ್ತೇವೆಂದು ಹೇಳಿದರು. ಈ ಮಸೂದೆ ಯನ್ನು ನಾವು ಇಲ್ಲಿ ಮಂಡನೆ ಮಾಡಿದಾಗ ಅದು ಜನತಾದಳದ ಮಸೂದೆ ಆಗಿರಲಿಲ್ಲ. ಜನತಾ ಪಕ್ಷದ ಮಸೂದೆ ಆಗಿರಲಿಲ್ಲ. ಒಟ್ಟಾರೆ ಅಭಿಪ್ರಾಯವನ್ನು ರೂಢಿಸತಕ್ಕ ಎಲ್ಲ ಹಂತದ ಎಲ್ಲ ವೇದಿಕೆಗಳ, ಎಲ್ಲ ಅವಕಾಶವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅಂದಿನ ಸರ್ಕಾರ ಮತ್ತು ಅಂದಿನ ಮಂತ್ರಿಗಳು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದರು. ತಾವು ಕೂಡ ಸಭೆಯಲ್ಲಿದ್ದೀರಿ, ಈ ಬಿಲ್ಲಿಗೆ ಏನೇನು ಬೇಕೋ ರಿವ್ಯೂಲ್ಯೂಷನ್ ಆಗುತ್ತದೆಯೋ ಅಥವಾ ಇಲ್ಲವೆ ಎಂಬ ಮುಖ್ಯ ಅಂಶಗಳನ್ನು ಈ ಸಭೆ ಸಾಕಷ್ಟು ದೀರ್ಘವಾಗಿ ಚರ್ಚೆ ಮಾಡಿತು. Now the Minister questions the wisdom of this House. ಈ ಸದನ ಈ ನಿರ್ಣಯವನ್ನು ಅಂಗೀಕರಿಸುವುದಕ್ಕೆ ಮುಂಚೆ ಜಂಟಿ ಸಲಹಾ ಸಮಿತಿಯನ್ನು ಮಾಡಿತು. ಅದರಲ್ಲಿ ಎಲ್ಲಪಕ್ಷ ಗಳಸದಸ್ಯರುಗಳನ್ನು ಒಳಗೊಂಡಂತಹ ಈ ಸಮಿತಿ ಕೊಟ್ಟಂತಹ ಒಂದು ನಿರ್ಣಯವನ್ನು ಈ ಸಭೆ ಅಂಗೀಕರಿಸಿತು. ಸಭೆ ಅಂಗೀಕರಿಸಿದ ಕೂಡಲೇ ಶಾಸನ ಆಗುವುದಿಲ್ಲ. ರಾಜ್ಯಾಂಗಕ್ಕೆ ತದ್ವಿರುದ್ಧವಾದಂಥ ಯಾವುದಾದರೂ ಕಲಮುಗಳು ಇದ್ದರೆ ಅದನ್ನು ಕಿತ್ತುಹಾಕತಕ್ಕಂಥ ಜವಾಬ್ದಾರಿಯನ್ನು ರಾಜ್ಯಪಾಲರಿಗೆ ವಹಿಸಿಕೊಡಲಾಗಿದೆ. ರಾಜ್ಯಪಾಲರು ಈ ಬಿಲ್‌ನ್ನು ಸ್ಕ್ರೂಟಿನೈಸ್ ಮಾಡುತ್ತಾರೆ, ಅವರು ಈ ಬಿಲ್ಲನ್ನು ಸ್ಕ್ರೂಟಿನೈಸ್ ಮಾಡಿದರು. ಈ ಬಿಲ್ ರಾಜ್ಯಾಂಗದತ್ತವಾಗಿದೆ ಎನ್ನತಕ್ಕ ವಿಚಾರವನ್ನು ಒಪ್ಪಿಕೊಂಡು ರಾಷ್ಟ್ರಪತಿಯವರ ಒಪ್ಪಿಗೆಗಾಗಿ ಡೆಲ್ಲಿಗೆ ಕಳುಹಿಸಿದರು. ರಾಷ್ಟ್ರಪತಿಯವರು ತಾವು ಒಪ್ಪಿಗೆಯನ್ನು ಕೊಡುವುದಕ್ಕೆ ಮುಂಚೆ, ಕೇಂದ್ರ ಕಾನೂನು ಸಚಿವಾಲಯಕ್ಕೆ ಕಳುಹಿಸಿ ಕೊಟ್ಟರು. ಆಗ ನಮ್ಮ ಸರ್ಕಾರ ಇರಲಿಲ್ಲ ಕಾಂಗ್ರೆಸ್ ಸರ್ಕಾರ ಇತ್ತು. ಕಾಂಗ್ರೆಸ್‌ನ ಕಾನೂನು ಮಂತ್ರಿಗಳು ಕಾನೂನು ವ್ಯಾಪ್ತಿಯ ಜೊತೆಗೆ ರಾಜಕೀಯ ವ್ಯಾಪ್ತಿ ಯನ್ನೂ ಇತಿಮಿತಿಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು ಈ ಮಸೂದೆ ರಾಷ್ಟ್ರಪತಿಯವರ ಮನ್ನಣೆಗೆ, ಅನುಮೋದನೆಗೆ ಯೋಗ್ಯವಾಗಿದೆ ಎಂದು ಶಿಫಾರಸ್ಸು ಮಾಡಿದ ಮೇಲೆ, ರಾಷ್ಟ್ರಪತಿಯವರ ಒಪ್ಪಿಗೆ ಪಡೆದು ಮಸೂದೆ ಇಲ್ಲಿಗೆ ಬಂತು, ಹೀಗೆ ಬರುವುದಕ್ಕೆ ಮುಂಚೆ ಒಂದು ಅಂಶವನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಸರಿಸುಮಾರು 2 ವರ್ಷಗಳ ಕಾಲ ಈ ಮಸೂದೆಯನ್ನು ಧೂಳು ಹಿಡಿಯುವುದಕ್ಕೆ ಬಿಡತಕ್ಕ ಪ್ರಯತ್ನ ಆಯಿತು. ಆಗ ಇದರ ರೂವಾರಿ ಮಾನ್ಯ ನಜೀರ್ ಸಾಹೇಬರು ರಾಷ್ಟ್ರಪತಿ ಭವನದ ಮುಂದೆ ನಾನು ಆಮರಣಾಂತ ಉಪವಾಸ ಮಾಡುತ್ತೇವೆಂದು ಘೋಷಣೆ ಮಾಡಿದ ಮೇಲೆ ಅಲ್ಲಿಂದ ಹೊರಟಿತು. ಆದ್ದರಿಂದ ಇದಕ್ಕೆ ಬಹಳ ಇತಿಹಾಸ ಇದೆ. ಆದರಿಂದ ಲಘುವಾಗಿ ಇವತ್ತು ರೆವ್ಯೂಲ್ಯೂಷನ್ ಆಗಿಲ್ಲ ಹೇಳಿದಾಗ we are questioning the wisdom of the very House of which we are all the Members and the very institution we have honoured under the Constitution *i.e.*, the President of India and the Government. Can we go back to this position at this point of time and discuss. I leave it to you.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ವಿರೋಧಪಕ್ಷದ ನಾಯಕರ ವಾದ ನನಗೆ ಅರ್ಥವಾಗಲಿಲ್ಲ. ಈ ಸದನ ಶಾಸನ ಮಾಡಿದೆ, ಇಲ್ಲ ಎಂದು ಹೇಳಲಿಲ್ಲ. ಅದೇ ಶಾಸನವನ್ನು ತಿದ್ದುಪಡಿ ಮಾಡತಕ್ಕ, ಬದಲಾವಣೆ ಮಾಡತಕ್ಕ ಅಧಿಕಾರ ಈ ಶಾಸನ ಸಭೆಗೆ ಇದೇ ತಾನೇ, ಅಷ್ಟಕ್ಕಾದರೂ ಒಪ್ಪಿಕೊಳ್ಳು ತ್ತೀರಲ್ಲಾ.

ಶ್ರೀ ಡಿ. ಬಿ. ಚಂದ್ರೇಗೌಡ.—ನೀವು ಸ್ವಲ್ಪ ತಡವಾಗಿ ಬಂದಿರಿ, ತಮಗೆ ಬ್ಯಾಕ್‌ಗ್ರೌಂಡ್ ಗೊತ್ತಾಗಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ. ಆ ಬ್ಯಾಕ್‌ಗ್ರೌಂಡ್ ಏನು ?

ಶ್ರೀ ಡಿ. ಬಿ. ಚಂದ್ರೇಗೌಡ.—ಬ್ಯಾಕ್ ಗ್ರೌಂಡ್ ಏನೆಂದರೆ, Hon. Minister of your Cabinet of the day ಡೆವಲ್ಯೂಷನ್ ಆಫ್ ದಿ ಪವರ್ಸ್ ಆಗಿಲ್ಲ ಎಂದು ಬೇಸಿಕ್ ಇಸ್ಯು ರೈಸ್ ಮಾಡಿದ್ದಾರೆ.

ಶ್ರೀ ಕೆ. ಶಿವಮೂರ್ತಿ.—ಡೆವಲ್ಯೂಷನ್ ಅಂದರೆ ಏನು, ನೀವು ಬಡವರನ್ನು ತೆಗೆದುಕೊಂಡು ಹೋಗಿ ಶ್ರೀಮಂತರ ಕೈಗೆ ಕೊಟ್ಟಿರುವುದು. ಇದು ಡೆವಲ್ಯೂಷನ್ ಏನು ?

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಪರಮಾಧಿಕಾರವನ್ನು ಹೊಂದಿರತಕ್ಕ ಈ ಶಾಸನ ಸಭೆ ಒಂದು ಶಾಸನವನ್ನು ಮಾಡಿತ್ತೋ, ಅದೇ ಪರಮಾಧಿಕಾರವನ್ನು ಹೊಂದಿರತಕ್ಕ ಈ ಶಾಸನ ಸಭೆ ಆ ಶಾಸನಕ್ಕೆ ತಿದ್ದುಪಡಿ ಮಾಡತಕ್ಕ ಅಧಿಕಾರ ಇದೆ ಎಂದು ತಾವು ಒಪ್ಪಿಕೊಳ್ಳುತ್ತೀರಿ, ನಾವು ಒಪ್ಪಿಕೊಳ್ಳುತ್ತೇವೆ. ಅಂದಾಗ, In the wisdom of this House, if it feels that there is a necessity to bring an amendments nobody can prevent it. It is for the whims and fancies of this House.

ಶ್ರೀ ಡಿ. ಬಿ. ಚಂದ್ರೇಗೌಡ.—ನನ್ನ ಮೂಲ ಪ್ರಶ್ನೆ ನಿಮಗೆ ಅರ್ಥವಾಗಲಿಲ್ಲ. I did not question the authority of this House to amend this Act, no. ನಾನು ಪ್ರಾರಂಭದಲ್ಲಿ ಹೇಳಿದೆ. ಇಲ್ಲಿ ಈ ಒಂದು ಮಸೂದೆಗೆ ತಿದ್ದುಪಡಿ ತರಲಿಕ್ಕೆ ಅವಕಾಶ ಇಲ್ಲ ಎಂದು ಹೇಳಲಿಲ್ಲ. ಭಾರತದ ರಾಜ್ಯಾಂಗವೇ ೬೪ ಸಾರಿ ತಿದ್ದುಪಡಿ ಆಗಿದೆ. ಅದಕ್ಕಿಂತಲೂ ಇದು ದೊಡ್ಡ ಶಾಸನ ಎಂದು ನಾನೇನೂ ಭಾವನೆ ಮಾಡಿಲ್ಲ. ನಾನು ಹೇಳಿದ್ದು, ಏನೆಂದರೆ, ಒಂದು ಮೂಲತಃ ಪ್ರಶ್ನೆಯನ್ನು ಮಾನ್ಯ ಬಸವಲಿಂಗಪ್ಪನವರು ಎತ್ತಿದ್ದಾರೆ. ಆ ಮೂಲತಃ ಪ್ರಶ್ನೆ ಏನೆಂದರೆ, ಈ ಸಭೆ ತನಗೆ ಇರತಕ್ಕಂಥ ಪರಮಾಧಿಕಾರದನ್ನು ಬಳಸಿ, ತನಗೆ ಇದ್ದ ಅಧಿಕಾರವನ್ನು ಜಿಲ್ಲಾ ಸಮಿತಿಗಳಿಗೆ ಹಂಚಿಕೊಡತಕ್ಕಅಧಿಕಾರ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. That is the Point. ಆ ಕಾರಣದಿಂದ...

ಶ್ರೀ ಕಾಗೋಡು ತಿಮ್ಮಪ್ಪ.—ಅದು ಹೇಳಲಿಲ್ಲ,

ಶ್ರೀ ಡಿ. ಬಿ. ಚಂದ್ರೇಗೌಡ.—ನಿನ್ನೆ ಬೆಳಿಗ್ಗೆ ತಾವು ಇರಲಿಲ್ಲ ಎಂದು ಕಾಣುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ನೆನ್ನೆ ರಾಜ್ಯಾಂಗದ ನಿಲುವಿನ ಬಗ್ಗೆ ಮಾತನಾಡಿದೆ. ರಾಜ್ಯಾಂಗದ ಪ್ರಕಾರ ಇದು ಅಧಿಕಾರ ವರ್ಗಾವಣೆ ಮಾಡತಕ್ಕಂಥಾದ್ದು ಕಾನ್‌ಸ್ಟಿಟ್ಯೂಷನ್‌ನಲ್ಲಿ ಇದೆಯಲ್ಲಾ ಇದು ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಮಾತ್ರ ಇದೆ. ತಾವು ಕಾನ್‌ಸ್ಟಿಟ್ಯೂಷನ್ ಓದಬೇಕು. ಪಾರ್ಲಿಮೆಂಟ್ ಇದೆ ಮತ್ತು ಲೆಜಿಸ್ಲೇಚರ್ ಇದೆ, ಕೇಂದ್ರ ಸರ್ಕಾರ ಇದೆ, ರಾಜ್ಯ ಸರ್ಕಾರ ಇದೆ. ಇನ್ನು ಬೇರೆ ಪಂಚಾಯಿತಿ ಬಗ್ಗೆ ಆರ್ಟಿಕಲ್ ೪೦ ಬಿಟ್ಟರೆ ಪಂಚಾಯಿತಿ ಬಗ್ಗೆ ಅದರಲ್ಲಿ ಒಂದು ಕಲಮ್ ಕೂಡ ಇಲ್ಲ. ಆದ್ದರಿಂದ, ನಾನು ತಮಗೆ ಸ್ಪಷ್ಟವಾಗಿ ಹೇಳುತ್ತೇನೆ. ಏನು ಒಂದು ಜಿಲ್ಲಾಪರಿಷತ್ ಮತ್ತು ಪಂಚಾಯತ್ ಆ್ಯಕ್ಟ್ ಇವೊತ್ತು ಕರ್ನಾಟಕದಲ್ಲಿ ಅಸ್ತಿತ್ವದಲ್ಲಿ ಇದೆ. ಇದರ ಪ್ರಕಾರ ಕೂಡ Devolution has not taken place to the Zilla Parishads. The State Government have no powers to transfer its powers—any of its powers—directly or indirectly to the Zilla Parishads or subordinate body. ಹಿಂದೆ ಶ್ರೀಮಾನ್ ರಾಜೀವ್‌ಗಾಂಧಿಯವರು ಅದನ್ನು ಅಮೆಂಡ್ ಮಾಡಿ ಬಿಟ್ಟು ಕೊಡಬೇಕೆಂದು ಪ್ರಯತ್ನ ಮಾಡಿದರು, ಈಗಿನ ಸರ್ಕಾರದವರು ಕೂಡ ೪೦ನೇ ಕಲಮನ್ನು ತಿದ್ದುಪಡಿ ಮಾಡಿ ಬೇರೆ ವಿಧದಲ್ಲಿ ಕೊಡಬೇಕೆಂದು ಪ್ರಯತ್ನ ಮಾಡಿದ್ದಾರೆ. ರಾಜ್ಯಾಂಗದ ಆರ್ಟಿಕಲ್ ೪೦ನ್ನು ನೀವು ತಿದ್ದುಪಡಿ ಮಾಡದೇ ಈ ಡೆವಲ್ಯೂಷನ್ ಪವರ್ ಅಂದರೆ ಈ ರಾಜ್ಯಪಟ್ಟದಲ್ಲಿ ಈ ಲೆಜಿಸ್ಲೇಚರ್ ಏನಿದೆ ಇವಕ್ಕೆ ಇರತಕ್ಕಂಥ ಅಧಿಕಾರವನ್ನು ಯಾರಿಗೂ ಕೊಡಲಿಕ್ಕೆ ಆಗುವುದೇ ಇಲ್ಲ. ಇದು ನನ್ನ ಸ್ಪಷ್ಟವಾದ ನಿಲುವು, ಅದು ಕಾನ್‌ಸ್ಟಿಟ್ಯೂಷನಲ್ ಸ್ಟ್ಯಾಂಡ್. ಕರ್ನಾಟಕ ರಾಜ್ಯದಲ್ಲಿ ಜಿಲ್ಲಾಪರಿಷತ್ ಆಕ್ಟ್‌ನ್ನು ಏನು ಮಾಡಿದ್ದೇವೆ ಇದರ ಪ್ರಕಾರ transfer of State powers has not taken place ಎಂದು ಇದೆ. ನಿನ್ನೆ ನಾನು ಒಂದು ಮಾತನ್ನು ಹೇಳಿದ್ದೆ. ಯಾವುದೇ ಒಂದು ಆಕ್ಟ್‌ನಲ್ಲಿ ಕಲಂಗಳನ್ನು ಜಾರಿಗೆ ಕೊಡಬೇಕಾದರೆ ೩೧೮ನೇ ಸೆಕ್ಷನ್ ಪ್ರಕಾರ ಗವರ್ನ್‌ಮೆಂಟ್ ಆರ್ಡರ್ ಮಾಡಲೇಬೇಕು. ೧೮೪ನೇ ಸೆಕ್ಷನ್ ಪ್ರಕಾರ ಗವರ್ನ್‌ಮೆಂಟ್ ಆರ್ಡರ್ ಮಾಡಲೇಬೇಕು.

ನೋಟಿಫಿಕೇಷನ್ ಮಾಡಲೇಬೇಕು. ಈಗ ೧೬೮ ಸೆಕ್ಷನ್ ಇದೆ ಅದರಲ್ಲಿ ಎಕ್ಸಿಕ್ಯುಟೀವ್ ಹೆಡ್ ಎಂದು ಮಾಡಿದ್ದಾರೆ. ೧೬೮ನೇ ಸೆಕ್ಷನ್ ಪ್ರಕಾರ ಎಕ್ಸಿಕ್ಯೂಟೀವ್ ಹೆಡ್ ಎಂದು ಮಾಡಬೇಕಾದರೆ ಅವರಿಗೆ ಏನು ಪವರ್ ಇದೆ ಎಂದು ನೋಟಿಫಿಕೇಷನ್ ಮಾಡಲೇಬೇಕು. ನಾವು ಈ ಆ್ಯಕ್ಟ್‌ನಲ್ಲಿ ಯಾವ ತಿದ್ದುಪಡಿ ಮಾಡಲೇ ಇಲ್ಲ. ನಾನು ಇದುವರೆಗೂ ಯಾವ ಗವರ್ನ್‌ಮೆಂಟ್ ಆರ್ಡರ್ ಮಾಡಿಲ್ಲ. ಜನತಾ ಸರಕಾರದವರು ಏನು ಕಾನೂನು ಮಾಡಿದ್ದಾರೆ ಆ ಕಾನೂನು ಪ್ರಕಾರ ಆನ್ ಗೋಯಿಂಗ್ ವರ್ಕ್ಸ್ ಮಾತ್ರ ಜಿಲ್ಲಾ ಪರಿಷತ್, ಮಂಡಲ ಪಂಚಾಯತಿಗೆ ಕೊಡಬೇಕೆಂದು ಮಾಡಿದ್ದಾರೆಯೇ ಹೊರತು ಬೇರೆ ಅಧಿಕಾರವನ್ನೆಲ್ಲಾ ವರ್ಗಾವಣೆ ಮಾಡಿದ್ದಾರೆ ಎಂದು ಎಲ್ಲೂ ಹೇಳಿಲ್ಲ. ಜಿಲ್ಲಾ ಪರಿಷತ್ ಆ್ಯಕ್ಟ್ ಪ್ರಕಾರ ಎಲ್ಲೂ ಹೇಳಿಲ್ಲ. ಅದಕ್ಕೋಸ್ಕರ ನಾನು ಹೇಳಿದ್ದು. The Zilla Parishads and Mandal Panchayats are endowed with certain functions that they have to execute. The words used 'entrustment of certain ongoing projects' – that is the word used according to Constitution – endownment of certain works' that is used in the Constitution. ಇನ್ನೊಂದು ಕಡೆ ಅಸೈನ್‌ಮೆಂಟ್ ಎಂದು ಹೇಳುತ್ತಾರೆ. It is not a transfer of its power. It is an assignment, it is an entrustment it is endowment of certain ongoing works, works can be entrusted... ಈಗ ಇರತಕ್ಕಂತಹ ಕಾನೂನು ಪ್ರಕಾರ ಅವರು ಏನು ಮಾಡಿದ್ದಾರೆ ಅದರ ಪ್ರಕಾರ ಟ್ರಾನ್ಸ್‌ಫರ್ ಆಫ್ ಪವರ್ ಆಗೇ ಇಲ್ಲವೆಂದು ಸ್ಪಷ್ಟವಾದ ನಿಲುವನ್ನು ನಾನು ತೆಗೆದುಕೊಂಡಿದ್ದೇನೆ. ಪ್ರಾರಂಭದಲ್ಲಿ ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ ಎಂದು ತಾವು ಹೇಳಿದಿರಿ. ಡೀಸೆಂಟ್ರಲೈಸೇಷನ್ ಮಾಡಬೇಕು, ಡೆವಲ್ಯೂಷನ್ ಇಲ್ಲದೇ ಹೋದರೆ ಡೀಸೆಂಟ್ರಲೈಸೇಷನ್ ಮಾಡುವುದಕ್ಕಾಗುವುದಿಲ್ಲ. ಈ ಆ್ಯಕ್ಟ್ ಪ್ರಕಾರ ಡೀಸೆಂಟ್ರಲೈಸೇಷನ್ ಮಾಡಿದ್ದೇವೆಂದು ತಾವು ಅಭಿಪ್ರಾಯ ಕೊಡಬಹುದು. ಆದರೆ ನನ್ನ ಸ್ಪಷ್ಟವಾದ ನಿಲುವು ಏನೆಂದರೆ, ಇದರ ಬಗ್ಗೆ ಯಾರೇ ತರ್ಕ ಮಾಡಲಿ. ಡೀಸೆಂಟ್ರಲೈಸೇಷನ್ ಕಂಪ್ಲೀಟಾಗಿ ಮಾಡಿಲ್ಲವೆಂದು ಹೇಳ ಬಯಸುತ್ತೇನೆ. ಜಿಲ್ಲಾಪರಿಷತ್ತಿನವರು ಸಾವರಿನ್ಟಿ, ಇಂಡಿಪೆಂಡೆಂಟ್ ಎಂದು ಹೇಳುತ್ತಾರೆ. ಅದು ಯಾವುದನ್ನೂ ನಾವು ಅವರಿಗೆ ಕೊಟ್ಟೇ ಇಲ್ಲ. ಅವರಿಗೆ ಇನ್‌ಕಂ ಇಲ್ಲ. ನಾವು ಕೊಟ್ಟ ಹಣದಲ್ಲೇ ಮಾಡಬೇಕು. ನಾವು ಕೊಟ್ಟರತಕ್ಕಂತಹ ಅಧಿಕಾರಿಗಳ ಮುಖಾಂತರ ಅವರ ಕೆಲಸ ಕಾರ್ಯಗಳನ್ನು ಮಾಡಬೇಕು. ಇದನ್ನು ಆಕ್ಟ್ ಪ್ರಕಾರ ಹೇಳುತ್ತಿದ್ದೇನೆ. ಈಗ ಡೀಸೆಂಟ್ರಲೈಸೇಷನ್ ಆಯಿತು ಎಂದು ನಿಮ್ಮ ಪ್ರಕಾರ ವಾದ ಮಾಡಬೇಕು. ಈಗ ಡಿಸ್ಟ್ರಿಕ್ಟ್‌ನಲ್ಲಿ ಜಿಲ್ಲಾ ಪರಿಷತ್ ಅನ್ನು ಡೀಸೆಂಟ್ರಲೈಸೇಷನ್ ಮಾಡಿದ್ದೀರಿ, ತಾಲ್ಲೂಕಿನಲ್ಲಿ ತಾಲ್ಲೂಕು ಕಮಿಟಿಗಳನ್ನು ಮಾಡಿದ್ದೀರಿ. ತಾಲ್ಲೂಕು ಕಮಿಟಿಯನ್ನು ಡೀಸೆಂಟ್ರಲೈಸೇಷನ್ ಮಾಡಿಲ್ಲ ಮಂಡಲಕ್ಕೆ ಡೀಸೆಂಟ್ರಲೈಸೇಷನ್ ಮಾಡಿದ್ದೀರಿ, ಅಂದರೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಈ ಎಲ್ಲಾ ಸಂಸ್ಥೆಗಳನ್ನು ಏನು ಮಾಡಿದ್ದೀರಿ ಇವುಗಳಿಗೆ ಸರ್ವೇಸಾಮಾನ್ಯವಾಗಿ ಅಧಿಕಾರ ವಿಕೇಂದ್ರೀಕರಣ ಆಗಿಲ್ಲ. ಎಕ್ಸಿಸ್ಟಿಂಗ್ ಆಕ್ಟ್ ಪ್ರಕಾರ ಮಾಡಲಿಕ್ಕೂ ಆಗುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ನನಗಿಂತ ಬಹುಶಃ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಕ್ಲಿಯರ್ ಆಯಿತೆಂದು ನನಗನ್ನಿಸುತ್ತದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಮಾನ್ಯ ಘೋರ್ಪಡೆಯವರು ಕ್ಲಿಯರ್ ಮಾಡಲು ಹೊರಟಿದ್ದಾರೆ, ಅವರು ಕ್ಲಿಯರ್ ಮಾಡಲಿ.

SRI M. Y. GHORPADE.—I prefer to reply to all these points when my turn comes. That is the best under the circumstances. ಇದರ ಬಗ್ಗೆ ನನ್ನ ಅಭಿಪ್ರಾಯ ಸ್ಪಷ್ಟವಾಗಿದೆ. ಒಂದು ಸಲ ಅಲ್ಲ ಸಾವಿರ ಸಲ ಬೇಕಾದರೂ ನಾನು ಹೇಳಲಿಕ್ಕೆ ತಯಾರಿದ್ದೇನೆ. Article 40 – Directive Principles ಕಾನ್‌ಸ್ಟಿಟ್ಯೂಷನ್ ನಲ್ಲಿದೆ. ಅದರ ಆಧಾರದ ಮೇಲೆ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಮಾಡುತ್ತಿದ್ದಾರೆ. ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಮಾಡುವ ಉದ್ದೇಶವೇನೆಂದರೆ, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ತ್ರಿಟೈರ್ ಸಿಸ್ಟಂ ಏನು ಇದೆ, ಅದು ಒಂದು ಮೂಲಭೂತವಾದ ಹಕ್ಕು, ಇದು ಇಡೀ ದೇಶಕ್ಕೆ ಸಿಗಲಿ. ಯಾವ್ಯಾವ ರಾಜ್ಯದಲ್ಲಿ ಅದನ್ನು ಮಾಡಿಲ್ಲ ಅದನ್ನು ಕೇಳುವಂತಹ ಹಕ್ಕು ಅವರಿಗೂ ಬರಲಿ ಎಂದು ರಾಜೀವ್‌ಗಾಂಧಿಯವರು ಅದನ್ನು ತಂದಿದ್ದು. ಈ ಸರಕಾರ ಕೂಡ ಹೆಚ್ಚು ಕಡಿಮೆ ಅದನ್ನು ಅನುಮೋದಿಸುತ್ತದೆ. ಮತ್ತೆ ಡೆವಲ್ಯೂಷನ್ ಎಷ್ಟರಮಟ್ಟಿಗೆ ಮಾಡಿದ್ದಾರೆಂಬುದನ್ನು ನಿನ್ನೆ ನಾನು ಉತ್ತರ ಕೊಡುವಾಗ ಸಂಕ್ಷಿಪ್ತವಾಗಿ ಹೇಳಿದೆ. ಎಷ್ಟು ಡೆವಲ್ಯೂಷನ್ ನಾವು ಮಾಡುತ್ತಿದ್ದೇವೆ,

ಮುಂದೆಯೂ ಕೂಡ ಮಾಡುತ್ತೇವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದು ಕೇವಲ ಆನ್ ಗೋಯಿಂಗ್ ವರ್ಕ್ಸ್ ಅಷ್ಟೇ ಅಲ್ಲ, ಜಿಲ್ಲಾ ಮಟ್ಟದಲ್ಲಿ ಯಾವ ಕೆಲಸ ಮಾಡುವುದು ಸೂಕ್ತ ಇದೆ, ಅದನ್ನು ಆ ಮಟ್ಟಕ್ಕೆ ನಾವು ಕೊಡುವಂತಹ ಸಂಪೂರ್ಣ ಅಧಿಕಾರ ಈ ಸರ್ಕಾರಕ್ಕಿದೆ. ಯಾವ ಕೆಲಸವನ್ನು ತಾಲ್ಲೂಕು ಮಟ್ಟದಲ್ಲಿ ಮಾಡುವುದು ಸೂಕ್ತ ಎಂದು ನೋಡಿ ಅದನ್ನು ಆ ಮಟ್ಟಕ್ಕೆ ನಾವು ವಹಿಸಿಕೊಡುತ್ತೇವೆ. ಮಂಡಲ ಪಂಚಾಯ್ತಿ ಮಟ್ಟದಲ್ಲಿ ಜನರ ಹಿತದೃಷ್ಟಿಯಿಂದ ಯಾವ ಕೆಲಸವನ್ನು ಮಾಡುವುದು ಸೂಕ್ತ ಎಂಬುದನ್ನು ನಾವು ನೋಡಿ ಆ ಡೆವಲ್ಯೂಷನ್‌ನ್ನು ಮಾಡಿಯೇ ಮಾಡುತ್ತೇವೆ ಇದನ್ನು ನಾವು ಡೆವಲ್ಯೂಷನ್ ಎಂದು ಕರೆಯಬೇಕಾಗುತ್ತದೆ. ಇದು ಕೇವಲ ಆನ್ ಗೋಯಿಂಗ್ ವರ್ಕ್ಸ್ ಮಾತ್ರವಲ್ಲ, ಇವತ್ತು ದೇಶದಲ್ಲಿ ಏನು ನಡೆಯುತ್ತಿದೆ, ಅದು ಸಂಪೂರ್ಣವಾಗಿ ನ್ಯಾಯ ಬದ್ಧವಾಗಿದೆ, ಕಾನೂನುಬದ್ಧವಾಗಿ ಇದೆ, ಆರ್ಟಿಕಲ್-೪೦ ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಪ್ರಕಾರ ಇದೆ.

SRI B. BASAVALINGAPPA.—I am thankful. I will have to tell my views.

SRI D. B. CHANDREGOWDA.—Ii is an illegitimate child...

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಿತ್ರರು ಡೆವಲ್ಯೂಷನ್ ಆಗುತ್ತದೆಂದು ಹೇಳುತ್ತಿದ್ದಾರೆ.

SRI D. B. CHANDREGOWDA.—Let us fit it out.

x x

x x

SRI B. BASAVALINGAPPA.—Ideas must be sorted out. ಅವರು ಡೆವಲ್ಯೂಷನ್ ಆಗಿದೆಯೆಂದು ಹೇಳಿದ್ದಾರೆ, ಆರ್ಟಿಕಲ್ ೪೦ನ್ನು ತಿದ್ದುಪಡಿ ಮಾಡದಿದ್ದರೂ ಆಗುವುದಿಲ್ಲವೆಂದು ಹೇಳಿದ್ದಾರೆ. ಅದಕ್ಕೋಸ್ಕರ ಮಾಡಬೇಕು....

(ಗೊಂದಲ)

ಶ್ರೀ ಎಂ.ವೈ. ಘೋರ್ಪಡೆ.—ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ನನ್ನ ವಿನಂತಿ ಏನೆಂದರೆ, ಪ್ರತಿಯೊಬ್ಬರಿಗೂ ಅವರವರ ಅಭಿಪ್ರಾಯವನ್ನು ಕೊಡುವಂತಹ ಅಧಿಕಾರ ಇದೆ. ಮಾನ್ಯ ಬಸವಲಿಂಗಪ್ಪನವರು ಒಂದು ಅಭಿಪ್ರಾಯವನ್ನು ಕೊಟ್ಟಿರಬಹುದು. ನಾನಾದರೂ ಹೇಳುತ್ತೇನೆ, ಸರ್ಕಾರದ ವತಿಯಿಂದ, ಈ ಖಾತೆಯ ವತಿಯಿಂದ ಒಂದು ಅಧಿಕೃತ ಅಭಿಪ್ರಾಯವನ್ನು ಕೊಡುವಂಥ ಜವಾಬ್ದಾರಿಯನ್ನು ಮಾನ್ಯ ಮುಖ್ಯಮಂತ್ರಿಗಳೂ ಈ ಸರ್ಕಾರ ಮತ್ತು ನೀವೆಲ್ಲರೂ ನನಗೆ ಕೊಟ್ಟಿದ್ದೀರಿ, ನಾನು ಉತ್ತರವನ್ನು ಕೊಡುವಂತಹ ಕಾಲ ಬಂದಾಗ ಯಾವ ಪ್ರಶ್ನೆಯಾದರೂ ಅದಕ್ಕೆ ಉತ್ತರ ಹೇಳುತ್ತೇನೆ. ಆದರೆ ಇವತ್ತು ನೇರವಾಗಿ ಕೇಳಿದ್ದರಿಂದ ನಾನು ಸಂಕ್ಷಿಪ್ತವಾಗಿ ಹೇಳಿದೆ. ನೀವು ಇವತ್ತು ಬೇರೆ ಬೇರೆಯಾದ ವೈಯುಕ್ತಿಕವಾದ ಅಭಿಪ್ರಾಯಗಳನ್ನು ಉಪಯೋಗ ಮಾಡಿ ಗಂಭೀರವಾದ ಚರ್ಚೆಯನ್ನು ಗೊಂದಲಕ್ಕೆ ಗುರಿ ಮಾಡಬಾರದೆಂದು ನಾನು ವಿನಂತಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಕಾನ್‌ಸ್ಟಿಟ್ಯೂಷನಲ್ ಪ್ರಾವಿಷನ್ಸ್ ಏನಿವೆ ಅದರ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳೂ ಇದ್ದೇ ಇರುತ್ತವೆ. ರಾಜ್ಯಾಂಗದಲ್ಲಿ ಎಕ್ಸ್‌ಪರ್ಟ್ಸ್ ಯಾರಿದ್ದಾರೆ ಅವರ ಅಭಿಪ್ರಾಯಗಳನ್ನೂ ಕೂಡ ನಾನು ಕೇಳಿದ್ದೇನೆ. ಅಲ್ಲಿಗೆ ನಾನೂ ಕೂಡ ಲಾಯರ್ ಆಗಿದ್ದೇನೆ. ಎಲ್ಲ ರೀತಿಯಿಂದಲೂ ಯೋಚನೆ ಮಾಡಿ ಒಂದು ನಿಲುವನ್ನು ತೆಗೆದುಕೊಂಡಿದ್ದೇನೆ. ನಾನು ಒಂದು ರೀತಿಯ ಅಭಿಪ್ರಾಯವನ್ನು ಹೇಳಿದೆ, ಅವರೂ ಕೂಡ ಒಂದು ರೀತಿಯ ಅಭಿಪ್ರಾಯವನ್ನು ಹೇಳಿದರು. ಆದರೆ ಎರಡೂ ಅಭಿಪ್ರಾಯಗಳ ಒಟ್ಟು ಅರ್ಥ ಒಂದೆ. ಅದರಲ್ಲಿ ಏನೂ ವ್ಯತ್ಯಾಸ ಇಲ್ಲ. Therefore, the purpose of amending Article 40 is only to devolve certain power to the Panchayats. That is all the point. Unless you amend Article 40 the Government have no powers to devolve any powers ಎನ್ನುವುದು ನನ್ನ ನಿಲುವು. My friend Mr. Ghorpade, differs because he is not a Lawyer. But the question of trimming the mind and training the mind is different. Throughout my life

I have trimmed and trained the mind as a Lawyer and I have come to definite conclusion *i.e.*, devolution is foreign to the Constitution for trsnsferring this power from State to lasser bodies. Unless you amend the Act, till you amend the Constitution this is my conclusion.

SRI M.Y. GHORPADE.—Sir, I may not be a Lawyer but I think law is nothing but a codified commonsense and one doesn't have to be a lawyer to know in any Constitution the Directive Principles state the basic intention of the framers of the Constitution. They are not justicible in the sense that you cannot go to a Court and claim it as a right. Therefore, Directive Principles also about the intention for its prohibition, may be education and so many other things but to the extent which you want to make justicible right, a right which a citizen go to court and claim it as a right by going to a court then you have to make constitutional amendment. All that I said was that the Constitutional amendment which is now being done at the initiative of Sri Rajiv Gandhi and now this Government is to make that intention which it enshrined in Article 40 of the Directive Principles in to a justiciable right and I hold that view. I don't think that any lawyer will find fault with it.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಇದು ಒಂದು ಸಾರಿ ಇತ್ಯರ್ಥವಾಗಲಿ. ಒಳ್ಳೆಯ ಅವಕಾಶ ಸಿಕ್ಕಿದೆ ಇದು ಈಗಲೇ ಇತ್ಯರ್ಥವಾದರೆ ಒಳ್ಳೆಯದು.

ಶ್ರೀ ಬಿ.ಎಚ್. ಬನ್ನಿಕೋಡ್.—ಈ ಸರ್ಕಾರ ಎಷ್ಟರಮಟ್ಟಿಗೆ ಕನ್‌ಫ್ಯೂಷನ್‌ನಲ್ಲಿದೆ ಎನ್ನುವುದು ಅರ್ಥವಾಗುತ್ತದೆ.

ಶ್ರೀ ಎಚ್.ಎಸ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ವಾಕ್‌ಔಟ್ ಮಾಡಿದ್ದಾರೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ.—ನಮಗೆ ಅವಕಾಶವೇ ಇಲ್ಲವೇ. ಮಂತ್ರಿಗಳ ಗಲಾಟೆಯಲ್ಲಿ ನಾನು ಸಿಕ್ಕಿಹಾಕಿಕೊಂಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ವಿರೋಧಪಕ್ಷದ ನಾಯಕರೆ. ನಾನು ಹೋಗಿದ್ದು ಏಕೆ ಎಂದು ಹೇಳುತ್ತೇನೆ. ಒಂದು ಸೆಂಟೆನ್ಸ್ ಹೇಳುತ್ತೇನೆ. Sir, fundamental rights are justiciable, Directive Principles are not justiciable. As a matter of fact any of the article except fundamental rights. I don't know what I should say about justiciability or otherwise of the matter but one thing Lawyer say that Law is also a donkey...

ಶ್ರೀ ಡಿ.ಬಿ. ಚಂದ್ರೇಗೌಡ.—ಎರಡು ಜನ ಪ್ರಬುದ್ಧರ ವಿವರಣೆಯನ್ನು ನಾನು ಕೇಳಿದ್ದೇನೆ. ಇದರ ಅರ್ಥ ನಾನು ಅಪ್ರಬುದ್ಧ ಎಂದಲ್ಲ. ನಾನು ಈ ಪ್ರಬುದ್ಧತೆಯ ಪ್ರದರ್ಶನಕ್ಕೆ ಒಂದು ಗ್ರಾಸವನ್ನು ಒದಗಿಸಿದ್ದೇನಷ್ಟೇ. ಅಷ್ಟರಮಟ್ಟಿಗೆ ನನಗೆ ಸಮಾಧಾನ, ಸಂತೋಷವಾಯಿತು, ನನಗೆ ಒಂದು ವಿಚಾರವನ್ನು ನೀವು ಇಬ್ಬರೂ ಸೇರಿ ಹೇಳಬೇಕು. ನೀವು ಇಬ್ಬರೂ ಸೇರಿ ಯಾರು ಹೇಳಬೇಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಏತಕ್ಕೆಂದರೆ, ಹೀಗೆ ಮಂತ್ರಿಮಂಡಲದ ಇಬ್ಬರು ಸದಸ್ಯರಲ್ಲಿ ತೀವ್ರವಾದಂಥ ಭಿನ್ನಾಭಿಪ್ರಾಯವಿದ್ದರೆ ದ್ವಂದ್ವ ಅಭಿಪ್ರಾಯವಿದ್ದರೆ...

(ಈ ನಿಟ್ಟಿನಲ್ಲಿ ಒಬ್ಬ ಮಾನ್ಯ ಸದಸ್ಯರು ಮಂತ್ರಿಗಳ ಸ್ಥಾನದಲ್ಲಿ ಕುಳಿತು ಏನೋ ಹೇಳಲು ಆರಂಭಿಸುವರು)

ಶ್ರೀ ವಾಟಾಳ್ ನಾಗರಾಜ್.—ತಾವು ಅಲ್ಲಿ ಕುಳಿತು ಮಾತನಾಡುವುದು ಏತಕ್ಕೆ ತಾವು ಯಾವಾಗ ಮಂತ್ರಿಗಳಾದಿರಿ? ತಾವು ತಮ್ಮ ಸ್ಥಾನದಲ್ಲಿ ಕುಳಿತು ಮಾತನಾಡಿ.

ಛೇರ್‌ಮನ್.—ತಾವು ಮಾತನಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಅವರ ಡಿಸ್‌ಕಷನ್ ಮುಗಿದಮೇಲೆ ನಾನು ಮಾತನಾಡುತ್ತೇನೆ. ಅವರು ಕುಳಿತುಕೊಂಡು ಚರ್ಚೆ ಮಾಡಲಿ, ನನ್ನ ಅಭ್ಯಂತರವಿಲ್ಲ, ಆದರೆ ಮಂತ್ರಿಗಳು ನನಗೆ ಉತ್ತರ ಹೇಳುತ್ತಿದ್ದಾರೆ.

ಛೇರ್‌ಮನ್.—ತಾವು ಹೇಳಿ. ಅವರು ಮಾತನಾಡುವುದು ರಿಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ.—ರಿಕಾರ್ಡಿಗೆ ಹೋಗುವುದಿಲ್ಲ. ಇವನ್ನೆಲ್ಲಾ ಲಘುವಾಗಿ ತೆಗೆದುಕೊಳ್ಳಬೇಡಿ. ಈ ಸದನದಲ್ಲಿ ಒಂದು ಇತಿಹಾಸವನ್ನು ಮುಂದೆ ಬಿಟ್ಟು ಹೋಗಬೇಕು. ನಾವೇ ಶಾಶ್ವತವಾಗಿ ಇರುತ್ತೇವೆ ಎಂದಲ್ಲ. ದಯುಮಾಡಿ ಕ್ಷಮಿಸಿ. ಸಂಪ್ರದಾಯವನ್ನು ಕಾಪಾಡಬೇಕೆಂಬ ದೃಷ್ಟಿಯಿಂದ ಹೇಳಿದೆನೇ ಹೊರತು ಅವರಿಗೆ ಅಗೌರವ ಮಾಡಬೇಕೆಂಬ ದೃಷ್ಟಿಯಿಂದ ಹೇಳಲಿಲ್ಲ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಅವಕಾಶ ಸಿಕ್ಕಿದರೆ ಸದುಪಯೋಗ ಮಾಡುತ್ತೀರಿ.

ಶ್ರೀ ವಾಟಾಳ್ ನಾಗರಾಜ್.—ಸದುಪಯೋಗ, ದುರುಪಯೋಗದ ಬಗ್ಗೆ ನಿಮ್ಮಿಂದ ಉಪದೇಶ ಬೇಕಾಗಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ,—ನಿಮ್ಮ ಪ್ರತಾಪವನ್ನು ಇಲ್ಲಿ ಏಕೆ ತೋರಿಸುತ್ತೀರಿ? ಮೂಲತಃ ಈ ಸಮಸ್ಯೆ ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಅಂದಹಾಗೆ ಜವಾಬ್ದಾರಿ ಜಾಗದಲ್ಲಿರತಕ್ಕ ಮಂತ್ರಿಗಳಲ್ಲಿ ದ್ವಂದ್ವ ಇದ್ದರೆ ಪರಿಣಾಮ ಏನಾಗುತ್ತದೆ? ಅದಕ್ಕೆ ದಯುಮಾಡಿ ಅವಕಾಶ ಕೊಡಬೇಡಿ. ಈಗ ಒಂದು ಹೆಜ್ಜೆ ಮುಂದೆ ಹೋಗಿ ಪ್ರಧಾನ ಮಂತ್ರಿಗಳು ಏನು ಹೇಳಿದ್ದಾರೆ ಎಂಬುದನ್ನು ಹೇಳುತ್ತೇನೆ. ರಾಜ್ಯಾಂಗ ತಿದ್ದುಪಡಿಯಾಗುವುದಕ್ಕೆ ಮುಂಚೆ Mr. V. P. Singh said perhaps changes in the Panchayat Raj Bill would be brought before the Inter-State Council...ಆ ಇಂಟರ್‌ಸ್ಟೇಟ್ ಕೌನ್ಸಿಲ್ ಬೆಂಗಳೂರಿನಲ್ಲಿ ಸೇರುತ್ತಿದೆ. ಅದಕ್ಕೆ ನಾವು ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳಬೇಕು. ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಬರುತ್ತಾರೆ. ಅಷ್ಟರಲ್ಲಿ ಕನಿಷ್ಟಪಕ್ಷ ನಮ್ಮ ಸರ್ಕಾರದ ಮಂತ್ರಿಮಂಡಲದಲ್ಲಿರತಕ್ಕ ಮಂತ್ರಿಗಳಾದರೂ ಒಂದು ತೀರ್ಮಾನಕ್ಕೆ ಬಂದಿರಲಿ ಎಂಬುದು ನನ್ನ ಇಚ್ಛೆ. ಇಲ್ಲಿ ನಮ್ಮ ಜಗಳವನ್ನು ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ಚರ್ಚೆಗೆ ಗ್ರಾಸವಾಗಿ ಒದಗಿಸುವುದು ಬೇಡ. ವೈಯಕ್ತಿಕವಾಗಿ ನನ್ನ ಅಭಿಪ್ರಾಯದಲ್ಲಿ ಈ ಶಾಸನಸಭೆ ಮಾಡಿದಂತಹ ಶಾಸನ ಮತ್ತು ರಾಜ್ಯಾಂಗಬದ್ಧವಾದ ವಿಧಿವಿಧಾನಗಳನ್ನು ಅನುಸರಿಸಿ ಅಧಿಕಾರ ವಿಕೇಂದ್ರೀಕರಣವಾಗಿದೆ ಎಂಬ ಭಾವನೆಯಿಂದ ಕಳೆದ ಮೂರು ವರ್ಷಗಳಿಂದ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತ್ತುಗಳು ಕೆಲಸ ಮಾಡಿವೆ. ಇದರ ಹೊಸ ವಾದವನ್ನು ಒಪ್ಪಿಕೊಂಡರೆ ಕಳೆದ ಮೂರು ವರ್ಷಗಳಿಂದ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತ್ತುಗಳು ಮಾಡಿದ ಎಲ್ಲಾ ಕೆಲಸಗಳು, ನಿರ್ಣಯಗಳು, ಖರ್ಚು ಮಾಡಿದ ಹಣ ಎಲ್ಲವೂ ಶಾಸನದ ವಿರುದ್ಧವಾಗುತ್ತದೆ. ಆದ್ದರಿಂದ ಆ ನಿಲುವು ಸರಿ ಎಂದು ನಾನು ಅಂದುಕೊಳ್ಳುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೊಟ್ಟಂತಹ ಅಧಿಕಾರವನ್ನು ಬದಲಾವಣೆ ಮಾಡುವ ಅಧಿಕಾರ ಸರ್ಕಾರಕ್ಕೆ ಇಲ್ಲವೆ?

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಪ್ರಾರಂಭದಲ್ಲೇ ಹೇಳಿದ್ದೇನೆ. ಅನುಭವದ ಆಧಾರದ ಮೇಲೆ ರಾಜ್ಯಾಂಗವನ್ನೇ ಏಳು ಸಾರಿ ತಿದ್ದುಪಡಿ ಮಾಡಿದ್ದೇವೆ. ಜಿಲ್ಲಾ ಪರಿಷತ್ತಿನ ಶಾಸನವನ್ನು ತಿದ್ದಬಾರದೆಂದು ಏನೂ ಇಲ್ಲ. ತಿದ್ದುವ ಅವಶ್ಯಕತೆ ಇದ್ದರೆ ತಿದ್ದೋಣ.

ಶ್ರೀ ವಾಟಾಳ್ ನಾಗರಾಜ್.—ಇವರು ಮಾಡುವ ಕೆಲಸ ಕೈಕಾಲು ತೆಗೆಯುವ ಕೆಲಸ.

ಒಬ್ಬ ಮಾನ್ಯ ಸದಸ್ಯರು.—ತಾವು ಏನು ಸ್ಟೇಟ್‌ಮೆಂಟ್ ಓದಿದಿರಿ ಅದು ಏನು ಎಂದು ನನಗೆ ಅರ್ಥವಾಗಲಿಲ್ಲ. ದಯಮಾಡಿ ಅದರ ಬಗ್ಗೆ ವಿವರವಾಗಿ ಹೇಳಿ. ತಾವು ಸ್ಟೇಟ್‌ಮೆಂಟ್‌ನಲ್ಲಿ,

ಪ್ರಧಾನ ಮಂತ್ರಿಗಳು ರಾಜ್ಯಾಂಗವನ್ನು ತಿದ್ದುಪಡಿ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದಾರೆ ಎಂದು ಹೇಳಿದಿರಿ. ಮಾನ್ಯ ಬಸವಲಿಂಗಪ್ಪನವರು ಹೇಳಿದಂತೆ ಸರ್ವ ಪ್ರಯತ್ನ ಮಾಡುತ್ತಿದ್ದಾರೆಂಬುದನ್ನು ಒಪ್ಪಿಕೊಂಡ ಹಾಗೆ ಆಗುತ್ತದೆ. ಪ್ರಧಾನ ಮಂತ್ರಿಗಳು ಒಪ್ಪಿಕೊಂಡ ಹಾಗೆ ಆಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಿಮಗೆ ಉತ್ತರ ಹೇಳುವ ಅವಕಾಶ ಸಿಕ್ಕಿದರೆ ಸಂತೋಷ ಪಡುತ್ತೇನೆ. ಉತ್ತರದಲ್ಲಿ ಹೇಳುತ್ತೇನೆಂದು ಮಂತ್ರಿಗಳು ಹೇಳಿದ್ದರು. ನಾನು ಈಗ ಇಬ್ಬರು ಪ್ರಬುದ್ಧರ ವಾದವನ್ನು ಕೇಳಿದ್ದೇನೆ. ಅದರ ಅರ್ಥ, ನಾನು ಅಪ್ರಬುದ್ಧ ಅಲ್ಲವೆಂದು ಹೇಳಿದ್ದೇನೆ. ಡಿವಲ್ಯೂಷನ್ ಆಫ್ ಪವರ್ ಬಗ್ಗೆ ಇವರಲ್ಲಿ ದ್ವಂದ್ವ ಇರುವುದರಿಂದ ಕೆಳಗಡೆ ಕೆಲಸ ಮಾಡುವವರಿಗೆ ತಮ್ಮ ಜವಾಬ್ದಾರಿ ಏನೆಂದು ಗೊತ್ತಿಲ್ಲದೆ, ಏನು ಕೆಲಸ ಮಾಡಬೇಕೆಂದು ತೋಚದೆ ಇವೆಲ್ಲವೂ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಏಕೆ ಹೋಮವಾಗುತ್ತದೆ?

SRI D. B. CHANDRE GOWDA.—It is illegal according to the Hon'ble Minister. It becomes illegal because devolution has not taken place. That is the fundamental question I am raising...... ಜಿಲ್ಲಾ ಪರಿಷತ್ತಿಗೆ ಸೀಮಿತವಾದ ಮೂಲ ಪ್ರಶ್ನೆಗೆ ವಿಶೇಷವಾದ ವಿವರಣೆ ಕೊಡುತ್ತಾರೆಂದು ಭಾವಿಸುತ್ತೇನೆ.

೩-೩೦ ಪಿ. ಎಂ.

ಮತ್ತೆ ನೀವು ಏನೇನು ಆಲೋಚನೆಗಳನ್ನು ಮಾಡಿದ್ದೀರಿ ಅದು ನನಗೆ ಈಗ ಗೊತ್ತಿಲ್ಲ. ಆದ್ದರಿಂದ ಈಗಲೇ ಊಹೆ ಮಾಡಿಕೊಂಡು ಇದು ಆಗಬೇಕು. ಇದು ಆಗಬಾರದು ಎಂದು ಹೇಳುವುದು ಅಷ್ಟು ಸರಿಯಲ್ಲ. ಕಾನೂನಿನ ಅಂಶಕ್ಕೆ ಅಷ್ಟೇ ಸೀಮಿತವಾಗಿ ಹೇಳುತ್ತೇನೆ. ಜಿಲ್ಲಾ ಪರಿಷತ್ತಿನ ವಿಚಾರದಲ್ಲಿ ಒಂದು ನಿರ್ಮಾಣವಾಗಿದೆ. ಅಧಿಕಾರಿಗಳ ವರ್ಗಾವರ್ಗಿ ವಿಷಯದಲ್ಲಿ ಜಿಲ್ಲಾ ಪರಿಷತ್ತುಗಳು ನಮಗೆ ಅಧಿಕಾರ ಇದೆ ನಾವು ಮಾಡುತ್ತೇವೆ ಎಂದು ಹೇಳುತ್ತವೆ. ಮಾನ್ಯ ಬಸವಲಿಂಗಪ್ಪನವರು ನಿಮಗೆ ಅಧಿಕಾರ ಇಲ್ಲ ಎಂದು ಹೇಳಿದ್ದಾರೆ. ಹಾಗಿದ್ದರೆ ವರ್ಗ ಮಾಡಿದರೆ ಚಾರ್ಜ್ ತೆಗೆದುಕೊಳ್ಳಬೇಕೋ ಬೇಡವೋ? ತಮಗೆ ಒಂದೇ ಒಂದು ಉದಾಹರಣೆ ಹೇಳುತ್ತೇನೆ. ಹಾಸನ ಜಿಲ್ಲೆಯಲ್ಲಿ ೭೫ ಜನ ಇಂಜಿನಿಯರುಗಳನ್ನು ಜಿಲ್ಲಾ ಪರಿಷತ್ತಿಗೆ ವರ್ಗ ಮಾಡಿ ಕಳುಹಿಸಿದ್ದಾರೆ. ಜಿಲ್ಲಾ ಪರಿಷತ್ತಿನವರು ನಾವು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ. ಈಗ ಈ ಇಂಜಿನಿಯರ್ಸ್ ಇದ್ದಾರಲ್ಲ ಇವರು ಅಂತರ ಪಿಶಾಚಿಗಳಾಗಿದ್ದಾರೆ. ಇವರು ಏನು ಮಾಡಬೇಕು? ಸರ್ಕಾರದ ಆಜ್ಞೆ ಪಾಲಿಸೋಣ ಅಂದರೆ ಜಿಲ್ಲಾ ಪರಿಷತ್ತಿನಲ್ಲಿ ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ಇಲ್ಲಿ ತೆಗೆದುಕೊಳ್ಳಿ ಎಂದರೆ ನಿಮಗೆ ಅಧಿಕಾರ ಇಲ್ಲ, ಅಧಿಕಾರ ನಮಗೇ ಕೊಡಿ ಎಂದು ಹೇಳುತ್ತಾರೆ. ಕನಿಷ್ಠ ಪಕ್ಷ ಇಂಟರ್ ಡಿಸ್ಟ್ರಿಕ್ಟ್ ಮತ್ತು ಇಂಟ್ರಾ ಡಿಸ್ಟ್ರಿಕ್ಟ್ ಟ್ರಾನ್ಸ್‌ಫರ್—ಇಷ್ಟಕ್ಕಾದರೂ ನಿರ್ಧಾರ ಮಾಡದೆ, ಚರ್ಚೆ ಎಲ್ಲಿ ಹೋಗಿದೆ ಎಂದರೆ, ಅಧಿಕಾರಿಗಳನ್ನು ತೆಗೆದುಕೊಳ್ಳಬೇಕೇ ಬೇಡವೇ ಎಂಬ ವಿಚಾರದಲ್ಲಿ ಗೊಂದಲವಾಗಿ ಅಭಿವೃದ್ಧಿ ಕಾರ್ಯಗಳೆಲ್ಲಾ ಸ್ಥಗಿತವಾಗಿವೆ. ಆ ಕಾರಣ ತಾವು......

ಶ್ರೀ ಎಸ್. ಬಂಗಾರಪ್ಪ.—ಬಹಳ ಒಳ್ಳೆಯ ವಿಷಯವನ್ನೇ ಪ್ರಸ್ತಾಪ ಮಾಡಿದ್ದೀರಿ. ಮತ್ತೊಮ್ಮೆ ನಾನು ತಮಗೆ ಅಭಿನಂದಿಸಬೇಕು. ಏಕೆಂದರೆ, ಹಿಂದೆ ಕೂಡ ಈ ಸದನದಲ್ಲಿ ಈ ವಿಷಯ ಚರ್ಚೆಗೆ ಬಂದಿತ್ತು. ಸರ್ಕಾರಿ ಆಜ್ಞೆ ಪ್ರಕಾರ ಯಾವ ವರ್ಗದ ಅಧಿಕಾರಿಗಳು ಸರ್ಕಾರಿ ವರ್ಗಾವಣೆ ವ್ಯಾಪ್ತಿಯಲ್ಲಿ ಬರುತ್ತಾರೆ ಎಂಬುದು ತಮಗೆ ಗೊತ್ತಿದೆ, ಅದೇರೀತಿ ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಯಾರು ಬರುತ್ತಾರೆ ಎಂಬುದು ಗೊತ್ತಿದೆ. ನಮ್ಮ ಸರ್ಕಾರದ ಅಧಿಕಾರ ವ್ಯಾಪ್ತಿಯಲ್ಲಿ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದೇವೆ. ಹಾಸನ ಜಿಲ್ಲೆಗೆ ಇಂಜಿನಿಯರ್‌ಗಳನ್ನು ಕಳುಹಿಸಿಕೊಟ್ಟರೆ ಅದನ್ನು ಜಿಲ್ಲಾ ಪರಿಷತ್ತಿನವರು ಮಾನ್ಯತೆ ಮಾಡದೆ ಜಾರಿಗೆ ಕೊಡುವುದಿಲ್ಲ ಎಂದು ತೀರ್ಮಾನ ಮಾಡಿದರೆ ಹೇಗೆ? ಯಾವ ವರ್ಗಾವಣೆ ವಿಚಾರದಲ್ಲಿ ಅವನ್ನು ತಡೆಹಿಡಿಯುವುದಕ್ಕಾಗಲೀ, ಜಾರಿಗೆ ಕೊಡುವುದಕ್ಕಾಗಲೀ ಜಿಲ್ಲಾ ಪರಿಷತ್ತಿಗೆ ಅಧಿಕಾರ ಇಲ್ಲವೋ ಅದನ್ನು ಚಲಾವಣೆ ಮಾಡುವುದಕ್ಕೆ ಜಿಲ್ಲಾ ಪರಿಷತ್ತಿನವರು ಹೊರಟಿದ್ದಾರೆ ಎಂಬ ಅಭಿಪ್ರಾಯ ಬರುವುದಿಲ್ಲವೆ ? ಇಂಜಿನಿಯರ್‌ಗಳು ಅಂತರ ಪಿಶಾಚಿಗಳಾಗಿರುವುದು ನಿಜ. ಈಗ ಜಿಲ್ಲಾ ಪರಿಷತ್ತಿನವರು ಆಜ್ಞೆ ಜಾರಿಗೆ ಕೊಡದಿದ್ದರೆ ಇಂಜಿನಿಯರ್‌ಗಳು ಏನು ಮಾಡಬೇಕು? ನಾವು ಆರ್ಡರ್ ಕಳುಹಿಸಿ ಕೊಟ್ಟಿದ್ದೇವೆ. ಈಗ ನಾವು

ಏನು ಮಾಡಬೇಕು ಎಂಬ ಪ್ರಶ್ನೆ ಇದೆ. ಇದೇ ಸಂದರ್ಭದಲ್ಲಿ ಇದಕ್ಕೆ ಏನಾದರೂ ವಿಚಾರ ಮಾಡಬೇಕಲ್ಲ. ಈ ವಿಚಾರದಲ್ಲಿ ಮಾನ್ಯ ಬಸವಲಿಂಗಪ್ಪನವರಿರಬಹುದು, ಮಾನ್ಯ ಸದಸ್ಯರು ನೀವು ಇರಬಹುದು, ನಾವಿರಬಹುದು ಅಭಿಪ್ರಾಯಗಳು ಕೊಟ್ಟಾಗ ಭಿನ್ನಾಭಿಪ್ರಾಯಗಳು ಸಹಜವಾಗಿ ಏಳುತ್ತವೆ. ಏನು ಮಾಡಬೇಕು ಎಂಬ ಬಗ್ಗೆ ಸಲಹೆಗಳನ್ನು ಕೊಡಿ. ಇಂಜಿನಿಯರುಗಳು ಅಂತರ ಪಿಶಾಚಿಗಳಾಗಿದ್ದಾರೆ. ಈಗ ಏನು ಮಾಡಬೇಕು ಎಂದು ತಾವು ಸಲಹೆ ಕೊಡಿ. ಸರ್ಕಾರದವರು ಸುಮ್ಮನೆ ಕುಳಿತುಕೊಳ್ಳಬೇಕೇ ಅಥವಾ ಏನಾದರೂ ಕಾರ್ಯಕ್ರಮ ಹಾಕಬೇಕೆ?

ಶ್ರೀ ಡಿ. ಬಿ. ಚಂದ್ರೇಗೌಡ.—ತುಂಬಾ ಸಂತೋಷ. ನನಗೆ ಒಂದೊಂದು ಸಮಸ್ಯೆಗೆ ಒಬ್ಬೊಬ್ಬರು ಮಂತ್ರಿಗಳು ಉತ್ತರ ಹೇಳುತ್ತಾ ಹೋಗುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ನಮ್ಮಲ್ಲಿ ಇರತಕ್ಕದ್ದು ತ್ರಿಮೂರ್ತಿಗಳು. ಮೂರು ಜನರು ಮೂರು ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ, ಒಪ್ಪತಕ್ಕದ್ದೆ.

ಶ್ರೀ ಎಸ್. ಬಂಗಾರಪ್ಪ.—ಬಹಳ ಜನ ಮಂತ್ರಿಗಳಿದ್ದೇವೆ, ಮೂರು ಜನ ಅಲ್ಲ.

ಶ್ರೀ ಬಿ, ಬಸವಲಿಂಗಪ್ಪ.—ವಿ. ಪಿ. ಸಿಂಗ್ ಅವರು, ನಮ್ಮ ಪಾರ್ಟಿಯಲ್ಲಿ ಎಷ್ಟೆಷ್ಟು ಭಿನ್ನಾಭಿಪ್ರಾಯಗಳಿರುತ್ತವೋ ಅಷ್ಟೂ ಪ್ರಜಾಪ್ರಭುತ್ವಕ್ಕೆ ಪುಷ್ಠಿ ಕೊಟ್ಟಹಾಗೆ, ಒಕ್ಕಣಿ ಕೊಟ್ಟಹಾಗೆ ಎಂದು ಹೇಳಿದ್ದಾರೆ. ನಮ್ಮಲ್ಲಿ ತಾತ್ವಿಕ ಭಿನ್ನಾಭಿಪ್ರಾಯಗಳಿಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೆ, ಪಿ. ಡಬ್ಲ್ಯು. ಡಿ. ಮಿನಿಸ್ಟರ್ ಮಾಡಿದ ಆರ್ಡರನ್ನು ಹೆಚ್.ಯು.ಡಿ. ಮಿನಿಸ್ಟರ್ ಅಕ್ಸೆಪ್ಟ್ ಮಾಡುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ನಿಮ್ಮಲ್ಲಿ ಭಿನ್ನಾಭಿಪ್ರಾಯಗಳು ಇರಬಾರದು ಎಂದು ಹೇಳುವುದಿಲ್ಲ. ಆದರೆ ಮಂತ್ರಿ ಮಂಡಲದಲ್ಲಿ ಇರಬಾರದು,

ಶ್ರೀ ವಾಟಾಳ್ ನಾಗರಾಜ್.—ಈಗ ಸಂಸದೀಯ ಸಚಿವರು ಒಳಗಡೆ ಆಗಮಿಸಿದ್ದಾರೆ. ಅವರ ಅಭಿಪ್ರಾಯವನ್ನೂ ಕೇಳೋಣ. ಅಲ್ಲಿಗೆ ತೀರ್ಮಾನವಾಗುತ್ತದೆ. ಕಾನೂನಿನ ಚೌಕಟ್ಟಿನಲ್ಲಿ ಅವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ನನೋ ಸಂಚಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಸಂಚಿಲ್ಲ. ಮೂರು ಜನ ಉತ್ತರ ಹೇಳಿದರು. ನೀವೂ ಏನಾದರೂ ಹೇಳುತ್ತೀರಾ ಎಂದು ಕಾದಿದ್ದೆ. ಅಭಿಪ್ರಾಯ ಭಿನ್ನತೆ ಬಗ್ಗೆ ನಾನು ಹೇಳುತ್ತಿಲ್ಲ. ಆಡಳಿತಾತ್ಮಕವಾದ ಈ ಸಮಸ್ಯೆಯನ್ನು ಬಿಡಿಸುವುದಕ್ಕೆ ಏನು ಪರಿಹಾರ? ಪರಿಹಾರ ಇದೆ. ಪರಿಹಾರ ಇಲ್ಲದೆ ಶಾಸನವನ್ನು ಮಾಡಿಲ್ಲ. ಅದಕ್ಕೆಲ್ಲಾ ಪರಿಹಾರವನ್ನು ಮಾಡಿದ್ದಾರೆ. That is State Development Council. ರಾಜ್ಯ ಅಭಿವೃದ್ಧಿ ಮಂಡಲಿ. ಇದಕ್ಕೆ ಅಧ್ಯಕ್ಷರು ಸನ್ಮಾನ್ಯ ಮುಖ್ಯಮಂತ್ರಿಗಳು ಒಂದೂ ಸಾರಿಯಾದರೂ ಆ ಸಭೆಯನ್ನು ಕರೆದಿದ್ದೀರಾ ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಕರೆದಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನೀವು ಈಗ ಯಾರನ್ನು ಕರೆಯಬೇಕೋ ಗೊತ್ತಿಲ್ಲ.

ಶ್ರೀ ಎಸ್, ಬಂಗಾರಪ್ಪ.—ಅದು ಸರ್ಕಾರದಿಂದ ಕರೆದ ಹಾಗೆ ಆಗುವುದಿಲ್ಲವೆ ?

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಆ ರೀತಿ ಹೇಳುವುದಕ್ಕೆ ಕಾರಣ ಇದೆ. ತಮ್ಮ ಕಾಲದಲ್ಲಿ ಕರೆದಿದ್ದೀರಾ ? ಆ ಸಭೆಯನ್ನು ಕರೆದರೆ ಇಂತಹ ಆಡಳಿತಾತ್ಮಕ ವಿಚಾರಗಳಿಗೆ ಅಲ್ಲಿ ಪರಿಹಾರ ಸಿಕ್ಕುತ್ತದೆ. ಅದಕ್ಕಾಗಿಯೇ ರಾಜ್ಯ ಅಭಿವೃದ್ಧಿ ಮಂಡಲಿ ಇರತಕ್ಕಂಥಾದ್ದು. ಮಾನ್ಯ ಮುಖ್ಯಮಂತ್ರಿಗಳು ಅದರ ಅಧ್ಯಕ್ಷರು. ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರುಗಳು ಅದರ ಸದಸ್ಯರು, ಅಭಿವೃದ್ಧಿ ಆಯುಕ್ತರು. ಅದರ ಕಾರ್ಯದರ್ಶಿಗಳು ಎಲ್ಲಾ ಇಲಾಖೆಗಳ ಕಾರ್ಯದರ್ಶಿಗಳು ಆ ಸಭೆಗೆ ಬರಬೇಕು. ಈ ತರಹದ ಅರೇಂಜ್‌ಮೆಂಟ್ಸ್ ಮಾಡಿದ್ದಾರೆ, ಶಾಸನ ಮಾಡುವ ಪೂರ್ವದಲ್ಲಿ ಇದನ್ನೆಲ್ಲಾ ಯೋಚನೆ ಮಾಡಿದ್ದಾರೆ. ಆ ಕಾರಣ ಈ ಸಮಸ್ಯೆಗಳಿಗೆ ಪರಿಹಾರ ಇರತಕ್ಕಂತಹದ್ದು ಒಂದೇ ಒಂದು ಅಂದರೆ ರಾಜ್ಯ ಅಭಿವೃದ್ಧಿ ಮಂಡಲಿಯ ಸಭೆಯನ್ನು ಕರೆಯುವುದು. ಆದ್ದರಿಂದ ತಕ್ಷಣ ರಾಜ್ಯ ಅಭಿವೃದ್ಧಿ ಮಂಡಳಿಯ ಸಭೆಯನ್ನು ಏನಾದರೂ ಪರಿಹಾರವನ್ನು ಕಂಡು ಹಿಡಿಯಿರಿ. ನಾನು ಶಾಸನದಲ್ಲಿರತಕ್ಕ ಪರಿಹಾರವನ್ನು

ಕೊಡುತ್ತಿದ್ದೇನೆ. ನನ್ನ ಪರಿಹಾರ ಬೇರೆಯೇ ಇದೆ. ಅದನ್ನು ಹೇಳುವುದಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಗಳ ಖಾತೆಗೆ ಸೇರಿರತಕ್ಕಂತಹ ಬೇಡಿಕೆಗಳ ಮೇಲೆ ಚರ್ಚೆಯನ್ನು ಆರಂಭಿಸಬೇಕು. ನನ್ನ ಒಟ್ಟು ಸಮಯದಲ್ಲಿ ಇಲ್ಲಿ ವ್ಯಯವಾಗಿರುವ ಸಮಯವನ್ನು ತೆಗೆದು ಮುಖ್ಯಮಂತ್ರಿಗಳ ಖಾತೆಗೆ ಸಂಬಂಧಪಟ್ಟಂಥ ವಿಚಾರಗಳನ್ನು ಹೇಳುವುದಕ್ಕೆ ಅವಕಾಶ ಕೊಡಬೇಕು.

(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ಆಗಮಿಸಿದರು)

ನಾನು ಅವರ ಖಾತೆಗೆ ಸಂಬಂಧಪಟ್ಟಂತೆ ವಿಚಾರಗಳನ್ನು ಪ್ರಸ್ತಾಪಿಸಬೇಕು ಎಂದು ಹೇಳುವುದರಲ್ಲೇ ಮುಖ್ಯಮಂತ್ರಿಗಳು ಸಭೆಗೆ ಬಂದಿದ್ದಾರೆ. ಅವರಿಗೆ ಗೌರವವನ್ನು ಸೂಚಿಸುತ್ತೇನೆ. ಬಂದರಲ್ಲ ಎಂದು ಸಂತೋಷ.

ಶ್ರೀ ವಾಟಾಳ್ ನಾಗರಾಜ್.—ಮುಖ್ಯಮಂತ್ರಿಗಳು ಸಭೆಗೆ ಬಂದಿದ್ದಾರಲ್ಲ ಎಂದು ನಮಗೂ ಸಂತೋಷ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಇದರ ಬಗ್ಗೆ ದೀರ್ಘವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ೧೫–೨೦ ಬೇಡಿಕೆಗಳನ್ನು ಒಂದೇ ಸಾರಿ ಸದನದಲ್ಲಿ ಮಂಡಿಸಿದರೆ ಅವುಗಳ ಬಗ್ಗೆ ಹೇಗೆ ಚರ್ಚೆ ಮಾಡುವುದು ? ಇದು ಬಹಳ ಮುಖ್ಯವಾದ ವಿಚಾರ. ನಮ್ಮ ರಾಜ್ಯಮಟ್ಟದಲ್ಲಿ ಅತ್ಯಂತ ಪ್ರಾಮುಖ್ಯವಾದ ಹುದ್ದೆಗಳು ಮೂರು. ಅವುಗಳು ಯಾವುವೆಂದರೆ, ಒಂದನೆಯದು ಮುಖ್ಯ ಕಾರ್ಯದರ್ಶಿಗಳ ಹುದ್ದೆ. ಮತ್ತೊಂದು ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಮತ್ತು ಐ. ಜಿ. ಪಿ. ಮೂರನೆ ಮುಖ್ಯವಾದ ಹುದ್ದೆ Advocate General of the State. ಈ ಮೂರು ಹುದ್ದೆಗಳಲ್ಲಿ ಯಾರು ಇರಬೇಕೆಂದು ತೀರ್ಮಾನ ಮಾಡತಕ್ಕ ಪರಿಪೂರ್ಣ ಅಧಿಕಾರ ಸರ್ಕಾರಕ್ಕೆ ಇದೆ. ಆದರೆ ನನಗೆ ಇದು ವರೆವಿಗೂ ಗೊತ್ತಾಗಲಿಲ್ಲ. ಸಾರ್ವಜನಿಕರ ಗಮನಕ್ಕೂ ಗೊತ್ತಾಗಲಿಲ್ಲ. ಆದರೆ ಈ ಸದನಕ್ಕೆ ಗೊತ್ತಾಗಬೇಕು. ಅದು ಏನೆಂದರೆ. ಹಿಂದೆ ಇದ್ದಂತಹ ಮುಖ್ಯ ಕಾರ್ಯದರ್ಶಿಗಳಿಗೆ ೨೦–೨೫ ದಿವಸಗಳ ಮುಂಚಿತವಾಗಿಯೇ ಕಂಪಲ್‌ಸರಿ ರಿಟೈರ್‌ಮೆಂಟ್ ಕೊಟ್ಟಿರೋ ? ಅಥವಾ ರಜಾ ಹೋಗುವಂತೆ ಆದೇಶ ನೀಡಿದ್ದೀರೋ ಎಂಬುದು ಈ ಸದನಕ್ಕೆ ಗೊತ್ತಾಗಬೇಕು. ಏಕೆಂದರೆ, ಆಡಳಿತ ವ್ಯವಸ್ಥೆಯಲ್ಲಿ ಅತ್ಯುಚ್ಚವಾದ ಹುದ್ದೆ ಅದು. ಕೇಂದ್ರದಲ್ಲಿ ಕ್ಯಾಬಿನೆಟ್ ಸೆಕ್ರೆಟರಿ ಇದ್ದ ಹಾಗೇ ರಾಜ್ಯದಲ್ಲಿ ಮುಖ್ಯ ಕಾರ್ಯದರ್ಶಿಗಳು ಇರುತ್ತಾರೆ. ಮುಖ್ಯ ಕಾರ್ಯದರ್ಶಿಗಳು ಇರುತ್ತಾರೆ. ಮುಖ್ಯ ಕಾರ್ಯದರ್ಶಿಗಳ ಸ್ಥಿತಿ ಇದು ಎಂದಾದರೆ, ಆಡಳಿತದಲ್ಲಿ ಬಿಗಿ ಎಲ್ಲಿ ಇರಬೇಕೋ ಅಲ್ಲಿಂದಲೇ ಸಡಿಲವಾಗುವುದಕ್ಕೆ ಪ್ರಾರಂಭವಾಯಿತು ಎಂಬುದು ನನ್ನ ಆರೋಪ. ಇದು ಮೊದಲನೆಯದು ಇದರ ಬಗ್ಗೆ ದೀರ್ಘವಾಗಿ ಹೋಗುವುದಿಲ್ಲ.

ಎರಡನೆಯದು. ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಎಂದು ಒಬ್ಬರು ಇದ್ದಾರೆ. ಇದು ರಾಜ್ಯದಲ್ಲಿ ೨ನೇ ಅತ್ಯಂತ ಮುಖ್ಯವಾದ ಹುದ್ದೆ. ಈ ಹುದ್ದೆಗೆ ವ್ಯಕ್ತಿಗಳನ್ನು ತರುವಂತಹ ವಿಚಾರದಲ್ಲಿ ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕಾಗುತ್ತದೆ. ಎಲ್ಲರ ಅಭಿಪ್ರಾಯಗಳನ್ನು ಸಂಗ್ರಹಿಸಿ ನಿರ್ಣಯಕ್ಕೆ ಬರಬೇಕಾಗುತ್ತದೆ. ಆದರೆ ದುರ್ದೈವ, ಏನಾಯಿತು ಎಂದರೆ. ಈ ರಾಜ್ಯಕ್ಕೆ ಪಿ. ಜಿ. ಹಲರ್ಣಂಕರ್ ಅವರು ಡಿ. ಜಿ. ಪಿ. ಯಾಗಿ ಬಂದುಬಿಡುತ್ತಾರೆಂದು ಮುಖ್ಯಮಂತ್ರಿಗಳೇ ಹೇಳಿದರು. ನಾವೆಲ್ಲ ಅವರಿಗೆ ಕಂಗ್ರಾಜ್ಯುಲೇಷನ್ ತಿಳಿಸಿಬಿಟ್ಟೆವು ಅಭಿನಂದನೆಗಳನ್ನು ಹೇಳಿದೆವು. ಎಲ್ಲೆಲ್ಲಿಂದಲೋ ಫೋನ್ ಮಾಡಿ ಅಭಿನಂದನೆಗಳನ್ನು ಸಲ್ಲಿಸಿದರು. ಮತ್ತೆ ಕೆಲವು ದಿವಸಗಳ ನಂತರ ಮತ್ತೊಬ್ಬರು ಬಂದರು. ಅವರು ಈಗ ಇರತಕ್ಕಂತಹವರು. ನಾನು ಈಗ ಇರತಕ್ಕಂತಹವರ ಸಾಮರ್ಥ್ಯದ ಬಗ್ಗೆಯಾಗಲಿ, ಪ್ರಾಮಾಣಿಕತೆಯ ಬಗ್ಗೆಯಾಗಲಿ ಹೇಳುತ್ತಿಲ್ಲ. ಇದರಿಂದ ಏನಾಗಿದೆ ಎಂದರೆ, ನೀವು ಆಡಳಿತದ ಜವಾಬ್ದಾರಿಯನ್ನು ಹೊತ್ತಿರತಕ್ಕ ಜನ ನಿರ್ಣಯ ತೆಗೆದುಕೊಳ್ಳುವಾಗ ದ್ವಂದ್ವ ಬಂದರೆ ನನ್ನ ದೃಷ್ಟಿಯಲ್ಲಿ ಆಡಳಿತಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಆಡಳಿತ ಶಿಥಿಲ ವಾಗುತ್ತದೆ. ಇದನ್ನು ಇಷ್ಟಕ್ಕೇ ಸೀಮಿತಗೊಳಿಸುತ್ತೇನೆ. ಇನ್ನು ಮೂರನೆಯದಾಗಿ ಅಡ್ವೊಕೇಟ್ ಜನರಲ್, ಅಡ್ವೊಕೇಟ್ ಜನರಲ್‌ರವರನ್ನು ಈ ಸರ್ಕಾರವೇ ಅಪಾಯಿಂಟ್ ಮಾಡಿತು. A very competent man. I don't question. ಇದನ್ನು ಪ್ರಶ್ನೆ ಮಾಡಿದವರು ಯಾರು ಅಂದರೆ, ಬಹಿರಂಗವಾಗಿ ಕಾಂಗ್ರೆಸ್ ಸದಸ್ಯರು ಈ ಆಯ್ಕೆಯನ್ನು ಪ್ರಶ್ನೆ ಮಾಡಿದರು. ಹೀಗಾದರೆ ಆತ ಅಲ್ಲಿ ಹೇಗೆ ಕೆಲಸ ಮಾಡಬೇಕು ? ಇದು ಸರಿಯೋ ತಪ್ಪೋ ನನಗೆ ಗೊತ್ತಿಲ್ಲ. ಆದುದರಿಂದ ಒಂದು ನೀತಿಯನ್ನು, ಸಂಯಮವನ್ನು ನೀವು ಹಾಕಿಕೊಳ್ಳದೆ ಇಂತಹ ದೊಡ್ಡ ದೊಡ್ಡ ಹುದ್ದೆಗಳ ವಿಚಾರದಲ್ಲಿ ಲಘುವಾಗಿ

ಮಾತನಾಡತಕ್ಕ ಪ್ರವೃತ್ತಿ ಇದೆಯೆಲ್ಲ ಈ ಪ್ರವೃತ್ತಿಯಿಂದ ಆಡಳಿತದಲ್ಲಿ ಶಿಥಿಲತೆಯಾಗುತ್ತದೆ. ಇವತ್ತು ಎತ್ತರದ ಅಫಿಶಿಯಲ್‌ಗೆ ದೊರೆಯಬೇಕಾದ ಅತ್ಯಂತ ದೊಡ್ಡ ಗೌರವ ಸಿಗಲಿಲ್ಲವೋ ಏನೋ ಎನ್ನತಕ್ಕ ಶಂಕೆ ಬೆಳೆದರೆ, ವ್ಯಕ್ತ ಮಾಡಿದರೆ ಅದನ್ನು ತಾವು ಅನ್ಯಥಾ ಭಾವಿಸಬಾರದು. ಈ ಶಿಥಿಲತೆ ಹಾಗೆಯೇ ಮುಂದುವರಿಯಿತು. ಪ್ರಾರಂಭ ಆದದ್ದು ಹೇಗೆ ಮುಂದುವರಿಯಿತು ? ಎಷ್ಟು ದೂರ ಮುಂದುವರಿಯಿತು ? ಇದನ್ನು ಹೇಳುವಾಗ ನನ್ನ ಮನಸ್ಸಿನಲ್ಲಿರತಕ್ಕ ಎಲ್ಲಾ ವಿಚಾರಗಳನ್ನು ಬಹಿರಂಗ ಪಡಿಸುವುದಿಲ್ಲ. ದುರ್ದೈವದಿಂದ ಅನೇಕ ಅಧಿಕಾರಿಗಳ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಬೇಕಾದ ಪ್ರಸಂಗ ಬಂತು ಅಥವಾ ಅವರ ಹೆಸರುಗಳನ್ನು ಇಲ್ಲಿ ತರತಕ್ಕ ಪ್ರಸಂಗ ಬಂತು. ಇದರ ಪರಿಣಾಮ ವರ್ಗಾವರ್ಗಿಯಲ್ಲಿ ಆಯಿತು. ಮಾನ್ಯ ಅಧ್ಯಕ್ಷರೇ, ವರ್ಗಾವರ್ಗಿ ಮಾಡಿದಾಗ ತಾವು ಒಂದು ನಿಯಮವನ್ನು ರೂಪಿಸಿ ಮಾಡಿದಿರಿ, ಬಹಳ ಸಂತೋಷ. ಅದರಂತೆ ನಡೆಯುತ್ತದೆ. ಅದರಿಂದ ಆಡಳಿತದಲ್ಲಿ ಬಿಗಿ ಬರುತ್ತದೆ ಎಂದರೆ, ದುರ್ದೈವ ಏನೆಂದರೆ, ನಿಯಮ ಹಾಗೆಯೇ ಉಳಿಯಿತು ನಿಯಮದ ವ್ಯಾಪ್ತಿ ಮೀರಿ ಉಳಿದಿದ್ದಲ್ಲಾ ಆಯಿತು. ಪತ್ರಿಕೆಗಳಲ್ಲಿ ಪ್ರಚಾರಕ್ಕೆ ಒಂದು ಗ್ರಾಸ ಆಯಿತು. ಅದು ಎಷ್ಟು ದೂರಕ್ಕೆ ಹೋಯಿತು ಅಂದರೆ ಚುನಾಯಿತ ಸದಸ್ಯರು ಈ ಕೆಲಸಬಿಟ್ಟು ಅವರಿಗೆ ಬೇರೆ ಕೆಲಸ ಇಲ್ಲವೇ ಎನ್ನುವಷ್ಟು ನಾಚಿಕೆ ಪಡುವ ಸ್ಥಿತಿಗೆ ನಾವು ಹೋದೆವು. ನಾವು ಎಂದರೆ ನಾವೆಲ್ಲರೂ ಹೇಗೆಂದರೆ ತಾವು ನಗುತ್ತೀರಿ. ನಮಗೇ ಗೊತ್ತಿಲ್ಲ, ನಮ್ಮ ಗೌರವ, ನಮ್ಮ ಜಾಗ ಎಷ್ಟು ಎತ್ತರದ್ದು ಎನ್ನುವುದು. ಜನ ಮಿನಿಟ್ ಹಾಕುವ ಬಗ್ಗೆ ಬಸ್ ಸ್ಟ್ಯಾಂಡ್‌ನಲ್ಲಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು. ಯಾರು ಮಿನಿಟ್ ಹಾಕುವುದು ? ಮಂತ್ರಿಗಳು ಮಿನಿಟ್ ಹಾಕುತ್ತಾರೆಂದು ಹೇಳುವುದು ಅಲ್ಲ, ಶಾಸಕರಿಂದ ಮಿನಿಟ್ ಬರೆಸಿ ಕೊಳ್ಳುವುದಕ್ಕೆ ಬಂದಿದ್ದಾರೆ. ಶಾಸಕರಿಂದ ಮಿನಿಟ್ ಬರೆದು ಕಳುಹಿಸುವುದು. ಹಾಗೆ ಮಾಡಬಾರದು ಎಂದು ನಾನು ಹೇಳುವುದಿಲ್ಲ. ಚುನಾಯಿತ ಪ್ರತಿನಿಧಿಗಳು ಅಲ್ಲಿಯ ಪರಿಸ್ಥಿತಿಗೆ ಅನುಗುಣವಾಗಿ ಸಲಹೆಗಳನ್ನು ಕೊಡಬಾರದೆಂದು ಹೇಳುವುದಿಲ್ಲ. ಆದರೆ ನಿಯಮಾವಳಿಗಳನ್ನು ರೂಪಿಸಿ ಮಾನ್ಯ ಮುಖ್ಯ ಮಂತ್ರಿಗಳು ಸಾರ್ವಜನಿಕರ.........

ಒಬ್ಬ ಮಾನ್ಯ ಸದಸ್ಯರು.—ನಿಮ್ಮ ಸರ್ಕಾರ ಇದ್ದಾಗ ದಿವಸಕ್ಕೆ ಒಬ್ಬೊಬ್ಬ ಅಧಿಕಾರಿಯ ವರ್ಗಾವಣೆ ಆಗುತ್ತಾ ಇತ್ತು.

ಶ್ರೀ ಎಂ. ಶಂಕರರೆಡ್ಡಿ.—ನಮ್ಮ ಶಿರಗುಪ್ಪಾದಲ್ಲಿ ಒಂದೇ ದಿವಸ ಮೂವರು ತಹಶೀಲ್ದಾರರು ಬದಲಾವಣೆ ಆದರು, ಇಂತಹದ್ದೆಲ್ಲಾ ಹಿಂದೆ ನಡೆದಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಅದನ್ನು ಸರಿ ಎಂದು ಹೇಳಲಿಲ್ಲ. ನಾನು ಸಮರ್ಥನೆ ಮಾಡಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಇವರ ಸರ್ಕಾರ ಇದ್ದಾಗ ಆರು ತಿಂಗಳು ಯಾವ ಶಾಲೆಗಳೂ ನಡೆ ದಿರಲಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಈ ರೀತಿ ಇಂಟರಪ್ಷನ್ಸ್ ಆದರೆ ನನಗೆ ಬಹಳ ಕಷ್ಟವಾಗುತ್ತದೆ. ನನ್ನ ಅಭಿಪ್ರಾಯಗಳನ್ನು ನಾನು ಹೇಳುವುದಿದ್ದು ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡುತ್ತಾರೆ. ಹಿಂದೆ ಏನು ನಡೆಯಿತು, ಅದಕ್ಕಿಂತಾ ಹಿಂದೆ ಏನು ನಡೆಯಿತು ಎಂದು ಹೇಳುವುದಿಲ್ಲ.

ಶ್ರೀ ಆರ್. ಎನ್. ನಾಯಕ್.—ಮಧ್ಯದಲ್ಲಿ ಮಾತನಾಡುವುದನ್ನೂ, ಎದುರಿಸುವುದನ್ನೂ ಅಭ್ಯಾಸ ಮಾಡಿದರೆ ಬಹಳ ಚೆನ್ನಾಗಿರುತ್ತದೆ. ನಮಗೂ ಕುಳಿತು ಕೇಳುವುದಕ್ಕೆ ಖುಷಿ ಆಗುತ್ತದೆ.

ಛೇರ್ಮನ್.—ಮಧ್ಯೆ ಯಾರೂ ಮಾತನಾಡಬೇಡಿ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಮೊದಲೇ ಹೇಳಿದ್ದೇನೆ. ನೀವು ಹುಟ್ಟಿನಿಂದ ನಾಯಕರು ಸಾಯುವವರೆಗೆ ನಾಯಕರು ಎಂದು ಹೇಳಿದ್ದೇನೆ. ಸುಮ್ಮನೆ ಏಕೆ ನಮ್ಮ ಅವಕಾಶವನ್ನು ಹಾಳು ಮಾಡುತ್ತೀರಿ ? ನಮ್ಮದು ಟೆಂಪರರಿ ನಾಯಕತ್ವ.

ಶ್ರೀ ಆರ್. ಎನ್. ನಾಯಕ್.—ನಿಮಗೆ ಶಕ್ತಿ ಬರಲಿ ಎನ್ನುವ ಕಾರಣಕ್ಕೆ ನಾವು ಮಧ್ಯ ಮಾತ ನಾಡುವುದು.

ಶ್ರೀ ವಾಟಾಳ್ ನಾಗರಾಜ್.—ಶಕ್ತಿ ಎಂದರೆ ಭೂತ ಶಕ್ತಿ. ಮಂಗಳೂರಿನ ಭೂತಗಳ ಶಕ್ತಿ.

ಶ್ರೀ ಆರ್. ಎನ್. ನಾಯಕ್,—ಶಕ್ತಿಗಳಲ್ಲಿ ಬಹಳ ಭೇಧ ಇದೆ. ಭೂತ ಶಕ್ತಿ ಎಂದು ನಾನು ಹೇಳೋದು, ನಿಮ್ಮದು ಆ ಅರ್ಥಾನಾ ? ಅಥವಾ ದೆವ್ವದ ಅಣ್ಣನ ಭೂತಾನಾ ?

ಶ್ರೀ ವಾಟಾಳ್ ನಾಗರಾಜ್.—ದೊಡ್ಡ ಶಕ್ತಿ, ದೆವ್ವದ ಶಕ್ತಿ. ಗಾಳಿಯ ಶಕ್ತಿ, ಇವೆಲ್ಲಾ ಶಕ್ತಿಗಳು ಗೊತ್ತಿಲ್ಲಾ ?

ಶ್ರೀ ಆರ್. ಎನ್. ನಾಯಕ್.—ದೇವರ ಅಣ್ಣಗಳ ಶಕ್ತಿ ಇರಬೇಕೆಂದು ನಾನು ಹೇಳಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಈ ವರ್ಗಾವಣೆಯಿಂದ ನಿಮಗೆ ನಮಗೆ ಯಾರಿಗೂ ಒಳ್ಳೆಯ ಹೆಸರು ಬರಲಿಲ್ಲ. ನಿಮಗೆ ಮಾತ್ರವೆಂದು ನಾನು ಹೇಳುತ್ತಿಲ್ಲ. ನಾವು ನಿಯಮಗಳನ್ನು ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ. ಶಾಸಕರು ವಿಧಿಯಿಲ್ಲದೆ ಕೆಲವು ವಿಚಾರಗಳನ್ನು ಮಂತ್ರಿಗಳಿಗೆ ಹೇಳಬೇಕಾಗುತ್ತದೆ. ತೊಂದರೆ ಇರತಕ್ಕವರು ನೇರವಾಗಿ ಮುಖ್ಯಮಂತ್ರಿಗಳನ್ನು ನೋಡುವುದಕಾಗುವುದಿಲ್ಲ. ಸದಸ್ಯರನ್ನು ಬಳಸಬಾರದೆಂದು ನಾನು ಹೇಳುವುದಿಲ್ಲ. ಆದರೆ ನಾವು ವ್ಯಾಪ್ತಿಯನ್ನು ಮೀರಿದ್ದೇವೆ ಎನ್ನುವ ಶಂಕೆ ನಮಗೆ ಬಂದಿದೆ, ಈ ಅಸಮಾಧಾನ ಏನಿದೆ ಇದರಿಂದ ನಾವು ಸಾಧ್ಯವಾದ ಮಟ್ಟಿಗೆ ಹೊರಗೆ ಇರುವುದಕ್ಕೆ ಪ್ರಯತ್ನ ಮಾಡದಿದ್ದರೆ. ಎಷ್ಟು ಎತ್ತರದಲ್ಲಿ ನಾವು ಕೆಲಸ ಮಾಡಬೇಕೆಂದು ಏನೊಂದು ಆಸೆಯನ್ನು ಇಟ್ಟುಕೊಂಡಿದ್ದೇವೆ ಆ ಎತ್ತರದಲ್ಲಿ ಕೆಲಸ ಮಾಡುವುದಕೆ ಸಾಧ್ಯವಾಗಲಾರದೆಂದು ಅನ್ನೊಂದು ದೃಷ್ಟಿಯಿಂದ ಹೇಳುತ್ತಿದ್ದೇನೆ. ಎಷ್ಟು ನಿಯಮಗಳನ್ನು ಮೀರಿದ್ದೇವೆಂದರೆ. ಇನ್ನು ಮೂರು ವರ್ಷಗಳಲ್ಲಿ ರಿಟೈರ್ ಆಗುತ್ತಾನೆ ಎನ್ನುವನನ್ನು ಅವನು ಕೇಳಿದ ಕಡೆಗೆ ಹಾಕಬೇಕು. ಅವರು ಬಂದು ನಮಗೆ ಹೇಳುತ್ತಾರೆ. ಸ್ವಾಮಿ, ನಾನು ರಿಟೈರ್ ಆಗುವುದಕ್ಕೆ ಇನ್ನು ಆರು ತಿಂಗಳು ಇದೆ, ನನ್ನನ್ನು ಗುಲ್ಬರ್ಗಕ್ಕೆ ಹಾಕಿದ್ದಾರೆಂದು ನಮ್ಮ ಹತ್ತಿರ ಬಂದು ಹೇಳುತ್ತಾರೆ. ಅದನ್ನು ಹೇಳೋಣ. ಇಲ್ಲವೆಂದು ಹೇಳುವುದಿಲ್ಲ. ಹಾಗೆಯೇ ಪ್ರಿಮೆಚ್ಯೂರ್ ವರ್ಗಾವಣೆಗಳಾಗಿವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಗುಲ್ಬರ್ಗ ಅಂದರೆ ಆಂಡಮಾನ್ ನಿಕೋಬಾರಾ ?

ಶ್ರೀ ಡಿ, ಬಿ. ಚಂದ್ರೇಗೌಡ.—ಬೆಂಗಳೂರು ಅಂದರೆ ಅಂಡಮಾನ್ ನಿಕೋಭಾರಾ ? ಮುಖ್ಯಮಂತ್ರಿಗಳು ಬಂದಿರತಕ್ಕ ಜಿಲ್ಲೆಯನ್ನು ಅಂಡಮಾನ್ ನಿಕೋಬಾರಾ ಎಂದು ಹೇಳುತ್ತೀರಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೋಡಿ ಸ್ವಾಮಿ, ಬೆಂಗಳೂರಿಗೆ ಹಾಕಿದ್ದಾರೆ, ಗುಲ್ಬರ್ಗಕ್ಕೆ ಹಾಕಿದ್ದಾರೆಂದು ಹೇಳುತ್ತಾರೆಂದು ಹೇಳಿದಿರಿ. ಅದಕ್ಕೆ ಗುಲ್ಬರ್ಗ ಅಂಡಮಾನ್ ನಿಕೋಬಾರಾ ಎಂದು ಕೇಳಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಸ್ವಲ್ಪಮಟ್ಟಿಗೆ ಪ್ರಾರಂಭಿಕ ಪ್ರಯತ್ನಗಳು ಆಡಳಿತಾತ್ಮಕವಾಗಿ ಏನು ಬಿಗಿಯಿಂದ ನಡೆಯಿತು, ಅದು ಮುಂದುವರಿಯಲಿಲ್ಲ ಎನ್ನತಕ್ಕದ್ದು ನಮ್ಮ ಪ್ರಶ್ನೆ. ಬಹಿರಂಗವಾಗಿ ಮಂತ್ರಿಗಳು. ಮುಖ್ಯಮಂತ್ರಿಗಳು ಎರಡು ಮೂರು ತಿಂಗಳುಗಳಲ್ಲಿ ವರ್ಗಾವಣೆಯನ್ನು ಮಾಡುತ್ತೇವೆಂದು ಹೇಳಿದರೆ ಅದು ಪತ್ರಿಕೆಗಳಲ್ಲಿ ಬಂದರೆ ಅವರು ಎಲ್ಲಿಗೆ ಹೋಗಬೇಕು ? ಎಲ್ಲಿಗೆ ಹೋಗುತ್ತಾರೆ, ಅಲ್ಲಿಗೇ ಬರುತ್ತಾರೆ. ನೀವು ಮಾಡುವುದನ್ನು ಮಾಡಿ, ಅದನ್ನು ನಾವು ಬೇಡವೆನ್ನುವುದಿಲ್ಲ. ಆ ಹಿಂಸೆ ನಿಮಗೆ ಗೊತ್ತಾಗುವುದಿಲ್ಲ. ನಮಗೆ ಗೊತ್ತಾಗುತ್ತದೆ. ಇದು ಆಡಳಿತದಲ್ಲಿ ಮತ್ತಷ್ಟು ಬಿಗಿ ತಪ್ಪುವುದಕ್ಕೆ ಕಾರಣವಾಗುತ್ತದೆಂದು ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಅನುಕಂಪದ ಆಧಾರದ ಮೇಲೆ ಹುದ್ದೆಗಳನ್ನು ಭರ್ತಿ ಮಾಡತಕ್ಕದ್ದು ಇದೆ. ೨೦ ಸಾವಿರ ಹುದ್ದೆಗಳು ಖಾಲಿಯಿವೆಯೆಂದು ಶಾಸನಸಭೆಗೆ ವರದಿ ಬರುತ್ತದೆ. ೨೩,೪೦೦ ಜನರನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುತ್ತೇವೆಂದು ನಿನ್ನೆ ತಾನೇ ಅರ್ಥಮಂತ್ರಿಗಳು ಹೇಳಿದರು. ಯಾರೋ ಗಂಡ ಸತ್ತರೆ ಹೆಂಡತಿ ಅಪಾಯಿಂಟ್‌ಮೆಂಟ್ ಕೇಳುವುದು. ಅಪ್ಪ ಸತ್ತರೆ ಮಗ ಅಥವಾ ಮಗಳು ಅಪಾಯಿಂಟ್‌ಮೆಂಟ್ ಕೇಳುವುದು ಅಥವಾ ಸಂಬಂಧಿಕರು ಕೇಳುವುದು ಇದೆಲ್ಲಾ ನಡೆದುಕೊಂಡು ಬಂದಿದೆ. ಎಲ್ಲ ಕಚೇರಿಗಳಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳು ಅಂತಹವರನ್ನು ವಾಪಸ್ಸು ಕಳುಹಿಸುತ್ತಿದ್ದಾರೆ. ವಿಧಿಯಿಲ್ಲದೆ ನಾನು ತಮಗೆ ಅನೇಕ ಕಾಗದಗಳನ್ನು ಬರೆದಿದ್ದೇನೆ. ಇನ್ನು ಮುಂದೆಯೂ ಬರೆಯಬೇಕಾಗಿದೆ. ಅನುಕಂಪದ ಆದಾರದ ಮೇಲೆ ಕೆಲಸ ಕೊಡತಕ್ಕ ನಿಯಮ ಏನಿದೆ ಅದನ್ನು ಪಾಲನೆ ಮಾಡಿ. ನಾನು ಕೆಲವು ಸಾರಿ ಈ ವಿಚಾರವನ್ನು ಹೇಳಿದ್ದೇನೆ. ಕೆಲವು ಅಧಿಕಾರಿಗಳಿಗೆ

ಬೆಂಗಳೂರಿನ ಸೆಕ್ರೆಟರಿಯೇಟ್‌ನಲ್ಲಿ ಕೆಲಸ ಸಿಕ್ಕಿದರೆ ಅವರು ಇಲ್ಲೇ ಇರುತ್ತಾರೆ. ಗ್ರಾಮೀಣ ಭಾಗದಲ್ಲಿ ಕೆಲಸ ಮಾಡತಕ್ಕವರು ಏನಿದ್ದಾರೆ ಅವರು ಅಲ್ಲಿಯೇ ಕೆಲಸ ಮಾಡಬೇಕು, ಪೈ ಕಮಿಷನ್ ಒಂದು ರೆಕಮೆಂಡೇಶನ್ ಮಾಡಿದೆ. ಅದನ್ನು ನಾನು ಇಲ್ಲಿ ಸುದೀರ್ಘವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಸ್ವಲ್ಪಮಟ್ಟಿಗಾದರೂ ಇಲ್ಲಿ ಕೆಲಸ ಮಾಡತಕ್ಕ ಜನಗಳಿಗೆ ಎಕ್ಸಿಕ್ಯುಟಿವ್ ಕೆಲಸ ಮಾಡಲಿಕ್ಕೆ ಅವಕಾಶ ಕೊಟ್ಟು ಕಳುಹಿಸಿ. ಅವರು ಇಲ್ಲಿಯೇ ಶಾಶ್ವತವಾಗಿರಬೇಕೇನು ? ಸೆಕ್ರೆಟಿಯೇಟ್‌ನಲ್ಲಿ ಕೆಲಸ, ಸಿಕ್ಕಿದರೆ ಅವರು ಪರ್ಮನೆಂಟಾಗಿ ಇಲ್ಲಿಯೇ ಇರುತ್ತಾರೆ. ಕನಿಷ್ಟಪಕ್ಷ ಸೆಕೆಂಡ್ ಡಿವಿಜನ್ ಕ್ಲರ್ಕ್ ಸೆಕ್ಷನ್ ಆಫೀಸರ್ ಇವರು ಹಳ್ಳಿಗಳಿಗೆ ಹೋಗಿ ಕೆಲಸ ಮಾಡಲಿ. ಅಲ್ಲಿರತಕ್ಕವರು ಬೆಂಗಳೂರಿಗೆ ಬರಲಿ ಅವಕಾಶ ಇದ್ದರೆ ಇದನ್ನು ಆಲೋಚನೆ ಮಾಡಬೇಕೆಂದು ನಾನು ಕೇಳುತ್ತೇನೆ. ಮತ್ತೊಂದು ವಿಚಾರ ವೇನೆಂದರೆ, ವಾಲೆಂಟರಿ ರಿಟೈರ್‌ಮೆಂಟ್ ತೆಗೆದುಕೊಳ್ಳುವವರಿಗೆ ಅವರಿಗೆ ಏನು ಕೊಡಬೇಕೋ ಅದನ್ನು ಕೊಟ್ಟು ಕಳುಹಿಸುವುದಕ್ಕೆ ನಿಮಗೇನು ತೊಂದರೆ ? ಹೋಗುವವರಿಗೆ ತೆಗೆದುಕೊಂಡು ಹೋಗಪ್ಪ ಎಂದು ಹೇಳಿ ಕಳುಹಿಸಿಕೊಡಿ, ಅಂತಹವರು ಕೆಲಸ ಮಾಡುವುದಿಲ್ಲ. ಅವರಿಗೆ ಏನು ಪರಿಹಾರ ಕೊಡ ಬೇಕೋ ಅದನ್ನು ಕೊಟ್ಟು ಕಳುಹಿಸಿ. ೪–೫ ವರ್ಷಗಳ ಕಾಲ ಅನ್ ಅಥರೈಸ್ಡ್ ಆಬ್ಸೆಂಟ್ ಆಗುವಂತಹ ಮೇಧಾವಿಗಳು, ಇಂಜನಿಯರ್‌ಗಳು, ಡಾಕ್ಟರುಗಳು ಇವರು ವಿದೇಶಗಳಲ್ಲಿದ್ದುಕೊಂಡು ಕೆಲಸಮಾಡುತ್ತಾರೆ. ಅಲ್ಲಿ ಲಕ್ಷಾಂತರ ರೂಪಾಯಿ ಡಾಲರ್ ಲೆಕ್ಕದಲ್ಲಿ ಸಂಪಾದನೆ ಮಾಡುತ್ತಿದ್ದಾರೆ. ಇಲ್ಲಿ ಅವರನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಬಂದಮೇಲೆ ಮತ್ತೆ ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳತಕ್ಕಂಥ ಪ್ರಯತ್ನ ನಡೆಯುತ್ತದೆ. ಆದ್ದರಿಂದ ಏನಾದರೂ ಒಂದು ನಿರ್ಧಾರ ಮಾಡಿ ಇಲ್ಲಿಂದ ಬಿಟ್ಟುಹೋದಮೇಲೆ ಮತ್ತೆ ಬರುವಹಾಗಿಲ್ಲ ಎಂದು ಕಡ್ಡಿ ಮುರಿದ ಹಾಗೆ ಶಾಸನ ಮಾಡಬೇಕೆಂದು ನಾನು ಹೇಳುತ್ತೇನೆ. ಆಡಳಿತಕ್ಕೆ ಸಂಬಂಧಪಟ್ಟಹಾಗೆ ಎನ್. ಜಿ. ಓ.ಸ್ ಅಸೋಸಿಯೇಶನ್ ಎಂದು ಇದೆ. ಏನು ನಡೆಯಿತೋ ಗೊತ್ತಿಲ್ಲ, ಅವರು ಏಕಾಏಕಿ ಫೆಬ್ರುವರಿ ೧೫ ರಂದು ಮುಷ್ಕರ ನಡೆಸಿದರು. ಮುಷ್ಕರಕ್ಕೆ ಪೂರ್ವಭಾವಿಯಾಗಿ ಚರ್ಚೆಗೆ ಅವಕಾಶ ಇತ್ತೇ, ಅವರ ಭಿನ್ನಾಭಿಪ್ರಾಯಗಳನ್ನು ಹೋಗ ಲಾಡಿಸುವುದಕ್ಕೆ ಪೂರಕವಾದ ಪ್ರಯತ್ನ ನಡೆಯಿತೇ ಇಲ್ಲವೇ ಎಂಬುದು ನನಗೆ ಗೊತ್ತಿಲ್ಲ. ಆದರೆ ಪತ್ರಿಕೆಗಳ ವರದಿ ಪ್ರಕಾರ, ಅದು ನಡೆಯಲಿಲ್ಲ ಎನ್ನತಕ್ಕಂಥ ದ್ವೇಶಕ್ಕಾಗಿ ನಾವು ಮುಷ್ಕರ ಹೂಡು ತ್ತೇವೆ ಎಂದು ಇದೆ. ಜನತಂತ್ರದ ಮೂಲವ್ಯವಸ್ಥೆಯಾದ ಚುನಾವಣೆಯನ್ನು ಮುಂದೂಡಬೇಕಾದ ಪರಿಸ್ಥಿತಿವರೆಗೆ ನಮ್ಮನ್ನು ಅದು ಕೊಂಡೊಯ್ದಿತ್ತು. ಆದಕಾರಣ ಅವರ ಶಾಸನಬದ್ಧ ವ್ಯವಸ್ಥೆ ಏನಿದೆ ಅದರ ಜೊತೆಗೆ ಸಂಪರ್ಕ ಇಟ್ಟುಕೊಂಡು ಆ ಮೂಲಕ ಸಮಸ್ಯೆಗಳಿಂದ ಸಾರ್ವಜನಿಕ ಹಿತಕ್ಕೆ ಅಡ್ಡಿ ಯಾಗದ ಹಾಗೆ ಅವರನ್ನು ತಾವು ವಿಶ್ವಾಸಕ್ಕೆ ತೆಗೆದುಕೊಂಡು ಚರ್ಚೆಮಾಡಿ ಪರಿಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಿನ್ನೆ ಮಾನ್ಯ ಹಣಕಾಸಿನ ಸಚಿವರು ಒಂದು ಫೈನಾನ್ಸ್ ಕಮಿಷನ್ ಅನ್ನು ಅನೌನ್ಸ್ ಮಾಡಿದರು. ನನಗೆ ಸಂತೋಷವಾಯಿತು. ಕಾರಣವೇನೆಂದರೆ, ಇದುವರೆಗೆ ಆಡಳಿತ ವ್ಯವಸ್ಥೆಗೆ ಎಷ್ಟರಮಟ್ಟಿಗೆ ಆರ್ಥಿಕ ಹೊಣೆ ಬೀಳುತ್ತದೆ. ಎಂದು ಲೆಕ್ಕ ಸಿಕ್ಕಿರಲಿಲ್ಲ. ಇದು ಮೊದಲನೆಯ ಪ್ರಯತ್ನ. ಆದ್ದರಿಂದ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಹಾಗೆಯೇ ಮುಂದೆ ಏನಾದರೂ ಪೈ ಕಮಿಷನ್ ಮಾಡತಕ್ಕಂಥ ಆಲೋಚನೆ ಇದ್ದರೆ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಬಹಿರಂಗ ಪಡಿಸಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇದುವರೆಗೆ ಆಡಳಿತ ಸಮಸ್ಯೆಗಳ ಬಗ್ಗೆ ಹೇಳಿದೆ. ಇನ್ನು ಆಡಳಿತ ಸುಧಾರಣೆ ಬಗ್ಗೆ ನಾಲ್ಕು ಮಾತುಗಳನ್ನು ಹೇಳುತ್ತೇನೆ. ನಾನು ಬಹಳ ದೀರ್ಘವಾಗಿ ಇದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ಸೆಕ್ರೆಟರಿಯೇಟ್‌ಗೆ ಸಂಬಂಧಪಟ್ಟಹಾಗೆ, ಆಡಳಿತಾತ್ಮಕ ವ್ಯವಸ್ಥೆಗೆ ಪೈ ಕಮಿಷನ್‌ನವರು ಸಲಹೆ ಮಾಡಿದಹಾಗೆ, ಏನಾದರೂ ಸರ್ಕಾರದ ಲೆವೆಲ್‌ನಲ್ಲಿ ಒಂದು ಸಮಿತಿಯನ್ನು ರಚನೆಮಾಡಿ ಕೆಲವು ನಿಯಮಗಳನ್ನು ರೂಪಿಸತಕ್ಕ ಪ್ರಯತ್ನವನ್ನು ತಾವು ಮಾಡಬೇಕು ಎಂದು ಕೇಳುತ್ತೇನೆ. ತಾವು ಆಡಳಿತದಲ್ಲಿ ಖರ್ಚನ್ನು ಕಡಿಮೆ ಮಾಡುವುದಕ್ಕೆ ಅನೇಕ ಆಲೋಚನೆಗಳನ್ನು ಮಾಡಿದ್ದೀರಿ. ರಾಜ್ಯಪಾಲರ ಭಾಷಣದಲ್ಲೂ ಪ್ರಸ್ತಾಪ ಮಾಡಿದ್ದಾರು. ಎರಡು–ಮೂರು ಸಮಿತಿಗಳನ್ನು ಅನೌನ್ಸ್ ಮಾಡಿದಿರಿ, ಅವುಗಳೇನು ಅಸ್ತಿತ್ವಕ್ಕೆ ಬಂದಿವೆಯೋ, ಕಾರ್ಯಾರಂಭ ಮಾಡಿವೆಯೋ. ಮಾಡಿದ್ದರೆ ಎಷ್ಟು ದೂರಕ್ಕೆ ಹೋಗಿವೆ ಎಂಬುದರ ಬಗ್ಗೆ ನಮಗೆ ಇದುವರೆಗೂ ಮಾಹಿತಿ ಸಿಕ್ಕಿಲ್ಲ. ದಯವಿಟ್ಟು ಈ ಮಾಹಿತಿಯನ್ನು ಒದಗಿಸಿಕೊಡಬೇಕು. ಇನ್ನೊಂದು ವಿಷಯವೇನೆಂದರೆ, ಇಲ್ಲಿ ಹಿಂದೆ ೧೯೭೭ರ ವರೆಗೆ ಒಂದು ವ್ಯವಸ್ಥೆ ಇತ್ತು. ಯಾವ ಅಧಿಕಾರಿಗೆ ಕಾರು ಕೊಡಬೇಕು, ಯಾವ ಅಧಿಕಾರಿಗೆ ಕೊಡಬಾರದು, ಆತ ಎಷ್ಟು ಬಳಸಬೇಕು ಎಂಬ ವ್ಯವಸ್ಥೆ ಇತ್ತು. ಈಗ ಎಲ್ಲ ದಿಕ್ಕು ತಪ್ಪಿಹೋಗಿಬಿಟ್ಟಿದೆ. ಡೆಪ್ಯುಟಿ ಸೆಕ್ರೆಟರಿಯಿಂದ ಹಿಡಿದು ಕೆಳಗಡೆ ಒಬ್ಬೊಬ್ಬರನ್ನು ಬಿಟ್ಟರೆ ಉಳಿದ ಎಲ್ಲರಿಗೂ ಕಾರು, ಎಲ್ಲರಿಗೂ ಪೆಟ್ರೋಲ್, ಎಲ್ಲರಿಗೂ ಭತ್ಯ. ಜವಾಬ್ದಾರಿಯನ್ನು ಹೊಂದಿಕೊಂಡಂತೆ ಅವಶ್ಯಕತೆಗಳನ್ನು ನಾವು ರೂಪಿಸಬೇಕು. ಒಂದು ದಿವಸವೂ ಹೊರಗಡೆ ಹೋಗುವುದಿಲ್ಲ. ಇಲ್ಲೇ ನಗರದಲ್ಲೇ ಇರುವುದು ವಿಧಾನಸೌಧಕ್ಕೆ ಕಚೇರಿಗೆ

ಬರುವುದು. ಹೋಗುವುದು. ಇಂತಹವರಿಗೆ ಅವಶ್ಯಕತೆ ಇದೆಯೇ ಎಂದು ಆಲೋಚನೆ ಮಾಡಿ. ಇವರ ಮೇಲೆ ತಗಲತಕ್ಕಂಥ ಪೆಟ್ರೋಲ್. ಆಯಿಲ್ ಮೆಂಟನೆನ್ಸ್ ಇದಕ್ಕೆಲ್ಲ ಯಾರ ಜವಾಬ್ದಾರಿಯೂ ಇಲ್ಲ, ಯಾರ ಲೆಕ್ಕವೂ ಇಲ್ಲ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಕನಿಷ್ಟ ಪಕ್ಷ ಇದಕ್ಕಾಗಿ ನೀವು ಒಂದು ಹಂತಕ್ಕಿಂತ ಮುಂದೆ ವಾಹನಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ. ಭಾನುವಾರದ ದಿವಸ ಸರ್ಕಾರಿ ವಾಹನಗಳನ್ನು ಉಪಯೋಗಿಸಬಾರದು. ರಜೆ ದಿವಸ ವಾಹನಗಳನ್ನು ಉಪಯೋಗಿಸ ಬಾರದು ಎಂದು ಕೇಂದ್ರಸರ್ಕಾರದವರು ಆಲೋಚನೆ ಮಾಡಿದ ಹಾಗೆ ಕಾಣುತ್ತದೆ ಆ ಆಲೋಚನೆಯಿಂದ ದುಡ್ಡು ಉಳಿಯುತ್ತದೆ ಪೆಟ್ರೋಲ್ ಉಳಿಯುತ್ತದೆ ಇದರ ಕಡೆಯೂ ತಾವು ಸ್ವಲ್ಪ ಗಮನ ಕೊಡಬೇಕು ಮತ್ತೆ ನಮ್ಮದೇ ಆದಂಥ ಆದರೆ ಸರ್ಕಾರದಿಂದ ಒಂದು ವರ್ಕ್‌ಷಾಪ್ ಮಾಡುವುದಕ್ಕೆ ಏಕೆ ಯೋಚನೆ ಮಾಡಬಾರದು ? ಮತ್ತು ಎಲ್ಲಿ ಸಾಧ್ಯವೋ ಅಲ್ಲಿ ಸರ್ಕಾರದಿಂದ ಒಂದೆರಡು ಪೆಟ್ರೋಲ್ ಬಂಕ್‌ಗಳನ್ನು ಏಕೆ ಮಾಡಬಾರದು. ಹಾಲಿ ಇರತಕ್ಕ ವ್ಯವಸ್ಥೆಯಲ್ಲಿ ಎಷ್ಟು ಪೆಟ್ರೋಲ್ ಹಾಕುತ್ತಾರೆಂದು ಗೊತ್ತಿಲ್ಲ. ಆ ವರ್ಕ್‌ಷಾಪ್‌ಗಳಲ್ಲಿ ಎಷ್ಟು ಖರ್ಚಾಗುತ್ತದೆಂದು ಗೊತ್ತಿಲ್ಲ. ನಮಗೆ ಬಿಲ್ ಬರುತ್ತದೆ, ಅದನ್ನು ಕೊಡುತ್ತೇವೆ. ಆದರಿಂದ ಏನಾದರೂ ಸ್ವಲ್ಪಮಟ್ಟಿಗೆ ವರ್ಕ್‌ಲೋಡನ್ನು ನೋಡಿಕೊಂಡು ಆಡಳಿತಾತ್ಮಕ ವಿಚಕ್ಷಣೆ ದೃಷ್ಟಿಯಿಂದ ಸರ್ಕಾರಿ ವಾಹನಗಳನ್ನು ಹತೋಟಿಗೆ ತೆಗೆದುಕೊಳ್ಳುವುಕ್ಕೆ ತಾವು ಪ್ರಯತ್ನಿಸಬೇಕೆಂದು ನಾನು ಸಲಹೆಯನ್ನು ಕೊಡುತ್ತಿದ್ದೇನೆ. ಮತ್ತೊಂದು ಸಲಹೆ ಇದೆ ಅದು ನಮ್ಮೆಲ್ಲರಿಗೂ ಸಂಬಂಧಪಟ್ಟಿದ್ದು. ಅದು ಲೆಟರ್ ಹೆಡ್ ವಿಚಾರ ಮಂತ್ರಿಗಳೆಲ್ಲರೂ ಲೆಟರ್ ಹೆಡ್ ಮಾಡಿಸುತ್ತಾರೆ ಮಾನ್ಯ ಬಸವಲಿಂಗಪ್ಪನವರು ಲೆಟರ್ ಹೆಡ್ ಮಾಡಿಸಿದ್ದಾರೆ. ಒಳ್ಳೆಯ ಗ್ಲೇಜಿಂಗ್ ಪೇಪರ್, ಬ್ಯೂಟಿಫುಲ್ ಪೇಪರ್‌ನಲ್ಲಿ ಈಲೆಟರ್ ಹೆಡ್ ಮಾಡಿಸಿದರು ನಂತರ ಅವರ ಮಂತ್ರಿಮಂಡಲ ಬದಲಾಯಿಸಿತು. ಬಿ. ಬಸವಲಿಂಗಪ್ಪ ಗ್ರಾಮವಿಕಾಸಾಭಿವೃದ್ಧಿ ಮಂತ್ರಿ ಎಂದು ಇತ್ತಲ್ಲ ಆ ಲೆಟರ್ ಹೆಡ್‌ಗಳೆಲ್ಲ ಏನಾದವು ತಿಪ್ಪೆಗೆ ಹಾಕ ಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ರಾಜಶೇಖರ ಮೂರ್ತಿಗಳು ಇಲ್ಲ, ಅವರು ಇದ್ದು, ಈ ಸಣ್ಣ ಲೆಟರ್ ಹೆಡ್ ಪೆನ್ಸಿಲ್ ವಿಚಾರಗಳು ಅವರಿಗೆ ಗೊತ್ತಾದರೆ, ಅವನ್ನು ಉಪಯೋಗಿಸಿಲ್ಲವೆಂದು ಗೊತ್ತಾದರೆ, ಮುಂದೆ ನಮಗೆ ಏನೂ ಸಿಕ್ಕುವುದಿಲ್ಲ......

ಶ್ರೀ ಡಿ. ಬಿ. ಚಂದ್ರೇಗೌಡ.—ನನ್ನ ಸಲಹೆ ಇಷ್ಟೆ. ಆಲೋಚನೆ ಮಾಡಿ ಇದೇನೂ ಬಹಳ ದೊಡ್ಡ ವಿಚಾರ ಅಲ್ಲ. ಕೇಂದ್ರದಲ್ಲಿ ಮಂತ್ರಿಗಳಿಗೆ ಲೆಟರ್ ಹೆಡ್ ಯಾವರೀತಿ ಇರುತ್ತದೆ ನೋಡಿ. ತಾವೂ ಕೂಡ ಕೇಂದ್ರದಲ್ಲಿ ಮಂತ್ರಿಗಳಾಗಿದ್ದಿರಿ, ತಮ್ಮ ಹೆಸರು ಎಲ್ಲಾದರೂ ಪ್ರಿಂಟಾಗಿತ್ತೆ ? ಹೆಸರು ಟೈಪಾಗುತ್ತದೆ. ಅಲ್ಲಿ ಜನರಲ್ ಲೆಟರ್ ಹೆಡ್‌ಗಳು ಇರುತ್ತವೆ, ಸ್ಟೇಟ್ ಮಿನಿಸ್ಟರ್ ಅಥವಾ ಡೆಪ್ಯೂಟಿ ಮಿನಿಸ್ಟರ್ ಎಂದು ಇರುತ್ತದೆ. ಯಾರು ಎಷ್ಟೆಷ್ಟು ಬಳಸುತ್ತಾರೆ ಅಷ್ಟಕ್ಕೆ ಹೆಸರುಗಳನ್ನು ಟೈಪುಮಾಡುತ್ತಾರೆ. ಒಂದು ವೇಳೆ ಮಂತ್ರಿಮಂಡಲ ಬದಲಾವಣೆಯಾದರೆ, ಮುಂದೆ ಬರತಕ್ಕ ಮಂತ್ರಿಮಂಡಲಕ್ಕೂ ಅದು ಉಪಯೋಗವಾಗುತ್ತವೆ. ತಮಗೆ ಆಡಳಿತದ ಅನುಭವ ಸಾಕಷ್ಟು ಇದೆ. ಮಾನ್ಯ ಹನುಮಂತಯ್ಯನವರೋ ಅಥವಾ ಮುರಾರ್ಜಿ ದೇಸಾಯಿಯವರೊ ಅಡ್ಮಿನಿಸ್ಟ್ರೇಟೀವ್ ರಿಫಾರ್ಮ್ಸ್ ಬರೆಯುವಷ್ಟು ಆಡಳಿತ ಅನುಭವ ನಿಮಗೆ ಇದೆ. ಆದಕಾರಣ ನಾವು ನಿಮ್ಮಿಂದ ಹೆಚ್ಚು ನಿರೀಕ್ಷೆ ಮಾಡುತ್ತೇವೆ. ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಕಮೀಷನ್ ರಿಪೋರ್ಟ್ ೨೪ ಸಾವಿರ ಪುಟ ಇರಬಹುದು. ನಮ್ಮ ನಿರೀಕ್ಷೆಗೆ ಕೊನೇಪಕ್ಷ, ಆದರಲ್ಲಿರುವ ಕೆಲವು ಅಂಶಗಳನ್ನಾದರೂ ಗಮನಿಸಿ, ಅದರಲ್ಲಿ ಸಲಹೆ ಮಾಡಿರತಕ್ಕ ಕೆಲವು ಬದಲಾವಣೆಗಳನ್ನು ತಾವು ಆಡಳಿತದಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ, ತಾವೇನೋ ದಕ್ಷತೆ, ಸುಧಾರಣೆ ಮಾಡುವ ದೃಷ್ಟಿಯಿಂದ ಅದಕ್ಷ, ಅಪ್ರಮಾಣಿಕ ಅಧಿಕಾರಿಗಳನ್ನು ಗುರುತು ಹಿಡಿಯತಕ್ಕಂಥ ಒಂದು ಸಮಿತಿ ಬಗ್ಗೆ ಏನು ಸಲಹೆ

೪–೦೦ ಪಿ.ಎಂ.

ಮಾಡಿದ್ದೀರಿ. ಅದು ಎಷ್ಟು ಕೆಲಸ ಮಾಡಿದೆ ಎಂಬುದನ್ನು ಈ ಸದನಕ್ಕೆ ತಾವು ಹೇಳಬೇಕೆಂದು ನಿಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇನ್ನು ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಹಾಗೆ ನನ್ನ ಕೆಲವು ಅನಿಸಿಕೆ ಗಳನ್ನು ಹೇಳಬೇಕು. ಪೋಲೀಸ್ ಇಲಾಖೆ ಸಾರ್ವಜನಿಕರ ಜೀವ ಮತ್ತು ಆಸ್ತಿಯ ರಕ್ಷಣೆ ಮಾಡ ಬೇಕು. ಇದು ಎಷ್ಟರಮಟ್ಟಿಗೆ ಆಗಿದೆ ? ಮೇಂಟೆನೆನ್ಸ್ ಆಫ್ ಲಾ ಅಂಡ್ ಆರ್ಡರ್ ಎಷ್ಟರಮಟ್ಟಿಗೆ ಆಗಿದೆ ? ನನಗೆ ಬಂದಿರುವ ಅರ್ಜಿಗಳನ್ನು ತಮಗೆ ಕಳುಹಿಸಿಕೊಟ್ಟರೆ ನನ್ನ ಬರ್ಡನ್ ರಿಲೀಫ್ ಆಗುತ್ತದೆ. ಆದರೆ ಕೆಲವನ್ನು ತಾವು ನೋಡಬೇಕು. ಆಡಳಿತದ ಸೆಟ್‌ಅಪ್‌ಗೆ ನಾನು ಹೋಗುವುದಿಲ್ಲ. ನನಗೇ ಅದು ತಿಳಿಯುವುದಿಲ್ಲ, ಇನ್ನು ಬೇರೆಯವರಿಗೆ ಹೇಗೆ ತಿಳಿಯುತ್ತದೊ ನನಗೆ ಗೊತ್ತಿಲ್ಲ. ಎಷ್ಟು ಜನ ಐ.ಜಿ.ಪಿ.ಗಳು, ಎಷ್ಟು ಜನ ಡಿ.ಐ.ಜಿ. ಗಳು, ಯಾವ ಯಾವ ಇಲಾಖೆಯಲ್ಲಿ ಅವರು ಕೆಲಸ ಮಾಡು

ತ್ತಾರೆ, ಅವರ ಅಧಿಕಾರ ವಿಕೇಂದ್ರೀಕರಣ ಹೇಗೆ ಆಗಿದೆ ಎನ್ನುವುದು ನನಗೇ ತಿಳಿದಿಲ್ಲ. ನಾನು ತಿಳಿಯುವುದಕ್ಕೆ ಏಕೆ ಪ್ರಯತ್ನ ಮಾಡಿದೆ ಅಂದರೆ, ವೀರಪ್ಪನ್‌ನನ್ನು ಹಿಡಿಯತಕ್ಕಂಥ ಪ್ರಶ್ನೆ ಬಂದಾಗ ಯಾರನ್ನು ಹಾಕಬೇಕು, ಎಂಬ ಬಗ್ಗೆ ಒಂದು ದೊಡ್ಡ ದ್ವಂದ್ವ ಆಯಿತು. ನಾನು ಆಗ ಮೈಸೂರಿಗೆ ಹೋಗಿ ಏತಕ್ಕೆ ಹೀಗೆ ಇದೆ ಎಂದು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆ. ಅಲ್ಲಿಯ ಸ್ಥಳೀಯ ಅಧಿಕಾರಿ ನಾನು ಇಲ್ಲಿಯ ಜವಾಬ್ದಾರ, ನನ್ನನ್ನು ಬಿಟ್ಟು ನನ್ನ ಮೇಲೆ ಬೇರೆಯವರನ್ನು ಹಾಕಿ ನನ್ನಿಂದ ಕೆಲಸ ಮಾಡಿಸುವುದಕ್ಕೆ ಪ್ರಯತ್ನ ಮಾಡಿದರು ಎಂಬ ವಿಚಾರ ಬಂತು, ಆ ಭಾವನೆ ಬರುವುದು ಸಹಜ ಸ್ಥಳೀಯ ವಿದ್ಯಮಾನಗಳು ಪೂರ್ತಿಯಾಗಿ ಅಲ್ಲಿರತಕ್ಕಂಥ ಸೂಪರಿಂಟೆಂಟ್ ಆಫ್ ಪೋಲೀಸ್‌ಗೆ ಗೊತ್ತಿರುತ್ತದೆ. ಅವರ ಮೇಲುಸ್ತುವಾರಿಗೆ ಮತ್ತೊಬ್ಬರನ್ನು ಹಾಕಿದರೆ, ಅವರಿಬ್ಬರಲ್ಲಿ ಹೊಂದಾಣಿಕೆ ಇದ್ದರೆ ಕೆಲಸ ಸುಲಭವಾಗುತ್ತದೆ. ಇಲ್ಲದೇಹೋದರೆ ಸಮಯ ಎಲ್ಲಾ ಒಂದು ಜಗಳದಲ್ಲಿ ದ್ವಂದ್ವದಲ್ಲಿ ಕಳೆದು ಹೋಗುತ್ತದೆ. ಮೂಲತಃ ವೀರಪ್ಪನ್ ಹಿಡಿಯಲಾರದ್ದಕ್ಕೆ ಇದೂ ಒಂದು ದೊಡ್ಡ ಕಾರಣವೇನೋ, ಕೊರತೆಯೇನೋ ಎಂದು ನಾನು ಅಂದುಕೊಂಡಿದ್ದೇನೆ.

ನಮ್ಮ ಅಧ್ಯಕ್ಷರ ಕ್ಷೇತ್ರಕ್ಕೆ ಸೇರಿದ ವಿಚಾರ ಹೇಳುತ್ತೇನೆ. ಹೊಸನಗರದಲ್ಲಿ ಮೊನ್ನೆ ಒಂದು ಪ್ರಕರಣ ನಡೆಯಿತು. ಚೆಕ್‌ಪೋಸ್ಟ್‌ಗಳಲ್ಲಿ ಹೇಗೆ ನಡೆಯುತ್ತದೆ ಹೇಳುತ್ತೇನೆ. ಮಲೆನಾಡಿನಲ್ಲಿ ಬಹಳಷ್ಟು ಚೆಕ್‌ಪೋಸ್ಟ್‌ಗಳು ಇವೆ. ಫಾರೆಸ್ಟ್ ಚೆಕ್‌ಪೋಸ್ಟ್‌ನಲ್ಲಿ ೨೭-೬-೯೦ ರಲ್ಲಿ ಅಬ್ದುಲ್ ಖಾದರ್ ಎಂಬುವವರ ಕಾರಿಗೆ ಪೋಲೀಸರು ಕೈ ಒಡ್ಡಿ ಚೆಕ್ ಮಾಡುವುದಕ್ಕೆ ನಿಲ್ಲಿಸುತ್ತಾರೆ, ಅಲ್ಲಿ ಏನೂ ಸಿಗುವುದಿಲ್ಲ. ಅವರ ಹತ್ತಿರ ೨೦ ಸಾವಿರ ರೂಪಾಯಿ ಇತ್ತು, ಆ ಚೀಲವನ್ನು ಕೈಗೆ ತೆಗೆದುಕೊಂಡು ಅದರಲ್ಲಿ ಒಂದು ಸಾವಿರ ರೂಪಾಯಿಗಳನ್ನು ಪೋಲೀಸರು ಕಸಿದುಕೊಂಡರು. ಇವರು ಹೆದರಿಕೊಂಡು ಏನಾದರೂ ಮಾಡಲಿ, ಸದ್ಯ ಬಿಟ್ಟರೆ ಸಾಕು ಎಂದು ಹೊರಟು ಹೋದರು. ಮಾರನೆಯ ದಿವಸ ಪೋಲೀಸರು ಈರೀತಿ ಸಾವಿರ ರೂಪಾಯಿ ಕಸಿದುಕೊಂಡಿದ್ದಾರೆ ಎಂದು ಪೋಲೀಸ್ ಠಾಣೆಗೆ ಕಂಪ್ಲೇಂಟ್ ಕೊಡುವುದಕ್ಕೆ ಹೋದರೆ, ಹೋದವರಿಗೆ ಹಾಗೆ ಹೀಗೆ ಹೊಡೆದಿಲ್ಲ, ಅವನು ಬದುಕಿ ಹೊರಗೆ ಬಂದದ್ದೇ ಹೆಚ್ಚು ಎನ್ನುವ ಸ್ಥಿತಿಯಲ್ಲಿ ಹೊಡೆದಿದ್ದಾರೆ. ಅವರು ಏನು ಮಾಡಬೇಕು, ಎಲ್ಲಿಗೆ ಹೋಗಬೇಕು, ಯಾರ ಹತ್ತಿರ ಹೋಗಬೇಕು ? ದಯವಿಟ್ಟು ಇದರ ಬಗ್ಗೆ ವಿಚಾರಿಸಿ. ಸೂಕ್ಷ್ಮವಾಗಿ ಒಂದೆರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದಕ್ಕಿಂತ ಹೆಚ್ಚು ಈ ವಿಚಾರದಲ್ಲಿ ನಾನು ಹೇಳುವುದಿಲ್ಲ. ಬೆಂಗಳೂರು ನಗರ ಕಾರ್ಪೊರೇಷನ್ ಚುನಾವಣೆ ನಡೆಯಿತು, ಪ್ರಥಮ ಬಾರಿಗೆ ಕಾರ್ಪೊರೇಷನ್ ಚುನಾವಣೆಯಲ್ಲಿ ಚುನಾಯಿತ ಪ್ರತಿನಿಧಿ ಶ್ರೀಮಾನ್ ಕೃಷ್ಣಪ್ಪನವರ ಮನೆಯ ಎದುರಿಗೇ ಬೆಳಿಗ್ಗೆ ಎಂಟೂವರೆ ಘಂಟೆಗೆ ಚುನಾವಣೆಯ ದಿವಸ ಅವರ ಅಕ್ಕನ ಮಗನನ್ನು ತಿವಿದರು, ಅಲ್ಲಿ ಹೆಣ ಬಿತ್ತು ಕಾರ್ ನಂಬರ್ ಕೊಟ್ಟಿದ್ದಾರೆ ನೋಡಿದವರು ಹೇಳಿದ್ದಾರೆ. ಇವತ್ತಿನವರೆಗೆ ಆ ಅಪರಾಧಿಯನ್ನು ಬಂಧನ ಮಾಡಿಲ್ಲ. ಹೀಗಾದರೆ ಅವರು ಹೇಗೆ ಆಸ್ತಿ ಮತ್ತು ಜೀವದ ರಕ್ಷಣೆ ಮಾಡುತ್ತಾರೆ ?

ಶ್ರೀ ಎಂ. ಮುನಿಸ್ವಾಮಿ (ಶಾಂತಿನಗರ).—ಅಪರಾಧಿಯನ್ನು ಹಿಡಿದರಲ್ಲ. ಅವರನ್ನು ೧೪ ದಿವಸ ಜೈಲಿನಲ್ಲಿ ಇಟ್ಟಿದ್ದರು. ಎದುರು ನಿಂತಿದ್ದ ಮುನಿರಾಮಯ್ಯ ಎಂಬುವರನ್ನು ಬಂಧಿಸಿದ್ದರು.

ಛೇರ್ಮನ್.—ಅವರು ಮಾತನಾಡಲಿ,

ಶ್ರೀ ಡಿ. ಬಿ. ಚಂದ್ರೇಗೌಡ. ೨೯-೪-೯೦ ರಂದು ಚುನಾವಣೆ ದಿವಸ ಬೆಳಿಗ್ಗೆ ಎಂಟೂವರೆ ಘಂಟೆಗೆ ಕೃಷ್ಣಪ್ಪನವರ ಮನೆ ಕಾಂಪೌಂಡ್‌ನಲ್ಲಿ ಅವರ ಅಕ್ಕನ ಮಗನ ಕೊಲೆ ಆಯಿತು. ಇವತ್ತಿನವರೆಗೆ ಅಪರಾಧಿಯ ಬಂಧನ ಆಗಿಲ್ಲ. ಈಗಲಾದರೂ ತಿಳಿಯಿತೋ ? ಇದು ಏತಕ್ಕೆ ಹೀಗೆ ಆಗುತ್ತದೆ ? ಹಾಗೆಯೇ ಅನೇಕ ಪ್ರಸಂಗಗಳು ಇವೆ. ಒಂದೆರಡನ್ನು ಮಾತ್ರ ನಾನು ಇಲ್ಲಿ ಹೇಳಿದೆ. ಅಷ್ಟೇ ಅಲ್ಲ ಶ್ರೀ ಬಿ. ಅಜಮತುಲ್ಲಾ, ಪೋಲೀಸ್ ಇನ್ಸ್‌ಪೆಕ್ಟರ್ ಸಿ. ಐ. ಡಿ. ವಿಶೇಷ ಡಿ ಐ ಜಿ ಆಫೀಸ್, ಅವರ ತಿಂಗಳ ಮಾಮೂಲು ವಸೂಲಾತಿ ಬಗ್ಗೆ ಎಲ್ಲಪತ್ರಗಳಿಗೆ ಸಹಿ ಹಾಕಿ ಬರೆಯುತ್ತಾರೆ. ನಾನು ಇವೆಲ್ಲವನ್ನು ತಮಗೆ ಕಳುಹಿಸಿಕೊಡುತ್ತೇನೆ. ಇವನ್ನು ಕಳುಹಿಸಿಕೊಡುವ ಮುನ್ನ ನಾನು ಒಂದು ಸಾರಿ ಸ್ಕ್ರೂಟಿನಿಮಾಡಿ ತಮಗೆ ಕಳುಹಿಸಿಕೊಡುತ್ತೇನೆ. ಹಾಗೆಯೇ ಬೇಕಾದಷ್ಟು ಕೊಲೆಗಳು, ದರೋಡೆಗಳು, ಅಲ್ಲಲ್ಲಿ ನಡೆಯುತ್ತಿರತಕ್ಕಂಥಾ ಹೆಣ್ಣುಮಕ್ಕಳ ಮೇಲಿನ ಅಪಚಾರ, ಹಾಗೆಯೇ ಡೌರಿ ಡೆತ್ ಕೇಸಸ್ ಇವು ಒಂದು ಎರಡು, ಅಲ್ಲ ನಾನು ತಮಗೆ ಉದಾಹರಣೆಗೆ ಒಂದು ಮಾತನ್ನು ಹೇಳುತ್ತೇನೆ. ಅಂಕೋಲದಿಂದ ಒಬ್ಬ ಹೆಣ್ಣುಮಗಳು ನನಗೆ ಕಾಗದ ಬರೆದಿದ್ದಾಳೆ. Miss Shameem Syed writes 'Attrocities on women have been utterly neglected by the Police & the Government'. ಪಾಪ ಆ ಹೆಣ್ಣುಮಗಳನ್ನು ಅವರ ಮನೆಯವರು ನೀನು ದುಡ್ಡು

ತೆಗೆದುಕೊಂಡು ಬಾ ಎಂದು ಪ್ರತಿನಿತ್ಯ ಹೊಡೆಯುತ್ತಾರಂತೆ. She has written in a beautiful English and grammatically correct english ಒಬ್ಬ ವಿದ್ಯಾವಂತ ತರುಣಿಯ ಸ್ಥಿತಿ ಹೀಗಾದರೆ ಈ ಇಲಾಖೆ ಬಗ್ಗೆ ಗೌರವ ಹೇಗೆ ಬರುತ್ತದೆ ? ಇಂತಹ ಪ್ರಸಂಗಗಳು ನಡೆಯುತ್ತವೆ. ಆಕೆ ಈ ರೀತಿ ಪತ್ರ ಬರೆದಿದ್ದಾಳೆ, ನಾನು ಈ ಪತ್ರವನ್ನು ಕದ್ದು ಬರೆಯುತ್ತಿದ್ದೇನೆ. ಯಾರದೋ ಮನೆಯಲ್ಲಿ ಆಶ್ರಯ ಪಡೆದಿದ್ದೇನೆ, ಸುಮಾರು ಒಂದೂವರೆ ವರ್ಷದಿಂದ ನನಗೆ ಹಿಂಸೆ ಕೊಡುತ್ತಿದ್ದಾರೆ, ಎಂದು ನನ್ನಿಂದ ಏನಾದರೂ ಪರಿಹಾರ ಸಿಗುತ್ತದೆ ಎನ್ನುವ ವಿಶ್ವಾಸದಿಂದ ಆಕೆ ನನಗೆ ಪತ್ರ ಬರೆದಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ನೀವು ಆ ಪತ್ರ ಇಲ್ಲಿ ಓದಿದ ಮೇಲೆ ಅದು ಪತ್ರಿಕೆಗಳಲ್ಲಿ ಬಂದು ಆಕೆಗೆ ಇನ್ನೂ ಹಿಂಸೆ ಜಾಸ್ತಿ ಆಗುವುದಿಲ್ಲವೇ ?

ಶ್ರೀ ಡಿ. ಬಿ. ಚಂದ್ರೇಗೌಡ.—ಹೌದು ಅದಕ್ಕೆ ನಾನು ಆ ಪತ್ರವನ್ನು ಓದುವುದಕ್ಕೆ ಹೋಗಲಿಲ್ಲ. ಇಂತಹ ಅನೇಕ ವಿಚಾರಗಳನ್ನು ನಾನು ಇಲ್ಲಿ ಹೇಳಬಹುದು ಆದರೆ ಹೇಳುವುದಕ್ಕೆ ಸಮಯ ಇಲ್ಲ ಅದರ ಅಗತ್ಯತೆ ಕೂಡ ಇಲ್ಲ. ಇಲ್ಲಿ ನಾವು ಸೂ ಅಂದರೆ ಸಾಕು ಮಾನ್ಯ ಮುಖ್ಯಮಂತ್ರಿಗಳು ರಾಗ ತಿಳಿದು ಕೊಳ್ಳುತ್ತಾರೆ. ಆದಕಾರಣ ನಾನು ಈ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ, ಆದರೆ ಒಂದು ವಿಷಯವನ್ನು ಹೇಳುತ್ತೇನೆ. ಬೆಳ್ತಂಗಡಿ ಕ್ಷೇತ್ರದಲ್ಲಿ ಒಂದು ವಿಚಿತ್ರವಾದ ಕೊಲೆ ನಡೆದಿದೆ. ಅವರು ಇದನ್ನು ಇಲ್ಲಿ ಹೇಳಬೇಡಿ ಎಂದು ಹೇಳುತ್ತಾರೆ, ಅದೇ ನನಗೆ ಇರುವ ಕಷ್ಟ. ಅಲ್ಲಿ ಅಣ್ಣ ತಮ್ಮ ಇಬ್ಬರು ಒಂದು ಗೂಡು ಅಂಗಡಿ ಇಟ್ಟುಕೊಂಡಿದ್ದರು. ಕೊಲೆ ಆಗಿ ವರ್ಷಾನುಗಟ್ಟಲೆಯಾದರೂ ಇವತ್ತಿನವರೆಗೂ ಅಂಗಡಿ ಬಾಗಿಲು ತೆಗೆದಿಲ್ಲ ಬೀಗವನ್ನೂ ತೆಗೆದಿಲ್ಲ. ಯಾರು ಕೊಲೆ ಮಾಡಿದರು ಎಂದು ಗೊತ್ತಿಲ್ಲ. ಯಾರ ಕೊಲೆ ಆಗಿದೆಯೋ ಆ ಹೆಣ ಸಿಕ್ಕಿದೆ, ಅದರ ಮುಖ ಚಚ್ಚಿ ಹಾಕಿದ್ದಾರೆ. ಬೇರೆಯವರು ಜೊತೆಗಿದ್ದವರು ಇದು ಈತನ ಶವ ಎಂದು ಹೇಳುತ್ತಾರೆ. ಆದರೆ ಪೋಲೀಸಿನವರು ಇದು ಈತನ ಶವ ಅಲ್ಲ ಎಂದು ಮಹಜರ್ ಮಾಡಿ ಮುಚ್ಚಿಹಾಕಿದ್ದಾರೆ. ಶವ ಈತನದಲ್ಲ, ಹಾಗಾದರೆ ಆ ಶವ ಯಾರದು ? ಶವ ಸತ್ತವನದಲ್ಲ ಅಂದಮೇಲೆ ಸತ್ತವರು ಯಾರು ? ಸುಮಾರು ಎರಡು ವರ್ಷಗಳಾಗಿದೆ. ಇಂತಹ ಘಟನೆಗಳನ್ನು ನಾನು ಇಲ್ಲಿ ಬೇಕಾದಷ್ಟು ಹೇಳಬಹುದು......

ಶ್ರೀ ಎಸ್. ಬಂಗಾರಪ್ಪ.—ಎಷ್ಟು ವರ್ಷಗಳ ಹಿಂದೆ ?

ಶ್ರೀ ಡಿ. ಬಿ. ಚಂದ್ರೇಗೌಡ.—ಎರಡು ವರ್ಷಗಳ ಹಿಂದೆ.

ಶ್ರೀ ಎಸ್. ಬಂಗಾರಪ್ಪ.—ಆಗ ನಿಮ್ಮ ಸರ್ಕಾರ ಇತ್ತು. ನಾವಲ್ಲ ಇದ್ದವರು.

ಶ್ರೀ ಡಿ.ಬಿ. ಚಂದ್ರೇಗೌಡ.—ನಮ್ಮದೋ ನಮ್ಮ ಅಪ್ಪನ ಕಾಲದ್ದೋ, ಆದರೆ ಇಲಾಖೆ ಇದೆಯಲ್ಲ...

ಶ್ರೀ ವಾಟಾಳ್ ನಾಗರಾಜ್.—ಪೋಲೀಸ್ ಇಲಾಖೆ ಎಲ್ಲಾ ಕಾಲದಲ್ಲೂ ಒಂದೇ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಇಲ್ಲಿ ಇಲಾಖೆ ಬಗ್ಗೆ ಮಾತನಾಡುತ್ತಿದ್ದೇನೆ. ಇಂತಹ ಎಷ್ಟೋ ಪ್ರಸಂಗಗಳು ಬರುತ್ತವೆ. ಆಮೇಲೆ ಶ್ರೀ ರೇವಣ್ಣ, ತನಿಗೆರೆ ಗ್ರಾಮ ಚನ್ನಗಿರಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. ಇಲ್ಲಿ ಒಬ್ಬರು ಬರೆಯುತ್ತಾರೆ. ದಿನಾಂಕ ೩೦–೫–೯೦ ರಂದು ಸುಮಾರು ೬ ಗಂಟೆ ಸಮಯದಲ್ಲಿ ನಾನು ತನಿಗೆರೆ ಗ್ರಾಮದಲ್ಲಿ ತೋಟದ ಮನೆಯಿಂದ ಮನೆಗೆ ಬರುವಾಗ ನನ್ನ ಧರ್ಮಪತ್ನಿಯಾದ ಶ್ರೀಮತಿ ಗಂಗಮ್ಮ ಎಂಬುವರನ್ನು ಕೊಲೆಗೈದು ನನ್ನ ಪತ್ನಿ ಮೈ ಮೇಲೆ ಇದ್ದಂತಹ ಬಂಗಾರದ ಒಡವೆಗಳನ್ನು ಅಪಹರಿಸಿಕೊಂಡು ಹೋಗಿರುತ್ತಾರೆ ಎಂದು ದಿನಾಂಕ ೮–೬–೯೦ ರಂದು ನನಗೆ ಪತ್ರ ಬರೆದಿದ್ದಾರೆ. ಇವತ್ತಿನವರೆಗೂ ಸ್ವಲ್ಪವಾದರೂ ಅದನ್ನು ಪತ್ತೆ ಮಾಡದಿದ್ದರೆ ಹೇಗೆ ? ಈ ಇಲಾಖೆಮೇಲೆ ಜನರಿಗೆ ಗೌರವಬರುತ್ತದೆ ? ಇಲ್ಲಿ ಇರತಕ್ಕಂಥಾದ್ದಲ್ಲವನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸ್ವಾಮಿ, ಇಲ್ಲಿ ಒಂದು ರೇಪ್ ಕೇಸ್ ಬಗ್ಗೆ ನಾನು ಹೇಳುತ್ತೇನೆ. ದಿನಾಂಕ ೧೧–೬–೯೦ ರಂದು ರೇಪ್ ಮತ್ತು ಮರ್ಡರ್ ಕೇಸ್‌ನಲ್ಲಿ ಪೋಲೀಸಿನವರು ಅಮಾನುಷವಾಗಿ ಹಿಂಸೆ ಮಾಡಿದ್ದಾರೆ. ಇಂಥಾದ್ದನ್ನು ಹೇಳುವುದಕ್ಕೆ ಹೋಗಬೇಡಿ ಎಂದು ನಮ್ಮ ಮಾನ್ಯ ಹಿರಿಯ ಸಚಿವರಾದ ಶ್ರೀಮಾನ್ ರಂಗನಾಥ್‌ರವರು ಸಲಹೆ ಕೊಟ್ಟರು, ಒಳ್ಳೆಯದಾಯಿತು. ಆದುದರಿಂದ ಇದನ್ನು ಹೇಳುವುದಿಲ್ಲ, ಹಾಗೆಯೇ ಬರೆದು ಕಳುಹಿಸಿಕೊಡುತ್ತೇನೆ. ನಾನು ಇವತ್ತು ಇಲ್ಲಿ ಹೇಳಿದರೆ ಪತ್ರಿಕೆಗಳಲ್ಲಿ ವರದಿ ಆಗುತ್ತದೆ. ಈಗಾಗಲೇ ರೇಪ್ ಆದ ಹೆಣ್ಣುಮಗಳ ಪರಿಸ್ಥಿತಿ ಮುಂದೆ ಏನು ಆಗಬಹುದು ? ಇಂತಹ ಅನೇಕ ಘಟನೆಗಳು ನಡೆದಿವೆ.

ಶ್ರೀ ವಾಟಾಳ್ ನಾಗರಾಜ್.—ಪ್ರತಿ ನಿತ್ಯ ಇಂಥಾದ್ದು ಸಾರೋದ್ಧಾರವಾಗಿ ಆಗುತ್ತಿರುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಒಂದೊಂದು ಸ್ಯಾಂಪಲ್ ಕೇಸಸ್ ಅನ್ನು ಹೇಳುತ್ತಿದ್ದೇನೆ. ತುಮಕೂರಿನಲ್ಲಿ ಹಾಡು ಹಗಲಿನಲ್ಲೇ ರಿವ್ಹಾಲ್ವರ್ ಬಂದೂಕು ಸಮೇತ, ನನ್ನ ಹೆಂಡತಿ ಮತ್ತು ನನ್ನ ಚಿಕ್ಕಮಗಳು ನಾಗಮಣಿ ಎಂಬ ಅಬಲೆಯರು ಇದ್ದಾಗ ಪೋಲೀಸಿನವರು ಏಕಾಏಕಿಯಾಗಿ ಮನೆಗೆನುಗ್ಗಿದ್ದಾರೆ, ಇದನ್ನು ಯಾರಾದರೂ ಸಾರ್ವಜನಿಕರು ನೋಡಿದ್ದರೆ ಮನೆಯಲ್ಲಿ ಏನೊ ಅನಾಹುತ ನಡೆದಿದೆ ಎಂದು ಊಹಿಸುವಂತೆ ಆಗಿದೆ ಎಂದು ಬರೆದಿದ್ದಾರೆ, ಇಂತಹ ಪ್ರಕರಣಗಳು ನಡೆದಿವೆ. ಇಂತಹ ನೂರಾರು ಪ್ರಕರಣಗಳು ಇಲಾಖೆಗೆ ಗೌರವತರತಕ್ಕ ಪ್ರಕರಣಗಳಲ್ಲ. ಆದರೆ ಅನೇಕ ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಪಿರಿಯಾಪಟ್ಟಣದಲ್ಲಿ ೧೬-೬-೮೦ ರಂದು ಹಿಂದಿನ ಶಾಸಕರಾದ ವೆಂಕಟೇಶ್‌ರವರು ಕಾಗದ ಬರೆದಿದ್ದಾರೆ. ಕಿತ್ತೂರು ದಾಖಲೆ ದೊಡ್ಡಗೌಡನ ಕೊಪ್ಪಲಿನಲ್ಲಿ ಶ್ರೀ ಕೆ. ಎಸ್. ಸಣ್ಣಮರಿ ಗೌಡ ಅವರ ಮಗ ಹಾಗೂ ಇತರರು ಸೇರಿ ವೆಂಕಟೇಶ್‌ರವರ ಮೇಲೆ ಮತ್ತು ತಮ್ಮ ಅಶೋಕ್‌ರವರ ಮೇಲೆ ಹಲ್ಲೆಮಾಡಲು ವಿಫಲ ಯತ್ನ ನಡೆಸಿದಾಗಿಯೂ ಹಾಗೂ ಅವರನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುವುದಾಗಿಯೂ ತಿಳಿಸಿರುತ್ತಾರೆ ಅಂತ ಕಾಗದ ಬರೆದಿದ್ದಾರೆ, ಅದನ್ನು ಕೊಟ್ಟಿದ್ದೇನೆ.

ಶ್ರೀ ಕೆ. ಎಸ್. ಕಾಳಮರಿಗೌಡ.—ಪೂರ್ತಿ ಹೇಳಿ, ಅದು ಅಷ್ಟೇನಾ ಮುಂದಕ್ಕೆ ಏನಾದರೂ ಇದೆಯೋ ?

ಶ್ರೀ ಡಿ. ಬಿ. ಚಂದ್ರೇಗೌಡ.—ಅದನ್ನು ಕಳಿಸಿಕೊಟ್ಟಿದ್ದೇನೆ. ಡಿಟೈಲ್ಸ್ ಇದೆ. ಎಫ್.ಐ.ಆರ್. ಇದೆ, ಇದುವರೆಗೂ ಅವನು ಸಿಕ್ಕಿಲ್ಲ. ಏನಾದ ಎಂದು ಗೊತ್ತಿಲ್ಲವೆಂದು ಬರೆದಿದ್ದಾರೆ.

ಶ್ರೀ ಕೆ. ಎಸ್. ಕಾಳಮರಿಗೌಡ.—ಅದಕ್ಕೆ ಹಿಂದೆ ಏನು ನಡೆದಿದೆ ಎಂದು ಹೇಳಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.—ಅದಕ್ಕಾಗಿಯೇ ಚರ್ಚೆ ಮಾಡುವುದಾದರೆ ನಾನು ಸಿದ್ಧನಿದ್ದೇನೆ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ವಾಟಾಳ್‌ನಾಗರಾಜ್‌ರವರೆ, ಇಷ್ಟು ಜನ ಇರುವಾಗ ಇವೆಲ್ಲ ನಡಯುತ್ತದೆ, ಇದನ್ನೇ ಏಕೆ ಕ್ವೋಟ್ ಮಾಡುತ್ತೀರಿ ಎಂದು ಹೇಳುತ್ತಾರೆ ಹೊಸದಾಗಿ ಏನಾದರೂ ಆಯಿತೆ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಹಾಗಾದರೆ ಹಿಂದೆಯೂ ನಡೆದಿದೆ, ಈಗಲೂ ನಡೆಸಿಕೊಂಡು ಹೋಗೋಣ ಎಂದಾಯಿತು ಇದು ಸರಿಯಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಇದು ಪೋಲೀಸ್ ಇಲಾಖೆಯಲ್ಲಿ ದಿನನಿತ್ಯ ನಡೆಯುವಂತಹ ವ್ಯವಹಾರವಾಗಿದೆ. ಈ ಬಗ್ಗೆ ಸಮಗ್ರವಾಗಿ ಆಡಳಿತ ಬರಬೇಕು, ಪೋಲೀಸ್ ಇಲಾಖೆ ಬದಲಾವಣೆ ಆಗಬೇಕು, ಬೇರೆಮಾತಿಲ್ಲ. ಇದು ನಾಗಮಂಗಲ, ಪಿರಿಯಾಪಟ್ಟಣ, ಕುಣಿಗಲ್, ಎಲ್ಲಾ ಕಡೆಯೂ ನಡೆದಿದೆ,

ಶ್ರೀ ಡಿ. ಬಿ. ಚಂದ್ರೇಗೌಡ. ಏನು ನಡೆಯುತ್ತಿದೆ.

(ಗೊಂದಲ)

ಶ್ರೀ ಕೆ. ಎಸ್. ಕಾಳಮರಿಗೌಡ.—ಮಾನ್ಯ ವಿರೋಧ ಪಕ್ಷದ ನಾಯಕರು ೨-೩ ಘಟನೆಗಳನ್ನು ಕೋಟ್‌ಮಾಡಿ ಹೇಳಿದರು. ಇದನ್ನು ನಾವೆಲ್ಲ ಖಂಡಿಸುತ್ತೇವೆ ನಿಜ, ಇಂತಹ ರಾಕ್ಷಸ ಪ್ರವೃತ್ತಿಯವರು ಆ ಒಂದು ಅಧಿಕಾರದಲ್ಲಿರಬೇಕಾದರೆ ನಾವು ಸರ್ವೆ ಸಾಮಾನ್ಯವಾಗಿ ಅವರನ್ನು ಟ್ರಾನ್ಸ್‌ಫರ್ ಮಾಡಿ ಎಂದು ಕೇಳುತ್ತೇವೆ. ಆಗ ಮತ್ತೆ ನೀವು ಇದು ಏನು ಈ ರೀತಿ ಟ್ರಾನ್ಸ್‌ಫರ್ ನಡೆಯುತ್ತಿದೆ ಎಂದು ಹೇಳುತ್ತೀರ. ಇಂತಹವರನ್ನು ಟ್ರಾನ್ಸ್‌ಫರ್ ಮಾಡಬೇಕು ಎನ್ನುವ ದೃಷ್ಟಿಯಿಂದ ನಾವು ಕೇಳಿದ್ದೇವೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನನಗೆ ಕೇಳುವ ತಾಳ್ಮೆ ಇದೆ. ಆದರೆ ನಾನು ಹೇಳುವ ಹಕ್ಕನ್ನು ಯಾರೂ ಕಸಿದು ಕೊಳ್ಳುವುದಕ್ಕಾಗುವುದಿಲ್ಲ. ನಾನು ಹೇಳತಕ್ಕದ್ದು ಏನೆಂದರೆ, ಹಿಂದೆಲ್ಲಾ ಸತ್ಯ ಹರಿಶ್ಚಂದ್ರರು ಆಳಿದರು...

ಶ್ರೀ ಗುರುದೇವ್.—ಹೇಳುವ ಹಕ್ಕನ್ನು ಯಾರೂ ಕಸಿದು ಕೊಳ್ಳುವದಕ್ಕಾಗುವುದಿಲ್ಲ. ನಿಜ, ನಾನೇನು ಅವರನ್ನು ತಡೆ ಮಾಡಲು ಬರುವುದಿಲ್ಲ. ನೀವು ಹೇಳುವುದಕ್ಕಿಂತ ಮುಂಚೆ ಇದು ನಿಜವಾಗಿ ನಡೆದಿದೆಯಾ ? ಅಥವಾ ಇಲ್ಲವಾ ? ಎಂದು ಪರೀಕ್ಷೆ ಮಾಡಿ ತಾವು ಇಲ್ಲಿ ಹೇಳಬೇಕಾಗುತ್ತದೆ.

ಶ್ರೀ ಎಂ. ಪಿ. ವೆಂಕಟೇಶ್.—ಈಗ ಕಾಳಮರಿಗೌಡರಿಗೆ ಸಹಾಯ ಮಾಡಲು ಅವರು ಬರುತ್ತಿದ್ದಾರೆ. ನಮ್ಮ ಕಾಲದಲ್ಲಿ ಆಯಿತು, ನಿಮ್ಮ ಕಾಲದಲ್ಲಿ ಆಗಬಾರದು, ನೀವು ಸರಿಯಾಗಿ ಇಟ್ಟುಕೊಳ್ಳಿ ಎಂದು ಹೇಳುತ್ತಿದ್ದಾರೆ. ನಿಮ್ಮ ಮಾತು ಯಾರೂ ಕೇಳುವುದಿಲ್ಲ, ಪೋಲೀಸಿನವರೂ ಕೇಳುವುದಿಲ್ಲಾ, ಏನು ನಡೆಯುವುದಿಲ್ಲ, ಕೇಳದೆ ಇದ್ದರೆ ಏನು ಮಾಡುವುದು ನಿಮಗೆ ಅನುಭವವಾಗಿದೆ.

(ಗೊಂದಲ)

ಛೇರ್ಮನ್. –ದಯವಿಟ್ಟು ತೊಂದರೆ ಮಾಡಬೇಡಿ.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಚಂದ್ರೇಗೌಡರಿಗೆ ಈ ಸರ್ಕಾರ ಬಂದನಂತರ ಹರಿಜನರ ಮೇಲೆ ಎಲ್ಲಿಯಾದರೂ ದೌರ್ಜನ್ಯವಾಗಿದೆ ಎಂದು ಕಾಗದ ಬಂದಿದೆಯಾ ? ಹಿಂದೆ ತಮ್ಮ ಪಕ್ಷ ಆಡಳಿತದಲ್ಲಿದ್ದಾಗ ಇದು ಮಾಮೂಲಿ ಆಗಿತ್ತು.

ಶ್ರೀ ಡಿ. ಬಿ. ಚಂದ್ರೇಗೌಡ.— ನಾನು ಪೂರ್ತಿ ಮಾಡುವುದಕ್ಕಿಂತ ಮುಂಚೆನೇ ಹರಿಜನರ ಮೇಲೆ ಹಲ್ಲೆ ಏನು ಆಗಿದೆ ಎಂದು ಕೇಳುತ್ತಿದ್ದಾರೆ. ನನ್ನ ಹತ್ತಿರ ಎಲ್ಲ ಪಟ್ಟಿ ಇದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.— ಹರಿಜನರ ಮೇಲೆ ನಿಮ್ಮೊಬ್ಬರಿಗೆ ಮೊಸಳೆ ಕಣ್ಣೀರು ಎಂದು ತಿಳಿದುಕೊಂಡಿದ್ದಾರೆ. ಅದು ತಪ್ಪು.

ಶ್ರೀ ಎಂ. ಪಿ. ವೆಂಕಟೇಶ್.—ಪರಿಶಿಷ್ಟ ಜಾತಿಯವರಿಗೆ ಏನಾಗಿದೆ ಎಂದು ಆಮೇಲೆ ಹೇಳುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಹರಿಜನ ಗಿರಿಜನರ ಬಗ್ಗೆ ಕಾಂಗ್ರೆಸ್‌ನವರು ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಇದು ಬೇಡ, ಡೊಂಬರಾಟ ಬೇಡ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—೧೯೮೩ರಿಂದ ೮೮-೮೯ ರವರೆಗೆ ಏನು ನಡೆಯಿತೆಂದು ಹೇಳಿ, ಹೇಳತಕ್ಕಂಥ ಅಧಿಕಾರ ಮತ್ತು ಜವಾಬ್ದಾರಿ ಈವರೆಗೆ ಜಗಳ ಮಾಡಿದರಲ್ಲ ಆ ಸದಸ್ಯರಿಗೇ ಇದೆ. ಹೇಳಬೇಕೆಂತಲೇ ನಾನು ಕೇಳುತ್ತಿದ್ದೇನೆ. ನನಗೆ ಅದರ ಹಿಂದೆ ಏನು ನಡೆಯಿತೆಂದು ಗೊತ್ತಿರಲಿಲ್ಲ. ಬಿಕಾಸ್ ನಾನು ಮಂತ್ರಿಯಾಗಿರಲಿಲ್ಲ. ನಾನು ವಿರೋಧ ಪಕ್ಷದ ನಾಯಕನಾದ ಮೇಲೆ ಏನು ನನ್ನ ಗಮನಕ್ಕೆ ಬಂದಿದೆಯೋ ಅದನ್ನು ಹೇಳುತ್ತಿದ್ದೇನೆ.

ಶ್ರೀ ಆರ್. ಎನ್. ನಾಯಕ್.—ಮಂತ್ರಿಗಳಾದರೆ ಮಾತ್ರ ಗೊತ್ತಾಗುತ್ತದೆಯೇ ಸಾರ್ವಜನಿಕ ಜೀವನದಲ್ಲಿ ದೊಡ್ಡ ನಾಯಕರು ನೀವು. ಮಂತ್ರಿ ಆದರೆ ಮಾತ್ರ ಅರ್ಥವಾಗುತ್ತದೆಯೇ ? ಮಂತ್ರಿಯಾಗದಿದ್ದರೆ ಏನೂ ಗೊತ್ತಿಲ್ಲವೆಂದರೆ ಇದನ್ನು ಯಾರು ಒಪ್ಪಬೇಕು ? ತಾವು ಇಲ್ಲೇ ಇದ್ದೀರಿ ತಾವು ದೊಡ್ಡ ಸ್ಥಾನದಲ್ಲಿದ್ದೀರಿ ನಿಮ್ಮ ಕೃಪೆಯನ್ನು ನಾವು ಅಲ್ಲಿ ಕುಳಿತುಕೊಂಡು ಕಾಯುತ್ತಿದ್ದೆವು, ಆ ಟೈಮ್‌ನಲ್ಲಿ ನೀವೇ ಎಷ್ಟೋ ಸಲ ಇದನ್ನು ಹೇಳುವುದಕ್ಕೆ ನಮಗೆ ಅಲೋ ಮಾಡಿದ್ದೀರಿ. ಇದು ಇಷ್ಟು ಬೇಗ ನಿಮಗೆ ಹೇಗೆ ಮರೆತುಹೋಯಿತು ?

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಏನು ಹೇಳಿದ್ದೇನೆ ನಾಯಕರೇ ?

ಶ್ರೀ ವಾಟಾಳ್ ನಾಗರಾಜ್.—ಮೊದಲೇ ಅವರಿಗೆ ನಾಯಕ ಎಂದು ಮಗು ಹುಟ್ಟಿದ ತಕ್ಷಣ ನಾಮಕರಣ ಮಾಡಿದ್ದಾರೆ. ಇದರಿಂದ ನಮಗೆ ಬಹಳ ಕಷ್ಟವಾಗಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಹೀಗಾದರೆ ನಾನು ಹೇಗೆ ಡಿಮ್ಯಾಂಡ್ ಮೇಲೆ ಮಾತನಾಡುವುದು?

ಶ್ರೀ ಟಿ. ಎಂ. ಮಂಜುನಾಥ್.—ಸನ್ಮಾನ್ಯ ಚಂದ್ರೇಗೌಡರು ಮಂತ್ರಿಗಳಾಗಿದ್ದವರು ಸ್ಪೀಕರ್ ಆಗಿದ್ದವರು, ಯಾವ ಯಾವ ಕಾಲದಲ್ಲಿ ಎಷ್ಟೆಷ್ಟು ಮಟ್ಟಿಗೆ ಹರಿಜನರ ಮೇಲೆ ದೌರ್ಜನ್ಯಗಳು ನಡೆದಿವೆ ಪ್ರಕರಣಗಳು ನಡೆದಿವೆ ಎನ್ನುವುದು ಅವರಿಗೆ ನಮಗಿಂತಾ ಚೆನ್ನಾಗಿ ಅರಿವಾಗಿದೆ. ಆದರೆ ಈ ಪ್ರಕರಣಗಳು ಹಿಂದಿನ ಸರ್ಕಾರಗಳು ಇದ್ದಾಗ ಆಗಿರಬಹುದು ಅಥವಾ ನಿಮ್ಮ ಕಾಲದಲ್ಲೂ ಆಗಿರ ಬಹುದು. ಇನ್ನು ಮುಂದೆ ಈ ತರಹದ ಪ್ರಕರಣಗಳು ನಡೆಯುವುದಕ್ಕೆ ಆಸ್ಪದ ಕೊಡಬಾರದೆನ್ನತ ಕ್ಕದ್ದನ್ನು ನಾನು ಒಪ್ಪುತ್ತೇನೆ. ಇದರ ಬಗ್ಗೆ ನಾವು ಯಾರೂ ಟೀಕೆ ಮಾಡುವುದಿಲ್ಲ. ಟೀಕೆ ಮಾಡ ತಕ್ಕಂಥ ಕಾಲದಲ್ಲಿ ತಾವು ಒಂದು ಒಳ್ಳೆಯ ಮಾತನ್ನು ಆಡಬೇಕು. ಹಿಂದಿನದಕ್ಕೂ ಈಗಿನದಕ್ಕೂ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಪರವಾಗಿಲ್ಲ, ಇನ್ನು ಮುಂದೆ ಇಂಥದ್ದಕ್ಕೆ ಆಸ್ಪದ ಕೊಡಬೇಡಿ ಎಂದು ಒಂದು ಸೌಜನ್ಯದ ಮಾತು ತಾವು ಹೇಳಿಬಿಟ್ಟರೆ ಸಾಕು. ಮತ್ತೆ ನಮ್ಮ ವಾಟಾಳ್ ನಾಗರಾಜ್ ರವರು ಕಾಂಗ್ರೆಸ್‌ನವರಿಗೆ, ಹರಿಜನ ಗಿರಿಜನರ ಬಗ್ಗೆ ಮೊಸಳೆ ಕಣ್ಣೀರೆಂದು ಹೇಳಿದರು. ಬಹುಶಃ ಅವರು ಎಲ್ಲದಕ್ಕೂ ವಿರೋಧ ಮಾಡುತ್ತಾರೆ, ಅವರು ಹಿರಿಯ ಸದಸ್ಯರಾಗಿದ್ದಾರೆ ಯಾವ ಯಾವ ಪಕ್ಷದವರು ಯಾವ ಯಾವ ಜನಗಳನ್ನು ಯಾವ ರೀತಿ ಇಟ್ಟುಕೊಂಡಿದ್ದಾರೆ, ಎಷ್ಟರಮಟ್ಟಿಗೆ ಸಹಾ ನುಭೂತಿ ಇದೆ, ಎನ್ನತಕ್ಕಂಥಾದ್ದು ಇಡೀ ಸಮಾಜಕ್ಕೆ ಜನತೆಗೆ ಗೊತ್ತಿದೆ. ಆದ್ದರಿಂದ ದಯಮಾಡಿ ಇಂತಹ ಆರೋಪಗಳನ್ನು ಮಾಡಬಾರದೆಂದು ತಮ್ಮ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.— ತಮ್ಮದು ಆಯಿತಾ ? ನಾನು ಏನು ಚರ್ಚೆ ಮಾಡುವುದು? ಈ ರೀತಿ ಒಬ್ಬರಾದ ತಕ್ಷಣ ಒಬ್ಬರು ಏಳುತ್ತಿದ್ದರೆ ನಾನು ಏನು ಮಾಡಲಿ ? ಏಕೋ ಏನೋ ನಮ್ಮ ಕಾಳಮರಿಗೌಡರಿಗೆ ಬಹಳಷ್ಟು ಕೋಪ ಬಂದುಬಿಟ್ಟಿತು.

ಶ್ರೀ ಕೆ. ಎಸ್. ಕಾಳಮರಿಗೌಡ.—ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಂತೆ ತಾವು ಹೇಳಿರುವುದ ರಿಂದ ನಾನು ಅದನ್ನು ತಮ್ಮಲ್ಲಿ ಹೇಳಬೇಕಾಗುತ್ತದೆ. ತಾವು ನಿಜವಾದ ಪರಿಸ್ಥಿತಿಯನ್ನು ತಿಳಿದುಕೊಂಡು ಆ ಮಾತು ಹೇಳಿದ್ದಿದ್ದರೆ ನನಗೆ ಬಹಳ ಸಂತೋಷವಾಗುತ್ತಿತ್ತು. ಇದು ನೇರವಾಗಿ ನನಗೆ ಸಂಬಂಧ ಪಟ್ಟಿದ್ದು. ಪಿರಿಯಾಪಟ್ಟಣ ಮತ್ತು ಕಿತ್ತೂರಿನಲ್ಲಿ ವಾಸ್ತವಿಕವಾಗಿ ಏನು ನಡೆದಿದೆ ಎಂದು ತಾವು ವಿಚಾರಣೆ ಮಾಡಿ ಹೇಳಿದ್ದಿದ್ದರೆ ನಾನು ಸಂತೋಷಪಡುತ್ತಿದೆ. ಅಶ್ವತ್ಥ ಎನ್ನುವವನ್ನು ಕಿಡ್ನಾಪ್ ಮಾಡಿದ್ದಾನೆಂದು ಹೇಳಿದ್ದೀರಿ. ಅವರೇ ಕಿಡ್ನಾಪ್ ಮಾಡಿ, ಅವರೇ ಬಚ್ಚಿಟ್ಟು ನಮಗೆ ರಾಜಕೀಯ ವಾಗಿ ತೊಂದರೆ ಕೊಡಬೇಕೆಂದು ಮಾಡಿದ್ದಾರೆ. ಅವರು ತಮಗೆ ಒಂದು ರೆಪ್ರೆಸೆಂಟೇಷನ್ ಕೊಟ್ಟಿದ್ದರೆ ಅದನ್ನು ತಾವು ಇಲ್ಲಿ ಇಡುತ್ತಿದ್ದರಲ್ಲಾ ?

ಶ್ರೀ ಡಿ. ಬಿ. ಚಂದ್ರೇಗೌಡ.— ಯಾವಾಗ ಆಯಿತೆಂದು ನಾನು ಕೇಳಿದ್ದೇನೆ ಇದು ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕು, ನಾರವಿ, ಪುತ್ತೂರು, ಮರೋಡಿ ಗ್ರಾಮಸ್ಥರು ಬರೆದುಕೊಂಡ ಮನವಿ. ಅದು ಈರೀತಿ ಇದೆ. ನಮ್ಮ ಪುತ್ತೂರು ಗ್ರಾಮದ ನಿವಾಸಿ, ಹಣ್ಣುದಾಸ ಎಂಬುವವನು ನಿಗೂಡವಾಗಿ ಕಣ್ಮರೆಯಾಗಿ ಇಂದಿಗೆ ೮ ತಿಂಗಳು ಸಂದವು, ಸಂಬಂಧಪಟ್ಟವರಿಗೆ ಅರ್ಜಿ ಬರೆದುಕೊಂಡರೆ ನಿಷ್ಪ್ರಯೋಜನವಾಗಿದೆ, ಈ ವಿಷಯದಿಂದ ಅಲ್ಲಿನ ಜನರು ಭಯಗ್ರಸ್ತರಾಗಿದ್ದಾರೆ, ತಾವು ಈ ವಿಚಾರ ವನ್ನು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿ ಸರ್ಕಾರದ ಗಮನವನ್ನು ಸೆಳೆದು ಸಿ. ಒ. ಡಿ. ತನಿಖೆಗೆ ಒಪ್ಪಿಸಿ ಎಂದು ಬರೆದಿದ್ದಾರೆ. ನಾನು ಏನು ಮಾಡಬೇಕು ? ಇಷ್ಟು ಹೇಳಿ ?

ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ.—ಇಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡುವವರು ಅಷ್ಟು ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲವೇ ?

ಶ್ರೀ ಡಿ. ಬಿ. ಚಂದ್ರೇಗೌಡ.—ಈ ತರಹ ಆದರೆ ನಾವು ಹೇಗೆ ಡಿಬೇಟ್ ಮಾಡುವುದು ?

ಶ್ರೀ ವಾಟಾಳ್ ನಾಗರಾಜ್.—ವಿರೋಧ ಪಕ್ಷದ ನಾಯಕರಿಗೆ ಪತ್ರ ಬಂದರೆ ಅದನ್ನು ಇಲ್ಲಿ ಪ್ರಸ್ತಾಪ ಮಾಡಬಾರದು ಎಂದು ಏನಾದರೂ ರೂಲ್ಸ್ ಇದೆಯೇ ? ಹೀಗೆ ಮಧ್ಯೆ ಮಧ್ಯೆ ತೊಂದರೆ ಯಾದರೆ ಅವರು ಹೇಗೆ ಮಾತನಾಡುವುದು ?

ಉಪಾಧ್ಯಕ್ಷಿಣಿಯವರು.—ದಯವಿಟ್ಟು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಇತರ ಮಾನ್ಯ ಸದಸ್ಯರು ಮಧ್ಯೆ ಮಾತನಾಡಬಾರದು.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಈ ಬಗ್ಗೆ ಇನ್ನೂ ಅನೇಕ ವಿಚಾರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ಪ್ರಕರಣದಲ್ಲಿ ಸಿ.ಓ.ಡಿ. ತನಿಖೆ ಮಾಡಿಸಿ ಎಂದು ಆ ಊರಿನ ಜನರು ಪತ್ರ ಬರೆದಿದ್ದಾರೆ. ಈ ಪ್ರಕರಣ ನಡೆದು ೮ ತಿಂಗಳುಗಳು ಕಳೆದವು. ಆತನ ಅಂಗಡಿಗೆ ಬೀಗ ಹಾಕಿದ್ದಾರೆ, ನಾಪತ್ತೆಯಾದ ವ್ಯಕ್ತಿಯ ಬಗ್ಗೆ ತನಿಖೆ ನಡೆಸುವಂತೆ ಸದನದಲ್ಲಿ ವಿಚಾರವನ್ನು ಎತ್ತಿ ಎಂದು ಅವರು ಕೇಳಿಕೊಂಡಿದ್ದಾರೆ. ಆದುದರಿಂದ ಕನಿಷ್ಟಪಕ್ಷ ಆ ಗ್ರಾಮದ ಜನರಿಗೆ, ತಮ್ಮ ಪರವಾಗಿ ಸದನದಲ್ಲಿ ಮಾನ್ಯ ಸಚಿವರು ಹೀಗೆ ಹೇಳಿದರು ಎಂದು ತೃಪ್ತಿಪಟ್ಟುಕೊಳ್ಳುವಷ್ಟಾದರೂ ನಾವುಗಳು ಪ್ರಾಸ್ತಾಪ ಮಾಡುವುದು ಬೇಡವೆ ? ಆ ಕಾರಣಕ್ಕಾಗಿ ಸ್ಯಾಂಪಲ್ ಆಗಿ ಇಷ್ಟನ್ನು ಮಾತ್ರ ಹೇಳಿದ್ದೇನೆ. ಅದನ್ನು ಬಿಟ್ಟು ಹಿಂದೆಯೂ ಏನೆಲ್ಲಾ ನಡೆಯಿತು, ಯಾರದು ತಪ್ಪು ಯಾರದು ಸರಿ ಎಂಬ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನನಗಂತೂ ಯಾರು ತಪ್ಪು ಮಾಡಿದ್ದಾರೆ, ಯಾರು ಸರಿ ಮಾಡಿದ್ದಾರೆ ಎಂದು ಗೊತ್ತಿಲ್ಲ. ನನ್ನ ಮೇಲೆ ಏನಾದರೂ ಆಪಾದನೆಗಳು ಇದ್ದರೆ ದಯವಿಟ್ಟು ಹೇಳಿ, ಅದಕ್ಕೆ ಉತ್ತರಿಸುತ್ತೇನೆ. ಅದನ್ನು ಬಿಟ್ಟು ಹಿಂದಿನ ಸರಕಾರದ ವಿಚಾರ ಹೇಳುತ್ತಾ ಹೋಗಿ ಅದರ ಬಗ್ಗೆ ತೀರ್ಮಾನವನ್ನು ಮಾಡುವುದಿದ್ದರೆ ಅದನ್ನೇ ಮಾಡುತ್ತಾ ಹೋಗಿ.

ಇನ್ನು ೧೯೭೭ರಲ್ಲಿ ರಾಜ್ಯದಲ್ಲಿ ಒಂದು ಪೋಲೀಸ್ ಸಂಘ ಸ್ಥಾಪನೆ ಆಯಿತು. ೧೦ ವರ್ಷಗಳ ಕಾಲ ಏನೂ ಇಲ್ಲದೆ ನಿಂತಿತ್ತು. ಈಗ ಮತ್ತೆ ಪುನಃ ಸಭೆ ಸೇರಿ ಚರ್ಚೆ ಮಾಡಿ ತನ್ನ ಕಾರ್ಯಗಳನ್ನು ಪ್ರಾರಂಭ ಮಾಡಿದೆ. ಆ ಸಂಘದ ಸರಿ ತಪ್ಪುಗಳಿಗೂ ನಾನು ಹೋಗುವುದಿಲ್ಲ. ಆದರೆ ಅವರ ಕೆಲವು ಬೇಡಿಕೆಗಳನ್ನು ತಮ್ಮ ಮುಂದಿಡುತ್ತೇನೆ. ಅವರಿಗೆ ವರ್ಷದಲ್ಲಿ ೧೫ ದಿವಸಗಳ ಸಂಬಳವನ್ನು ಬೋನಸ್ ಎಂದು ಕೊಡುತ್ತೀರಿ, ಅದನ್ನು ಒಂದು ತಿಂಗಳ ಸಂಬಳವನ್ನಾಗಿ ಪರಿವರ್ತನೆ ಮಾಡಿ ಎಂದು ಅವರು ಪ್ರಾರ್ಥನೆ ಮಾಡಿಕೊಂಡಿದ್ದಾರೆ. ಅಂತೆಯೇ ಹೆಚ್‌ಪಿಸ್‌ಗಳಿಗೆ ವಾರದಲ್ಲಿ ರಜೆ ಕೊಡುತ್ತಿಲ್ಲ ಅದಕ್ಕೆ ೭ ರೂಪಾಯಿ ಕೊಡುತ್ತಿರುವುದು ಬಹಳ ಕಡಿಮೆ, ಅದರ ಬದಲಾಗಿ ಸಂಬಳದಲ್ಲಿ ಒಂದು ದಿವಸದ ಹಣವನ್ನು ಮಂಜೂರು ಮಾಡಿ ಎಂದು ಕೇಳಿಕೊಂಡಿದ್ದಾರೆ. ಇವೆಲ್ಲವೂ ೨೫ರಿಂದ ೫೦ ರೂಪಾಯಿಗಳಿಗೆ ಸೀಮಿತವಾದುದು. ಇಂಥ ಸಣ್ಣಪುಟ್ಟ ವಿಚಾರಗಳ ಬಗ್ಗೆ ಲಕ್ಷ್ಯಹರಿಸಿ. ಅವುಗಳು ವಿಕಾರರೂಪಕ್ಕೆ ಹೋಗುವ ಮೊದಲು ಆ ಒಂದು ಸಿಬ್ಬಂಧಿವರ್ಗಕ್ಕೆ ನೆಮ್ಮದಿ ಬರುವ ಹಾಗೆ ಅವರ ಸಣ್ಣಪುಟ್ಟ ಬೇಡಿಕೆಗಳು ಏನಿವೆ ಅವುಗಳನ್ನು ಈಡೇರಿಸುವ ಬಗ್ಗೆ ಗಮನಕೊಡಬೇಕು. ಆದಕ್ಕಾಗಿ ಈ ಮೂಲಕ ಅವರ ಬೇಡಿಕೆಗಳನ್ನು ತಮ್ಮ ಗಮನಕ್ಕೆ ಕಳುಹಿಸಿಕೊಡುತ್ತೇನೆ. ಸುಮಾರು ೭೮–೭೯ ಹರಿಜನರ ಮೇಲೆ ನಡೆದಿರತಕ್ಕಂಥ ಅಟ್ರಾಸಿಟಿಗಳು ಮತ್ತು ಸುಮಾರು ೧೫ ಕೋಮು ಗಲಭೆಗಳ ಪ್ರಕರಣಗಳು ಈ ರಾಜ್ಯದಲ್ಲಿ ಆಗಿವೆ. ಇದರ ಕುರಿತು ಮೂಲವಾದಂಥ ಸಮಸ್ಯೆಗಳು ಏನಿವೆ ಎಂದು ತಿಳಿಯುವುದಕ್ಕೆ ಪ್ರಯತ್ನ ಮಾಡುವುದು ಅವಶ್ಯಕವಾಗಿದೆ. ಮೈಸೂರು, ಶ್ರೀರಂಗಪಟ್ಟಣ, ಕೋಲಾರ ಮುಂತಾದ ಕಡೆಗಳಲ್ಲಿ ಸಣ್ಣ ವಿಚಾರಗಳಿಗಾಗಿ ಇಂಥ ಪ್ರಕರಣಗಳು ನಡೆದವು ಯಾವುದೋ ಒಂದು ತಂಡದವರು ಕ್ರಿಕೆಟ್ ಆಡುವುದಕ್ಕೆ ಹೋಗಿ ಬಾಲ್ ಹೊಡೆದರು ಎಂಬ ಕಾರಣಕ್ಕಾಗಿ ಒಂದು ಕಮ್ಯೂನಲ್ ಕ್ಲಾಶ್ ಆಯಿತು. ಅಂಥ ಪ್ರಕರಣಗಳ ಬಗ್ಗೆ ಪೋಲೀಸರ ಜಾಗೃತ ಕ್ರಮ ಬೇಕಾಗುತ್ತದೆ. ಅದೇ ರೀತಿಯಲ್ಲಿ ಕೆ. ಎಂ. ಎಫ್, ನವರ ಆಸ್ತಿಯ ವಿಚಾರದಲ್ಲಿ ನಿನ್ನೆ ಕೂಡ ನಾನು ಪ್ರಸ್ತಾಪ ಮಾಡಿದ್ದೇನೆ. ಕೆಎಂಎಫ್ ನವರ ಸುಮಾರು ೫೦ ಎಕರೆ ಜಮೀನಿನಲ್ಲಿ ೬ತಿಂಗಳಲ್ಲಿ ದೊಡ್ಡವರ ಆಶೀರ್ವಾದ ಪಡೆದು ಮನೆ ಕಟ್ಟಿಸುತ್ತಾ ಇದ್ದಾರೆ. ಈ ಬಗ್ಗೆ ಹತ್ತಾರು ಸಾರಿ ದೂರು ಕೊಟ್ಟರೂ ಒಬ್ಬ ಪೋಲೀಸ್ ಕೂಡ ಅಲ್ಲಿಗೆ ಹೋಗುವುದಿಲ್ಲ. ಅಲ್ಲಿ ಯಾವ ತರಹದ ರಕ್ಷಣೆಯೂ ಇಲ್ಲದೇ ಬಿಟ್ಟು ಬಿಟ್ಟಿದ್ದಾರೆ. ಆ ಆಸ್ತಿ ಕೆ ಎಂ ಎಫ್ ನವರದ್ದು ಸರಕಾರದ್ದು ಜನತೆಯದ್ದು ಅದನ್ನು ಉಳಿಸುವುದಕ್ಕೆ ಪೋಲೀಸರು ಯಾವ ಕಾರಣಗಳಿಂದಾಗಿ ನಿಷ್ಕ್ರಿಯರಾಗಿದ್ದಾರೆ ? ಅದನ್ನು ದಯಮಾಡಿ ಸೂಕ್ತ ವಿಚಾರಣೆ ಮಾಡಿಸಿ. ಇನ್ನು ಅಟ್ರಾಸಿಟೀಸ್ ಬಗ್ಗೆ—ನನಗೆ ಬಂದಿರತಕ್ಕಂಥಾದ್ದು ಸುಮಾರು ೬೫೭ ಕೇಸ್‌ಗಳ ವಿಚಾರ. ೧೯೮೮ರಲ್ಲಿ ೬೫೭ ಕೇಸ್‌ಗಳು ಆಗಿವೆ, ೧೯೮೯ರಲ್ಲಿ ೯೨೧ ಕೇಸ್‌ಗಳು ಆಗಿವೆ. ಆದರೆ ೫೧–೫–೯೦ರ ತನಕ ೨೯೯ ಕೇಸ್‌ಗಳು ಆಗಿವೆ. ೬ ತಿಂಗಳಲ್ಲಿ ೬೮೫ ಹರಿಜನರ ಮೇಲೆ ನಡೆದಿರತಕ್ಕಂಥ ಹಲ್ಲೆಗಳು

ಒಬ್ಬ ಮಾನ್ಯ ಸದಸ್ಯರು.—ನಿಮ್ಮ ಕಾಲದಲ್ಲಿ ಎಷ್ಟಾಗಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.- ನನ್ನ ಕಾಲ ಎನ್ನುವುದು ಇಲ್ಲವೇ ಇಲ್ಲ. ನಾನು ಈ ರಾಜ್ಯದಲ್ಲಿ ಮಂತ್ರಿಯಾಗಿರಲಿಲ್ಲ. ಮುಖ್ಯಮಂತ್ರಿಯಾಗಿ ಇರಲಿಲ್ಲ. ನನ್ನ ಸರ್ಕಾರ ಹಿಂದೆ ಏನು ಮಾಡಿದೆ ಎನ್ನುವುದನ್ನು ಮುಖ್ಯ ಮಂತ್ರಿಗಳು ಹೇಳಿದರೆ ಸಾಕು. ಜನ ಆ ಕೆಲಸ ಮಾಡಲು ನಿಮ್ಮನ್ನು ಆರಿಸಿ ಕಳಿಸಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಸಿಂಧ್ಯಾ ಚಂದ್ರೇಗೌಡರ ಬಗ್ಗೆ ಪಾಪ ನಮ್ಮದೇನೂ ಇಲ್ಲ. ಆದರೆ ಅವರು ಹಿಂದಿನ ಸರ್ಕಾರದವರನ್ನು ಸಮರ್ಥಿಸಿಕೊಂಡರೆ ತಾಪತ್ರಯ ಶುರುವಾಗುತ್ತದೆ. ಏಕೆಂದರೆ ಅದು ಅಷ್ಟು ಚೆನ್ನಾಗಿ ನಡೆದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಮಾನ್ಯ ಶಿವರಾಮೇಗೌಡರ ಅನುಕಂಪದ ಮೇಲೆ ಇಲ್ಲಿ ಇಲ್ಲ. ಜನರ ಅನುಕಂಪದ ಮೇಲೆ ನಾನು ಬಂದಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ವಾಟಾಳ್ ನಾಗರಾಜ್‌ರವರು ಇಷ್ಟು ಹೊತ್ತು ಅಲ್ಲಿ ಹೋಗಿ ಏನು ಹೇಳಿಕೊಟ್ಟು ಬಂದಿರಿ ಹೇಳಿ.

ಶ್ರೀ ವಾಟಾಳ್ ನಾಗರಾಜ್.—ನಾನಂತೂ ಏನೂ ಹೇಳಿಕೊಡಲಿಲ್ಲ
ಗಲಾಟೆ ಮಾಡಬೇಡಿ ಎಂದು ಹೇಳಿದೆ ಅವರು ನನ್ನ ಮಾತು ಒಪ್ಪಲಿಲ್ಲ. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ನಾನು ಇಲ್ಲಿ ಕುಳಿತಿರುವುದು ಸರಿಯಲ್ಲವೆಂದು ಇಲ್ಲಿಗೆ ಬಂದಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಹಿಂದಿನ ಸರ್ಕಾರದ ತಪ್ಪುಒಪ್ಪುಗಳನ್ನು ನಿರ್ಧಾರ ಮಾಡಿ ೧೭೮ ಸದಸ್ಯರನ್ನು ಜನ ಕಳಿಸಿದ್ದಾರೆ, ಆ ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸಬೇಡಿ ನೀವು ಮಾಡಿ. ೧೭೮ ಜನ ಬಿಟ್ಟು ಉಳಿದ ಕೆಲವು ಶಿಖಂಡಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಡಿ

ಶ್ರೀ ಆರ್. ಎನ್. ನಾಯಕ್.—ಏನು ಹಾಗೇಂದರೆ ?

ಶ್ರೀ ಡಿ. ಬಿ. ಚಂದ್ರೇಗೌಡ.—ಶಿಖಂಡಿ ಎಂದರೆ ಗಂಡೂ ಅಲ್ಲ ಹೆಣ್ಣೂ ಅಲ್ಲ, ಅಲ್ಲೂ ಇಲ್ಲ ಇಲ್ಲೂ ಇಲ್ಲ ಅಂತ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಆ ಪದವನ್ನು ಅವರು ವಾಪಸ್ ಪಡೆಯಬೇಕು ಇಲ್ಲದಿದ್ದರೆ ಕಡತದಿಂದ ತೆಗೆಯಬೇಕು.

ಶ್ರೀ ವಾಟಾಳ್ ನಾಗರಾಜ್.—ಉತ್ತರಕುಮಾರನಿಗೆ ಶಿಖಂಡಿ ಅನ್ನುವುದು ಅವನು ಒಳ್ಳೆಯ ಶೌರ್ಯವಂತ. ಮಹಾಭಾರತದಲ್ಲಿ ಶಿಖಂಡಿಯ ಪಾತ್ರ ಬಹಳ ಮಹತ್ತರವಾದಂಥ ಪಾತ್ರ

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಹಾಭಾರತದಲ್ಲಿ ಶಿಖಂಡಿ ಪಾತ್ರ, ಶಕುನಿ ಪಾತ್ರ ಬಹಳ ಚೆನ್ನಾಗಿದೆ. ಅದೆಲ್ಲ ಶೀರ್ಷಾನವಾಗಿದೆ. ಮೊದಲು ಆ ಪದ ಕಡತದಿಂದ ತೆಗೆಸಬೇಕು.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ನನಗೆ ಗೊತ್ತಿರುವ ಹಾಗೆ ಗಂಡೂ ಅಲ್ಲ, ಹೆಣ್ಣೂ ಅಲ್ಲ ಎನ್ನುವುದಕ್ಕೆ ಯಾವುದಾದರೂ ಒಂದು ಇದ್ದರೆ ಅದು ಬೇಡ ಅಂದರೆ ಬೇಡ. ಯಾರಾದರೂ ಆ ಪಕ್ಷಕ್ಕೆ ಸೇರಿರಬೇಕು. ಇಲ್ಲವೇ ಈ ಪಕ್ಷಕ್ಕೆ ಸೇರಿರಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅವತ್ತೇ ಮಾನ್ಯ ಅಧ್ಯಕ್ಷರು ಇಂತಿಂಥವರು ಯಾವ್ಯಾವ ಪಕ್ಷಕ್ಕೆ ಬೆಂಬಲ ತೋರುತ್ತಾರೆಂದು ಹೇಳಿದರು. ಅವತ್ತು ನೀವು ಇದ್ದರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಅದಕ್ಕೆ ನಾನು ಹೇಳಿದೆ. ಜನ ನಿಮ್ಮನ್ನು ಆರಿಸಿ ಕಳಿಸುವಾಗ ಈ ಪಕ್ಷಕ್ಕೆ ಬೆಂಬಲಿಸಿ ಎಂದು ಹೇಳಿರಲಿಲ್ಲ. ಅದಕ್ಕೆ ಗೌರವ ಕೊಡುವ ದೃಷ್ಟಿಯಿಂದ ಆ ರೀತಿ ಹೇಳಿದೆ.

೪–೩೦ ಪಿ. ಎಂ.

ಇನ್ನೊಂದು ಮುಖ್ಯವಾಗಿ ಹೇಳುವುದೇನೆಂದರೆ, ಪೋಲೀಸ್ ಇನ್ಸ್‌ಪೆಕ್ಟರ್ ಹುದ್ದೆಗಳನ್ನು ೧೯೭೦ರಲ್ಲಿ ಗೆಜೆಟೆಡ್ ಹುದ್ದೆಗೆ ಏರಿಸಿಬಿಟ್ಟರು, ಅವರನ್ನು ಗೆಜೆಟೆಡ್ ನೌಕರರು ಎಂದು ಮಾಡಿದರು ಆದರೆ ಬೇರೆ ಗೆಜೆಟೆಡ್ ನೌಕರರಿಗೆ ಇರತಕ್ಕಂಥ ಒಂದು ಡಿಸಿಪ್ಲಿನರಿ ವ್ಯವಸ್ಥೆ ಈ ಪೋಲೀಸ್ ಇನ್ಸ್‌ಪೆಕ್ಟರ್ಸ್‌ಗೆ ಇಲ್ಲ, ಅರ್ಥಾತ್ ಈಗ ಒಬ್ಬ ಗೆಜೆಟೆಡ್ ನೌಕರ ಯಾರಾದರೂ ತಪ್ಪು ಮಾಡಿದರೆ ಆತನನ್ನು ಸಸ್ಪೆನ್‌ಷನ್ ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕೆ ಇದೆ. ಇಲ್ಲಿ ಇವರನ್ನು ಗೆಜೆಟೆಡ್ ಎಂದು ಕರೆದು ಪೋಲೀಸ್ ಸೂಪರಿಂಟೆಂಡೆಂಟ್‌ರವರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಇಲ್ಲಿ ೧೯-೯-೮೯ರಲ್ಲಿ Government published the draft rules in Notification No. HD 241 PIG 86 dated 14-9-89 in Part IV Set 21 of the *Karnataka Gazetter*

(*Extraordinary*) inviting objections and suggestions within 11–10–89 with respect to this ಅದಕ್ಕೆ ಡಿಸಿಪ್ಲಿನರಿ ಪ್ರೊಸೀಡಿಂಗ್ಸನ್ನು ಯಾರು ಮಾಡಬೇಕು ? ಎಲ್ಲರಿಗೂ ಅನ್ವಯವಾಗತಕ್ಕಂಥ ಒಂದು ಶಾಸನ ಇರಬೇಕು. ಗೆಜೆಟೆಡ್ ನೌಕರರು ಎಂದು ಕರೆದ ಮೇಲೆ ಈ ಇಲಾಖೆಗೆ ಮಾತ್ರ ಗೆಜೆಟೆಡ್ ನೌಕರರುಗಳಿಗೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳತಕ್ಕಂಥ ಅಧಿಕಾರವನ್ನು ಅಲ್ಲಿ ಇಮ್ಮಿಡಿಯೇಟ್ ಸುಪೀರಿಯರ್ಸ್‌ಗೆ ಕೊಟ್ಟು ಉಳಿದಿರತಕ್ಕಂಥ ಗೆಜೆಟೆಡ್ ನೌಕರರಿಗೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳತಕ್ಕಂಥ ಅಧಿಕಾರವನ್ನು ಸರ್ಕಾರ ಏನು ಇಟ್ಟುಕೊಂಡಿದೆ, ಇದಕ್ಕೆ ಒಂದು ಕಾಮನ್ ನೀತಿಯನ್ನು ರೂಪಿಸಿ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಕೆಲವು ಮಿನಿ ರಿವಾರ್ಡ್ಸ್ ಬಂದಾಗ ಯಾವಾಗಲೋ ಕೆಲಸ ಮಾಡಿರುತ್ತಾರೆ, ರಿವಾರ್ಡ್ ಯಾವಾಗಲೋ ಬರುತ್ತದೆ. ಒಂದೊಂದು ಸಾರಿ ಆ ತಕ್ಷಣ ಹಿಡಿದು ಆಗಲೇ ಬೆನ್ನನ್ನು ತಟ್ಟಿದರೆ ಅವರಿಗೆ ಉತ್ಸಾಹ ಬರುತ್ತದೆ, ಕೆಲಸ ಮಾಡುವುದಕ್ಕೆ ಉತ್ತೇಜನ ಸಿಗುತ್ತದೆ. ಕೇಸ್ ತೀರ್ಮಾನವಾದ ಮೇಲೆ ಒಂದೊಂದು ಸಲ ಅವಾರ್ಡ್‌ನ್ನು ಕೊಡುತ್ತಾರೆ. ಮತ್ತೆ ಅವಾರ್ಡ್ ಕೊಡುವಾಗ ಅಂದರೆ ಸ್ಯಾಂಕ್ಷನ್ ಮಾಡುವಾಗ ಕೂಡಾ ಅಧಿಕಾರಿಗಳು ತಮ್ಮ ಅನುಕೂಲಸಿಂಧು ನೀತಿಯನ್ನು ಬಳಸುತ್ತಾರೆ ಎನ್ನತಕ್ಕಂಥ ಒಂದು ಆರೋಪ ಕೂಡಾ ಇದೆ. ಮತ್ತು ಅದಕ್ಕಾಗಿ ಒಂದು ನಿಯಮ ಇಲ್ಲ. ಆದ್ದರಿಂದ ಅದಕ್ಕೆ ಒಂದು ನಿಯಮವನ್ನು ರೂಪಿಸಬೇಕು ಎಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಪೋಲೀಸ್ ಇಲಾಖೆಗೆ ಆಧಾರಸ್ತಂಭಗಳು ಅಂದರೆ ಕೆಳಗಡೆ ಕೆಲಸ ಮಾಡತಕ್ಕಂಥ ಹೆಡ್ ಕಾನ್‌ಸ್ಟೇಬಲ್‌ಗಳು ಮತ್ತು ಕಾನ್‌ಸ್ಟೇಬಲ್‌ಗಳು. ಅವರಿಗೆ ಎಲ್ಲಾ ಕಡೆಗೂ ಮನೆಯೂ ಇಲ್ಲ, ಅದು ಬೇರೆ ಮಾತು. ಪೋಲೀಸ್ ಇಲಾಖೆಯ ಒಂದು ಎಫಿಸಿಯೆನ್ಸಿಯನ್ನು ನಿಜವಾಗಿ ಗುರುತು ಮಾಡತಕ್ಕಂಥದ್ದು, ದುಡಿಯತಕ್ಕಂಥ ಜನ ಮತ್ತು ಕೆಳಗಡೆ ಇರತಕ್ಕಂಥ ಜನರಿಂದ. ೪೭ ಸಾವಿರಕ್ಕೂ ಮಿಕ್ಕಿ ನೌಕರರು ಇರತಕ್ಕಂಥ ಇಲಾಖೆಯಲ್ಲಿ ಅವರು ಒಂದು ಪ್ರಾಮಾಣಿಕ ಮತ್ತು ನಿಷ್ಠೆಯಿಂದ ಕೆಲಸ ಮಾಡಿದರೆ ಇಲಾಖೆಗೆ ಹೆಸರು ಬರುತ್ತದೆ. ಅವರಿಗೆ ನಮ್ಮ ಸರ್ಕಾರದಿಂದ ಈಗಲೂ ಸಾಲ ಕೇಳಿದರೆ, ಸೈಕಲ್ ಅಲೋಯೆನ್ಸ್ ಕೂಡ ಕೊಡುವುದಿಲ್ಲ. ಮೇಲೆ ಕೆಲಸ ಮಾಡುವವರಿಗೆಲ್ಲಾ ಕಾರನ್ನು ಕೊಟ್ಟರೆ ಇವರಿಗೆ ಈಗಲೂ ಸೈಕಲ್ ತೆಗೆದುಕೊಳ್ಳುವುದಕ್ಕೂ ಸಾಲ ಕೊಡುವುದಿಲ್ಲ. ಈಗ ಎರಡು ವೀಲರ್‌ಗಳು ಬಂದಿದೆ. ಅದು ಕೂಡ ಮೂರು ಸಾವಿರ, ನಾಲ್ಕು ಸಾವಿರ ರೂಪಾಯಿಗಳಿಗೆ ಸಿಗುತ್ತದೆ. ಅವರು ಅದನ್ನು ನಮಗೆ ಕೊಡಿಸಿ ಕೊಡಿ ಎಂದು ಬಹಳ ದಿವಸಗಳಿಂದ ಕೇಳುತ್ತಿದ್ದಾರೆ. ಅವರಿಗೆ ಈಗ ಸೈಕಲ್‌ಗೆ ಕೊಡುವ ಸಾಲವನ್ನು ಸ್ವಲ್ಪ ಹೆಚ್ಚು ಮಾಡಿ ಪೆಟ್ರೋಲ್ ಹಾಕಿ ಬಳಸತಕ್ಕಂಥ ಟು ವೀಲರ್ಸ್‌ಗೆ ಎಂದು ಹೇಳಿ ಸ್ವಲ್ಪ ಹೆಚ್ಚು ಸಾಲವನ್ನು ಕೊಡಬೇಕು ಎಂದು ಅವರ ಪ್ರಾರ್ಥನೆ ಇದೆ, ಅದನ್ನು ನಡೆಸಿಕೊಡಬೇಕು ಎಂದು ನಾನು ನಿಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಈಗ ನಾನು ಬಹಳ ಸಮಯವನ್ನು ತೆಗೆದುಕೊಂಡಿದ್ದೇನೆ. ಇನ್ನೂ ಹೆಚ್ಚು ಸಮಯವನ್ನು ನಾನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ಬಂಗಾರಪ್ಪನವರ ಇಲಾಖೆಯ ಮೇಲೆ ಅನೇಕ ವಿಚಾರಗಳನ್ನು ಹೇಳಬೇಕು ಎಂದು ಇದ್ದೆ. ಅದನ್ನು ನಮ್ಮ ಉಪನಾಯಕರು ಹೇಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದಕಾರಣ, ಈ ಒಂದು ಮುಖ್ಯಮಂತ್ರಿಗಳ ಒಟ್ಟಾರೆ ಬೇಡಿಕೆಯಲ್ಲಿ ಇಲ್ಲಿಯವರೆಗೆ ನಡೆದಿರತಕ್ಕಂಥ ಆಡಳಿತವನ್ನು ಸ್ವಚ್ಛ ಮಾಡುವುದರಲ್ಲಿ, ಆಡಳಿತದಲ್ಲಿ ಒಂದು ಸಾಮರ್ಥ್ಯವನ್ನು ರೂಪಿಸುವುದರಲ್ಲಿ ಅವರು ಪ್ರಾರಂಭಿಕ ದಿನಗಳಲ್ಲಿ ತೋರಿಸಿದ ಉತ್ಸಾಹವನ್ನು ಇತ್ತೀಚಿನ ದಿನಗಳಲ್ಲಿ ತೋರುತ್ತಿಲ್ಲ ಎನ್ನತಕ್ಕಂಥ ಒಂದು ಆಪಾದನೆಯನ್ನು ನಾನು ಮಾಡಿದರೆ ಅದು ಆಪಾದನೆ ಎಂದು ತಿಳಿದುಕೊಳ್ಳಬೇಡಿ, ಅದು ಒಂದು ಕರೆಕ್ಟೀವ್ ಮೆಜರ್ ಎಂಬುದಾಗಿ ಭಾವನೆ ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿ, ಈ ಬೇಡಿಕೆಗಳಿಗೆ ನನ್ನ ಸ್ಪಷ್ಟವಾದಂಥ ವಿರೋಧವನ್ನು ವ್ಯಕ್ತಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್.—ಇನ್ನು ಮುಂದೆ ಮಾತನಾಡತಕ್ಕವರು ೧೦–೧೦ ನಿಮಿಷ ಮಾತನಾಡಿ ಮುಗಿಸಬೇಕು.

† ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್).—ಸನ್ಮಾನ್ಯ ಸಭಾಧ್ಯಕ್ಷರೇ, ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯನ್ನು ಒಳಗೊಂಡು ಅನೇಕ ಬೇಡಿಕೆಗಳ ಮೇಲೆ ಅನುಭವಿ ಸದಸ್ಯರುಗಳು ಸಾಕಷ್ಟು ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಈಗಾಗಲೇ ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಸಾಕಷ್ಟು ಚರ್ಚೆಯಾಗಿ ವಿರೋಧ ಪಕ್ಷದವರಾಗಲಿ ಮತ್ತು ಆಡಳಿತ ಪಕ್ಷದವರಾಗಲಿ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆ ಬಗ್ಗೆ ಯಾರೂ ವಿರೋಧವನ್ನು ವ್ಯಕ್ತಮಾಡಲಿಲ್ಲ. ಎಲ್ಲರೂ

---

† ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇದಕ್ಕೆ ಒಪ್ಪಿದ್ದಾರೆ. ನಿಜವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಲ್ಲಿಯವರೆಗೆ ನಡೆದುಬಂದಂತಹ ಪದ್ಧತಿ ಅಂದರೆ, ಯಾವುದೇ ಗ್ರಾಮೀಣ ಯೋಜನೆ ಆಗಲಿ ಅಥವಾ ನಗರಾಭಿವೃದ್ಧಿ ಯೋಜನೆ ಆಗಲಿ ಅಥವಾ ನಗರಾಭಿವೃದ್ಧಿ ಯೋಜನೆ ಆಗಲಿ ಎಲ್ಲೋ ಒಂದು ಕಡೆ ಕೇಂದ್ರದಲ್ಲಿ ಕುಳಿತು ಈ ಯೋಜನೆಯನ್ನು ರೂಪಿಸುವಂತಹ ಪರಿಸ್ಥಿತಿ ಇತ್ತು. ಅದಕ್ಕೆ ಗ್ರಾಮೀಣ ಭಾಗದಲ್ಲಿ ಇಂತಹ ಯೋಜನೆಗಳನ್ನು ರೂಪಿಸಬೇಕು ಆದಾಗ ಆ ಭಾಗದ ಸಮಸ್ಯೆಗಳು ಏನು, ಅಲ್ಲಿ ಏನು ಕೆಲಸ ಕಾರ್ಯಗಳು ಆಗಬೇಕು, ಯಾವ ತರಹ ಡೆವಲಪ್‌ಮೆಂಟ್ ಆಗಬೇಕು ಎನ್ನುವಂತಹ ವಿಚಾರದಲ್ಲಿ ಗ್ರಾಮೀಣ ಮಟ್ಟದಲ್ಲಿ ಯೋಜನೆಗಳು ರೂಪುಗೊಳ್ಳಬೇಕು ಎಂಬ ಉದ್ದೇಶದಿಂದ ಈ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ವ್ಯವಸ್ಥೆ ಜಾರಿಗೆ ಬಂದಿದೆ. ಅದರ ಪ್ರಕಾರ ಗ್ರಾಮಗಳಲ್ಲಿ ಈ ವ್ಯವಸ್ಥೆ ಬಂದರೂ ಕೂಡ ಇನ್ನೂ ಅನೇಕ ಸಮಸ್ಯೆಗಳು ಇವೆ. ಉದಾಹರಣೆಗೆ ಹೇಳ ಬೇಕಾದರೆ, ನಮ್ಮ ಗ್ರಾಮದಲ್ಲಿ ಇನ್ನೂ ಜನರಿಗೆ ಕುಡಿಯುವುದಕ್ಕೆ ನೀರಿನ ಸೌಕರ್ಯ ಇಲ್ಲ. ಕಳೆದ ಸರ್ಕಾರದವರು ಸಾವಿರಾರು ಬೋರ್‌ವೆಲ್‌ಗಳನ್ನು ಗ್ರಾಮೀಣ ಭಾಗದಲ್ಲಿ ಹಾಕಿದ್ದಾರೆ. ಆದರೆ ಈ ಬೋರ್‌ವೆಲ್‌ಗಳನ್ನು ಹಾಕುವ ಸಲುವಾಗಿ ಯಾವುದೇ ಒಂದು ಭಾಗದಲ್ಲಿ ಕುಡಿಯುವ ನೀರಿನ ಅವಶ್ಯಕತೆ ಇದೆ, ಆ ನೀರಿನ ವ್ಯವಸ್ಥೆ, ಸರಿಯಾಗಿ ಸಿಗಬೇಕು ಎಂದು ಇದ್ದಾಗ, ಅಲ್ಲಿ ಎರಡು ಸಾವಿರ ಇರಬೇಕು, ಒಂದು ಸಾವಿರ ಇರಬೇಕು ಎಂದು ಯಾವುದೇ ತರಹದ ಕಂಡೀಷನ್ ಹಾಕಬಾರದು. ಅದು ಯಾವುದೇ ಗ್ರಾಮ ಇರಲಿ, ಅಂತಹ ಗ್ರಾಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳುತ್ತಿದ್ದೇನೆ. ಸಾವಿರಾರು ಬೋರ್ ವೆಲ್‌ಗಳನ್ನು ಹಾಕಿದರೂ ಕೂಡ ನಾವು ಅನೇಕ ಭಾಗದಲ್ಲಿ ನೋಡುತ್ತಿದ್ದೇವೆ, ಅದರಲ್ಲೂ ಗ್ರಾಮೀಣ ಭಾಗದಲ್ಲಿ ಅನೇಕ ಬೋರ್‌ವೆಲ್‌ಗಳು ಕೆಟ್ಟಿವೆ, ಅದರಲ್ಲಿ ನೀರು ಬರುತ್ತಾ ಇಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಅದರ ರಿಪೇರ್‌ಸ್ ಬಗ್ಗೆ ಎಷ್ಟು ಕಾಳಜಿ ವಹಿಸುವುದಕ್ಕೆ ಸಾಧ್ಯ ಇತ್ತು ಅಷ್ಟು ಕಾಳಜಿ ವಹಿಸುತ್ತಾ ಇಲ್ಲ. ಏಕೆಂದರೆ, ಮೆಕಾನಿಕ್ ಡಿವಿಜನ್ ಏನು ಇದೆ, ಆ ಮೆಕಾನಿಕ್ ಡಿವಿಜನ್‌ದವರು ಎಷ್ಟು ಕಾಳಜಿ ದುರಸ್ತಿ ಮಾಡಬೇಕೊ ಅದನ್ನು ಮಾಡುತ್ತಿಲ್ಲ ಈ ಒಂದು ಸತ್ಯಾಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗಾಗಲೇ ಸರ್ಕಾರದವರು ತಮ್ಮ ಹೇಳಿಕೆಯಲ್ಲಿ ಗ್ರಾಮಗಳ ಪರಿಸರದ ನಿರ್ಮಲೀಕರಣ ಮಾಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ. ಅದರ ಸಲುವಾಗಿ ಅನೇಕ ಯೋಜನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಈಗಾಗಲೇ ತಮಗೆ ಗೊತ್ತಿರ ಬಹುದು. ಹಿಂದಿನ ಸರ್ಕಾರದವರು ಅನೇಕ ಕಡೆ ಕಕ್ಕಸುಗಳನ್ನು, ಲೆಟ್ರಿನ್‌ಗಳನ್ನು ಕಟ್ಟಿಸಿದ್ದಾರೆ. ಬಹುಶಃ ನನ್ನ ಮಾಹಿತಿ ಪ್ರಕಾರ ಈಗ ಅವು ಎಲ್ಲೂ ಉಪಯೋಗದಲ್ಲಿಲ್ಲ, ದುಡ್ಡು ಮಾತ್ರ ವ್ಯಯವಾಗಿದೆ, ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ಅದರ ಉಪಯೋಗ ಮಾತ್ರ ಜನರಿಗೆ ಇಲ್ಲ. ಅದರಸಲುವಾಗಿ ಯಾವುದಾದರೂ ಕಾರ್ಯಕ್ರಮ ಆಗಿದ್ದರೆ ಅದರ ಬಗ್ಗೆ ತನಿಖೆಯಾಗಬೇಕು. ಏಕೆಂದರೆ ಇದಕ್ಕಾಗಿ ಸರ್ಕಾರದ ಬಹಳಷ್ಟು ದುಡ್ಡು ಖರ್ಚಾಗಿದೆ. ಆದರೆ ಅದು ಉಪಯೋಗವಾಗುತ್ತಾ ಇಲ್ಲ. ಬಹುತೇಕ ಜಾಗಗಳಲ್ಲಿ ಅದರ ಡೋರ್ಸ್ ಸಹಿತ ಇಲ್ಲ, ಸರಿಯಾಗಿ ಅವು ಉಪಯೋಗವಾಗುತ್ತಾ ಇಲ್ಲ. ಇದರ ಬಗ್ಗೆ ಕ್ರಮ ತೆಗೆದುಕೊಂಡು ಏಕೆ ಹಿಂಗಾಗಿದೆ ಎಂದು ಅದರ ತಪ್ಪನ್ನು ಕಂಡುಹಿಡಿದು, ಮುಂದಾದರೂ ಸರಿ ಮಾಡಬೇಕು. ಅಲ್ಲದೆ ಒಳ್ಳೆಯ ಡಿಸೈನ್ ಕಂಡುಹಿಡಿದು ಮಾಡಬೇಕು. ಸರ್ವೇಸಾಮಾನ್ಯವಾಗಿ ನೀರು ಕಡಿಮೆ ಉಪಯೋಗಿಸಬೇಕೊ ಏನೋ, ಒಟ್ಟಿನಲ್ಲಿ ಸಾಮಾನ್ಯ ಜನ ಉಪಯೋಗ ಮಾಡುವಂಥ ಡಿಸೈನ್ ಕಂಡುಹಿಡಿದು ಅಂತಹ ಕಕ್ಕಸುಗಳನ್ನು, ಲೆಟ್ರಿನ್‌ಗಳನ್ನು ಗ್ರಾಮೀಣ ಭಾಗದಲ್ಲಿ ಕಟ್ಟಿಸಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಲೆಟ್ರಿನ್ಸ್ ಏಕೆ ಉಪಯೋಗವಾಗುತ್ತಾ ಇಲ್ಲ, ಏನು ಮಾಡಿದರೆ ಜನ ಉಪಯೋಗಿಸುತ್ತಾರೆ ಎನ್ನುವುದರ ಬಗ್ಗೆ ಸಲಹೆಗಳನ್ನು ಕೊಡಬೇಕು. ಅದಕ್ಕೆ ಪ್ರಾಯೋಗಿಕವಾಗಿ ಮಂಡಲದಲ್ಲಿ ಒಂದು ಮಾಡಿನೋಡೋಣ ಎಂದಿದ್ದೇವೆ. ಅಂದರೆ ಜನರಿಂದ ಅನುಭವ ತೆಗೆದುಕೊಂಡು ಯಾವ ತರಹ ಕಟ್ಟಿದರೆ, ಯಾವ ತರಹ ವ್ಯವಸ್ಥೆ ಮಾಡಿದರೆ ಜನ ಉಪಯೋಗಿಸುತ್ತಾರೆ, ನೀರಿನ ವ್ಯವಸ್ಥೆ ಯಾವರೀತಿ ಇರಬೇಕು, ಅದರಲ್ಲಿ ಮಂಡಲದ ಜವಾಬ್ದಾರಿ ಯಾವರೀತಿ ಇರಬೇಕು, ಯಾವರೀತಿ ಮಾಡಿದರೆ ಜನ ಉಪಯೋಗಿಸುತ್ತಾರೆ, ವಿಶೇಷವಾಗಿ ಹೆಣ್ಣುಮಕ್ಕಳು ಉಪಯೋಗಿಸುತ್ತಾರೆ ಎನ್ನುವುದರ ಬಗ್ಗೆ ನಿಮ್ಮ ಅನುಭವವನ್ನು ಸಲಹೆಗಳನ್ನು ಸರ್ಕಾರಕ್ಕೆ ಕೊಡಬೇಕು. ಪ್ರತಿಯೊಂದನ್ನೂ ಸರ್ಕಾರಕ್ಕೆ ಬಿಟ್ಟುಬಿಟ್ಟರೆ ಸರ್ಕಾರವೇನೂ ಸರ್ವಜ್ಞ ಅಲ್ಲ. ಎಲ್ಲರಿಂದ ಅನುಭವ ಸಲಹೆಗಳನ್ನು ತೆಗೆದುಕೊಂಡು ನಾವು ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ನಗರಗಳಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ಕಟ್ಟಿ ಎಲ್ಲ ವ್ಯವಸ್ಥೆಯಿದ್ದರೂ ಸರಿಯಾಗಿ ನೀರನ್ನು ಹಾಕುವಂಥ ವ್ಯವಸ್ಥೆಯಿಲ್ಲದೆ ಅನೇಕ ಕಡೆ ಮುಚ್ಚುವಂಥ ಸ್ಥಿತಿ ಬಂದಿದೆ. ಇನ್ನು ಹಳ್ಳಿಗಳಲ್ಲಿ ಕುಡಿಯುವುದಕ್ಕೇ ನೀರಿಲ್ಲ. ಅಂತಹ ಕಡೆ ಸಾರ್ವಜನಿಕ ಶೌಚಾಲಯ

ಕಟ್ಟುವುದು. ನೀರಿನ ವ್ಯವಸ್ಥೆಗೆ ಒಂದು ಬೋರ್‌ವೆಲ್ ಹಾಕುವುದಕ್ಕೆ ಅಥವಾ ಬಾವಿ ತೋಡುವುದಕ್ಕೆ ೫೦ ಸಾವಿರ ರೂಪಾಯಿಗಳು ಖರ್ಚು ಆಗುತ್ತದೆ. ಶೌಚಾಲಯಕ್ಕೆ ೫ ಸಾವಿರ ರೂಪಾಯಿಗಳನ್ನು ಬೋರ್‌ವೆಲ್‌ಗೆ ೫೦ ಸಾವಿರ ರೂಪಾಯಿಗಳನ್ನು ಮಾಡುವುದಕ್ಕಾಗುತ್ತದೆಯೇ. ನಮ್ಮದು ಚೈನಾದಂಥ ದೇಶವಲ್ಲ. ಆರೀತಿಯಾದರೆ ಮನೆಮನೆಗೆ ಒಂದೊಂದು ಕೊಡೋಣ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಬಳ್ಳಾರಿಯ ಸಂಗನಕಲ್‌ನಲ್ಲಿ ಹೋಗಿ ನೋಡಿ. ನೀವು ಮಂತ್ರಿಗಳಾಗಿದ್ದಾಗ ಮಾಡಿದ್ದು, ಬಹಳ ಚೆನ್ನಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ವಿದ್ಯಾವಂತರು ಫ್ಲಷ್ ಔಟ್ ಇದ್ದರೂ ಕೂಡ ಮಾಡುವುದಿಲ್ಲ. ಈ ರೀತಿ ನಮ್ಮ ಹಳ್ಳಿಗಳ ಪರಿಸ್ಥಿತಿ ಇದೆ. ಇದನ್ನು ಅರ್ಥ ಮಾಡಿಕೊಳ್ಳದೆ ಹೇಳಿದರೆ ಹೇಗೆ.

ಶ್ರೀ ಎಂ. ವೈ. ಘೋರ್ಪಡೆ.—ನಾನು ರಿಪ್ಲೈ ಕೊಡುವಾಗ ಇದರ ಬಗ್ಗೆ ಹೇಳುತ್ತೇನೆ. ನನ್ನ ಅಭಿಪ್ರಾಯದಲ್ಲಿ ಇಂಡಿವಿಜುವಲ್ ಶೌಚಾಲಯ ಒಂದು ಕಡೆ ಇರಲಿ, ಇದರ ಜೊತೆಗೆ ಸ್ವಲ್ಪ ಕಮ್ಯೂನಿಟಿ ಶೌಚಾಲಯ ಕೂಡ ಮಾಡಿ ನೋಡಬೇಕು. ನಾವು ಸಂಡೂರಿನಲ್ಲಿ ಯಶಸ್ವಿಯಾಗಿ ಮಾಡಿದ್ದೇವೆ, ನೀರಿನ ವ್ಯವಸ್ಥೆ ಮಾಡಿದ್ದೇವೆ, ಅದನ್ನು ಸ್ವಚ್ಛವಾಗಿ ಇಡಲಿಕ್ಕೆ ವ್ಯವಸ್ಥೆ ಮಾಡಿದ್ದೇವೆ. ಈ ಎರಡನ್ನೂ ಮಾಡಿರುವುದರಿಂದ ಅದು ಸಕ್ಸಸ್‌ಫುಲ್ಲಾಗಿ ನಡೆಯುತ್ತಾ ಇದೆ. ಅದಕ್ಕೋಸ್ಕರ ನನ್ನ ಅನುಭವ ಹೇಳಿದೆ. ನಿಮ್ಮ ಅನುಭವ ಸ್ವಲ್ಪ ಹೇಳಿ ಎಂದು ಹೇಳಿದೆ.

ಶ್ರೀ ನಾರಾಯಣರಾವ್ ಮನಹಳ್ಳಿ.—ಸನ್ಮಾನ್ಯ ಅಧ್ಯಕ್ಷರೆ, ಸಲಹೆ ಅಂದರೆ ಈಗಾಗಲೇ ಮಾನ್ಯ ಸದಸ್ಯರು ಹೇಳಿದರು. ಸಿಟಿಯೊಳಗೆ ಶೌಚಾಲಯವನ್ನು ಶುಚಿಯಾಗಿ ಇರಲಿಕ್ಕೆ ಸಾಧ್ಯವಾಗಿಲ್ಲ, ಇನ್ನು ಹಳ್ಳಿಯಲ್ಲಿ ನೀರು ಸಿಗುವುದಿಲ್ಲ, ಅಲ್ಲಿ ಶುಚಿಯಾಗಿರಲಿಕ್ಕೆ ಸಾಧ್ಯವಾಗುತ್ತದೆಯೇ ಎಂಬ ಸಂಶಯ ವ್ಯಕ್ತ ಮಾಡುತ್ತಾ ಇದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಹಳ್ಳಿಯಲ್ಲಿ ಶೌಚಾಲಯಕ್ಕಾದರೂ ಸಾಕಷ್ಟು ನೀರು ಇದೆ, ಒಳಚರಂಡಿಗೆ ಸಾಕಷ್ಟು ನೀರು ಇರಲಿಕ್ಕಿಲ್ಲ. ಶೌಚಾಲಯಕ್ಕೆ ನೀರಿನ ಅಭಾವವಿಲ್ಲ. ಮತ್ತೆ ಬಡ ಹೆಣ್ಣು ಮಕ್ಕಳಿಗೆ ನಾವು ಸಂಪೂರ್ಣವಾಗಿ ನಿರ್ಲಕ್ಷ ಮಾಡಲಿಕ್ಕೆ ಬರುವುದಿಲ್ಲ. ಇಂಡಿವಿಜುವಲ್ ಲೆಟ್ರಿನ್ಸ್ ಏನಿದೆ ಅದಕ್ಕೆ ಬೆನಿಫಿಷರೀಸ್ ೧೫೦೦ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಈ ದೇಶದಲ್ಲಿ ಪ್ರತಿಯೊಬ್ಬರೂ ೧೨೦೦ ರೂಪಾಯಿ ಖರ್ಚುಮಾಡಿ ಶೌಚಾಲಯ ಮಾಡಿಕೊಳ್ಳಲಿಕ್ಕೆ ಅವರಿಗೆ ತ್ರಾಣ ಇನ್ನೂ ಬಂದಿಲ್ಲ.

ಶ್ರೀ ನಾರಾಯಣರಾವ್ ಮನಹಳ್ಳಿ.—ಆದರೆ ಈ ವಿಷಯದಲ್ಲಿ ಸ್ವಲ್ಪ ವಿಶೇಷ ಗಮನ ಕೊಡಬೇಕು. ನೀರು ಕಡಿಮೆ ಹಿಡಿಯಬೇಕು, ಆಮೇಲೆ ಶೌಚಾಲಯ ಕಟ್ಟಬೇಕು. ಈ ತರಹ ಈ ಟೈಪ್ ಕೆಲವು ದೇಶಗಳಲ್ಲಿ ಇದ್ದಾವಂತೆ. ಅಂಥವನ್ನು ತಾವು ನೋಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಸಾಕಷ್ಟು ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳು ಇಲ್ಲ. ಮಕ್ಕಳ ಸಂಖ್ಯೆ ಜಾಸ್ತಿ ಇದೆ. ಬ್ಲ್ಯಾಕ್‌ಬೋರ್ಡ್ ಯೋಜನೆ ಮೇರೆಗೆ ಪ್ರತಿ ಶಾಲೆಗೆ ಒಂದೆರಡು ಶಾಲಾ ಕೊಠಡಿಗಳನ್ನು ಕಟ್ಟಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಹಳ್ಳಿಗಾಡಿನಲ್ಲಿ ನಿರ್ಮಲೀಕರಣದ ಬಗ್ಗೆ ಹೇಳುವುದಾದರೆ ಹಳ್ಳಿಗಳಲ್ಲಿ ಊರಿನ ಪಕ್ಕದಲ್ಲಿಯೇ ಅಥವಾ ಊರಿನ ಒಳಗಡೆ ತಿಪ್ಪೆಗಳು ಇರುತ್ತವೆ. ಗ್ರಾಮೀಣ ಜನರು ತಿಪ್ಪೆಗಳಲ್ಲಿ ಕಸಕಡ್ಡಿಗಳನ್ನು ಸಂಗ್ರಹ ಮಾಡಿ, ಆಮೇಲೆ ಹೊಲಗಳಿಗೆ ಗೊಬ್ಬರವಾಗಿ ಉಪಯೋಗಿಸುತ್ತಾರೆ. ಇದರಿಂದ ಊರಿನ ಪರಿಸರ ಕೆಟ್ಟು ಹೋಗುತ್ತದೆ. ಆದ್ದರಿಂದ ಕಾಂಪೋಸ್ಟ್ ಪಿಟ್ಸ್ ಸಲುವಾಗಿ ಪ್ರತಿಯೊಂದು ಹಳ್ಳಿಯಲ್ಲೂ ಒಂದೊಂದು ಏರಿಯಾವನ್ನು ನಿಗದಿ ಮಾಡಬೇಕೆಂದು ಹೇಳುತ್ತೇನೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕಟ್ಟಿಗೆಯಿಂದಲೇ ಅಡಿಗೆ ಕೆಲಸಗಳಾಗಬೇಕು. ಇದಕ್ಕಾಗಿ ಕಟ್ಟಿಗೆ ಉರಿಸುತ್ತಾರೆ. ಈ ರೀತಿ ಕಟ್ಟಿಗೆ ಉರಿಸುವುದನ್ನು ತಪ್ಪಿಸಬೇಕು. ಅರಣ್ಯ ವಿಶೇಷವಾಗಿ ನಾಶವಾಗುವುದು ಕಟ್ಟಿಗೆ ಉರಿಸುವುದರಿಂದ. ಇತ್ತೀಚೆಗೆ ಬಯೋಗ್ಯಾಸ್, ಗೋಬರ್‌ಗ್ಯಾಸ್‌ನಂತಹ ಯೋಜನೆಗಳು ಬಂದಿವೆ. ಈ ಯೋಜನೆಗಳನ್ನು ವ್ಯಾಪಕವಾಗಿ ಜಾರಿಗೆ ತಂದರೆ ಗ್ರಾಮೀಣ ಜನರಿಗೆ ತುಂಬ ಅನುಕೂಲವಾಗುತ್ತದೆ. ಹೊಗೆರಹಿತ ಒಲೆಗಳು ನಿರ್ಮಾಣವಾಗಬೇಕು. ಇತ್ತೀಚೆಗೆ ಇವು ಪಾಪ್ಯುಲರ್ ಯೋಜನೆಗಳಾಗಿವೆ. ಈ ಯೋಜನೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕವಾಗಿ ಕೈಗೆತ್ತಿಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ವ್ಯವಸಾಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಇವತ್ತು ನಮ್ಮಲ್ಲಿ ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳಿಂದ ಭೂಮಿ ಸಿಕ್ಕಾಗಿದೆ. ರೋಗಗ್ರಸ್ಥವಾಗಿದೆ. ಇವತ್ತು ಇದರ ಬಗ್ಗೆ ಯಾರೂ ಕೂಡ ವಿಶೇಷ ಚಿಂತನೆ ಮಾಡಿ, ಕಾಳಜಿ ವಹಿಸುತ್ತಿಲ್ಲ. ಇವತ್ತು ಭೂಮಿಯಲ್ಲಿ ಬೆಳೆ ಬೆಳೆಯಲಿಕ್ಕೆ ಸಾಧ್ಯವಾಗುತ್ತಿಲ್ಲ. ಭೂಮಿಯ ಒರಿಜನಲ್ ಮಣ್ಣಿನ

ಗುಣಮಟ್ಟವನ್ನು ಕಾಪಾಡುವ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ಇನ್ನು ರೈತರ ಮನೆ ಬಾಗಿಲಿಗೆ ಫರ್ಟಿಲೈಸರ್ ಮತ್ತು ಸುಧಾರಿಸಿದ ಬೀಜಗಳನ್ನು ಒದಗಿಸಿಕೊಡುತ್ತೇವೆಂದು ಅನೇಕ ಸಲ ಹೇಳುತ್ತಿದ್ದೇವೆ. ಆದರೆ ನಿಜವಾದ ಪರಿಸ್ಥಿತಿ ಬೇರೆ ಇದೆ. ನಮ್ಮ ರೈತರಿಗೆ ಬಿತ್ತನೆಗೆ ಬೇಕಾಗುವಂಥ ಬೀಜಗಳು ಸಕಾಲದಲ್ಲಿ ಸಿಗುತ್ತಿಲ್ಲ. ಇವತ್ತು ಬಹಳಷ್ಟು ರೈತರು ಬ್ಯಾಂಕಿನಿಂದ ಸಾಲ ಪಡೆಯುತ್ತಾರೆ. ಅಲ್ಲಿ ರೈತರಿಗೆ ಬೇಕಿಲ್ಲದ ಬಿ. ಕಾಂಪ್ಲೆಕ್ಸ್ ಗೊಬ್ಬರವನ್ನು ಕೊಡುತ್ತಾರೆ. ರೈತರಿಗೆ ಬೇಕಾದ ಗೊಬ್ಬರ ಸಿಗುವುದಿಲ್ಲ. ಇದರ ಕಡೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ೧೧ ಪರ್ಸೆಂಟ್ ಭೂಮಿ ತೋಟಗಾರಿಕೆ ಬೆಳೆಗಳಿಗೆ ಯೋಗ್ಯವಾಗಿದೆ. ಬೀದರ್ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳಿಗೆ ಯೋಗ್ಯವಾದ ಭೂಮಿ ಇದೆ. ನಮ್ಮಲ್ಲಿ ಹಂಗೂರ ಜಾಮ್ ಹಾಗೂ ಮ್ಯಾಂಗೋ ಹಣ್ಣುಗಳನ್ನು ಬಹಳಷ್ಟು ಬೆಳೆಯುತ್ತಾರೆ. ಆದರೆ, ರೈತರು ಬೆಳೆದ ಹಣ್ಣುಗಳಿಗೆ ಸುಗ್ಗಿಕಾಲದಲ್ಲಿ ಸರಿಯಾದ ರೇಟು ಸಿಗುವುದಿಲ್ಲ. ಅದರ ಸಲುವಾಗಿ ಪ್ರತಿ ತಾಲ್ಲೂಕಿನಲ್ಲಿಯೂ ಕೋಲ್ಡ್ ಸ್ಟೋರೇಜ್‌ಗಳನ್ನು ಮಾಡಿ, ರೈತರು ಬೆಳೆದ ಹಣ್ಣುಗಳನ್ನು ಶೇಖರಿಸಿಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಂಗೂರು ಮತ್ತು ಸಪೋಟ ಹಣ್ಣುಗಳನ್ನು ಬೆಳೆಯಲು ರೈತರಿಗೆ ಸಾಲದ ವ್ಯವಸ್ಥೆ ಮಾಡಬೇಕು. ಈಗಾಗಲೇ ಹೇಳಿರುವ ಹಾಗೆ ಬೀದರ್ ಜಿಲ್ಲೆ ವಿಶೇಷವಾಗಿ ಹಾಲು ಉತ್ಪಾದನೆಯಲ್ಲಿ ಬಹಳಷ್ಟು ಮುಂದುವರಿದಿದೆ. ಈಗ ಸಧ್ಯ ಪರಿಸ್ಥಿತಿಯಲ್ಲಿ ಸರ್ಕಾರದ ಅಂಕಿ ಸಂಖ್ಯೆಯ ಪ್ರಕಾರ ಬೀದರ್ ಜಿಲ್ಲೆಯಲ್ಲಿ ಒಂದು ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಆದರೆ ನಮ್ಮಲ್ಲಿ ಉತ್ಪಾದನೆಯಾಗುವ ಹಾಲು ಗುಲ್ಬರ್ಗಕ್ಕೆ ಹೋಗಿ ಮತ್ತೆ ಬೀದರ್‌ಗೆ ಕಳುಹಿಸುವಂಥ ವ್ಯವಸ್ಥೆ ಇದೆ. ಎಲ್ಲಿ ಹಾಲು ಉತ್ಪಾದನೆ ಜಾಸ್ತಿ ಇದೆ, ಎಲ್ಲಿ ಹಾಲು ಶೇಖರಣೆಯಾಗುತ್ತದೆ. ಅಲ್ಲಿ ಒಂದು ಚಿಲ್ಲಿಂಗ್ ಪ್ಲಾಂಟ್ ಅವಶ್ಯಕವಾಗಿ ಬೇಕಾಗುತ್ತದೆ. ಆದುದರಿಂದ, ಈ ಚಿಲ್ಲಿಂಗ್ ಪ್ಲ್ಯಾಂಟ್ ಇಡಲಿಕ್ಕೆ ಈ ಸಂದರ್ಭದಲ್ಲಿ ತಾವು ವಿಶೇಷ ಲಕ್ಷ್ಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಬೀದರ್ ಪ್ಲ್ಯಾಂಟ್ ಸಲುವಾಗಿ ನಾನು ಸಲಹೆ ಕೊಟ್ಟಿದ್ದೆ. ಆದ್ದರಿಂದ ಅದಕ್ಕೆ ವಿಶೇಷ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕಡೆಯದಾಗಿ ಪ್ರತಿ ಐದು ಸಾವಿರ ಕ್ಯಾಟಲ್ ಪಾಪ್ಯುಲೇಷನ್‌ಗೆ ಒಂದು ಆರ್.ವಿ.ಡಿ. ಕಂಪೌಂಡರಿ ಇರಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಸಮಯ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಎಸ್. ನಾಡಗೌಡ (ಮುದ್ದೇಬಿಹಾಳ್).—ಸನ್ಮಾನ್ಯ ಅಧ್ಯಕ್ಷರೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು ಹಾಗೂ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಮತ್ತು ಅರಣ್ಯ ಮಂತ್ರಿಗಳು, ಮಂಡಿಸಿದಂಥ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ, ನನ್ನ ಅಂಕಿ ಸಂಖ್ಯೆಗಳನ್ನು ಈ ಸದನಕ್ಕೆ ಸ್ಪಷ್ಟಪಡಿಸುತ್ತೇನೆ. ಅಧ್ಯಕ್ಷರೆ, ತಮ್ಮ ಒಂದು ಪರವಾನಿಗೆಯನ್ನು ಪಡದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ. ಮೊದಲನೆಯದಾಗಿ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಹೇಳಬೇಕೆಂದರೆ, ನಾನು ಹಿಂದೆ ಕೂಡ ಇದರ ಬಗ್ಗೆ ಹೇಳಿದ್ದೆ, ಮತ್ತೆ ಈಗಲೂ ಅದೇ ಮಾತನ್ನು ಮತ್ತೊಮ್ಮೆ ಹೇಳಲಿಕ್ಕೆ ಬಯಸುತ್ತೇನೆ. ಪಂಚಾಯತ್ ರಾಜ್ ಡೆವಲಪ್‌ಮೆಂಟ್ ಅಂದರೆ, ಈ ಗ್ರಾಮೀಣಾಭಿವೃದ್ಧಿ ಅಂದರೆ, ನಾವು ಒಂದು ಹಳ್ಳಿಯ ಸಾಂಪ್ರದಾಯಕವಾದಂಥ ಪರಿಕಲ್ಪನೆಯನ್ನು ಹೊಂದಿದ್ದೇವೆ. ಹಲವಾರು ಮಾನ್ಯ ಸದಸ್ಯರು ಭಾಷಣ ಮಾಡಿದ್ದನ್ನು ಕೇಳಿದ್ದೇನೆ ಈಗ ಮಾನ್ಯ ಸದಸ್ಯರು ಶೌಚಾಲಯಗಳ ಬಗ್ಗೆ ಬಹಳ ಹೇಳಿದ್ದಾರೆ. ಶೌಚಾಲಯ ಕಟ್ಟಡಗಳು ಆಗಬೇಕು. ಈಗ ನಾನು ಹೇಳಬಯಸುವಂಥ ಒಂದು ಅಭಿಪ್ರಾಯ ಏನೆಂದರೆ, ಇವೊತ್ತು ನಮ್ಮ ಹಳ್ಳಿಯ ಜೀವನವನ್ನು ಸೋಷಿಯಲಿ ಮತ್ತು ಎಕನಾಮಿಕಲಿ ಲಿಫ್ಟ್ ಮಾಡಿದರೆ ಒಳ್ಳೆಯದು. ಈ ಕೆಲಸ ಮೊದಲು ಆಗಬೇಕು. ನಾನೂ ಸಹ ಹಳ್ಳಿಯ ಪ್ರದೇಶದಿಂದ ಬಂದಂಥ ನಾಗರೀಕ. ನನ್ನ ಆರ್ಥಿಕ ಪರಿಸ್ಥಿತಿ ಸರಿಯಾಗಿತ್ತು. ಮತ್ತು ಸೋಷಿಯಲ್ ಸ್ಟೇಟಸ್ ಕೂಡ ಸರಿಯಾಗಿತ್ತು. ನನ್ನ ಹಿರಿಯರು ನನ್ನನ್ನು ಒಳ್ಳೆಯ ಶಾಲೆಯಲ್ಲಿ ಅಭ್ಯಾಸ ಮಾಡಿಸಿ ಈ ಒಂದು ಪರಿಸ್ಥಿತಿಗೆ ನನ್ನನ್ನು ತಂದಿದ್ದಾರೆ. ಕಾರಣ ಇಷ್ಟೆ. ನಾವು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಬಗ್ಗೆ ಲಕ್ಷ್ಯ ಕೊಡದೇ ಕೇವಲ ಡೆವಲಪ್‌ಮೆಂಟ್ ಅಂದರೆ ಯಾವರೀತಿ ಅಂದರೆ, ನಮ್ಮ ಹಳ್ಳಿಯ ಭಾಗದಲ್ಲಿ ಈ ಹೆಣಕ್ಕೆ ಶೃಂಗಾರ ಮಾಡಿದ ಹಾಗೆ ಎಂಬ ಒಂದು ಮಾತು ಇದೆ. ಅರ್ಥಾತ್, ನಾವು ರಸ್ತೆ ಮಾಡುವುದರಿಂದ, ಶೌಚಾಲಯ ಕಟ್ಟುವುದರಿಂದ, ದಾರಿ ದೀಪ ಕೊಡುವುದರಿಂದ. ಹಳ್ಳಿಯನ್ನು ಒಂದು ಗಾರ್ಡನ್ ಮಾದರಿಯಲ್ಲಿ ಕಾಣಬಹುದು. ಆದರೆ ಅಲ್ಲಿರುವಂಥ ಜನರ ಆರ್ಥಿಕ ಅಭಿವೃದ್ಧಿ ಗೋಸ್ಕರ ನಾವು ಎಷ್ಟು ಲಕ್ಷ್ಯವನ್ನು ಕೊಡುತ್ತಿದ್ದೇವೆ ಎನ್ನುವುದು ಬಹಳ ಪ್ರಮುಖವಾದಂಥ ವಿಷಯ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಾವು ನಮ್ಮ ಹೆಚ್ಚಿನ ದುಡ್ಡನ್ನು ಲಿಫ್ಟ್ ಇರಿಗೇಷನ್ ಮಾಡಿಸುವ ಮುಖಾಂತರವಾಗಲೀ ಕೈಗಾರಿಕೆಯನ್ನು ತಂದು ಕೊಡುವುದರ ಮುಖಾಂತರವಾಗಲೀ ಅಥವಾ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಯನ್ನು ಮಾಡುವ ಮುಖಾಂತರವಾಗಲೀ ಖರ್ಚು ಮಾಡುತ್ತೇವೆ. ನಾವು ಇವತ್ತು ತಮಿಳುನಾಡನ್ನು ನೋಡಬೇಕು. ಅಲ್ಲಿ ಸಾಕಷ್ಟು ಹಳ್ಳಿಗಳಲ್ಲಿ ಎಲ್ಲಾ ಸೌಕರ್ಯಗಳು ಇವೆ. ಅಲ್ಲಿ ಸಾಗರಗಳು, ನದಿಗಳು ಕೂಡ ಇವೆ ಹಾಗೂ ದೊಡ್ಡ ದೊಡ್ಡ ಕೆರೆಗಳೂ ಕೂಡ ಇವೆ. ನಮ್ಮಲ್ಲಿ ಏನು ಇಂತಹ ಕೆರೆಗಳು, ನದಿಗಳು ಏನು ಇವೆ ಇವುಗಳನ್ನು ಟೂರಿಸ್ಟ್ ಸೆಂಟರ್ ಎಂದು ಟ್ರೀಟ್ ಮಾಡಿ ಆ ಮೂಲಕ ಜನರಿಗೆ ಮನರಂಜನೆ ಒದಗಿಸಬೇಕು. ಇದು ನಮ್ಮ ಜನರಿಗೆ ಒದಗಿಸುವಂತಹ ಒಂದು, ನಿಜವಾದ ಶಿಕ್ಷಣವೆಂದು ಹೇಳಿದರೂ ಕೂಡ ತಪ್ಪಾಗುವುದಿಲ್ಲ. ಅವರಿಗೆ ಆರ್ಥಿಕ ನೆರವನ್ನು ಮಾಡಿಕೊಡಬೇಕಾಗುತ್ತದೆ. ನಮ್ಮ ಸರಕಾರ ಗ್ರಾಮೀಣ ಪ್ರದೇಶದವರಿಗೆ ಆರ್ಥಿಕ ನೆರವನ್ನು ಮಾಡಿಕೊಡುವುದರಲ್ಲಿ ಬಹಳ ಹಿಂದೆ ಬಿದ್ದಿದೆ ಎಂದು ಹೇಳಿದರೆ ಅದು ತಪ್ಪೇನೂ ಅಲ್ಲ. ಮಾನ್ಯ ನಂಜುಂಡಸ್ವಾಮಿಯವರು ಹೇಳಿದಂತಹ ಮಾತನ್ನು ಇಲ್ಲಿ ಹೇಳಿದರೆ ತಪ್ಪಾಗುವುದಿಲ್ಲ ಅಂದರೆ ನಾನು ವಿರೋಧ ವ್ಯಕ್ತಪಡಿಸುತ್ತಿದ್ದೇನೆಂದು ಅರ್ಥ ಅಲ್ಲ, ಮಸ್ಲಿನ್ ಕ್ಲಾತನ್ನು ಉಗುರಿನಿಂದ ತೆಗೆಯುತ್ತಿದ್ದರು ಎಂದು ಮಾನ್ಯ ನಂಜುಂಡಸ್ವಾಮಿಯವರು ಹೇಳುತ್ತಿದ್ದರು. ಏನು ಮಸ್ಲಿನ್ ಕ್ಲಾತನ್ನೂ ಉಗುರಿನಿಂದ ಹೆಣೆಯುತ್ತಿದ್ದರು ಅಥವಾ ತೆಗೆಯುತ್ತಿದ್ದರು ಆ ವಿದ್ಯೆ ನಶಿಸಿ ಹೋಗಿದೆ. ಅದೇ ರೀತಿಯಿಂದ ನಮ್ಮ ದೃಷ್ಟಿ ಕೂಡ ಹಳ್ಳಿ ಕೈಗಾರಿಕೆಗಳ ಮೇಲೆ ಸಾಕಷ್ಟು ಕಡಿಮೆಯಾಗಿದೆ. ಪಟ್ಟಣಗಳಿಗೆ ಹೆಚ್ಚಿನ ಆಸಕ್ತಿ ಕೊಡುತ್ತಿದ್ದೇವೆ. ಇವು ನಮ್ಮ ಮೂಲಭೂತವಾದ ತಪ್ಪುಗಳು, ಉದಾಹರಣೆಗೆ ಹೇಳುವುದಾದರೆ, ನಮ್ಮ ರಾಜ್ಯವನ್ನು ಪಕ್ಕದಲ್ಲಿರತಕ್ಕಂತಹ ರಾಜ್ಯಗಳ ಜೊತೆಯಲ್ಲಿ ಹೋಲಿಸಿ ನೋಡಿದಾಗ ಅಂದರೆ ರಾಜಸ್ಥಾನ, ಗುಜರಾತ್‌ಗಳಲ್ಲಿ ಕಾಟೇಜ್ ಇಂಡಸ್ಟ್ರೀಸ್ ಯಾವ ರೀತಿ ಬಂದಿವೆ ಎಂದು ನೋಡಬೇಕು. ಅವರು ತಯಾರು ಮಾಡುತ್ತಿರುವಂತಹ ವಸ್ತುಗಳು ಅಂದರೆ ಕೈಯಲ್ಲಿ ನೇಯ್ದ ಬಟ್ಟೆಗಳು, ಸೀರೆಗಳು ವಿದೇಶಗಳಲ್ಲಿ ಪ್ರಸಿದ್ಧವಾದಂತಹ ವಸ್ತುಗಳಾಗಿರುವುದರಿಂದ ನಮ್ಮ ಸರಕಾರ ಅಂತಹ ಒಂದು ವ್ಯವಸ್ಥೆಯನ್ನು ನಮ್ಮಲ್ಲಿ ತರಬೇಕೆಂಬುದು ನಮ್ಮ ಅಭಿಪ್ರಾಯವಾಗಿದೆ. ಅದರಲ್ಲಿಯೂ ನಾವು ಯಾರಿಗೆ ಈ ಹಣವನ್ನು ಕೊಡಬೇಕು ಎಂಬುದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಸಾಕಷ್ಟು ನೇಯ್ಗೆ ಕಾರ್ಮಿಕರು ಇದ್ದಾರೆ. ಈ ಕಾರ್ಮಿಕರಿಗೆ ಸುಮಾರು ೧೦,೦೦೦ ರೂಪಾಯಿಗಳವರೆಗೆ ಲೋನ್ ಕೊಡುವಂತಹ ವ್ಯವಸ್ಥೆ ಮಾಡಬೇಕು. ಇವತ್ತು ಬ್ಯಾಂಕ್ ಮುಖ್ಯಸ್ಥರು, ಕಮರ್ಷಿಯಲ್ ಬ್ಯಾಂಕ್‌ನವರು ಕೂಡ ಅವರಿಗೆ ಗ್ಯಾರಂಟಿ ಕೊಡುತ್ತಿಲ್ಲ. ಮಂಡಲ ಪಂಚಾಯತಿಯು ಗ್ಯಾರಂಟಿ ತೆಗೆದುಕೊಂಡು, ಅಲ್ಲಿರುವಂತಹ ಸದಸ್ಯರ ಒಮ್ಮತದ ಅಭಿಪ್ರಾಯವನ್ನು ತೆಗೆದುಕೊಂಡು ಇಂತಹ ವ್ಯಕ್ತಿಗೆ ೧೦ ಸಾವಿರ ರೂಪಾಯಿಗಳವರೆಗೆ ಲೋನ್ ಅನ್ನು ಕೊಡಬೇಕು. ಕಾಟೇಜ್ ಇಂಡಸ್ಟ್ರೀಸ್ ಡೆವೆಲಪ್‌ಮೆಂಟ್‌ಗಾಗಲೀ, ಸಣ್ಣ ಕೈಗಾರಿಕೆಯನ್ನು ಡೆವೆಲಪ್ ಮಾಡುವುದಕ್ಕಾಗಲಿ ಯಾರು ಮುಂದೆ ಬರುತ್ತಾರೆ ಅಂತಹವರಿಗೆ ಮಂಡಲ ಪಂಚಾಯಿತಿ ಗ್ಯಾರಂಟಿ ಮೇಲೆ ಹಣವನ್ನು ಸರಕಾರ ಬಿಡುಗಡೆ ಮಾಡಬೇಕೆಂದು ಈ ಮೂಲಕ ಒತ್ತಾಯಿಸುತ್ತಿದ್ದೇನೆ. ಹಾಗಾದಾಗ ಮಾತ್ರ ನಮ್ಮ ಹಳ್ಳಿಗಳ ನಿಜವಾದ ಅಭಿವೃದ್ಧಿಯಾಗುತ್ತದೆ. ಆರ್ಥಿಕ ಪರಿಸ್ಥಿತಿ ಸುಗಮವಾಗಿ ಹಳ್ಳಿಯ ಜನಜೀವನ ಸುಗಮವಾಗುತ್ತದೆ. ಇದು ಸುಗಮವಾದಾಗ ಅವರಿಗೆ ನಾವು ಬೇರೆ ಯಾವ ಅನುಕೂಲತೆಯನ್ನು ಮಾಡಿಕೊಡಬೇಕಾಗಿಲ್ಲ, ಸಲಹೆ ಕೊಡುವುದು ಕೂಡ ಬೇಕಾಗಿಲ್ಲ, ರಸ್ತೆಗಳನ್ನಾಗಲಿ, ದೀಪಗಳನ್ನಾಗಲೀ ನಾವು ಕೊಡಬೇಕಾಗಿಲ್ಲ. ಅವರ ಮೇಲೆ ಇರುವಂತಹ ಸೆಸ್-ಅನ್ನು ಮಂಡಲ ಪಂಚಾಯತಿಯವರು ಕಲೆಕ್ಟ್ ಮಾಡಿ ಅದೇ ದುಡ್ಡಿನಿಂದ ಅಭಿವೃದ್ಧಿ ಹೊಂದುತ್ತಾರೆ ಎಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಮಾನ್ಯ ಮಂತ್ರಿಗಳು ಈ ಕಡೆಗೆ ಹೆಚ್ಚು ಗಮನ ಹರಿಸಬೇಕು, ಮತ್ತು ಹಳ್ಳಿಗಾಡಿನಲ್ಲಿ ಕುಡಿಯುವ ನೀರಿನ ತೊಂದರೆ ಬಹಳವಾಗಿ ಇದೆ, ಇದು ಅತಿ ಅವಶ್ಯ ಕೂಡ ಇದೆ, ಈ ಒಂದು ಆಯವ್ಯಯ ಪಟ್ಟಿಯನ್ನು ನೋಡಿದಾಗ ಬೆಂಗಳೂರಿಗೋಸ್ಕರ ೬೩ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದೇ ಸಮಯದಲ್ಲಿ ಗ್ರಾಮಾಂತರ ಪ್ರದೇಶಕ್ಕೆ ಎಷ್ಟು ಪ್ರಾವಿಷನ್ ಮಾಡಿದ್ದೇವೆಂದರೆ ಕೇವಲ ೧೭ ಕೋಟಿ ರೂಪಾಯಿ ಮಾಡಿದ್ದೇವೆ. ೬೮ ಕೋಟಿಯಲ್ಲಿ ಎಷ್ಟು ಜನಗಳನ್ನು ಇಲ್ಲಿ ತೃಪ್ತಿ ಪಡಿಸಬಹುದು ಅನ್ನುವಂತಹ ಲೆಕ್ಕವನ್ನು ಹಾಕಬೇಕಾಗುತ್ತದೆ. ಮತ್ತೆ ಬೇಡಿಕೆ ಬೇಡಿಕೆಗಳ ಬಗ್ಗೆ ಭಾಷಣ ಮಾಡುವಾಗ ಇನ್ನೂ ೨೫ ಕೋಟಿ ರೂಪಾಯಿಗಳನ್ನು ಹಳ್ಳಿಗಳಿಗೆ ಕೊಟ್ಟಿದ್ದೇವೆಂದು ಹೇಳಿದರು, ಸಂತೋಷ. ಅಂದರೆ ಒಟ್ಟು ೪೩ ಕೋಟಿ ರೂಪಾಯಿಗಳಾಗುತ್ತದೆ. ಇದರಲ್ಲಿ ನಾವು ಎಷ್ಟು ಜನರನ್ನು ಕಮಿಟ್‌ಮೆಂಟ್ ಮಾಡುತ್ತಿದ್ದೇವೆಂಬುದನ್ನು ವಿಚಾರ ಮಾಡಬೇಕಾಗಿದೆ. ನಾವು ಕೇಳುತ್ತಿರುವ ಮೂಲಭೂತ ಪ್ರಶ್ನೆ

೫.೦೦ ಪಿ. ಎಂ.

ಇಷ್ಟೆ, ಬೆಂಗಳೂರು ನಗರದ ನಾಗರೀಕರಿಗೆ ಶುದ್ಧವಾದ ಕುಡಿಯುವ ನೀರು ಬೇಕು. ಆದರೆ ಅದೇ ಹಳ್ಳಿಗಾಡಿನಲ್ಲಿ ಗ್ಯಾಸ್ಟ್ರೋ ಎಂಟ್ರೈಟೀಸ್, ಡಯೋರಿಯಾ ದಿಂದ ಇನ್ನೂ ಮುಂತಾದ ಹಲವಾರು ರೋಗಗಳಿಂದ ಬಳಲುತ್ತಿರುವ ಜನರಿಗೆ ಶುದ್ಧವಾದ ಕುಡಿಯುವ ನೀರಿನ ಅವಶ್ಯಕತೆ ಇದೆಯೋ, ಇಲ್ಲವೋ ಎಂಬುದನ್ನು ತಾವು ಹೇಳಬೇಕು. ಬೆಂಗಳೂರಿನ ಮ್ಯಾನ್ಯುಯಲ್ ಲೇಬರನ್ನು ಹಳ್ಳಿಗಾಡಿನ ಮ್ಯಾನ್ಯುಯಲ್ ಲೇಬರ್‌ನೊಂದಿಗೆ ಹೋಲಿಕೆ ಮಾಡಿದರೆ ಹಳ್ಳಿಗಳಲ್ಲಿ ಜನರು ಬಿಸಿಲಿನಲ್ಲಿ ಹೆಚ್ಚು ದುಡಿಯುತ್ತಾರೆ. ಇವತ್ತು ನಾವು ಹಳ್ಳಿಯ ಜನರಿಗೆ ಶುದ್ಧವಾದ ಕುಡಿಯುವ ನೀರನ್ನೊದಗಿಸುವುದರಲ್ಲಿ ವಿಫಲರಾಗುತ್ತಿದ್ದೇವೆಂದು ನನಗನ್ನಿಸುತ್ತದೆ. ಬೋರ್‌ವೆಲ್ ಮುಖಾಂತರ ನೀರನ್ನು ಕೊಡುವುದನ್ನು ನಾನು ಬಹಳಷ್ಟು ವಿರೋಧ ಮಾಡುತ್ತೇನೆ. ಎಷ್ಟೇ ದೂರದಿಂದಲಾದರೂ ಸರಿ, ನದಿಯಿಂದಲೋ, ಕೆರೆಯಿಂದಲೋ, ಹಳ್ಳದಿಂದಲೋ ನೀರನ್ನು ಪಂಪ್ ಮಾಡುವುದು ಯೋಗ್ಯವೆಂದು ನಾನು ಹೇಳಬಯಸುತ್ತೇನೆ. ಹಿಂದಿನ ಸರ್ಕಾರದವರು ಹಳ್ಳಿಗಳಲ್ಲಿ ಸಾವಿರಾರು ಬೋರ್‌ವೆಲ್‌ಗಳನ್ನು ಹಾಕಿದರು ಎಂದು ನಮ್ಮ ಮಾನ್ಯ ಸ್ನೇಹಿತರು ಹೇಳಿದರು. ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಂದೊಂದು ಹಳ್ಳಿಯಲ್ಲಿ ೧೦–೧೨ ಬೋರ್‌ಗಳನ್ನು ಹಾಕಿದರು. ಅದೂ ಕೂಡ ಎಷ್ಟು ರೇಡಿಯಸ್‌ನಲ್ಲಿ ಹಾಕಿದರು ಎಂದರೆ ಕೇವಲ ೧೦೦–೨೦೦ ಅಡಿಗಳ ಅಂತರದಲ್ಲಿ ಹಾಕಿದರು. ಆದರೆ ಹಿಂದೆ ಅಲ್ಲಿ ಎಷ್ಟು ನೀರು ಸಿಕ್ಕುತ್ತಿತ್ತು ಇವತ್ತು ಅಲ್ಲಿ ಅಷ್ಟು ನೀರು ಸಿಕ್ಕುತ್ತಿಲ್ಲ. ಏಕೆಂದರೆ, ಅಲ್ಲಿ ವಾಟರ್ ಟೇಬಲ್ ಕೆಳಗಡೆ ಹೋಗಿದೆ. Every one of us fear that even water will not last long. ಇದನ್ನು ತಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಈಗ ಇನ್ನು ಕೆಲವು ದಿನಗಳಲ್ಲಿ ಪೆಟ್ರೋಲ್ ಸಿಕ್ಕುವುದೇ ಇಲ್ಲ ಎನ್ನುವ ಅನುಮಾನ ಇದೆ. ಇದೇರೀತಿ ನೀರಿನ ವಿಚಾರದಲ್ಲೂ ಕೂಡ ಸಂಶಯ ಇದೆ. ಮುಂದೆ ಎಂದಾದರೂ ಒಂದು ದಿವಸ ಈ ನೀರನ್ನೂ ಕೂಡ ಕಳೆದುಕೊಳ್ಳುತ್ತೇವೇನೋ ಎಂಬ ಭಾವನೆ, ಸಂಶಯ ಬರುತ್ತಿದೆ. ಆದ್ದರಿಂದ ಸಾಧ್ಯವಾದಷ್ಟೂ ಹಳ್ಳದಿಂದ, ಕೆರೆಯಿಂದ, ನದಿಯಿಂದ ಪಂಪ್ ಮಾಡುವುದರ ಮುಖಾಂತರ ನೀರನ್ನೊದಗಿಸಲು ಯೋಚನೆ ಮಾಡಬೇಕೆಂದು ಹೇಳಬಯಸುತ್ತೇನೆ. ಹೆಚ್ಚಿನ ವಿಷಯಗಳ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಆದ್ದರಿಂದ ನಾನು ಮತ್ತೆ ಅದರ ಬಗ್ಗೆ ಮಾತನಾಡಲು ಹೋಗದೆ ರೂರಲ್ ಡೆವೆಲಪ್‌ಮೆಂಟ್ ವ್ಯವಸ್ಥೆ ಮತ್ತು ಸರ್ಕಾರದ ಬಗ್ಗೆ ಮಾತ್ರ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಕಾರಣ ನಾನೂ ಕೂಡ ಈ ಸದನಕ್ಕೆ ಬರುವುದಕ್ಕೆ ಮುಂಚೆ ಒಂದು ಜಿಲ್ಲಾ ಪರಿಷತ್ತಿನ ಸದಸ್ಯನಾಗಿದ್ದೆ. ಅಲ್ಲಿ ಸದಸ್ಯರಿಗೆ ಎಷ್ಟು ಬೆಲೆ ಇದೆ ಎಂಬುದನ್ನು ಯಾರಾದರೂ ಅರ್ಥಮಾಡಿಕೊಳ್ಳಬೇಕಾದರೆ ಮೊದಲು ಜಿಲ್ಲಾಪರಿಷತ್ತಿನ ಸದಸ್ಯರಾಗಬೇಕು. ದಾರಿಯಲ್ಲಿ ಹೋಗತಕ್ಕ ಭಿಕ್ಷುಕನಿಗಾದರೂ ಎಷ್ಟೋ ಬೆಲೆ ಇದೆ, ಆದರೆ ಜಿಲ್ಲಾಪರಿಷತ್ತಿನ ಸದಸ್ಯರಿಗೆ ಬೆಲೆ ಇಲ್ಲ ಎಂಬುದು ನನ್ನ ಸ್ಪಷ್ಟ ಅನುಭವ. ಅದರಲ್ಲೂ ವಿರೋಧಪಕ್ಷದವರಿಗೆ ಏನೇನು ಮರ್ಯಾದೆ ಇಲ್ಲ. ಅಲ್ಲಿ ಪಾಸ್ ಮಾಡತಕ್ಕ ರೆಸಲ್ಯೂಷನ್ಸ್ ನಮ್ಮ ಕಾಯಿದೆಗೆ ವಿರುದ್ಧವಾಗಿದ್ದರೂ ಕೂಡ ಅದನ್ನು ನಾವು ವಿರೋಧ ಮಾಡುವುದಕ್ಕಾಗುವುದಿಲ್ಲ. ನಾವು ಎಷ್ಟೇ ವಿರೋಧ ಮಾಡಿದರೂ ಕೂಡ ಅಲ್ಲಿ ರೆಸಲ್ಯೂಷನ್ಸ್ ಪಾಸ್ ಆಗುತ್ತಲೇ ಇರುತ್ತವೆ. ಅಲ್ಲಿಯ ಸೆಕ್ರೆಟರಿಗಳು ಅಬ್ಜಕ್ಷನ್ಸ್‌ನ್ನು ತೆಗೆಯುವುದಿಲ್ಲ. ನಾವು ಸರ್ಕಾರಕ್ಕೆ ಪತ್ರವನ್ನು ಬರೆದರೂ ಸರ್ಕಾರದಿಂದ ಉತ್ತರ ನಮಗೆ ಸಿಕ್ಕುತ್ತಿರಲಿಲ್ಲ. ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಲ್ಲಿ ಸಾಕಷ್ಟು ಮಿಸ್ ಅಪ್ರೋಪ್ರಿಯೇಷನ್ ಆಗಿದೆ. ಅಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿಲ್ಲವೆಂದು ನಾವು ಹೇಳುವುದಕ್ಕಾಗುವುದಿಲ್ಲ. ಉದಾಹರಣೆಗೆ ಹೇಳುತ್ತೇನೆ, ನನ್ನ ಜಿಲ್ಲೆಯಲ್ಲಿ ಹರ್ನಾಳ ಎಂಬ ಮಂಡಲ ಪಂಚಾಯಿತಿಯ ಪ್ರಧಾನ ಸುಮಾರು ಮೂರುವರೆ ಲಕ್ಷ ರೂಪಾಯಿಗಳನ್ನು ಕೇವಲ ೬ ತಿಂಗಳಲ್ಲಿ "ಗುಳುಂ" ಮಾಡಿದಮೇಲೆ ಅಲ್ಲಿದ್ದಂಥ ಎಲ್ಲ ಸದಸ್ಯರೂ ಅಂದರೆ ವಿರೋಧಪಕ್ಷದ ಸದಸ್ಯರು ಮತ್ತು ಆಡಳಿತ ಪಕ್ಷದ ಸದಸ್ಯರು ವಿರೋಧ ಮಾಡಿದರೂ ಪ್ರಯೋಜನವಾಗಲಿಲ್ಲ. ನಂತರ ಸ್ಟ್ಯಾಂಡಿಂಗ್ ಕಮಿಟಿಯವರು ಇದರ ಬಗ್ಗೆ ಎನಕ್ವೈರಿ ಮಾಡಬೇಕೆಂದು ನಾನು ವಿನಂತಿ ಮಾಡಿಕೊಂಡಾಗ ನನ್ನ ಅವಧಿ ಮುಗಿಯುವವರೆಗೂ ಅದನ್ನು ಎನ್‌ಕ್ವೈರಿ ಮಾಡಲಿಲ್ಲ. ಯಾವುದೇ ಆ್ಯಕ್ಷನ್‌ನ್ನೂ ತೆಗೆದುಕೊಳ್ಳಲಿಲ್ಲ. ಆ ಮಂಡಲ ಪಂಚಾಯಿತಿಯ ಪ್ರಧಾನ ಇವತ್ತಿನವರೆಗೂ ಮೆರೆಯುತ್ತಿದ್ದಾನೆ, ಅವನನ್ನು ಏನೂ ಮಾಡಿಲ್ಲ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ನಮ್ಮ ವಿಜಾಪುರ ಜಿಲ್ಲಾ ಪರಿಷತ್ತಿನ ಬಗ್ಗೆ ತಾವು ಬಹಳಷ್ಟು ವಿಚಾರ ಮಾಡಬೇಕು ಮತ್ತು ಅಲ್ಲಿಯ ಕಾಗದ ಪತ್ರಗಳನ್ನು ತಾವು ನೋಡಬೇಕು. ಅಲ್ಲಿ ಸಾಕಷ್ಟು ಇಲ್ಲೀಗಲ್ ಅಡ್ವಾನ್ಸಸ್ ಮಾಡಿದ್ದಾರೆ. Where there was no reason to advance the money

they have advanced. ಸಾಕಷ್ಟು ಪೇಮೆಂಟ್ಸ್ ಮಾಡಿದ್ದಾರೆ. ಸರ್ಕಾರದ ನಿಯಮದ ಪ್ರಕಾರ ಪರ್ಚೇಸ್ ಕಮಿಟಿ ಮಾಡಬೇಕೆಂದು ಆದೇಶ ಇರುವಾಗ ಅವರು ಆ ಕಮಿಟಿಯನ್ನು ಯಾವ ರೀತಿ ರಚನೆ ಮಾಡಿದರು ಎಂದರೆ ಜಿಲ್ಲಾ ಪರಿಷತ್ತಿನ ಸದಸ್ಯರು ಆ ಪರ್ಚೇಸ್ ಸಮಿತಿಯ ಸದಸ್ಯರಾದರು, ಏತಕ್ಕೆ ಆದರು ಎಂದರೆ ಕೇವಲ ಕಮಿಷನ್ ಹೊಡೆಯುವುದಕ್ಕೆ ಆದರು. ಇದರ ಬಗ್ಗೆ ನಾವು ಸರ್ಕಾರಕ್ಕೆ ಸ್ಪಷ್ಟೀಕರಣ ಕೇಳಿದಾಗ ಉತ್ತರ ಬರಲಿಲ್ಲ. Whether all such things can be foregone by the Government ಎಂದು ನಾನು ಇವತ್ತಿನ ದಿವಸ ಮಂತ್ರಿಗಳಿಗೆ ಕೇಳುತ್ತಿದ್ದೇನೆ. ಒಂದು ವಿಚಿತ್ರವಾದಂಥ ವಿಷಯವನ್ನು ವ್ಯಕ್ತಪಡಿಸುತ್ತೇನೆ. ಮಂಡಲ ಪಂಚಾಯಿತ್‌ಗಳಾಗಲಿ, ಮತ್ತು ಜಿಲ್ಲಾ ಪರಿಷತ್‌ಗಳಾಗಲಿ ಸರ್ಕಾರದಿಂದ ಯಾವುದೇ ನೆರವನ್ನು ಕೇಳಿದಾಗ ಅಥವಾ ಕಾಯಿದೆಗೆ ತಿದ್ದುಪಡಿಯಾಗಬೇಕಾದರೆ ಒಂದು ಮನವಿ ಕೊಟ್ಟು ಇಲ್ಲಿರತಕ್ಕಂಥ ಮಂತ್ರಿಗಳಿಗೆ ಮರ್ಯಾದೆ ಕೊಟ್ಟು ಅವರಿಗೆ ತೃಪ್ತಿಯಾಗುವಂತೆ ನಡೆದುಕೊಳ್ಳುತ್ತಾರೆ. ಕಾರಣ, harmony between the two institutions. ಆದರೆ ಇಲ್ಲಿರತಕ್ಕಂಥ ಮಂತ್ರಿಗಳು ಜಿಲ್ಲಾ ಪರಿಷತ್ ಮಂಡಲ್ ಪಂಚಾಯತ್‌ಗಳು ಸರಿಯಾಗಿ ನಡೆದುಕೊಳ್ಳಲಿ ಎನ್ನುವಂಥ ರೀತಿಯಲ್ಲಿ ಆದೇಶವನ್ನು ಕೊಟ್ಟಾಗ ಅದನ್ನು ಅವರು ಉಲ್ಲಂಘನೆ ಮಾಡುತ್ತಾರೆ. ಮತ್ತು ಅದರ ಬಗ್ಗೆ ಟೀಕೆ ಮಾಡುತ್ತಾರೆ. ಉದಾಹರಣೆಗೆ ಟ್ರಾನ್ಸ್‌ಫರ್ಸ್‌ನಲ್ಲಿ ತಾವು ನೋಡಬೇಕು. ಜಿಲ್ಲಾ ಪರಿಷತ್ತಿಗೆ ಒಂದು ರಿಕ್ರೂಟ್‌ಮೆಂಟ್ ಕಮಿಟಿಯನ್ನು ಕೊಟ್ಟಿರು. ಅದು ಟೀಚರ್ಸ್ ರಿಕ್ರೂಟ್‌ಮೆಂಟ್ ಕಮಿಟಿ. ಆ ಕಮಿಟಿಯ ಉದ್ದೇಶವೇನೆಂದರೆ ಮೆರಿಟ್ ಸ್ಟೂಡೆಂಟ್ಸ್ ಯಾರು ಇದ್ದಾರೋ ಅವರನ್ನು ತೆಗೆದುಕೊಂಡು ಟೀಚರ್ಸಾಗಿ ನೇಮಕಮಾಡಿಕೊಳ್ಳಬೇಕು. ಆದರೆ ಅಲ್ಲಿ ಆದಂಥ ಕಮಿಟಿಯೇ ಬೇರೆ. ಅಲ್ಲಿ ಏನಾಯಿತು ಅಂದರೆ, ಪ್ರತಿಯೊಬ್ಬ ಸದಸ್ಯನಿಗೂ ಒಂದು ಸೀಟ್ ರಿಸರ್ವೇಷನ್. ಒಬ್ಬ ಸ್ಟೂಡೆಂಟ್ ಹೇಗೇ ಇರಲಿ ಅವನು ಟೀಚರ್ ಆಗಿ ಆಯ್ಕೆಯಾಗುತ್ತಿದ್ದ this is practically what I have seen with my own eyes....ಇಂಥ ನೇಮಕಾತಿಗಳನ್ನು ಎಷ್ಟು ಮಾಡಿಕೊಂಡರು. ಆಡಳಿತ ಪಕ್ಷದಲ್ಲಿರುವವರಿಗೆ ನಾಲ್ಕು ಸೀಟು. ವಿರೋಧಪಕ್ಷದಲ್ಲಿರುವವರಿಗೆ ಒಂದು ಸೀಟು. ಅಧ್ಯಕ್ಷರಿಗೆ ೨೫–೩೦ ಸೀಟುಗಳು, ಎಂ.ಎಲ್.ಎ.ಗಳಿಗೆ ೪ ಸೀಟುಗಳು. ನಾನು ತಮಗೆ ಪ್ರಶ್ನೆ ಮಾಡುತ್ತಿದ್ದೇನೆ. when the standard of our recruitment has come to such a stage, whether we can expect good education from them, teaching from them, moral values from them. ಅವರು ಏನಾದರೂ ಒಳ್ಳೆಯ ರೀತಿಯಿಂದ ಮಕ್ಕಳಿಗೆ ಪಾಠವನ್ನು ಕಲಿಸಬಹುದೇ ಎಂಬ ಮೂಲಭೂತವಾದ ಪ್ರಶ್ನೆ ಉದ್ಭವವಾಗುತ್ತದೆ. ೬ ತಿಂಗಳಿಂದ ಸ್ಕೂಲ್ ಬಾಗಿಲನ್ನು ಹಾಕಿದ್ದರು. ಕಾರಣವೇನೆಂದರೆ, ಇವತ್ತಿನ ದಿವಸ ಒಬ್ಬ ಟೀಚರನ್ನು ಒಂದು ಕಡೆ ಪೋಸ್ಟಿಂಗ್ ಮಾಡಿದ್ದರೆ ಮಾರು ದಿವಸ ಇನ್ನೊಂದು ಕಡೆ ಪೋಸ್ಟಿಂಗ್ ಮಾಡುವುದು ಮತ್ತು ಗಂಡ ಹೆಂಡಿರನ್ನು ಬೇರೆ ಬೇರೆ ಕಡೆ ಹಾಕುವುದು. ಗಂಡಹೆಂಡಿರ ಕಪಲ್‌ಜಾಯಿನಿಂಗ್ ಕೇಸಸ್ ಇಂಟರ್ ಡಿಸ್ಟ್ರಿಕ್ಟ್ ಟ್ರಾನ್ಸ್‌ಫರ್ಸ್ ಇದ್ದಾಗ ಮುಖ್ಯಮಂತ್ರಿಗಳು ಒಪ್ಪಿಗೆ ಕೊಟ್ಟಾಗ ಕೂಡ ಯಾವ ಜಿಲ್ಲಾ ಪರಿಷತ್‌ನವರೂ ಬಿಟ್ಟು ಕೊಡುತ್ತಿರಲಿಲ್ಲ. ಇದರಲ್ಲಿ ಬಹಳ ವಿಚಾರಗಳು ಅಡಗಿವೆ. ನಾವು ಕೇಳಿದಾಗ ಏನು ಉತ್ತರವನ್ನು ಕೊಡುತ್ತಿದ್ದರೆಂದರೆ, ನಮ್ಮ ಜಿಲ್ಲೆಯಲ್ಲಿ ಇರತಕ್ಕಂಥ ಒಬ್ಬ ವ್ಯಕ್ತಿಗೆ ಪ್ರಾತಿನಿಧ್ಯವನ್ನು ಕೊಡಬೇಕಾಗುತ್ತದೆ. ಅವನನ್ನು ರಿಕ್ರೂಟ್‌ಮೆಂಟ್ ಮಾಡಿಕೊಳ್ಳಬೇಕಾಗುತ್ತದೆ ಎಂದು ಹೇಳುತ್ತಿದ್ದರು. ಆಂದರೆ ಅವರಿಂದ ಸಿಗುವಂಥ ೨೦ ಸಾವಿರ ರೂಪಾಯಿ ಕಮಿಷನ್ ಬಗ್ಗೆ ಅವರಿಗೆ ಲಕ್ಷ್ಯವೇ ಹೊರತು ಅವರು ಸುಗಮ ಜೀವನ ಸಾಗಿಸಲಿ ಎನ್ನುವಂಥ ವಿಚಾರ ಅವರಲ್ಲಿರಲಿಲ್ಲ. ಇದರ ಬಗ್ಗೆ ನಾನು ಹೆಚ್ಚಿಗೆ ಟೀಕೆಯನ್ನು ಮಾಡುವುದಿಲ್ಲ. ಈ ರೂರಲ್ ಡೆವಲಪ್‌ಮೆಂಟ್ ಪಂಚಾಯತ್‌ರಾಜ್ಯ ಕಾಯಿದೆಗಳು ಏನು ಇವೆ, I feel they are very ambiguous ಇದರ ಬಗ್ಗೆ ತನಿಖೆ ಮಾಡಬೇಕು. ಈಗಾಗಲೇ ನಮ್ಮ ಹಿರಿಯರು ಒಂದು ಡಿಸಿಷನ್ ತೆಗೆದುಕೊಂಡಿದ್ದಾರೆ. ತಿದ್ದುಪಡಿ ಮಾಡುವುದಕ್ಕೆ ಸಾಕಷ್ಟು ವಿಷಯಗಳು ಇವೆ. ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದವರು ಜೊತೆಯಲ್ಲಿ ಕುಳಿತುಕೊಂಡು ಮಾಡುತ್ತೇವೆಂದು ಹೇಳಿದ್ದಾರೆ. ನಮ್ಮ ಸದ್ಯೈವ ಈ ಒಂದು ಒಳ್ಳೆಯ ಕಾನೂನು ಜಾರಿಗೆ ಬರಲಿ ರೂರಲ್ ಡೆವಲಪ್‌ಮೆಂಟ್ ಎನ್ನುವುದಕ್ಕೆ ನಿಜವಾದ ಅರ್ಥ ನಮಗೆ ಸಿಗಲಿ ಎಂದು ಹೇಳುತ್ತೇನೆ. ರೂರಲ್ ಡೆವಲಪ್‌ಮೆಂಟ್ ಎಂದರೆ ಅಗ್ರಿಕಲ್ಚರ್, ಹಾರ್ಟಿಕಲ್ಚರ್, ಡೈರಿ ಡೆವಲಪ್‌ಮೆಂಟ್ ಇದೆಲ್ಲ ರೂರಲ್ ಡೆವಲಪ್‌ಮೆಂಟ್‌ಗೆ ಬರತಕ್ಕಂಥ ಪ್ರೋಗ್ರಾಂಗಳು. ಮುಖ್ಯವಾಗಿ ನಾನು ಡೈರಿ ಡೆವಲಪ್‌ಮೆಂಟ್ ಬಗ್ಗೆ ಹೇಳುತ್ತೇನೆ. ಈಗ ಕೆ.ಎಂ.ಎಫ್.ನವರು ಅತಿ ಪ್ರಮುಖ್ಯವಾದಂಥ ಪಾತ್ರವನ್ನು ವಹಿಸುತ್ತಿದ್ದಾರೆ. ಆದರೆ ಅವರ ಮಿಲ್ಕ್ ರೂಟ್ಸ್ ಸೀಮಿತವಾಗಿರುತ್ತದೆ. ಎಲ್ಲಿಯವರೆಗೆ ನೀವು ಮಿಲ್ಕ್ ರೂಟ್ಸ್‌ನ್ನು ಎಕ್ಸ್‌ಟೆಂಡ್ ಮಾಡುವುದಿಲ್ಲವೋ ನಮ್ಮ ಹಳ್ಳಿಗಳು ಆ ಮಿಲ್ಕ್ ರೂಟ್ಸ್ ಒಳಗೆ ಸೇರ್ಪಡೆಯಾಗು

ವುದಿಲ್ಲವೋ ಅಲ್ಲಿಯವರೆಗೆ ಬ್ಯಾಂಕಿನವರು ನಮಗೆ ಸಾಲ ಕೊಡುವುದಿಲ್ಲ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ನನ್ನ ಊರಿನಿಂದ ಮುದ್ದೇಬಿಹಾಳ ತಾಲ್ಲೂಕು ಕೇವಲ ೨೦ ಕಿ.ಮೀ. ದೂರದಲ್ಲಿದ್ದರೂ ಕೂಡ ಡಿಮ್ಯಾಂಡ್ ಸಾಕಷ್ಟು ಇದ್ದರೂ ಕೂಡ ಅದು ಮಿಲ್ಕ್ ರೂಟ್ ಇಲ್ಲದಿರುವುದರಿಂದ ನನಗೆ ಡೈರಿ ಡೆವಲಪ್‌ಮೆಂಟ್‌ಗೆ ಲೋನ್ ಸಿಗುತ್ತಿಲ್ಲ. ನಮ್ಮ ಮತ್ತೊಬ್ಬ ಸದಸ್ಯರು ನಿನ್ನೆ ಹೇಳಿದರು, ಬಹುಶಃ ಮಾನ್ಯ ಚಿಕ್ಕೇಗೌಡರು ಹೇಳುತ್ತಿದ್ದರು. ಬೆಂಗಳೂರು ನಗರಕ್ಕೆ ಕಾವೇರಿ ನೀರನ್ನು ತರುವುದು ಕಷ್ಟ, ನಮಗೆ ಹಾಲು ತರುವುದು ಬಹಳ ಸರಳವಾಯಿತು ಎನ್ನುವ ಮಾತನ್ನು ವ್ಯಕ್ತಪಡಿಸಿದ್ದರು. ಇದು ನೂರಕ್ಕೆ ನೂರರಷ್ಟು ಸತ್ಯ. ನಮ್ಮಲ್ಲಿ ಹಾಲು ಉತ್ಪಾದನೆ ಮಾಡುವಂತಹ ಅಭಿರುಚಿ ಜಾಸ್ತಿಯಾಗಿದೆ. ಇದಕ್ಕೆ ಸರ್ಕಾರ ಮುಂದೆ ಬರಬೇಕು, ಇಂಥ ಆರ್ಗನೈಸೇಷನ್ ಮುಂದೆ ಬರಬೇಕು, ಆಗ ಮಾತ್ರ ನಮ್ಮಿಂದ ಒಳ್ಳೆಯ ವ್ಯವಸ್ಥೆ ಆಗಲು ಸಾಧ್ಯ. ಅದಾದ ನಂತರ ಕೆ.ಎಂ.ಎಫ್.ನವರ ಕೆಲವು ಕಂಡೀಷನ್ಸ್ ಇದ್ದವು. ಅವರು ವಾರಕ್ಕೊಮ್ಮೆ ಪ್ರತಿಯೊಂದು ಹಳ್ಳಿಗೆ ಮೊಬೈಲ್ ವ್ಯಾನ್ ತೆಗೆದುಕೊಂಡು ಹೋಗಿ ಪಶುಗಳನ್ನು ಚೆಕ್ ಮಾಡಿ ಅದಕ್ಕೆ ಬೇಕಾದ ಔಷಧಿಗಳನ್ನು ಕೊಡುತ್ತಿದ್ದರು. ಈಗ ತಿಂಗಳಿಗೊಮ್ಮೆ ಎರಡು ತಿಂಗಳಿಗೊಮ್ಮೆ ಬಿಜಾಪುರ ಜಿಲ್ಲೆಯಲ್ಲಿ ವ್ಯಾನ್ ಹೋಗುತ್ತಿದೆ. ಆದ್ದರಿಂದ ಮೊದಲು ಯಾವ ರೀತಿ ಪ್ರತಿ ವಾರ ವ್ಯಾನ್ ಹೋಗುತ್ತಿತ್ತು, ಅದೇ ರೀತಿ ಹೋಗುವ ಹಾಗೆ ಕಾರ್ಪೊರೇಷನ್ನಿಗೆ ಮಾನ್ಯ ಮಂತ್ರಿಗಳು ಆದೇಶ ಕೊಡಬೇಕೆಂದು ಹೇಳುತ್ತೇನೆ. ಇನ್ನು ವಿದೇಶದಿಂದ ತಂದಿರುವ ಕೆಲವು ಬ್ರೀಡ್ಸ್ ಇಲ್ಲಿನ ವಾತಾವರಣಕ್ಕೆ, ಹವಾಮಾನಕ್ಕೆ ಹೊಂದಿಕೊಳ್ಳುತ್ತಿಲ್ಲ. ಅಂಥ ಬ್ರೀಡನ್ನು ತಂದು ಇಲ್ಲಿ ಸಾಕು ಅಂದರೆ ಅದು ನಿರುಪಯುಕ್ತವಾಗುತ್ತದೆ. ಇತ್ತೀಚೆಗೆ ಒಂದು ರೆಡ್ ಡೇ ಎಂಬ ತಳಿಯನ್ನು ತಂದರು. ಅದನ್ನು ಎಕ್ಸ್‌ಪರಿಮೆಂಟಲ್ ಪರ್ಪಸ್‌ಗೆ ಎಂದು ೪–೫ ಮಂದಿ ರೈತರಿಗೆ ಕೊಟ್ಟರು. ಆ ನಷ್ಟವನ್ನು ಯಾರು ಅನುಭವಿಸಬೇಕು? ಆ ತಳಿಗಳ ಹಾಲು ಕುಡಿಯಲು ನಮಗೆ ಸಾಧ್ಯವಾಗಲಿಲ್ಲ. ಅವು ಕೇವಲ ಕೆಲವೇ ತಿಂಗಳಲ್ಲಿ ಸತ್ತುಹೋದವು. ಅದಕ್ಕೆ ಬದಲಾಗಿ ನಮ್ಮಲ್ಲಿ ಜವಾರಿ ತಳಿ ಮತ್ತು ಗುಜರಾತಿ ತಳಿ ಮತ್ತು ಮೋರೆ ಎಂಬ ತಳಿಗಳು ಇನಿವೆ ಇವು ನಮ್ಮ ಭಾಗದಲ್ಲಿ ಸಾಕತಕ್ಕ ತಳಿಗಳಾಗಿವೆ. ಇವುಗಳ ಕ್ರಾಸ್ ಬ್ರೀಡಿಂಗ್ ಅನ್ನು ಹೆಚ್ಚಿಗೆ ಮಾಡಬೇಕು. ಇದಕ್ಕೆ ಮುಖ್ಯವಾಗಿ ಮಂಡಲ ಪಂಚಾಯಿತ್ತಿಗೊಂದು ವೆಟರ್ನರಿ ಆಸ್ಪತ್ರೆಯನ್ನು ತೆರೆಯಬೇಕು. ಇವತ್ತಿನ ದಿವಸ ಏನಾಗಿದೆ ಎಂದರೆ, ೨೫–೩೦ ಕಿ.ಮೀ. ದೂರಕ್ಕೆ ಮನುಷ್ಯ ಬಸ್‌ನಲ್ಲಿ ಅಥವಾ ಸೈಕಲ್‌ನಲ್ಲಿ ಹೋಗಬಹುದು. ಅಷ್ಟು ದೂರ ಅಸ್ವಸ್ಥವಾಗಿರತಕ್ಕ ದನಕರುಗಳನ್ನು ನಡೆಸಿಕೊಂಡು ಹೋದರೆ ಅವು ಬದುಕುವುದು ಕಷ್ಟ. ಆದ್ದರಿಂದ ಮಂಡಲ ಪಂಚಾಯಿತ್ತಿಯ ವ್ಯಾಪ್ತಿಯಲ್ಲಿ ಒಂದು ವೆಟರ್ನರಿ ಆಸ್ಪತ್ರೆ ಇದ್ದರೆ ಅಲ್ಲಿನ ಸದಸ್ಯರ ನಿಗಾ ಇರುವುದರಿಂದ ಈ ಕಾರ್ಯಕ್ರಮ ಸಫಲವಾಗುತ್ತದೆಂದು ಹೇಳಲಿಚ್ಛಿಸುತ್ತೇನೆ.

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಬಿಜಾಪುರ ಜಿಲ್ಲೆಗೆ ಸಾಕಷ್ಟು ಚಿಲ್ಲಿಂಗ್ ಸೆಂಟರ್‌ಗಳು ಬೇಕಾಗಿವೆ. ಮುಖ್ಯವಾಗಿ ಗಲಗಲಿಗೆ ಬೇಕಾಗಿದೆ. ಗಲಗಲಿಗೆ ಸ್ಯಾಂಕ್ಷನ್ ಆಗಿತ್ತು. ಗಲಗಲಿ ಅಂದರೆ ಕೃಷ್ಣ ಮೇಲ್ದಂಡೆ ಮೇಲೆ ಬರುವ ಒಂದು ಹಳ್ಳಿ. ಆ ಹಳ್ಳಿಯ ವ್ಯವಸಾಯ ಏನೆಂದರೆ, ಪಶು ಸಂಗೋಪನೆ. ಅಲ್ಲಿನ ಜನ ಡೈರಿ ಫಾರಂಸ್ ಇಟ್ಟುಕೊಂಡು ಜೀವನ ಮಾಡುತ್ತಾರೆ. ಈ ಗಲಗಲಿಗೆ ಯಾವ ಕಾರಣದಿಂದ ಚಿಲ್ಲಿಂಗ್ ಸೆಂಟರ್ ಅನ್ನು ಕೊಡದೆ ಬದಲಾಯಿಸಿದರು ಎಂಬುದನ್ನು ತಾವು ಹೇಳಬೇಕು, ಇವತ್ತು ವ್ಯಾಕ್ಸಿನ್ ಅನ್ನು ಏನು ಸರಬರಾಜು ಮಾಡುತ್ತಿದ್ದಾರೆ ಅದನ್ನು ಮೊದಲು ಯಾವ ರೀತಿ ಮಾಡುತ್ತಿದ್ದರು ಆ ರೀತಿ ಮಾಡುತ್ತಿಲ್ಲ. ಎಫ್.ಎಂ. ಅಂಡ್ ಡಿ. ಎಂಬ ವ್ಯಾಕ್ಸಿನ್ ಏನು ಬರುತ್ತದೆ ಅದು ಮಾರ್ಕೆಟ್‌ನಲ್ಲೂ ಸಿಗುವುದಿಲ್ಲ, ಆಸ್ಪತ್ರೆಯಲ್ಲೂ ಸಿಗುವುದಿಲ್ಲ. ಹಾಗಾದರೆ ರೈತ ಎಲ್ಲಿಗೆ ಹೋಗಬೇಕು? ಅದಕ್ಕೆ ಬೇಕಾದರೆ ಚಾರ್ಜ್ ಮಾಡಿ, ದುಡ್ಡು ಕೊಡುವುದಕ್ಕೆ ಸಿದ್ಧರಾಗಿದ್ದೇವೆ. ನಮಗೆ ಒಟ್ಟಿನಲ್ಲಿ ಇನ್‌ಟೈಂ ವ್ಯಾಕ್ಸಿನ್ ಸಿಗಬೇಕೆಂದು ನಾನು ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ವೆಟರ್ನರಿ ಆಸ್ಪತ್ರೆಗಳನ್ನು ಬೆಂಗಳೂರು ಬಿಟ್ಟು ಬೇರೆ ಕಡೆ ಮಂತ್ರಿಗಳು ಹೋಗಿ ನೋಡಬೇಕು. ಅವು ಕಸಾಯಿಖಾನೆ ರೀತಿ ಇವೆ. ಅಲ್ಲಿ ಒಂದು ಕುರಿ ಸತ್ತಿರುತ್ತದೆ, ಒಂದು ದನ ಒದ್ದಾಡುತ್ತಿರುತ್ತದೆ, ಕೈಯನ್ನು ಕೂಡ ಸರಿಯಾಗಿ ತೊಳೆದುಕೊಳ್ಳದೆ ವೈದ್ಯರು ಚಿಕಿತ್ಸೆ ಮಾಡುತ್ತಿರುತ್ತಾರೆ. They do not sterilise the equipment that are being used for administering drugs. This has been the practice in our veterinary hospitals. Some measures have to be taken to see that cleanliness is also maintained there. ಹೈಜಿನ್ ಇರಲೇಬೇಕು. ದನ ಕೂಡ ಒಂದು ಪ್ರಾಣಿ. ಅದರ ಬಗ್ಗೆ ಕೆಲವು ಕಡೆ ಎಷ್ಟು ಕಠೋರವಾಗಿ ವರ್ತನೆ

ಮಾಡುತ್ತಾರೆಂದರೆ, they dont' even give sedatives to animals while they amputate ದನ ಬಿದ್ದು ಒದ್ದಾಡುತ್ತಾ ಇರುತ್ತದೆ. ೧೦ ಮಂದಿ ಹಿಡಿದುಕೊಂಡು ಕಾಲು ಕಡಿಯುತ್ತಾರೆ. ನಮ್ಮ ಮಾನವೀಯತೆ ಎಲ್ಲಿ ಹೋಗಿದೆ ನೋಡಿ. **This is what is happening in villages and the Minister should take serious note of** such things ಇನ್ನು ಅವರದೇ ಖಾತೆಯಾದ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಬರುತ್ತೇನೆ. ನಮ್ಮ ಅರಣ್ಯ ಸಂಪತ್ತು ನಮ್ಮ ಸಂಪನ್ಮೂಲದ ಸ್ವತ್ತು. ಆದರೆ ಅದನ್ನು ಎಷ್ಟು ಹಿಡಿತದಲ್ಲಿಟ್ಟುಕೊಂಡಿದ್ದಾರೆ ಎಂಬುದನ್ನು ವಿಚಾರ ಮಾಡಬೇಕು. ಬಳ್ಳಾರಿ ಜಾಲಿ ಮತ್ತು ಜೀನಿ ಜಾಲಿ ಎಂದು ನಮ್ಮಲ್ಲಿ ಹೇಳುತ್ತಾರೆ. ಅದನ್ನು ಕಡಿದು ನಾಲ್ಕು ರೊಟ್ಟಿ ಮಾಡಿಕೊಳ್ಳೋಣ ಎಂದು ಬಡವ ಹೋದರೆ ಅವನ ಮೇಲೆ ಕೇಸ್ ಹಾಕುತ್ತಾರೆ, ಆದರೆ ಕಾಡು ಲೂಟಿ ಮಾಡುವವರನ್ನು ಹಿಡಿಯುವುದಕ್ಕಾಗುವುದಿಲ್ಲ ಕಾಡು ಲೂಟಿ ಮಾಡುವವರು ಎದುರಿಗೆ ಬಂದರೆ ನಮಸ್ಕಾರ್ರೀ ಸಾಹೇಬ್ರೇ ಎಂದು ಹೇಳುವ ಪರಿಸ್ಥಿತಿ ಇದೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, we are lacking in adminstration. ಬಂಡೀಪುರ ಅರಣ್ಯದಲ್ಲಿ ಚಿಗರೆ, ಜಿಂಕೆಗಳು ಕಾಟೇಜಸ್ ಮೇಲೆ ಮಲಗಿಕೊಳ್ಳುವುದಕ್ಕೆ ಬರುತ್ತವೆ. ನಾನು ಅಧಿಕಾರಿಗಳನ್ನು ಇವು ಏತಕ್ಕೆ ಹೀಗೆ ಬರುತ್ತವೆ ಎಂದು ಕೇಳಿದೆ. ಅದಕ್ಕೆ ಅವರು ''ಏನು ಮಾಡುವುದು ಅವು ತಿನ್ನುವುದಕ್ಕೆ ಗಿಡ ಇಲ್ಲ. ಏನೂ ಇಲ್ಲ'' ಎಂದು ಹೇಳಿದರು. It has become a barren land. ಅಲ್ಲೊಂದು ಇಲ್ಲೊಂದುಗಿಡ ಇದೆ. ನಾನು ಬೇಡಿಕೊಳ್ಳುವುದೇನೆಂದರೆ, ದಯವಿಟ್ಟು ಗಿಡ ಕಡಿಯುವುದರ ಬಗ್ಗೆ ನಿಯಂತ್ರಣ ತನ್ನಿ. ಅದರಲ್ಲೂ ಅರಣ್ಯ ಪ್ರದೇಶದಲ್ಲಿ ಗಿಡ ಕಡಿಯುವುದರ ಬಗ್ಗೆ ನಿಯಂತ್ರಣ ತನ್ನಿ. ಕೋಲ್‌ಗೋಸ್ಕರ, ಸೌದೆಗೋಸ್ಕರ ಕಡಿದುಕೊಂಡು ಹೋಗುವ ಬಳ್ಳಾರಿ ಜಾಲಿ ಮರಗಳ ಮೇಲೆ ನಿರ್ಬಂಧ ಹಾಕುವುದು ಬೇಡ. ಇಲ್ಲಿ ಸಾಗುವಾನಿ ಮತ್ತು ಗಂಧದ ಮರಗಳನ್ನು ಕಡಿಯುತ್ತಾರೆ. ಆದರೆ ಇವರಿಗೆಲ್ಲಾ ಮಾಫಿ. ದಯವಿಟ್ಟು ಇದರ ಮೇಲೆ ನಿಯಂತ್ರಣ ತನ್ನಿ. ಬಳ್ಳಾರಿ ಜಾಲಿ ಯಾರು ಕಡಿಯುತ್ತಾರೆ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಬಿಡಿ. ಯಾರಾದರೂ ಬಡವರು ಜಾಲಿ ಗಿಡ ಕಡಿದರೆ ಅವರ ಮೇಲೆ ಕೇಸ್ ಹಾಕುತ್ತಾರೆ. ಆದರೆ ಇಲ್ಲಿ ಯಾವ ರೀತಿ ಹಾಕುತ್ತಾರೋ ನನಗೆ ಅರ್ಥವಾಗುತ್ತಾ ಇಲ್ಲ. ಅತಿ ಮುಖ್ಯವಾದ ವಿಚಾರವೊಂದನ್ನು ಹೇಳುತ್ತೇನೆ. ನಮ್ಮ ಕರ್ನಾಟಕ ಪಾಲಿಫೈಬರ್ ಕಂಪನಿಗೆ ೭೫ ಸಾವಿರ ಎಕರೆಯನ್ನು ಹೋದ ಸರ್ಕಾರ ಕೊಟ್ಟಿತ್ತು. ಯಾವ ಕಾರಣದಿಂದ ಕೊಟ್ಟಿತ್ತು? ಒಂದು ಕಡೆ ಡೀಸೆಂಟ್ರಲೈಸ್ ಆಫ್ ಪವರ್ ಆಗಬೇಕು, ಗ್ರಾಮೀಣ ಅಭಿವೃದ್ಧಿ ಆಗಬೇಕು ಲ್ಯಾಂಡ್ ರೆಫಾರ್ಮ್ಸ್ ಆಕ್ಟ್ ಜಾರಿಗೆ ತರಬೇಕೆಂದು ಭಾಷಣ ಮಾಡುತ್ತಾಲ್ಲಿ. ಇನ್ನೊಂದು ಕಡೆ ಕ್ಯಾಪಿಟಲಿಸ್ಟ್‌ಗೆ ತಲೆ ಬಗ್ಗಿಸಿ ಕೆ.ಪಿ.ಎಲ್. ನವರ ಪ್ರಾಜೆಕ್ಟಿಗೆ ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೆ, ಮಲ್ಟಿ ಮಿಲಿಯನೇರ್‌ಗಳನ್ನು ಬಿಲಿಯನೇರ್ ಮಾಡುತ್ತಾರೆ. ಹೋದ ಸರ್ಕಾರದಲ್ಲಿ ಆದಂಥ ಘಟನೆ ಇದು. ಇದರ ಬಗ್ಗೆ ಸರ್ಕಾರ ತನಿಖೆ ನಡೆಸಬೇಕು. ಹೋದ ಸರ್ಕಾರದವರು ಒಂದು ಎಕರೆ ಜಮೀನಿಗೆ ಒಂದು ವರ್ಷಕ್ಕೆ ಕೇವಲ ಒಂದು ರೂಪಾಯಿ ಲೀಸ್ ಮೇಲೆ ಕೊಟ್ಟಿದ್ದಾರೆ. ಇದನ್ನು ಅವರು ಯಾರ ಸ್ವತ್ತು ಎಂದು ಕೊಟ್ಟರು? They have violated rules framed by the Government of India. The Central Act clearly states about it Under the rules of the National Forest Conservation Act of 1981 if you want to lease out the Forest land you should take prior permission of the Government of India, which they have denied, They have gone to give licence to KPL. Now, what is happeneing to KPL? ಆ ಕೈಗಾರಿಕೋದ್ಯಮಿ ಇಲ್ಲಿ ಬರಬೇಕು, ಪಾಲಿಫೈಬರ್ ಅಲ್ಲಿ ತಯಾರು ಮಾಡಬೇಕು, ಮಾರ್ಕೆಟ್ಟಿನಲ್ಲಿತನಗೆ ಇಚ್ಛೆ ಬಂದಹಾಗೆ ಮಾರಿಕೊಳ್ಳಬೇಕು. ಇಲ್ಲಿ ಹತ್ತಿ ಬೆಳೆಯುವಂಥ ರೈತ ಬೊಬ್ಬೆ ಹೊಡೆಯುತ್ತಾ ಕೂರಬೇಕು. Is it the system, Is this the way of encouraging farmers? This is a pure pollution of mind and pollution of environment also. ನಮ್ಮ ಅರಣ್ಯ ಮಂತ್ರಿಗಳು ಇದರ ಬಗ್ಗೆ ಬಹಳಷ್ಟು ಗಮನ ಹರಿಸಬೇಕು. ಯಾವ ಕಾರಣದಿಂದ ಈ ಅಗ್ರಿಮೆಂಟ್ ಆಯಿತು? ಇದು ಒಂದನೆಯದು. ಇದರಿಂದ ನಮ್ಮ ಸರ್ಕಾರಕ್ಕೆ ಆಗುತ್ತಿರುವ ಲಾಭ ಎಷ್ಟು ಎನ್ನುವುದನ್ನು ವಿಶ್ಲೇಷಣೆ ಮಾಡಬೇಕು. ಇದರ ತಪ್ಪುಗಾರರು ಯಾರ್ಯಾರು ಇದ್ದಾರೆ ಎಂಬುದನ್ನು ತಾವು ಹಿಡಿಯಬೇಕು. ನಾನು ಕೇಳುತ್ತೇನೆ. ಈ ೭೫ ಸಾವಿರ ಎಕರೆಯನ್ನು ಇವತ್ತಿನ ದಿವಸ ಬಡವರಿಗೆ ವ್ಯವಸಾಯ ಮಾಡುವುದಕ್ಕೋಸ್ಕರ ಕೊಟ್ಟಿದ್ದಾರೆ we would have rehabilitated 40,000 families. ೪೦ ಸಾವಿರ ಮನೆತನಗಳಿಗೆ ನಾವು ಬೆಳಕನ್ನು ಕೊಡುತ್ತಿದ್ದೆವು. where our morals go? ನಮ್ಮ ನಿಲುವು ಏನು ಎಂದು ನಾನು ಪ್ರಶ್ನೆ ಮಾಡು

ತ್ತಿದ್ದೇನೆ. ಇವತ್ತಿನ ದಿವಸ ಹರತಾಳ ಆಗುತ್ತಿದೆ, ಸ್ಟ್ರೈಕ್ ಆಗುತ್ತಿದೆ. ಸತ್ಯಾಗ್ರಹದ ಆಗುತ್ತಿದೆ. ಇದರಲ್ಲಿ ವಿರೋಧ ಪಕ್ಷದ ಒಬ್ಬ ಸ್ನೇಹಿತರು ಪ್ರಶ್ನೆ ಮಾಡುತ್ತಿದ್ದಾರೆ. ಅವರೂ ಇದರ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದಾರೆ. ನಮ್ಮ ಸ್ನೇಹಿತರೊಬ್ಬರು ಪ್ರತಿಭಟನೆ ಮಾಡುತ್ತಿದ್ದಾರೆ. ಆದರೆ ನಮ್ಮ ಸರ್ಕಾರ ಇದರ ಬಗ್ಗೆ ಗಮನಹರಿಸುತ್ತಿಲ್ಲ. You should go into all the details of such deals and expose everyone who has involved in such deals, ಯಾರೇ ಇರಲಿ, ಯಾವ ಕಾಲದಲ್ಲಿ ಆಗಿದೆ ಎಂಬುದು ಮುಖ್ಯವಲ್ಲ, ಆಗಿರುವಂತಹ ನಷ್ಟ ಏನುಇದೆ, ಅದು ನಮ್ಮ ಕರ್ನಾಟಕಕ್ಕೆ ಆಗಿದೆ. ಪ್ರತಿಯೊಬ್ಬ ನಾಗರಿಕನ ಆಸ್ತಿ ಎನ್ನುವುದ ಕ್ಕೋಸ್ಕರ ಇದನ್ನು ಹೊರಗೆ ತೆಗೆಯಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ವ್ಯವಸಾಯ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ I will just mix both the Agriculture and Horticulture now, ಕೃಷಿ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ನಮಗೆ ಆಗುತ್ತಿರುವ ಲುಕ್ಸಾನಿನ ಬಗ್ಗೆ ಹೇಳುತ್ತೇನೆ. ನಾನು ಮೂಲಭೂತವಾಗಿ ಹೇಳುತ್ತಿದ್ದೇನೆ. It is not a material which you can store for a longer period. It is a perishable thing. ಇದಕ್ಕೆ ಸರ್ಕಾರದಿಂದ ಸಪೋರ್ಟ್ ಪ್ರೈಸ್ ಸಿಕ್ಕುವುದಿಲ್ಲ. You have mentioned support price to sugar cane, coconut, and cotton but you have not mentioned about the support price to Jowar, Pulses and many other agricultural produce. ಈ ಭೇದ ಭಾವ ಏಕೆ ಎದದು ನಾನು ಕೇಳುತ್ತಿದ್ದೀನೆ. ನಮ್ಮ ಬಿಜಾಪುರದಲ್ಲಿ ಬೆಳೆದಂತಹ ದ್ರಾಕ್ಷಿ it is an export quality, ಆದರೆ ಇವತ್ತು ಈ ದ್ರಾಕ್ಷಿಯನ್ನು ಬಿಜಾಪುರದಿಂದ ವಿದೇಶಕ್ಕೆ ಕಳುಹಿಸುವಂತಹ ಜನರು ಎಷ್ಟು ಇದ್ದಾರೆಂದು ತಾವು ಪ್ರಶ್ನೆ ಮಾಡಬಹುದು. ಅದರಲ್ಲಿ ಬೆರಳಲ್ಲಿ ಎಣಿಸುವಷ್ಟು ಸಂಖ್ಯೆಯಲ್ಲಿರಬಹುದು. ಅದರಲ್ಲೂ ಒಬ್ಬರು-ಇಬ್ಬರು, The Bombay people come and do a big business. ಆದರೆ ನಮ್ಮಲ್ಲಿ ಬೇಡಿಕೆ ಇದೆ, ಪ್ರೊಸೆಸಿಂಗ್ ಸೆಂಟರ್ಸ್‌ಗೆ ಬೇಡಿಕೆ ಇದೆ. ಕೋಲ್ಡ್ ಸ್ಟೋರೇಜ್‌ಗೆ ಬೇಡಿಕೆ ಇದೆ. ಇದನ್ನು ತಾವು ಏಕೆ ಎಕ್ಸ್‌ಟೆಂಡ್ ಮಾಡುತ್ತಿಲ್ಲ. To safeguerd the interests of the roÿts, these are the most essential things we have to do. For example I purchase one milling machine ; If I keep it for 10 years, I will get escalation charges on that but whether I am in a position to get escalation charges on the agricultural produce of not as all ಇವತ್ತು ೨೦೦ ರೂಪಾಯಿಗೆ ಮಾರಾಟ ಮಾಡುವಂತಹ ಜೋಳವನ್ನು ೧೨೫ ರೂಪಾಯಿಗೂ ಒಮ್ಮೆ ಮಾರುವುದಿಲ್ಲ. ೧೩೦೦ ರೂಪಾಯಿಗಳ ಬೆಲೆ ಇದ್ದ ಹತ್ತಿ ಇವತ್ತು ೪೦೦ ರೂಪಾಯಿಗೆ ಮಾರಲಿಕ್ಕೆ ನಮಗೆ ಆಗುವುದಿಲ್ಲ. ಇದರಿಂದ ಆಗುತ್ತಿರುವ ನಷ್ಟ ಎಷ್ಟು ಇದೆ ನಮ್ಮಲ್ಲಿ? Who is going to see the tragedy of that ryot ? ಇದು ನಾನು ಬಹಳ ವಿಷಾದದಿಂದ ವ್ಯಕ್ತಪಡಿಸುವ ಒಂದು ವಿಷಯ ಈ ಒಂದು ವಾರ್ಷಿಕ ವರದಿಯನ್ನು ನಾನು ಓದುತ್ತಿದ್ದಾಗ ಅದರಲ್ಲಿ ಒಂದು ಸಂಗತಿ ಇರುವುದನ್ನು ನೋಡಿದೆ. ನಮ್ಮಲ್ಲಿ ಈ ನಕಲಿ ಬೀಜಗಳನ್ನು ಮಾರಿರುವ ಎಷ್ಟು ವ್ಯಕ್ತಿಗಳನ್ನು ಹಿಡಿದಿದ್ದಾರೆ ಎಂದು ನೋಡಿದಾಗ ಕೇವಲ ೧೦ ಜನರನ್ನು ಹಿಡಿದಿದ್ದಾರೆ. ಆ ೧೦ ಜನರಲ್ಲಿ ಶಿಕ್ಷೆ ಎಷ್ಟು ಜನರಿಗೆ ಆಗಿದೆ ಎಂದರೆ ೫ ಜನರಿಗೆ ಆಗಿದೆ. ಮತ್ತು ಎಷ್ಟು ಶಿಕ್ಷೆಯಾಗಿದೆ, ದಂಡ ಹಾಕಿದ್ದಾರೆ ಎಂದರೆ ೩೦೦ ರೂಪಾಯಿಗಳಿಂದ ೫೦೦ ರೂಪಾಯಿಗಳವರೆಗೆ ಶಿಕ್ಷೆಯಾಗಿದೆ ದಂಡ ಹಾಕಿದ್ದಾರೆ, ಅಲ್ಲಿ ರೈತ ಒಂದು ಸಾರಿ ಒಂದು ಎಕರೆಯಲ್ಲಿ ಬಿತ್ತುವುದಕ್ಕೆ ಸುಮಾರು ೧ ರಿಂದ ೨ ಸಾವಿರ ರೂಪಾಯಿಗಳವರೆಗೂ ಖರ್ಚಾಗುತ್ತದೆ, ಅವರಿಗೆ ಕೆಟ್ಟ ಬೀಜಗಳನ್ನು ವ್ಯಾಪಾರ ಮಾಡಿರತಕ್ಕಂತಹವರಿಗೆ ಕೇವಲ ೩೦೦ ರೂಪಾಯಿಗಳ ದಂಡ ಹಾಕುತ್ತಿದ್ದಾರೆ. You can recover it from those people, ಇದು ನಿಮ್ಮ ಕರ್ತವ್ಯವಲ್ಲವೇ? You have to take action against those people who are cheeting the ryots. ತಮಗೆ ನಾನು ಕೇಳುತ್ತಿದ್ದೇನೆ, ಈ ರೀತಿ ಯಾರು ರೈತರಿಗೆ ಮೋಸ ಮಾಡುವಂತಹ ವ್ಯಾಪಾರಸ್ಥರು ಇದ್ದಾರೆ, ಅವರ ಮೇಲೆ ಬಹಳ ಕಡ್ಡಾಯವಾಗಿ ಕ್ರಮ ತೆಗೆದುಕೊಳ್ಳಬೇಕು. ಮತ್ತು ಅವರನ್ನು ಶಿಕ್ಷೆಗೆ ಗುರಿ ಮಾಡತಕ್ಕಂತದ್ದು ನಿಮ್ಮ ಮೊದಲ ಕರ್ತವ್ಯ, ಕಳ್ಳರು, ಖದೀಮರು ಯಾರು ಇದ್ದಾರೆ, ಅವರನ್ನು ಜೈಲಿಗೆ ಹಾಕುವುದನ್ನು ಬಿಟ್ಟರೆ ನಮಗೆ ಈ ಶಾಸನ ಬೇಕಾಗಿಲ್ಲ. ನಮಗೆ ಬಹಳ ಜನರು ಏನು ಹೇಳುತ್ತಾರೆಂದರೆ, ನಮಗಿಂತಲೂ ಖದೀಮರು ಅಲ್ಲಿ ಬೆಂಗಳೂರಿನಲ್ಲಿ ಕುಳಿತಿದ್ದಾರೆನ್ನುವ ಹೆಸರು ಗಳಿಸಬೇಕಾಗಿದೆ

ನಾವೆಲ್ಲರೂ ಇದನ್ನು ಆಲೋಚನೆ ಮಾಡಬೇಕಾಗಿದೆ. Every aspect of the ryot should be safeguarded. Secondly, transporation of food grains. ವ್ಯಾಪಾರಸ್ಥರು ರೈತನ ಹೆಸರ ಮೇಲೆ ಟ್ರಾನ್ಸ್‌ಪೋರ್ಟ್ ಮಾಡುತ್ತಾರೆ. ಅವರ ಬುಕ್ ಎಂಟ್ರಿಯಲ್ಲಿ, ಗೋಡೌನ್ ಎಂಟ್ರಿಯಲ್ಲಿ ರೈತನ ಹೆಸರ ಮೇಲೆ ಸ್ಟಾಕ್ ಮಾಡುತ್ತಾರೆ. ಆದರೆ ನಿಜಕ್ಕೂ ರೈತ ಅವನ ದವಸ ಮಾರಿಕೊಂಡು ತನ್ನ ಪಟ್ಟಿ ಒಯ್ದುಬಿಟ್ಟಿರುತ್ತಾನೆ. They store it in the name of the ryot & transport it in the name of ryot. ಆದರೆ ಅಧಿಕಾರಿಗಳು ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಿದ್ದಾರೆಂಬುದನ್ನು ನೋಡಬೇಕು. ರೈತ ಮುಂದೆ ಬಂದು ನನ್ನ ಪಟ್ಟಿ ಅಲ್ಲ ಎಂದಾಗ ಅಥವಾ ಎಲ್ಲಾದರೂ ಎನ್‌ಕ್ವಯರಿ ಕಂಡಕ್ಟ್ ಆದಾಗ ರೈತ ನನ್ನದು ಅಲ್ಲ ಎಂದಾಗ ನಾವು ವ್ಯಾಪಾರಸ್ಥರಿಗೆ ಏನೂ ಮಾಡಿಲ್ಲ. ೨೦ ಲಕ್ಷ, ೩೦ ಲಕ್ಷ ರೂಪಾಯಿ ಟರ್ನ್‌ಓವರ್ ಮಾಡುವ ವ್ಯಾಪಾರಸ್ಥರಿಗೆ ಅದೂ Commission Agents, they show their turn-over hardly about Rs. 50,000-60,000. ಅವರು ಎಷ್ಟು ಕಟ್ಟುತ್ತಾರೆಂದು ನೋಡಬೇಕು. They don't show it. Though their turnover is Rs. 20-30 lakhs, they hardly show Rs. 50,000/-. ಕೇವಲ ೫೦ ರಿಂದ ೬೦ ಸಾವಿರ ರೂಪಾಯಿ ತೋರಿಸುತ್ತಾರೆ. ಇದರಲ್ಲಿ ಪ್ರತಿಯೊಂದು ಡಿಪಾರ್ಟ್‌ಮೆಂಟ್ ಕೂಡಾ ಶಾಮೀಲು ಆಗಿದೆ. ಅದಕ್ಕೋಸ್ಕರ ಇದರಿಂದ ಆಗುವ ನಷ್ಟವನ್ನು ತಪ್ಪಿಸಬೇಕಾದರೆ, ರೈತರ ನಷ್ಟ ತಪ್ಪಿಸಬೇಕಾದರೆ ಮುಖ್ಯವಾಗಿ ಕಾಯ್ದೆಗಳನ್ನು ಬಹಳ ಕಡ್ಡಾಯವಾಗಿ ಮಾಡಬೇಕಾಗುತ್ತದೆ. ಇದು ಮೊದಲನೆಯದಾದರೆ, ಎರಡನೆಯದಾಗಿ ಅನುಷ್ಠಾನಕ್ಕೆ ತರುವುದು ಅಷ್ಟೇ ಪ್ರಮುಖವಾದ ಪಾತ್ರ ಎಂದು ನಾವು ಮನವರಿಕೆ ಮಾಡಿಕೊಳ್ಳಬೇಕು. ತಮಗೆ ಗೊತ್ತಿರುವ ವಿಚಾರ, ಹೋದ ಸರ್ಕಾರ ಈ ಒಂದು ಹೊಸ ಎಪಿಎಂಸಿ ಆಕ್ಟ್ ಮಾಡಿತ್ತು. ಅದರಲ್ಲಿ ಏನು ಮಾಡಿತ್ತು ಅಂದರೆ ಈ ವ್ಯಾಪಾರಸ್ಥರು ಏನು ಇದ್ದಾರೆ They should not collect commissions ಎಂದು ಬಂತು. ರೈತರ ಮೇಲೆ ಕೇವಲ ಒಂದು ಸೈಡ್‌ನಲ್ಲಿ ಇರಬೇಕು. ದಯವಿಟ್ಟು ರೈತರು ಮಾರಾಟ ಮಾಡಿದಮೇಲೆ ಅವರ ಕೈಯಿಂದ ಪಟ್ಟಿಯನ್ನು ತೆಗೆದುಕೊಂಡು ಅದನ್ನು ತಿರುಗಿಸಿನೋಡಿದರೆ ನಿಮಗೇ ಗೊತ್ತಾಗುತ್ತದೆ. ಅದರ ಬೆನ್ನ ಹಿಂದೆ ಎಷ್ಟು ಮುರಿದು ಬರೆದಿರುತ್ತಾನೆಂದು ತಾವು ತಿರುಗಿಸಿ ನೋಡಬೇಕು. ಇಲ್ಲಿ ರೈತರಿಗೆ ಆಗುವ ನಷ್ಟವನ್ನು ತಡೆಯುವುದು ಅತಿ ಮುಖ್ಯ. ಅದೂ ಅಲ್ಲದೇ ಈ ಮಾರಾಟ ಮಾಡುವುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ನಮ್ಮ ರೈತರನ್ನು ಎಜ್ಯುಕೇಟ್ ಮಾಡುವುದು.

ಶ್ರೀ ಟಿ.ಎಂ. ಮಂಜುನಾಥ್.—ಈಗ ರೈತರ ಹತ್ತಿರ ಕಮಿಷನ್ ತೆಗೆದುಕೊಳ್ಳುವ ಹಾಗೆ ಇಲ್ಲ.

SRI A.S. NADAGOWDA.—They take commissions from both the sides, & it has been brought to the notice of the Government ಅವರೇ ಎರಡೂ ಕಡೆ ಕಮಿಷನ್‌ನ್ನು ತೆಗೆದುಕೊಳ್ಳುತ್ತಾರೆ, The Government is not in a position to even prosecute any one of them. It is a shame on our part. ಅದನ್ನು ತಾವು ತಡೆಯಬೇಕಾಗುತ್ತದೆ, ಮತ್ತೆ ನಮ್ಮ ಹಿರಿಯ ಸದಸ್ಯರಾದ ನಂಜುಂಡಸ್ವಾಮಿಯವರು ಹೇಳಿದಹಾಗೆ ಇವತ್ತು ವಿದ್ಯಾಭ್ಯಾಸ ಬಿಎ, ಬಿಎಸ್‌ಸಿ, ಡಿಪ್ಲೊಮಾ, ಎಂಬಿಬಿಎಸ್, ಎಂಜಿನೀಯರಿಂಗ್ ಏನು ಇದೆ ಇದಕ್ಕಿಂತ ಮುಖ್ಯವಾಗಿ ನಮಗೆ ಬೇಕಾಗಿರತಕ್ಕ ಕೃಷಿ ವಿಜ್ಞಾನ. ರೈತನ ಮಕ್ಕಳಿಗೆ ಬೇಕಾಗಿರತಕ್ಕದ್ದು ಕೃಷಿ ವಿದ್ಯೆ ವಿದ್ಯೆಯ ತಳಹದಿಯಾದ ಎಲ್ ಕೆ ಜಿ ಯಿಂದ ಹಿಡಿದು ೧೦ನೇ ತರಗತಿಯವರೆಗೆ ಕೊಡುವ ವಿದ್ಯಾಭ್ಯಾಸದಲ್ಲಿ ಕೃಷಿ ಬಗ್ಗೆ, ವ್ಯವಸಾಯದ ಬಗ್ಗೆ ಒಂದು ವಿಷಯವನ್ನು ಸೇರ್ಪಡೆ ಮಾಡಿದರೆ by the time he completes his Xth Standard, he will be in a position to look-after his own fields. ಇದನ್ನು ಮಾಡುವುದು ಬಹಳ ಅವಶ್ಯಕ ಇದೆ. ಮತ್ತು ಇವತ್ತು ನಮಗೆ ಡಿಪ್ಲೊಮಾ ಬೇಕಾಗಿದೆ. ಡಿಪ್ಲೊಮಾ ಕಾಲೇಜ್, ಅದರಲ್ಲೂ ನಮ್ಮ ಡಿಪ್ಲೊಮಾ ಎಂಜಿನಿಯರಿಂಗ್ ಇನ್ ಅಗ್ರಿಕಲ್ಚರ್ ಬೇಕಾಗಿದೆ. ಇದರಲ್ಲಿ ಎರಡು ಯೂನಿವರ್ಸಿಟಿಗಳು ಮುಖ್ಯ. ಹೆಬ್ಬಾಳದ ಯೂನಿವರ್ಸಿಟಿ ಮತ್ತು ಧಾರವಾಡದ ಯೂನಿವರ್ಸಿಟಿಗಳ ಬಗ್ಗೆ ಮಂತ್ರಿಗಳು ಪರಿಗಣಿಸ ಬೇಕಾಗುತ್ತದೆ. ಮತ್ತು ಇದರ ಬಗ್ಗೆ ತೀರ್ಮಾನ ಕೈಗೊಳ್ಳಬೇಕೆನ್ನುವುದು ನನ್ನ ಒಂದು ಬೇಡಿಕೆ. ಅಗ್ರಿಕಲ್ಚರಲ್ ಕಾಲೇಜುಗಳನ್ನು ನಮ್ಮ ಮಂತ್ರಿಗಳು ಕೊಟ್ಟಿದ್ದಾರೆ. ಶ್ರೀಮಾನ್

೫-೩೦ ಪಿ.ಎಂ.

ಬಂಗಾರಪ್ಪನವರು ಮಂತ್ರಿ ಪದವಿ ವಹಿಸಿಕೊಂಡ ಕೂಡಲೇ ಮೂರು ಕಾಲೇಜುಗಳನ್ನು ಅನೌನ್ಸ್ ಮಾಡಿದ್ದಾರೆ, ಅವುಗಳನ್ನು ಈ ಅಕಾಡಮಿಕ್ ಇಯರಿನಲ್ಲೇ ಶುರು ಮಾಡಬೇಕೆಂದು ನಮ್ಮ ಪ್ರಾರ್ಥನೆ

If it is not possible ತಾವು ಬೇರೆ ಕಾಲೇಜುಗಳಿಗೆ ಅಫಿಲಿಯೇಷನ್ ಈ ವರ್ಷಕ್ಕೆ ಮಾತ್ರ ಕೊಟ್ಟು ಮುಂದಿನ ವರ್ಷಕ್ಕೆ ಬಿಜಾಪುರಕ್ಕೆ ತಾವು ಕೊಟ್ಟಿದ್ದೀರಿ. ಈ ವರ್ಷ ಧಾರವಾಡದಲ್ಲಿ ಅಡ್ಮಿಶನ್ ತೆಗೆದುಕೊಂಡು ಮುಂದಿನ ವರ್ಷ ಬಿಜಾಪುರಕ್ಕೆ ಟ್ರಾನ್ಸ್‌ಫರ್ ಮಾಡಿದ್ದೀರಿ. it will be a boon to the students ನಮ್ಮ ಮುದ್ದೇಬಿಹಾಳ್ ತಾಲ್ಲೂಕಿಗೆ ಬಯೋ ಫರ್ಟಿಲೈಸರ್‌ಪ್ಲಾಂಟ್ ಅವಶ್ಯಕತೆಯಿದೆ. ನಮ್ಮ ಮುದ್ದೇಬಿಹಾಳ ತಾಲ್ಲೂಕಿಗೆ ಬಯೋ ಫರ್ಟಿಲೈಸರ್‌ಪ್ಲಾಂಟ್ ಏತಕ್ಕೆ ಅವಶ್ಯಕತೆ ಇದೆಯೆಂದರೆ, ಮುದ್ದೇಬಿಹಾಳ ತಾಲ್ಲೂಕಿನಲ್ಲಿ ೩೫ ಕಿಲೋಮೀಟರ್ ವಿಸ್ತಾರದಲ್ಲಿ ಕೃಷ್ಣಾ ಮೇಲ್ದಂಡೆ ಮೇಲೆ ಹಳ್ಳಿಗಳು ಬರುತ್ತವೆ. ಅಲ್ಲಿ ವಿಶೇಷವಾಗಿ ಬಯೋ ಫರ್ಟಿಲೈಸರ್‌ಗೆ ಸಂಬಂಧಪಟ್ಟ ಗಿಡಗಳಿವೆ. ಹೊಳೆದಂಡೆಯಲ್ಲಿ ನೆಟ್ಟರೆ ಸಾಕು if you just Plant them on the banks of the river Krishna it is just sufficient. ಬರುವಂತಹ ತಪ್ಪಲಿನಿಂದ ಆ ಗಿಡಗಳಿಂದ ಬೇರೆ ರೀತಿಯ ಸಾಕಷ್ಟು ಸಂಪನ್ಮೂಲಗಳು ಇರುವುದರಿಂದ you can easily start a bio-fertiliser plant ಅದನ್ನು ಮಾನ್ ಮಂತ್ರಿಗಳು ಮಾಡಿಕೊಡಬೇಕೆಂದು ನನ್ನ ಕಳಕಳಿಯ ಪ್ರಾರ್ಥನೆ. ಇಷ್ಟು ನನ್ನ ಅನಿಸಿಕೆಗಳನ್ನು ತಮ್ಮ ಮುಖಾಂತರ ಮಾನ್ಯಮಂತ್ರಿಗಳ ಗಮನಕ್ಕೆ ತಂದಿರುತ್ತೇನೆ. ತಾವು ನಾನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ವೆಂಕಟೇಶ್‌ರವರೇ, ನೀವು ಭಾಷಣ ಶುರು ಮಾಡುವುದಕ್ಕೆ ಮೊದಲು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ, ೫೧ ಜನ ಮಾನ್ಯ ಸದಸ್ಯರುಗಳು ಬೇಡಿಕೆಗಳ ಮೇಲೆ ಮಾತನಾಡತಕ್ಕ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ, ಆದ್ದರಿಂದ ತಾವು ಇದನ್ನು ಗಮನದಲ್ಲಿಟ್ಟುಕೊಂಡು ನೀವು ಹೇಳತಕ್ಕ ವಿಚಾರಗಳನ್ನು ಸೀಮಿತಗೊಳಿಸಿದರೆ ಬೇರೆಯವರಿಗೆ ಮಾತನಾಡಲಿಕ್ಕೆ ಅವಕಾಶವಾಗುತ್ತದೆ.

ಶ್ರೀ ಎಂ. ಪಿ. ವೆಂಕಟೇಶ್.—ಹಾಗಾದರೆ ನಾನು ೬೦ ನಿಮಿಷ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ನಿಮ್ಮ ಪಕ್ಷದ ನಾಯಕರು ಮಾತನಾಡುವುದಿಲ್ಲವೆ ?

ಶ್ರೀ ಎಂ.ಪಿ. ವೆಂಕಟೇಶ್.—ನಮ್ಮ ಪಾರ್ಟಿ ಲೀಡರ್ ಸಹ ಮಾತನಾಡುತ್ತಾರೆ.

ಶ್ರೀ ಆರ್. ಎನ್. ನಾಯಕ್. —೧೮೦ ಜನರು ಇರುವ ನಮ್ಮ ಪಕ್ಷಕ್ಕೆ ಒಬ್ಬರಿಗೆ ೧೦ ನಿಮಿಷ ಸಮಯ ಕೊಟ್ಟು ಹೆಸರು ಕರೆದಿದ್ದರಿಂದ ಸಮಯ ಸಾಲುವುದಿಲ್ಲವೆಂದು ನಾವು ಹೆಚ್ಚು ಮಾತನಾಡಿಲ್ಲ. ನಮಗೆ ಈ ಸಲವಾದರೂ ಒಬ್ಬೊಬ್ಬರಿಗೆ ೧೦ ನಿಮಿಷ ಕಾಲಾವಕಾಶ ಮಾಡಿ ಕೊಟ್ಟರೆ ಚೆನ್ನಾಗಿರುತ್ತದೆ. ವೆಂಕಟೇಶ್‌ರವರ ಪಾರ್ಟಿ ಲೀಡರ್‌ಗೆ ಕಡಿಮೆ ಅವಕಾಶ ಕೊಟ್ಟು ಅವರಿಗೆ ಜಾಸ್ತಿ ಅವಕಾಶ ಕೊಡುವುದಾದರೆ ನಮಗೆ ಅವರಿಗಿಂತ ೧೦ ನಿಮಿಷ ಕಡಿಮೆ ಅವಕಾಶ ಮಾಡಿಕೊಡಿ.

ಶ್ರೀ ಎಂ. ಪಿ. ವೆಂಕಟೇಶ್.—ನೀವು ಕಡಿಮೆ ಸಮಯ ತೆಗೆದುಕೊಳ್ಳಿ.

ಅಧ್ಯಕ್ಷರು.—ನೀವು ೧೦ ನಿಮಿಷಗಳಲ್ಲಿ ಮುಗಿಸುತ್ತೀರಾ ?

ಶ್ರೀ ಎಂ. ಪಿ. ವೆಂಕಟೇಶ್.—ನಾನು ೪೦ ನಿಮಿಷ ಸಮಯ ಕೇಳಿದ್ದೇನೆ. ೩೦ ನಿಮಿಷಗಳಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇದುವರೆಗೆ ಮಾತನಾಡಿದವರು ೧ ಗಂಟೆ, ೪೫ ನಿಮಿಷ ಹೀಗೆ ಮಾತನಾಡಿದ್ದಾರೆ, ನನಗೆ ಕೊನೆಯ ಪಕ್ಷ ೩೦ ನಿಮಿಷ ಅವಕಾಶ ಕೊಡಬೇಕು.

ಅಧ್ಯಕ್ಷರು.—೧೦ ನಿಮಿಷ ಎಂದು ಇಟ್ಟುಕೊಂಡು ಭಾಷಣ ಪ್ರಾರಂಭ ಮಾಡಿ ನೋಡಿ.

† ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳು ಮತ್ತು ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ, ಅರಣ್ಯ ಇಲಾಖೆ, ಗ್ರಾಮೀಣ ಅಭಿವೃದ್ಧಿ ಇಲಾಖೆ, ಪಶು ಸಂಗೋಪನಾ ಇಲಾಖೆಗಳ ಸಚಿವರು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದರ ಜೊತೆಗೆ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮೊದಲನೆಯದಾಗಿ, ಗೃಹ ಇಲಾಖೆಯ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬಗ್ಗೆ ಹೇಳುವುದಾದರೆ, ಪೋಲೀಸ್ ಸಿಬ್ಬಂದಿ ಬಹಳ ಕಡಿಮೆ ಇದೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಮೈಸೂರು ನಗರದಲ್ಲಿ ಹಿಂದೆ ಒಬ್ಬರು ಪೋಲೀಸ್ ಸೂಪರಿಂಟೆಂಡೆಂಟ್ ಎಂದು ಇದ್ದರು, ಮತ್ತೆ ಆಡಿಷನಲ್ ಎಸ್.ಪಿ. ಎಂದು ಇದ್ದರು. ಇವರೇ ಎಲ್ಲವನ್ನು ನೋಡಿಕೊಳ್ಳುತ್ತಿದ್ದರು. ಈಗ ಒಬ್ಬ ಡಿ.ಐ.ಜಿ. ಯನ್ನು ಅಲ್ಲಿ ಹಾಕಿದ್ದಾರೆ. ಇಬ್ಬರು ಸೂಪರಿಂಟೆಂಡಿಂಗ್ ಆಫ್ ಪೋಲೀಸ್‌ರನ್ನು ಒಂದು ನಗರಕ್ಕೆ ಹಾಕಿದ್ದಾರೆ. ಇವರ ವೆಚ್ಚ, ವಾಹನಗಳು, ಸಿಬ್ಬಂದಿ ಮತ್ತು ಕಚೇರಿ ಇದಕ್ಕೆಲ್ಲ ವೆಚ್ಚವಾಗುವ ಹಣ ಬಹಳ ಜಾಸ್ತಿಯಾಗಿದೆ. ಅದರ ಅವಶ್ಯಕತೆ ಇಲ್ಲ. ಅದರ ಬದಲು ಸರ್ಕಾರದವರು ಪೋಲೀಸ್ ಸಿಬ್ಬಂದಿ ಏನು ಕಡಿಮೆ ಇದ್ದಾರೆ, ಈ ಸಿಬ್ಬಂದಿಯನ್ನು ಹೆಚ್ಚಿಗೆ ತೆಗೆದುಕೊಂಡರೆ ಗ್ರಾಮಾಂತರ ಪ್ರದೇಶಗಳಲ್ಲಿ ಈ ಪೋಲೀಸ್ ಸಿಬ್ಬಂದಿಯ ಸಹಾಯದಿಂದ ಹಲವಾರು ದೌರ್ಜನ್ಯಗಳನ್ನು ತಡೆಗಟ್ಟಲಿಕ್ಕೆ ಬಹಳ ಅನುಕೂಲವಾಗುತ್ತದೆ ಎಂದು ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡುತ್ತೇನೆ. ಇನ್ನು ಪೋಲೀಸ್ ಸ್ಟೇಷನ್‌ಗೆ ಸಾರ್ವಜನಿಕರು ಹೋದಾಗ ಅಥವಾ ಯಾರಾದರೂ ಮುಖಂಡರಾದವರು ಹೋದಾಗ ಅವರನ್ನು ಪೋಲೀಸ್ ಸ್ಟೇಷನ್ನಿನ ಸಬ್ ಇನ್‌ಸ್ಪೆಕ್ಟರ್ ಅವರು ಒಳ್ಳೆಯ ಗೌರವ ದೃಷ್ಟಿಯಿಂದ ಕಾಣುವುದಿಲ್ಲ. ಹೋದ ತಕ್ಷಣ ''ಏನಯ್ಯ, ಏನ್ರೀ ?'' ಎಂದು ಬಹಳ ಅಗೌರವದಿಂದ ಕಾಣುತ್ತಾರೆ. ಉದಾಹರಣೆಗೆ ನಾನು ಮತ್ತು ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಾಮಣ್ಣನವರು ಕಳೆದ ಶುಕ್ರವಾರ ಬೆಂಗಳೂರಿಗೆ ಬರುತ್ತಿರಬೇಕಾದರೆ ರಾತ್ರಿ ಸುಮಾರು ೧೧ ಗಂಟೆಗೆ ಬಸ್ ನಿಲ್ದಾಣದಲ್ಲಿ ಇಳಿದಾಗ ಅಲ್ಲಿದ್ದ ಆಟೋ ರಿಕ್ಷಾದವನು ಒಂದಕ್ಕೆರಡರಷ್ಟು ನೀವು ಹಣ ಕೊಡಬೇಕೆಂದು ಹೇಳಿದ. ಆಗ ಶ್ರೀ ರಾಮಣ್ಣನವರು ಬಹಳ ಗಲಾಟೆ ಮಾಡಿ ಕೆಳಗಿಳಿದು 'ನಡೀರಿ ಪೋಲೀಸ್ ಸ್ಟೇಷನ್‌ಗೆ ಹೋಗೋಣ' ಎಂದು ಹೇಳಿ ಅವನನ್ನು ದಫೇದಾರ್ ಹತ್ತಿರ ಕರೆದುಕೊಂಡು ಬಂದಾಗ ಆ ದಫೇದಾರ್ ರಾಮಣ್ಣನವರನ್ನು ನೋಡಿ ನೀನೂ ಹತ್ತಯ್ಯ ' ಎಂದು ಬಿಟ್ಟ. ನಮ್ಮಂಥ ಶಾಸಕರಿಗೆ ' ನೀನೂ ಹತ್ತಯ್ಯ ' ಎಂದು ಅವನು ಹೇಳಬೇಕಾದರೆ, ಇನ್ನು ಬೇರೆಯವರ ಹತ್ತಿರ ಯಾವ ರೀತಿ ನಡೆದುಕೊಳ್ಳುತ್ತಾರೆ ಎಂಬುದನ್ನು ತಾವು ಗಮನಿಸಬೇಕೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದ್ದರಿಂದ ಸಾರ್ವಜನಿಕರು ರೈತರು ಬಂದಾಗ ಸಬ್‌ಇನ್‌ಸ್ಪೆಕ್ಟರ್‌ಗಳು ಯಾವ ರೀತಿಯಲ್ಲಿ ನಡೆದುಕೊಳ್ಳಬೇಕು ಎಂದು ತಾವು ಮಾರ್ಗದರ್ಶನ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಆ ಕಡೆಯಲ್ಲಿ ಸರ್ಕಾರ ನಡೆಸತಕ್ಕಂಥವರು ೧೭೮ ಜನ ಶಾಸಕರನ್ನು ಗೆಲ್ಲಬೇಕಾದರೆ, ಪರಿಶಿಷ್ಟಜಾತಿ ಮತ್ತು ವರ್ಗದವರು ಬಹಳ ಮುಖ್ಯವಾಗಿ ಮತಗಳನ್ನು ಕೊಟ್ಟಿದ್ದರಿಂದ ಇವತ್ತು ಈ ಸ್ಥಾನಕ್ಕೆ ಬಂದಿದ್ದಾರೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಿ ಹೋಗಿ ನೀವು ಯಾರಿಗೆ ಓಟು ಕೊಡುತ್ತೀರಿ? ಎಂದು ಕೇಳಿದರೆ ಕಾಂಗ್ರೆಸ್ಸಿಗೆ ಓಟು ಕೊಡುತ್ತೇವೆ ಎಂಬ ಮಾತನ್ನು ಅವರು ಸ್ಪಷ್ಟವಾಗಿ ಹೇಳುತ್ತಾರೆ. ಅವರುಗಳನ್ನೇ ಅವಲಂಬಿಸಿ ಇವತ್ತು ೧೭೮ ಜನರ ಬೆಂಬಲ ಇರುವ ಸರ್ಕಾರ ಅಧಿಕಾರಕ್ಕೆ ಬಂದಿದೆ. ಇಲ್ಲಿ ಸೆಕ್ರೆಟರಿಯೇಟ್‌ನಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರು ಎಷ್ಟು ಅಧಿಕಾರಿಗಳಿದ್ದಾರೆ ಎಂದು ನಾನು ಒಮ್ಮೆ ಪ್ರಶ್ನೆ ಹಾಕಿದ್ದಕ್ಕೆ ಈ ಉತ್ತರ ಸಿಕ್ಕಿದೆ. ಕಾರ್ಯದರ್ಶಿ ಸ್ಥಾನ-೧೩, ಕಾರ್ಯದರ್ಶಿ-೨ ಸ್ಥಾನಗಳು ೫, ಉಪಕಾರ್ಯದರ್ಶಿ ಸ್ಥಾನಗಳು ೪೧, ಅಧೀನ ಕಾರ್ಯದರ್ಶಿ ಸ್ಥಾನಗಳು ೧೪೮ ಇವೆ. ಇದರಲ್ಲಿ ಪರಿಶಿಷ್ಟಜಾತಿ ಮತ್ತು ವರ್ಗದವರಿಗೆ ಕೊಟ್ಟಿರುವುದು ಎಷ್ಟು ಎಂದರೆ. ಕಾರ್ಯದರ್ಶಿ ಸ್ಥಾನ-೨, ಕಾರ್ಯದರ್ಶಿ-೨ ಸ್ಥಾನ ೧, ಉಪಕಾರ್ಯದರ್ಶಿ ಸ್ಥಾನ ೬ ಮತ್ತು ಅಧೀನ ಕಾರ್ಯದರ್ಶಿ ಸ್ಥಾನಗಳು ೨೭-ಒಟ್ಟು ಇಷ್ಟು ಸ್ಥಾನಗಳನ್ನು ಕೊಟ್ಟಿದ್ದಾರೆ. ಇವರಿಗೆ ಸಚಿವಾಲಯದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಸೇರಿದ ಅಧಿಕಾರಿಗಳ ಮೇಲೆ ಎಷ್ಟು ನಂಬಿಕೆ ಇದೆಯೆಂಬುದು ಇದರಿಂದ ಗೊತ್ತಾಗುತ್ತದೆ. ನಾನು ಪರಿಶಿಷ್ಟಜಾತಿಗೆ ಸೇರಿದವನಾಗಿರುವುದರಿಂದ ಕೆಲವು ವಿಷಯಗಳನ್ನು ಹೇಳದಿದ್ದರೆ ತಪ್ಪಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ೧೩ ಜನ ಐ.ಪಿ.ಎಸ್. ಅಧಿಕಾರಿಗಳು ಇದ್ದಾರೆ. ಇವರಲ್ಲಿ ಎಸ್.ಪಿ. ಆಗಿ ಕೆಲಸ ಮಾಡತಕ್ಕಂಥವರು ೩ ಜನ. ಹಲವಾರು ಕಾರಣಗಳಿಂದ ಅವರಲ್ಲಿ ಒಬ್ಬರು ಸಸ್ಪೆಂಡ್ ಆಗಿದ್ದಾರೆ, ಎಂಬ ಉತ್ತರ ಕೊಟ್ಟಿದ್ದಾರೆ. ಉಳಿದವರು ಇಬ್ಬರನ್ನು ಪೋಲೀಸ್ ಸೂಪರಿಂಟೆಂಡೆಂಟ್ ಆಗಿ ನೇಮಿಸಿದ್ದಾರೆ. ಆದರೆ ಅವರನ್ನು ಈ ರಾಜ್ಯದಲ್ಲಿ ಎಲ್ಲೂ ಪೋಲೀಸ್ ಸೂಪರಿಂಟೆಂಡೆಂಟ್ ಆಗಿ ಹಾಕಿಲ್ಲ. ಒಬ್ಬರನ್ನು ತೆಗೆದುಕೊಂಡು ಬಂದು ರೈಲ್ವೆಗೆ ಹಾಕಿದ್ದಾರೆ ಮತ್ತು ಇನ್ನೊಬ್ಬರನ್ನು ರೈಲ್ವೆಯಲ್ಲಿ ಎಲ್ಲೋ ಬಿಸಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ನಾವು ಪರಿಶಿಷ್ಟ ಜಾತಿ ಪರವಾಗಿ ಇದ್ದೇವೆ, ಅವರ ಪರವಾಗಿ ಇದ್ದೇವೆ ಎಂದು ಹೇಳುತ್ತಾರೆ.

ಯಾರ ಮಾತನ್ನು ಕೇಳಿ ಈ ವರ್ಗಾವಣೆ ಮಾಡಿದ್ದಾರೆ ಎಂದು ನನಗೆ ಗೊತ್ತಾಗುತ್ತಿಲ್ಲ, ೪ ಜನ ಮಂತ್ರಿಗಳು ಪರಿಶಿಷ್ಟ ಜಾತಿಗೆ ಸೇರಿದ್ದಾರೆ. ಇವರು ಯಾರ ಹೆಸರನ್ನು ಹೇಳಿದ್ದಾರೋ, ಇವರ ಮಾತು ತೆಗೆದುಕೊಂಡಿದ್ದಾರೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಹಲವಾರು ಶಾಸಕರು, ಈ ಪರಿಶಿಷ್ಟ ಜಾತಿಯವರಿಗೆ ಅನ್ಯಾಯವಾಗಿದೆ ತೊಂದರೆಯಾಗಿದೆ ಇವರನ್ನು ವರ್ಗಾವಣೆ ಮಾಡಿ ಎಂದು ಬರೆದು ಸಹಿ ಹಾಕಿ ಕೊಟ್ಟಿದ್ದೇವೆ. ಈ ಸದನದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ, ಡಿ.ಐ.ಜಿ. ಆಫೀಸಿನಲ್ಲಿ ಚಂದೂಲಾಲ್ ಎಂದು ಇದ್ದರು. ಇವರು ಕೆಲವು ಪರಿಶಿಷ್ಟ ಜಾತಿಗೆ ಸೇರಿದ ಸಬ್ ಇನ್ಸ್‌ಪೆಕ್ಟರುಗಳನ್ನು ವರ್ಗ ಮಾಡಿ, ಇವರಿಗೆ ಸ್ವಲ್ಪ ಸಹಾಯ ಮಾಡುತ್ತಿದ್ದರು, ಇವರು ಪರಿಶಿಷ್ಟ ಜಾತಿಗೆ ಸೇರಿದವರನ್ನು ಅಲ್ಲಿ, ಇಲ್ಲಿ ಹಾಕುತ್ತಾರೆ, ಇವರು ಏನೋ ಮಾಡುತ್ತಾರೆಂದು, ಇವರನ್ನು ಬೇರೆ ಕಡೆ ವರ್ಗಾವಣೆ ಮಾಡಿದ್ದಾರೆ. ಇವರು ಹೆಡ್‌ಕ್ವಾರ್ಟರ್ ಅಸಿಸ್ಟೆಂಟ್, ಡಿ.ಜಿ.ಪಿ. ಆಗಿದ್ದರು. ಈಗ ಇವರನ್ನು ತೆಗೆದು ಹಾಕಿದ್ದಾರೆ ಮತ್ತೆ ನಗರದಲ್ಲಿ ಸುಭಾಷ್ ಭರಣಿ ಎಂದು ಇದ್ದರು, ಇವರು ಪರಿಶಿಷ್ಟ ಜಾತಿಗೆ ಸೇರಿದ ಬಡ ಮಕ್ಕಳಿಗೆ, ಅವರಿಗೆ ಬರುವ ಸಂಬಳವನ್ನು ಕೊಟ್ಟು ಓದಿಸುತ್ತಿದ್ದರು, ಮತ್ತು ಅವರಿಗೆ ಬುದ್ಧಿವಾದ ಹೇಳುತ್ತಿದ್ದರು. ಇವರ ಸಂಘ ಸಂಸ್ಥೆಗಳಿಗೆ ಈ ರೀತಿ ಮಾಡಬೇಕೆಂದು ಸೂಚನೆ ಕೊಡುತ್ತಿದ್ದರು. ಇವರು ಈ ಜನಾಂಗದವರನ್ನು ಮುಂದುವರಿಸುತ್ತಾರೆಂದು, ಇವರನ್ನು ಧಾರವಾಡಕ್ಕೆ ವರ್ಗ ಮಾಡಿ ಹಾಕಿದ್ದಾರೆ. ಇವರು ಇಲ್ಲಿ ಬಂದು ಒಂದೂವರೆ ವರ್ಷವಾಗಿತ್ತು, ಬಹಳ ಕೀರ್ತಿ ಪಡೆದಿದ್ದರು. ಇವರನ್ನು ಧಾರವಾಡ ಸಿಟಿಗೆ ಹಾಕಿದ್ದಾರೆ. ಮತ್ತೆ ಸೂರತ್ ಪ್ರಸಾದ್ ಎಂದು ಡಿ.ಐ.ಜಿ. ಅವರು ಬೆಳಗಾಂನಲ್ಲಿ ೧೧ ತಿಂಗಳಿಂದ ಕೆಲಸ ಮಾಡುತ್ತಿದ್ದರು. ರಾಷ್ಟ್ರಪತಿಯವರ ಆಡಳಿತ ಇದ್ದಾಗ ಇವರನ್ನು ವರ್ಗಾವಣೆ ಮಾಡಿದ್ದರು. ಈ ಸರ್ಕಾರ ಬಂದ ಮೂರೇ ತಿಂಗಳಲ್ಲಿ ಇವರನ್ನು ವರ್ಗಾವಣೆ ಮಾಡಿ ಸಿ.ಆರ್.ಇ. ಸೆಲ್‌ಗೆ ಹಾಕಿದ್ದಾರೆ ಅಲ್ಲಿಗೆ ವರ್ಗಾವಣೆ ಮಾಡಿದ ಡಿ.ಐ.ಜಿ. ಪಾಪಟೆ ಎಂಬುವರು ಅದೇ ಜಿಲ್ಲೆಗೆ ಸೇರಿದವರು, ಅವರನ್ನು ಅಲ್ಲಿಗೆ ವರ್ಗಾವಣೆ ಮಾಡಿದ್ದಾರೆ, ಅವರು ೪ ವರ್ಷಗಳ ಕಾಲ ಡಿ.ಜಿ.ಪಿ. ಆಗಿ ಗುಲ್ಬರ್ಗಾದಲ್ಲಿ ಕೆಲಸ ಮಾಡಿದ್ದಾರೆ. ಪುನಃ ಅವರನ್ನು ಅವರ ಸ್ವಂತ ಜಿಲ್ಲೆಗೆ, ಬೆಳಗಾಂಗೆ ಹಾಕಿದ್ದಾರೆ. ಸೂರತ್‌ಪ್ರಸಾದ್ ಅವರು ಐ.ಪಿ.ಎಸ್. ಆಗಿ ಬಂದಾಗ, ಪ್ರಿನ್ಸಿಪಾಲ್ ಆಗಿ ಕೆಲಸ ಮಾಡಿದ್ದಾರೆ, ಡೆಪ್ಯೂಟಿ ಡೈರೆಕ್ಟರ್ ಆಫ್ ಫೈರ್ ಫೋರ್ಸ್ ಮತ್ತು ಪವರ್ ಕಾರ್ಪೊರೇಷನ್‌ನಲ್ಲಿ ಸರ್ವೀಸ್ ಮಾಡಿದ್ದಾರೆ, ಅವರಿಗೆ ಇನ್ನು ಕೆಲವೇ ವರ್ಷಗಳ ಕಾಲ ಸರ್ವೀಸ್ ಇದೆ. ಅವರನ್ನು ತಂದು ಇಲ್ಲಿ ಹಾಕಿದ್ದಾರೆ. ಶ್ರೀ ಸಿದ್ದನವರ್, ಡಿ.ಐ.ಜಿ. ಇವರು ಐ.ಪಿ.ಎಸ್. ಆಫೀಸರ್ ಆಗಿ ಕರ್ನಾಟಕಕ್ಕೆ ಬಂದಾಗ, ಸುಮಾರಾಗಿ ರೇಂಜ್‌ನಲ್ಲಿ ಕೆಲಸ ಮಾಡುವುದಕ್ಕೆ ಬಿಡಲಿಲ್ಲ, ಇವರಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಪುನಃ ಇವರನ್ನು ರೈಲ್ವೆ ಡಿ.ಐ.ಜಿ. ಆಗಿ ಮತ್ತೆ ಹಾಕಿದ್ದಾರೆ, ಬಹಳ ಅನ್ಯಾಯ ಮಾಡಿದ್ದಾರೆ. ಆಮೇಲೆ ಅಜಿತ್‌ಸಿಂಗ್ ಅತ್ವಾಲ್ ಎಂಬುವರನ್ನು ಬೇರೆ ಕಡೆ, ಈ ಸರ್ಕಾರ ಬಂದ ಮೇಲೆ ವರ್ಗಾವಣೆ ಮಾಡಿದ್ದಾರೆ. ಮರಿಸ್ವಾಮಿ ಎನ್ನುವವರು ಇಲ್ಲಿದ್ದರು, ಅವರನ್ನು ಅಡಿಷನಲ್ ಕಮಿಷನರ್ ಆಗಿ ಬೇರೆ ಕಡೆಗೆ ಹಾಕಿದ್ದಾರೆ. ಈ ರೀತಿ ಹಲವಾರು ಜನ ಐ. ಪಿ. ಎಸ್. ಆಫೀಸರುಗಳನ್ನು ಈ ಸರ್ಕಾರ ಬಂದಮೇಲೆ ವರ್ಗಾವಣೆ ಮಾಡಿ ಅನ್ಯಾಯ ಮಾಡಿದೆ. ಇದು ಬಹುಶಃ ಈ ನಾಲ್ಕು ಜನ ಮಂತ್ರಿಗಳು ಮತ್ತು ಹರಿಜನ ಶಾಸಕರು ಏನಿದ್ದಾರೆ ಇವರಿಗೆ ಅವಮಾನವಾಗುವಂಥ ಸಂಗತಿ. ಇವತ್ತು ಈ ನಾಲ್ಕು ಜನ ಮಂತ್ರಿಗಳೂ ರಾಜೀನಾಮೆ ಕೊಡಬೇಕಾಗುತ್ತದೆ. ನಾಲ್ಕು ಜನ ಮಂತ್ರಿಗಳು ಇದ್ದು ಇಂತಹ ಆಫೀಸರುಗಳಿಗೆ ರಕ್ಷಣೆ ಕೊಡುವುದಕ್ಕಾಗುವುದಿಲ್ಲವೆಂದರೆ, ಏಕೆ ಇವರು ಸಚಿವಸಂಪುಟದಲ್ಲಿ ಇರಬೇಕು. ಹಿಂದೆ ೧೯೭೭–೭೮ರಲ್ಲಿ ಇದ್ದ ಮಂತ್ರಿಗಳು, ಇಂತಹ ಯಾವುದಾದರೂ ಅನ್ಯಾಯ ಆದಾಗ ರಾಜೀನಾಮೆ ಕೊಟ್ಟು ಹೊರಕ್ಕೆ ಬರುತ್ತಿದ್ದರು. ಬಹುಶಃ ಈಗ ಈ ನಾಲ್ಕು ಜನ ಮಂತ್ರಿಗಳಿಗೆ ಜನತೆಯೇ ಬುದ್ಧಿ ಹೇಳುತ್ತಾರೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಲೋಕೋಪಯೋಗಿ ಇಲಾಖೆಯಲ್ಲಿ ಅನೇಕ ಜನ ಪರಿಶಿಷ್ಟ ಜಾತಿಯವರಿಗೆ ಸಹಾಯ ಮಾಡಿದ್ದಾರೆ. ಮುಖ್ಯಮಂತ್ರಿಗಳ ಹಲವಾರು ಇಲಾಖೆಗಳ ಬಗ್ಗೆ ಹೇಳುವುದಾದರೆ, ಕೆಲವು ಜನ ಉಪ ವಿಭಾಗಾಧಿಕಾರಿಗಳಿಗೆ. ಜಿಲ್ಲಾಧಿಕಾರಿಗಳಾಗಿ ಕೊಟ್ಟಿದ್ದಾರೆ. ಉಪ ವಿಭಾಗಾಧಿಕಾರಿಗಳಲ್ಲಿ ಪರಿಶಿಷ್ಟ ಜಾತಿಯವರಿಗೆ ಅನ್ಯಾಯ ಮಾಡಿದ್ದಾರೆ. ಹಲವಾರು ಇಲಾಖೆಗಳಲ್ಲಿ ಪರಿಶಿಷ್ಟ ಜಾತಿಯವರಿಗೆ ಜಾಸ್ತಿ ಅನ್ಯಾಯ ಮಾಡಿದ್ದಾರೆ. ಉದಾಹರಣೆಗೆ ತಮಗೆ ಹೇಳಬೇಕಾಗುತ್ತದೆ. ಒಬ್ಬ ಅಸಿಸ್ಟೆಂಟ್ ಕಮೀಷನರ್ ಅವರನ್ನು ಹುಣಸೂರು ಕ್ಷೇತ್ರಕ್ಕೆ ಹಾಕಿ ಎಂದು ಹೇಳಿದಾಗ, ಅಲ್ಲಿರುವಂಥ ಅಸಿಸ್ಟೆಂಟ್ ಕಮೀಷನರ್‌ಗೆ ಅಲ್ಲಿ ೪ ವರ್ಷವಾಗಿದ್ದರೂ, ಅವರಿಗೇ ಪ್ರಮೋಷನ್ ಕೊಟ್ಟು ಅಪ್‌ಗ್ರೇಡ್ ಮಾಡಿದ್ದಾರೆ.. ...

ಅಧ್ಯಕ್ಷರು.—ಇವತ್ತಿನ ವಿಷಯ ವರ್ಗಾವರ್ಗಿ ವಿಚಾರವೇ ಸಾಮಾನ್ಯ ವರ್ಗಾವರ್ಗಿ ಮುಗಿದು ಹೋಗಿದೆ.......

ಶ್ರೀ ಎಂ. ಪಿ. ವೆಂಕಟೇಶ್.—ಇವರು ಪರಿಶಿಷ್ಟ ಜಾತಿಯವರಿಗೆ ಅನ್ಯಾಯವಾಗಿಲ್ಲ ಎಂದು ಹೇಳಿದ್ದಾರೆ. ಅದಕ್ಕಾಗಿ, ನಾನು ಪರಿಶಿಷ್ಟಜಾತಿಗೆ ಸೇರಿದವನಾಗಿ ವಿರೋಧಪಕ್ಷದಲ್ಲಿದ್ದು ಇಲ್ಲಿ ಹೇಳದೆ ಹೋದರೆ ತಪ್ಪಾಗುತ್ತದೆ. ನನ್ನ ಕ್ಷೇತ್ರಕ್ಕೆ ಉಪ ವಿಭಾಗಾಧಿಕಾರಿಗಳನ್ನು ಹಾಕಿ ಎಂದು ಹೇಳಿದೆ. ಆದರೆ ಅಲ್ಲಿದ್ದವರಿಗೇ ಪ್ರಮೋಷನ್ ಕೊಟ್ಟು, ಅಪ್‌ಗ್ರೇಡ್ ಮಾಡಿದ್ದಾರೆ. ಒಂದು ಸಾರಿ ಹಾಕಿ ಎಂದು ಹೇಳಿದಾಗ, ಅಸಿಸ್ಟೆಂಟ್ ಕಮೀಷನರ್ ಆಗಿ ಕೆಲಸ ಮಾಡಿದವರನ್ನು ಪುನಃ ಹಾಕುವುದಿಲ್ಲ ವೆಂದು ಹೇಳಿದರು. ಒಬ್ಬ ಅಸಿಸ್ಟೆಂಟ್ ಕಮಿಷನರ್ ಆಗಿದ್ದ ಈಶ್ವರ್ ಎಂಬುವರು, ಈ ಸಂದರ್ಭದಲ್ಲಿ ಅವರ ಹೆಸರನ್ನು ಹೇಳಲೇಬೇಕಾಗುತ್ತದೆ. ಅವರನ್ನು ಪುನಃ ಅಸಿಸ್ಟೆಂಟ್ ಕಮೀಷನರ್ ಆಗಿ ಮೈಸೂರು ಜಿಲ್ಲೆಗೆ ಹಾಕಿದ್ದಾರೆ. ಇದು ಮಾನ್ಯ ವಿಶ್ವನಾಥ್‌ರವರಿಗೂ ಗೊತ್ತು, ಇದು ಸರಿಯಲ್ಲ ವೆಂದು ಅವರೂ ದೂರು ಕೊಟ್ಟಿದ್ದಾರೆ. ಕಾಳಮರಿಗೌಡರು, ನಾವೆಲ್ಲರೂ ಸೇರಿ ಗಲಾಟೆ ಮಾಡಿ ಅವರು ಸೋಷಿಯಲ್ ವೆಲ್‌ಫೇರ್ ಆಫೀಸರ್ ಆಗಿದ್ದರು, ಅಲ್ಲಿಂದ ವರ್ಗಾವಣೆ ಮಾಡಿ ಎಂದು ಹೇಳಿದೆವು. ನಾವು ಈ ಅಧಿಕಾರಿ ಸರಿಯಿಲ್ಲ ವರ್ಗಾವಣೆ ಮಾಡಿರಿ ಎಂದರೆ, ಅವರನ್ನು ತೆಗೆದುಕೊಂಡು ಹೋಗಿ ಮಡಿಕೇರಿ ಎ. ಸಿ. ಆಗಿ ಹಾಕಿದ್ದಾರೆ. ನಮ್ಮ ಬೆಳ್ಳಿಯಪ್ಪನವರ ಕಾನ್‌ಸ್ಟಿಟ್ಯುಯೆನ್ಸಿಗೆ ಹಾಕಿದ್ದಾರೆ. ಅವರು ಒಳ್ಳೆಯ ಅಧಿಕಾರಿಗಳಲ್ಲ ಎಂದು ಹೇಳಿದ್ದೇನೆ, ಎರಡನೇ ಬಾರಿಗೆ ಉಪವಿಭಾಗಾಧಿಕಾರಿಗಳಾಗಿ ಮಡಿಕೇರಿಗೆ ಹಾಕಿದ್ದಾರೆ.

ಶ್ರೀ ಎ. ಎಮ್. ಬೆಳ್ಳಿಯಪ್ಪ.—ಅವರು ಅಸಿಸ್ಟೆಂಟ್ ಕಮಿಷನರ್ ಆಗಿ ಮಡಿಕೇರಿಗೆ ಬಂದಿದ್ದಾರೆ. ನೀವು ಹೇಳಿದ ವಿಷಯ ನನಗೆ ಗೊತ್ತಾಗಿಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ಇನ್ನು ಮೇಲೆ ಗೊತ್ತಾಗುತ್ತದೆ. ಸಭಾಧ್ಯಕ್ಷರೇ, ಇದರಲ್ಲಿ ಬಹಳ ಅನ್ಯಾಯವಾಗಿದೆ, ಬಹಳ ಅನ್ಯಾಯ ಮಾಡಿದ್ದಾರೆ ಎಂದು ಈ ಸದನದಲ್ಲಿ ಹೇಳುತ್ತೇನೆ.

ಶ್ರೀ ಎಂ. ಮಹದೇವ್.—ಆಡಳಿತದಲ್ಲಿ ತೀರಾ ಹಸ್ತಕ್ಷೇಪ ಮಾಡುವುದು ಸರಿಯಲ್ಲ. ಜಾತೀಯ ಆಧಾರದ ಮೇಲೆ ಪೋಸ್ಟಿಂಗ್ಸ್ ಕೊಡುತ್ತಾರೆ ಎಂದು ಹೇಳುವುದು ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ನಾನು ಪ್ರೂಫ್ ಕೊಡುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷರೇ, ಯಾವ ಯಾವ ಇಲಾಖೆಗೆ ಯಾರು ಯಾರನ್ನು ಹಾಕಿದ್ದಾರೆ ಎಂದು ಜಾತೀವಾರು ಪಟ್ಟಿಯನ್ನು ಬೇಕಾದರೆ ಹೇಳುತ್ತೇನೆ. ಆಗ ನಿಮಗೆ ಗೊತ್ತಾಗುತ್ತದೆ. ನಾನು ಈ ಜಾತಿ ವಿಚಾರವನ್ನು ಹೇಳಬಾರದೆಂದು ಇದ್ದೆ. ನನ್ನ ಹತ್ತಿರ ಪಟ್ಟಿ ಇದೆ, ಮಾನ್ಯ ಸಭಾಧ್ಯಕ್ಷರು ಅವಕಾಶ ಕೊಟ್ಟರೆ ಇಲ್ಲೇ ಬೇಕಾದರೆ ಅದನ್ನು ಓದುತ್ತೇನೆ. ಅದಕ್ಕೆ ಎರಡು ಘಂಟೆ ಟೈಮ್ ಬೇಕಾಗುತ್ತದೆ. ನನ್ನ ಹತ್ತಿರ ದಾಖಲೆ ಇದೆ. ಅದನ್ನು ಹೇಳಿದರೆ ನೀವು ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತೀರಿ. ದಯವಿಟ್ಟು ಏತಕ್ಕೆ ಅಂತಹ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತೀರಿ. ಅದು ಬೇಡ.

ಇನ್ನು ಗ್ರಾಮೀಣ ಅಭಿವೃದ್ಧಿ ಇಲಾಖೆಯ ಸಚಿವರು ಇದ್ದಾರೆ, ಅವರ ಬಗ್ಗೆ ನನಗೆ ಬಹಳ ವಿಶ್ವಾಸ ಇದೆ. ಅವರು ಒಳ್ಳೆಯ ಕೆಲಸ ಮಾಡುತ್ತಾರೆ, ಅವರ ಬಗ್ಗೆ ವಿಶ್ವಾಸ ಇಟ್ಟುಕೊಳ್ಳಬೇಡಿ ಎಂದು ನನ್ನ ಮಿತ್ರರು ಹೇಳಿಕೊಡುತ್ತಿದ್ದಾರೆ ನೋಡಿ.

ಅಧ್ಯಕ್ಷರು.—ಯಾವ ಸಚಿವರ ಮೇಲೆ ನಿಮಗೆ ವಿಶ್ವಾಸ ಇಲ್ಲ, ಅವರಿಂದ ಮೊದಲು ಪ್ರಾರಂಭ ಮಾಡಿ.

ಶ್ರೀ ಎಂ. ಪಿ. ವೆಂಕಟೇಶ್.—ಈ ಮಧ್ಯೆ ನಿಮ್ಮ ಕಡೆಯವರೇ ಅವರನ್ನು ಸಂಕಟಕ್ಕೆ ಸಿಕ್ಕಿಸಿದ್ದಿರಿ. ಗ್ರಾಮೀಣಾಭಿವೃದ್ಧಿ ಸಚಿವರ ಮೇಲೆ ನನಗೆ ನಂಬಿಕೆ ಇದೆ. ಅವರು ಒಳ್ಳೆಯ ಕೆಲಸ ಮಾಡುತ್ತಾರೆ. ಪ್ರಶ್ನೆ ಕೇಳಿದಾಗಲೇ ಅವರು ಕಾಲು ಘಂಟೆ ಉತ್ತರ ಕೊಡುತ್ತಾರೆ. ಎಲ್ಲಾ ಕೆಲಸಗಳನ್ನು ಶಿಸ್ತಿನಿಂದ ಮಾಡುತ್ತಾರೆ. ನೀವು ಅವರ ಮೇಲೆ ಏನೇ ಒತ್ತಾಯ ಮಾಡಿ ಅವರ ತಲೆ ತುಂಬಿದರೂ ಅವರು ಬಗ್ಗುವುದಿಲ್ಲ. ಅವರು ಕಾನೂನು ಪ್ರಕಾರ ಹೋಗುತ್ತಾರೆ. ಅವರಿಗೆ ನೀವು ಆ ಕಾನೂನು ಮಾಡಿ, ಈ ಕಾನೂನಿಗೆ ಕೈಹಾಕಿ, ಅದಕ್ಕೆ ಕೈಹಾಕಿ, ಜಿಲ್ಲಾ ಪರಿಷತ್ತನ್ನು ಮುಗಿಸಿ, ಅದನ್ನು ಮುಗಿಸಿ, ಇದನ್ನು ಮುಗಿಸಿ ಎಂದರೆ ಅವರು ಕೇಳುವುದಿಲ್ಲ. ಆ ವಿಶ್ವಾಸ ನಮಗೆ ಇದೆ. ಅವರ ವಿಚಾರದಲ್ಲಿ ನಮಗೆ ನಂಬಿಕೆ ಇದೆ. ಸನ್ಮಾನ್ಯ ಸಭಾಧ್ಯಕ್ಷರೇ, ಶಾಸಕರಿಗೆ ತಾಲ್ಲೂಕು ಪಂಚಾಯುತಿ ಸಮಿತಿಯಲ್ಲಿ ಅಧ್ಯಕ್ಷಸ್ಥಾನ ಇದೆ. ಅವರಿಗೆ ಇನ್ನೂ ಹೆಚ್ಚಿನ ಅಧಿಕಾರ ಕೊಡಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ವಿರೋಧ ಪಕ್ಷದಲ್ಲಿದ್ದಾಗ.

ಶ್ರೀ ಎಂ. ಪಿ. ವೆಂಕಟೇಶ್.—ನಾನು ಈಲ್ಡ್ ಆಗಿಲ್ಲ. ನಾನು ಈಲ್ಡ್ ಆಗಿಲ್ಲ. ಟೈಮ್ ಆಗಿ ಹೋಯಿತು. ಶಾಸಕರುಗಳಿಗೆ ತಾಲ್ಲೂಕು ಪಂಚಾಯತ್ ಸಮಿತಿ ಅಧ್ಯಕ್ಷರ ಸ್ಥಾನ ಕೊಟ್ಟಿದ್ದೀರಿ. ಅವರಿಗೆ ಆ ಕಮಿಟಿಯಲ್ಲಿ ಬರೀ ರಿವ್ಯೂ ಮಾಡುವುದು ಬಿಟ್ಟರೆ ಬೇರೆ ಯಾವ ಅಧಿಕಾರ ಇರುವುದಿಲ್ಲ. ಆದುದರಿಂದ ಶಾಸಕರಿಗೆ ಇನ್ನೂ ಹೆಚ್ಚಿನ ಅಧಿಕಾರ ಕೊಡಿ. ಅದನ್ನು ಪರಿಶೀಲನೆ ಮಾಡುವ ಅಧಿಕಾರ ಕೊಡಬೇಕು. ಹಾಗೆ ಜನತಾ ಮನೆಗಳನ್ನು ಕೊಡುತ್ತಿದ್ದಾರೆ, ಅದರ ಬಗ್ಗೆ ಅಧಿಕಾರ ಕೊಡಬೇಕು, ಜಿಲ್ಲಾ ಪರಿಷತ್‌ನವರು ತಾಲ್ಲೂಕಿನಲ್ಲಿ ಯಾವುದೇ ಕೆಲಸ ಮಾಡಲಿ ಅದನ್ನು ಶಾಸಕರ ಅಧ್ಯಕ್ಷತೆಯಲ್ಲಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸನ್ಮಾನ್ಯ ಮಂತ್ರಿಗಳಲ್ಲಿ ನನ್ನದೊಂದು ಪ್ರಾರ್ಥನೆ. ಈ ಮಂಡಲ್‌ದವರು ಬಡವರಿಗೆ ಏನು ನಿವೇಶನಗಳನ್ನು ಕೊಡುತ್ತಾರೆ, ಅದಕ್ಕಾಗಿ ಜಮೀನನ್ನು ತೆಗೆದುಕೊಂಡರೆ ಅದಕ್ಕೆ ಮಂಡಲ್‌ದವರೇ ದುಡ್ಡು ಕೊಡಬೇಕೆಂದು ಇದೆ. ಮಂಡಲದವರು ಯಾರಿಂದಲೇ ಆಗಲಿ ಭೂಮಿ ತೆಗೆದುಕೊಂಡರೆ ಅಥವಾ ಭೂಮಿಯನ್ನು ಸ್ವಾಧೀನ ಮಾಡಿಕೊಂಡರೆ, ಅದಕ್ಕೆ ಸರಕಾರದವರು ಹಣ ಕೊಡುವುದಿಲ್ಲ, ಅದಕ್ಕೆ ಮಂಡಲದವರೇ ಹಣ ಕೊಡಬೇಕೆಂದು ಜಿಲ್ಲಾ ಪರಿಷತ್ ಆಕ್ಟ್‌ನಲ್ಲಿ ಇದೆ. ಆದರೆ ಮಂಡಲದವರಿಗೆ ಕೊಡುವ ದುಡ್ಡು ಇತರೆ ಕೆಲಸಕಾರ್ಯಗಳಿಗೆ ಸಾಕಾಗುತ್ತದೆ. ಇದಕ್ಕೆ ಕೊಡಲು ಹಣ ಸಾಲುವುದಿಲ್ಲ. ಸರಕಾರದವರು ಹಿಂದೆ ಇದಕ್ಕಾಗಿ ಭೂಮಿಯನ್ನು ವಶಪಡಿಸಿಕೊಂಡಾಗ ನೇರವಾಗಿ ಹಣವನ್ನು ಕೊಡುತ್ತಿದ್ದರು, ಪಂಚಾಯತಿಯವರು ಇದನ್ನು ಹಂಚುತ್ತಿದ್ದರು. ಈಗ ಮಂಡಲದವರೇ ದುಡ್ಡು ಕೊಡಬೇಕೆಂದರೆ ಅದು ಅವರಿಂದ ಸಾಧ್ಯವಾಗುವುದಿಲ್ಲ. ಹೀಗಾದರೆ ಜನರಿಗೆ ನಿವೇಶನ ಸಿಗುವುದು ಕಠಿಣವಾಗುತ್ತದೆ. ಆದ್ದರಿಂದ ಸರಕಾರವೇ ಜಮೀನನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಹಣವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಅಲ್ಲದೆ ಈಗೇನು ಮಂಡಲಕ್ಕೆ ಹಣ ಕೊಡುತ್ತಿದ್ದೀರಿ ಅದು ಸಾಲುವುದಿಲ್ಲ, ಇನ್ನೂ ಹೆಚ್ಚಿನ ಹಣ ಕೊಡಬೇಕೆಂದು ಹೇಳುತ್ತೇನೆ. ಇನ್ನು ಉಪಾಧ್ಯಕ್ಷರ ಸ್ಥಾನವನ್ನು ಪರಿಶಿಷ್ಟ ಜಾತಿಯವರಿಗೆ ಮೀಸಲಿಡಬೇಕೆಂದು ಅನೇಕ ಸದಸ್ಯರು ಹೇಳಿದ್ದಾರೆ. ಅದಕ್ಕೆ ನಾನು ಬೆಂಬಲವನ್ನು ಕೊಡುತ್ತೇವೆ. ಉಪಾಧ್ಯಕ್ಷರ ಸ್ಥಾನ ಪರಿಶಿಷ್ಟ ಜಾತಿಯವರಿಗೆ ರಿಸರ್ವ್ ಆಗಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಯಾವಾಗಲೂ ಸಣ್ಣಸಣ್ಣದ್ದನ್ನು ಕೇಳಬಾರದು.

ಶ್ರೀ ಎಂ. ಪಿ. ವೆಂಕಟೇಶ್.—ನನ್ನ ಕ್ಷೇತ್ರದಲ್ಲಿ ಮಳೂರು ಎಂಬ ಗ್ರಾಮದಲ್ಲಿ ೪೦೦ ಎಕರೆ ಜಮೀನನ್ನು ಕೇರಳ ರಾಜ್ಯದವರು ಬಂದು ಅಲ್ಲಿ ಬಹಳ ಕಡಿಮೆ ಬೆಲೆಗೆ ಪರ್ಚೇಸ್ ಮಾಡಿ, ಅದರಲ್ಲಿದ್ದ ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಮರಗಳನ್ನು ಮಾಫಿ ಲೈಸೆನ್ಸ್, ಪವರ್ ಆಫ್ ಅಟರ್ನಿ ಹೋಲ್ಡರ್ ಇದ್ದವರು ತೆಗೆದುಕೊಂಡಿದ್ದಾರೆ. ಹಿಂದೆ ಜಿಲ್ಲಾಧಿಕಾರಿಯವರಾಗಿದ್ದ ಭಳಿಗಾರ್‌ರವರು ಕೊಡುವುದಕ್ಕೆ ಆಗುವುದಿಲ್ಲ. ಸರ್ಕಾರದವರೇ ತೆಗೆದುಕೊಳ್ಳುತ್ತಾರೆ. ನೀವು ಬಹಳ ಕಡಿಮೆ ಬೆಲೆಯಲ್ಲಿ ಜಮೀನು ತೆಗೆದುಕೊಂಡಿದ್ದೀರಿ, ಇದು ಆಗುವುದಿಲ್ಲ ಎಂದು ಹೇಳಿದಾಗ ಅವರ ಮೇಲೆ ಒತ್ತಡ ತಂದು ಅಂದರೆ ಕೇರಳ ರಾಜ್ಯದ ಅಂದಿನ ಮುಖ್ಯಮಂತ್ರಿಗಳ ಒತ್ತಾಯದ ಮೇರೆಗೆ ಅವರಿಗೆ ಮಾಫಿ ಲೈಸೆನ್ಸ್ ಕೊಟ್ಟರು. ಕೊಟ್ಟಾದ ಮೇಲೆ ಅವರು ಮರವನ್ನು ತೆಗೆಸಿಕೊಂಡು ಹೋದರು. ಪಕ್ಕದ ಕಾಡಿನಲ್ಲಿರುವ ಮರವನ್ನೆಲ್ಲ ಕಡಿದು ಲಾರಿಯಲ್ಲಿ ಸಾಗಿಸಿಕೊಂಡು ಹೋದರು. ನಾನು ತಕ್ಷಣವೇ ಡಿ. ಎಫ್. ಓ. ರವರಿಗೆ ಕಾಗದ ಬರೆದೆ. ಸರ್ಕಾರಕ್ಕೆ ಸೇರಿದ ಖರಾಬು ಜಮೀನಿನಲ್ಲಿ ಇರುವ ಮರಗಳನ್ನು ಹೊಡೆಯುತ್ತಿದ್ದಾರೆ ನೀವು ಸಂಪೂರ್ಣವಾಗಿ ತನಿಖೆ ಮಾಡಿ ಎಂದು ಹೇಳಿದಾಗ ಅವರು ಸ್ವಲ್ಪ ತನಿಖೆ ಮಾಡಿದಾಗಲೇ ಸಿಕ್ಕಿಹಾಕಿಕೊಂಡರು, ಅವರಿಂದ ೬೩ ಸಾವಿರ ರೂಪಾಯಿಯನ್ನು ಕಟ್ಟಿಸಿಕೊಂಡಿದ್ದಾರೆ. ನೀವು ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದೀರಿ. ಅವರು ಖರಾಬು ಜಮೀನಿನಲ್ಲಿ ಮರಗಳನ್ನು ಕಡಿದಿದ್ದರು. ಇವರು ಲ್ಯಾಂಡ್ ಸರ್ವೇ ಮಾಡುವಾಗ ಇದನ್ನು ಸರಿಯಾಗಿ ಮಾಡಲಿಲ್ಲ, ಆದ್ದರಿಂದ ನಾನು ಅವರಿಂದ ೬೩ ಸಾವಿರ ರೂಪಾಯಿಗಳನ್ನು ಕಟ್ಟಿಸಿಕೊಂಡಿದ್ದೇನೆ. ನೀವು ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದಕ್ಕೆ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ, ಸಂಪೂರ್ಣವಾಗಿ ತನಿಖೆ ಮಾಡುತ್ತೇನೆಂದು ಅವರು ನನಗೆ ಪತ್ರ ಬರೆದರು. ಅದಾದ ಮೂರು ದಿವಸಗಳಿಗೆ ಪರ್ಮಿಟ್ ಕೊಟ್ಟರು. ನಾನು ತಿರುಗ ಅವರಿಗೆ ಪತ್ರ ಬರೆದೆ. ನೀವು ಪರ್ಮಿಟ್ ಕೊಡುತ್ತಿದ್ದೀರಿ, ಪೂರ ರೀಸರ್ವೆ ಆಗುವವರೆಗೆ ಪರ್ಮಿಟ್ ಕೊಡಬೇಡಿ, ನಮ್ಮ ರೈತರೆಲ್ಲ ಗಲಾಟೆ ಮಾಡುತ್ತಿದ್ದಾರೆಂದು ಪುನಃ ಅವರಿಗೆ ಪತ್ರ ಬರೆದೆ. ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅವರು ಬೆಂಗಳೂರಿಗೆ ಬಂದಿದ್ದಾರೆ. ಅವರು ಅಲ್ಲಿನ ಮಾಜಿ ಮುಖ್ಯ ಮಂತ್ರಿಗಳ ಕಡೆಯವರು ಅಲ್ಲಿ

ಎಕ್ಸ್ ಎಂ. ಎಲ್. ಎ. ಆಗಿದ್ದರು. ಅವರು ಇಲ್ಲಿ ಬಂದು ಇನ್‌ಫ್ಲೂಯೆನ್ಸ್ ಮಾಡಿದ್ದಾರೆ. ನಾನು ಈ ಸದನದಲ್ಲಿ ಪ್ರಶ್ನೆ ಹಾಕಿ ಇಷ್ಟು ಗಲಾಟೆ ಮಾಡಿದರೂ ತಿರುಗ ಪರ್ಮಿಟ್ ಕೊಟ್ಟಿದ್ದರಿಂದ ಲಕ್ಷಾಂತರ ರೂಪಾಯಿ ಬಾಳುವ ಮರ ಹೊರಟುಹೋಗಿದೆ. ಈಗ ಖಾಲಿ ಜಮೀನು ಬಿದ್ದಿದೆ. ಆ ಜಮೀನನ್ನೂ ಸಹ ಈಗ ಮಾರುತ್ತಿದ್ದಾರೆ. ಆ ಜಮೀನನ್ನು ಸುತ್ತಮುತ್ತಲು ಇರುವ ಜನರಿಗೆ ಕೊಡಿ ಎಂದರೆ ಅವರು ಕೊಡುತ್ತಿಲ್ಲ. ಪುನಃ ಕೇರಳದವರಿಗೆ ಮಾರುತ್ತಿದ್ದಾರೆ. ಈ ಬಗ್ಗೆ ನಾನು ಪ್ರಶ್ನೆ ಹಾಕಿದಾಗ ಸಚಿವರು ಈ ದೇಶವನ್ನೆಲ್ಲಾ ತನಿಖೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಸಿಬ್ಬಂದಿ ಇಲ್ಲ ಏನೂ ಇಲ್ಲ ಎಂದು ಹೇಳುತ್ತಾರೆ. ಈ ದೇಶದನ್ನೆಲ್ಲ ತನಿಖೆ ಮಾಡಿ, ಬೇಡವೆಂದು ಹೇಳುವುದಿಲ್ಲ. ಆದರೆ ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಬಾಳುವ ಮರಗಳ ಲೂಟಿಯಾಗಿದೆ. ಇವರ ಬಗ್ಗೆ ಸಂಪೂರ್ಣವಾಗಿ ತನಿಖೆ ಮಾಡಿದರೆ ಯಾರ್ಯಾರು ತಪ್ಪಿತಸ್ಥರಿದ್ದಾರೆಂದು ತಮಗೆ ಗೊತ್ತಾಗುತ್ತದೆ. ಈ ಮರೆಯೂರು ಕಾವಲ್ ಜಮೀನನ್ನು ಸಂಪೂರ್ಣವಾಗಿ ತನಿಖೆ ಮಾಡಿ ಎಂದು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ೨೫ ಸಾವಿರ ಎಕರೆ ಅರಣ್ಯ ಜಮೀನನ್ನು ಇವತ್ತು ಸಾಗುವಳಿ ಮಾಡುತ್ತಿದ್ದಾರೆ. ಕಂದಾಯ ಇಲಾಖೆಯವರು ಅವರಿಗೆ ಹ್ಯಾಂಡ್‌ಓವರ್ ಮಾಡಿದ್ದೇವೆಂದು ಪತ್ರದ ಮುಖಾಂತರ ಮಾಡಿದ್ದಾರೆಯೇ ಹೊರತು ೪೦-೫೦ ವರ್ಷಗಳಿಂದ ಅವರೇ ಜಮೀನು ಮಾಡುತ್ತಿದ್ದಾರೆ. ಇವತ್ತಿಗೂ ಸಹ ಬಿಟ್ಟುಕೊಟ್ಟಿಲ್ಲ, ಅವರೇ ಸ್ವಾಧೀನದಲ್ಲಿ ಇಟ್ಟುಕೊಂಡಿದ್ದಾರೆ. ಆದರೆ ಫಾರೆಸ್ಟ್ ದಾಖಲೆಯಲ್ಲಿ ನಾವು ತೆಗೆದುಕೊಂಡಿದ್ದೇವೆ ಎನ್ನುವುದು ಇದೆ. ಇವತ್ತೂ ಅವರು ಸ್ವಾಧೀನಕ್ಕೆ ಬಿಟ್ಟಿಲ್ಲ, ಅವರೇ ಸಾಗುವಳಿ ಪತ್ರ ಕೊಡಬೇಕು. ಈ ರಾಜ್ಯ ಸರ್ಕಾರ ಏನು ಸ್ಟೇಟ್ ಫಾರೆಸ್ಟ್ ಇದೆ ಅದಕ್ಕೆ ನೀವು ಕೊಡಬೇಕು. ಕೇಂದ್ರ ಸರ್ಕಾರಕ್ಕೆ ಸೇರಿದ್ದರೆ ನೀವು ಅದಕ್ಕೆ ಶಿಫಾರಸ್ಸು ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ನಾನು ಹಲವಾರು ಸಾರಿ ಈ ಸದನದಲ್ಲಿ ಹೇಳಿದೆ. ಇಲ್ಲಿಂದ ಕೇರಳ ರಾಜ್ಯಕ್ಕೆ ದನಕರುಗಳು ಹೋಗುತ್ತಿವೆ. ಸಿಕ್ಕಾಪಟ್ಟೆ ಸಾವಿರಾರು ಲೋಡ್‌ಗಳು ಹೋಗುತ್ತಿವೆ, ಸಣ್ಣಸಣ್ಣ ಮರಿಗಳನ್ನು, ಹಸುಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಹೇಳಿದೆ. ಮಾನ್ಯ ಸಚಿವರು ಕಾನೂನಿನಲ್ಲಿ ನಿಬಂಧನೆವಿಲ್ಲವೆಂದು ಹೇಳಿದರು. ಬಹುಶಃ ಗೋಸಮಿತಿಯವರು ಸಣ್ಣ ಹಸುಗಳು, ಹೋಗಬಾರದೆಂದು ಕಾನೂನು ಇದೆ ಎಂದು ಹೇಳಿದರು, ಅದನ್ನು ತಂದಿಲ್ಲ. ಆ ಕಾನೂನಿನಲ್ಲಿ ಸಣ್ಣ ಸಣ್ಣ ಹಸುಗಳು ಇಲ್ಲಿಂದ ಬೇರೆ ರಾಜ್ಯಗಳಿಗೆ ಹೋಗಬಾರದೆಂದು ಇದೆ. ಬಹುಶಃ ಇದರಿಂದ ನಮ್ಮ ರೈತರಿಗೆ ಯಾರಿಗೂ ದನಗಳೇ ಸಿಕ್ಕುತ್ತಿಲ್ಲ, ಎಲ್ಲಾ ಸಾಗಿಸಿಕೊಂಡು ಹೋಗುತ್ತಿದ್ದಾರೆ. ಕಟ್‌ಮಾಡಿ ಅಲ್ಲಿಂದ ದುಬಾಯಿಗೆ ಕಳುಹಿಸುತ್ತಿದ್ದಾರೆ. ಬಹುಶಃ ಹಿಂದಿನ ಸರ್ಕಾರದಲ್ಲಿ ಇವುಗಳನ್ನು ಕಟ್‌ಮಾಡಿ ಅಲ್ಲಿಂದ ದುಬಾಯಿಗೆ ಕಳುಹಿಸುವ ವ್ಯವಸ್ಥೆ ಇತ್ತು. ನೀವು ಆ ಕೆಲಸವನ್ನು ಮಾಡಬೇಡಿ. ಈ ವಿಚಾರದಲ್ಲಿ ಹಿಂದೆ ಗಲಾಟೆ ಮಾಡಿದಾಗ ಹಸುಗಳನ್ನು ತೆಗೆದುಕೊಂಡುಹೋಗಿ ಕಟ್‌ಮಾಡಿ ದುಬಾಯಿಗೆ ಕಳುಹಿಸುತ್ತಿದ್ದರು. ಈಗ ಅವರು ಇಲ್ಲ, ಅವರು ಹೊರಟು ಹೋಗಿದ್ದಾರೆ. ಅವರು ಇನ್‌ಫ್ಲೂಯೆನ್ಸ್ ಮಾಡಿ ಹೋಗಲಿಬಿಡಿ ಎಂದು ಮಾಡಿದ್ದರು. ಆದ್ದರಿಂದ ನೀವೂ ಆ ಕೆಲಸ ಮಾಡಬೇಡಿ. ಆ ಪಾಪಕ್ಕೆ ಗುರಿಯಾಗಬೇಡಿ. ಗೋವಿನ ಪಾಪ ತಗುಲಿದರೆ ಭಾರಿ ಶಾಪವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಈಗಾಗಲೆ ನಾವೆಲ್ಲ ಹುಲ್ಲಿನ ಬಗ್ಗೆ ಗಮನ ಸೆಳೆಯುವ ಸೂಚನೆ ಮೂಲಕ ತಮ್ಮ ಗಮನಕ್ಕೆ ತಂದಿದ್ದೇವೆ. ನಮ್ಮ ರಾಜ್ಯದಿಂದ ಕೇರಳ ರಾಜ್ಯಕ್ಕೆ ಪ್ರತಿನಿತ್ಯ ಲೋಡುಗಟ್ಟಲೆ ಹುಲ್ಲು ಹೋಗುತ್ತಿದೆ. ನಮಗೆ ಇಲ್ಲಿ ಹುಲ್ಲು ಸಿಗುತ್ತಿಲ್ಲ. ಇದನ್ನು ತಾವು ನಿರ್ಬಂಧ ಮಾಡದಿದ್ದರೆ ನಮ್ಮ ದನಕರುಗಳಿಗೆ ಹುಲ್ಲೇ ಸಿಗುವುದಿಲ್ಲ. ನಮ್ಮ ರಾಜ್ಯದಿಂದ ಹುಲ್ಲು ಕೇರಳ ರಾಜ್ಯಕ್ಕೆ ಹೋಗುತ್ತಿದೆ. ಮತ್ತೆ ಗೊಬ್ಬರದ ಚೀಲಗಳಲ್ಲಿ ಗಂಧ, ಟೀಕ್, ರೋಜ್‌ವುಡ್ ಎಲ್ಲಾ ಲಾರಿಗಳಲ್ಲಿ ಹೋಗುತ್ತಿದೆ. ಗಡಿ ಜಿಲ್ಲೆಗಳಿಂದ ಈ ರೀತಿ ಸಂಪೂರ್ಣವಾಗಿ ಕಳ್ಳಸಾಗಾಣಿಕೆ ನಡೆಯುತ್ತಿದೆ. ಗೊಬ್ಬರದ ಚೀಲಗಳಲ್ಲಿ ಗಂಧದ ಮರಗಳು, ಟೀಕ್ ಮರಗಳ ತುಂಡುಗಳನ್ನು ಲಾರಿಗಳಲ್ಲಿ ಸಾಗಿಸುತ್ತಿದ್ದಾರೆ, ಗೊಬ್ಬರದ ಮೂಟೆಗಳಲ್ಲಿ ಅದೂ ಲಾರಿಗಳಲ್ಲಿ ಸಾಗಿಸುತ್ತಿದ್ದಾರೆ. ಇವುಗಳನ್ನು ಎಲ್ಲಿ ಚೆಕ್ ಮಾಡಿದರೂ ಗೊತ್ತಾಗುವುದಿಲ್ಲ. ನಮ್ಮ ರಾಜ್ಯದಿಂದ ಕೇರಳ ರಾಜ್ಯಕ್ಕೆ ಕಳ್ಳ ಸಾಗಾಣಿಕೆ ನಡೆಯುತ್ತಿದೆ. ಅಧಿಕಾರಿಗಳು ಅಲ್ಲಿ ಚೆಕ್ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಅಲ್ಲಿ ಚೆಕ್‌ಪೋಸ್ಟ್‌ಗಳಿಗೆ ಹೋಗಿ ಆ ಗೊಬ್ಬರದ ಮೂಟೆಗಳನ್ನು ಕೆಳಗೆ ಇಳಿಸಿ ಪ್ರತಿಯೊಂದನ್ನೂ ಚೆಕ್ ಮಾಡಿದರೆ ನಿಮಗೆ ಗೊಬ್ಬರದ ಮೂಟೆಗಳಲ್ಲಿ ಗಂಧದ ಮರಗಳು ಟೀಕ್ ಮರಗಳು ಇರುವುದು ಗೊತ್ತಾಗುತ್ತದೆ......

ಅಧ್ಯಕ್ಷರು.—ಈಗ ಕೇರಳ ರಾಜ್ಯಕ್ಕೆ ಗಂಧ ಹೋಗುತ್ತಿದೆ. ಹಸು ಕರುಗಳು ದನಗಳು ಹೋಗುತ್ತಿವೆ. ಹುಲ್ಲು ಹೋಗುತ್ತಿದೆ. ಈಗ ಬರ್ಲಿನ್ ವಾಲ್ ಕೆಡವಿ ಬಿಟ್ಟಿದ್ದಾರೆ. ಇದನ್ನು ತಡೆಗಟ್ಟಲು ನಮ್ಮ ರಾಜ್ಯದ ಮತ್ತು ಕೇರಳ ರಾಜ್ಯಗಳಿಗೆ ಅಡ್ಡಲಾಗಿ ಒಂದು ವಾಲ್ ಏನಾದರೂ ಹಾಕಿಸೋಣವೇ?

ಶ್ರೀ ಎಂ. ಪಿ. ವೆಂಕಟೇಶ್.—ಅಷ್ಟೇ ಅಲ್ಲ, ಸಾರಾಯಿ ಹೋಗುತ್ತಿದೆ.

ಅಧ್ಯಕ್ಷರು.- ಈಗ ಸಾರಾಯಿ ಸೇರಿಸಿದಿರಿ,

ಶ್ರೀ ಎಂ. ಪಿ. ವೆಂಕಟೇಶ್.—ಸಾರಾಯಿ ಸಹ ಹೋಗುತ್ತಿದೆ. ಕೇರಳ ರಾಜ್ಯಕ್ಕೆ ನಮ್ಮ ರಾಜ್ಯದಿಂದ ಸುಲಭವಾಗಿ ಹೋಗಬೇಕಾದರೆ ಗುಂಡ್ಲುಪೇಟೆ ಮಾರ್ಗದಿಂದ ಮತ್ತು ಹೆಗ್ಗಡದೇವನ ಕೋಟೆ ಮಾರ್ಗದಿಂದ ಹೋಗಬೇಕಾಗುತ್ತದೆ.

ಅಧ್ಯಕ್ಷರು.—ಚೆಕ್‌ಪೋಸ್ಟ್‌ಗಳನ್ನು ಸ್ಟ್ರೆಂತನ್ ಮಾಡಿ ಎಂದು ಹೇಳುತ್ತೀರಾ?

ಶ್ರೀ ಎಂ. ಪಿ. ವೆಂಕಟೇಶ್.—ಮಾಡಬೇಕು. ನಮ್ಮ ರಾಜ್ಯದಿಂದ ಹುಲ್ಲು ಹೋಗುತ್ತಿದೆ. ಅದನ್ನು ತಡೆಗಟ್ಟಬೇಕು. ಗೊಬ್ಬರದ ಚೀಲಗಳಲ್ಲಿ ಗಂಧದ ಮರ ಹೋಗುತ್ತದೆ. ಗೋಣಿ ಚೀಲಗಳಲ್ಲಿ ಗಂಧದ ಮರ ತುಂಬಿ ಲಾರಿಗಳಲ್ಲಿ ಕೆಳಗೆ ಗಂಧದ ಮರ ಹಾಕಿ ಮೇಲೆ ಮಾತ್ರ ಗೊಬ್ಬರದ ಚೀಲಗಳನ್ನು ಇಟ್ಟಿರುತ್ತಾರೆ. ಇದನ್ನು ಯಾವ ರೀತಿ ಚೆಕ್ ಮಾಡುತ್ತೀರಿ? ಲಾರಿಗಳಿಂದ ಮೂಟೆಗಳನ್ನು ಕೆಳಗೆ ಇಳಿಸಿ ನೋಡುವವರು ಯಾರೂ ಫಾರೆಸ್ಟ್ ಇಲಾಖೆಯಲ್ಲಿ ಇಲ್ಲ. ಚೆಕ್ ಮಾಡಲು ಅಧಿಕಾರಿಗಳು ಏನಾದರೂ ಲಾರಿಗಳ ಹತ್ತಿರ ಹೋದರೆ ಅವರು ಗೊಬ್ಬರದ ಮೂಟೆಗಳು ಎಂದು ಹೇಳುತ್ತಾರೆ, ಅಧಿಕಾರಿಗಳು ಬಿಟ್ಟುಬಿಡುತ್ತಾರೆ. ಗೊಬ್ಬರದ ಚೀಲಗಳನ್ನು ಯಾರು ಬೇಕಾದರೂ ತೆಗೆದುಕೊಂಡು ಹೋಗಬಹುದು ಅಲ್ಲವೇ? ಇದರಿಂದ ನಮ್ಮ ರಾಜ್ಯಕ್ಕೆ ಬರುವ ಆದಾಯ ಸೋರಿ ಹೋಗುತ್ತಿದೆ. ಅರಣ್ಯ ಇಲಾಖೆಯಲ್ಲಿ ಈ ಲಾರಿಗಳನ್ನು ಚೆಕ್ ಮಾಡುವುದಕ್ಕೆ ಅವಕಾಶ ಇಲ್ಲ. ಲಾರಿ ಮಧ್ಯದಲ್ಲಿ ಗಂಧದ ತುಂಡುಗಳನ್ನು ಇಟ್ಟಿರುತ್ತಾರೆ. ಲಾರಿಯನ್ನು ನೋಡಿದರೆ ಗೊತ್ತಾಗುವುದಿಲ್ಲ. ಆಗ ಎಲ್ಲ ಪದಾರ್ಥಗಳನ್ನು ಕೆಳಗೆ ಇಳಿಸಿ ಪರಿಶೀಲನೆ ಮಾಡಿ ನಂತರ ಲೋಡ್ ಮಾಡುವುದಕ್ಕೆ ಅವಕಾಶ ಕೊಡಬೇಕು. ಇದನ್ನು ಸರ್ಕಾರದವರು ಶೀಘ್ರವಾಗಿ ಗಣನೆಗೆ ತೆಗೆದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಇನ್ನು ತೋಟಗಾರಿಕೆ ವಿಚಾರದಲ್ಲಿ ಹೇಳುವುದಾದರೆ, ಹರಿಜನ ಮತ್ತು ಗಿರಿಜನರಿಗೆ ತೆಂಗಿನ ಸಸಿಗಳನ್ನು, ಮಾವಿನ ಸಸಿಗಳನ್ನು ಪುಕ್ಕಟೆಯಾಗಿ ಕೊಡುತ್ತಿದ್ದಾರೆ. ಇದು ಬಹಳ ಕಡಿಮೆ. ಅವರು ಅವರ ಮನೆಗಳ ಮುಂದೆ ಮತ್ತು ತಮ್ಮ ತೋಟಗಳಲ್ಲಿ ಬೆಳೆಸಿಕೊಳ್ಳುತ್ತಾರೆ. ಈ ಸಸಿಗಳನ್ನು ಇನ್ನು ಹೆಚ್ಚು ಹೆಚ್ಚು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಬಹಳ ಕಡಿಮೆ ಸಸಿಗಳನ್ನು ಕೊಡುತ್ತಿದ್ದಾರೆ. ಒಂದೊಂದು ತಾಲ್ಲೂಕಿಗೆ ೫೦೦ ರಿಂದ ೧೦೦೦ ಸಸಿಗಳನ್ನು ಮಾತ್ರ ಕೊಡುತ್ತಿದ್ದಾರೆ. ಈ ಸಸಿಗಳನ್ನು ಹೆಚ್ಚು ಹೆಚ್ಚು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ, ಇನ್ನು ಬಹಳ ಮುಖ್ಯವಾಗಿ ಕಬಿನಿ ಡ್ಯಾಮ್ ಇದೆ. ಇಲ್ಲಿ ಸುಮಾರು ೩೦೦ ಎಕರೆ ಜಮೀನು ಇದೆ. ಅಂತಹ ಪವಿತ್ರವಾದ ಜಾಗದಲ್ಲಿ ಕತ್ತೆಗಳು ಬಂದು ಮೇಯುತ್ತಿವೆ. ನಾನು ನಮ್ಮ ಲೋಕೋಪಯೋಗಿ ಸಚಿವರನ್ನು ಈ ಬಗ್ಗೆ ಒಂದು ಪ್ರಶ್ನೆ ಕೇಳಿದ್ದೆ. ಆಗ ಅವರು ಹೇಳಿದರು, ಈ ಜಮೀನನ್ನು ನಾವು ತೋಟಗಾರಿಕೆ ಇಲಾಖೆಗೆ ವರ್ಗಾವಣೆ ಮಾಡಿದ್ದೇವೆಂದು ಹೇಳಿದರು. ತೋಟಗಾರಿಕೆ ಇಲಾಖೆಯವರನ್ನು ಕೇಳಿದರೆ ಲೋಕೋಪಯೋಗಿ ಇಲಾಖೆಯವರಿಗೆ ಹೇಳುತ್ತಾರೆ. ಈಗ ಅವರು ಹೇಳುತ್ತಿದ್ದಾರೆ ನಮ್ಮಲ್ಲಿ ಹಣ ಇಲ್ಲ ಅವರೇ ಮಾಡಲಿ ಎಂದು ಹೇಳುತ್ತಾರೆ. ಮಾನ್ಯ ಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಆ ಜಮೀನು ತೋಟಗಾರಿಕೆ ಇಲಾಖೆಯ ವಶದಲ್ಲಿ ಇದೆ. ತಾವು ಆ ಜಮೀನಿನಲ್ಲಿ ತೋಟಗಾರಿಕೆ ಕೆಲಸ ಮಾಡಲು ಸಾಧ್ಯವಾದರೆ ಮಾಡಿ ಇಲ್ಲದೆ ಹೋದರೆ ಆ ಜಮೀನನ್ನು ಲೋಕೋಪಯೋಗಿ ಇಲಾಖೆಯವರಿಗೆ ಕೊಡಿ. ಅದನ್ನು ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಆ ೩೦೦ ಎಕರೆ ಜಮೀನನ್ನು ವಾಪಸ್ ಮಾಡಿ. ನಾನು ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಪತ್ರ ಸಹ ಬರೆದಿದ್ದೆ. ಅವರು ಸಹ ಒಪ್ಪಿಕೊಂಡಿದ್ದಾರೆ. ಅಲ್ಲಿ ಸುಂದರವಾದ ಒಂದು ಗಾರ್ಡನ್ ಮಾಡಿ. ಅಲ್ಲಿಗೆ ಸಾರ್ವಜನಿಕರು ಬರುತ್ತಿದ್ದಾರೆ. ಅಲ್ಲಿ ಗಾರ್ಡನ್ ಇಲ್ಲದೆ ಕತ್ತೆಗಳು ಮೇಯುತ್ತಿವೆ. ಆದ್ದರಿಂದ ತೋಟಗಾರಿಕೆ ಇಲಾಖೆಯವರು ಈ ಜಮೀನನ್ನು ನಮ್ಮ ಲೋಕೋಪಯೋಗಿ ಇಲಾಖೆಯವರಿಗೆ ವಾಪಸ್ ಮಾಡಿದರೆ ಅವರಲ್ಲಿ ಹಣ ಇದೆ, ಅವರು ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಹುಲ್ಲು ಒಣಗಿ ಹೋಗುವ ಮೊದಲು ಕತ್ತೆಗಳು ಮೇಯ್ದರೆ ಸಂತೋಷ ಅಲ್ಲವೇ.

ಶ್ರೀ ಎಂ. ಪಿ. ವೆಂಕಟೇಶ್.—ಅಲ್ಲಿ ತೋಟ ಮಾಡಬೇಕಾಗುತ್ತದೆ. ಕತ್ತೆಗಳು ಮೇಯುತ್ತಿವೆ.

೬-೦೦ ಪಿ. ಎಂ.

ಮಾನ್ಯ ಅಧ್ಯಕ್ಷರೇ, ನಾನು ಇಷ್ಟು ಸಲಹೆಗಳನ್ನು ಕೊಡುತ್ತಾ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆ ಬೇಡಿಕೆಗೆ ಒಪ್ಪಿಗೆ ಕೊಡುತ್ತೇನೆ, ತೋಟಗಾರಿಕೆ ಇಲಾಖೆ ಬೇಡಿಕೆಗೆ ಒಪ್ಪಿಗೆ ಕೊಡುತ್ತೇನೆ. ಆದರೆ, ಅರಣ್ಯ ಇಲಾಖೆ ಬೇಡಿಕೆಗೆ ಒಪ್ಪಿಗೆ ಕೊಡುವುದಿಲ್ಲ, ಮುಖ್ಯಮಂತ್ರಿಗಳ ಇಲಾಖೆಯ ಬೇಡಿಕೆಗಳಿಗೂ ಒಪ್ಪಿಗೆ ಕೊಡುವುದಿಲ್ಲವೆಂದು ಹೇಳಿ, ತಾವು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ಅತಿಯಾಯಿತು. ವಿರೋಧ ಪಕ್ಷದಲ್ಲಿದ್ದುಕೊಂಡು ಈ ರೀತಿ ಭಾಷಣ ಮಾಡುವವರು ಇವತ್ತಿನವರೆಗೂ ಯಾರೂ ಬಂದಿಲ್ಲ. ಆದುದರಿಂದ ಇವತ್ತು ವಿಶೇಷವಾದ ಪ್ರಸಂಗ. ನಿಜವಾಗಿಯೂ ನಾವು ತಲೆಯನ್ನು ಈ ಕಡೆ ತಿರುಗಿಸಿಕೊಳ್ಳಬೇಕು. ಈ ಪರಿಸ್ಥಿತಿಗೆ ಅವರು ನಮ್ಮನ್ನು ತರಬಾರದಾಗಿತ್ತು.

ಶ್ರೀ ಬಿ. ಹೆಚ್. ಬನ್ನಿಕೋಡ್.—ಸರ್ಕಾರದಲ್ಲಿ ಅವರಿಗೆ ಬೇಕಾದವರು ಇದ್ದಾರೆಂದು ಕಾಣುತ್ತದೆ.

†ಶ್ರೀ ಕೆ. ಶಿವಮೂರ್ತಿ(ಭಗವುಸಾಗರ).—ಸನ್ಮಾನ್ಯ ಅಧ್ಯಕ್ಷರೇ, ಈಗ ಸದನದಲ್ಲಿ ಮಂಡಿಸಿರತಕ್ಕ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ ಕೆಲವು ವಿಚಾರಗಳನ್ನು ಈ ಸದನದ ಮುಂದೆ ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ. ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯತಿಗಳು ಗ್ರಾಮಾಂತರ ಪ್ರದೇಶದಲ್ಲಿ ಬಂದಾಗ ಬಹಳ ದೊಡ್ಡದಾಗಿರತಕ್ಕಂಥ ಪ್ರಚಾರ ಮಾಡಿದರು. ಅದಕ್ಕೆ ಅವರು ಒಳ್ಳೆಯ ಅರ್ಥವನ್ನು ಕೊಟ್ಟು ಸಾಮಾನ್ಯ ಜನಗಳಿಗೆ ಮನ ಮುಟ್ಟುವ ರೀತಿಯಲ್ಲಿ ಹೇಳಿದರು. ವಿಕೇಂದ್ರೀಕರಣ ಎಂದರೆ, ಮನೆ ಮನೆಗೂ ಅಧಿಕಾರ ಹಂಚಿಕೊಡತಕ್ಕಂಥ ವ್ಯವಸ್ಥೆ ಎಂಬ ಪದವನ್ನು ಬಳಸಿ ವ್ಯವಸ್ಥಿತವಾಗಿ ಪ್ರಚಾರ ಮಾಡಿದರು. ಈ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳನ್ನು ತಂದಿರುವುದು ಒಂದು ಹೊಸ ಚಿಂತನೆ ಎಂದು ಹೇಳಿದರು. ಈಗ ಹಳ್ಳಿಗಳಲ್ಲಿ ನಾವು ನೋಡಿದ ಹಾಗೆ, ಸಾಮಾನ್ಯವಾಗಿ ಬಡವರು ಈ ಜಿಲ್ಲಾಪರಿಷತ್‌ನ್ನು ಮತ್ತು ಮಂಡಲ ಪಂಚಾಯಿತಿಗಳನ್ನು ತೆಗೆದುಹಾಕುತ್ತೇವೆಂದು ಹೇಳಿದರೆ ಚಪ್ಪಾಳೆ ಹೊಡೆಯುತ್ತಾರೆ. ಏಕೆಂದರೆ, ಈ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿ ವ್ಯವಸ್ಥೆಯಿಂದ ಜನರು ಬೇಸತ್ತು ಹೋಗಿದ್ದಾರೆ. ಇದರಿಂದ ಅನಾನುಕೂಲತೆಯನ್ನು ಅನುಭವಿಸಿರತಕ್ಕ ಬಡವರು ಯಾರಿದ್ದಾರೆ, ಅವರು ಈ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳನ್ನು ತೆಗೆದುಹಾಕಿರಿ ಎಂದು ಹೇಳತಕ್ಕಂಥಾದ್ದನ್ನು ನಾನೇ ಕಂಡಿದ್ದೇನೆ. ಮಾನ್ಯ ಅಧ್ಯಕ್ಷರೇ, ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿ ವ್ಯವಸ್ಥೆಯಲ್ಲಿ ಏನಾಗಿದೆ ಎಂದರೆ, ಮನೆ ಮನೆಗೆ ಅಧಿಕಾರ ಎಂದು ಹೇಳಿ ಮಾಡಿರುವುದರಿಂದ ಮನೆ ಮನೆಯಲ್ಲಿರತಕ್ಕಂಥ, ಕೇರಿ ಕೇರಿಗಳಲ್ಲಿರತಕ್ಕಂಥ, ಹಳ್ಳಿ ಹಳ್ಳಿಗಳಲ್ಲಿರತಕ್ಕಂಥ ಜನಗಳಲ್ಲಿ ದ್ವೇಷ, ವೈಷಮ್ಯ, ಪಾರ್ಟಿ ಪಕ್ಷಗಳು ಆಗಿಹೋದವು. ಈಗ ನಮ್ಮ ಸ್ನೇಹಿತರು ಹೇಳಿದ ಹಾಗೆ ಗಣೇಶನ ಹಬ್ಬದಲ್ಲೂ ಸಹಾ ಇದು ಜನತಾದವರ ಗಣೇಶ ಇದು ಕಾಂಗ್ರೆಸ್‌ನವರ ಗಣೇಶವೆಂದು ದೇವರನ್ನೂ ಸಹಾ ವರ್ಟಿಕಲ್ ಆಗಿ ಡಿವೈಡ್ ಮಾಡಿದ್ದಾರೆ. ಯಾವ ಒಂದು ಒಗ್ಗಟ್ಟು, ಸಂಯಮ ಅಥವಾ ಸಹೋದರತ್ವ ಹಳ್ಳಿಯಲ್ಲಿ ಇತ್ತೋ ಅದು ಇವತ್ತು ಕಳಚಿ ಹೋಯಿತು. ಈಗ ನಾವು ಅದರ ತಿರುಳು ಹುಡುಕುವುದಕ್ಕೆ ಹೋಗುತ್ತಿದ್ದೇವೆ. ಮೌಲ್ಯ, ವಿಕೇಂದ್ರೀಕರಣ ಎಂದು ಹೇಳಿಕೊಂಡು, ಮನೆ ಬಾಗಿಲಿಗೆ ಅಧಿಕಾರ ಕೊಡುತ್ತೇವೆಂದು ಹೇಳಿದ್ದರು. ಇವತ್ತು ಮನೆ ಮನೆ ಬಾಗಿಲಿಗೆ ಅಧಿಕಾರ ಕೊಟ್ಟಿದ್ದೀರಾ ಎಂದು ನಾನು ಕೇಳುತ್ತಿದ್ದೇನೆ. ಇವತ್ತು ಬಡವರ ಮನೆಯ ಬಾಗಿಲನ್ನು ಈ ಅಧಿಕಾರ ತಟ್ಟಿದೆಯೋ ? ಬಡವರಿಗೆ ಅಧಿಕಾರ ಸಿಗಲಿಕ್ಕೆ ವ್ಯವಸ್ಥೆ ಇದೆಯಾ ? ಬಡವರು ನಿಜವಾಗಿ ಈ ಅಧಿಕಾರದ ಅಮಲನ್ನು ಪಡೆದಿದ್ದಾರಾ ? ಇದನ್ನು ಎಲ್ಲಿಂದ ಪ್ರಾರಂಭ ಮಾಡಬೇಕು ? ಬೀದಿಯಲ್ಲಿರತಕ್ಕವನು, ನಿರ್ಗತಿಕನಾಗಿರತಕ್ಕವನು, ಯಾರು ಹೊಲದಲ್ಲಿ ದುಡಿಯುವ ಶ್ರಮಜೀವಿ ಇರುತ್ತಾನೋ ಅವನಿಗೆ ಇದು ಸಲ್ಲತಕ್ಕಂಥಾದ್ದು. ಎಲ್ಲರೂ ಬಡವರ ಬಗ್ಗೆ ಮಾತನಾಡುತ್ತೇವೆ. ಜಿಲ್ಲಾಪರಿಷತ್ತು ಮಂಡಲ ಪಂಚಾಯಿತಿ ವ್ಯವಸ್ಥೆಯಲ್ಲಿ ಬಡವರ ಸ್ಥಾನ ಎಲ್ಲಿಗೆ ? ನಿರ್ಗತಿಕರ ಸ್ಥಾನ ಎಲ್ಲಿಗೆ ? ದುರ್ಬಲರ ಸ್ಥಾನ ಎಲ್ಲಿಗೆ ಎನ್ನುವುದರ ಬಗ್ಗೆ ಯೋಚನೆ ಮಾಡಿ ನಾವು ಮನೆ ಮನೆಗೆ ಅಧಿಕಾರ ಕೊಡೋಣ. ಬಿಲ್ಡಿಂಗ್ ಕಟ್ಟಿರತಕ್ಕಂಥವರ ಮನೆ ಬಾಗಿಲಿಗೆ ಅಧಿಕಾರ ಹೋಗಿದೆಯೋ ಅಥವಾ ಗುಡಿಸಿಲಿಗೆ ಹೋಗಿದೆಯೋ ಅಥವಾ ಮನೆ ಇಲ್ಲದೆ ಫುಟ್‌ಪಾತ್‌ನಲ್ಲಿ ಇರತಕ್ಕವರ ಹತ್ತಿರ ಅಧಿಕಾರ ಹೋಗಿದೆಯೋ ಎಂದು ಯೋಚನೆ ಮಾಡಬೇಕು. ಈಗ ಡೆಮಾಕ್ರಸಿ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಎಂದರೆ, ಇಲ್ಲಿ ವಿವಿಧ ಧರ್ಮಗಳ ವಿವಿಧ ಜಾತಿಯ ಎಲ್ಲಾ ಜನರಿದ್ದಾರೆ. ಇದು ನಮ್ಮ ಸಮಾಜದ ವ್ಯವಸ್ಥೆ. ಆದ್ದರಿಂದ ಇವತ್ತು ಅಧಿಕಾರ ಹಂಚಿಕೆ ಅಂದರೆ ರಾಜಕೀಯ ಅಧಿಕಾರವನ್ನು ಹಂಚಿಕೆ ಮಾಡಿದ್ದೇವೆಯೋ ಆರ್ಥಿಕವಾದ ಅಧಿಕಾರವನ್ನು ಹಂಚಿಕೆ ಮಾಡಿದ್ದೇವೆಯೋ ಎಂದು ಸಮಾತೋಕ ಮಾಡಬೇಕು. ಇದರ ಬಗ್ಗೆ ಸಾಕಷ್ಟು ಚರ್ಚೆ ಈ ದೇಶದಲ್ಲಿ ನಡೆಯುತ್ತಿದೆ. ಇದರ ಬಗ್ಗೆ ರಾಜ್ಯದ ಜನರ ಅನಿಸಿಕೆ ಏನು ಎಂದು ಹೇಳುತ್ತೇನೆ. ಇದು ಬಡವರ ಮನೆಯ ಬಾಗಿಲಿಗೆ ಹೋಗತಕ್ಕಂಥ ಅಧಿಕಾರ ವ್ಯವಸ್ಥೆಯೇ ಎನ್ನುವುದು ನನ್ನ ನೇರವಾದ ಪ್ರಶ್ನೆ. ಯಾರು ಈ ಸಮಾಜದಲ್ಲಿ ವಂಚಿತರಾಗಿರ ತಕ್ಕಂಥ ವ್ಯಕ್ತಿ ಇದ್ದಾನೋ ಆ ವ್ಯಕ್ತಿಗೆ ಅಧಿಕಾರ ಪಡೆದುಕೊಳ್ಳತಕ್ಕಂಥ ಶಕ್ತಿ ಇದೆಯಾ ? ಈ ಆರ್ಥಿಕ ಅಧಿಕಾರ ಬಡವನ ಕೈಗೆ ಹೋಗಲಿಕ್ಕೆ ಸಾಧ್ಯ ಇದೆಯಾ ? ನಾವು ಯೋಜನೆಯಡಿಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಚೆಲ್ಲುತ್ತಿದ್ದೇವೆ. ಬಡವರ ಕಲ್ಯಾಣ, ಗಂಗಾ ಕಲ್ಯಾಣ ಯೋಜನೆಗಳಿಗೆ ಹಣ ಹಾಕತಕ್ಕಂಥ ಕಾರ್ಯಕ್ರಮ ಇದೆಯೋ ? ಇದು ಬಡವರ ಮನಸ್ಸಿಗೆ, ಬಡವರ ಬಾಗಿಲಿಗೆ ಹೋಗ ತಕ್ಕಂಥ ವ್ಯವಸ್ಥೆ ಆಗಿದೆಯೋ ಎಂಬುದರ ಬಗ್ಗೆ ಮಾನ್ಯ ಸದಸ್ಯರು ಮತ್ತು ಈ ಸಮಾಜ ಚಿಂತನೆ ಮಾಡಬೇಕು. ನಾನಾ ಯೋಜನೆಗಳ ಮೂಲಕ ನಾವು ಖರ್ಚು ಮಾಡತಕ್ಕಂಥ ಕೋಟ್ಯಾಂತರ ರೂಪಾಯಿಗಳು ಸರಿಯಾಗಿ ಬಡವರ ಪಾಲಿಗೆ ದಕ್ಕುತ್ತಿದೆಯೆ ? ಇವೊತ್ತು ಗಂಗಾಕಲ್ಯಾಣ ಯೋಜನೆ ಮುಂತಾದ ಅನೇಕ ಯೋಜನೆಗಳು ಇವೆ, ಅವುಗಳು ಬಡವರ ಮನೆಯ ಬಾಗಿಲಿಗೆ ತಲುಪುತ್ತಾ ಇದೆಯೆ ? ಇವತ್ತಿನ ದಿವಸ ಯಾವುದೇ ಕಲ್ಯಾಣಕಾರಿ ಕಾರ್ಯಕ್ರಮಗಳು ಬಡವರನ್ನು ತಲುಪುತ್ತಾ ಇಲ್ಲ. ಆ ಬಗ್ಗೆ ನಾವೆಲ್ಲರೂ ಇವೊತ್ತು ಚಿಂತನೆ ಮಾಡಬೇಕಾಗಿದೆ. ಸೈಟ್ ಕೊಡತಕ್ಕಂಥ ಕಾರ್ಯಕ್ರಮ ಎಷ್ಟರಮಟ್ಟಿಗೆ ಬಡವರನ್ನು ತಲುಪಿದೆ ? ಇವೊತ್ತು ಯಾವನೇ ಮನುಷ್ಯ ಹುಟ್ಟಿದ ಮೇಲೆ ಮಾನ ಮರ್ಯಾದೆಗೋಸ್ಕರವಾಗಿ ಒಂದು ಜನತಾ ಮನೆಯನ್ನಾದರೂ ಕಟ್ಟಿಕೊಳ್ಳಬೇಕು. ಅದಕ್ಕಾಗಿ ಇಂದು ಅವರು ತಮ್ಮ ಜನತಾ ಪ್ರತಿನಿಧಿಯ ಬಳಿ ಹೋಗುವುದಕ್ಕೆ ಆಗುತ್ತಿಲ್ಲ. ಪ್ರಧಾನರು ಅಥವಾ ಜಿಲ್ಲಾ ಪರಿಷತ್‌ನ ಅಧ್ಯಕ್ಷರ ಬಳಿ ಬಡವ ತನ್ನ ಅರ್ಜಿಯನ್ನು ತೆಗೆದುಕೊಂಡು ಹೋಗಬೇಕು. ನಮ್ಮ ವಿಕೇಂದ್ರೀಕರಣದ ಅರ್ಥ ಏನು ? ಬಡವರು ಶ್ರೀಮಂತರ ಮನೆ ಬಾಗಿಲಿಗೆ ಹೋಗಿ ಯಾಚಿಸಬೇಕೆಂದು ಅದರ ಅರ್ಥವೆ ? ಅಲ್ಲಿ ಅವರು ಸೈಟ್‌ಗಾಗಿ ಭಿಕ್ಷೆ ಬೇಡಬೇಕೆ ? ಇಂಥ ವಿಷಯಗಳಲ್ಲಿ ವಿಕೇಂದ್ರೀಕರಣ ಮಾಡುವಾಗ ನಾವು ಯೋಚನೆ ಮಾಡಬೇಕು. ಇವೊತ್ತು ಅವರಿಗೆ ನಾವು ಎಂತೆಂಥ ಅಧಿಕಾರವನ್ನು ಕೊಟ್ಟುಬಿಟ್ಟಿದ್ದೇವೆ. ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್‌ನಲ್ಲಿಯೂ ಅವರಿಗೆ ಅಧಿಕಾರ ಇದೆ. ಬಡವರು ಇಂದು ಒಂದು ಪಹಣಿಪಟ್ಟಿ ಬೇಕಾದರೂ ಅವರ ಹತ್ತಿರವೇ ಹೋಗಬೇಕು. ಈ ರೀತಿಯಲ್ಲಿ ಅಧಿಕಾರವನ್ನು ಕೇಂದ್ರೀಕರಿಸಿ ಅವರಿಗೆ ಶಕ್ತಿ ಕೊಡತಕ್ಕಂಥ ಅಧಿಕಾರ ಕೊಡತಕ್ಕಂಥ ಔಚಿತ್ಯವಾದರೂ ಏನು ? ಅದರ ಉದ್ದೇಶವಾದರೂ ಏನು ? ಇದು ನಮ್ಮ ತತ್ವವೇ ? ಎಂಬುದನ್ನು ನೋಡಬೇಕು. ಆದುದರಿಂದ ಇವೊತ್ತು ಈ ವ್ಯವಸ್ಥೆ ಏನಿದೆ ಅದೊಂದು ನೇರವಾದ ಸಂಚು ಎಂದು ನಾನು ಅಪಾದನೆ ಮಾಡುತ್ತೇನೆ ಈ ಅಧಿಕಾರ ವಿಕೇಂದ್ರೀಕರಣದ ಹೆಸರು ಮತ್ತು ತತ್ವವನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಆದರೆ ಅದು ಯಾವಾಗ ಬಡವರ ಭಾಗ್ಯದ ಬಾಗಿಲು ತೆರೆಯುವುದಿಲ್ಲವೋ ಅದರಿಂದ ಏನೂ ಉಪಯೋಗವಿಲ್ಲ ಎಂದು ಹೇಳಬಯಸುತ್ತೇನೆ. ಅಧಿಕಾರ ವಿಕೇಂದ್ರೀಕರಣವಾದ ಮೇಲೆ, ಚುನಾವಣೆಗಳು ಆದಮೇಲೆ, ಮಂಡಲ ಪಂಚಾಯತ್, ಜಿಲ್ಲಾ ಪರಿಷತ್ ವ್ಯವಸ್ಥೆಯಾದ ಮೇಲೆ, ಜನರ ಒಂದು ಅಭಿಪ್ರಾಯ ಏನಾಗಿದೆ ಎನ್ನುವುದನ್ನು ನೋಡಬೇಕು. ನಮಗೆ ಡಿ.ಸಿ. ಯವರ ಹತ್ತಿರ ಏನು ಕೆಲಸಕಾರ್ಯಗಳು ಆಗುತ್ತಾ ಇತ್ತು, ಅದು ಇವೊತ್ತು ಆಗುತ್ತಿಲ್ಲ, ಅವರಿಗೆ ಕಾನೂನಿನ ಹೆದರಿಕೆ ಇತ್ತು, ಬೆದರಿಕೆ ಇತ್ತು, ಬಡವರಿಗೆ ಮಾನ್ಯತೆಯನ್ನು ಕೊಡುತ್ತಿದ್ದರು, ಆದರೆ ಇವೊತ್ತು ಯಾವುದೇ ವಿಧದಲ್ಲಿ ಶ್ರದ್ಧೆ ಇಲ್ಲ, ಕೆಲಸವೂ ಆಗುತ್ತಿಲ್ಲ ಎಂದು ಜನ ಹೇಳುತ್ತಿದ್ದಾರೆ. ಬಡವರ ಕೂಗನ್ನು, ಅವರ ವಿಚಾರವನ್ನು ನೇರವಾಗಿ ನಾವು ಇಲ್ಲಿ ಮಾತನಾಡೋಣ, ಚರ್ಚೆ ಮಾಡೋಣ. ಅವರ ಕೂಗಿಗೆ ನೇರವಾಗಿ ನಾವು ಸ್ಪಂದಿಸಬೇಕಾಗುತ್ತದೆ. ಆದರೆ ಅದು ಇವೊತ್ತಿನ ಈ ವ್ಯವಸ್ಥೆಯಲ್ಲಿ ಆಗುತ್ತಿಲ್ಲ. ಬಡವರು ಸೈಟ್‌ಗಾಗಿ, ಮತ್ತಿತರ ಕೆಲಸಕಾರ್ಯಗಳಿಗಾಗಿ ಪ್ರಧಾನರ ಮನೆಬಾಗಿಲು ತಟ್ಟಬೇಕಾದ, ಕಾಯಬೇಕಾದ ಪರಿಸ್ಥಿತಿ ಇದೆ. ಕೆಲವೇ ಕೆಲವು ಒಳ್ಳೆಯ ಪ್ರಧಾನರು ಮಾತ್ರ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಅದರ ಒಟ್ಟು ಅಂಕಿಅಂಶಗಳನ್ನು ನೋಡಿದಾಗ ಜಿಲ್ಲಾಪರಿಷತ್ ಅಧ್ಯಕ್ಷರುಗಳಾಗಲಿ, ಮತ್ತಿತರರೇ ಆಗಿರಲಿ, ಯಾವ ಆರ್ಥಿಕ ಅಧಿಕಾರವನ್ನು ಅವರ ಕೈಗೆ ಕೊಟ್ಟಿದ್ದೇವೆ ಅದರಿಂದ ಬಡವರಿಗೆ ಸೂಕ್ತ ನ್ಯಾಯ ಸಿಗುತ್ತಿಲ್ಲ. ಇವೊತ್ತು ಈ ವ್ಯವಸ್ಥೆಯನ್ನು ಮಾಡಿ ಅವರ ಕೈಗೆ ಅಧಿಕಾರವನ್ನು ಏತಕ್ಕಾಗಿ ಕೊಟ್ಟಿದ್ದೀರಿ ಎಂದು ಬಡವರು ಕೇಳುತ್ತಿದ್ದಾರೆ. ಡಿಸಿ, ಬಿಡಿಓಗಳ ಆಡಳಿತ ಇದ್ದಾಗ ತಹಶೀಲ್ದಾರ್ ಆಡಳಿತ ಇದ್ದಾಗ, ನಮಗೆ ನೇರವಾಗಿ ಎಲ್ಲಾ ಸೌಲಭ್ಯಗಳನ್ನು ಮಾಡಿಕೊಡುತ್ತಾ ಇದ್ದರು ಎಂದು ಬಡವರು ಹೇಳುತ್ತಿದ್ದಾರೆ. ಇಂಥ ಒಂದು ಪರಿಸರವನ್ನು ವಾತಾವರಣವನ್ನು ಬೇರ್ಪಡಿಸಬೇಕು. ಅದನ್ನು ಹೇಗೆ ಮಾಡಬೇಕೆಂಬುದನ್ನು ನಾವು ಯೋಚನೆ ಮಾಡಬೇಕು. ಈ ಜಿಲ್ಲಾಪರಿಷತ್ ಮತ್ತು

ಮಂಡಲ ಪಂಚಾಯತ್ ವ್ಯವಸ್ಥೆ ನನ್ನ ಯೋಚನೆಯಲ್ಲಿ It is a clear cut of conspiracy against the weaker sections of the society. ಈ ಒಂದು ತೀರ್ಮಾನಕ್ಕೆ ನಾನು ಮತ್ತು ನನ್ನ ಜನತೆ ಬಂದಿದ್ದೇವೆ ಎಂದು ಹೇಳುತ್ತೇನೆ. ಇದನ್ನು ರಾಜೀವ್‌ಗಾಂಧಿಯವರು ಹೇಳುತ್ತಾ ಇದ್ದರೂ, ವಿಪಿ ಸಿಂಗ್‌ರವರು ಹೇಳುತ್ತಾ ಇದ್ದಾರೆ. ನೀವು ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಡಿ ಎಂದು ನಾವು ಹೇಳುವುದಿಲ್ಲ, ಆದರೆ ಅದನ್ನು ಬಡವರ ಮನಸ್ಸಿಗೆ ತಾಗತಕ್ಕಂಥ ರೀತಿಯಲ್ಲಿ ವಿಕೇಂದ್ರೀಕರಣ ಮಾಡಿ. ನೀವುಗಳು ನ್ಯಾಯಬೆಲೆ ಅಂಗಡಿಗಳನ್ನು ಮಾಡಿದ್ದೀರಿ. ಅವುಗಳನ್ನು ಯಾರ್ಯಾರ ಕೈಗೆ ಕೊಟ್ಟಿದ್ದೀರಿ ಅಂದರೆ ಅಲ್ಲಿರತಕ್ಕಂಥ ಶಕ್ತಿಯುತ ಜನರ ಕೈಗೆ ಕೊಟ್ಟಿದ್ದೀರಿ. ಐಆರ್‌ಡಿಪಿ ಪ್ರಕಾರ ಕೊಡತಕ್ಕಂಥ ಸಾಲ ಸಹಕಾರಿ ಯೋಜನೆ, ನಾರ್ಮ್ಸ್ ಪ್ರಕಾರ ಇದ್ದರೂ ಸಹ ಅದರ ಫಲ ಸರಿಯಾಗಿ ಯಾರಿಗೆ ಸಿಗಬೇಕೋ ಅವರಿಗೆ ಸಿಗುತ್ತಾ ಇಲ್ಲ. ಯಾರು ಪ್ರಧಾನರಿಗೆ ಸರಿಯಾಗಿ ಇದ್ದಾರೋ ಅವರಿಗೆ ಮಾತ್ರ ಸಿಗುತ್ತದೆ. ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್ ಫಲಾನುಭವಿಗಳನ್ನು ಗುರುತಿಸ ಬೇಕಾದರೆ ಯಾರು ಅವರಿಗೆ ಬೇಕಾದವರು ಇರುತ್ತಾರೆ ಅವರಿಗೆ ಮಾತ್ರ ಕೊಡುತ್ತಾರೆ. ನಿಜವಾದ ಬಡವರಿಗೆ ಅದು ಸಿಗುವಂತಿಲ್ಲ. ಇನ್ನು ರೋಜ್‌ಗಾರ್ ಕಾರ್ಯಕ್ರಮವನ್ನು ಮಾಡಿದ್ದೀರಿ, ನಮ್ಮ ಹಳ್ಳಿಗಳಲ್ಲಿ ಅದಕ್ಕೆ ಮಜ್ದೂರ್ ಕಾರ್ಯಕ್ರಮ ಎಂದು ಹೇಳುತ್ತಾರೆ. ಜಿಲ್ಲಾ ಪರಿಷತ್ ಮಂಡಲ ಪಂಚಾಯ್ತಿಗಳ ಮೀಟಿಂಗ್‌ಗಳು ಹೇಗೆ ನಡೆಯುತ್ತವೆ ಎಂದರೆ ಎಸ್‌ಸಿ ಎಸ್‌ಟಿ, ಬಿಸಿ ಮೆಂಬರ್ಸ್‌ಗಳಿಗೆ ದುಡ್ಡು ಕೊಟ್ಟು ಸೈನ್ ಹಾಕಿಸಿಕೊಂಡು ರೆಸಲ್ಯೂಷನ್ ಪಾಸ್ ಎಂದು ಬರೆಸಿಕೊಂಡು ಹೋಗುತ್ತಾರೆ. ಅವರಿಗೆ ಪ್ರಜ್ಞೆ ಇಲ್ಲವೇ ಎಂದರೆ, ಹೌದು. ಅವರಿಗೆ ಪ್ರಜ್ಞೆ ಇನ್ನೂ ಬೆಳೆದಿಲ್ಲ, ವಿದ್ಯಾಭ್ಯಾಸ, ಜ್ಞಾನ ಕಡಿಮೆ ಇದೆ, ಕೇಳುವ ಶಕ್ತಿ ಇನ್ನೂ ವೃದ್ಧಿಯಾಗಿಲ್ಲ. ಆದ್ದರಿಂದ ಅವರ ಅವಿದ್ಯಾವಂತಿಕೆಯನ್ನು ಎಕ್ಸ್‌ಪ್ಲಾಯಿಟ್ ಮಾಡಿ ತಮಗೆ ಬೇಕಾದಂತೆ ನಿರ್ಣಯ ಮಾಡಿಕೊಳ್ಳುತ್ತಾರೆ. ಈ ರೀತಿ ನಡೆಯುತ್ತಿದೆ. ಇವತ್ತು ಆ ನಿರ್ಣಯಗಳಿಗೆ ಬೆಲೆಯೇ ಇಲ್ಲ. ತಾಲ್ಲೂಕು ಬೋರ್ಡ್‌ನಲ್ಲೂ ನಿರ್ಣಯಕ್ಕೆ ಬೆಲೆಯೇ ಇಲ್ಲ. ಇದಕ್ಕೆಲ್ಲ ಯಾರೂ ಉತ್ತರ ಕೊಡುತ್ತಾರೆ ? ಯಾವ ನಿರ್ಣಯಕ್ಕೂ ಇದುವರೆಗೂ ಯಾರೂ ಉತ್ತರ ಕೊಟ್ಟಿಲ್ಲ. ರೊಟೀನಾಗಿ ನಿರ್ಣಯಮಾಡಿ ಕಳಿಸುತ್ತಾರೆ. ಹಿಂದೆಯೆಲ್ಲ ಅವರ ನಿರ್ಣಯಗಳಿಗೆ ದುಡ್ಡಿಲ್ಲ ಎನ್ನುತ್ತಿದ್ದರು, ಈಗ ಅಟ್‌ಲೀಸ್ಟ್ ಹಣಕಾಸಿನ ಸ್ಥಿತಿ ಸುಧಾರಿಸಿದೆ. ಆದ್ದರಿಂದ ಈ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಆಗುತ್ತಿರುವ ಖರ್ಚು ಕ್ರಿಮಿನಲ್ ವೇಸ್ಟ್. ಆದರಿಂದ ಉಪಯೋಗ ಯಾವುದೂ ಇಲ್ಲ. ಇವುಗಳ ಎಕ್ಸಪೆಂಡಿಚರ್ ನೋಡಿದರೆ, ತಿಂಗಳಿಗೆ ಒಂದು ಸಲ ಆ ಕಮಿಟಿ ಮೀಟಿಂಗ್, ಮಾರನೇ ದಿವಸ ಸಬ್ ಕಮಿಟಿ ಮೀಟಿಂಗ್, ಇನ್ನೊಂದು ದಿವಸ ಇನ್ಯಾವುದೋ ಕಮಿಟಿ ಮೀಟಿಂಗ್ ಎಂದು ಹೇಳಿಕೊಂಡು ೨೦ ದಿವಸವೂ ಮೀಟಿಂಗ್ ಇಟ್ಟುಕೊಳ್ಳುತ್ತಾರೆ.

ಆದ್ದರಿಂದ ಬರೀ ಟಿಎ ಡಿಎ ಯಿಂದ ಖಜಾನೆ ಭಾರವಾಗಿದೆ, ಇವುಗಳಿಂದ ಯಾವ ಪುರುಷಾರ್ಥವೂ ಇಲ್ಲ. ಈ ಸಿಸ್ಟಮನ್ನು ಸಿಂಪ್ಲಿಫೈ ಮಾಡಿ ಖರ್ಚು ಕಡಿಮೆ ಮಾಡುವುದನ್ನು ಜಾರಿಗೆ ತನ್ನಿ. ಇವರ ವೆಹಿಕಲ್ಸೆಲ್ಲ ರಾತ್ರಿ ಹೊತ್ತು ಸಿನಿಮಾ ಥಿಯೇಟರ್‌ಗಳ ಹತ್ತಿರ ಇರುತ್ತವೆ. ಪ್ರೊ॥. ನಂಜುಂಡಸ್ವಾಮಿ ಯವರು ಹಿಂದೆ ಒಂದು ಕಾರ್ಯಕ್ರಮ ಅನೌನ್ಸ್ ಮಾಡಿ ರಾತ್ರಿ ಹೊತ್ತು ಸೆಕೆಂಡ್ ಷೋಗಳ ಹತ್ತಿರ ಸರ್ಕಾರಿ ವಾಹನಗಳು ಇರುವಾಗ ಅವನ್ನು ಅಲ್ಲೇ ಹಿಡಿಯುವುದಾಗಿ ಹೇಳಿದ್ದರು. ಅದು ಒಳ್ಳೆಯ ಕಾರ್ಯಕ್ರಮ. ಈ ರೀತಿ ಸರ್ಕಾರಿ ವಾಹನಗಳಲ್ಲಿ ಸಿನಿಮಾಕ್ಕೆ ಹೋಗುವುದು ಸರಿಯೇ ? ಜಿಲ್ಲಾ ಪರಿಷತ್ತುಗಳ ಮೀಟಿಂಗ್‌ಗೆಂದು ಖರ್ಚು ಮಾಡುತ್ತಿರುವ ಹಣವೆಲ್ಲ ವೇಸ್ಟೇ. ಜನರಿಗೆ ಇದರ ಉಪಯೋಗ ಸಿಗುತ್ತಿಲ್ಲ. ಅಲ್ಪಸಂಖ್ಯಾತರು ಎಂದು ಯಾರಿದ್ದಾರೆ ಅವರು ಯಾವತ್ತಿಗೂ ಈ ವ್ಯವಸ್ಥೆಯಲ್ಲಿ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಎಲ್ಲಿಯವರೆಗೆ ಈ ಎಲೆಕ್ಷನ್ ಸಿಸ್ಟಮ್ ಇರುತ್ತದೋ ಅಲ್ಲಿಯವರೆಗೆ ಅಧಿಕಾರ ಅವರಿಗೆ ಸಿಗುವುದಿಲ್ಲ. ಇವರ ಪಾರ್ಟಿಸಿಪೇಷನ್ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಲ್ಲಿ ಇಲ್ಲವೇ ಇಲ್ಲ. ಇದು ತಪ್ಪು ಎಲ್ಲರ ಪಾರ್ಟಿಸಿಪೇಷನ್ನೂ ಇರು ವಂತಾಗಬೇಕು. ಅದಕ್ಕೋಸ್ಕರ ಈ ಅಂಕಿಸಂಖ್ಯೆಯ ಆಧಾರದಮೇಲೆ, ನ್ಯಾಯವಾಗಿ ಜಸ್ಟೀಸ್. ಸೋಷಿಯಲ್ ಜಸ್ಟೀಸ್ ಆಧಾರದಮೇಲೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಪ್ರಧಾನರಾಗುವುದಕ್ಕೆ ಅವಕಾಶ ಮಾಡಿ, ಈಗಿರುವ ಕಾನೂನಿನಲ್ಲಿ ಅದು ಅಷ್ಟು ಸುಲಭವಾಗಿಲ್ಲ. ಅದುದರಿಂದ ಸರ್ಕಾರದವರು ನಿಯಮದಡಿಯಲ್ಲಿ, ಕಾನೂನಿನ ಅಡಿಯಲ್ಲಿ ಇದಕ್ಕೆ ಅವಕಾಶ ಮಾಡಲಿಕ್ಕೆ ಮಾತ್ರ ಸಾಧ್ಯ. ಅದನ್ನು ರಿಸರ್ವ್ ಮಾಡತಕ್ಕಂಥದ್ದು ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ. ಬ್ಯಾಕ್‌ವರ್ಡ್ ಕ್ಲಾಸ್‌ಗೆ ಕೊಡಿ, ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಕೊಡಿ, ಮೈನಾರಿಟೀಸ್‌ಗೆ ಕೊಡಿ. ಅವರಿಗೆ ಅಲ್ಲಿ ಅವಕಾಶವಾದರೆ ಮಾತ್ರ ಈ ದುರ್ಬಲ ವರ್ಗಗಳು ಪಾರ್ಟಿಸಿಪೇಟ್ ಮಾಡಲಿಕ್ಕೆ ಆಗುತ್ತದೆ, ಆ ಪೊಲಿಟಿಕಲ್ ಪವರ್ ಅವರ ಕೈಯಲ್ಲಿ ಸಿಗುತ್ತದೆ, ಆರ್ಥಿಕ ಅಧಿಕಾರ ಅವರ ಕೈಯಲ್ಲಿ ಸಿಗುತ್ತದೆ.

ಆಗ ಪರಿಪೂರ್ಣವಾಗಿ ಒಂದು ಡೆಮಾಕ್ರಸಿ ಎಂದು ಏನು ಕರೆಯುತ್ತೇವೆಯೋ ಅಥವಾ ವಿಕೇಂದ್ರೀಕರಣ ಎಂದು ಹೇಳುತ್ತೇವೆಯೊ ಆ ರೀತಿ ಆಗುತ್ತದೆ. ಈ ವಿಕೇಂದ್ರೀಕರಣ ಏನು ಇದೆಯೋ, ಅದಕ್ಕೆ ಸರಿಯಾದಂಥ ಒಂದು ಅರ್ಥ ಆಗ ಬರುತ್ತದೆಯೇ ವಿನಃ ಇದು ಕೇವಲ ಬೇರೆ ಶಕ್ತಿವಂತರ ಆಡಳಿತ ಆಗುತ್ತದೆ. ಈ ರೀತಿ ಆಗದಿದ್ದರೆ ಇದಕ್ಕೆ ಬಡವರು ಅಥವಾ ದುರ್ಬಲರು ಯಾರು ಕೂಡಾ ಇದರಲ್ಲಿ ಪಾಲ್ಗೊಳ್ಳುವಂತೆ ಮಾಡಲಿಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರ ರಿಸರ್ವೇಷನ್ ಎಂದು ಏನು ಹೇಳುತ್ತೇವೆ, ಅದು ರೊಟೇನ್ ಬೇಸಿಸ್‌ನಲ್ಲಿ ಇರಬೇಕು. ಷೆಡ್ಯೂಲ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್, ಬ್ಯಾಕ್‌ವರ್ಡ್ ಕ್ಲಾಸ್. ಮೈನಾರಿಟೀಸ್ ಎಂದು ಹೇಳತಕ್ಕಂಥ ತತ್ವವನ್ನು, ಇಟ್ಟರೆ ಮಾತ್ರ ಅವರಿಗೆ ಅನುಕೂಲವಾಗಲಿಕ್ಕೆ ಸಾಧ್ಯ ಎಂದು ಹೇಳಲಿಕ್ಕೆ ಬಯಸುತ್ತೇನೆ. ಇನ್ನು ಈ ಆಡಳಿತದ ಬಗ್ಗೆ ಹೇಳುವುದಾದರೆ ಈ ಪೋಲೀಸ್ ಇಲಾಖೆ ಬಹಳ ಮಹತ್ವವಾದ ಇಲಾಖೆಯಾಗಿದೆ. ಇಲ್ಲಿ ಪೋಲೀಸರು ಪಾಪ ಒಂದೊಂದು ಸಲ ತಪ್ಪು ಮಾಡುತ್ತಾರೆ, ಏನು ಮಾಡುತ್ತೀರಿ ? ಘಟನೆಗಳು ನಡೆದಾಗ ಅವರನ್ನು ಬಯ್ಯುತ್ತೇವೆ, ಅವರು ಸಹ they are a very disciplined force. ಅವರಿಗೆ ಎಲ್ಲ ರೀತಿಯ ಎನ್‌ಕರೇಜ್‌ಮೆಂಟ್ ಸಿಗಬೇಕು. ಅವರಿಗೆ ಬಟ್ಟೆ ಇರಲಿ, ಯೂನಿಫಾರಂ ಇರಲಿ, ಟಿ. ಎ. ಡಿ. ಎ. ಇರಲಿ, ಎಲ್ಲಕ್ಕಿಂತ ಮುಖ್ಯವಾಗಿ ಹೌಸಿಂಗ್ ಫೆಸಿಲಿಟೀಸ್ ಸಿಗಬೇಕು. ಪೋಲೀಸರಿಗೆ ಮನೆ ಇಲ್ಲ ಎಂದು ಹೇಳಿದರೆ ಅವರು ಎಲ್ಲಿಗೆ ಹೋಗಬೇಕು ? ಒಬ್ಬ ಬಡ ಕಾನ್‌ಸ್ಟೇಬಲ್ ಮನೆ ಇಲ್ಲ ಎಂದು ಹೇಳಿ ಎಲ್ಲಿಯಾದರೂ ಆರ್ಡನರಿ ಜಾಗಕ್ಕೆ ಹೋಗಬೇಕು. ಅವರು ಒಂದು ಡಿಸಿಪ್ಲಿನರಿ ಫೋರ್ಸ್‌ನಲ್ಲಿರತಕ್ಕಂಥ ವ್ಯಕ್ತಿಗಳು, ಅವರು ಒಂದು ಆರ್ಡಿನರಿ ಜಾಗಕ್ಕೆ ಹೋಗಿ ನಿಂತುಕೊಂಡರು ಎಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ಆ ಡ್ರೆಸ್‌ಗೆ ಬಹಳ ಕಷ್ಟವಾಗುತ್ತದೆ. ಅದಕ್ಕೋಸ್ಕರ ಅವರಿಗೆ ಮನೆಯನ್ನು ಕೊಡತಕ್ಕಂಥ ವ್ಯವಸ್ಥೆ ಆಗಬೇಕು. ಪೋಲೀಸ್ ಕಾರ್ಪೊರೇಷನ್ ಎಂದು ಏನು ಇದೆಯೋ ಆ ಪೋಲೀಸ್ ಕಾರ್ಪೊರೇಷನ್‌ಗೆ ಹಾಲಿ ಸಾಕಷ್ಟು ಮಟ್ಟಿಗೆ ಹಣವನ್ನು ಕೊಟ್ಟಿಲ್ಲ. ಅವರಿಗೆ ಜಾಸ್ತಿ ಹಣವನ್ನು ಒದಗಿಸಿಕೊಡಬೇಕು. ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್‌ಗಳಲ್ಲಿ ಪೋಲೀಸ್‌ನವರಿಗೆ ಮನೆಯನ್ನು ಕಟ್ಟತಕ್ಕಂಥ ವ್ಯವಸ್ಥೆಯನ್ನು ಮಾಡಿಕೊಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಪೋಲೀಸ್ ಫೋರ್ಸ್‌ನ್ನು ಎಕ್ಸ್‌ಪ್ಯಾಂಡ್ ಮಾಡಬೇಕಾಗುತ್ತದೆ. ಪೋಲೀಸರ ರಿಕ್ವೈರ್‌ಮೆಂಟ್ಸ್, ಡಿಮ್ಯಾಂಡ್ಸ್ ಬಗ್ಗೆ ಎಲ್ಲಾ ಮಾನ್ಯ ಸದಸ್ಯರುಗಳಿಗೂ ಗೊತ್ತಿದೆ. ಅವರ ಕ್ಷೇತ್ರದಲ್ಲಾಗಲಿ, ಅವರ ತಾಲ್ಲೂಕಿನಲ್ಲಾಗಲೀ ಸ್ಟೇಷನ್‌ಗಳ ಸಂಖ್ಯೆಯನ್ನು ಕೂಡ ಜಾಸ್ತಿ ಮಾಡಬೇಕು ಎಂದು ಒಂದು ಬೇಡಿಕೆ ಇದೆ, ಅದಕ್ಕೆ ಪೂರಕವಾಗಿ ಪೋಲೀಸ್ ಸ್ಟೇಷನ್‌ಗಳನ್ನೂ ಕೂಡ ಜಾಸ್ತಿ ಮಾಡಬೇಕು. ಪೋಲೀಸ್ ಫೋರ್ಸನ್ನು ಎಕ್ಸ್‌ಪ್ಯಾಂಡ್ ಮಾಡಬೇಕಾಗಿದೆ. ಇವತ್ತು ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಬಹಳ ಚೆನ್ನಾಗಿರಬೇಕು. ಏಕೆಂದರೆ ಡಕಾಯಿತಿಗಳು ನಡೆಯುತ್ತಿದೆ, ರಾಬರಿ ನಡೆಯುತ್ತಿದೆ. ಆದ್ದರಿಂದ ಈ ಸಂದರ್ಭದಲ್ಲಿ ಪೋಲೀಸ್ ಫೋರ್ಸ್‌ನ ಮಹತ್ವ ಬಹಳ ಇದೆ. ಸಧ್ಯಕ್ಕೆ, ಪುಣ್ಯಕ್ಕೆ ನಮ್ಮ ಕರ್ನಾಟಕ ಭೂಮಿ ಶಾಂತಿಯ, ಸಂಯಮದ ಭೂಮಿಯಾಗಿದೆ. ಇಲ್ಲಿ ಎಲ್.ಟಿ.ಟಿ.ಇ. ರೀತಿ ಮತ್ತು ಪಂಜಾಬ್ ರೀತಿ ಏನೂ ಇಲ್ಲ. ಅದಕ್ಕೆ ಕಾರಣ ಈ ಪೋಲೀಸ್ ಫೋರ್ಸ್ ಎಂದು ಧೈರ್ಯದಿಂದ ಹೇಳುತ್ತಿದ್ದೇನೆ. ಪೋಲೀಸರಿಗೆ ಸರಿಯಾದ ರೀತಿಯ ರಕ್ಷಣೆ, ಸೌಲಭ್ಯ ಎಲ್ಲವನ್ನೂ ಕೊಡಲೇಬೇಕಾಗುತ್ತದೆ, ಅವರಿಗೆ ಮನೆಯಾಗಲಿ, ಟಿಎಡಿಎ ಹೆಚ್ಚಾಗಿ ಮಾಡತಕ್ಕಂಥದ್ದಾಗಲೀ ಮಾಡಬೇಕಾಗುತ್ತದೆ ಎಂದು ಸರ್ಕಾರದಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯ ಮಾಡುತ್ತೇನೆ. ನಮ್ಮಲ್ಲಿ ಪೋಲೀಸರಿಗೆ ಸ್ಮಗ್ಲರ್‌ಗಳನ್ನು ಹಿಡಿಯತಕ್ಕಂಥದ್ದು, ರಾಬರರ್ಸ್ ಕ್ರಿಮಿನಲ್ಸ್‌ಗಳನ್ನು ಹಿಡಿಯತಕ್ಕಂಥ ವ್ಯವಸ್ಥೆ ಏನು ಇದೆ. ಗೋಲ್ಡ್ ಬಿಸ್ಕೆಟ್ಸ್ ಸ್ಮಗ್ಲರ್‌ಗಳು ಇದ್ದಾರೆ. ಕಸ್ಟಮ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಇದನ್ನು ಹಿಡಿದುಬಿಟ್ಟರೆ, ಅದರ ಮೌಲ್ಯ ಎಷ್ಟು ಇರುತ್ತದೆ, ಅವರಿಗೆ ತಕ್ಷಣದಲ್ಲಿಯೇ ೨೫ ಪರ್ಸೆಂಟ್ ಇನ್‌ಸೆಂಟೀವ್ಸ್‌ನ್ನು ಕೊಟ್ಟುಬಿಡುತ್ತಾರೆ. ಆದರೆ ಪೋಲೀಸರಿಗೆ ಹಿಡಿದ ತಕ್ಷಣ ಈ ರೀತಿ ಇನ್‌ಸೆಂಟೀವ್ ಕೊಡುವ ಸ್ಕೀಮ್ ಇಲ್ಲಿ ಇಲ್ಲ. ಯಾವಾಗಲೋ ಹಿಡಿಯುತ್ತಾರೆ, ಯಾವಾಗಲೋ ಇನ್‌ಸೆಂಟೀವ್ ಕೊಟ್ಟರೆ ಅವರಿಗೆ ಹುಮ್ಮಸ್ಸು ಇರುವುದಿಲ್ಲ. ಆಸಕ್ತಿ ಇರುವುದಿಲ್ಲ. ಪೋಲೀಸರು ಯಾರು ಸ್ಮಗ್ಲರ್ಸ್, ಕ್ರಿಮಿನಲ್ಸ್‌ಗಳನ್ನು ಹಿಡಿಯುತ್ತಾರೆ, ಏನು ಆಸ್ತಿ ಸಿಕ್ಕಿರುತ್ತದೆ, ಅದರಲ್ಲಿ ೨೫ ಪರ್ಸೆಂಟ್ ಇನ್‌ಸೆಂಟೀವ್ಸ್ ಕೊಡತಕ್ಕಂಥ ವ್ಯವಸ್ಥೆಯನ್ನು ನಾವು ಜಾರಿ ಮಾಡಿದರೆ ಒಳ್ಳೆಯದಾಗುತ್ತದೆ. ಈ ಒಂದು ಫೋರ್ಸ್‌ಗೆ ಜಾಸ್ತಿ ಬೆಂಬಲ, ನೈತಿಕ ಬೆಂಬಲವನ್ನು ಕೊಡಬೇಕು ಎನ್ನುವ ಮಾತನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ, ಮತ್ತೆ ನಮ್ಮಲ್ಲಿರುವ ಉನ್ನತ ಅಧಿಕಾರಿಗಳಲ್ಲಿ ಬಹಳ ಜನ ಒಳ್ಳೆಯ ಅಧಿಕಾರಿಗಳು ಇದ್ದಾರೆ, ಇಲ್ಲ ಎಂದು ಅಲ್ಲಗಳೆಯುವುದಕ್ಕಾಗುವುದಿಲ್ಲ. ಏಕೆಂದರೆ ಅಧಿಕಾರಿಗಳು ಒಳ್ಳೆಯವರು ಇದ್ದುದರಿಂದ ಈ ವ್ಯವಸ್ಥೆ ಮುಂದುವರಿದುಕೊಂಡು ಬಂದಿದೆ

ರಾಜಕಾರಣಿಗಳಲ್ಲಿ ಒಳ್ಳೆಯ ಸಭ್ಯರು ಮತ್ತು ಪ್ರಜಾಪ್ರತಿನಿಧಿಗಳು ಇದ್ದುದರಿಂದ ಈ ವ್ಯವಸ್ಥೆ ಮುಂದುವರಿದುಕೊಂಡು ಬಂದಿದೆ. ಅದಕ್ಕೆ ನಾವು, ನೀವು ಮತ್ತು ಈ ಸದನವೇ ಸಾಕ್ಷಿ. ಆದರೆ ಕೆಟ್ಟ ಅಧಿಕಾರಿಗಳನ್ನು ಹುಡುಕಬೇಕಾಗುತ್ತದೆ. ಕೆಟ್ಟವರನ್ನು ಕೆಟ್ಟವರು ಎಂದು ಹೇಳಬೇಕಾಗುತ್ತದೆ ಇವತ್ತು ದೊಡ್ಡ ದೊಡ್ಡ ಅಧಿಕಾರ ಸ್ಥಾನದಲ್ಲಿ ಇರುವಂಥವರು ಅಧಿಕಾರ ದುರುಪಯೋಗ ಮಾಡಿಕೊಂಡಿರತಕ್ಕಂಥ ಅಥವಾ ಇಲ್ಲೀಗಲ್ ಆಗಿ ಜಾಸ್ತಿ ಹಣ ಸಂಪಾದನೆ ಮಾಡಿರತಕ್ಕಂಥ ವ್ಯಕ್ತಿಗಳು ಯಾರ್ಯಾರು ಇದ್ದಾರೆ ಅವರ ಬಗ್ಗೆ ಪತ್ರಿಕೆಗಳಲ್ಲಿ ನೋಡಿದ್ದೇವೆ. ಕೆಲವರ ಮನೆರೈಡ್ ಆಗಿರುವುವನ್ನೂ ನಾವು ನೋಡಿದ್ದೇವೆ. ಕೆಲವು ಐ.ಪಿ.ಎಸ್. ಐ.ಎ.ಎಸ್. ಆಫೀಸರ್‌ಗಳು ಸಸ್ಪೆಂಡ್ ಆಗಿರುವುದನ್ನೂ ಕೇಳಿದ್ದೇವೆ. ಐ.ಎ.ಎಸ್. ಆಫೀಸರ್‌ರವರ ಮನೆಗಳನ್ನು ಜಪ್ತಿಮಾಡಿರತಕ್ಕಂಥದ್ದನ್ನು ನೋಡಿದ್ದೇವೆ. ಇದು ಬಹಳ ಶ್ಲಾಘನೀಯವಾದ ಕೆಲಸ. ಆದರೆ ಈ ರೀತಿ ಇಬ್ಬರು ಮೂವರಿಗೆ ಮಾತ್ರ ಮಾಡಿದ್ದಾರೆ. ಇದರಿಂದ ಜನರಲ್ಲಿ ಏನು ಭಾವನೆ ಬರುತ್ತದೆ ಎಂದರೆ. ಯಾರ್ಯಾರು ಆಸ್ತಿ ಮಾಡಿರತಕ್ಕ ಅಧಿಕಾರಿಗಳು ಇದ್ದಾರೆ, ಅಂತವರು ಬಹಳ ಜನ ಇದ್ದಾರೆ. ಅವರನ್ನು ಬಿಟ್ಟು ಬಿಟ್ಟಿದ್ದಾರೆ, ಇವರನ್ನು ಬಿಟ್ಟು ಬಿಟ್ಟಿದ್ದಾರೆ ಎಂದು ಹಾದಿಬೀದಿಯಲ್ಲಿ ಜನ ಮಾತನಾಡಿಕೊಳ್ಳುತ್ತಿದ್ದಾರೆ, ಈ ತಾರತಮ್ಯ ಬೇಡ. ಆದ್ದರಿಂದ ಯಾರ್ಯಾರು ಇಲ್ಲೀಗಲ್ ಆಗಿ ಆಸ್ತಿ ಮಾಡಿದ್ದಾರೋ. ಯಾರ್ಯಾರು ಈ ರೀತಿ ಲಪಟಾಯಿಸಿದ್ದಾರೆ ಅಂತಹ ಕೆಟ್ಟ ವ್ಯಕ್ತಿಗಳೆಲ್ಲರನ್ನು ಸದೆ ಬಡಿಯಿರಿ. ಅವರೆಲ್ಲರ ಆಸ್ತಿಯನ್ನು ಜಫ್ತಿ ಮಾಡಬೇಕು. ಈ ರೀತಿ ಯಾರ್ಯಾರು ಇದ್ದಾರೆ ಅವರೆಲ್ಲರನ್ನೂ ಬಯಲಿಗೆ ಎಳೆಯಬೇಕು ಈ ಸಂದರ್ಭದಲ್ಲಿ ಲೋಕಾಯುಕ್ತರ ಬಗ್ಗೆ ಏಕೆ ಹೇಳುತ್ತಿದ್ದೇನೆ ಎಂದರೆ ಲೋಕಾಯುಕ್ತದವರು ಬರೀ ಐದು ನೂರು ರೂಪಾಯಿ ತೆಗೆದುಕೊಂಡವನನ್ನು ಹಿಡಿಯುತ್ತಾರೆ ಅಥವಾ ಇಪ್ಪತ್ತು ರೂಪಾಯಿ ತೆಗೆದುಕೊಂಡ ಗ್ರಾಮಸೇವಕರನ್ನು ಹಿಡಿಯುತ್ತಾರೆಯೇ ಹೊರತು ಐಎಎಸ್ ಅಥವಾ ಐಪಿಎಸ್ ಅಧಿಕಾರಿಗಳ ಮನೆಗೆ ಹೋಗಲಿಕ್ಕೆ ಹೆದರಿಕೆ ಆಗುತ್ತದೆಯೇ ಎಂದು ಕೇಳುತ್ತೇನೆ. ಐಎಎಸ್ ಐಪಿಎಸ್ ಆಫೀಸರುಗಳು ಎಲ್ಲರೂ ಅಲ್ಲ. ಕೆಲವರು ಇದ್ದಾರೆ, ಅವರ ಪಟ್ಟಿ ಇದೆ. ಅವರು ಯಾರು ಎಂದು ಜನಗಳು ಹಾದಿ ಬೀದಿಯಲ್ಲಿ ಮಾತನಾಡುತ್ತಾರೆ. ಅವರ ಹೆಸರುಗಳನ್ನು ನಾನು ಹೇಳುವುದಕ್ಕೆ ತಯಾರು ಇಲ್ಲ. ಒಬ್ಬರನ್ನು ರೈಡ್ ಮಾಡುವುದು. ಇನ್ನೊಬ್ಬರನ್ನು ಬಿಡತಕ್ಕದು, ಒಬ್ಬರ ಸಂಪತ್ತನ್ನು ಹಿಡಿಯತಕ್ಕದು ಇನ್ನೊಬ್ಬರ ಸಂಪತ್ತನ್ನು ಬಿಡತಕ್ಕದ್ದು ಏನಿದೆ ಇದು ಸರಿಯಲ್ಲ, ಯಾರ್ಯಾರು ಇದ್ದಾರೋ ಅವರು ಯಾವ ಜಾತಿಯವರೆ ಇರಲಿ, ಯಾವ ಧರ್ಮದವರೇ ಇರಲಿ, ಯಾರೇ ಇರಲಿ ಅವರನ್ನು ನಿರ್ದಾಕ್ಷಿಣ್ಯವಾಗಿ ಬಲಿ ಹಾಕಲೇಬೇಕು. ಅದಕ್ಕೋಸ್ಕರ ತಾವು ಯಾರ್ಯಾರು ಇದ್ದಾರೋ ಅವರನ್ನು ರೈಡ್ ಮಾಡಿ ಅವರನ್ನು ಜನತೆಯ ಮುಂದೆ ತೋರಿಸಬೇಕು. ಇದರಿಂದ ಒಳ್ಳೆಯದಾಗುತ್ತದೆ ಮತ್ತು ಅಡ್ಮಿನಿಸ್ಟ್ರೇಷನ್‌ನಲ್ಲಿ ಸುಧಾರಣೆ ಆಗುತ್ತದೆ ಎಂದು ಮಾನ್ಯ ಮಂತ್ರಿಗಳಲ್ಲಿ ಮನವಿಮಾಡಿಕೊಳ್ಳುತ್ತೇನೆ ಇನ್ನು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುತ್ತೇನೆ. ನಮ್ಮ ಕೃಷಿ ಸಚಿವರು ಅಗ್ರಿಕಲ್ಚರ್ ಕಾಲೇಜನ್ನು ಕೊಡುತ್ತೇವೆ ಎಂದು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ಆದರೆ ಅದನ್ನು ಯಾವಾಗ ಕೊಡುತ್ತೀರಿ, ಯಾವಾಗ ಜಾರಿಗೆ ಬರುತ್ತದೆ, ಅದಕ್ಕೆ ಹಣ ಇದೆಯೋ ಅಥವಾ ಇಲ್ಲವೋ ಎನ್ನುವುದು ಒಂದು ದೊಡ್ಡ ಪ್ರಶ್ನೆ. ಆದ್ದರಿಂದ ನಮ್ಮ ಒತ್ತಾಯ ಏನೆಂದರೆ ಈ ವರ್ಷದಿಂದಲೇ ಅದು ಜಾರಿ ಆಗಬೇಕು. ಎಲ್ಲಾ ಕಡೆ ಮೆಡಿಕಲ್ ಕಾಲೇಜು ಕೊಟ್ಟಿದ್ದೀರಿ. ಇಂಜಿನಿಯರಿಂಗ್ ಕಾಲೇಜು ಕೊಟ್ಟಿದ್ದೀರಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತರಿಗೆ, ರೈತ ಸಮುದಾಯಕ್ಕೆ, ರೈತ ಕುಟುಂಬದಿಂದ ಬಂದಂಥ ನಮ್ಮಂತಹ ಯುವಕರಿಗೆ ಅಥವಾ ಅಲ್ಲಿಂದ ಬರತಕ್ಕಂಥ ವಿದ್ಯಾರ್ಥಿಗಳಿಗೆ ಇದು ಕಲಿಕೆ, ಅವರ ಜ್ಞಾನ ಭಂಡಾರ ಜಾಸ್ತಿ ಆಗಬೇಕು. ಇದು ಎಲ್ಲಾ ಹಳ್ಳಿಗಳಲ್ಲಿ ಹಬ್ಬಬೇಕು. ಆದ್ದರಿಂದ ಅಗ್ರಿಕಲ್ಚರ್ ಕಾಲೇಜುಗಳನ್ನು ಈ ವರ್ಷದಿಂದಲೇ ಪ್ರಾರಂಭ ಮಾಡಬೇಕು. ಯಾವ ಯಾವ ಮಲೆನಾಡು ಪ್ರದೇಶ ಇದೆ, ಯಾವ ಯಾವ ಬ್ಯಾಕ್‌ವರ್ಡ್ ಏರಿಯಾ ಇದೆ, ಆ ಭಾಗಕ್ಕೆ ಜಾಸ್ತಿ ಪ್ರಾತಿನಿಧ್ಯ ಕೊಡಬೇಕು. ಅದರಂತೆ ಮಾಡಬೇಕು ಎಂದು ನಾನು ಮಾನ್ಯ ಕೃಷಿ ಸಚಿವರಲ್ಲಿ ಮನವಿಮಾಡಿಕೊಳ್ಳುತ್ತೇನೆ ಅಗ್ರಿಕಲ್ಚರ್ ಯೂನಿವರ್ಸಿಟಿಗಳಲ್ಲಿ ಹರಿಜನ ಗಿರಿಜನರಿಗೆ ಬಹಳ ಅನ್ಯಾಯ ಆಗಿದೆ. ಅದನ್ನು ಅವರು ಪ್ರತಿಭಟನೆ ಮಾಡಿದ್ದಾರೆ, ಮೆಮೊರ್ಯಾಂಡಮ್ ಕೊಟ್ಟಿದ್ದಾರೆ, ಮಾನ್ಯ ಸಚಿವರಲ್ಲಿ ಮೆಮೊರ್ಯಾಡಂ ಕೊಟ್ಟಿರತಕ್ಕದ್ದನ್ನು, ಒತ್ತಾಯವನ್ನು ಮಾಡಿರುವುದನ್ನು ನಾವು ನೋಡಿದ್ದೇವೆ. ಪತ್ರಿಕೆಯಲ್ಲಿ ಓದಿದ್ದೇವೆ. ಅವರ ರಿಕ್ರೂಟ್‌ಮೆಂಟ್‌ನಲ್ಲಿ, ಅಪಾಯಿಂಟ್‌ಮೆಂಟ್‌ನಲ್ಲಿ, ಪ್ರೊಮೋಷನ್‌ನಲ್ಲಿ ಏನು ತಾರತಮ್ಯ ಆಗಿದೆಯೋ ದಯವಿಟ್ಟು ಅದನ್ನು ಸರಿಮಾಡಬೇಕು ಎಂದು ಮಾನ್ಯ ಕೃಷಿ ಸಚಿವರಲ್ಲಿ ನಾನು ಕೇಳಿಕೊಳ್ಳುತ್ತೇನೆ. ಈಗ ಕ್ಲಮ್ಸ್ ಎಂಬ ಪ್ರೋಗ್ರಾಮ್ ಇದೆ. ಕ್ಲಮ್ಸ್ ಪ್ರೋಗ್ರಾಂ ಅಂದರೆ ಕಾಂಪ್ರೆಹೆನ್ಸೀವ್ ಲ್ಯಾಂಡ್ ಯೂಸ್ ಮ್ಯಾನೇಜ್‌ಮೆಂಟ್ ಪ್ರಾಜೆಕ್ಟ್ ಪ್ರೋಗ್ರಾಮ್, ಇದು ಬಹಳ ಒಳ್ಳೆಯ ಪ್ರೋಗ್ರಾಂ ಇದನ್ನು ಅರ್ಥ ಮಾಡಿಕೊಂಡರೆ ಒಂದು ತುಂಡು ಭೂಮಿಯೂ ಸಹ ವೇಸ್ಟ್ ಆಗುವುದಿಲ್ಲ. ದನದ ಸಗಣಿಯೂ ಕೂಡ ವೇಸ್ಟ್ ಆಗುವುದಿಲ್ಲ, ಇದು ಅಂತಹ ಒಂದು

ಒಳ್ಳೆಯ ಪ್ರೋಗ್ರಾಮ್. ಇದಕ್ಕೆ ನಮ್ಮ ರಾಜ್ಯ ಸರ್ಕಾರ ಒಂದೇ ಅಲ್ಲ, ಕೇಂದ್ರ ಸರ್ಕಾರ ಅಲ್ಲ, ಅಂತರಾಷ್ಟ್ರೀಯ ಮಟ್ಟದಲ್ಲಿ ವರ್ಲ್ಡ್ ಬ್ಯಾಂಕ್‌ನಲ್ಲಿಯಾಗಲೀ, ಹೊರದೇಶದವರೂ ಸಹ ಏಯ್ಡ್ ಕೊಡಲಿಕ್ಕೆ ಮುಂದೆ ಬರುತ್ತಿದ್ದಾರೆ. ಆದರೆ ಏಕೋ ಏನೋ ಗೊತ್ತಿಲ್ಲ, ನಮ್ಮ ಸರ್ಕಾರದವರು ಈ ಒಂದು ಯೋಜನೆಯ ಬಗ್ಗೆ ಒಂದು ಹೆಜ್ಜೆ ಮುಂದೆ ಇಟ್ಟು ಈ ಪ್ರೋಗ್ರಾಮ್ ಅನ್ನು ತೆಗೆದುಕೊಂಡು ಬರುವುದಕ್ಕೆ ಏಕೆ ಯಶಸ್ವಿಯಾಗುತ್ತಿಲ್ಲ ಎಂದು ನಾನು ಕೇಳುತ್ತಿದ್ದೇನೆ. ಅದರಿಂದ ಇಂತಹ ಕ್ಲಮ್ಸ್ ಪ್ರೊಗ್ರೆಸೀವ್ ಸಿಸ್ಟಂ ಆಫ್ ಕಲ್ಟಿವೇಷನ್, ಅಗ್ರಿಕಲ್ಚರ್ ಸಿಸ್ಟಂನಲ್ಲಿ ಎಕ್ವಿಪ್‌ಮೆಂಟ್ಸ್ ಇದೆಯೆಲ್ಲ ಅದನ್ನು ತಾವು ದಯಮಾಡಿ ಹೊರದೇಶದವರು ಕೊಡತಕ್ಕ ಸಹಾಯವನ್ನು ಬೇಡ ಎಂದು ಹೇಳದೇ ಮುನ್ನುಗ್ಗಿ ಅವರ ಸಹಾಯವನ್ನು ಪಡೆದು ನಮಗೆ ಇದನ್ನು ಸದುಪಯೋಗ ಪಡಿಸಬೇಕೆಂಬ ಒತ್ತಾಯ ವನ್ನು ಮಾನ್ಯ ಕೃಷಿ ಸಚಿವರಲ್ಲಿ ಮಾಡುತ್ತಿದ್ದೇನೆ. ಈಗ ಈ ಸರ್ಕಾರಿ ಗೊಬ್ಬರದ ವಿಚಾರ. ಈ ಸರ್ಕಾರಿ ಗೊಬ್ಬರ ಬಂದಮೇಲಂತೂ ಮಣ್ಣು, ಭೂಮಿಯಲ್ಲಿರತಕ್ಕ ಫಲವತ್ತೆಲ್ಲ ಹೊರಟುಹೋಗಿ ಬಿಟ್ಟಿದೆ. ನಮ್ಮಲ್ಲಿ ಕೆಲವು ಜೈವಿಕ ಗೊಬ್ಬರ ಇದೆ. ಈ ಜೈವಿಕ ಗೊಬ್ಬರದಿಂದ ಏನು ಅನುಕೂಲ ಅಂದರೆ, ಜೈವಿಕ ಗೊಬ್ಬರ ಅಂದರೆ ಪರಿಸರದಲ್ಲಿ ಓಡಾಡತಕ್ಕ ಕ್ರಿಮಿ ಕೀಟಗಳು ಸಸ್ಯಗಳಿಗೆ ಸಾರಜನಕ ವನ್ನು ಒದಗಿಸತಕ್ಕ ಜೀವಾಣಗಳು. ಅವು ಪೌಷ್ಟಿಕ ಆಹಾರವನ್ನು ಒದಗಿಸುತ್ತವೆ. ನಮ್ಮ ಪರಿಸರ ದಲ್ಲಿರುವ ಇವನ್ನು ನಮ್ಮ ಅಜ್ಞಾನದಿಂದ ಪೂರ್ಣವಾಗಿ ಬಳಸಿಕೊಳ್ಳುತ್ತಿಲ್ಲ. ಈ ಒಂದು ಜೈವಿಕ ಗೊಬ್ಬರದಿಂದ ಯಾವ ರೀತಿ ಅನುಕೂಲವಾಗುತ್ತದೆ ಎಂದರೆ, ಇಲ್ಲಿ ಒಂದು ಅಜ್ವಲ ಎಂಬ ನೀಲಿ. ಹಸಿರು ಪಾಚಿ ಇದೆ. ಆಮೇಲೆ ರೈಸೋ, ವಿಮ್ಯಾ ಇದೆ ಅಜಟೊ ಬ್ಯಾಕ್ಟೀರಿಯಾ ಇತ್ಯಾದಿ ಇದೆ, ಇವೆಲ್ಲಾ ಜೈವಿಕ ಗೊಬ್ಬರಗಳೇ. ಇದರ ಒಂದು ಉಪಯುಕ್ತತೆಯನ್ನು ಮಾನ್ಯ ರೈತರಿಗೆ ಕೊಡಬೇಕು. ಏಕೆಂದರೆ: ಸರ್ಕಾರಿ ಗೊಬ್ಬರ ಹಾಕುವುದರಿಂದ ಒಂದು ಹೆಕ್ಟೇರಿಗೆ ೧೦೦ ರಿಂದ ೧೫೦ ರೂಪಾಯಿ ಖರ್ಚು ಆಗುತ್ತದೆ. ಆದರೆ ಈ ಜೈವಿಕ ಗೊಬ್ಬರವನ್ನು ಹಾಕುವುದರಿಂದ ೧೦ ರಿಂದ ೧೫ ರೂಪಾಯಿ ಖರ್ಚು ಆಗುತ್ತದೆ, ಇಂತಹ ಗೊಬ್ಬರವನ್ನು ನಾವು ಯಾವ ರೀತಿ ಉಪಯೋಗ ಮಾಡಿಕೊಳ್ಳಬೇಕು ಎನ್ನುವುದು ಗೊತ್ತಿಲ್ಲ. ಆದ್ದರಿಂದ ಮಾನ್ಯ ಕೃಷಿಸಚಿವರು ಇದರ ಬಗ್ಗೆ ಜಾಸ್ತಿ ನಿಗಾ ವಹಿಸಬೇಕು. ಇದರ ಉಪಯುಕ್ತತೆ ನಮ್ಮ ರಾಜ್ಯದ ರೈತರಿಗೆ ಸಿಗುವಂತೆ ಮಾಡಬೇಕು ಎಂದು ಒತ್ತಾಯಿಸುತ್ತೇನೆ, ಹಾಗೆಯೇ ಕೆಐಸಿ ಇದೆ, ನಮ್ಮ ರೈತರು ಪತ್ರ ಬರೆದಿದ್ದಾರೆ, ನಾನು ಉಮಾಪತಿಯವರು ಸೇರಿಕೊಂಡು ಒಂದು ಪತ್ರವನ್ನು ಮಾನ್ಯ ಸಚಿವರಿಗೆ ಬರೆದಿದ್ದೇವೆ. ಈಗ ಕೊಡತಕ್ಕ ಅಗ್ರಿಕಲ್ಚರಲ್ ಎಕ್ವಿಪ್‌ಮೆಂಟ್ ಅಂದರೆ ಸಬ್‌ಮರ್ಸಿಬಲ್ ಪಂಪ್‌ಸೆಟ್ಸ್ ಪೈಪ್ಸ್ ಇವೆಲ್ಲಾ ಭಾರೀ ಕಳಪೆಯಾಗಿದೆ. ಇವನ್ನೆಲ್ಲಾ ಡಿಸ್ಟ್ರಿಕ್ಟ್ ನಲ್ಲಿ ಲೋಕಲ್ ಆಗಿ ಸ್ವೇಚ್ಛಾಚಾರವಾಗಿ ಕೋಟಿಗಟ್ಟಲೆ ಪರ್ಚೇಸ್ ಮಾಡುತ್ತಿದ್ದಾರೆ, ಅದನ್ನು ನಿಲ್ಲಿಸಬೇಕು. ಅದನ್ನು ನಿಲ್ಲಿಸಿ ಅದರ ಕ್ವಾಲಿಟಿಯನ್ನು ದಾವು ತಪಾಸಣೆ ಮಾಡಬೇಕು, ಅದರ ಕ್ವಾಲಿಟಿ ಬಗ್ಗೆ ಬಹಳಷ್ಟು ರೈತರು ನಮಗೆ ಕಂಪ್ಲೇಂಟ್ ಮಾಡುತ್ತಿದ್ದಾರೆ. ಅದಕ್ಕೋಸ್ಕರ ದಯಮಾಡಿ ಯಾವ ಸ್ಟಾಂಡರ್ಡ್ ಕಂಪನಿಗಳು, ಕ್ವಾಲಿಟಿ ಮೇಲೆ ಹಿಡಿತ ಇರತಕ್ಕ ಕಂಪೆನಿಗಳಿವೆ. ಅವುಗಳಿಂದ, ಇವನ್ನು ಪರ್ಚೇಸ್ ಮಾಡಬೇಕು. ಹಿಂದೆ ಆಗ್ರೋದವರು ಪರ್ಚೇಸ್ ಮಾಡತಕ್ಕಂಥ ವ್ಯವಸ್ಥೆ ಇತ್ತು. ಕ್ವಾಲಿಟಿ ಕಂಟ್ರೋಲ್ ಇರಬೇಕು. ರೈತರಿಗೆ ಕೊಟ್ಟಿರತಕ್ಕ ಸಬ್‌ಮರ್ಸಿಬಲ್ ಪಂಪ್ಸ್ ಅಥವಾ ಅಗ್ರಿಕಲ್ಚರಲ್ ಎಕ್ವಿಪ್‌ಮೆಂಟ್ಸ್ ಬಗ್ಗೆ ರೈತರು ಕಂಪ್ಲೇಂಟ್ ಮಾಡಬಾರದು. ರೈತರಿಗೆ ಸಮಯಕ್ಕೆ ಸರಿಯಾಗಿ ಬೀಜ, ಗೊಬ್ಬರ ಒದಗಿಸತಕ್ಕಂಥ ವ್ಯವಸ್ಥೆಯನ್ನು ಮಾನ್ಯ ಸಚಿವರು ಮಾಡಬೇಕು. ರೈತರಿಗೆ ಮಳೆಗಾಲದಲ್ಲಿ ಬಿತ್ತನೆಗೆ ಬೀಜ ಬೇಕು. ಆದರೆ ಆ ಬೀಜ ಬೇಸಿಗೆ ಕಾಲದಲ್ಲಿ ಬರುತ್ತದೆ. ಈ ಒಂದು ಪರಿಪಾಠ ಹಿಂದೆ ನಡೆದಿದೆ. ಆ ರೀತಿ ಮುಂದೆ ಆಗದಹಾಗೆ ಮಾನ್ಯಸಚಿವರು ವ್ಯವಸ್ಥೆ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಕೊನೆಯದಾಗಿ ಅನಿಮಲ್ ಹಸ್ಬೆಂಡರಿ ಬಗ್ಗೆ ಹೇಳುವುದಾದರೆ, ಡ್ಶೆರಿ ಪ್ರೊಗ್ರಾಂ ಬಹಳ ಒಳ್ಳೆಯ ಪ್ರೋಗ್ರಾಂ. ಈ ಪ್ರೋಗ್ರಾಂನಲ್ಲಿ ಹೆಣ್ಣು ಮಕ್ಕಳನ್ನು ಇನ್‌ವಾಲ್ವ್ ಮಾಡತಕ್ಕಂಥ ಒಂದು ವ್ಯವಸ್ಥೆ ಯಾಗಬೇಕು. ಅದು ಹೆಣ್ಣು ಮಕ್ಕಳಿಂದಲೇ ಸ್ಥಾಪನೆಯಾಗಿರತಕ್ಕ ಸೊಸೈಟಿಯಾಗಿರಬೇಕು. ಹಳ್ಳಿ ಗಳಲ್ಲಿ ತೀರ ಹಿಂದುಳಿದಿರತಕ್ಕ ಮಾತೆಯರು, ಮಹಿಳೆಯರು ಕೂಲಿಗೋಸ್ಕರ ಏನು ಪರದಾಡು ತ್ತಿದ್ದಾರೊ ಅವರ ಜೀವನಕ್ಕೆ ಕಲ್ಪವೃಕ್ಷವಾಗತಕ್ಕಂಥ ಪ್ರೋಗ್ರಾಂ ಇದು. ಈ ಪ್ರೋಗ್ರಾಮಿನಲ್ಲಿ, ಈ ಸೊಸೈಟಿಗಳಿಗೆ ಹೆಣ್ಣು ಮಕ್ಕಳೇ ಅಧ್ಯಕ್ಷಿಣಿಯರಾಗಬೇಕು, ಇದರಲ್ಲಿ ಗಂಡಸರು ಯಾರೂ ಇರುವುದು ಬೇಡ, ಬರೀ ಹೆಣ್ಣುಮಕ್ಕಳೇ ಇರಬೇಕು, ಇಂತಹ ಒಂದು ಸೊಸೈಟಿಯನ್ನು ಸರ್ಕಾರದವರು ರಿಜಿಸ್ಟರ್ ಮಾಡಬೇಕು. ಈ ಸೊಸೈಟಿಗಳು ಕನ್‌ಸಿಸ್ಟ್ ಆಫ್ ಉಮನ್ ಆಗಿರಬೇಕು, ಹರಿಜನ–ಗಿರಿಜನ ಹೆಣ್ಣು ಮಕ್ಕಳಿಂದ ಕೂಡಿರತಕ್ಕ ಸೊಸೈಟಿಯಾಗಿರಬೇಕು. ಆದರಲ್ಲೂ ಲಂಬಾಣಿ ತಾಂಡಾದಲ್ಲಿರತಕ್ಕ ಮಹಿಳೆ ಯರಿಗೆ ಅನುಕೂಲವಾಗುವ ರೀತಿಯಲ್ಲಿ ಇರಬೇಕು. ಹರಿಜನ–ಗಿರಿಜನರ ಹೆಣ್ಣುಮಕ್ಕಳು ಇರತಕ್ಕಂಥ

ಸೊಸೈಟಿಯನ್ನು ರಿಜಿಸ್ಟರ್ ಮಾಡತಕ್ಕಂಥ ಅವಕಾಶವನ್ನು ತಾವು ದಯಪಾಲಿಸಬೇಕು ಎಂದು ಮಾನ್ಯ ಸಚಿವರಲ್ಲಿ ನಾನು ಒತ್ತಾಯ ಮಾಡುತ್ತೇನೆ ಮತ್ತು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಇನ್ನು ಬಂದೀಖಾನೆಯಲ್ಲಿರತಕ್ಕಂಥ ನಮ್ಮ ಸ್ನೇಹಿತರುಗಳ ವಿಚಾರ ಹೇಳುತ್ತೇನೆ. ಅವರು ಯಾವ ತಪ್ಪಿನಿಂದಲೋ ಒಳಗೆ ಹೋಗಿದ್ದಾರೆ. ಅಲ್ಲಿ ಊಟದ ವ್ಯವಸ್ಥೆ ಸರಿಯಿಲ್ಲ, ಅವರಿಗೆ ಕೊಡತಕ್ಕಂಥ ಫೆಸಿಲಿಟೀಸ್ ಸರಿಯಿಲ್ಲ. ಅವರೆಲ್ಲ ಸೇರಿಕೊಂಡು ನನಗೆ ಪತ್ರ ಬರೆದಿದ್ದಾರೆ. ನೀವು ಎಂ. ಎಲ್. ಎ. ಇದ್ದೀರಿ, ನಾವು ೬-೭-೮ ವರ್ಷಗಳಿಂದ ಒಳಗಡೆ ಇದ್ದೇವೆ ಎಂದು ಪತ್ರ ಬರೆದಿದ್ದಾರೆ ಅವರು ಯಾವುದೊ ಮಾನಸಿಕವಾಗಿ ತಪ್ಪು ಮಾಡಿದ್ದಾರೆ, ಅದರ ಬಗ್ಗೆ ನಾನು ತರ್ಕ ಮಾಡಲಿಕ್ಕೆ ಹೋಗುವುದಿಲ್ಲ. ಅವರಿಗೆ ಒಳಗೆ ಊಟ ಸರಿಯಿಲ್ಲ, ಸರ್ಕಾರದ ನಿಯಮಾವಳಿ ಪ್ರಕಾರ ಎಷ್ಟು ಕೊಡಬೇಕೋ ಅಷ್ಟು ಕೊಟ್ಟರೆ ಸಾಕು. ಸರ್ಕಾರದ ನಿಯಮದ ಪ್ರಕಾರ ಏನು ಸವಲತ್ತು ಕೊಡಬೇಕೆಂದು ಇದೆ ಅದಕ್ಕಿಂತ ಕಡಿಮೆ ಸವಲತ್ತು ಕೊಡತಕ್ಕದ್ದು ಇದೆ. ಕಳಪೆ ಊಟ ಹಾಕತಕ್ಕಂಥ ವ್ಯವಸ್ಥೆ ದಯಮಾಡಿ ಮಾಡಬೇಡಿ. ಏಕೆಂದರೆ, ಒಂದು ಸಲ ಜೈಲಿಗೆ ಹೋದರೆ ಅದರ ಅನುಭವ ವಾಗುತ್ತದೆ. ಮಾನ್ಯ ರಾಮಪ್ಪನವರು ಜೈಲಿನಲ್ಲಿದ್ದಾಗ ಅದರ ಅನುಭವವಾಗಿರಬಹುದು. ಆದುದರಿಂದ ಬಂಧೀಖಾನೆಯಲ್ಲಿರತಕ್ಕಂಥ ನಮ್ಮ ಎಲ್ಲ ಸ್ನೇಹಿತರಿಗೆ ಮಾನವೀಯ ದೃಷ್ಟಿಯಿಂದ ಒಳ್ಳೆಯ ಊಟ ಹಾಕತಕ್ಕಂಥ ವ್ಯವಸ್ಥೆ ಮಾಡಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿ, ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಎಂ. ಬೆಳ್ಳಿಯಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಒಂದು ಸಬ್ಮಿಷನ್. ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ೭ ಗಂಟೆಗೆ ಒಂದು ಇಂಪಾರ್ಟೆಂಟ್ ಡಿಸ್ಕಷನ್‌ಗೆ ಕರೆದಿದ್ದಾರೆ.

ಅಧ್ಯಕ್ಷರು.—ಬೇಡಿಕೆ ಸ್ಯಾಂಕ್ಷನ್ ಆಗದೇಹೋದರೆ ಟ್ರಾನ್ಸ್‌ಪೋರ್ಟ್ ಮಿನಿಸ್ಟರೂ ಇಲ್ಲ, ನಿಮ್ಮ ಡಿಸ್ಕಷನ್ನೂ ಇಲ್ಲ, ಹಾಗೆ ಆಗುತ್ತದೆ.

ಶ್ರೀ ಎ. ಎಂ. ಬೆಳ್ಳಿಯಪ್ಪ.—ಅದು ಇಂಪಾರ್ಟೆಂಟ್ ಡಿಸ್ಕಷನ್ ಇದೆ.

† SRI QAMARUL ISLAM (Gulbarga).—Mr. Speaker Sir, there are about 15 demands before us. I have to do justice while speaking on the demands for grants and I will see that justice will be done. Therefore to do justice, I will select only 4 or 5 demands and as you know the very important demand is of the Police Department The Police Department is responsible for maintaining law and order, peace, and communal harmony in the State. The most unfortunate thing is that the law and order situation is deteriorating in this State during the last six months, About 17 communal riots took place in Kolar, Mulbagal, Mysore, Srirangapatna wherein lakhs of rupees worth of properties were looted, burnt and damaged.

6-30 P. M.

Number of persons were killed during these riots and no strong steps had been taken in many of the cases. In the history, Karnataka once upon a time was known as a peaceful State. Srirangapatna is a historical place because the first independence fighter Tipu Sultan was from this place. In that place there were 70 to 80 families. But after the communal riots some of the families have migrated which has already been reported in the

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

newspapers. For the first time, more than 3 to 5 families have already migrated. You can just imagine the tension and the fear which are existing in Srirangapatnam. The samething is continued as far as the scheduled castes are concerned. Just three days back, the Hon'ble Chief Minister replied to Mr. Kharge's question that there were 643 atrocities committed against the scheduled castes in the State and property worth about Rs. 15 lakh was damaged and burnt and there are about nine Deputy Commissioners who have not even submitted the report and given immediate relief to them. This was the answer of the Hon'ble Chief Minister. If you take into account the 643 atrocities on scheduled castes and others, per day there are at least three atrocities committed and communal riots going on in this State. That means we can imagine how the law and order situation is deteriorating in this State. Sir, my fear is not this. I wanted to say very specifically that in this country, on 23rd June at Haridwar, a decision was taken by the Vishwa Hindu Parishad that on 30th October some five lakh volunteers from villages will gather at Ayodhya and they will demolish the Babri Masjid and they will construct Ram Mandir at the Ram Janma Bhoomi. When this decision was given by the Vishwa Hindu Parishad. the national BJP has said that they are backing this decision fully. Immediately, the Hon'ble Chief Minister of Uttar Pradesh has created a sort of confidence among the minorities in that state by saying, "I am the Chief Minister of this State. I will see that by demolishing Babri Masjid, Ram Mandir cannot be constructed because that piece of land is a disputed land and cases are going on in the court." When the Parliament and Assembly elections were going on i.e., on 9th November the same decision was taken and you know how emotional tensions were created between Muslims and Hindus and other communities. After that, the Hon'ble Prime Minister has taken a stand that he will try his level best and he is making all efforts to see that there is a peaceful settlement. But, unfortunately, till today, the statements are coming from the Vishwa Hindu Parishad that from next month onwards, victory processions will start and there will be public meetings and I know what will be spoken in those meetings.

MR. SPEAKER.—I think you yourself have partically answered that with particular concern and anxiety. The Uttar Pradesh Chief Minister has made known his decision loud clear and without any ambiguity.

ಶ್ರೀ ದಯಾನಂದರಾವ್.—ಮಾನ್ಯ ಕಮುರುಲ್ ಇಸ್ಲಾಂ ಅವರು ಕರ್ನಾಟಕದ ಬಗ್ಗೆ ಹೇಳಲಿ, ಯು. ಪಿ. ಬಗ್ಗೆ ಏತಕ್ಕೆ ಹೇಳಬೇಕು?

SRI QUMURUL ISLAM.—I know my responsibity, I don't want your advise. It is a life and death question of the minorities. Sir, why I have given this background? if it is the matter of

the U. P. State only, I would not have bothered. If the decision of the Vishwa Hindu parishad is only for U. P. and that they are collecting volunteers from villages of U. P. State only. I am the first person not to speak here. But the decision of the Vishwa Hindu Parishad taken at Haridwar is, there will be victory processions throughtout the country and you know what happened during the Shilanyas. I just quote the slogans they have written on the walls against the Muslims; "Quoran Chodo or Hindustan chodo" Neither Muslims will leave Quoran nor they will leave India. They have born here and they will die here. There is a talk of Hindu Rashtra, You know, the Hon'ble Chief minister of U. P. Sri Mulyam Singh even day before yesterday on the floor of the UP Assembly has said that some people are thinking of Hindu Rashtra in this country, but it will never be fulfilled. That was the feeling and that was the secular mind of the Hindus which I know. But the concern is about the procession which is going to take place. Sir in this State there is communal harmony, I don't want that communal harmony to be distured here. what I want throught you sir, let this government ban all the activities of the Vishwa Hindu Parishad victory processions, Shilanyas, and those public meettings slated for 30th October. Thousands of Ram Mandirs have come in this country. I have no objection. But the decision taken for 30th October is a threat to the very integrity of this country. That decision is a threat to the communal harmony of this country and it is a threat to the law and order of this country and the State. So my apprehension is, this will create a sort of communal tension and Hindus and Muslims in the name of Ram Mandir and Babri Masjid they will become emotional. That is why I demand in this House that all activities and programmes, which are given from September to October by the Vishwa Hindu Parishad, should be banned. This I want to tell you very specifically.

Now I will go to other subjects- Transfers and Secretariat matters. Transfers have been done. I am proud that Sri Veerendra Patil is from my district. His earlier regime 18 years back when he was Chief Minister he was a popular Chief Minister and his name is still remembered. But the most unfortunate thing is the same Mr. Veerendra Patil regime of present, you know, how talks are going on in the State. Transfers have been done. we have no objection, nobody has got any objecton. But what has happened during transfers? The important postings were given only persons belonging to a particular Community I don't want to go into much details But what about others, the minorities, backward classes and scheduled castes?

SRI M. MAHADAV.—Your interest is not that.

SRI QUMURUL ISLAM.—I am not here to take certificate from you. whatever feeling I have got I have to express it in this House. The impression which we had for the previous regime of the present Chief Minister was that he was the best administrator. But now, how he has become a bad administrator It is because, of a sort of imperession created that only a particylar community has been given transfers. I don't want to go into details. want to tell you, to maintain peace. law and order, the National Integration Council is there in this country. Almost all the Chief Ministers and the Prime Minister are in that Council and meetings have been held wherein number of decisions have been taken. But those decisions have not been implemented. In 1981 also when Mrs. Indira Gandhi's regime was there, there was a circular that at least in district headquarters out of the two important posts *viz.*, Deputy Commissioner and Superintendent of police, at least one post should be given to a scheduled caste. when Sri late D. Devaraja Urs was the Chief Minister and I was also an MLA from 1978-82, I know what was the tradition established and what was the method adopted. In each district headquarter out of these two important posts he used to give one to the minority or scheduled caste or backward class and another to a majority community. This system had created a sort of confidence among the people. Communal harmony was there and Communal tension was not there at that and if it we time time, it was at a minimum leve. But now there are twenty districts. How many SPS are there ? Is there any person belonglng to Muslim throughout the State ?

AN HON'BLE MEMBER : In Hassan, there is one SP.

SRI QUMURUL ISLAM.—I think there is no S.C SP throughout the State. As if a great thing has been done towards the minorities and scheduled castes, there are six IPS officers in this State. But why they have not been given important postings ? There are many scheduled caste officers; there are many backward classes offiicers, why they have not been given important postings ? I just uote, in Bangalore out or 18 sub-inspector...

SRI G. S. SHIVANANJAPPA.—Point of Order. ನಮ್ಮ ರಾಜ್ಯದಲ್ಲಿ ವರ್ಗಾವಣೆಯಲ್ಲಿ ಇಂತಿಂತಹ ಕಮ್ಯುನಿಟಿಯ ಜನರನ್ನು ಇಂತಿಂತಹ ಕಡೆ ಹಾಕಬೇಕೆಂದು ಏನೂ ಇಲ್ಲ. ಒಂದು ಕಮ್ಯುನಿಟಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರಲ್ಲ ದಯಮಾಡಿ ಆವರು ಯಾರು ಎಂದು ಹೇಳಬೇಕು. Sri Nizamuddin was Director General of police for 2 1/2 years. He was the person who was holding the entire police department. Why did he not do it ? He (hon.member) cannot in the name of minority enrage others. ನಿಮಗೆ ಕೊಡಬೇಕಾದ

ಕೋಟಾವನ್ನು ಕೊಟ್ಟಿದ್ದಾರೋ ಇಲ್ಲವೋ ಹೇಳಿ, ಅವರಿಗೆ ಕೊಡಬೇಕಾದ ಎಸ್. ಪಿ. ಪೋಸ್ಟ್ ಅನ್ನು ಕೊಟ್ಟಿದ್ದಾರೆ. ದುಡ್ಡು ತಿನ್ನುವ ಜಾಗ ಬೇಕೆಂದು ಹೇಳುತ್ತೀರಾ ? ಅಥವಾ ಇನ್ಯಾವ ಜಾಗ ಬೇಕು ಎಂದು ಹೇಳುತ್ತೀರಿ. ಯಾವುದಾದರೂ ಒಂದು ಜಾಗ ಕೊಡಬೇಕೆಂದು ನೀವು ಹೇಳಬೇಕು. ಸುಮ್ಮನೆ ಒಂದು ಕಮ್ಯುನಿಟಿ ಇನ್ನೊಂದು ಕಮ್ಯುನಿಟಿ ಎಂದು ಹೇಳಿದರೆ ಆಗದು, ನಿಜಾಮುದ್ದೀನ್ ರವರು ಇದ್ದಾಗ ಅವರು ಏನು ಮಾಡಿದರು ಎನ್ನುವುದನ್ನು ನೀವು ಹೇಳಬೇಕು.

SRI QUMURUL ISLAM.—By becoming the President of India, the problems of Muslims cannot be solved, by becoming the Chief Minister of a State, the problems of Harijans cannot be solved. I am quoting the circular from your government during Smt Indira Gandi's period according to which there should be one schedule caste posting in each district. I want to know why they are not implementing that circular.

SRI G. S. SHIVANANJAPPA.—Which community you are quoting?

SRI QUMURUL ISLAM.—I am quoting SC community. I am quoting the circular of 1981. Don't make me emotional......

ಶ್ರೀ ಜಿ. ಎಸ್. ಶಿವನಂಜಪ್ಪ.—ಈಗ ಸಿ ಅಂಡ್ ಆರ್ ರೂಲ್ಸ್‌ನಲ್ಲಿ ಇಂತಿಂತಹ ಪೋಸ್ಟ್ಅನ್ನು ಇಂತಿಂತಹವರಿಗೆ ಕೊಡಬೇಕೆಂದು ಮಾಡುವುದಾದರೆ ಮಾಡಲಿ, ಇಲ್ಲದಿದ್ದರೆ ಐ. ಟಿ. ಎಸ್. ಪೋಸ್ಟ್ ಕೊಡಬೇಕು, ಕೊಟ್ಟಿಲ್ಲ ಎಂದು ಹೇಳಿ. ಪೋಸ್ಟ್ ಕೊಟ್ಟಿದ್ದಾರೆ. ಆದರೆ ಎಲ್ಲಿಗೆ ಕೊಡಬೇಕೆಂದೇನೂ ಇಲ್ಲ. ಅದು ಎಲ್ಲಿದೆ.

ಒಬ್ಬ ಮಾನ್ಯ ಸದಸ್ಯರು.—ಇವರು ಮೈನಾರಿಟಿ ಮೈನಾರಿಟಿ ಎಂದು ಹೇಳುತ್ತಿದ್ದಾರೆ, ಈ ಮೈನಾರಿಟಿಯವರು ಮೆಜಾರಿಟಿ ಇರುವ ಕಡೆಬೇರೆ ಮೈನಾರಿಟಿಗೆ ಏನು ಫೆಸಿಲಿಟೀಸ್ ಕೊಟ್ಟಿದ್ದಾರೆ ಎಂಬುದನ್ನು ಮತ್ತು ಎಷ್ಟೆಷ್ಟು ಕೆಲಸ ಮಾಡಿದ್ದಾರೆ ಎಂಬುದನ್ನು ದಯವಿಟ್ಟು ಇವರು ತಿಳಿಸಬೇಕು.

SRI QUMURUL ISLAM.—My dear friend, I have not attacked. Don't be so much emotional. In democratic country......

(Interruptions).

MR SPEAKER.—Order, order. Don't interrupt him. He is concluding now.

SRI QUMURUL ISLAM. About Secretariat, it is very sensitive and important, There are IAS officers There is a system, there is a dignity and it is a supreme force. There is an executive authority. But what is happening here? We are very happy that raids have been conducted in the houses of IAS officers. I appreciate that stand. The IAS officere are not super human beings. Sir, I want to know from this government the list submitted for raids to be conducted against IAS officers. Is there a single person belonging to the majority community in the list? Not a single name is there. Names of only Scheduled Castes, Backward Classes and other Minorities are found. Here is a list where raids have been done. One is a Christian

one is an IPS officer belonging to SC, another is a bania and the fourth one is a Shetty. Why there should be discrimination ? A new precedent has beencreated. In the lower cadre officers, if one person is to get promotion; they book some cases and charges are framed against him to see that he should not get promotion. That is being done by the IAS officers. In a democratic system, the officers are playing their role in such a way that the name of the Chief Minister is spoiled. What are the charges ? I want to quote an example. There was a charge against Sri N. K. Prabhakar Rao. seniormost IAS officer. He was due for promotion to a post of Chief Secretary. What happened in NGEF everybody knows. But nothing was established and he was exonerated. Because he was close to the Chief Minister, because he was a Brahamin.......

MR. SPEAKER.—It is not necessary to quote names.

SRI QUMURUL ISLAM.—I am sorry. Because they wanted that I have to Quote. I have quoted, otherwise, I would not have said. Sir, there were changes. against one of the seniormost officer Afrerwards there were no charges. What happened ? Some other junior man was promoted as the Chief Secretary of the State. That seniormost IAS officer, who is known for his integrity and ability. I know, has served in my area also since so many years. What loss he has got ? Can anybody rectify it? So, such things have come. We, MLAs, are not here always to support the officers. We will say whether the officers are doing right thing as per law or not. That is the spirit in the democracy. It is not that he belongs to my community or that community. When I say that there should be a Muslim, it is not Qumurul Islam or the Muslim League which has taken a decision. It is a decision taken by the National Integration Council that 40% representation should be given to the minorities in the Police Department in order to see that there is communal harmony in the country. That was the hishest decision of our democratic country. We wanted that decision which should be implemented. When I say that Muslim D. C. P. or S. P. is not there, that doesn't mean Qumurul Islam wanted this Muslim officer to be there or Mr. Kharge or Mr. Basavalingappa wants an SC officer to be there or when your Dy. Leader of the Opposition Mr. Sindhia says that Maratha Person is to be there. It is not like that. our majority Community people are the elder berothers and we are the younger brothers. if you give something......

MR. SPEAKER.—We will take up all these things when we take up for discussion on the Justice Chinnappa Reddy Commission Report.

SRI QUAMARUL ISLAM.—I will conclude. The Chief Minister has said that he wanted to abolish certain corporations which are not functioning well. My request is, kindly do not abolish important Corporations like Minority Development Corporation, SC/ST Development Corporation, etc., In some of these Corporations, so far they have not appointed non official members and Chairman. There are only officers who are looking after these Corporations. Of course, the Government may not have the intention of abolishing all the Corporations, but my suggestion is that the Government should nominate non-officials to these Corporations. Sir, there are Recruitment Committes and till today they are not re-constituted. There was a precedent and there was a tradition-whether it is Janatha Government or the Congress Government-that in each Committee there should be one representative among SC and minority. That highest tradition should be maintained so that justice could be done to all. Sir, as a person belonging to a minority community, I would like to tell the Government through you, sir, a minority community person should not be made a Chairman or a Member of a Board or Corporation just because he was not given a ticket during the last general elections. Just to satisfy him this position has to be given to him; this attitude should go. When a person belongs to a minority community and if he is appointed as a member or a chairman of a Corporation or a Board, he should really work for the upliftment of that particular Community. Such persons only should be appointed and to satisfy any particular person, these boards or corporations should not be utilised. A person with honesty, dignity, and integrity should be appointed or nominated irrespective of the political party he belongs to these boards or Corporations. Sir, a number of complaints have come from the public with regard to malpractices in the purchase of various agricultural equipments such as pumpsets, pipes, egricultural implements etc. Sir, the Hon'ble Agriculture Minister is not here now. I agree with the policy of the Government about the decentralisation and all that. But, various bogus companies have come in the market which cheat the Government and the public by supplving low standard materials. There is no uniformity in the supply of materials to all districts. If one district is supplied with pumpsets. another district is supplied with only fertilizers or implements. These things should be avoided. My suggestion is, the Government should purchase all these things and directly supply to farmers. Otherwise, in the name of decentralisation, middleman will make money and the farmers will be cheated. The farmers are deprived of their right. With these few words, I conclude my speech and thank the Hon'ble Speaker for having given me this opportunity to speak. Thank you very much.

† ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಸಭಾಧ್ಯಕ್ಷರೇ, ಇವತ್ತು ಈ ಸಭೆಯಲ್ಲಿ ಮಾನ್ಯ ಸಚಿವರು ಯಾವ ಬೇಡಿಕೆಗಳನ್ನು ಮಂಡಿಸಿದ್ದಾರೆ ಅವನ್ನು ನಾನು ಬೆಂಬಲಿಸುತ್ತಾ, ಕೆಲವೇ ವಿಷಯಗಳ ಬಗ್ಗೆ ಕೆಲವಾರು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ, ಸಮಗ್ರ ಗ್ರಾಮೀಣ ಅಭಿವೃದ್ಧಿ ಮತ್ತು ಗ್ರಾಮಾಂತರ ಕುಡಿಯುವ ನೀರಿನ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ದೇಶದ ಸಮಗ್ರ ಅಭಿವೃದ್ಧಿ ನಿಜವಾಗಿಯೂ ಇವತ್ತು ಸಮಗ್ರ ಗ್ರಾಮೀಣ ಅಭಿವೃದ್ಧಿಯನ್ನು ಅವಲಂಬಿಸಿದೆ ಎಂದರೆ ತಪ್ಪಾಗಲಾರದು. ಅದರಲ್ಲೂ ಬಹಳ ಮುಖ್ಯವಾಗಿ ಗ್ರಾಮಾಂತರ ಕುಡಿಯುವ ನೀರಿನ ಸೌಲಭ್ಯ ಮತ್ತು ಗ್ರಾಮ ನೈರ್ಮಲೀಕರಣ ಬಹಳ ಮುಖ್ಯವಾದುದು. ಈ ಗ್ರಾಮಾಂತರ ಕುಡಿಯುವ ನೀರಿನ ಯೋಜನೆ ಬಗ್ಗೆ ಹೇಳುವುದಾದರೆ, ಮಾನ್ಯ ಶ್ರೀ ಬೇಗಾನೆ ರಾಮಯ್ಯನವರು ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಾಗಿದ್ದಾಗ ಬಹಳಷ್ಟು ಬೋರ್‌ವೆಲ್‌ಗಳನ್ನು ತೆಗೆಸಿದ್ದರಿಂದ ಅವರು ಬೋರ್‌ವೆಲ್ ಮಂತ್ರಿಗಳಾದರು. ಆದರೆ ನೀರಿನ ಸಮಸ್ಯೆ ಬಗೆಹರಿಯಲಿಲ್ಲ. ತದನಂತರ ದಿವಂಗತ ಮಾನ್ಯ ನಜೀರ್‌ಸಾಬ್‌ರವರು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಮಿನಿ ವಾಟರ್ ಸಪ್ಲೈಯನ್ನು ಹೆಚ್ಚಿಗೆ ಮಾಡುತ್ತೇವೆಂದು ಅದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಅವರು ನೀರ್ ಸಾಹೇಬರೆಂದೇ ಹೆಸರನ್ನು ತೆಗೆದುಕೊಂಡರು. ಆದರೆ

(ಶ್ರೀ ಬಸವರಾಜಪಾಟೀಲ್ ಅಟ್ಟೂರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯಲಿಲ್ಲ. ಅದರಲ್ಲೂ ನಮ್ಮ ಮಲೆನಾಡಿನವರ ದುರಂತ ಅಂದರೆ ೬ ತಿಂಗಳು ಮಳೆ ಬಂದರೂ ನೀರೆಲ್ಲ ಸೋರಿಕೊಂಡು ಹೋಗುತ್ತದೆ. ಬೇಸಿಗೆ ಕಾಲದಲ್ಲಿ ಕುಡಿಯುವುದಕ್ಕೆ ನೀರು ಇರುವುದಿಲ್ಲ. ಅಲ್ಲದೆ ಬೇಸಿಗೆ ಕಾಲದಲ್ಲಿ ಓಪನ್ ವೆಲ್‌ಗಳೆಲ್ಲ ಡ್ರೈ ಆಗುತ್ತವೆ. ಆಮೇಲೆ ಬೋರ್‌ವೆಲ್ ಹಾಕಬೇಕೆಂದರೆ ೨೫೦–೩೦೦ ಅಡಿ ಕೊರೆದರೂ ನೀರು ಸಿಗುವುದಿಲ್ಲ. ಎಂ ಡಬ್ಲ್ಯು.ಎಸ್. ಅಥವಾ ಎನ್.ಆರ್.ಡಬ್ಲ್ಯು.ಎಸ್. ಯೋಜನೆ ತೆಗೆದುಕೊಂಡರೆ ಅದಕ್ಕೆ ಪಾಪ್ಯುಲೇಷನ್ ನಾರ್ಮ್ಸ್ ಅಡ್ಡ ಬರುತ್ತದೆ. ಎಂಡಬ್ಲ್ಯುಎಸ್ ಯೋಜನೆಗೆ ಒಂದು ಗ್ರಾಮದಲ್ಲಿ ೫೦೦ ಜನಸಂಖ್ಯೆ ಇರಬೇಕೆಂದು ಇದೆ. ಎನ್‌ಆರ್‌ಡಬ್ಲ್ಯುಎಸ್ ಯೋಜನೆಗೆ ಒಂದು ಸಾವಿರ ಜನಸಂಖ್ಯೆ ಇರಬೇಕೆಂದು ಇದೆ. ಮಲೆನಾಡು ಪ್ರದೇಶಗಳಾದ ಮೂಡಿಗೆರೆ, ಕೊಡಗು, ಮಂಗಳೂರು ಶಿವಮೊಗ್ಗ, ತೀರ್ಥಹಳ್ಳಿ ಮುಂತಾದ ಕ್ಷೇತ್ರಗಳಲ್ಲಿ ಒಂದು ಗ್ರಾಮದ ಮನೆಗಳು ಒಂದು ಕಡೆ ಇರುವುದಿಲ್ಲ. ಒಂದೊಂದು ಕಡೆ ೧೦–೧೫–೨೦ ಮನೆಗಳು ಗುಂಪುಗುಂಪಾಗಿ ಇರುತ್ತವೆ. ಇಂಥ ಕಡೆ ಪೂರ್ಣ ನಾರ್ಮ್ಸ್ ಸಿಕ್ಕುವುದಿಲ್ಲ. ಆ ಪ್ರದೇಶದ ಜನರಿಗೆ ಮಿನಿ ವಾಟರ್ ಸಪ್ಲೈ ಸ್ಕೀಂ ಮೂಲಕ ನೀರು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಆದ್ದರಿಂದ ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮಲೆನಾಡಿನಲ್ಲಿ ನೀವು ಏನಾದರೂ ಸ್ಪೆಷಲ್ ಡ್ರೈವ್ ಮಾಡಿ ವಾಟರ್ ಪ್ರಾಬ್ಲಂ ಅನ್ನು ಸಾಲ್ವ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ನಮ್ಮಲ್ಲಿ ಸತತವಾಗಿ ನದಿಗಳು ಹರಿಯುತ್ತಿರುತ್ತವೆ. ಇದು ಅಂತಹ ಕಲ್ಮಶವಾದ ನೀರಲ್ಲ. ಅದು ಗುಡ್ಡಗಾಡುಗಳಿಂದ ಹರಿದುಬರುವ ನೀರಾಗುದರಿಂದ ದೂರದಲ್ಲಿ ಬಾವಿಗಳನ್ನು ತೆಗೆದು ಅದಕ್ಕೆ ಪೈಪನ್ನು ಅಳವಡಿಸಿ ಗುಡ್ಡಗಾಡಿನ ಜನರಿಗೆ ನೀರು ಕೊಡುವುದಕ್ಕೆ ಸಾಧ್ಯತೆ ಇದೆ. ಅದಕ್ಕೆ ತಮ್ಮ ಕಾಲದಲ್ಲಿ ಪ್ರಯತ್ನಿಸಬೇಕು. ಕೇಂದ್ರ ಸರ್ಕಾರದವರು ಮಲೆನಾಡು ಭಾಗದಲ್ಲಿ ಪ್ರಾಬ್ಲಮ್ಯಾಟಿಕ್ ವಿಲೇಜಸ್ ಎಂದು ಗುರುತಿಸಿದ್ದಾರೆ. ನನ್ನ ಕ್ಷೇತ್ರದಲ್ಲಿ ಅಂಥ ೧೬೦ ಗ್ರಾಮಗಳನ್ನು ಪ್ರಾಬ್ಲಮ್ಯಾಟಿಕ್ ವಿಲೇಜಸ್ ಎಂದು ಗುರುತಿಸಿದ್ದಾರೆ. ಕಾರಣವೇನೆಂದರೆ, ಅಲ್ಲಿ ಓಪನ್ ವೆಲ್ ಸಕ್ಸೆಸ್ ಆಗಿಲ್ಲ, ಬೋರ್‌ವೆಲ್ ಸಕ್ಸಸ್ ಆಗಿಲ್ಲ. ಮಿನಿ ವಾಟರ್ ಸಪ್ಲೈ ಮಾಡುವುದಕ್ಕೂ ಸಾಧ್ಯವಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿರುವ ೧೬೦ ಗ್ರಾಮಗಳಿಗೆ ನೀವು ಯಾವ ರೀತಿ ನೀರು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರೆಂಬುದನ್ನು ಈ ಸಂದರ್ಭದಲ್ಲಿ ಯೋಚನೆ ಮಾಡಬೇಕೆಂದು ನಾನು ಕಳಕಳಿಯ ಮನವಿ ಮಾಡುತ್ತೇನೆ. ನಾನು ಇದೇ ಸದನದಲ್ಲಿ ಕೆ.ಇ.ಬಿ.ಯ ಪ್ರಶ್ನೆ ಬಂದಾಗ ಹೇಳಿದ್ದೆ, ಕೆ.ಇ.ಬಿ.ಯವರು ಮಲೆನಾಡಿನವರಿಗೆ ೪೦ ಸಾವಿರ ರೂಪಾಯಿಗಳೊಳಗಿನ ಕೆಲಸವನ್ನು ಮಾತ್ರ ತೆಗೆದುಕೊಳ್ಳಬೇಕೆಂದು ಕಂಡೀಷನ್ ಅಥವಾ ನಾರ್ಮ್ಸ್ ಹಾಕಿದ್ದರೆ ಅದನ್ನು ಲಿಫ್ಟ್ ಮಾಡಬೇಕು, ಆಮೇಲೆ ಯಾವುದೇ ಎಲೆಕ್ಟ್ರಿಫಿಕೇಷನ್ ವರ್ಕ್ಸ್ ತೆಗೆದುಕೊಂಡರೂ ಅದು ೪೦ ಸಾವಿರ ರೂಪಾಯಿಗಳೊಳಗೆ ಆಗುವುದಿಲ್ಲ, ಎಲ್ಲ ಕೆಲಸಗಳು ಒಂದು ಲಕ್ಷದ ಮೇಲೆಯೇ ಆಗುತ್ತದೆ, ಆದ್ದರಿಂದ ಈ ರಿಸ್ಟ್ರಿಕ್ಷನ್ ತೆಗೆಯಬೇಕು ಅಂದಾಗ ತೆಗೆದು ಇವತ್ತು ತುಂಬಾ ಉಪಕಾರ ಮಾಡಿದ್ದಾರೆ. ಅಂಥ ಕೆಲಸಗಳನ್ನು ತಾವು ಕೂಡ ಮಾಡಬೇಕು. ಇನ್ನು ಜನತಾ ಮನೆಗಳ ಬಗ್ಗೆ ಹೇಳುವುದಾದರೆ, ಹಿಂದೆ ಒಂದೊಂದು ತಾಲ್ಲೂಕಿಗೆ ಕೇವಲ ೨೦೦ ಮನೆಗಳನ್ನು ಕೊಟ್ಟಿದ್ದಾರೆ. ಅದಕ್ಕೂ ಮೊದಲು

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಾನು ಶಾಸಕಿಯಾಗಿದ್ದಾಗ ಮಾನ್ಯ ದೇವರಾಜ ಅರಸು ಅವರ ಕಾಲದಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಸುಮಾರು ೬೦೦-೮೦೦ ಮನೆಗಳನ್ನು ಬಡವರಿಗಾಗಿ ಕಟ್ಟಿಕೊಟ್ಟ ನಿದರ್ಶನಗಳು ಇವೆ. ಹಳೆಯ ಜನತಾ ಮನೆಗಳವರಿಂದ ಸಾಲವನ್ನು ವಸೂಲ್ಮಾಡುತ್ತಿದ್ದಾರೆ. ಒಂದೊಂದು ಕುಟುಂಬದವರಿಗೆ ಒಂದು ಸಾವಿರ ರೂಪಾಯಿ ಸಾಲದ ಹೊರೆಯನ್ನು ಹೇರಿದ್ದಾರೆ. ಅದನ್ನು ಕಡ್ಡಾಯವಾಗಿ ವಸೂಲ್ಮಾಡುವುದಕ್ಕೆ ಹೊರಟಿದ್ದಾರೆ. ಇದು ಅವರಿಗೆ ಭರಿಸಲಾರದ ಹೊರೆಯಾಗಿದೆ. ಆದ್ದರಿಂದ ತಾವು ಇದನ್ನು ತಪ್ಪಿಸಬೇಕು, ಇಲ್ಲವೇ ಮನ್ನಾ ಮಾಡಬೇಕು. ಇಲ್ಲದಿದ್ದರೆ ಒಂದು ಸಾವಿರ ರೂಪಾಯಿಗಳನ್ನು ಕಂತಿನ ಪ್ರಕಾರವಾದರೂ ವಸೂಲ್ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಎಸ್‌ಸಿ ಎಸ್‌ಟಿ ಸ್ಕೀಂನಲ್ಲಿ ಜನತಾ ಮನೆಗಳಿಗೆ ಎರಡು ವರ್ಷದಿಂದ ಹಣ ಕೊಟ್ಟಿಲ್ಲ. ಜನರಲ್ ಸ್ಕೀಂನಲ್ಲಿ ಜನತಾ ಮನೆಗಳಿಗೆ ಹಣ ಬಿಡುಗಡೆ ಮಾಡಿದ್ದಾರೆ. ಆದರೆ ಎಸ್‌ಸಿ ಎಸ್‌ಟಿ ಸ್ಕೀಂನಲ್ಲಿ ಎರಡು ವರ್ಷಗಳಾದರೂ ಹಣವನ್ನು ಏಕೆ ಬಿಡುಗಡೆ ಮಾಡಿಲ್ಲವೆಂದು ನನಗೆ ಅರ್ಥವಾಗುತ್ತಿಲ್ಲ. ದಯಮಾಡಿ ೧೯೮೮-೮೯ ಮತ್ತು ೧೯೮೯-೯೦ರ ಸಾಲಿನ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಇಂದಿರಾ ಆವಾಜ್ ಯೋಜನೆಯಲ್ಲಿ ಗ್ರೂಪ್ ಮನೆಗಳನ್ನು ಕಟ್ಟುವುದಕ್ಕೆ ಲ್ಯಾಂಡ್ ಆರ್ಮಿಯವರಿಗೆ ಕೊಟ್ಟಿದ್ದೀರಿ. ಆ ಕಾಮಗಾರಿ ನಮ್ಮಲ್ಲಿ ಬಹಳ ಕಳಪೆಯಾಗಿದೆ. ಬಡವರ ಮನೆಗಳು ತಲೆಯಮೇಲೆ ಬಿದ್ದುಹೋಗುವ ಪರಿಸ್ಥಿತಿ ಇದೆ. ನಮ್ಮ ಜಿಲ್ಲಾ ಪರಿಷತ್ತಿನಲ್ಲಿ ಸಾಕಷ್ಟು ಚರ್ಚೆಯಾಗಿ ಲ್ಯಾಂಡ್ ಆರ್ಮಿ ಏಜನ್ಸಿಯನ್ನು ನೀವು ಕ್ಯಾನ್ಸಲ್ ಮಾಡಬೇಕೆಂದು ಒತ್ತಾಯವನ್ನು ಹೇರಿ ಜಿಲ್ಲಾ ಪರಿಷತ್ತಿನಿಂದ ಸರ್ಕಾರಕ್ಕೆ ರಿಪೋರ್ಟ್ ಬಂದಿದೆ. ಅದಕ್ಕೆ ಕಾರಣವಾದರೂ ಇಷ್ಟೆ. ಮಲೆನಾಡಿಗೆ ಈ ಮನೆಗಳು ಒಗ್ಗುವುದಿಲ್ಲ. ಮನೆಯ ಸೂರು ಎರಡು ಇಂಚು ಗೋಡೆಯಿಂದ ದೂರ ಇದೆ. ಆ ಸೂರಿನ ನೀರೆಲ್ಲ ಗೋಡೆ ಮೇಲೆ ಬಿದ್ದು ಗೋಡೆ ಕುಸಿಯುವ ಪರಿಸ್ಥಿತಿಯಲ್ಲಿದೆ. ಫೌಂಡೇಷನ್ ಅಂತೂ ಕೇಳುವ ಹಾಗೆ ಇಲ್ಲ. ಆ ಮನೆಯನ್ನು ಬೇಕಾದರೆ ಲಿಫ್ಟ್ ಮಾಡಿ ಬೆಂಗಳೂರಿಗೆ ತಂದು ವಿಧಾನಸೌಧದ ಮುಂದೆ ಇರಿಸಬಹುದು. ರಿಪಬ್ಲಿಕ್ ಡೇನಲ್ಲಿ ಒಂದೊಂದು ಪ್ರದೇಶವನ್ನು ಪ್ರದರ್ಶನ ಮಾಡುವ ಹಾಗೆ ನಮ್ಮ ಗ್ರೂಪ್ ಹೌಸ್ ಮನೆಗಳನ್ನು ಎತ್ತಿಕೊಂಡು ಬಂದು ವಿಧಾನಸೌಧದ ಮುಂದೆ

೬-೦೦ ಪಿ.ಎಂ.

ಇಡಬಹುದು. ಈ ತರಹ ಕಳಪೆ ಕಾಮಗಾರಿಯಾಗಿದೆ. ದಯಮಾಡಿ ಈ ಏಜೆನ್ಸಿಗೆ ಗ್ರೂಪ್ ಹೌಸಿಂಗ್ ಮನೆಗಳನ್ನು ಕಟ್ಟುವುದಕ್ಕೆ ಕೊಡಬೇಡಿ, ಅವರ ಬದಲು ಫಲಾನುಭವಿಗಳಿಗೆ ಕೊಟ್ಟು ಅವರಿಗೆ ಕೊಡಬೇಕಾದ ಸಾಮಗ್ರಿಗಳನ್ನು ಕೊಟ್ಟರೆ ಅವರೇ ಉತ್ತಮವಾದ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯತೆ ಇದೆ.

ಇನ್ನು ರಸ್ತೆಗಳ ಬಗ್ಗೆ ಹೇಳಬೇಕಾಗಿದೆ. ಸಾವಿರಾರು ಕಿಲೋಮೀಟರ್ ರಸ್ತೆಯನ್ನು ಟಿ.ಡಿ.ಬಿ.ಯಿಂದ ಜಿಲ್ಲಾ ಪರಿಷತ್ತಿಗೆ ವರ್ಗಾಯಿಸಿ ಕೊಡಲಾಗಿದೆ. ಅವರ ಇಂಪ್ರೂವ್‌ಮೆಂಟ್‌ಗಾಗಲಿ, ಮೈನ್‌ಟೈನೆನ್ಸ್‌ಗಾಗಲಿ ಗ್ರಾಂಟ್ ಏನೂ ಕೊಟ್ಟಿಲ್ಲ. ಹೀಗಾದರೆ ಜಿಲ್ಲಾ ಪರಿಷತ್ತುಗಳು ಹೇಗೆ ರಸ್ತೆಗಳನ್ನು ಮೈನ್‌ಟೈನ್ ಮಾಡುವುದು? ಹಿಂದೆ ಟಿ.ಡಿ.ಬಿ.ಯವರು ಹಾಕಿದ್ದ ಜಲ್ಲಿ, ಮಣ್ಣು ಈಗ ತೊಳೆದುಹೋಗಿದೆ.

ಶ್ರೀ ಎಂ.ವೈ. ಘೋರ್ಪಡೆ.—ಇಂದಿರಾ ಆವಾಜ್ ಮನೆಗಳ ಬಗ್ಗೆ ಹೇಳಿದ್ದೀರಲ್ಲಾ, ಮನೆಗಳೇ ಸರಿಯಾಗಿಲ್ಲವೋ? ಲ್ಯಾಂಡ್ ಆರ್ಮಿಯವರ ಅದಕ್ಷತೆಯಿಂದ ಈ ರೀತಿ ಆಗಿದೆಯೋ? ಬೇರೆ ಯಾವ ಕಾರಣದಿಂದ ಆಗಿದೆಯೋ ಅದನ್ನು ಹೇಳಿ.

ಶ್ರೀಮತಿ ಮೋಟಮ್ಮ.—ಲ್ಯಾಂಡ್ ಆರ್ಮಿಯವರ ಅದಕ್ಷತೆಯಿಂದಲೂ ಆಗಿದೆ. ಅವರು ಮಲೆನಾಡಿಗೆ ಒಗ್ಗುವ ಮನೆಗಳನ್ನು ಕಟ್ಟುತ್ತಿಲ್ಲ.

ಶ್ರೀ ಎಂ.ವೈ. ಘೋರ್ಪಡೆ.—ಡಿಸೈನ್ ಬದಲಾವಣೆ ಮಾಡಿದರೆ ಆಗಬಹುದಲ್ಲಾ, ತಾವು, ಅವರು ಕಟ್ಟಿರುವ ಮನೆಗಳು ಅಲ್ಲಿಗೆ ಸರಿಹೋಗುತ್ತಿಲ್ಲವೆಂದು ಹೇಳಿದ್ದೀರಿ.

ಶ್ರೀಮತಿ ಮೋಟಮ್ಮ.—ಅವರು ಕಟ್ಟಿರುವ ಮನೆಗಳು ಅಲ್ಲಿನವರಿಗೆ ಒಗ್ಗುವುದಿಲ್ಲ. ಅದರ ಬದಲು ನೇರವಾಗಿ ಫಲಾನುಭವಿಗಳಿಗೆ ಮನೆ ಕಟ್ಟಿಕೊಳ್ಳಲು ಬೇಕಾದ ಕಬ್ಬಿಣದ ಸಾಮಾನು, ಬಾಗಿಲಾಗಲಿ, ಕಿಟಕಿಯಾಗಲಿ ಅವರಿಗೇ ಕೊಟ್ಟರೆ ಅವರೇ ಉತ್ತಮವಾದ ಮನೆಗಳನ್ನು ಕನ್‌ಸ್ಟ್ರಕ್ಟ್ ಮಾಡಿಕೊಳ್ಳುತ್ತಾರೆಂಬುದು ನನ್ನ ಸಲಹೆ. ಆಮೇಲೆ ಡಿಸೈನನ್ನೂ ಚೇಂಜ್ ಮಾಡಬೇಕಾಗಿದೆ. ಅದರ ಸೂರು ೨ ಅಡಿಯಾದರೂ ದೂರ ಇರಬೇಕು. ಮಳೆಗಾಲದಲ್ಲಿ ಜೋರಾಗಿ ಏನಾದರೂ ಮಳೆ ಬಂದರೆ

ನೀರು ಬಂದಾಗ, ಆ ನೀರು ಗೋಡೆಗೆ ತಗುಲಬಾರದು. ಆಮೇಲೆ ಷೀಟ್ಸ್‌ಗಳನ್ನು ಏನು ಹಾಕಿದ್ದಾರೆ ಆ ಷೀಟಿನೊಳಗೆ ನೀರು ಸೋರುತ್ತದೆ. ಇದು ಆಗಬಾರದು. ನಾನು ರಸ್ತೆಗಳ ಬಗ್ಗೆ ಹೇಳುತ್ತಿದ್ದೆ, ರಸ್ತೆಗಳಿಗೆ ನೀವು ಮೈನ್‌ಟೆನೆನ್ಸ್ ಗ್ರ್ಯಾಂಟ್ಸ್ ಕೊಡದಿದ್ದುದರಿಂದ ಆ ರಸ್ತೆಗಳು ಈಗಾಗಲೇ ಹಾಳಾಗಿವೆ. ಜಲ್ಲಿಗಳೆಲ್ಲಾ ಮೇಲುಗಡೆ ಎದ್ದುಬಿಟ್ಟಿವೆ. ಆ ಜಲ್ಲಿಯನ್ನು ಮಂಕರಿಯಲ್ಲಿ ತುಂಬಿ ಹೊರಗೆ ಹಾಕಬಹುದು. ಆದ್ದರಿಂದ ರಸ್ತೆಗಳ ಮೈನ್‌ಟೆನೆನ್ಸ್‌ಗೆ ಹೆಚ್ಚಿನ ಹಣ ಕೊಡಬೇಕು. ಆಮೇಲೆ ಕೆಲವು ಇಲಾಖೆಗಳ ಕಟ್ಟಡಗಳನ್ನು ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಮಾಡಿದ್ದೀರಿ. ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನಲ್ಲಿರುವ ಅಗ್ರಿಕಲ್ಚರಲ್ ಅಸಿಸ್ಟೆಂಟ್ಸ್‌ಗೆ ಕೊಟ್ಟಿರುವ ಕ್ವಾರ್ಟರ್ಸ್ ಮತ್ತು ಹೆಲ್ತ್ ಡಿಪಾರ್ಟ್‌ಮೆಂಟ್‌ನವರಿಗೆ ಕೆಲವು ಕ್ವಾರ್ಟರ್ಸ್ ಅನ್ನು ಏನು ಕೊಟ್ಟಿದೆ ಅವುಗಳಲ್ಲಿ ಒಂದೂ ರಿಫೇರಿಯಾಗಿಲ್ಲ. ಒಂದಕ್ಕೂ ಸುಣ್ಣ-ಬಣ್ಣ ಹೊಡೆದಿಲ್ಲ. ಈಗ ಅವೂ ಮಳೆಗಾಲದಲ್ಲಿ ಕುಸಿದು ಹೋಗುವ ಪರಿಸ್ಥಿತಿಯಲ್ಲಿವೆ. ದಯಮಾಡಿ ಆ ಕಟ್ಟಡಗಳು ಏನು ಇವೆ ಅವುಗಳ ರಿಪೇರಿಗಾಗಿ ಸರಿಯಾದ ಹಣವನ್ನು ಕೊಟ್ಟು ಅವುಗಳನ್ನು ರಿಪೇರಿ ಮಾಡಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನೊಂದು ಮುಖ್ಯವಾದ ಸಂಗತಿ ಏನೆಂದರೆ, ತಾವು ಮನಸ್ಸು ಮಾಡಿ, ಇವತ್ತು ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮತ್ತು ಹೈದರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಎಂದು ಏನು ಮಾಡಿದ್ದೀರಿ, ಅದೇ ತರಹ ನಮ್ಮ ಮಲೆನಾಡಿಗೂ ಒಂದು ಮಲೆನಾಡು ಅಭಿವೃದ್ಧಿ ಮಂಡಲಿ ಎಂದು ಮಾಡಿ ಅದಕ್ಕೆ ಸ್ವಲ್ಪ ಹೆಚ್ಚಿಗೆ ಗ್ರ್ಯಾಂಟ್ ಕೊಟ್ಟರೆ, ಆಗ ರಸ್ತೆಗಳ ಕೆಲಸ, ಕುಡಿಯುವ ನೀರಿನ್ನು ಒದಗಿಸುವ ಕೆಲಸಗಳನ್ನು ವಿಶೇಷವಾಗಿ ಕನ್ಸಿಡರ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅಂತಹ ಕೆಲಸಗಳನ್ನು ಈ ಅಭಿವೃದ್ಧಿ ಮಂಡಲಿ ಮಾಡಿಕೊಂಡು ಹೋಗುತ್ತದೆ ಆದ್ದರಿಂದ ದಯಮಾಡಿ ತಮ್ಮ ಕಾಲದಲ್ಲಾದರೂ ಈ ಕೆಲಸವನ್ನು ಮಾಡುತ್ತೀರೆಂದು ನಂಬಿದ್ದೇನೆ. ಹಾಗೂ ಮಾಡಬೇಕೆಂದು ಈ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

ಇನ್ನು ವಿಶೇಷ ಘಟಕ ಯೋಜನೆಯಲ್ಲಿ ಕೆಲವು ಸೌಲಭ್ಯಗಳನ್ನು ಹರಿಜನರಿಗೆ ಕೊಡುತ್ತಾರೆ. ಅವರಲ್ಲೂ ಮುಖ್ಯವಾಗಿ ವಿಶೇಷ ಘಟಕ ಯೋಜನೆಯಲ್ಲಿ ರೋಡ್ಸ್ ಗ್ರ್ಯಾಂಟ್ಸ್ ಎಂದು ಇದೆ. ಟ್ರೈಬಲ್ ಗ್ರ್ಯಾಂಟ್ಸ್ ಎಂದು ಇದೆ. ಅದು ಸರಿಯಾಗಿ ಉಪಯೋಗವಾಗುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ನನ್ನ ತಾಲ್ಲೂಕಿನಲ್ಲಿ ಬಿ.ಹೊಸಹಳ್ಳಿ ಎಂಬ ಊರು ಇದೆ. ಆ ಊರಿನಲ್ಲಿರುವ ಹರಿಜನರ ಕೇರಿಗೆ ಹರಿಜನರ ವಾಡ ಯೋಜನೆಯಲ್ಲಿ ೧೯೮೫-೮೬ರಲ್ಲಿ ರಸ್ತೆಯಾಗಿದೆ. ಆದರೆ ನಿಜವಾಗಿಯೂ ಆ ಹರಿಜನ ಕೇರಿಗೆ ರಸ್ತೆಯಾಗಿಲ್ಲ. ಆ ಗ್ರಾಮದ ಒಳಗಡೆ ರಸ್ತೆಗೆ ಟಾರ್ ಕೂಡ ಮಾಡಿದ್ದಾರೆ. ಅವರೆ ಇದುವರೆವಿಗೂ ಎಸ್. ಸಿ. ಪಿ. ಯಲ್ಲಿ ಹರಿಜನರ ಕೇರಿಗೆ ಇಡೀ ನಮ್ಮ ಜಿಲ್ಲೆಯಲ್ಲಿ ಒಂದೇ ಒಂದು ರಸ್ತೆಯಾಗಿಲ್ಲ, ಟಾರೂ ಆಗಿಲ್ಲ. ಈ ರೀತಿ ಯಾರಾದರೂ ಹರಿಜನರ ಹೆಸರಿನಲ್ಲಿ ಮಾಡಿದರೆ, ಹರಿಜನರ ಹೆಸರಿನಲ್ಲಿ ಹಗಲು ದರೋಡೆ ಆದ ಹಾಗೆ ಆಗುತ್ತದೆ. ದಯಮಾಡಿ ಈ ತರಹ ಆಗದ ಹಾಗೆ ತಾವು ನೋಡಿಕೊಳ್ಳಬೇಕು. ಈ ಒಂದು ದುರುಪಯೋಗ ಏನು ಆಗಿದೆ ಅಂದರೆ ಮೂಡಿಗೆರೆ ತಾಲ್ಲೂಕು ಬಿ. ಹೊಸಹಳ್ಳಿ ಗ್ರಾಮದಲ್ಲಿ ಹರಿಜನರ ಕೇರಿಯಲ್ಲಿ ಆಗುವ ರಸ್ತೆಯನ್ನು ಊರಿನ ಒಳಗಡೆ ಮಾಡುವುದಕ್ಕೆ ಸಂಬಂಧಪಟ್ಟವರು ಯಾರು ? ಹೇಗೆ ಈ ರಸ್ತೆಯ ಅಮೌಂಟ್ ಡೈವರ್ಟ್ ಆಯಿತು ಎಂಬುದನ್ನು ಕಂಡು ಹಿಡಿದು ಅವರಿಗೆ ತಕ್ಕ ಶಿಕ್ಷೆ ಕೊಡುತ್ತೀರೆಂದು ನಂಬಿದ್ದೇನೆ, ಮತ್ತು ಒತ್ತಾಯ ಮಾಡುತ್ತಿದ್ದೇನೆ.

ರೋಜ್‌ಗಾರ್ ಹಣದಲ್ಲೂ ಮಂಡಲ್ ಪಂಚಾಯ್ತಿಯಲ್ಲಿ ಸಾಕಷ್ಟು ದುರುಪಯೋಗವಾಗುತ್ತಿದೆ. ಈ ರೋಜ್‌ಗಾರ್ ಹಣವನ್ನು ಖರ್ಚು ಮಾಡಬೇಕಾದರೂ ಕೆಲಸದ ಪಟ್ಟಿಯನ್ನೇನೋ ಮಾಡಿಕೊಳ್ಳುತ್ತಾರೆ. ಆದರೆ ಕಂಟ್ರಾಕ್ಟ್‌ದಾರರು ಯಾರು ? ಪರೋಕ್ಷವಾಗಿ ಮಂಡಲ್ ಪಂಚಾಯ್ತಿಯ ಪ್ರಧಾನರು ಇಲ್ಲ ಮಂಡಲ್ ಪಂಚಾಯ್ತಿಯ ಸದಸ್ಯರೇ ಇರುತ್ತಾರೆ. ಇದರಿಂದ ೫ ಸಾವಿರ ರೂಪಾಯಿಗಳ ಒಂದು ಕಾಮಗಾರಿ ಎಂದು ಹೇಳಿಬಿಟ್ಟು ಅಲ್ಲಿಯ ೨ ಸಾವಿರ ರೂಪಾಯಿಗಳ ಕಾಮಗಾರಿಯನ್ನು ಮಾಡಿ ಬಿಲ್ಲು ಮಾಡಿಕೊಳ್ಳುತ್ತಾರೆ. ಇದರ ಹಾವಳಿಯನ್ನು ತಪ್ಪಿಸಬೇಕು. ಮತ್ತು ರೋಜ್‌ಗಾರ್ ಹಣದಲ್ಲಿ ೧೫ ಪರ್ಸೆಂಟ್ ಹರಿಜನರ ಅಭಿವೃದ್ಧಿಗಾಗಿ ಖರ್ಚು ಮಾಡಬೇಕೆಂದು ಇದೆ. ಅದು ನಿಜವಾಗಿಯೂ ಅವರಿಗೆ ಸರಿಯಾಗಿ ತಲುಪುತ್ತಿಲ್ಲ. ತಾವು ಇದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಪ್ರತಿ ಮಂಡಲದಲ್ಲೂ ೨೦ ಪರ್ಸೆಂಟ್ ಹಣವನ್ನು ಹರಿಜನರಿಗಾಗಿ ಖರ್ಚು ಮಾಡಬೇಕೆಂದು ಇದೆ, ಆದರೆ ಮನಸೋ ಇಚ್ಛೆ ಖರ್ಚು ಮಾಡುತ್ತಿದ್ದಾರೆ. ನಾನು ಎಲ್ಲೋ ಒಂದು ಕಡೆ ಹೋದಾಗ ಹರಿಜನರ ಒಂದು ಗುಂಪಿಗೆ ವಾದ್ಯದ ಸೆಟ್ಟನ್ನು ಕೊಡಿಸಿದ್ದಾರೆ, ಅದನ್ನು

ನೋಡಿದೆ. ಅದು ೨೦ ಪರ್ಸೆಂಟಿನ ಅಮೌಂಟ್. ಆ ಹಣವನ್ನು ನಿಜವಾಗಿಯೂ ಸರಿಯಾಗಿ ಅವರ ಅಸೆಟ್‌ಗಾಗಿ ಖರ್ಚು ಮಾಡಬೇಕೆ ವಿನಃ ಅವರಿಗೆ ಅಸೆಟ್ ಆಗುವ ಕೆಲಸಕ್ಕಾಗಿ ಖರ್ಚು ಮಾಡಬೇಕೇ ವಿನಃ ಪಾತ್ರೆಯ ಸೆಟ್ಟನ್ನು ಕೊಡಿಸುವುದರಿಂದಾಗಲಿ, ಶಾಲು ಕೊಡಿಸುವುದರಿಂದಾಗಲಿ, ಇದರಿಂದ ನಿಜವಾಗಿಯೂ ಹರಿಜನರ ಅಭಿವೃದ್ಧಿಯಾಗುವುದಕ್ಕೆ ಸಾಧ್ಯತೆ ಇದೆಯೇ ? ನನ್ನ ಕಳಕಳಿಯ ಮನವಿ ಏನೆಂದರೆ, ಸರ್ಕಾರ ಈವೊಂದು ಆದೇಶವನ್ನು ಹೊರಡಿಸಬೇಕು. ಇಂಥಿಂಥ ಹರಿಜನರ, ಗಿರಿಜನರ ಡೆವಲಪ್‌ಮೆಂಟ್ ಕೆಲಸಗಳಿಗೆ ಶೇಕಡ ೨೫ರಷ್ಟು ಹಣವನ್ನು ಖರ್ಚು ಮಾಡಬೇಕೆಂದು ಏನೊಂದು ಗೈಡ್‌ಲೈನ್ಸ್ ಇದೆ, ಆ ಪ್ರಕಾರ ಹಣವನ್ನು ಖರ್ಚುಮಾಡಬೇಕೆಂದು ಸುತ್ತೋಲೆಗಳನ್ನು ಕಳುಹಿಸಿದರೆ ಬಹಳ ರೀತಿಯಲ್ಲಿ ಅವರಿಗೆ ಸಹಾಯವಾಗುತ್ತದೆ, ಅದರಿಂದ ಉತ್ತಮವಾದ ಕೆಲಸವಾಗುತ್ತದೆಂದು ನನ್ನ ಒಂದು ಮನವಿ. ಜಿಲ್ಲಾಪರಿಷತ್ ಆಕ್ಟ್‌ನಲ್ಲಿ ಮಂಡಲಪಂಚಾಯತಿ ಪ್ರಧಾನರಾಗಲೀ ಕಾರ್ಯದರ್ಶಿಯವರಾಗಲಿ ಏನಾದರೂ ತಪ್ಪು ಮಾಡಿದರೆ. ದುರ್ವ್ಯವಹಾರ ಮಾಡಿದರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಆ ಆಕ್ಟ್‌ಗೆ ತಿದ್ದುಪಡಿಯನ್ನು ತರುವುದಾದರೆ, ಯಾರೇ ಆಗಲಿ ಅಧಿಕಾರವನ್ನು ದುರುಪಯೋಗ ಮಾಡಿಕೊಂಡರೆ, ಮಂಡಲಪಂಚಾಯತಿ ಪ್ರಧಾನರು ಮತ್ತು ಕಾರ್ಯದರ್ಶಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಕಾನೂನು ಮಾಡಲೇಬೇಕು. ಜಿಲ್ಲಾಪರಿಷತ್‌ಗಳಿಗೆ ಏನು ಇವತ್ತು ಇಲಾಖೆಗಳನ್ನು ವರ್ಗಾವಣೆ ಮಾಡಿದ್ದೀರಿ ಅದು ಯಾವುದೇ ಇಲಾಖೆಯಾಗಲೀ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಈಗ ಏನಾಗಿದೆ ಅಂದರೆ, ಅಲ್ಲಿ ಬಿಗ್ ಕನ್‌ಫ್ಯೂಸನ್ ಆಗಿದೆ. ಎಜುಕೇಶನ್ ಡಿಪಾರ್ಟ್‌ಮೆಂಟಾಗಲೀ, ಹೆಲ್ತ್ ಡಿಪಾರ್ಟ್‌ಮೆಂಟ್ ಆಗಲಿ ಸರ್ಕಾರದಿಂದ ಯಾವ ಇಲಾಖೆ ವರ್ಗಾವಣೆಯಾಗಿದೆ, ಸರ್ಕಾರದಿಂದ ವರ್ಗಾವಣೆ ಮಾಡಿದಂತಹ ನೌಕರರುಗಳನ್ನು ಅಲ್ಲಿ ಡ್ಯೂಟಿಯ ಮೇಲೆ ತೆಗೆದುಕೊಳ್ಳದೆ ಅವರು ಮತ್ತೊಂದು ಕಡೆ ವರ್ಗಾವಣೆ ಮಾಡಿ ಫಿಲ್‌ಅಪ್ ಮಾಡಿದ್ದಾರೆ. ಹಾಗಾದರೆ ಇಲ್ಲಿಂದ ವರ್ಗಾವಣೆಯಾದವರು ಎಲ್ಲಿಗೆ ಹೋಗಬೇಕು ? ಇವತ್ತಿನ ದಿವಸ ಅವರು ಅಂತರ ಪಿಶಾಚಿಗಳಾಗಿ ಅಲೆಯುತ್ತಿದ್ದಾರೆ. ಮಾಡಿಫಿಕೇಶನ್ ಆರ್ಡರ್ ಇನ್ನು ಆಗಿಲ್ಲ. ಜಿಲ್ಲೆಯಿಂದ ನಗರಕ್ಕೆ ಅವರು ಅಲೆದಾಡುತ್ತಿದ್ದಾರೆ. ಇದಕ್ಕೆ ಅವಕಾಶವಾಗದ ಹಾಗೆ ವರ್ಗಾವಣೆ ಮಾಡುವ ಅಧಿಕಾರವನ್ನು ಏನಿದ್ದರೂ ಸರ್ಕಾರ ಇಟ್ಟುಕೊಳ್ಳಬೇಕೆಂದು ನನ್ನ ಒತ್ತಾಯ. ಇನ್ನು ಜಿಲ್ಲಾಪರಿಷತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳು ಏನಿವೆ ಅವುಗಳನ್ನು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಇಂತಿಷ್ಟು ಎಂದು ರಿಸರ್ವೇಶನ್ ಇಡಬೇಕು. ಮಾನ್ಯ ವೆಂಕಟೇಶ್‌ರವರು ಮಾತನಾಡುತ್ತಾ, ಉಪಾಧ್ಯಕ್ಷರುಗಳ ಸ್ಥಾನಗಳನ್ನು ಮಾತ್ರ ಇವರಿಗೆ ಕೊಡಬೇಕೆಂದು ಹೇಳಿದರು. ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇಂತಿಷ್ಟು ಪರ್ಸೆಂಟೇಜ್ ಹರಿಜನ ಗಿರಿಜನರಿಗೆ ಜಿಲ್ಲಾಪರಿಷತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷ ಸ್ಥಾನಗಳನ್ನು ಮತ್ತು ಮಂಡಲಪಂಚಾಯಿತಿ ಪ್ರಧಾನರು ಮತ್ತು ಉಪಪ್ರಧಾನರುಗಳ ಸ್ಥಾನಗಳನ್ನು ರಿಸರ್ವ್ ಮಾಡದಿದ್ದರೆ ಅವರು ಆ ಹುದ್ದೆಗಳನ್ನು ಪಡೆಯುವುದು ಈ ಕಾಲಕ್ಕೆ ಸಾಧ್ಯವಿಲ್ಲ. ಹರಿಜನರು ಎಲ್ಲ ಜನರ ಮಧ್ಯೆ ಕಾಂಪೀಟ್ ಮಾಡಿ ಜಿಲ್ಲಾಪರಿಷತ್‌ನ ಅಧ್ಯಕ್ಷರಾಗುವುದಕ್ಕೆ ಸಾಧ್ಯವಿಲ್ಲ. ಅಲ್ಲದೆ ಜಿಲ್ಲಾಪರಿಷತ್‌ಗಳಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು. ಈಗ ಕೊಡುತ್ತಿರುವ ಹಣದಲ್ಲಿ ಯಾವುದೇ ಕೆಲಸಗಳು ಆಗುವುದಿಲ್ಲ. ನಮ್ಮ ಜಿಲ್ಲೆಗೆ ೪೩ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಹಣದಲ್ಲಿ ೨೩ಕೋಟಿ ರೂಪಾಯಿ ನೌಕರರ ಸಂಬಳಕ್ಕೆ ಮತ್ತು ಮೇಂಟೆನೆನ್ಸ್‌ಗೆ ಖರ್ಚಾಗುತ್ತದೆ. ಇನ್ನು ಉಳಿದ ೨೦ಕೋಟಿ ರೂಪಾಯಿಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಯಾವ ಅಭಿವೃದ್ಧಿ ಕೆಲಸವನ್ನು ಮಾಡುವುದಕ್ಕೆ ಸಾಧ್ಯ ? ಆದ್ದರಿಂದ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಹೇಳುತ್ತೇನೆ. ಮತ್ತೆ ಮಧ್ಯಂತರ ಮಂಡಲಗಳನ್ನಾಗಿ ಕೆಲವು ಪುರಸಭೆಗಳನ್ನು ಮಾಡಿದ್ದಾರೆ. ೧೦ ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯಿರುವ ಪುರಸಭೆಗಳನ್ನು ಮಂಡಲಪಂಚಾಯಿತಿಗಳನ್ನಾಗಿ ಮಾಡಿದ್ದಾರೆ. ಅವುಗಳನ್ನು ಕೇಳಲೇಬೇಡಿ, ಅವು ಅನಾಥಶಿಶುಗಳಾಗಿವೆ. ಅವರಲ್ಲಿ ನೌಕರರುಗಳ ಸಂಖ್ಯೆ ಜಾಸ್ತಿ ಇದೆ. ನೀವು ಕೊಡುವ ಹಣದಲ್ಲಿ ಅವರಿಗೆ ಸಂಬಳ ಕೊಡುವುದಕ್ಕೆ ಆಗುವುದಿಲ್ಲ. ಅಲ್ಲಿಯೂ ಸಹ ಕುಡಿಯುವ ನೀರಿನ ಸಮಸ್ಯೆಯಿದೆ. ಮೊನ್ನೆ ನಾನು ನಿಯಮ ೩೩೪ರಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ನಮ್ಮ ಮೂಡಿಗೆರೆಯಲ್ಲಿಯೂ ಸಹ ಕುಡಿಯುವ ನೀರಿನ ಸಮಸ್ಯೆಯಿದೆ. ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಮ್ಮ ಜಿಲ್ಲಾಪರಿಷತ್‌ನಲ್ಲಿರತಕ್ಕ ಇನ್‌ಚಾರ್ಜ್ ಚೀಫ್ ಇಂಜಿನಿಯರ್ ಹೇಳಿದರು. ಅರ್ಬನ್‌ವಾಟರ್‌ಸಪ್ಲೈ ಸ್ಕೀಮ್‌ಗಳನ್ನು ಮಧ್ಯಂತರ ಮಂಡಲ ಪಂಚಾಯತಿಗಳಿಗೆ ವರ್ಗಾವಣೆ ಮಾಡಿದ್ದಾರೆ, ಅದಕ್ಕೆ ಬೇಕಾದ ಹಣಕಾಸನ್ನು ವರ್ಗಾವಣೆ ಮಾಡಿಲ್ಲ, ಕೇವಲ ಇಲಾಖೆಯನ್ನು ವರ್ಗಾವಣೆ ಮಾಡಿದ್ದಾರೆಯೇ ಹೊರತು ಅದಕ್ಕೆ ಸಪರೇಟಾಗಿ ಹಣಕಾಸನ್ನು ವರ್ಗಾವಣೆ ಮಾಡಿಲ್ಲವೆನ್ನುವ ಮಾತನ್ನು ಅವರು ಹೇಳಿದ್ದಾರೆ. ಕುಡಿಯುವ ನೀರಿನ ತೊಂದರೆ ಎಲ್ಲೆಲ್ಲಿ ಇದೆ, ಅಲ್ಲೆಲ್ಲ ಇರತಕ್ಕ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಹೆಚ್ಚು ಅವಕಾಶ ಮಾಡಿಕೊಡಬೇಕು.

ಈ ದೇಶದ ಅಭಿವೃದ್ಧಿಗೆ ಸಹಾಯಕವಾಗುವಂತಹ ಬಾಬುಗಳಿಗೆ ಹೆಚ್ಚಿನ ಹಣವನ್ನು ಕೊಟ್ಟರೆ ಅನುಕೂಲವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ ತಾವು ಹೆಚ್ಚಿನ ಹಣವನ್ನು ಮಂಡಲಪಂಚಾಯತಿ ಮತ್ತು ಮಧ್ಯಂತರ ಮಂಡಲಪಂಚಾಯತಿಗಳಿಗೆ ಕೊಟ್ಟು ಕೆಲಸಕಾರ್ಯಗಳನ್ನು ಮಾಡಲಿಕ್ಕೆ ಒಂದು ಹೊಸ ದಾರಿಯನ್ನು ಹುಡುಕಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಅರಣ್ಯ ಇಲಾಖೆಯ ಬಗ್ಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯದಲ್ಲಿ ಅರಣ್ಯ ಸಂಪತ್ತು ಇರುವ ಜಿಲ್ಲೆ ಅಂದರೆ ನಮ್ಮ ಜಿಲ್ಲೆ. ಅದರಲ್ಲಿಯೂ ಮಲೆನಾಡಿನಲ್ಲಿ ಅರಣ್ಯ ಸಂಪತ್ತು ಜಾಸ್ತಿ ಇದೆಯೆಂದರೆ ತಪ್ಪಾಗಲಾರದು. ಆದರೆ ಇವತ್ತು ಬಹುಪಾಲು ಅರಣ್ಯ ಲೂಟಿಯಾಗುತ್ತಿದೆ. ಅರಣ್ಯವನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ದಯಮಾಡಿ ಈ ಕೊಳ್ಳೆ ಮತ್ತು ಲೂಟಿಯನ್ನು ತಡೆಗಟ್ಟಬೇಕಾಗಿದೆ. ನಾನು ಗಮನ ಸೆಳೆಯುವ ಸೂಚನೆಯ ಮುಖಾಂತರ ಶ್ರೀಗಂಧ ಹೇಗೆ ಕಳ್ಳಸಾಗಾಣಿಕೆಯಾಗುತ್ತಿದೆ. ಎಂಬುದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದೆ. ಸರ್ಕಾರ ಉತ್ತರ ಕೊಟ್ಟಿದ್ದು ನೋಡಿದರೆ, ನಾನು ಪ್ರಶ್ನೆಯನ್ನು ಕೇಳಬಾರದಾಗಿತ್ತು, ಈ ವಿಷಯವನ್ನು ಪ್ರಸ್ತಾಪ ಮಾಡಬಾರದಾಗಿತ್ತು ಎನ್ನುವ ರೀತಿಯಲ್ಲಿ ಆ ಉತ್ತರ ಇತ್ತು. ನಮ್ಮಲ್ಲಿ ದಿವಸಕ್ಕೆ ಟನ್‌ಗಟ್ಟಲೆ ಸಾವಿರ ಕೆ. ಜಿ. ಗಟ್ಟಲೆ ಗಂಧ ಕೊಳ್ಳೆಯಾಗುತ್ತಿದ್ದರೆ, ಈ ಇಲಾಖೆಯವರು ಕೇವಲ ೫೧೧ ಕೆ. ಜಿ ಗಂಧವನ್ನು ಹಿಡಿದಿದ್ದಾರೆ ಎಂದು ತಾವೇ ಹೇಳಿಕೆಯನ್ನು ಕೊಟ್ಟಿರುತ್ತೀರಿ ಇದು ನಿಜವಾಗಿಯೂ ಒಂದು ರೀತಿಯಲ್ಲಿ ತಲೆತಗ್ಗಿಸುವ ವಿಚಾರ. ಇವರ ದಕ್ಷತೆಯ ಬಗ್ಗೆ ನಾವು ಪ್ರಶ್ನೆ ಮಾಡಬೇಕಾಗುತ್ತದೆ. ದಯಮಾಡಿ ಕಳ್ಳಸಾಗಾಣಿಕೆಯನ್ನು ಮುಟ್ಟುಗೋಲು ಹಾಕುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕಾಗುತ್ತದೆ. ಇವತ್ತು ಏನು ಕಳ್ಳಸಾಗಾಣಿಕೆಯಾಗುತ್ತಿದೆ ಇದರ ಬಗ್ಗೆ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ ಎಂದು ಹೇಳಿದರೆ ತಪ್ಪಾಗಲಾರದು. ಪ್ರತಿ ದಿನ ಜೀಪು, ಲಾರಿ, ಅದರಲ್ಲೂ ನಮ್ಮ ಆಸ್ಪತ್ರೆಯ ಆಂಬ್ಯುಲೆನ್ಸ್‌ನಲ್ಲಿ ಗಂಧವನ್ನು ಕಳ್ಳಸಾಗಣಿಕೆ ಮಾಡಿದ್ದಾರೆ ಎನ್ನುವ ವಿಚಾರ ನಾವೆಲ್ಲರೂ ತಲೆತಗ್ಗಿಸುವ ವಿಚಾರವಾಗಿದೆ. ಇಂಥದ್ದಕ್ಕೆ ಆಸ್ಪದ ಕೊಡದೆ. ಇಲಾಖೆಯವರು ಒಂದು ಸ್ಪೆಷಲ್ ಸ್ಕ್ವಾಡ್ ಏರ್ಪಾಡು ಮಾಡಿ, ಅವರಿಗೆ ಬೇಕಾದ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡಬೇಕು ಎಂದು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಜೊತೆಗೆ ಕಳ್ಳಸಾಗಾಣಿಕೆ ಏಕೆ ಹೆಚ್ಚು ಆಗಿದೆ ಎಂದರೆ ಇವತ್ತು ಒಬ್ಬನನ್ನು ಅರೆಸ್ಟ್ ಮಾಡಿದರೆ ಇನ್ನೊಂದು ಗಂಟೆಯೊಳಗಾಗಿ ಅವನು ಬಿಡುಗಡೆಯಾಗುವ ಅವಕಾಶ ಈ ಒಂದು ಫಾರೆಸ್ಟ್ ಆಕ್ಟ್‌ನಲ್ಲಿದೆ ಮತ್ತೆ ಫಾರೆಸ್ಟ್ ಆಕ್ಟ್‌ಗೆ ಮತ್ತು ರೂಲ್ಸ್‌ಗೆ ತಿದ್ದುಪಡಿಯನ್ನು ತರದಿದ್ದರೆ ನಿಜವಾಗಿಯೂ ಕಳ್ಳಸಾಗಾಣಿಕೆಯನ್ನು ಮುಟ್ಟುಗೋಲು ಹಾಕುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈಗ ಫಾರೆಸ್ಟ್ ಆಕ್ಟ್‌ನ ಸೆಕ್ಷನ್ ೧೦೪(ಡಿ) ಯನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಅದಕ್ಕೆ ಬಾಂಬೆ ಹೈಕೋರ್ಟಿನಲ್ಲಿ ಏನು ಸ್ಟೇ ಮಾಡಿದ್ದಾರೆ, ಆ ಸ್ಟೇಯನ್ನು ಕ್ಯಾನ್ಸಲ್ ಮಾಡಿಸಿ ನಾನ್ ಬೈಲಬಲ್ ಆಕ್ಟನ್ನು ತಂದರೆ ಮಾತ್ರ ಈ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು ಸಾಧ್ಯವಾಗುತ್ತದೆ. ಅದಕ್ಕಾಗಿ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಅಥವಾ ಇಲಾಖೆಯವರಲ್ಲಿ ಕೇಳಿಕೊಳ್ಳುವುದು ಇಷ್ಟೆ. ಅದಷ್ಟು ಬೇಗ ಈ ಆಕ್ಟ್‌ಗೆ ತಿದ್ದುಪಡಿಯನ್ನು ತಂದು ಕಳ್ಳಸಾಗಾಣಿಕೆಯನ್ನು ಮುಟ್ಟುಗೋಲು ಹಾಕಬೇಕಾಗುತ್ತದೆ. ಕಳ್ಳಸಾಗಾಣಿಕೆ ಮಾಡುತ್ತಿದ್ದ ಮಾಲನ್ನು ಇಲಾಖೆಯವರು ಹಿಡಿದಿದ್ದಾರೆ. ಹೀಗೆ ಹಿಡಿದಂತಹ ಮರವಾಗಲಿ, ಬೀಟೆಯಾಗಲಿ, ಗಂಧವಾಗಲಿ ಅಥವಾ ಕಾರುಗಳಾಗಲಿ ಅಲ್ಲೇ ಕೊಳೆಯುತ್ತಿವೆ. ಅಂತಹದ್ದನ್ನು ಅದಷ್ಟು ಬೇಗ ಹರಾಜು ಹಾಕಿದರೆ ಸರ್ಕಾರದ ಬೊಕ್ಕಸಕ್ಕೆ ದುಡ್ಡು ಬರುತ್ತದೆ. ಇಂತಹ ಕೆಲಸವನ್ನು ಇಲಾಖೆಯವರು ಮಾಡಬೇಕಾಗುತ್ತದೆ.

ಆಮೇಲೆ ಅರಣ್ಯ ಒತ್ತುವರಿ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ಇದು ಒಂದು ದೊಡ್ಡ ದುರಂತ ಅಥವಾ ಕೊಳ್ಳೆ ಅಂದರೆ ತಪ್ಪಾಗಲಾರದು. ಬರೀ ಸಿ. ಮತ್ತು ಡಿ ಲ್ಯಾಂಡ್ ಏನು ಇದೆ ಅದನ್ನು ಮಾತ್ರ ಒತ್ತುವರಿ ಮಾಡುತ್ತಿಲ್ಲ, ರಿಸರ್ವ ಫಾರೆಸ್ಟಿಗೂ ನುಗ್ಗಿದ್ದಾರೆ. ಒಬ್ಬೊಬ್ಬರು ೨೦೦ ಎಕರೆಯಷ್ಟು ಜಮೀನನ್ನು ಒತ್ತುವರಿ ಮಾಡಿದ್ದಾರೆಂದರೆ ನಿಜವಾಗಿಯೂ ಬಹಳ ಆಶ್ಚರ್ಯವಾಗುವಂತಹ ಸಂಗತಿ

(ಅಧ್ಯಕ್ಷರು ತಮ್ಮ ಸ್ಥಾನವನ್ನು ಅಲಂಕರಿಸಿದರು)

ಯಾಗಿದೆ. ಈ ಒತ್ತುವರಿ ಬಗ್ಗೆ ಬಿಗಿ ಕ್ರಮ ತೆಗೆದುಕೊಂಡು ಒಂದು ಕಟಾಫ್ ಡೇಟನ್ನು ಹೇಳದಿದ್ದರೆ ಖಂಡಿತವಾಗಿ ನಾಳೆ ಬಡವರು ಸತ್ತರೆ ಹೂಳುವುದಕ್ಕೂ ಒಂದು ಕುಂಟೆ ಇಲ್ಲದ ಹಾಗೆ ಒತ್ತುವರಿಯಾಗಿ ಕಾಫಿ ತೋಟವಾಗುತ್ತದೆ. ದಯಮಾಡಿ ಈ ಫಾರೆಸ್ಟ್ ಎನ್‌ಕ್ರೋಚ್‌ಮೆಂಟ್ ಏನು ಆಗಿದೆ ಏನಾದರೂ ಮಾಡಿ ಅದಕ್ಕೆ ತಡೆ ಹಾಕಬೇಕೆಂದು ಮಾನ್ಯ ಅಧ್ಯಕ್ಷರಾದ ತಮ್ಮ ಮೂಲಕ ಸಂಬಂಧಪಟ್ಟ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ಬಡವರು ಒಂದು ಗುಂಟೆ, ಎರಡು ಗುಂಟೆ ಏನು ಒತ್ತುವರಿ ಮಾಡಿದ್ದಾರೆ. ಅವನ್ನು ಆ ಬಡವರಿಗೆ ರೆಗ್ಯುಲರೈಸ್ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಆಮೇಲೆ ರೆವಿನ್ಯೂ ಇಲಾಖೆಯಿಂದ ಸುಮಾರು ೫೨ ಸಾವಿರ ಎಕರೆ ಸಿ ಮತ್ತು ಡಿ. ಲ್ಯಾಂಡ್ ಎಂದು ಕ್ಲಾಸಿಫೈ ಮಾಡಿ ಅರಣ್ಯ ಇಲಾಖೆಗೆ ಕೊಟ್ಟಿದ್ದಾರೆ. ಇವತ್ತು ಬಡವರಿಗೆ ಒಂದು ಜಾಗವನ್ನು ಅವರು ಮನೆಕಟ್ಟಿಕೊಳ್ಳುವುದಕ್ಕಾಗಲಿ ಕೊಡುವುದಕ್ಕೆ ನಮ್ಮಲ್ಲಿ ಭೂಮಿ ಇಲ್ಲ ಎಂದು ಜಿಲ್ಲಾಧಿಕಾರಿಗಳು ಹೇಳುತ್ತಿದ್ದಾರೆ. ಆದ್ದರಿಂದ ಏನು ಸಿ. ಮತ್ತು ಡಿ, ಲ್ಯಾಂಡ್ ೫೨ ಸಾವಿರ ಎಕರೆ ಅರಣ್ಯ ಇಲಾಖೆಗೆ ಕೊಟ್ಟಿದ್ದಾರೆ. ಅದರಲ್ಲಿ ಅರ್ಧಕ್ಕರ್ಧ ರೆವಿನ್ಯೂ ಇಲಾಖೆಗೆ ವಾಪಸ್ ಕೊಟ್ಟಿದ್ದೇ ಆದರೆ ಬಡವರಿಗೆ ಸೈಟನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ.

ಇನ್ನು ಸಾಮಾಜಿಕ ಅರಣ್ಯ ಅಭಿವೃದ್ಧಿ ಕಾರ್ಯಕ್ರಮ ಹೆಚ್ಚು ಆಗಬೇಕು. ಆದರೆ ಇದರಲ್ಲೂ ಹೆಚ್ಚು ದುರುಪಯೋಗವಾಗುತ್ತಿದೆ. ಈ ದುರುಪಯೋಗವನ್ನು ನಿಲ್ಲಿಸಬೇಕಾಗುತ್ತದೆ. ಏಕೆಂದರೆ ಇದರಲ್ಲಿ ದುರುಪಯೋಗ ಆಗುವುದು ನಮಗೆ ಗೊತ್ತೇ ಆಗುವುದಿಲ್ಲ. ೫ ಲಕ್ಷ ಗಿಡಗಳನ್ನು ಹಾಕಿದ್ದೇವೆಂದು ಹೇಳುತ್ತಾರೆ. ನಮಗೆ ಆ ಗಿಡಗಳನ್ನು ಎಣಿಕೆ ಮಾಡುವುದಕ್ಕೆ ಆಗುವುದಿಲ್ಲ. ೫ ಸಾವಿರ ಗಿಡಗಳನ್ನು ಹಾಕಿದರೂ ೧೦ ಸಾವಿರ ಗಿಡಗಳನ್ನು ಹಾಕಿದ್ದಾರೋ ಗೊತ್ತೆ ಆಗುವುದಿಲ್ಲ. ಇದರಲ್ಲಿ ದುಡ್ಡನ್ನು ಕೊಳ್ಳೆ ಹೊಡೆಯುತ್ತಿದ್ದಾರೆಂದರೆ ತಪ್ಪಾಗಲಾರದು. ಮುಖ್ಯವಾಗಿ ಇದನ್ನು ತಪ್ಪಿಸಬೇಕಾಗುತ್ತದೆ. ಮತ್ತೆ ಮಲಯ ಅರಣ್ಯ ಅಧಿಕಾರಿಗಳು ಏನು ಇದ್ದಾರೆ, ಅವರಿಗೆ ಬಹಳ ಮುಖ್ಯವಾಗಿ ಜೀಪನ್ನು ಕೊಡಬೇಕಾಗುತ್ತದೆ. ಏಕೆಂದರೆ, ಗುಡ್ಡಗಾಡು ಪ್ರದೇಶದಲ್ಲಿ ಓಡಾಡಬೇಕಾಗುತ್ತದೆ, ಸ್ಮಗ್ಲಿಂಗ್ ನಡೆಯುತ್ತಿದೆ. ಎಂಬ ಕ್ಲೂ ಸಿಕ್ಕಿದರೆ ತಕ್ಷಣ ಹೋಗಬೇಕಾದರೆ ವೆಹಿಕಲ್ಸ್‌ನ ಅಗತ್ಯ ಬಹಳ ಇದೆ. ಆಮೇಲೆ ವಹಿಕಲ್ ಕೊಟ್ಟ ಮಾತ್ರಕ್ಕೆ ಸ್ಮಗ್ಲಿಂಗನ್ನು ಹಿಡಿಯುತ್ತಾರೆ, ಅವರಿಗೆ ಎಲ್ಲ ರೀತಿಯ ರಕ್ಷಣೆ ಕೊಟ್ಟಹಾಗೆ ಆಗುವುದಿಲ್ಲ. ನಮ್ಮ ತಾಲ್ಲೂಕಿನ ಬಿ. ಹೊಸಹಳ್ಳಿ ಎಂಬಲ್ಲಿ ಗಂಧವನ್ನು ರಾತ್ರಿ ಕಳ್ಳಸಾಗಾಣಿಕೆ ಮಾಡುತ್ತಿದ್ದಾರೆಂಬ ಸುದ್ದಿ ಬಂದು, ಅಲ್ಲಿಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಹೋದಾಗ ಗನ್ ಶಾಟ್ ಆಯಿತು. ಆದರಿಂದ ಒಬ್ಬ ವ್ಯಕ್ತಿ ಸತ್ತು ಹೋದ ಅಲ್ಲಿದ್ದಂತಹ ಗಾರ್ಡ್‌ಗೆ ಮತ್ತು ಆರ್. ಎಫ್. ಒ. ಗೆ ಬೆದರಿಕೆ ಹಾಕಿದರು ಆ ಕಳ್ಳಸಾಗಾಣಿಕೆದಾರರು ನಿಮ್ಮನ್ನೂ ಕೊಲೆ ಮಾಡುತ್ತೇವೆ ಅಂತ. ಅದ್ದರಿಂದ ಅವರ ರಕ್ಷಣೆಗಾಗಿ ರೈಫಲ್‌ಗಳನ್ನು ಪ್ರೊವೈಡ್ ಮಾಡಬೇಕು. ಆ ಕೆಲಸವನ್ನು ತಾವು ಮಾಡಬೇಕು, ಹೊಸ ಅಕೌಂಟ್ ಕೋಡ್ ಇಲಾಖೆಯಲ್ಲಿ ಜಾರಿಗೆ ಕರಲಾಗಿದೆ. ಆದರೆ ಮೇಲಾಧಿಕಾರಿಗಳು ಅದನ್ನು ನಿಜವಾಗಿಯೂ ಅನುಕರಣೆ ಮಾಡುತ್ತಿಲ್ಲ. ಇದರಿಂದ ಇಲಾಖೆಯ ಹಲವಾರು ಕೆಲಸಗಳು ನಿಧಾನವಾಗುತ್ತಿವೆ. ಇದು ಏಕೆ ಎಂದು ಗೊತ್ತಾಗಲಿಲ್ಲ. ಈ ಅಕೌಂಟ್ಸ್ ಕೋಡನ್ನು ಮೇಲಾಧಿಕಾರಿಗಳು ಅನುಕರಣೆ ಮಾಡಬೇಕು. ಇಲಾಖೆಯಲ್ಲಿ ಯಾವುದೇ ಕೆಲಸವನ್ನು ಅಂದರೆ ಎಸ್ಟಿಮೆಂಟ್ ಸ್ಯಾಂಕ್ಷನ್ ಆಗಲಿ. ಒ. ಎ. ಪಿ ಯಾಗಲಿ ಮಾಡಲು ಅನುಕೂಲವಾಗುವಂತಹ ಅಕೌಂಟ್ಸ್ ಕೋಡನ್ನು ಅದಷ್ಟು ಜಾಗ್ರತೆ ಮಾಡಿಸಿಕೊಡಬೇಕು. ಮತ್ತೆ ಈ ಬೆಂಕಿ ನಮ್ಮ ಕಾಡನ್ನು ನುಂಗುತ್ತಿದೆ. ಕಾಡನ್ನು ನಾಶಮಾಡತಕ್ಕವರು ಶ್ರೀಗಂಧದ ಕಳ್ಳರು ಮತ್ತು ಮರಗಳ್ಳರು ಮಾತ್ರವಲ್ಲ. ಕಾಡನ್ನು ಬೆಂಕಿ ನುಂಗು ಹಾಕುತ್ತಿದೆ. ಕಾಡಿನಲ್ಲಿ ಎಲ್ಲಿ ಹೋದರು ಬೆಂಕಿ. ಬೇಸಿಗೆಯಲ್ಲಿ ಎಲ್ಲಿ ನೋಡಿದರೂ ಕಾಡಿನಲ್ಲಿ ಧಗಧಗಯೆಂದು ಬೆಂಕಿ ರಾತ್ರಿಯ ಹೊತ್ತು ಉರಿಯುತ್ತಿರುವುದು ನಮಗೆ ಕಾಣುತ್ತದೆ. ಬೆಂಕಿಯಿಂದ ಕಾಡನ್ನು ರಕ್ಷಣೆ ಮಾಡಿದರೆ ನಮ್ಮ ಅರಣ್ಯ ಸಂಪತ್ತು ಉಳಿಯುತ್ತದೆ. ದಯಮಾಡಿ ಈ ದಿಶೆಯಲ್ಲಿ ಹೆಚ್ಚಿನ ಶ್ರಮವನ್ನು ಇಲಾಖೆಯವರು ವಹಿಸಬೇಕಾಗುತ್ತದೆ. ಕಾಫಿ ಪ್ಲಾಂಟ್‌ಗಳಲ್ಲಿ ಇರತಕ್ಕ ಮರಗಳನ್ನು ಕಡಿಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಸಿಲ್ವರ್—ಇಂತಹ ಮರಗಳನ್ನು ಕಡಿಯುವುದಕ್ಕೆ ಕಾಫಿಪ್ಲಾಂಟರ್‌ಗಳಿಗೆ ನೇರವಾಗಿ ಅವಕಾಶ ಕೊಡಬೇಕು. ಏಕೆಂದರೆ, ಕಾಫಿ ತೋಟದಲ್ಲಿ ನೆರಳಿಗೋಸ್ಕರ ಸಿಲ್ವರ್ ಮರಗಳನ್ನು ಹಾಕಿಕೊಂಡಿರುತ್ತಾರೆ. ಆ ಮರಗಳು ತೀರಾ ದೊಡ್ಡದಾದ ಮೇಲೆ ಏನೂ ಪ್ರಯೋಜನಕ್ಕೆ ಬರುವುದಿಲ್ಲ. ಅದ್ದರಿಂದ ಕಾಫಿತೋಟಗಳಲ್ಲಿರತಕ್ಕ ಸಿಲ್ವರ್ ಮರಗಳನ್ನು ಕಡಿಯುವುದಕ್ಕೆ ಮಾಲೀಕರಿಗೆ ನೇರವಾಗಿ ಅವಕಾಶ ಕೂಡಬೇಕು. ಮುಖ್ಯವಾಗಿ ಫಾರೆಸ್ಟ್‌ನಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಏನಿದ್ದಾರೆ, ಅವರನ್ನು ಪ್ರೋತ್ಸಾಹಿಸಬೇಕಾದರೆ ಅವರಲ್ಲಿ ಯಾರು ಒಳ್ಳೆಯ ಕೆಲಸ ಮಾಡುತ್ತಾರೆ ಅಂತಹವರಿಗೆ ಅವಾರ್ಡ್ ಕೊಟ್ಟು ಅವರು ಇಲಾಖೆಯಲ್ಲಿ ಸಿನಿಯರ್ ಆಗಿ ಕೆಲಸಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಫಾರೆಸ್ಟ್ ಡಿಪಾರ್ಟ್‌ಮೆಂಟ್ ಅಂದರೆ ಕೊಳ್ಳೆ ಹೊಡೆಯುವ ಡಿಪಾರ್ಟ್‌ಮೆಂಟ್ ಕರಪ್ಟ್ ಡಿಪಾರ್ಟ್‌ಮೆಂಟ್ ಎನ್ನುವ ಹೆಸರು ಏನಿದೆ ಅದನ್ನು ಅಳಿಸಬೇಕಾದರೆ ಅಧಿಕಾರಿಗಳು ಒಳ್ಳೆಯ ರೀತಿಯಲ್ಲಿ ಕೆಲಸಮಾಡುವಂತೆ ಅವರಿಗೆ ಪ್ರೋತ್ಸಾಹ ಕೊಡಬೇಕಾಗುತ್ತದೆ. ಆ ಕೆಲಸವನ್ನು ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತೋಟಗಾರಿಕೆ ಇಲಾಖೆಯಲ್ಲಿ ನಮ್ಮಲ್ಲಿಗೆ ಒಂದು ಕಾಲೇಜನ್ನು ಕೇಳಿದ್ದೇವೆ. ಅದಕ್ಕೆ ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸುಮಾಡಿ ಕೊಡುವುದಕ್ಕೆ ಒಪ್ಪಿದ್ದಾರೆ, ನಮ್ಮಲ್ಲಿ ತೋಟಗಾರಿಕೆಯ ಇಲಾಖೆಯ ಒಂದು ಟ್ರೈನಿಂಗ್ ಸೆಂಟರ್ ಇದೆ. ಭಾರಿ ಅವ್ಯವಸ್ಥೆಯಲ್ಲಿ ಆ ಟ್ರೈನಿಂಗ್ ಸೆಂಟರ್ ನಡೆಯುತ್ತಿದೆ. ೩೫ ವಿದ್ಯಾರ್ಥಿಗಳು ಅಲ್ಲಿ ತರಬೇತಿಯನ್ನು ಪಡೆಯುತ್ತಿದ್ದಾರೆ. ಅವರನ್ನು ಧನಗಳನ್ನು ಕೂಡಿಹಾಕುವ ದೊಡ್ಡಿಯಂತಿರುವ ಜಾಗದಲ್ಲಿ ಕೂಡಿ ಹಾಕಿದ್ದಾರೆ. ಅಲ್ಲಿ ಅಡಿಗೆ ಮನೆಯಿಲ್ಲ, ಸ್ನಾನದ ಮನೆಯಿಲ್ಲ, ಶೌಚಾಲಯ ಇಲ್ಲ. ಏಕೆಂದರೆ, ಅಲ್ಲಿರುವವರೆಲ್ಲ ಬಡವರ ಮಕ್ಕಳು. ಅದು ಶುರುವಾಗಿ ಐದು ವರ್ಷಗಳಾಗಿದೆ. ಮಾನ್ಯ ತೋಟಗಾರಿಕೆ ಸಚಿವರಾದ ಬಂಗಾರಪ್ಪನವರು ನಾನು ಹೇಳುವುದನ್ನು ಕೇಳುತ್ತಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ನಮ್ಮಲ್ಲಿ ಹಾರ್ಟಿಕಲ್ಚರಲ್ ಟ್ರೈನಿಂಗ್ ಸೆಂಟರ್ ಏನು ಇದೆ, ಅದರಲ್ಲಿ ನಡೆಯುತ್ತಿರುವ ದುರ್ವ್ಯವಹಾರವನ್ನು ನಾನು ಹೇಳುತ್ತಿದ್ದೇನೆ. ಅಲ್ಲಿ ೩೫ ಜನ ಹರಿಜನಗಿರಿಜನ ಮತ್ತು ಹಿಂದುಳಿದ ವರ್ಗಗಳವರ ಮಕ್ಕಳು ಟ್ರೈನಿಂಗ್ ಪಡೆಯುತ್ತಿದ್ದಾರೆ. ಅವರಿಗೆ ಸರಿಯಾದ ಕಟ್ಟಡದ ವ್ಯವಸ್ಥೆಯಿಲ್ಲ. ಅವರು ಅಲ್ಲಿ ಉಳಿದುಕೊಳ್ಳುವುದಕ್ಕೆ ಸರಿಯಾದ ಮನೆಯಿಲ್ಲ, ಅಡಿಗೆ ಮಾಡಿಕೊಳ್ಳುವುದಕ್ಕೆ ಮನೆಯಿಲ್ಲ. ಅವರು ಅಲ್ಲಿಯೆ ಅಡಿಗೆಯನ್ನು ಮಾಡಿಕೊಳ್ಳುತ್ತಾರೆ. ಆದ್ದರಿಂದ ದಯಮಾಡಿ ಟ್ರೈನಿಂಗ್ ಪಡೆಯುತ್ತಿರುವವರಿಗೆ ಸರಿಯಾದ ವ್ಯವಸ್ಥೆಯನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ಸಾಮಾನ್ಯ ಆಡಳಿತದ ಬಗ್ಗೆ ನಾಲ್ಕು ಮಾತುಗಳನ್ನು ಹೇಳುತ್ತೇನೆ. ಆಡಳಿತ ವ್ಯವಸ್ಥೆ ಏನಿದೆ ಅದರಲ್ಲಿ ನೌಕರರು ಮತ್ತು ಸಾಮಾನ್ಯ ಜನರು ಇವರಿಬ್ಬರ ಮಧ್ಯ ದೊಡ್ಡ ಗ್ಯಾಪ್ ಇದೆ. ಜನಸಾಮಾನ್ಯರು ಅಧಿಕಾರಿಗಳ ಬಳಿ ಹೋಗುವುದಿಲ್ಲ, ಸಣ್ಣ ಸಣ್ಣ ಕೆಲಸಗಳಿಗೂ ಪ್ರಜಾಪ್ರತಿನಿಧಿಗಳ ಹತ್ತಿರ ಬರುತ್ತಾರೆ. ಬೆಳಗ್ಗೆ ಆರು ಗಂಟೆಗೆ ಯಾರಾದರೂ ಬಂದಿರುತ್ತಾರೆ, ಒಂದಲ್ಲ ನಾನಾ ಸಮಸ್ಯೆಗಳನ್ನು ತೆಗೆದುಕೊಂಡು ಬರುತ್ತಾರೆ. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಸೌದೆ ಹಿಡಿದಿದ್ದಾರೆ. ತಹಶೀಲ್ದಾರ್ ನನಗೆ ಆರ್ ಆರ್ ಕೊಟ್ಟಿಲ್ಲ, ನನಗೆ ದರಖಾಸ್ತು ಜಮೀನು ಮಂಜೂರು ಮಾಡಿಲ್ಲ, ವೃದ್ಧಾಪ್ಯ ವೇತನ ಬಂದಿಲ್ಲ. ಪೋಲೀಸ್ ಸ್ಟೇಶನ್‌ನಲ್ಲಿ ಹಾಗೆ ಮಾಡಿದ್ದಾರೆ, ಹೀಗೆ ಮಾಡಿದ್ದಾರೆ ಜನರು ನಮ್ಮಲ್ಲಿಗೆ ಬರುತ್ತಾರೆ. ಇದಕ್ಕೆ ಕಾರಣ ಏನೆಂದರೆ, ಅಧಿಕಾರಿಗಳನ್ನು ನೇರವಾಗಿ ಅಪ್ರೋಚ್ ಮಾಡುವ ಮನೋಭಾವನೆ ಅವರಲ್ಲಿ ಇಲ್ಲ. ಏತಕ್ಕೆ ಹೀಗೆ ಆಗುತ್ತಿದೆ ಅಂದರೆ, ಅಧಿಕಾರಿಗಳು ಜನರನ್ನು ಮನುಷ್ಯರ ತರಹ ಟ್ರೀಟ್ ಮಾಡುವುದಿಲ್ಲ. ಶ್ರೀಸಾಮಾನ್ಯರನ್ನು ಅಧಿಕಾರಿಗಳು ಕೇರ್ ಮಾಡುವುದಿಲ್ಲ. ಇವರು ಹೋಗಿ ನಮಸ್ಕಾರ ಹೊಡೆದರೆ, ಪೇಪರ್ ಮೇಲೆ ಬರೆಯುತ್ತಲೋ, ಮತ್ತಿನ್ನೇನೋ ಯೋಚನೆ ಮಾಡುತ್ತಾ ಅವರ ಮನಸ್ಸು ಎಲ್ಲಿಯೋ ಇರುತ್ತದೆ. ಅದಕ್ಕೋಸ್ಕರ ಜನಸಾಮಾನ್ಯರು ಅಧಿಕಾರಿಗಳ ಹತ್ತಿರ ಹೋಗುವುದು ಬೇಡ, ಶಾಸಕರುಗಳ ಹತ್ತಿರ ಹೋಗಿ ಶಿಫಾರಸ್ಸು ಮಾಡಿಸಿಕೊಳ್ಳೋಣ ಎನ್ನುವ ಮನೋಭಾವ ಅವರಲ್ಲಿ ಕ್ರಿಯೇಟ್ ಆಗಿದೆ. ಈ ಮನೋಭಾವನೆಯನ್ನು ಹೋಗಲಾಡಿಸಬೇಕಾದರೆ ಅಧಿಕಾರಿಗಳು ಮಾನವೀಯತೆಯಿಂದ ಬಡ ಜನರ ಬಗ್ಗೆ ಕೆಲಸ ಮಾಡಬೇಕಾಗುತ್ತದೆ.

ಇನ್ನು ಪೋಲಿಸ್ ಇಲಾಖೆಯ ಬಗ್ಗೆ ಹೇಳುವುದಾದರೆ, ಪೋಲೀಸ್ ಇಲಾಖೆಯಿಂದ ಬಡ ಜನರಿಗೆ ನ್ಯಾಯ ಸಿಗುವುದಿಲ್ಲ. ಪೋಲೀಸ್ ಇಲಾಖೆಗೆ ಮಹಿಳೆಯರ ಬಗ್ಗೆ ಗೌರವವಿಲ್ಲ. ಪೋಲೀಸ್ ಸ್ಟೇಶನ್‌ಗೆ ಹೋದರೆ ಮಹಿಳೆಯರಿಗೆ ಬಾಯಿಗೆ ಬಂದ ಹಾಗೆ ಬೈದು ಕಳುಹಿಸುತ್ತಾರೆ. ಹರಿಜರ ಗಿರಿಜನರ ಮೇಲೆ ಹಲವಾರು ದೌರ್ಜನ್ಯಗಳು ಆದವು. ಹರಿಜನ ಗಿರಿಜನರಿಗೆ ರಕ್ಷಣೆ ಕೊಡಿ ಎಂದು ಹೇಳಿದರೂ ಸಹ ರಕ್ಷಣೆ ಕೊಡಲಿಲ್ಲ. ನಿಜ ಹೇಳಬೇಕಾದಲ್ಲಿ ದೌರ್ಜನ್ಯ ಮಾಡಿದವರು ಯಾರಿದ್ದರು ಅವರನ್ನು ಹಿಡಿದುಕೊಂಡು ಹೋದರು. ಮತ್ತೆ ಅವರು ಕಾನೂನಿನ ರಕ್ಷಣೆ ಪಡೆದುಕೊಂಡು ಪೋಲೀಸರೇ ಸರಂಡರ್ ಆದರು. ಇಷ್ಟು ಆಸಕ್ತಿ ವಹಿಸಿದರೆ ಇವರು ಹರಿಜನರಿಗೆ ಯಾವ ರೀತಿಯ ರಕ್ಷಣೆಯನ್ನು ಕೊಡಬಲ್ಲರು. ಇದನ್ನು ತಾವು ಯೋಚನೆ ಮಾಡಬೇಕು. ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಟಕ ಅವ್ಯಾಹತವಾಗಿ ನಡೆಯುತ್ತಾ ಇದೆ. ನಿಮಗೆ ಇದು ತಮಾಷೆ ಎನಿಸಬಹುದು. ಪ್ರತಿ ಮನೆ ಮನೆಯಲ್ಲಿ ಮಟಕ ನಡೆಯುತ್ತಿದೆ. ಆದರೂ ಪೋಲೀಸ್‌ನವರು ಏತಕ್ಕೆ ಕೈಕಟ್ಟಿ ಕುಳಿತುಕೊಂಡಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅವರೂ ಸಹ ಇವರಲ್ಲಿ ಶಾಮೀಲಾಗಿದ್ದಾರೆಯೋ ಏನೋ ನನಗೆ ಅರ್ಥವಾಗುತ್ತಿಲ್ಲ. ಮಟಕ ಹಾವಳಿಯಿಂದ ಹೆಣ್ಣುಮಕ್ಕಳು ಜೀವನ ಮಾಡುವುದಕ್ಕೆ ಆಗುವುದಿಲ್ಲ. ಮಟಕ ಮತ್ತು ಕುಡಿತದ ಹಾವಳಿಯಿಂದ ಬಡವರನ್ನು ಪಾರು ಮಾಡಬೇಕು, ನಮ್ಮ ಜಿಲ್ಲೆಯಲ್ಲಿ ಪೋಲೀಸರು ಮಟಕವನ್ನು ನಿಲ್ಲಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಡಿಪಿಎಆರ್. ಬಗ್ಗೆ ಹೇಳುವುದಾದರೆ, ಇದು ಡಾ|| ಬಾಬಸಾಹೇಬ್ ಅಂಬೇಡ್ಕರ್‌ರವರ ನೂರನೇ ಜನ್ಮಶತಾಬ್ದಿ ವರ್ಷ. ಇವತ್ತು ಈ ದೇಶದಲ್ಲಿ ಹರಿಜನ ಗಿರಿಜನರಿಗೆ ಏನು ನ್ಯಾಯ ಸಿಗಬೇಕಾಗಿತ್ತೋ ಅದು ಸಿಕ್ಕಿಲ್ಲ. ಇಂತಹ ಒಂದು ಸಂದರ್ಭದಲ್ಲಿ ನಾನು ತಮ್ಮ ಮೂಲಕ ಈ ಸರ್ಕಾರಕ್ಕೆ ಕಳಕಳಿಯಿಂದ ಮಾಡಿಕೊಳ್ಳುವ ಮನವಿ ಏನೆಂದರೆ, ಈ ಜನಕ್ಕೆ ಏನೇನು ಅನ್ಯಾಯವಾಗಿದೆ, ಅದನ್ನು ಈ ವರ್ಷದಲ್ಲಿ ದೊರಕಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಹರಿಜನರಿಗೆ ಉದ್ಯೋಗ ಕೊಡುವುದೇ ಆಗಲಿ, ಪ್ರಮೋಷನ್ ಕೊಡುವುದಾಗಲಿ, ಯಾವುದೇ ಒಂದು ರಕ್ಷಣೆ ಕೊಡುವುದಾಗಲಿ ಈ ವರ್ಷದಲ್ಲಿ ಈ ಎಲ್ಲ ಕೆಲಸಗಳು ಆಗಬೇಕಾಗುತ್ತದೆ. ಹರಿಜನರ ಹೆಸರಿನಲ್ಲಿ ನಾವೆಲ್ಲರೂ ಮತಗಳನ್ನು ತೆಗೆದುಕೊಂಡು, ಅವರೇ ದೇವರು ಎಂದು ಹೇಳಿಕೊಂಡು ಕುಳಿತಿದ್ದೇವೆ. ಆದರೆ ಇವರ ಬಗ್ಗೆ ನಾವು ಎಷ್ಟು ಆಲೋಚನೆ ಮಾಡುತ್ತಿದ್ದೇವೆ ಎಂದು ಚಿಂತಿಸಬೇಕು. ಹರಿಜನರ ಬಗ್ಗೆಯೇ ಮಾತನಾಡಿದರೆ ಕೆಲವರ ಮನಸ್ಸಿಗೆ ಬೇಸರವಾಗಬಹುದು. ಆದರೆ ನಾವು ನಿಜವಾಗಿಯೂ ಚಿಂತೆ ಮಾಡಬೇಕಾಗುತ್ತದೆ ಈ ಜನ ಎಷ್ಟು ತುಳಿತಕ್ಕೆ ಒಳಗಾಗಿದ್ದಾರೆ. ಸಂಕಷ್ಟಗಳಿಗೆ ಒಳಗಾಗಿದ್ದಾರೆ, ಅವರಿಗೆ ನ್ಯಾಯ ದೊರಕಿಸಿಕೊಡುತ್ತೇವೆ ಎಂದು ನಂಬಿಸಿ ಓಟು ತೆಗೆದುಕೊಂಡು ಬಂದಿದ್ದೇವೆ. ಅವರಿಗೆ ನಿಜವಾದ ರಕ್ಷಣೆ ಕೊಡುವುದರಲ್ಲಿ ನಾವು ಕಂಕಣಬದ್ಧರಾಗಿದ್ದೇವೆ ಎಂದು ಸರ್ಕಾರ ಯೋಚನೆ ಮಾಡಬೇಕು. ಆದ್ದರಿಂದ ಇವತ್ತು ಸೆಶಲ್ ರೈಟ್ಸ್ ಇನ್ ಕೆ.ಪಿ.ಎಸ್.ಸಿ. ಎಂಪ್ಲಾಯ್‌ಮೆಂಟ್ ಅಂತ ಏನು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದನ್ನು ಮಾಡಿಮುಗಿಸಬೇಕಾಗುತ್ತದೆ. ಆದರೆ ಯಾವ ಜಾಗದಲ್ಲೂ ಸಹ ಈ ಕೆಲಸ ನಡೆದಿಲ್ಲ. ಆದಷ್ಟು ಬೇಗ ಎಲ್ಲ ಖಾಲಿ ಇರುವ ಜಾಗಗಳಲ್ಲಿ ಇವರಿಗೆ ಇರುವ ರಿಸರ್ವೇಶನ್ ಕ್ವೋಟಾವನ್ನು ಭರ್ತಿಮಾಡಬೇಕಾಗಿದೆ. ಇವತ್ತು ಹೈಪವರ್ ಕಮಿಟಿ ಎಂದು ಇದೆ. ಎಸ್‌ಸಿ.ಎಸ್‌ಟಿ. ರಿಸರ್ವೇಷನ್ ಮಾಡುವ ಬಗ್ಗೆ ಯಾಗಲಿ, ಪ್ರಮೋಶನ್ ಕೊಡುವ ಬಗ್ಗೆ ಯಾಗಲೀ, ಎಸ್‌ಸಿ. ಎಸ್‌ಟಿ. ಯಾವರು ಫಸ್ಟ್‌ಕ್ಲಾಸಿನಲ್ಲಿ ತೇರ್ಗಡೆಯಾಗಿದ್ದರೆ ಅವರಿಗೆ ಫಸ್ಟ್ ಅಪಾಯಿಂಟ್‌ಮೆಂಟ್ ನೇರವಾಗಿ ಕೊಡುತ್ತೇವೆ ಎಂದು ಹಿಂದಿನ ಸರ್ಕಾರದವರು ಹೇಳಿದರು ಮತ್ತು ನಾವೂ ಸಹಾ ಹೇಳಿದ್ದೇವೆ. ಆದರೆ ಇಂತಹ ಹುದ್ದೆಗಳನ್ನು ಇದುವರೆಗೆ ಒಬ್ಬರಿಗೂ ಕೂಡ ಕೊಟ್ಟಿಲ್ಲ. ಬಿಎ. ಬಿಎಸ್ಸಿ. ಎಂಬಿಬಿಎಸ್ ಮತ್ತು ಇಂಜಿನಿಯರಿಂಗ್ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಯಾದ ಯಾರಿಗೂ ಕೂಡ ಇವತ್ತು ನೇರವಾದ ಉದ್ಯೋಗ ಕೊಟ್ಟಿಲ್ಲ. ದಯವಿಟ್ಟು ಈ ವರ್ಷವೇ ಇದನ್ನು ಮಾಡಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ. ಇದರಲ್ಲಿ ಕೆಲವು ಜಾಗಗಳನ್ನು ಬಿಟ್ಟುಬಿಟ್ಟಿದ್ದಾರೆ. ಈ ಎಂ.ಬಿ.ಎ. ಕೋರ್ಸ್ ಮತ್ತು ಮಾಸ್ ಕಮ್ಯುನಿಕೇಶನ್ ಕೋರ್ಸ್‌ಗಳು ಇದರಲ್ಲಿ ಸೇರುವುದಿಲ್ಲವೆಂದು ಕೈಬಿಟ್ಟಿದ್ದಾರೆ ಇದರಲ್ಲೂ ಸಹ ಎಸ್‌ಸಿ.ಎಸ್‌ಟಿ. ಮಕ್ಕಳು ಎಂಬಿಎ ಮತ್ತು ಮಾಸ್ ಕಮ್ಯುನಿಕೇಶನ್ ಡಿಗ್ರಿಗಳನ್ನು ತೆಗೆದುಕೊಂಡಿದ್ದಾರೆ ಅಂತಹವರು ಸಹ ಫಸ್ಟ್ ಕ್ಲಾಸ್ ಇದ್ದರೆ ನೇರವಾಗಿ ಅವರಿಗೆ ಉದ್ಯೋಗ ಕೊಡಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತಾ, ಈ ಎಲ್ಲ ಬೇಡಿಕೆಗಳ ಬಗ್ಗೆ ನಾಲ್ಕು ಮಾತುಗಳನ್ನಾಡುವುದಕ್ಕೆ ತಾವು ದೊಡ್ಡ ಮನಸ್ಸು ಮಾಡಿ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸು ತ್ತೇನೆ.

ಅಧ್ಯಕ್ಷರು. — ಶ್ರೀ ಸಿಂಧ್ಯಾರವರು... ..

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮುಂಜಾನೆ ಎಂಟು ಗಂಟೆಗೆ ಬಂದಿದ್ದೇವೆ, ಅವರು ನಾಳೆ ಪ್ರಾರಂಭ ಮಾಡಲಿ.

ಅಧ್ಯಕ್ಷರು.—ನನ್ನ ಕಷ್ಟ ಏನು ಎಂದರೆ, ಒಟ್ಟು ೫೧ ಜನ ಸದಸ್ಯರು ಮಾತನಾಡುವವರು ಇದ್ದಾರೆ. ಈಗ ೧೦–೧೧ ಜನ ಮಾತ್ರ ಮಾತನಾಡಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ. — ಸಿಂಧ್ಯಾರವರು ಬೇಗ ಬಿಡುವವರಲ್ಲ. ಸುಮ್ಮನೆ ಕೊನೆ ಕೊನೆಗೆ ಏಕೆ ಅವರು ನಾಳೆ ಪ್ರಾರಂಭ ಮಾಡಲಿ.

ಅಧ್ಯಕ್ಷರು.—ಯೋಚಿಸಬೇಡಿ, ಅವರು ಬೇಗ ಬಿಡುತ್ತಾರೆ. ಅವರು ಮುಗಿಸಿದ ತಕ್ಷಣ ಅಡ್ಜರ್ನ್ ಮಾಡೋಣ.

† ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಏನು ತಮ್ಮ ಬೇಡಿಕೆಗಳನ್ನು ಮಂಡಿಸಿದ್ದಾರೆ, ಆ ಬೇಡಿಕೆಗಳ ಬಗ್ಗೆ ಪ್ರಾರಂಭದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತಿನ ದಿವಸ ಈ ಸರ್ಕಾರ ಇದೆಯೋ ಇಲ್ಲವೋ ಎನ್ನುವ ಭಾವನೆ ಜನರಲ್ಲಿ ಬರುವುದಕ್ಕೆ ಪ್ರಾರಂಭವಾಗಿದೆ. ಏತಕ್ಕೆಂದರೆ......

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಆರ್. ಎಸ್. ನಾಯಕ್.—ದೇವರು ಇದ್ದಾನೋ ಇಲ್ಲವೋ ಎಂದಹಾಗೆ. ಆದರೆ ಸರ್ಕಾರ ಇದೆ ಎಂದೇ ಅರ್ಥ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಪ್ರಾರಂಭದಲ್ಲಿ ಈ ಸದನಕ್ಕೆ ತಮ್ಮ ಚೊಚ್ಚಲು ಭಾಷಣ ಮಾಡತಕ್ಕಂಥ ಸಂದರ್ಭದಲ್ಲಿ, ಹದಿನೆಂಟು ವರ್ಷಗಳ ನಂತರ ನಾನು ಈ ಸದನದ ಒಳಗಡೆ ಕಾಲಿಡುತ್ತಿದ್ದೇನೆ, ಈ ಸರ್ಕಾರದ ಬ್ಯೂರೋಕ್ರಸಿ ಎಷ್ಟೊಂದು ಪ್ರಮಾಣ ದಲ್ಲಿ ಭೂತದ ಹಾಗೆ ಬೆಳೆದುಬಿಟ್ಟಿದೆ, ಇದನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ, ಜನರು ನನಗೆ, ನನ್ನ ಪಕ್ಷಕ್ಕೆ ಓಟು ಕೊಟ್ಟಿದ್ದಾರೆ ಎಂಬ ಮಾತನ್ನು ಹೇಳಿದರು.

ಇವರು ಅಧಿಕಾರಕ್ಕೆ ಬಂದು ಸುಮಾರು ೭ ತಿಂಗಳಾಯಿತು. ಈ ೭ ತಿಂಗಳ ಕಾಲದಲ್ಲಿ ಫಲಿತಾಂಶ ಏನೋ ಕೈಗೆ ಸಿಗುತ್ತದೆ ಎಂದು ನಾನಂತೂ ನಿರೀಕ್ಷಣೆ ಮಾಡುವುದಿಲ್ಲ. ನಾನು ಏನು ಭಾವನೆ ಮಾಡಿದ್ದೆ ಎಂದರೆ, ಹಿಂದೆ ನಾವೂ ವೀರೇಂದ್ರಪಾಟೀಲರೂ ಒಂದೇ ಪಕ್ಷದಲ್ಲಿದ್ದೆವು. ಅವರನ್ನು ಎತ್ತಿಕೊಂಡು ಮೆರೆದಾಡಿದ್ದೇವೆ. ೧೯೭೭ನೇ ಇಸವಿಯಲ್ಲಿ, ಚಿಕ್ಕಮಗಳೂರಿನಲ್ಲಿ, ಶಿವನಂಜಪ್ಪನವರು, ಏಕಾಂತಯ್ಯನವರು, ನಾವೆಲ್ಲಾ ಶ್ರೀಮತಿ ಇಂದಿರಾಗಾಂಧಿಯವರ ವಿರುದ್ಧ ಚುನಾವಣೆಗೆ ನಿಲ್ಲಿಸಿ ಇಡೀ ರಾಷ್ಟ್ರದಲ್ಲಿ ದೊಡ್ಡ ನಾಯಕರೆಂದು ಮೆರವಣಿಗೆ ಮಾಡಿದೆವು. ಮಾನ್ಯ ಷಫಿ ಅಹಮದ್‌ರವರು ಇರಲಿಲ್ಲ. ವೀರೇಂದ್ರಪಾಟೀಲರು ಇಡೀ ರಾಷ್ಟ್ರದಲ್ಲಿ ಒಬ್ಬ ದೊಡ್ಡ, ದಕ್ಷ ಆಡಳಿತಗಾರರು ಎಂದೂ ಸಹ ಪ್ರಚಾರ ಮಾಡಿದೆವು.....

ಶ್ರೀ ಆರ್. ಎಸ್. ನಾಯಕ್.—ವೀರೇಂದ್ರಪಾಟೀಲರು ಆ ಕಾಲದಲ್ಲಿ ದೊಡ್ಡವರೆಂದು ವರ್ಣಿಸಿ ದಿರಿ, ಹೊಗಳಿದಿರಿ. ನಂತರ ಮತ್ತೊಂದು ರಾಮಕೃಷ್ಣ ಹೆಗಡೆಯವರನ್ನೂ ಇದಕ್ಕೂ ಹೆಚ್ಚಿನ ರೀತಿಯಲ್ಲಿ ಹೊಗಳಿದಿರಿ. ವೀರೇಂದ್ರಪಾಟೀಲರು ನೀವು ಏನು ಹೇಳಿದಿರೋ ಅದೇ ಪ್ರಕಾರದಲ್ಲಿ ಇವತ್ತೂ ಇದ್ದಾರೆ. ನಮ್ಮ ನಾಯಕರಾಗಿ, ಒಳ್ಳೆಯ ಆದರ್ಶವಾಗಿದ್ದಾರೆ. ಮತ್ತೊಬ್ಬರು ಏನಾಗಿ ದ್ದಾರೆ ಎನ್ನುವುದನ್ನೂ ನೀವೇ ಹೇಳಬೇಕು....

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ನಾಯಕರು ಬಾಯಿ ಮಾತಿನಲ್ಲಾದರೂ ಇದನ್ನು ಹೇಳಬೇಕಾಗುತ್ತದೆ. ನಿಮ್ಮ ಪಕ್ಷದ ನಾಯಕರು, ಮುಖ್ಯಮಂತ್ರಿಗಳಾಗಿದ್ದಾರೆ, ಅವರನ್ನು ಕೊನೆಯ ಪಕ್ಷ ಬಾಯಲ್ಲಾದರೂ ಹೇಳಬೇಕು. ನಾನು ಏಕೆ ಇದನ್ನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಮಾನ್ಯ ವೀರೇಂದ್ರಪಾಟೀಲರು ಕಾಂಗ್ರೆಸ್ ಪಕ್ಷದ ಮುಖಂಡರಾಗಿ, ಈ ಸಭೆಯ ನಾಯಕರಾಗಿ, ಬಹಳ ದೊಡ್ಡ ಸಾಧನೆ ಮಾಡುತ್ತಾರೆಂದು, ಒಳ್ಳೆಯದು ಮಾಡುತ್ತಾರೆಂದು ನಾವು ನಿರೀಕ್ಷಣೆ ಮಾಡಿದ್ದೆವು. ಬಡವರ ಪರವಾಗಿ, ಹಿಂದುಳಿದವರ ಪರವಾಗಿ, ಅಲ್ಪ ಸಂಖ್ಯಾತರ ಪರವಾಗಿ ಏನೋ ದೊಡ್ಡ ಸಾಧನೆ ಯನ್ನು ಮಾಡುತ್ತಾರೆಂದು ನಿರೀಕ್ಷಣೆ ಮಾಡಿದ್ದೆವು. ಆ ದಿಕ್ಕಿನಲ್ಲಿ, ಈ ೭ ತಿಂಗಳಲ್ಲಿಏನಾದರೂ ಕಾಲನ್ನು ಇಟ್ಟಿದ್ದಾರೆಯೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಹೊರಟಿದ್ದೇನೆ. ಅವರು ಈಗ ಬ್ಯೂರೋಕ್ರಸಿ ಬಹಳ ಬೆಳೆದಿದೆ ಎಂದು ಹೇಳಿದರು. ಕಣ್ಣಲ್ಲಿ ನೀರು ಬರುವುದಿಲ್ಲ, ರಕ್ತ ಬರುತ್ತದೆ. ದಿನಗೂಲಿಯಲ್ಲಿ ೪ ರೂಪಾಯಿ, ೬ ರೂಪಾಯಿ ತೆಗೆದುಕೊಂಡು ಈ ಸರ್ಕಾರದಲ್ಲಿ ಕೆಲಸ ಮಾಡುತ್ತಾರೆ, ನನಗೆ ಬಹಳ ದುಃಖವಾಗುತ್ತದೆಂದು ಹೇಳಿದರು. ಈ ೭ತಿಂಗಳಲ್ಲಿ ದಿನಗೂಲಿ ನೌಕರರ ಬಗ್ಗೆ ಏನನ್ನೂ ಹೇಳಿಲ್ಲ. ನಮ್ಮ ಅರ್ಥಮಂತ್ರಿಗಳು ಬಹಳ ದೊಡ್ಡದಾಗಿ ಮಾಡಿದ್ದೇವೆಂದು ಹೇಳಿದರು. ಏಕೆ ದಿನಗೂಲಿ ನೌಕರರನ್ನು ಖಾಯಂಗೊಳಿಸುವುದಕ್ಕಾಗಿಲ್ಲ, ಇನ್ನೂ ಖಾಯಂಗೊಳಿಸುತ್ತೇವೆಂದು ಹೇಳುತ್ತಿದ್ದಾರೆ. ಯಾರು ದಿನಗೂಲಿ ನೌಕರರಿದ್ದಾರೆ, ಅವರು ತಮ್ಮ ಕಷ್ಟ, ಸಂಕಷ್ಟಗಳಿಂದ ಕಣ್ಣೀರಿನಲ್ಲಿ ಕೈ ತೊಳೆಯುವುದು ಇವತ್ತು ಹೋಗಿಲ್ಲ. ಬೃಹದಾಕಾರವಾಗಿ ಬೆಳೆದಿದೆ ಎಂದು ಹೇಳಿದಿರಿ, ಈ ಬ್ಯೂರೋ ಕ್ರಸಿಯನ್ನು ಕಟ್ ಮಾಡುವುದಕ್ಕೆ, ಚೆಕ್ ಮಾಡುವುದಕ್ಕೆ ಯಾವ ಕ್ರಮವನ್ನು ಮುಖ್ಯಮಂತ್ರಿಗಳು ತೆಗೆದುಕೊಂಡಿದ್ದಾರೆ ಎಂಬುದನ್ನು ನಾನು ತಿಳಿಯುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಇದನ್ನು ಹೇಳಬೇಕು. ಇವತ್ತು ಅವರ ಪರವಾಗಿ ಅಧಿಕಾರಿಗಳಿದ್ದಾರೆ, ಇದನ್ನು ಅವರಿಗೆ ತಿಳಿಸುತ್ತಾರೆಂದು ಮತ್ತು ಅವರಿಂದ ಉತ್ತರವನ್ನೂ ನಾನು ನಿರೀಕ್ಷಣೆ ಮಾಡುತ್ತೇನೆ. ಈ ಸರ್ಕಾರ ಬಡವರ ಹೆಸರಿನಲ್ಲಿ, ಹರಿಜನ ವರ್ಗದವರ ಹೆಸರಿನಲ್ಲಿ, ಹಿಂದುಳಿದವರ ಹೆಸರಿನಲ್ಲಿ, ಅಲ್ಪಸಂಖ್ಯಾತರ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿರುವುದು. ನೀವು ಆ ಸ್ಥಾನದಲ್ಲಿ ಕುಳಿತುಕೊಳ್ಳಬೇಕಾದರೆ. ಈ ವರ್ಗದ ಜನ ಬೆಂಬಲವನ್ನು ಕೊಟ್ಟಿದ್ದಾರೆ. ಮಾನ್ಯ ಶಿವ ಮೂರ್ತಿಯವರು ೨೦ ಅಂಶಗಳ ಕಾರ್ಯಕ್ರಮಕ್ಕೆ ಮಾನ್ಯ ಹೆಗಡೆಯವರ ಸರ್ಕಾರದಲ್ಲಿ ಒತ್ತನ್ನು ಕೊಡಲಿಲ್ಲ. ಅವರು ಹರಿಜನ ವಿರೋಧಿಗಳು ಎಂದು ಹೇಳಿದರು. ಈ ಸಂದರ್ಭದಲ್ಲಿ

ನಾನಾದರೂ ಮುಖ್ಯ ಮಂತ್ರಿಗಳನ್ನು ಕೇಳುವುದಕ್ಕೆ ಬಯಸುತ್ತೇನೆ ಮುಖ್ಯಮಂತ್ರಿಗಳ ಮುಖಂಡತ್ವದಲ್ಲಿರತಕ್ಕ ೨೦ ಅಂಶಗಳ ಕಾರ್ಯಕ್ರಮದ ಸಮಿತಿಯ ಸಭೆ ಆಗಿದೆಯೇ, ಆಗಿದ್ದರೆ ಎಷ್ಟು ಸಾರಿ ಆಗಿದೆ, ಎಲ್ಲಿ ಆಗಿದೆ, ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ಇವತ್ತು ಯಾರು ಈ ವರ್ಗದ ಜನರ ಪರವಾಗಿ ಮಾತನಾಡುವುದಕ್ಕೆ ಹೊರಟಿದ್ದಾರೆ, ಅವರು ಏಕೆ, ೨೦ ಅಂಶದ ಸಭೆಯನ್ನು ಮಾಡಿಲ್ಲ, ಏನು ತೊಂದರೆಯಾಯಿತು. ಏಕೆ ೭ ತಿಂಗಳ ಕಾಲ ತೆಪ್ಪಗೆ ಇದ್ದೀರಿ ? ಈ ವರ್ಗದ ಜನಗಳ ಪರವಾಗಿ ಮಾತನಾಡತಕ್ಕ ಜನ ನೀವು, ಏನು ಮಾಡಿದ್ದೀರಿ ?

೭.೩೦ ಪಿ. ಎಂ.

ಇದು ಒಂದಾದರೆ, ಎರಡನೆಯದಕ್ಕೆ ಬರುತ್ತೇನೆ. ಇವರು ಯಾವ ಡಿಪಾರ್ಟ್‌ಮೆಂಟ್ ರಿವ್ಯೂ ಮಾಡಿದ್ದಾರೆ ? ಮುಖ್ಯ ಮಂತ್ರಿಗಳಾಗಿರತಕ್ಕಂಥವರು ಮೂರು ತಿಂಗಳಿಗೆ ಒಂದು ಸಲ ರೆವಿನ್ಯೂ ಇಲಾಖೆ ಇರಬಹುದು, ಗ್ರಾಮೀಣ ಅಭಿವೃದ್ಧಿ ಇಲಾಖೆ ಇರಬಹುದು, ಅರಣ್ಯ ಇಲಾಖೆ ಇರಬಹುದು, ಫೈನಾನ್ಸ್ ಡಿಪಾರ್ಟ್‌ಮೆಂಟ್ ಇರಬಹುದು. ಯಾವ ಡಿಪಾರ್ಟ್‌ಮೆಂಟನ್ನು ರಿವ್ಯೂ ಮಾಡಿರುತ್ತಾರೆ ? ನಿಮಗೇನು ರಿವ್ಯೂ ಮಾಡುವುದಕ್ಕೆ ಹೆದರಿಕೆಯೇ ? ಸಂಬಂಧಪಟ್ಟ ಮಂತ್ರಿಗಳಿಗೆ ನೀವು ಹೆದರುತ್ತೀರಾ ? ಏತಕ್ಕೆ ನಿಮಗೆ ಪೊಲಿಟಿಕಲ್ ವಿಲ್ ಇಲ್ಲ ಎಂದು ಕೇಳುತ್ತೇನೆ. ಏನೋ ಆಕಸ್ಮಿಕವಾಗಿ ಬಂದಿದ್ದೀರಿ, ಮುಖ್ಯಮಂತ್ರಿಯಾಗುತ್ತೇನೆ ಎಂದು ಅನಿಸಿರಲಿಲ್ಲ. ೧೮೮ ಜನರ ಬೆಂಬಲ ಇದೆ, ಏನು ಮಾಡಿದರೂ ನಡೆಯುತ್ತದೆ ಎಂಬ ಭಾವನೆ ಇದೆಯೇ ಎಂದು ಕೇಳಬಯಸುತ್ತೇನೆ. ಇವತ್ತು ಕೆ.ಇ.ಬಿ., ಕೆ.ಎಸ್.ಆರ್.ಟಿ.ಸಿ. ಎಷ್ಟು ದೊಡ್ಡ ಇಲಾಖೆಗಳು ಎಂದು ಗೊತ್ತಿದೆ. ಇದರ ಜೊತೆಗೆ ಎಷ್ಟೊಂದು ಬೋರ್ಡ್ಸ್ ಮತ್ತು ಕಾರ್ಪೊರೇಷನ್ಸ್ ಇವೆ. ಯಾವ ಡಿಪಾರ್ಟ್‌ಮೆಂಟ್‌ನ್ನು ಮುಖ್ಯಮಂತ್ರಿಗಳು ರಿವ್ಯೂ ಮಾಡಿರುತ್ತಾರೆ. ಒಂದು ಬೋರ್ಡ್ ಅಥವಾ ಕಾರ್ಪೊರೇಷನನ್ನು ರಿವ್ಯೂ ಮಾಡುವುದಕ್ಕೆ ಮುಖ್ಯಮಂತ್ರಿಗಳ ಕೈಯಲ್ಲಿ ಆಗಲಿಲ್ಲ. ಆರು ತಿಂಗಳ ಕಾಲ ಆಡಳಿತವನ್ನು ನಡೆಸಿರತಕ್ಕಂಥ ನೀವು ರಾಜ್ಯದಲ್ಲಿ ಯಾವ ಇಲಾಖೆಯ ಕಷ್ಟ ಏನು, ಸುಖ ಏನು ಎಂದು ತಿಳಿದುಕೊಳ್ಳತಕ್ಕಂಥ ಪ್ರಯತ್ನ ಮಾಡಿಲ್ಲ. ನೀವು ಮಾಡಿರುವುದು ಏನು. ಟ್ರಾನ್ಸ್‌ಫರ್ಸ್. ಟ್ರಾನ್ಸ್‌ಫರ್ಸ್‌ನಲ್ಲಿ ದುಡ್ಡು ವ್ಯವಹಾರ ಮಾಡಿರುತ್ತಾರೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಟ್ರಾನ್ಸ್‌ಫರ್ ಮಾಡುವುದು, ಸರಕಾರದ, ಮುಖ್ಯ ಮಂತ್ರಿಗಳ ಕೆಲಸ, ಅದನ್ನು ಮಾಡಿ. ಅದನ್ನು ಮಾಡುವಾಗ ಯಾವ ನೀತಿಯನ್ನು ನೀವು ಅನುಸರಿಸಿದ್ದೀರಿ ? ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ತಮಗೆ ಒಂದು ಗಮನ ಸೆಳೆಯುವ ಸೂಚನೆಯನ್ನೂ ಕಳುಹಿಸಿದ್ದೆ. ಸಮಯದ ಅಭಾವದಿಂದ ತಾವು ಅದನ್ನು ತೆಗೆದುಕೊಂಡಿಲ್ಲ ಎಂದು ತಿಳಿದುಕೊಂಡಿದ್ದೇನೆ. ಬೆಂಗಳೂರಿನಲ್ಲಿ ಒಬ್ಬರು ತಹಸೀಲ್ದಾರ್ ಆಗಿದ್ದರು ಇದೇ ಸರಕಾರ ೧೯೯೦ನೇ ಜನವರಿ ತಿಂಗಳಲ್ಲಿ ಮೂರು ಕೋಟಿ ರೂಪಾಯಿ ಬೆಲೆ ಬಾಳುವ ಸರಕಾರಿ ಆಸ್ತಿಯನ್ನು ಖಾಸಗಿಯವರಿಗೆ ಕೊಟ್ಟಿದ್ದಾರೆ ಎಂದು ಹೇಳಿ ಅವರನ್ನು ಸಸ್ಪೆಂಡ್ ಮಾಡಿ, ಎನ್‌ಕ್ವೈರಿ ಮಾಡುವುದಕ್ಕೆ, ಎನ್‌ಕ್ವೈರಿ ಆಫೀಸರ್ ಆಗಿ ಬೆಂಗಳೂರು ಡಿ.ಸಿ. ಯನ್ನು ನೇಮಕ ಮಾಡಿದರು. ಪ್ರೆಸೆಂಟಿಂಗ್ ಆಫೀಸರ್ ಆಗಿ ಬೆಂಗಳೂರು ಡಿ.ಸಿ.ಯನ್ನು ನೇಮಕ ಮಾಡಿದರು. ಪ್ರೆಸೆಂಟಿಂಗ್ ಆಫೀಸರ್ ಆಗಿ ಬೆಂಗಳೂರು ಜಿಲ್ಲಾಧಿಕಾರಿಗಳ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಅವರನ್ನು ಅಪಾಯಿಂಟ್ ಮಾಡಿದ್ದರು. ಈ ವರ್ಗಾವಣೆಯಲ್ಲಿ ಏನಾಯಿತು, ಏನು ಮಾಡಿದ್ದಾರೆ ಎಂದರೆ ಯಾರು ಅಪರಾಧಿ ಇದ್ದಾನೆ, ಯಾರ ಮೇಲೆ ಮೂರು ಕೋಟಿ ರೂಪಾಯಿಗಳ ಸರಕಾರಿ ಆಸ್ತಿಯನ್ನು ಖಾಸಗಿಯವರಿಗೆ ಕೊಟ್ಟಿದ್ದಾನೆ, ಈ ಎನ್‌ಕ್ವೈರಿ ಆಫೀಸರ್ ಪೋಸ್ಟ್‌ಗೆ ಅದೇ ಅಧಿಕಾರಿಯನ್ನು ಇವರು ಹಾಕಿದ್ದಾರೆ. ಇದು ನಮ್ಮ ಸರಕಾರ ಮಾಡಿದ್ದಲ್ಲ, ನೀವೆ, ನಿಮ್ಮ ಸರಕಾರವೇ ಮಾಡಿದೆ. ಇದೇ ನಿಮ್ಮ ಟ್ರಾನ್ಸ್‌ಫರ್ ನೀತಿ. ಇದನ್ನು ಹೇಳಿದರೆ, ನೀವು ಟ್ರಾನ್ಸ್‌ಫರ್ ಮಾಡಲಿಲ್ಲವೇ ಎಂದು ಹೇಳುತ್ತೀರಿ. ದಯವಿಟ್ಟು ಇದಕ್ಕೆ ಉತ್ತರ ಕೊಡಬೇಕು. ಎಷ್ಟು ಜಿಲ್ಲೆಗಳ ಅಡ್ಮಿನಿಸ್ಟ್ರೇಷನ್ ರಿವ್ಯೂ ಮಾಡಿರುತ್ತೀರಿ, ಯಾವ ಜಿಲ್ಲೆಗೆ ಹೋಗಿದ್ದೀರಿ, ಯಾವ ತಾಲ್ಲೂಕಿಗೆ ಹೋಗಿದ್ದೀರಿ. ಯಾವುದೋ ಒಂದು ನಾಲ್ಕು ಕಾರ್ಯಕ್ರಮಕ್ಕೆ ಹೋಗಿರಬಹುದು. ದಿವಂಗತ ದೇವರಾಜ ಅರಸು ಅವರು ಮುಖ್ಯ ಮಂತ್ರಿಗಳಾಗಿದ್ದರು. ನಾನು ಹೆಮ್ಮೆಯಿಂದ ಈ ಮಾತನ್ನು ಹೇಳುತ್ತೇನೆ. ಅವರು ಪ್ರತಿಯೊಂದು ಜಿಲ್ಲೆಗೆ ಹೋಗುತ್ತಿದ್ದರು. ಅಲ್ಲಿ ಒಂದು ದಿವಸ ಎರಡು ದಿವಸ ಇರುತ್ತಿದ್ದರು, ಶಾಸಕರನ್ನು ಕರೆಸುತ್ತಿದ್ದರು, ಪ್ರತಿನಿಧಿಗಳನ್ನು ಕರೆಸುತ್ತಿದ್ದರು. ಒಬ್ಬ ಮಂತ್ರಿ ಮಾಡತಕ್ಕ ಕೆಲಸ ಇದು. ಈ ರೀತಿ ಅವರವರ ಇಲಾಖೆಗೆ ಸಂಬಂಧಪಟ್ಟಂತೆ ಮಾಡಬೇಕು. ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಏನು ಆಗಬೇಕು ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕಾಗುತ್ತದೆ. ಇವತ್ತು ಜನ ಕಾದಿದ್ದಾರೆ. ಎಷ್ಟು ಜಿಲ್ಲೆಗಳಿಗೆ ಮುಖ್ಯ ಮಂತ್ರಿಗಳು ಹೋಗಿದ್ದಾರೆ ಯಾವ ಜಿಲ್ಲೆಗೆ ಹೋಗಿದ್ದಾರೆ ಎಂದು ಕೇಳುವುದಕ್ಕೆ ಬಯಸುತ್ತೇನೆ. ಕೊನೆಯ ಪಕ್ಷ ಬೆಂಗಳೂರಿನಲ್ಲಿ ಇದನ್ನು ಸಹಿತ ರಿವ್ಯೂ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿ-

ಕೈಯಲ್ಲಿ ಆಗಿಲ್ಲ. ಇವರು ಅಡ್ಮಿನಿಸ್ಟ್ರೇಷನ್ ಟೋನ್ ಅಪ್ ಮಾಡುತ್ತೇವೆ ಎಂಬ ಮಾತನ್ನು ಹೇಳು ತ್ತಿದ್ದಾರೆ. ಹೇಗೆ ಮಾಡುತ್ತಾರೋ ನನಗಂತೂ ಗೊತ್ತಿಲ್ಲ. ನಮ್ಮ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರ, ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್ ಹಾಗೂ ಬೇರೆ ಕಾರ್ಯಕ್ರಮಗಳು ಇರಬಹುದು ಇದನ್ನು ರಿವ್ಯೂ ಮಾಡುವುದಕ್ಕೆ ಒಂದು ಹೈಪವರ್ ಕಮಿಟಿ ಇದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರು ಮಾನ್ಯ ಬಸವಲಿಂಗಪ್ಪನವರು ಅಧ್ಯಕ್ಷರಾಗಿದ್ದರೆ ಅವರು ಎಲ್ಲಾ ಅಧಿಕಾರಿಗಳನ್ನು ಕರೆದರೆ ಅವರು ಬರುವುದಿಲ್ಲ. ಆದರೆ ಮುಖ್ಯ ಮಂತ್ರಿಗಳು ಬಂದಾಗ ಕಾರ್ಯದರ್ಶಿಗಳು ಬರುತ್ತಾರೆ, ಸಂಬಂಧಪಟ್ಟ ಅಧಿಕಾರಿಗಳು ಬರುತ್ತಾರೆ, ಎಷ್ಟು ಸಾರಿ ಇವರು ರಿವ್ಯೂ ಮಾಡಿರುತ್ತಾರೆ. ದಯಮಿಟ್ಟು ಸಚಿವ ಸಂಪುಟದ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಇದನ್ನು ಕೇಳಿ, ೨೦ ಪಾಯಿಂಟ್ ಪ್ರೋಗ್ರಾಂ ರಿವ್ಯೂ ಮಾಡುವುದಕ್ಕ ಆಗುವುದಿಲ್ಲ. ಡಿಪಾರ್ಟ್‌ಮೆಂಟ್ ಅಡ್ಮಿನಿಸ್ಟ್ರೇಷನ್ ರಿವ್ಯೂ ಮಾಡಿಲ್ಲ. ಎಲ್ಲೂ ಸಹ ಹೋಗಿಲ್ಲ, ಇವರು ಹೇಗೆ ಬ್ಯೂರಾಕ್ರಸಿಯನ್ನು ಹದ್ದುಬಸ್ತಿನಲ್ಲಿಡುತ್ತಾರೆ, ಹೇಗೆ ಆಡಳಿತ ಸುಧಾರಣೆ ಮಾಡುತ್ತಾರೆ ಎಂದು ಕೇಳುವುದಕ್ಕೆ ಬಯಸುತ್ತೇನೆ. ಮುಖ್ಯಮಂತ್ರಿಗಳು ಇವತ್ತು ಈ ಸಭೆಯಲ್ಲಿ ಇರಬೇಕಾಗಿತ್ತು. ರಾಜ್ಯದಜನತೆಗೆ ಅವರು ಉತ್ತರ ಕೊಡಬೇಕು. ಯಾವುದೋ ಸರಕಾರ. ಏನೋ ಮಾಡಿತು ನೀವು ಮಾಡಿದ್ದೀರಿ, ನೀವು ಹೊತ್ತುಕೊಂಡು ಹೋಗಿದ್ದೀರಿ ಎಂಬ ಬುಡುಬುಡಿಕೆ ಮಾತು ಬಹಳ ದಿವಸ ನಡೆಯುವುದಿಲ್ಲ. ಎಷ್ಟು ದಿನ ಇದನ್ನು ಹೇಳಿಕೊಂಡು ತಿರುಗಾಡುವುದಕ್ಕೆ ಆಗುತ್ತದೆ. ಎಷ್ಟು ದಿವಸ ನೀವು ಬೈಸಿಕೊಂಡು ತಿರುಗಾಡುವುದಕ್ಕೆ ಆಗುತ್ತದೆ. ಬಹಳ ಜಾಸ್ತಿ ಅಂದರೆ ಇನ್ನೊಂದು ಆರು ತಿಂಗಳು ಬೈಯುತ್ತೀರಿ. ಆಮೇಲೆ ಜನ ಕೇಳುತ್ತಾರೆ, ಆಗ ಏನು ಉತ್ತರ ಕೊಡುತ್ತೀರಿ. ಮಾನ್ಯ ಶಿವನಂಜಪ್ಪನವರೆ ಹೇಳಿ ನಾನು ನೊಂದುಕೊಂಡು ಈ ಮಾತನ್ನು ಹೇಳು ತ್ತಿದ್ದೇನೆ.

ಅಧ್ಯಕ್ಷರು.—ಅವರು ಹೇಳುತ್ತಾರೆ ಕೇಳಿ,

ಶ್ರೀ ಜಿ. ಎಸ್. ಶಿವನಂಜಪ್ಪ:—ಅವರು ಬಿಟ್ಟು ಹೋಗಿದ್ದ ಲೆಗಸಿ ಏನು ಇದೆ, ಅದನ್ನು ನಿನ್ನೆ ದಿವಸ ಮಾನ್ಯ ಹಣಕಾಸಿನ ಮಂತ್ರಿಯವರು ಹೇಳಿದ್ದಾರೆ. ಈಗ ಅಧಿಕಾರಿಗಳಿಗೆ ಸಂಬಳವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಹಿಂದೆ ಒಂದು ಚೆಕ್ ಸಹ ಬೌನ್ಸ್ ಆಗಿಲ್ಲ, ೨೦ ಅಂಶ ಗಳ ಕಾರ್ಯಕ್ರಮ ಮಾಡಬೇಕಾಗಿದ್ದರೆ ಅದಕ್ಕೆ ಹಣ ಬೇಕಾಗಿತ್ತು. ನೀವು ಬಿಟ್ಟು ಹೋಗಿದ್ದರೆ ತಾನೆ ೨೦ ಅಂಶಗಳ ಕಾರ್ಯಕ್ರಮವನ್ನು ನಾವು ನಡೆಸುವುದು. ಆಗ ಏನೂ ಆಗಿಲ್ಲ, ಇನ್ನು ಮೇಲೆ ನೋಡಿ ಆಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಶಿವನಂಜಪ್ಪನವರು ಮುಖ್ಯಮಂತ್ರಿಗಳಿಗೆ ಬಹಳ ಆಪ್ತರು. ಕೆಲವು ಮಂತ್ರಿಗಳು ಒಳ್ಳೆಯ ಸಲಹೆಗಳನ್ನು ಮಾಡಿದ್ದಾರೆ. ಕೆಲವು ಇಲಾಖೆಗಳು ಒಳ್ಳೆಯ ಕೆಲಸವನ್ನು ಮಾಡಿವೆ, ಅದನ್ನು ಹೇಳುತ್ತೇನೆ. ನಿನ್ನೆ ರಾಜಶೇಖರ ಮೂರ್ತಿಯವರು ಮಾಡಿರತಕ್ಕ ಒಳ್ಳೆಯ ಕೆಲಸವನ್ನು ನಾವು ಹೇಳಿಲ್ಲವೋ. ರೆಕ್ಟಿಫೈಡ್ ಸ್ಪಿರಿಟ್ ಸ್ಕ್ಯಾಂಡಲ್‌ನಲ್ಲಿ ಹೆಸರುಗಳನ್ನು ಹೇಳಿ ಎಂದರೆ ಹೇಳುವುದಕ್ಕೆ ನೀವು ಏಕೆ ಹೆದರುತ್ತೀರಿ ? ನಿಮ್ಮ ಮಂತ್ರಿಗಳು ಏಕೆ ಹೆದರುತ್ತಾರೆ ಹೇಳಿ, ಯಾರನ್ನು ಪ್ರೊಟೆಕ್ಟ್ ಮಾಡಲಿಕ್ಕೆ ಇವರು ಹೊರಟ್ಟಿದ್ದಾರೆ. ನಾನು ಹೇಳುತ್ತಿದ್ದೇನೆ. ನನ್ನ ಸಂಬಂಧಿಕರು, ನನಗೆ ಬೇಕಾಗಿರತಕ್ಕವರು ಅಥವಾ ಬೇರೆಯವರ ಹೆಸರಿನಲ್ಲಿ ನಾನು ಮಾಡಿದ್ದರೆ ಪ್ರಕಟ ಮಾಡಿ ಎಂದರೆ ನಿಮ್ಮ ಹಣಕಾಸಿನ ಸಚಿವರು ಅದನ್ನು ಹೇಳಲಿಕ್ಕೆ ತಯಾರಿಲ್ಲವಲ್ಲಾ. ಏಕೆ ಸ್ವಾಮಿ, ಏನು ಇದರ ಅರ್ಥ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೇಳುತ್ತಾರೆ ಕೇಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹೇಳುತ್ತಾರೆ, ಅವರು ಇರಬೇಕಲ್ಲ ಅಷ್ಟು ಹೊತ್ತಿಗೆ, ಅವರು ಎಲ್ಲಿ ಹೋಗಿದ್ದಾರೆಂದು ನಿಮಗೇ ಗೊತ್ತಿದೆ. ನಾನು ಏಕೆ ಅದನ್ನು ಹೇಳುವುದಕ್ಕೆ ಹೋಗಲಿ. ನಿನ್ನೆ ಬೆಳಿಗ್ಗೆ ನಮ್ಮ ಮಾನ್ಯ ಸಹೋದ್ಯೋಗಿಗಳು, ಮುಖ್ಯಮಂತ್ರಿಗಳಿಗೆ ನೀವು ೫ ವರ್ಷದವರೆಗೆ ಇರಬೇಕು ಎಂದು ಹೇಳಿದಿರಾ ಎಂದು ಕೇಳಿದರು. ೫ ವರ್ಷ ಹೀಗೆ ಇದ್ದರೆ ನಾವು ಬೇಗ ಆ ಕಡೆಗೆ ಬಂದು ಬಿಡುತ್ತೇವೆ, ಅದಕ್ಕೋಸ್ಕರ ನೀವೇ ೫ ವರ್ಷ ಇರಬೇಕು ಎಂದು ನಾನು ಕೇಳಿಕೊಂಡಿದ್ದು. ನಾನು ಹೇಳಿದ್ದು ಏಕೆಂದರೆ, ೫ ವರ್ಷ ನೀವು ಹೀಗೆ ಮುಂದುವರಿದರೆ ನೀವೆಲ್ಲ ಈ ಕಡೆ ಬೇಗ ಬಂದು ಬಿಡುತ್ತೀರಿ, ನಾವು ಆ ಕಡೆಗೆ ಹೋಗಬಹುದೆಂಬ ಆಸೆಯಿಂದ ನಾನು ಮುಖ್ಯಮಂತ್ರಿಗಳಿಗೆ ಹೇಳಿದ್ದು ನಿಜ ಮಾನ್ಯ ವಾಟಾಳ್‌ನಾಗರಾಜ್‌ರವರು ನೀವು ೫ ವರ್ಷ ಇದೇ ತರಹ ನಮಗೆ ತಿಂಡಿ ಕೊಡಿಸಿ ಎಂದು ಹೇಳಿದಾಗ...

ಅಧ್ಯಕ್ಷರು.—ನೀವೂ ಒಂದು ಪಂಚವಾರ್ಷಿಕ ಯೋಜನೆಯನ್ನು ಹಾಕುತ್ತಿದ್ದೀರಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹಾಕುತ್ತಿದ್ದೇನೆ, ಹಾಕದೇ ಹೋದರೆ ಹೇಗೆ ?

ಶ್ರೀ ಬಿ. ಬಸವಲಿಂಗಪ್ಪ:—ನಿಮ್ಮ ಮಾತುಗಳನ್ನು ಕೇಳಿನನಗಂತೂ ಬಹಳ ಉತ್ಸಾಹವಾಗುತ್ತಿದೆ. ಎಷ್ಟು ಎತ್ತರ, ಎತ್ತರದ ಧ್ವನಿಯಲ್ಲಿ ಮಾತನಾಡಿ ನಮಗೆಲ್ಲ ಪ್ರಚೋದನೆ ಮಾಡುತ್ತಿದ್ದೀರಿ. ಈಗ ಚರ್ಚೆ ಆಗಿದ್ದನ್ನು ನೋಡಿದೆ, ನಾನು ತಡವಾಗಿ ಬಂದೆ. ನಮಗೆ ಹೇಳುವ ಮಾತುಗಳು ಇವೆ, ಬುದ್ಧಿವಾದ ಇದೆ. ನಾವು ಹೇಗೆ ನಡೆದುಕೊಳ್ಳಬೇಕು, ಹೇಗೆ ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಪರೀಕ್ಷೆ ಮಾಡಬೇಕು, ಹೇಗೆ ರೀವ್ಯೂ ಮಾಡಬೇಕು ಎಂದು ಹೇಳಿದಿರಿ. ಅದನ್ನು ನಾನಂತೂ ಮಾಡಿದ್ದೇನೆ. ಬೀದರ್ ಮತ್ತು ಬೆಳಗಾಂನಲ್ಲಿ ಹೋಗಿ ಮಾಡುತ್ತಿದ್ದೇನೆ, ಇರಲಿ. ನಮಗೆ ನೀವು ಇಷ್ಟು ಸಲಹೆ ಕೊಡುತ್ತಿದ್ದೀರಿ. ನಾವು ಹೀಗೆ ಮಾಡಬೇಕು, ಈ ಕೆಲಸ ಹೀಗೆ ಮಾಡಬೇಕು ಎಂದು ಹೇಳುತ್ತಿದ್ದೀರಿ. ನಾವು ನೀವು ಹೇಳಿದಂತೆ ಕೆಲಸವನ್ನು ಚೆನ್ನಾಗಿ ಮಾಡಿಕೊಂಡು ಹೋದರೆ ನೀವು ಹತ್ತು ವರ್ಷ ಅಲ್ಲ, ಇಪ್ಪತ್ತು ವರ್ಷಗಳಾದರೂ ಬರುವುದಕ್ಕೆ ಆಗುವುದಿಲ್ಲ.

ಶ್ರೀ ಪಿ. ಜಿ ಆರ್. ಸಿಂಧ್ಯ.—ಮಾನ್ಯ ಬಸವಲಿಂಗಪ್ಪನವರು ಈ ಕಡೆ ಕುಳಿತುಕೊಂಡಿದಾಗ, ಏನು ಹೇಳುತ್ತಿದ್ದರೆಂದು ರೆಕಾರ್ಡ್ ತೆಗೆದು ನೋಡಿದರೆ ಗೊತ್ತಾಗುತ್ತದೆ. ಅವರು ದೆಹಲಿಯಲ್ಲಿ ಒಂದಷ್ಟು ದಿನ ಇದ್ದರು, ಪಾಪ ಅವರಿಗೆ ಗೊತ್ತಿಲ್ಲ. ಈಗ ಅದೆಲ್ಲ ಬೇಡಿ.

ಶ್ರೀ ಎಸ್, ಬಂಗಾರಪ್ಪ.—ನಿಮ್ಮ ಹಿತದೃಷ್ಟಿ ಹೇಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಬುದ್ಧಿವಾದ ಹೇಳುತ್ತಿಲ್ಲ. ಮಾನ್ಯ ಬಸವಲಿಂಗಪ್ಪನವರಿಗೆ, ಮಾನ್ಯ ಘೋರ್ಪಡೆಯವರಿಗೆ, ಮಾನ್ಯ ಬಂಗಾರಪ್ಪನವರಿಗೆ ಹಾಗೂ ಮಾನ್ಯ ವೀರೇಂದ್ರ ಪಾಟೀಲರಿಗೆ ಬುದ್ಧಿವಾದ ಹೇಳುವ ಶಕ್ತಿ ನನಗೆ ಇಲ್ಲ. ದಯುವಿಟ್ಟು ತಾವೇ ಯೋಚನೆ ಮಾಡಿ, ಯಾವ ದಿಕ್ಕಿನಲ್ಲಿ ಈ ಸರ್ಕಾರದ ಆಡಳಿತ ಕೆಲಸ ಮಾಡಬೇಕಾಗಿತ್ತು, ಏನು ಇಂಪ್ಯಾಕ್ಟ್ ಜನಗಳ ಮೇಲೆ ಕ್ರಿಯೇಟ್ ಮಾಡಬೇಕಾಗಿತ್ತು ಎನ್ನುವುದನ್ನು ತಾವೇ ಹೇಳಿ ಇವತ್ತು ಬಡ ವರ್ಗದ ಜನಗಳಲ್ಲಿ ಏನು ಅಭಿಪ್ರಾಯ ಬಂದಿದೆ ? ನಮ್ಮ ಜಿಲ್ಲೆಯಲ್ಲಿ ಲಾಕಪ್ ಡೆತ್ ಜಾಸ್ತಿಯಾಗುತ್ತಿಲ್ಲ. ಏಕೆ ಗುಲ್ಬರ್ಗ ಜಿಲ್ಲೆಯಲ್ಲಿ ಲಾಕಪ್ ಡೆತ್ ಜಾಸ್ತಿಯಾಗಿದೆ. ಲಾಕಪ್ ಡೆತ್ ಬಳ್ಳಾರಿಯಲ್ಲಿ ಜಾಸ್ತಿಯಾಗಿಲ್ಲ, ಲಾಕಪ್ ಡೆತ್ ಗುಲ್ಬರ್ಗದಲ್ಲಿ ಜಾಸ್ತಿಯಾಗಿದೆ. ಏಕೆ ಆಗಿದೆ, ಲಾಕಪ್‌ನಲ್ಲಿ ೧೮ ಅಥವಾ ೨೦ ಜನರು ಲಾಕಪ್‌ನಲ್ಲಿ ಸತ್ತು ಹೋಗಿದ್ದಾರೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಗುಲ್ಬರ್ಗದಲ್ಲಿ ಜಾಸ್ತಿ ಜನ ಏಕೆ ಸತ್ತಿದ್ದಾರೆ? ಇದರಿಂದ ಎಲ್ಲೋ ಒಂದು ಕಡೆ ಅಡ್ಮಿನಿಸ್ಟ್ರೇಷನ್ ಟೈಟ್ ಆಗಿಲ್ಲ ಎಂದು ಅರ್ಥವಾಗುತ್ತದೆ. ಮುಖ್ಯ ಮಂತ್ರಿಗಳು ಗುಲ್ಬರ್ಗದಿಂದ ಬರುವುದಕ್ಕೂ, ಲಾಕಪ್‌ಗೆ ಹೋದ ಜನ ವಾಪಸ್ ಬರದೆ ಇರುವುದಕ್ಕೂ ಕಾರಣವೇನು ? ಆಮೇಲೆ ಲಾ ಅಂಡ್ ಆರ್ಡರ್ ಅಡ್ಮಿನಿಸ್ಟ್ರೇಷನ್ ಬಹಳ ಟೈಟ್ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ನಾವು ಆ ಕಡೆ ಕುಳಿತಿದ್ದಾಗ ಇವರು ಏನು ಹೇಳುತ್ತಿದ್ದರು ಅಂದರೆ, ನಾವು ಬಂದ ತಕ್ಷಣವೇ ಈ ರಾಜ್ಯದಲ್ಲಿ ದುರ್ಬಲ ವರ್ಗದವರು, ಬಡವರು ಬದುಕಲಿಕ್ಕೆ ಆಗುವುದಿಲ್ಲ, ಪ್ರತಿ ನಿತ್ಯವೂ ಅವ್ಯಾಹತವಾಗಿ ಬಡವರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದರು. ಇವತ್ತು ಮಾನ್ಯ ಮೊಯಿಲಿಯವರು ಉತ್ತರದಲ್ಲಿ ಏನು ಹೇಳಿದ್ದಾರೆಂದರೆ, ೬೦೦ ಅಲ್ಲ, ೩೦೦೦ಕ್ಕೂ ಹೆಚ್ಚು ಕೇಸುಗಳು ಕಳೆದ ೬ ತಿಂಗಳಲ್ಲಿ ರಿಜಿಸ್ಟರ್ ಆಗಿವೆ. ೩ ಸಾವಿರಕ್ಕೂ ಹೆಚ್ಚು ಷೆಡ್ಯೂಲ್‌ಕ್ಯಾಸ್ಟ್‌ನವರ ಮೇಲೆ ನಡೆದಿರತಕ್ಕ ಅಟ್ರಾಸಿಟೀಸ್ ಕೇಸಸ್ ರಿಜಿಸ್ಟರ್ ಮಾಡಿದ್ದಾರೆ. ಇದು ಏಕೆ ಸ್ವಾಮಿ ಹೆಚ್ಚಾಗಿರುವುದು ? ನಿಮ್ಮ ಸರ್ಕಾರ ಬಂದ ಮೇಲೆ ಇನ್ನೂ ಇದನ್ನು ಏಕೆ ಸರಿ ಮಾಡುವುದಕ್ಕೆ ಆಗಿಲ್ಲ. ಇದನ್ನು ದಯಮಾಡಿ ನನಗೆ ತಿಳಿಸಿ. ಇನ್ನು ಕಮ್ಯುನಲ್ ರೈಟ್ಸ್ ಬಗ್ಗೆ ನಮ್ಮ ಸ್ನೇಹಿತರು ಮಾತನಾಡಿದರು. ಯಾವುದೂ ಕಡಿಮೆ ಆಗಿಲ್ಲ. ನಾವು ಇದ್ದಾಗ ಟ್ರೆಜರಿ ಎಲ್ಲಾ ಖಾಲಿ ಆಗಿ ಚೆಕ್ಸ್ ಎಲ್ಲಾ ಬೌನ್ಸ್ ಆಗುತ್ತಿದ್ದವು ಎಂದು ತಾವು ಹೇಳಿದಹಾಗೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಲಾಕಪ್ ಡೆತ್ಸ್ ಏಕೆ ಜಾಸ್ತಿ ಆಗಿವೆ ? ಬಡವರ ಮೇಲೆ ಏಕೆ ದೌರ್ಜನ್ಯಗಳು ಜಾಸ್ತಿಯಾಗುತ್ತಿವೆ. ಏತಕ್ಕೆ ಕಮ್ಯುನಲ್ ರೈಟ್ಸ್ ಕಡಿಮೆ ಆಗಿಲ್ಲ. ಆಡಳಿತ ಪಕ್ಷದ ಸದಸ್ಯರು ಈಗ ತಾನೆ ಹೇಳಿದರು. ಅವರ ಕ್ಷೇತ್ರದಲ್ಲಿ ಮಟ್ಕಾ ಬೆಳಿಗ್ಗೆಯಿಂದ ಸಾಯಂಕಾಲದವರೆವಿಗೂ ನಡೆಯುತ್ತದೆ ಎಂದು ಹೇಳಿದರು. ಇದನ್ನು ತಾವು ಏಕೆ ತಡೆಗಟ್ಟಲಿಕ್ಕೆ ಆಗಿಲ್ಲ. ಇದಕ್ಕೂ ವರ್ಗಾವಣೆಗೂ ಏನು ಸಂಬಂಧ ಎನ್ನುವುದನ್ನು ದಯಮಾಡಿ ತಾವು ಹೇಳಬೇಕು. ಯಾವ ಆಧಾರದ ಮೇಲೆ ತಾವು ವರ್ಗಾವಣೆಗಳನ್ನು ಮಾಡಿದ್ದೀರಿ ? ಮೆರಿಟ್ ಮೇಲೆ ವರ್ಗಾವಣೆಗಳನ್ನು ಮಾಡಿದ್ದೆ ಆಗಿದಿದ್ದರೆ ಎಲ್ಲಾ ಜಾತಿಗಳಲ್ಲೂ ಒಳ್ಳೆಯ ಅಧಿಕಾರಿಗಳು

ಇದ್ದಾರೆ, ಪ್ರಾಮಾಣಿಕರು ಇದ್ದಾರೆ. ಅದರ ಆಧಾರದ ಮೇಲೆ ಮಾಡಿದ್ದರೆ ಇದು ಆಗುತ್ತಿರಲಿಲ್ಲ. ಇವತ್ತು ಯಾರೋ ಬಂದು ಹೇಳಿದರು ಎಂದು ಕನ್ಸಿಡರ್ ಮಾಡುವುದು. ಮಾನ್ಯ ಅಧ್ಯಕ್ಷರೇ, ನೀವು ವರ್ಗಾವಣೆಗಳ ಬಗ್ಗೆ ಮಾತನಾಡುವುದಕ್ಕೆ ಹೋಗಬೇಡಿ ಎಂದು ತಾವು ಹೇಳಿದಿರಿ. ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಕೆಲವು ಪತ್ರಿಕೆಗಳಲ್ಲಿ ನೋಡಿದೆ. ಆ ವರದಿಗಳ ಪ್ರಕಾರವಾಗಿ ಈ ಅಧಿವೇಶನ ಮುಗಿದ ತಕ್ಷಣ ಇವರು ಕೆ.ಇ.ಬಿ. ರೇಟ್ ಹೆಚ್ಚು ಮಾಡುತ್ತಾರೆ ಅಂತೆ. ಹಾಗೆಯೇ ಈ ರೇಟ್ ಹೆಚ್ಚು ಆಗುತ್ತದೆಯಂತೆ, ಏಕೆಂದರೆ ಒಬ್ಬರಿಗೆ ಮೂರೇ ಟ್ರಾನ್ಸ್‌ಫರ್ ಮಾಡಿಕೊಡುವುದಂತೆ. ಏನು ಇದರ ಅರ್ಥ? ಹೇಗೆ ನೀವು ಅಡ್ಮಿನಿಸ್ಟ್ರೇಷನ್ ಅನ್ನು ಟೈಟ್ ಆಫ್ ಮಾಡುತ್ತೀರಿ ದಯಮಾಡಿ ಹೇಳಿ. ತಾವು ಏನು ಭಾಷಣ ಮಾಡಿದ್ದೀರಿ, ಆ ಭಾಷಣದ ಪ್ರತಿ ನನಗೆ ಸಿಕ್ಕಿಲ್ಲ. ನಾನು ಆ ಭಾಷಣದ ಪ್ರತಿಯನ್ನು ತೆಗೆದುಕೊಳ್ಳುವುದಕ್ಕೂ ಹೋಗಿಲ್ಲ. ಏಕೆಂದರೆ, ಆಕಸ್ಮಿಕವಾಗಿ ಇದೇ ಮುಖ್ಯಮಂತ್ರಿಗಳು ಮುಂದಿನ ಬಜೆಟ್ ಮಂಡನೆ ಮಾಡುವುದಾದರೆ ಆಗ ಈ ಭಾಷಣದ ಪ್ರತಿ ಬಹಳ ಉಪಯೋಗವಾಗುತ್ತದೆ. ಆಗ ಅವರು ಮುಖಕ್ಕೆ ಇದನ್ನು ಕನ್ನಡಿ ರೂಪದಲ್ಲಿ ಹಿಡಿದು, ನೀವು ಏನು ಮಾಡಿದ್ದೀರಿ, ದಯಮಾಡಿ ಹೇಳಿ ಎಂದು ಕೇಳಬಹುದು. ಆದ್ದರಿಂದ ನಾವು ಈಗ ಸುಮ್ಮನೆ ಇದ್ದೇವೆ. ಅವರು ಈ ರಾಜ್ಯದ ಜನತೆಗೆ ವಚನ ಕೊಟ್ಟಿದ್ದಾರೆ. ಇವರು ಯಾರ ಹೆಸರಿನಲ್ಲಿ ಅಧಿಕಾರಕ್ಕೆ ಬಂದರು, ಯಾರ ಹೆಸರಿನಲ್ಲಿ ಇವರು ಇಲ್ಲಿ ಕುಳಿತುಕೊಂಡಿದ್ದಾರೆ ಆ ಜನರಿಗೆ ವಂಚನೆ ಮಾಡುತ್ತಿದ್ದಾರೆ, ಮೋಸ ಮಾಡುತ್ತಿದ್ದಾರೆ, ದಗಾ ಮಾಡುವುದಕ್ಕೆ ಹೊರಟಿದ್ದಾರೆ. ಈ ರಾಜ್ಯದ ಆಡಳಿತವನ್ನು ಸರಿ ಮಾಡತಕ್ಕಂಥ ದಿಕ್ಕಿನಲ್ಲಿ ನೀವು ಏನೇನೂ ಪ್ರಯತ್ನ ಮಾಡಿಲ್ಲ. ಈ ಸರ್ಕಾರ ನಿದ್ದೆ ಮಾಡತಕ್ಕಂಥ ಸರ್ಕಾರ. ಇದನ್ನು ಎಚ್ಚರಿಸತಕ್ಕಂಥದ್ದಕ್ಕೆ ನಮ್ಮ ಕೈಯಲ್ಲಿ ಶಕ್ತಿ ಇಲ್ಲ. ಅದೇ ನಮಗೆ ಬಂದಿರತಕ್ಕಂಥ ದುಃಖ. ಅದು ನಮ್ಮ ದೌರ್ಭಾಗ್ಯ, ನಾವು ೨೪ ಜನ ಇದ್ದೇವೆ. ಅವರೊಂದು ೮-೧೦ ಜನ ಇದ್ದಾರೆ. ಆದ್ದರಿಂದ ದಯಮಾಡಿ ನೀವಾದರೂ ಕೆಲಸ ಮಾಡಿ, ನೀವು ಅದರಲ್ಲಿ ಸಮರ್ಥರಿದ್ದೀರಿ. ನೀವು ಇದೇ ತರಹ ಬಿಟ್ಟುಕೊಂಡು ಹೋದರೆ ಒಳ್ಳೆಯದಲ್ಲ. ಅಥವಾ ನಿಮ್ಮಲ್ಲಿ ಬೇರೆ ಏನಾದರೂ ವಿಚಾರ ಇರಬಹುದು. ಆ ಸ್ಥಾನದ ಮೇಲೆ ಬೇರೆಯವರಿಗೆ ಏನಾದರೂ ಕಣ್ಣು ಬಿದ್ದಿರಬಹುದು. ಅವರು ಹೀಗೆ ಮುಂದುವರಿಸಿಕೊಂಡು ಹೋದರೆ ನಮಗೆ ಅನುಕೂಲ ಆಗಬಹುದೆಂದು ತಿಳಿದುಕೊಂಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ಆದರೆ ನಾನು ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ. ಆಡಳಿತದಲ್ಲಿ ಬಿಗಿ ಬರಬೇಕು, ಅಧಿಕಾರಿಗಳಲ್ಲಿ ಬಿಗಿ ಬರಬೇಕು. ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಇರಬಹುದು, ತಾವು ಜಿಲ್ಲಾಪರಿಷತ್ತಿನ ಬಗ್ಗೆ ಹೇಳಿದಿರಿ. ತಮಗೆ ಸಂಪೂರ್ಣವಾಗಿ ವಿಕೇಂದ್ರೀಕರಣದಲ್ಲಿ ನಂಬಿಕೆ ಇದೆ ಎನ್ನುವುದು ನಮಗೆಲ್ಲರಿಗೂ ಸಹ ಗೊತ್ತಿದೆ. ತಾವು ಕೆಲವು ತತ್ವಗಳ ಆಧಾರದ ಮೇಲೆ ಕೆಲಸ ಮಾಡುವುದಕ್ಕೆ ಹೊರಟಿದ್ದೀರಿ ಎನ್ನುವುದು ನನಗಂತೂ ಗೊತ್ತಿದೆ. ಇದು ಬಹಳ ಜನರಿಗೆ ಗೊತ್ತಿದೆ. ಆದರೆ ಇವತ್ತು ಆಡಳಿತದಲ್ಲಿ ಬಿಗಿ ತರುವುದಕ್ಕೆ ಆಗಿದೆಯೇ ಎನ್ನುವುದನ್ನು ಯೋಚನೆ ಮಾಡಿ. ಡೆವೆಲಪ್‌ಮೆಂಟ್ ವರ್ಕ್ಸ್ ಅಪ್ ಟು ಸರ್ಟನ್ ಲೆವೆಲ್ ಜಿಲ್ಲಾ ಪರಿಷತ್ತಿನವರು ಮಾಡುತ್ತಾರೆ, ಆದರೆ ಎಸ್.ಪಿ. ಏನು ಮಾಡುತ್ತಿದ್ದಾರೆ. ಯಾವ ಇಲಾಖೆಯಲ್ಲಿ ಅಡ್ಮಿನಿಸ್ಟ್ರೇಷನ್ ಟೋನ್ ಅಪ್ ಮಾಡಿದ್ದೀರಿ ಎನ್ನುವುದಕ್ಕೆ ದಯಮಾಡಿ ಮಾನ್ಯ ಮುಖ್ಯ ಮಂತ್ರಿಗಳು ನನಗೆ ಉತ್ತರ ಕೊಡಬೇಕು. ಅದರಲ್ಲಿ ನೀವು ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಜನರು ಹೇಳುತ್ತಾರೆ, ಆಂಧ್ರ ಪ್ರದೇಶಕ್ಕೆ ಹೋದರಲ್ಲ ಅವರ ಹೆಸರು ಸಹ ನಾನು ಮರೆತು ಹೋಗಿದ್ದೇನೆ, ಮರೆತು ಹೋಗಿದ್ದು ಒಳ್ಳೆಯದು ಆಯಿತು. ಅವರ ಆಡಳಿತಕ್ಕೂ ನಿಮ್ಮ ಆಡಳಿತಕ್ಕೂ ಯಾವ ವ್ಯತ್ಯಾಸ ಇಲ್ಲ. ಅವರು ಡೆಲ್ಲಿಯಲ್ಲಿ ಇವರ ಸ್ನೇಹಿತರಾಗಿದ್ದರು ಎಂದು ಕಾಣುತ್ತಿದ್ದರು ಅವರ ಆಡಳಿತಕ್ಕೂ ನಿಮ್ಮ ಆಡಳಿತಕ್ಕೂ ಯಾವುದೇ ಡಿಫರೆನ್ಸ್ ಇಲ್ಲ. ಅವರ ಆಡಳಿತವೇ ಚೆನ್ನಾಗಿತ್ತು ಎಂದು ಕೆಲವು ಜನ ಮಾನ್ಯ ಸ್ನೇಹಿತರು ಹೇಳಿದರು, ಇದ್ದರೂ ಇರಬಹುದು. ಆದರೆ ಇವತ್ತು ಆಡಳಿತದಲ್ಲಿ ಯಾವುದೇ ರೀತಿಯಾದ ಬಿಗಿ ಕಾರ್ಯಕ್ರಮ ಇದುವರೆಗೂ ತರುವುದಕ್ಕೆ ಆಗಿಲ್ಲ, ಅಷ್ಟೇ ಅಲ್ಲ, ಯಾರು ನಿಮ್ಮ ಮೇಲೆ ವಿಶ್ವಾಸ ಇಟ್ಟು ನಿಮ್ಮ ಪಕ್ಷಕ್ಕೆ ಒಂದು ಬುನಾದಿ ಇದೆ, ನಿಮ್ಮ ಪಕ್ಷಕ್ಕೆ ಒಂದು ವರ್ಗದ ಜನ ಸಂಪೂರ್ಣವಾಗಿ ಬೆಂಬಲ ಕೊಟ್ಟಿದ್ದಾರೆ. ಅದು ಸರಿಯೋ ತಪ್ಪೋ ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆ ವರ್ಗದ ಜನರಿಗೆ ನೀವು ಮೋಸ ಮಾಡುತ್ತಿದ್ದೀರಿ. ಇದನ್ನು ಮಾತ್ರ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಇಷ್ಟು ಮಾತುಗಳನ್ನು ಮಾನ್ಯ ಮುಖ್ಯ ಮಂತ್ರಿಗಳ ಇಲಾಖೆ ಬಗ್ಗೆ ಹೇಳಿದ್ದೇನೆ. ಆಡಳಿತ ಸುಧಾರಣೆ ನಮ್ಮ ರಾಜ್ಯದಲ್ಲಿ ಆಗಿಲ್ಲ ಅದು ಕೇವಲ ಬಿಸಿಲುಗುದುರೆ, ಕೇವಲ ಒಂದು ಘೋಷಣೆ, ಈ ವ್ಯಕ್ತಿತ್ವ ಬಹಳ ದೊಡ್ಡದಾಗಿ ಬೆಳೆದು ಇರಬಹುದು ಇಡೀ ರಾಷ್ಟ್ರದಲ್ಲಿ ಒಬ್ಬ ಒಳ್ಳೆಯ ಆಡಳಿತಗಾರರು ಎಂದು ತಿಳಿದುಕೊಂಡಿದ್ದೆವು. ಅದು ಕೇವಲ ಘೋಷಣೆಯಾಗಿದೆ. ಆ ಒಂದು ಪ್ರತಿಮೆ ಒಳಗಡೆ ಏನೂ ಇಲ್ಲ, ಬರೀ ಟೊಳ್ಳು. ಇದು ಇವತ್ತು ಬರಿದಾಗುತ್ತಿದೆ. ಬಹಳ ದಿನಗಳೇನೂ ಉಳಿದಿಲ್ಲ. ಜನಗಳು ಇದನ್ನು

ಸಹಿಸಿಕೊಂಡು ಹೋಗುತ್ತಾರೆಂದು ನಿಮ್ಮಾರಾದರೂ ತಿಳಿದುಕೊಂಡಿದ್ದರೆ ಅದು ತಪ್ಪು ತಿಳಿದಿದ್ದೀರಿ. ಇದು ಬಹಳ ದಿನ ನಡೆಯುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿ ಮುಖ್ಯಮಂತ್ರಿಗಳ ಇಲಾಖೆಗೆ ಸಂಬಂಧಪಟ್ಟಹಾಗೆ, ಆಡಳಿತದಲ್ಲಿ ಕೆಲವು ವ್ಯತ್ಯಾಸಗಳನ್ನು ಈಗ ತರುತ್ತಾರೆಂದು ನಾವು ಅಂದು ಕೊಂಡಿದ್ದೆವು. ಇಲ್ಲಿ ಬಹಳಷ್ಟು ಜನ ಮಾತನಾಡಿದರು. ಐ.ಎ.ಎಸ್. ಅಧಿಕಾರಿಗಳು, ಐ.ಪಿ.ಎಸ್. ಅಧಿಕಾರಿಗಳು, ಅಷ್ಟೇ ಅಲ್ಲ ಎಲ್ಲಾ ಮಟ್ಟದ ಅಧಿಕಾರಿಗಳಲ್ಲಿ ಪ್ರಾಮಾಣಿಕರೂ ಇದ್ದಾರೆ, ವಿಷಯಗಳನ್ನು ತಿಳಿದುಕೊಂಡಿರತಕ್ಕ ಅಧಿಕಾರಿಗಳೂ ಇದ್ದಾರೆ. ಎಲ್ಲಾ ಅಧಿಕಾರಿಗಳನ್ನು ಇಟ್ಟುಕೊಂಡು ನಾವು ಆಡಳಿತವನ್ನು ನಡೆಸಿದ್ದೇವೆ. ಮುಂದೆ ನಾವು ಆಡಳಿತಕ್ಕೆ ಬರತಕ್ಕ ಆಸೆ ಇಟ್ಟುಕೊಂಡಿದ್ದೇವೆ, ಅವರನ್ನು ನಾನು ಟೀಕೆ ಮಾಡುವುದಕ್ಕೆ ತಯಾರಿಲ್ಲ. ಆದರೆ, ಅದರ ಮೇಲೆ ಏನು ಕಡಿವಾಣ ಹಾಕು ವುದಕ್ಕೆ ಪ್ರಯತ್ನ ಮಾಡಿದ್ದೀರಾ ? ಏರ್‌ಕಂಡಿಷನ್ ರೂಮುಗಳನ್ನು ಇಟ್ಟುಕೊಂಡಿದ್ದಾರೆಂದು ನೀವೇ ಹೇಳಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮನವಿ ಪತ್ರಗಳನ್ನು ಕೊಡುತ್ತೀರೋ ಹೇಗೆ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ನಿಮಗೆ ಏಕೆ ಮನವಿ ಪತ್ರಗಳನ್ನು ಕೊಡಬೇಕು ? ಅವರಿಗೂ ಕೊಡುವುದಿಲ್ಲ. ನಾನು ಏನು ಎಕ್ಸ್‌ಪೆಕ್ಟ್ ಮಾಡಿದ್ದೆ ಎಂದು ಹೇಳುತ್ತೇನೆ. ಇವರೆಲ್ಲಾ ಭಾಷಣ ಮಾಡಿದ್ದು ನೋಡಿ, ಡೆಪ್ಯುಟಿ ಕಮಿಷನರ್‌ರವರ ಮೇಲೆ, ಎಸ್.ಪಿ.ಗಳ ಮೇಲೆ, ಇಲಾಖಾ ಹೆಡ್ಸ್‌ಗಳ ಮೇಲೆ, ಸೆಕ್ಷನ್ ಆಫೀಸರ್‌ಗಳ ಮೇಲೆ ವಗೈರೆ ವಗೈರೆ ಅಧಿಕಾರಿಗಳ ಮೇಲೆ, ಅವರುಗಳ ಎಸ್.ಟಿ.ಡಿ. ಫೋನ್‌ಗಳ ಮೇಲೆ, ಅವರ ಆಫೀಸರ್‌ಗಳಲ್ಲಿರತಕ್ಕ ಫರ್ನೀಚರ್ಸ್ ಮೇಲೆ, ಏರ್‌ಕಂಡೀಷನ್ ರೂಮುಗಳ ಮೇಲೆ, ವೆಹಿಕಲ್ಸ್ ಮೇಲೆ ಏನಾದರೂ ಕಡಿವಾಣ ತರುತ್ತಾರೆಂದು ನಾನು ಯೋಚನೆ ಮಾಡಿದ್ದೆ. ಇದನ್ನು ಸಹಿತ ಅವರ ಕೈಯಲ್ಲಿ ಮಾಡುವುದಕ್ಕಾಗಲಿಲ್ಲ ಏಕೆ ಆಗಲಿಲ್ಲವೆಂದು ಇನ್ನೂ ಅರ್ಥವಾಗುತ್ತಿಲ್ಲ. ಇದನ್ನೆಲ್ಲಾ ಮಾಡುವುದಕ್ಕೆ ಇನ್ನೂ ಎಷ್ಟು ದಿನ ಬೇಕು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕನಿಷ್ಟ ೯ ತಿಂಗಳಾದರೂ ಬೇಕಲ್ಲ ?

ಶ್ರೀ ಆರ್.ಎನ್. ನಾಯಕ್.—ನೀವು ಅಧಿಕಾರಕ್ಕೆ ಬಂದ ೮೩ನೇ ಇಸವಿಯಲ್ಲಿ ೬ ತಿಂಗಳಲ್ಲಿ ಸುಮಾರು ಹಗರಣಗಳು ಆಗಿಹೋಗಿದ್ದವು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಾಯಕರೇ, ಎಷ್ಟೇ ಕಿರುಚಿದರೂ ನಿಮಗೆ ಏನೂ ಸಿಗುವುದಿಲ್ಲ, ಮಾನ್ಯ ಖರ್ಗೆಯವರು ೯ ತಿಂಗಳು ಬೇಕೆಂದು ಹೇಳಿದರು. ಮಗು ಹೆರಲಿಕ್ಕೆ ಇನ್ನು ೯ ತಿಂಗಳು ನಾವು ಕಾಯುತ್ತೇವೆ, ಹೆಣ್ಣೋ ಗಂಡೋ ನೋಡೋಣ. ಆಮೇಲೆ ನಮ್ಮ ಅಭಿಪ್ರಾಯಗಳನ್ನು ಕೊಡುತ್ತೇವೆ. ಮತ್ತೆ ಪೋಲೀಸ್ ಇಲಾಖೆ ಬಗ್ಗೆ ಮುಖ್ಯವಾಗಿ ಎರಡು ಮಾತುಗಳನ್ನು ನಾನು ಹೇಳುತ್ತೇನೆ.

SRI QAMARUL ISLAM.—Suppose after nine months neither a boy nor a girl comes out. We cannot say. It is an expectation. If it a girl, it is alright. If it is a son, it is alright, If it is a half girl and a half boy, it is very difficult.

MR. SPEAKER.—I can only call the Advocate-General to assist the House and not a gynecologist.

ಶ್ರೀ ಪಿ.ಜಿ.ಆರ್. ಸಿಂಧ್ಯ.—೯ ತಿಂಗಳು ಆದ ಮೇಲೆ ನಾವು ನಿರೀಕ್ಷೆ ಮಾಡುತ್ತೇವೆ. ಇನ್ನು ಪೋಲೀಸ್ ಇಲಾಖೆ ಬಗ್ಗೆ ಹೇಳುವುದಾದರೆ, ಬಹಳ ಕೆಳವರ್ಗದಲ್ಲಿರತಕ್ಕಂಥ ಪೋಲೀಸ್ ಕಾನ್ಸ್‌ಟೇಬಲ್ ಗಳು ಯಾರಿದ್ದಾರೆ ಅವರ ಬಗ್ಗೆ ಏನಾದರೂ ಮಾಡಬೇಕು ಇಲ್ಲಿ ೩ ಜನ ಮಂತ್ರಿಗಳು ಇದ್ದೀರಿ, ಬಹಳ ಪ್ರಭಾವ ಇರತಕ್ಕಂಥ ಮುಖಂಡರುಗಳು ನೀವು. ನಾವೂ ಸ್ವಲ್ಪ ಇವರ ಬಗ್ಗೆ ಮಾಡಿದ್ದೇವೆ. ಇದರ ಬಗ್ಗೆ ನೀವೂ ಸ್ವಲ್ಪ ವಿಚಾರ ಮಾಡಿ. ಪೋಲೀಸ್ ಕಾನ್ಸ್‌ಟೇಬಲ್‌ಗಳಿಗೆ ಮಾಡತಕ್ಕ ವರ್ಗಾವಣೆ ಅವರಿಗೆ ಕೊಡತಕ್ಕಂಥ ಸಂಬಳ ವಿಶೇಷ ಭತ್ಯೆ ಮತ್ತು ಅವರಿಗೆ ಕೊಡತಕ್ಕಂಥ ಟ್ರೀಟ್‌ಮೆಂಟ್‌ನಲ್ಲಿ

ದಯುವಿಟ್ಟು ಏನಾದರೂ ಒಂದು ವ್ಯತ್ಯಾಸ ನಾವೆಲ್ಲ ಸೇರಿಕೊಂಡು ಮಾಡಬೇಕು. ಅವರು ಬಹಳ ಕಷ್ಟದಲ್ಲಿದ್ದಾರೆ. ಈ ಫೈರ್ ಫೋರ್ಸ್‌ನಲ್ಲಿರತಕ್ಕಂಥ ಪೋಲೀಸರಂತೂ ಅವರು ಬಹಳ ಒಳ್ಳೆಯ ಕೆಲಸ ಮಾಡುತ್ತಾರೆ. ಅವರು ೨೪ ಗಂಟೆ ದುಡಿದರೂ ಕೇವಲ ೩ ರೂಪಾಯಿ, ೬ ರೂಪಾಯಿ ಅಲೋಯೆನ್ಸ್ ಕೊಡುತ್ತಾರೆ. ೨೪ ಗಂಟೆ ಕೆಲಸ ಮಾಡಿದರೂ ಸಹಿತ ಏನೂ ಸಿಗುವುದಿಲ್ಲ. ಎಲ್ಲಾ ಇಲಾಖೆಗಳಲ್ಲೂ ಟಿ.ಎ., ಡಿ.ಎ. ಕೊಡುತ್ತಾರೆ. ಕೆ.ಎಸ್.ಆರ್.ಟಿ.ಸಿ. ಯಲ್ಲಂತೂ ಟಿ.ಎ., ಡಿ.ಎ., ಗೆ ಲೆಕ್ಕವೇ ಇಲ್ಲ, ಅಷ್ಟೊಂದು ಕೊಡುತ್ತಾರೆ. ಪೋಲೀಸ್ ಇಲಾಖೆ ಮತ್ತು ಫೈರ್ ಫೋರ್ಸ್ ಡಿಪಾರ್ಟ್‌ಮೆಂಟ್ ಈ ಎರಡೂ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಸ್ವಲ್ಪ ಎಕ್ಸಾಟ್ರಾ ರೆಮ್ಯುನರೇಷನ್ ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಚಾರದಲ್ಲಿ ದಯುವಿಟ್ಟು ತಿಳಿಸಿ ಒಂದು ಉಪಕಾರ ಮಾಡಿದರೆ ನಿಮಗೆ ದೊಡ್ಡ ಕೀರ್ತಿ ಬಂದ ಹಾಗಾಗುತ್ತದೆ. ನಮ್ಮ ಸರ್ಕಾರ ಇದ್ದಾಗ ಒಂದು ವಿಚಾರ ಮಾಡಿದ್ದೆವು. ಪೋಲೀಸ್ ಕಾನ್ಸ್‌ಟೇಬಲ್‌ಗಳಿಗೆ ಫೇರ್ ಪ್ರೈಸ್ ಡಿಪೋ ಮೂಲಕ ಕಡಿಮೆ ಬೆಲೆಯಲ್ಲಿ ಅಕ್ಕಿ, ಬೇಳೆ, ಸಕ್ಕರೆ, ಗೋಧಿಯನ್ನು ಸ್ವಲ್ಪ ಹೆಚ್ಚಿಗೆ ಕೊಡಲಿಕ್ಕೆ ತಾವು ಹೆಚ್ಚಿಗೆ ಕೊಡಲಿಕ್ಕೆ ವಿಚಾರ ಮಾಡ ಬಹುದೇ ಎಂದು ವಿಚಾರ ಮಾಡಿ. ಇದಕ್ಕೆಲ್ಲಾ ಹೆಚ್ಚಿಗೆ ಹಣ ಬೇಕಾಗುತ್ತದೆಂದು ನಾನು ತಿಳಿದು ಕೊಂಡಿಲ್ಲ. ಸ್ವಲ್ಪ ಜಾಸ್ತಿ ಕೊಡಿ, ಅವರೆಲ್ಲಾ ಬಹಳ ಕಷ್ಟದಲ್ಲಿದ್ದಾರೆ. ಅಧ್ಯಕ್ಷರೇ, ತಾವು ದೊಡ್ಡ ಮನಸ್ಸು ಮಾಡಿ ನನಗೆ ಮೊದಲಿನಿಂದಲೂ ಸಾಕಷ್ಟು ಅವಕಾಶ ಕೊಟ್ಟಿದ್ದೀರಿ, ಅದಕ್ಕಾಗಿ ಕೃತಜ್ಞತೆ ಗಳು. ನಿಮ್ಮಲ್ಲಿ ಬಹಳ ಜನಕ್ಕೆ ಲಾಕಪ್‌ನಲ್ಲಿದ್ದು ಅನುಭವ ಇಲ್ಲ. ೧೯೭೫ನೇ ಇಸವಿಯಲ್ಲಿ ಜುಲೈ ೪ನೇ ತಾರೀಖು ತುರ್ತು ಪರಿಸ್ಥಿತಿ ಬಂದ ದಿವಸ ನನ್ನನ್ನು ಲಾಕಪ್ಪಿಗೆ ಹಾಕಿದರು. ಬೆಳಿಗ್ಗೆ ಯಾರೋ ಒಬ್ಬರು ಅಸಿಸ್ಟೆಂಟ್ ಕಮಿಷನರ್ ಬಂದರು. ನನ್ನ ಮುಖ ನೋಡಿ, ಪೋಲೀಸ್ ಸ್ಟೇಷನ್‌ಗೆ ಕರೆದು ಕೊಂಡು ಹೋದರು. ಆಗ ನಾನಿನ್ನೂ ಓದುತ್ತಿದ್ದೆ. ಸಮಾಜದಲ್ಲಿ ನನ್ನದೇ ಆದ ಗೌರವವನ್ನು ಇಟ್ಟುಕೊಂಡಿದ್ದೆ. ಸ್ಟೇಷನ್‌ನಲ್ಲಿ ಸಾಯಂಕಾಲದವರೆಗೆ ಬಹಳ ಚೆನ್ನಾಗಿ ನೋಡಿಕೊಂಡರು ಹೋಟೆಲ್ ನಿಂದ ತಿಂಡಿ ಎಲ್ಲ ತರಿಸಿಕೊಟ್ಟರು ನಿಮ್ಮ ತಂದೆಯವರು ಏನು ಮಾಡುತ್ತಿದ್ದಾರೆ ಎಲ್ಲಿ ಹುಟ್ಟಿದ್ದು ಏನು ಓದಿದ್ದೀರಿ ಎಂದೆಲ್ಲ ಕೇಳಿದರು. ಸಂಜೆ ೬ ಗಂಟೆ ಆದಮೇಲೆ ಆ ಕಡೆ ಈ ಕಡೆ ಇದ್ದ ಅಧಿಕಾರಿಗಳೆಲ್ಲ ಪಕ್ಕಕ್ಕೆ ಹೊರಟು ಹೋದರು ಆಗ ಒಬ್ಬ ಕಾನ್ಸ್‌ಟೇಬಲ್ ಬಂದು ನನಗೆ ಎರಡು ಬೂಟ್ ಕಾಲಲ್ಲಿ ಒದ್ದು ಇಲ್ಲಿ ಹೋಗಿ ಮಲಗು ಎಂದ. ಆ ಲಾಕಪ್ ಒಳಗಡೆ ಹೋದರೆ ಕೊನೇ ಪಕ್ಷ ಒಂದು ಬೆಂಚು ಇರಲಿ, ನೆಲದಲ್ಲೂ ಸಹ ಬರೀ ತಿಗಣೆಗಳು, ಅಲ್ಲಿ ಒಂದು ಮಡಿಕೆ ಇಟ್ಟಿದ್ದಾರೆ. ೨೪ ಗಂಟೆ ಕಾಲ ನನ್ನನ್ನು ಲಾಕಪಿನಲ್ಲಿಟ್ಟಿದ್ದರು. ಅಲ್ಲಿ ಸ್ನಾನ ಇಲ್ಲ. ಕುಡಿಯೋದಕ್ಕೆ ಸ್ವಲ್ಪ ನೀರು ಕೊಟ್ಟರು. ಅದೇ ಪೋಲೀಸ್ ಸ್ಟೇಷನ್‌ಗೆ ನಾನು ಮಂತ್ರಿಯಾದ ಮೇಲೆ ಹೋಗಿ ನೋಡಿದ್ದೇನೆ, ಅದೇ ಥರ್ಡ್‌ಗ್ರೇಡ್ ಮೆತೆಡ್ಸ್, ಅದೇ ಪೋಲೀಸರ ಬೂಟ್ಸ್, ಅದೇ ಲಾಕಪ್, ಅದೇ ಮಡಿಕೆ, ಪೋಲೀಸ್ ಇಲಾಖೆ ಯಲ್ಲಿರುವವರೆಲ್ಲ ಕೆಟ್ಟವರು ಎಂದು ನಾನು ಹೇಳುವುದಿಲ್ಲ, ಒಳ್ಳೆಯವರು ಇದ್ದಾರೆ. ಆದರೆ ಗುಮಾನಿ ಮೇಲೆ ಅನೇಕ ಜನರನ್ನು ಕರೆದುಕೊಂಡು ಹೋಗಬೇಕಾದ ಪರಿಸ್ಥಿತಿ ಬರುತ್ತದೆ. ಆಗ ಲಾಕಪ್ಪಿನಲ್ಲಿರು ವವರಿಗೆ ಕೊನೇ ಪಕ್ಷ ಮಲಗುವುದಕ್ಕೆ ಕುಳಿತುಕೊಳ್ಳುವುದಕ್ಕೆ ವ್ಯವಸ್ಥೆ ಬೇಕಾಗುತ್ತದೆ. ನಮ್ಮ ಸರ್ಕಾರ ಇದ್ದಾಗಲೂ ನಾನು ಹೇಳಿದ್ದೇನೆ, ಲಾಕಪ್‌ಗಳ ಪರಿಸ್ಥಿತಿ ಇಂಪ್ರೂ ಆಗಬೇಕು. ಅವುಗಳನ್ನು ನೀವು ಸುಧಾರಿಸಿಬಿಟ್ಟರೆ ಲಾಕಪ್ ಡೆತ್ಸ್ ಎಂದು ಏನು ಹೇಳುತ್ತೇವೆ ಅದೆಲ್ಲ ಹಿಡಿತಕ್ಕೆ ಬಂದು ಬಿಡುತ್ತದೆ. ಹಿಂದೆ ಇಲ್ಲಿ ನಮ್ಮ ಸರ್ಕಾರ ಡಿಸ್‌ಮಿಸಾಯಿತು ಪಾಪ ಒಬ್ಬ ವಿರೋಧಪಕ್ಷದ ಎಸ್‌ಪಿ ಶಾಸಕರು ಅವರ ಹೆಂಡತಿ ಹುಷಾರಿರಲಿಲ್ಲ ಎಂದು ಬೌರಿಂಗ್ ಆಸ್ಪತ್ರೆಯಲ್ಲಿ ಸೇರಿಸಿದ್ದರು. ನಾನು ಬೌರಿಂಗ್‌ಆಸ್ಪತ್ರೆಗೆ ಹೋಗಿದ್ದೆ ಅಸೆಂಬ್ಲಿ ಡಿಸಾಲ್ವ್ ಆಯಿತು ಎಂದು ಡಾಕ್ಟರುಗಳು ಇನ್‌ಹ್ಯೂಮನಾಗಿ ಬಂದು ಅವರನ್ನು ೨೪ ಗಂಟೆಯೊಳಗೆ ಖಾಲಿ ಮಾಡಿ ಎಂದು ಹೊರಕ್ಕೆ ಹಾಕಿದರು. ಸ್ಪೆಷಲ್ ವಾರ್ಡ್‌ನಿಂದ ಆರ್ಡಿನರಿ ವಾರ್ಡಿಗೆ ಕಳಿಸಿದರು. ಅವರು ೧೦೦ ರೂಪಾಯಿಗಳನ್ನು ಕೊಡುತ್ತಿರಲಿಲ್ಲವೇ. ಈ ಟ್ರೀಟ್‌ಮೆಂಟ್ ಗಳನ್ನೆಲ್ಲ ನಾಯಕರೆ ನಿಮಗೆ ಮಾಡಿದಾಗ ಗೊತ್ತಾಗುತ್ತದೆ. ಬಹುಶ: ಆರ್.ಎನ್. ನಾಯಕರು ನಾನು ಲಾಕಪ್‌ನಲ್ಲಿ ಒಡೆಸಿಕೊಂಡಿರುವುದನ್ನು ನಂಬಲು ಆಗುವುದಿಲ್ಲ. ಆದರೆ ೧೯ ತಿಂಗಳು ಅಲ್ಲಿದ್ದಾಗ ಆ ದುಃಖ ಕಷ್ಟ ನಮಗೆ ನಮ್ಮ ತಂದೆ ತಾಯಿಗಳಿಗೆ ಗೊತ್ತು. ಆದ್ದರಿಂದ ಈ ಲಾಕಪ್‌ಗಳನ್ನು ಇಂಪ್ರೂ ಮಾಡ ಬೇಕು. ಕಾನ್‌ಸ್ಟೇಬಲ್‌ಗಳಿಗೆ ಒಳ್ಳೆಯ ಟ್ರೈನಿಂಗ್ ಕೊಡಬೇಕು. ಇನ್ನೂ ಕಾರಾಗೃಹಗಳ ವಿಚಾರ ವನ್ನು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿಕೊಂಡಾಗ ಬಹಳ ಜನ ನನ್ನ ಸ್ನೇಹಿತರು ಅಲ್ಲಿದ್ದಾರೆ, ಅಲ್ಲಿರುವವರೆಲ್ಲ ಬಹಳ ಒಳ್ಳೇ ಜನ.

ಶ್ರೀ ಬಿ. ಬಸವಲಿಂಗಪ್ಪ.—ಏನು ನಿಮ್ಮ ಸ್ನೇಹಿತರು ಅಲ್ಲಿದ್ದಾರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಹೌದು, ರೆಕಾರ್ಡ್‌ಗೆ ಹೋಗಲಿ ಎಂದೇ ಹೇಳುತ್ತಿದ್ದೇನೆ. ಹೊರ ಗಿರುವವರಿಗಿಂತ ಅವರೇ ಒಳ್ಳೆಯವರು. ಪಾಪ, ಕಾನೂನು ವ್ಯವಸ್ಥೆಯಲ್ಲಿ ಏನೂ ಮಾಡಲಾಗು

ವುದಿಲ್ಲ. ಲೈಫರ್ಸ್ ಬಹಳ ಒಳ್ಳೆ ಜನರಿದ್ದಾರೆ. ಬಹಳ ಜನ ಮರ್ಡರ್ ಮಾಡಿರುವವರಲ್ಲಿ ಪಾಪ ಒಳ್ಳೆಯ ಜನರಿದ್ದು ಯಾವುದೋ ಒಂದು ಮೂಮೆಂಟಿನಲ್ಲಿ ತಪ್ಪು ಮಾಡಿ ಸಿಕ್ಕಿಕೊಂಡಿರುವವರು ಅವರಲ್ಲಿ ಬಹಳ ಜನ ನಿರಪರಾಧಿಗಳಿದ್ದಾರೆ, ಅದರ ಬಗ್ಗೆಯೆ ಹೇಳಿದರೆ ಜ್ಯುಡಿಷಿಯರಿ ಮೇಲೆ ಕಾಮೆಂಟ್ ಮಾಡಿದಂತಾಗುತ್ತದೆ. ಅಂಡರ್ ಟ್ರಯಲ್ಸ್, ಕನ್ವಿಕ್ಟಸ್ ಬಹಳ ಕಡಿಮೆ ಇದ್ದಾರೆ. ಅವರಿಗೆ ಕೊಡುತ್ತಿರುವ ಫೆಸಿಲಿಟೀಸ್‌ನಲ್ಲಿ ಸ್ವಲ್ಪ ಇಂಪ್ರೂವ್‌ಮೆಂಟ್ ಆಗಬೇಕು. ಒಂದು ದಿವಸಕ್ಕೆ ಒಬ್ಬ ಖೈದಿಗೆ ಸರಾಸರಿ ೫ ರೂ ೪೨ ಪೈಸೆ ಖರ್ಚು ಮಾಡುತ್ತಿದ್ದೀರಿ. ಅಧ್ಯಕ್ಷರೇ, ನಿನ್ನೆ ರಾತ್ರಿ ನಾವು ಮಾಡಿದ ಊಟದಲ್ಲಿ ಒನ್‌ಟೆನ್ತ್ ಭಾಗವೂ ಅಷ್ಟು ಆಗುವುದಿಲ್ಲ. ನಮ್ಮ ಕಾಲದಲ್ಲಿ ಬಹಳಷ್ಟು ಒತ್ತಡ ತಂದು ಕೂಲಿ ೧ ರೂಪಾಯಿ ೭೫ ಪೈಸೆ ಇದ್ದುದನ್ನು ೩ ರೂಪಾಯಿ ಮಾಡಿಸಿದ್ದೇವೆ. ಅದರ ಜೊತೆಗೆ ಊಟದ ವೆಚ್ಚವನ್ನೂ ಸ್ವಲ್ಪ ಜಾಸ್ತಿ ಮಾಡಿಸಿದೆವು. ದಯವಿಟ್ಟು ಇನ್ನೂ ಜಾಸ್ತಿ ಮಾಡಿ ಪರ್ಟಿಕಲರ್ಲಿ ಲೈಫರ್ಸ್ ಯಾರಿದ್ದಾರೆ ಅವರು ಓಪನ್ ಜೈಲ್‌ಗಳಲ್ಲಿ ಬಹಳ ದುಡಿಯುತ್ತಾರೆ. ನೀವು ೨೫ ರೂಪಾಯಿ ಕೊಟ್ಟರೂ ಹೊರಗೆ ಅಷ್ಟು ಕೆಲಸ ಬೇರೆಯವರು ದುಡಿಯುವುದಿಲ್ಲ. ಜೊತೆಗೆ ಒಂದು ಸಲ ಜೈಲಿಗೆ ಹೋಗಿ ಬಂದ ಮೇಲೆ ಸೊಸೈಟಿಯೂ ಅವರನ್ನು ಬಾಳಗೊಡುವುದಿಲ್ಲ. ಆದ್ದರಿಂದ ಅವರ ರಿಹ್ಯಾಬಿಲಿಟೇಷನ್‌ಗೆ ನೀವು ಕೂಲಿ ಜಾಸ್ತಿ ಕೊಟ್ಟರೆ ಸ್ವಲ್ಪ ಅನುಕೂಲವಾಗುತ್ತದೆ. ಮಾನ್ಯ ಬಂಗಾರಪ್ಪನವರು ಕೆಲವು ದಿನ ಹೋಮ್ ಮಿನಿಸ್ಟರ್ ಆಗಿದ್ದೀರಿ ನಿಮಗೆ ಗೊತ್ತು. ಬಂದೀಖಾನೆಗಳಲ್ಲಿ ಪ್ರಿಸನರ್ಸ್ ಯಾರಿದ್ದಾರೆ ಅವರಿಗೆ ಡೈಲಿ ಸಂಬಳವನ್ನು ೩ ರೂಪಾಯಿನಿಂದ ಐದು ರೂಪಾಯಿನೋ ಆರು ರೂಪಾಯಿನೋ ಮಾಡಿ, ಅದೇನೂ ಜಾಸ್ತಿಯಾಗುವುದಿಲ್ಲ ೩೦೦೦ ಸಾವಿರ ಜನ ಇದ್ದಾರೆ, ಅವರು ದುಡಿಯುತ್ತಿದ್ದಾರೆ, ಓಪನ್ ಜೈಲುಗಳಲ್ಲಿ ಹೋಗಿ ನೋಡಿ ಆದರೂ ಬೇರೆ ರಾಜ್ಯಗಳ ಜೈಲಿಗೆ ಹೋಲಿಸಿದರೆ ನಮ್ಮದು ಎಷ್ಟೋ ಪರವಾಗಿಲ್ಲ. ನಾವು ಡೆಲ್ಲಿಯಲ್ಲಿ ಅರೆಸ್ಟಾಗಿದ್ದೆವು. ಅದರ ವ್ಯವಸ್ಥೆ ಬೇಡ. ಅದಕ್ಕೆಲ್ಲಾ ಹೋಲಿಕೆ ಮಾಡಿದರೆ ನಮ್ಮ ಜೈಲು ಬಹಳ ಚೆನ್ನಾಗಿದೆ.

ಅಧ್ಯಕ್ಷರು.—ಡೆಲ್ಲಿಯಲ್ಲಿ ಅರೆಸ್ಟ್ ಆಗಬಾರದು, ಆಸ್ಪತ್ರೆಗೂ ಹೋಗಬಾರದು.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಇದನ್ನು ಸೀರಿಯಸ್ಸಾಗಿ ವಿಚಾರ ಮಾಡಬೇಕು. ನಮ್ಮ

೮-೦೦ ಪಿ. ಎಂ.

ನಾಯಕರಾಗಿರತಕ್ಕಂಥ ಚಂದ್ರೇಗೌಡರು ರಾಜ್ಯಸಭಾ ಸದಸ್ಯರಾಗಿದ್ದರು. ಒಂದು ವರ್ಷದ ಹಿಂದೆ ಅವರಿಗೆ ಒಂದು ಆಕ್ಸಿಡೆಂಟ್ ಆಯಿತು. ಆಕ್ಸಿಡೆಂಟ್ ಆದ ತಕ್ಷಣ ಪೋಲೀಸ್‌ನವರು ಅವರನ್ನು ಎತ್ತಿಕೊಂಡು ಹೋಗಿ ರಾಮಮನೋಹರಲೋಹಿಯಾ ಆಸ್ಪತ್ರೆಯಲ್ಲಿ ಇಟ್ಟಿದ್ದಾರೆ. ಅವರಿಗೆ ಪ್ರಜ್ಞೆ ಇರಲಿಲ್ಲ. ಸುಮಾರು ಎರಡೂವರೆ ಗಂಟೆಗಳಾದರೂ ಅವರಿಗೆ ರಾಜ್ಯಸಭಾ ಸದಸ್ಯರು ಎಂದು ಗೊತ್ತಾಗುವವರೆಗೂ ಟ್ರೀಟ್‌ಮೆಂಟ್ ಸಿಕ್ಕಿಲ್ಲ. ಬಹುಶಃ ತಮ್ಮ ಗಮನಕ್ಕೂ ಈ ಘಟನೆ ಬಂದಿಲಿಕ್ಕೂ ಸಾಕು. ತಾವು ಈ ಆಸ್ಪತ್ರೆಗಳ ಬಗ್ಗೆ ಹೇಳುವುದು ನಿಜ. ಈ ಜೈಲುಗಳ ಪರಿಸ್ಥಿತಿ ಚೆನ್ನಾಗಿರಬೇಕು. ಅಲ್ಲಿರುವವರೆಲ್ಲಾ ಕೆಟ್ಟವರು ಎಂದು ನಾನಂತೂ ಹೇಳುವುದಿಲ್ಲ. ಏನೋ ತಪ್ಪಾಗಿದೆ. ನಮ್ಮ ಕಾನೂನು ಇದೆ, ಅದರ ಪ್ರಕಾರ ಮಾಡೋಣ. ಹೊರಗಡೆ ಇರುವವರು ದೊಡ್ಡ ದೊಡ್ಡ ಅಪರಾಧಗಳನ್ನೆಲ್ಲಾ ಮಾಡಿ ಆರಾಮಾಗಿದ್ದಾರೆ, ತಪ್ಪಿಸಿಕೊಂಡಿರುವವರು ಕೂಡಾ ಇದ್ದಾರೆ. ಆದುದರಿಂದ ಅವರ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ...

ಶ್ರೀ ಬಿ. ಹೆಚ್. ಬನ್ನಿಕೋಡ್.—ಜೈಲು ಒಳಗಡೆ ಯಾರ್ಯಾರು ಇರಬೇಕೊ ಅವರೆಲ್ಲರೂ ಹೊರಗಡೆ ಇದ್ದಾರೆ.

ಅಧ್ಯಕ್ಷರು.—ವೀರಪ್ಪನ್ ಬಗ್ಗೆ ತಾನೇ ತಾವು ಹೇಳುತ್ತಿರುವುದು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅವರ ಪರಿಸ್ಥಿತಿ ಸುಧಾರಣೆ ಮಾಡುವುದಕ್ಕೆ...

ಅಧ್ಯಕ್ಷರು.—ಆಲ್‌ರೈಟ್ ಮಿಸ್ಟರ್ ಸಿಂಧ್ಯ. ನೀವು ಇನ್ನು ಮುಗಿಸುವುದಿಲ್ಲ ಎಂದು ಕಾಣುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇನ್ನು ಒಂದೇ ಒಂದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ವ್ಯವಸಾಯ, ಗ್ರಾಮೀಣಾಭಿವೃದ್ಧಿ ಬಗ್ಗೆ ಬಹಳ ಉತ್ತಮವಾದ ಸಲಹೆಗಳನ್ನು ಸರ್ಕಾರಕ್ಕೆ ಕೊಡುವವನಿದ್ದೇನೆ. ನಾಳೆ ತಾವು ೧೫ ನಿಮಿಷ ಅವಕಾಶ ಕೊಡಿ. ಇವತ್ತು ಇನ್ನೊಂದು ನಿಮಿಷದಲ್ಲಿ ಹೋಂ ಡಿಪಾರ್ಟ್‌ಮೆಂಟ್‌ದು ಹೇಳಿ ಮುಗಿಸುತ್ತೇನೆ. ಈ ಜೈಲುಗಳ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಈ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕು. ಪೋಲೀಸ್

ಕಾನ್‌ಸ್ಟೇಬಲ್‌ಗಳು ಇದ್ದಾರೆ. ಇವತ್ತು ನಿಮಗೆ ಹೇಳುತ್ತೇನೆ. ಅವರ ಸಂಘದಲ್ಲಿ ಕುದಿಯುತ್ತಿದೆ. ಮಾನ್ಯ ಬಂಗಾರಪ್ಪನವರೇ, ಇದು ಬಹಳ ಮಹತ್ವವಾದ ವಿಚಾರ. ಪೋಲೀಸ್ ಕಾನ್‌ಸ್ಟೇಬಲ್‌ಗಳು, ಫೈರ್ ಫೋರ್ಸ್‌ನ ಕೆಳಮಟ್ಟದಲ್ಲಿರತಕ್ಕ ಜನ ಯಾವಾಗ ರಿವೋಲ್ಟ್ ಆಗುತ್ತಾರೋ ಹೇಳುವುದಕ್ಕಾಗುವುದಿಲ್ಲ. ಅವರು ರಿವೋಲ್ಟ್ ಆಗಬಾರದು. ಅವರಿಗೆ ಕನಿಷ್ಟ ಪಕ್ಷ ಸಾಮಾನ್ಯವಾಗಿ ಜನ ಬದುಕುವುದಕ್ಕೆ ಒಂದು ಸಹಾಯ ಮಾಡಬೇಕು ಅಷ್ಟನ್ನಾದರೂ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾಳೆ ತಾವು ನನಗೆ ಅಪ್ಪಣೆಯನ್ನು ಕೊಡುವುದಾದರೆ ತೋಟಗಾರಿಕೆ, ಕೃಷಿ ಮತ್ತು ಆರಣ್ಯ, ಗ್ರಾಮೀಣಾಭಿವೃದ್ಧಿ ಬಗ್ಗೆ ೧೦-೧೫ ನಿಮಿಷದಲ್ಲಿ ಮಾತನಾಡಿ ನನ್ನ ಮಾತನ್ನು ಮುಗಿಸುತ್ತೇನೆ. ತಾವು ಸಮಯವನ್ನು ಕೊಟ್ಟಿದ್ದೀರಿ, ಧನ್ಯವಾದಗಳು.

ಅಧ್ಯಕ್ಷರು.—ಈಗ ಸಭೆ ಮುಂದುವರಿದು ನಾಳೆ ಬೆಳಿಗ್ಗೆ ೯-೩೦ ಗಂಟೆಗೆ ಮತ್ತೆ ಸೇರುತ್ತದೆ.

(ಸದನವು ೮-೦೨ಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ ೧೪-೭-೧೯೬೦ರಂದು ಶನಿವಾರ ಬೆಳಿಗ್ಗೆ ೯-೩೦ ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)